
ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಶ್ರೀಮದ್ವಾಲ್ಮೀಕಿರಾಮಾಯಣ

ಭಾರತ ದರ್ಶನ ಪ್ರಕಾಶನ

ಶ್ರೀ ರಾ ಮಃ ಶ ರ ಣಂ ಮ ಮ



ಶ್ರೀ ರಾ ಮಃ ಶ ರ ಣಂ ಮ ಮ

ಉತ್ತರ ಕಾಂಡ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಸಂಪುಟ ೧೦

ಭಾರತ ದರ್ಶನ ಪ್ರಕಾಶನ

ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

ಸಂಪುಟ 10

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೮

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರ ವಚನಗಳು

ದಯಾಮಯನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ, ಗುರು ಭಗವಂತನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ - ಸದಾಶಯ ಗಳಿಂದಲೂ ಶ್ರೀಮದ್ವಾಲ್ಮೀಕಿರಾಮಾಯಣದ ಹತ್ತನೆಯ ಕುಸುಮವನ್ನು ಭಗವಂತನ ಪಾದಾರವಿಂದಗಳಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಿಸಿ ಪ್ರಸಾದ ರೂಪವಾದ ಈ ಕುಸುಮವನ್ನು ಪ್ರಿಯಗ್ರಾಹಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

ಶ್ರೀಮದ್ವಾಲ್ಮೀಕಿರಾಮಾಯಣದ 9ನೆಯ ಸಂಪುಟವನ್ನು ಮುಗಿಸಿದ ನಂತರ ಮಹಾಭಾರತದ 25 ಮತ್ತು 26ನೇ ಸಂಪುಟಗಳ ಪುನರ್ಮುದ್ರಣ ವನ್ನು ಮುಗಿಸಿ ರಾಮಾಯಣದ 10ನೇ ಸಂಪುಟದ ಮುದ್ರಣವನ್ನು ಆರಂಭಿಸಲಾಯಿತು. ಈ ಸಂಪುಟವು ನಮ್ಮ ಕಾರ್ಯಕ್ರಮದಂತೆ ಒಂದು ತಿಂಗಳ ಹಿಂದೆಯೇ ಹೊರಬರಬೇಕಾಗಿದ್ದಿತು. ಆದರೆ ಮುದ್ರಣಯಂತ್ರದ ತೊಂದರೆ ಯಿಂದಾಗಿ ಸಾವಕಾಶವಾಯಿತು. ಈ ಸಂಪುಟವು ಮುಗಿಯಲಿದ್ದಾಗ ಮುದ್ರಣಯಂತ್ರವು ಸಂಪೂರ್ಣವಾಗಿ ನಿಂತ ಕಾರಣ ಸುಮಾರು ಹದಿನೆಂಟು ದಿವಸಗಳ ಕಾಲ ಮುದ್ರಣಾಲಯದಲ್ಲಿ ಯಾವ ಕಾರ್ಯವೂ ನಡೆಯಲಿಲ್ಲ. ಈ ಕಾರಣದಿಂದಾಗಿ - ಶ್ರೀಮದ್ರಾಮಾಯಣದ ಏಳನೆಯ ನವಾಹಪ್ರವಚನದ ಕಡೆಯ ದಿವಸ ಈ ಸಂಪುಟದ ಪ್ರಕಾಶನವನ್ನು ಇಟ್ಟುಕೊಳ್ಳಬೇಕೆಂದಿದ್ದ ನಮ್ಮ ಆಶಯವು ಈಡೇರಲಿಲ್ಲ. ದೈವಸಂಕಲ್ಪವೇ ಬೇರೆಯಾಗಿರುವಾಗ ನಾವಾದರೂ ಮಾಡುವುದೇನಿದೆ ? ಸತ್ಸಂಕಲ್ಪವನ್ನು ನಾವು ಮಾಡಬಹುದು. ಭಗ ವಂತನು 'ಅಸ್ತು ' - ಎಂದು ಹೇಳಿದಾಗ ಮಾತ್ರ ನಮ್ಮ ಸಂಕಲ್ಪವು ನೆರ ವೇರುವುದು. ಇಂತಹ ಕಷ್ಟ-ನಷ್ಟಗಳನ್ನು ದಾಟಿಕೊಂಡು ಭಗವಂತನ ಅನು ಗ್ರಹದಿಂದ ಸಂಪುಟಗಳು ಹೊರಬರುತ್ತಿರುವುದು ಪವಾಡದ ವಿಷಯವೇ ಆಗಿದೆ.

ಮತ್ತೊಂದು ಸಂಪುಟದೊಡನೆ ಶ್ರೀಮದ್ವಾಲ್ಮೀಕಿರಾಮಾಯಣವು ಮುಗಿಯುವುದು. 11ನೆಯ ಸಂಪುಟಕ್ಕೆ ಪ್ರತ್ಯೇಕವಾಗಿ ಹಣವನ್ನು ಕಳುಹಿಸ ಬೇಕೆಂದು ಗ್ರಾಹಕರನ್ನು ಪ್ರಾರ್ಥಿಸಲಾಗಿತ್ತು. ಇನ್ನೂ ಸುಮಾರು ನಾಲ್ಕು ಸಾವಿರ ಗ್ರಾಹಕರಿಂದ 11ನೆಯ ಸಂಪುಟಕ್ಕೆ ಹಣ ಬರಬೇಕಾಗಿದೆ. ಕೂಡಲೇ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿಸುತ್ತೇವೆ. 11ನೆಯ ಸಂಪುಟ

ಪ್ರಕಾಶನದ ಸಮಯದಲ್ಲಿ ಹನ್ನೆರಡು ದಿವಸಗಳ ಮಹಾಮಂಗಳಕಾರ್ಯಕ್ರಮವನ್ನು ಇಟ್ಟುಕೊಳ್ಳುವ ಆಶಯವಿದೆ. ಮಹಾಭಾರತದ ಮಹಾ ಮಂಗಳ ಕಾರ್ಯಕ್ರಮದಂತೆಯೇ ರಾಮಾಯಣದ ಮಹಾಮಂಗಳವನ್ನೂ ಇಟ್ಟುಕೊಳ್ಳಬೇಕೆನ್ನುವುದು ಅನೇಕ ಹಿತಚಿಂತಕರ ಅಭಿಲಾಷೆಯಾಗಿದೆ. ಎಲ್ಲರಿಂದಲೂ ಸಹಕಾರವು ದೊರೆತು ಪರಮಾತ್ಮನ ಅನುಗ್ರಹವೂ ಇದ್ದರೆ ಮಹಾ ಮಂಗಳವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗುವುದು. ಆ ಬಗೆಗೆ ಗ್ರಾಹಕರಿಗೆ ಸೂಕ್ತ ಸಮಯದಲ್ಲಿ ತಿಳಿಯಪಡಿಸಲಾಗುವುದು.

ರಾಮಾಯಣವು ಮುಗಿಯಿತೆಂದೇ ಭಾವಿಸಿರುವ ನಮ್ಮ ಗ್ರಾಹಕರನೇಕರು ಮುಂದಿನ ಪ್ರಕಟಣೆಯ ವಿಷಯವಾಗಿ ಪ್ರಸ್ತಾಪಿಸುತ್ತಿದ್ದಾರೆ. ಇದು ಅವರು ಸಂಸ್ಥೆಯ ಮೇಲಿಟ್ಟಿರುವ ಅಭಿಮಾನದ ಮತ್ತು ವಿಶ್ವಾಸದ ಕುರುಹಾಗಿದೆ. ಭಗವಂತನ ಕೃಪೆಯಿಂದಲೂ, ಗ್ರಾಹಕರ ಸಹಕಾರದಿಂದಲೂ, ಪ್ರಚಾರಕರ ನಿಃಸ್ವಾರ್ಥ ಸೇವೆಯಿಂದಲೂ, ಸಂಪಾದಕಮಂಡಲಿಯ ವಿದ್ವಾಂಸರ ಸಹಕಾರ -ಸದಾಶಯಗಳಿಂದಲೂ ನಮ್ಮೆಲ್ಲ ಕಾರ್ಯಗಳೂ ನಡೆಯಬೇಕಾಗಿವೆ. ದಾಸರ ನುಡಿಯಂತೆ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಪುಣ್ಯವನ್ನೇಕೆ ಗಳಿಸಬಾರದು?

ಮಹಾಭಾರತದಲ್ಲಿ 15 ಸಂಪುಟಗಳನ್ನೂ ರಾಮಾಯಣದಲ್ಲಿ 4 ಸಂಪುಟಗಳನ್ನೂ ಪುನರ್ಮುದ್ರಣಮಾಡಬೇಕಾಗಿದೆ. ಅವೆಲ್ಲವನ್ನೂ ಪುನರ್ಮುದ್ರಣಮಾಡಿದ ನಂತರವೇ ನಾವು ಗ್ರಾಹಕರ ಋಣದಿಂದ ಮುಕ್ತರಾಗುತ್ತೇವೆ. ಅದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿ 11ನೆಯ ಸಂಪುಟದ ಪ್ರಕಾಶನದ ವೇಳೆಗೆ ನಮ್ಮ ಮುಂದಿನ ಪ್ರಕಟಣೆಯ ಬಗೆಗೆ ತಿಳಿಯಪಡಿಸಲಾಗುವುದು.

ಕಾರ್ತಿಕ ಮಾಸದಿಂದ ಪ್ರಾರಂಭವಾದ ಶ್ರೀಮದ್ರಾಮಾಯಣದ ನವಾಹ ಪ್ರವಚನಗಳನ್ನು ಪ್ರತಿತಿಂಗಳೂ ಶುದ್ಧ ಪಂಚಮಿಯಿಂದ ತ್ರಯೋದಶೀ ಅಥವಾ ಚತುರ್ದಶಿಯವರೆಗೆ ನಗರದ ಒಂದೊಂದು ಬಡಾವಣೆಗಳಲ್ಲಿ ನಡೆಸಲಾಗುತ್ತಿದೆ. ದೂರದರ್ಶನದ ಪ್ರಭಾವವು ಅಧಿಕವಾಗುತ್ತಿದ್ದರೂ ಈ ನಮ್ಮ ವಿನೂತನ ಕಾರ್ಯಕ್ರಮಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿದೆಯೆಂದು

ಹೇಳಬಹುದು. ಧಾರ್ಮಿಕಸಂಸ್ಥೆಗಳ ವಿಶ್ವಸ್ತಮಂಡಲಿಯವರೂ ಒಂಬತ್ತು ದಿವಸಗಳ ಪ್ರವಚನಕ್ಕೆ ಉಚಿತವಾಗಿ ಸ್ಥಳಾವಕಾಶಮಾಡಿಕೊಡಲು ಮುಂದೆ ಬರುತ್ತಿದ್ದಾರೆ. ಇದೊಂದು ಶುಭಸೂಚನೆ. ಶ್ರೋತೃಗಳ ಸಂಖ್ಯೆಯು ಹೆಚ್ಚುತ್ತಿದೆ. ಮೊದಲನೆಯ ಹಂತದಲ್ಲಿ ಒಂದು ವರ್ಷದ ಪೂರ್ತಿಯಾಗಿ ಈ ಕಾರ್ಯಕ್ರಮವನ್ನು ನಡೆಸಲು ಸಂಕಲ್ಪಿಸಲಾಗಿದೆ. ಇದುವರೆಗೆ ಆಶ್ರಯ ನೀಡಿದ ಸಂಸ್ಥೆಗಳು ಮತ್ತು ಪ್ರವಚನವನ್ನು ನಡೆಸಿಕೊಟ್ಟ ವಿದ್ವಾಂಸರ ಶುಭನಾಮಗಳು :

1)	ಶ್ರೀರಾಮದೇವಾಲಯ ಪ್ರವಚನ ಮಂದಿರ, ಮಾಡಲ್ ಹೌಸ್ ಬ್ಲಾಕ್, ಬಸವನಗುಡಿ	ಪರಮಪೂಜ್ಯ ಶ್ರೀ ಶ್ರೀ ರಂಗ ಪ್ರಿಯಸ್ವಾಮೀಜೀಯವರು
2)	ಪಂಚಮುಖಿ ಗಣಪತಿ ದೇವ ಸ್ಥಾನ, ಮಹಾಲಕ್ಷ್ಮೀ ಲೇಔಟ್	ವಿದ್ವಾನ್ ಶಲ್ವಪಿಳ್ಳೈ ಶರ್ಮಾ
3)	ಶ್ರೀ ಸಾಯಿ ಅಧ್ಯಾತ್ಮ ಕೇಂದ್ರ, ತ್ಯಾಗರಾಜನಗರ,	ಪರಮಪೂಜ್ಯ ಶ್ರೀ ಶ್ರೀ ಹರಿಹರಾ ನಂದಸ್ವಾಮೀಜೀಯವರು, ಸಂಚಾಲಕರು, ವಿಶ್ವ ಹಿಂದು ಪರಿಷತ್, ಕೋಲಾರ
4)	ಶ್ರೀ ಪಟ್ಟಾಭಿರಾಮ ಸ್ವಾಮೀ ಸೇವಾಮಂಡಲಿ, ಟಿ-ಬ್ಲಾಕ್, ಜಯನಗರ	ಶ್ರೀ. ಟಿ.ಎನ್. ಪ್ರಭಾಕರ, ಎಂ.ಎ., ಸಂಸ್ಕೃತ ಉಪನ್ಯಾಸಕರು, ತುಮಕೂರು.
5)	ಶ್ರೀ ಜಯರಾಮ ಸೇವಾಮಂಡಲಿ, 8ನೇ ಬ್ಲಾಕ್, ಜಯನಗರ	ಶ್ರೀ ಚಂದ್ರಶೇಖರ್, ಏರಿಯಾ ಮ್ಯಾನೇಜರ್, ಗ್ರಾಮೀಣ ಬ್ಯಾಂಕ್, ಕೋಲಾರ.
6)	ಬ್ರಹ್ಮಚೈತನ್ಯಮಂದಿರ, ಮೈಸೂರ್ ಬ್ಯಾಂಕ್ ಕಾಲೋನಿ ಸಮೀಪ	ಹರಿಕಥಾಪ್ರವಚನ ಶಿರೋಮಣಿ ಆಸ್ಥಾನ ವಿದುಷೀ ಶ್ರೀಮತಿ ಮೈಥಿಲೀ -ರಾಮಾನುಜಂ

7) ಶ್ರೀ ವೆಂಕಟರಮಣಸ್ವಾಮೀ ದೇವಸ್ಥಾನ, ಶ್ರೀನಗರ — ಶ್ರೀ ಟಿ.ಎನ್. ಪ್ರಭಾಕರ, ಎಂ.ಎ. ಸಂಸ್ಕೃತ ಉಪನ್ಯಾಸಕರು, ತುಮಕೂರು

ಪ್ರವಚನಕಾರ್ಯಕ್ರಮಗಳನ್ನು ನಡೆಸಲು ಆಶ್ರಯವನ್ನಿತ್ತವರಿಗೂ ಮತ್ತು ಪ್ರವಚನಕಾರರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮ ಬಹಳ ದಿವಸಗಳ ಆಶಯವಾಗಿದ್ದ ಶ್ರೀವಿಷ್ಣುಸಹಸ್ರನಾಮ ಧ್ವನಿಮುದ್ರಣವನ್ನು ಈ ಸಂಪುಟದೊಡನೆ ಬಿಡುಗಡೆಮಾಡಲಾಗುವುದು. ಗೀತೆ- ವಿಷ್ಣುಸಹಸ್ರನಾಮಗಳನ್ನು ಹಾಡಬೇಕು **ಗೇಯಂ ಗೀತಾ ನಾಮ ಸಹಸ್ರಂ** - ಎಂದು ಶ್ರೀ ಶಂಕರಭಗವತ್ಪಾದರು ಅಪ್ಪಣೆಕೊಡಿಸಿದ್ದಾರೆ. ಅದನ್ನು ಕಾರ್ಯರೂಪದಲ್ಲಿ ತರಬೇಕೆಂಬುದು ನಮ್ಮ ಬಹಳ ದಿವಸಗಳ ಆಶಯವಾಗಿದ್ದಿತು. ಸಂಗೀತವಿದುಷೀ ಶ್ರೀಮತೀ ಟಿ. ಎಸ್. ಸತ್ಯವತಿ ಯವರು ವಿಷ್ಣುಸಹಸ್ರನಾಮವನ್ನು ಸುಮಾರು ಇಪ್ಪತ್ತೆರಡು ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಿದ್ದಾರೆ. ಶ್ರೀಮತೀ ಇ. ಪಿ. ಅಲಮೇಲೂ ಅವರ ಸುಮಧುರವಾದ ವೀಣೆಯ ಹಿನ್ನೆಲೆಯಿದೆ. ಶ್ರೀಮತೀ ಸತ್ಯವತಿಯವರ ಇಬ್ಬರು ಶಿಷ್ಯೆಯರು ಸಹಕರಿಸಿದ್ದಾರೆ. ಅಲ್ಲದೇ ವಿಶೇಷವಾಗಿ ಪ್ರಕಾಶನ ಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯ ಸ್ವಾಮೀಜೀಯವರ ಪ್ರಸ್ತಾವನೆಯು ಕನ್ನಡ-ಆಂಗ್ಲ- ಹಿಂದಿಭಾಷೆಗಳಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿದೆ. ನಮ್ಮ ಹಲವಾರು ಗೆಳೆಯರ ಅಭಿಪ್ರಾಯದಂತೆ ಧ್ವನಿಮುದ್ರಣವು ಚೆನ್ನಾಗಿ ಮೂಡಿಬಂದಿದೆ. 90 ನಿಮಿಷಗಳ ಧ್ವನಿ ಮುದ್ರಣದ ಬೆಲೆ ಕೇವಲ 35/- ರೂ.ಗಳು. ನಮ್ಮ ಗ್ರಾಹಕರೆಲ್ಲರೂ ಒಂದೊಂದು ಧ್ವನಿಮುದ್ರಣವನ್ನು ತೆಗೆದುಕೊಳ್ಳುವುದಲ್ಲದೇ ತಮ್ಮ ಬಂಧು ಮಿತ್ರರಿಗೂ ಕೊಡಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ.

ಶ್ರೀರಾಮಪಟ್ಟಾಭಿಷೇಕದ ಘಟ್ಟವನ್ನೊಳಗೊಂಡ ಶ್ರೀಮದ್ವಾಲ್ಮೀಕಿ ರಾಮಾಯಣದ 9ನೆಯ ಸಂಪುಟದ ಪ್ರಕಾಶನಮಹೋತ್ಸವದ ಹಿನ್ನೆಲೆಯಲ್ಲಿ ಹತ್ತು ದಿನಗಳ ವಿಶೇಷ ಕಾರ್ಯಕ್ರಮಗಳನ್ನು (ತಾ ॥ 3 -11- 1989 ರಿಂದ 11-11- 1989 ರ ವರೆಗೆ) ಹಮ್ಮಿಕೊಳ್ಳಲಾಗಿತ್ತು.

12-11-1989ರ ವೈಕುಂಠಚತುರ್ದಶೀ ಪವಿತ್ರದಿನದಂದು ಗಾಂಧೀ

ಬಜಾರಿನ ಶ್ರೀ ಭವಾನೀ ಕಲ್ಯಾಣಮಂದಿರದಲ್ಲಿ ಶ್ರೀರಾಮಪಟ್ಟಾಭಿಷೇಕ ಕಾರ್ಯಕ್ರಮ. ಅದಕ್ಕೆ ಪೂರಕವಾಗುವಂತೆ ಹಿಂದಿನ ದಿನ ರಾತ್ರಿಯಿಂದಲೇ ಅಖಂಡ ಭಜನೆ, 12 ರಂದು ಬೆಳಿಗ್ಗೆ ಸ್ವಸ್ತಿವಾಚನ - ಮಂಗಳವಾದ್ಯಘೋಷ ಗಳ ಬಳಿಕ 12 ಮಂದಿ ಋತ್ವಿಜರು ಸಮಗ್ರರಾಮಾಯಣಪಾರಾಯಣ ವನ್ನು ಆರಂಭಿಸಿದರು. ಅದೇ ಸಮಯಕ್ಕೆ ಸರಿಯಾಗಿ ನವಗ್ರಹಜಪ, ಶ್ರೀರಾಮತಾರಕ ಹೋಮ, ವಿಷ್ಣುಸಹಸ್ರನಾಮಹೋಮ, ಹರೇರಾಮಮಂತ್ರ ಹೋಮಗಳು ಆರಂಭವಾದುವು. ಅಂದು ಪ್ರಾತಃ 9-00ರಿಂದ ಮಧ್ಯಾಹ್ನ 12-00 ರ ವರೆಗೂ ವ್ಯಾಸಮಂದಿರದಲ್ಲಿ ಅಖಂಡ ವಿಷ್ಣುಸಹಸ್ರನಾಮಸ್ತೋತ್ರ ಪಾರಾಯಣವೂ, ಚೈತನ್ಯಮಂದಿರದಲ್ಲಿ ಅಖಂಡ ಹರೇರಾಮಮಂತ್ರ ಪಠನವೂ, ದೇವೀಮಂದಿರದಲ್ಲಿ ಅಖಂಡ ಲಲಿತಾಸಹಸ್ರನಾಮ ಪಾರಾಯಣವೂ, ಪುರಂದರದಾಸಮಂದಿರದಲ್ಲಿ ಅಖಂಡಭಜನೆಯೂ ನಡೆದುವು. ಅದಾದ ಬಳಿಕ ಪೂರ್ಣಾಹುತಿಯು ಅರ್ಪಿತವಾಗಿ ಶ್ರೀರಾಮಪಟ್ಟಾಭಿಷೇಕ ಮಹಾಮಂಗಳಾರತಿಯಾಗಿ ನಂತರ ಸರ್ವರಿಗೂ ತೀರ್ಥ, ಭೋಜನಪ್ರಸಾದ ವನ್ನು ನೀಡಲಾಯಿತು.

ಸಂಜೆ 6 ಘಂಟೆಗೆ ಸರಿಯಾಗಿ ಶ್ರೀರಾಮಪಟ್ಟಾಭಿಷೇಕದ ಘಟ್ಟವಿರುವ 9ನೆಯ ಸಂಪುಟದ ಪ್ರಕಾಶನಸಮಾರಂಭವು ನಡೆಯಿತು. ವೈದಿಕರು ವೇದ ಘೋಷ ಮಾಡಿದರು. ಕುಮಾರೀ ಉಮಾ ಸ್ವಾಗತಪದ್ಯಮಾಲಿಕೆಯನ್ನು ವಾಚಿಸಿದ ನಂತರ ಶ್ರೀ ಟಿ. ಎನ್. ಪ್ರಭಾಕರ್ ಸ್ವಾಗತ ಬಯಸಿದರು. ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಪಿ. ಶಿವಶಂಕರ ಭಟ್ಟರವರು ರಾಮಾಯಣ ಕರಂಡಕಕ್ಕೆ ಪೂಜೆ ಸಲ್ಲಿಸಿ, ಸಂಪುಟವನ್ನು ಬಿಡು ಗಡೆ ಮಾಡಿದರು. ಶ್ರೀಮತೀ ಶಾಂತ ಹಾಗೂ ಶ್ರೀಮತೀ ವತ್ಸಲಾರವರು 'ನಾರದವಾಕ್ಯ' ಸರ್ಗವನ್ನು ಹಾಡಿದರು. ಬಳಿಕ ಮಾತನಾಡಿದ ನ್ಯಾಯ ಮೂರ್ತಿ ಭಟ್‌ರವರು ' ಯಾವುದೇ ಸಮಾಜದಲ್ಲಿ ಜಾಗ್ರತಿ ತಪ್ಪಿದಾಗ ದುಷ್ಟರ ಹಾವಳಿ ಹೆಚ್ಚಾಗುತ್ತದೆ ; ಸಜ್ಜನರ ಧ್ವನಿ ಕ್ಷೀಣಿಸುತ್ತದೆ. ಇದರ ಬದಲಾವಣೆಗಾಗಿ ' ಅವತಾರ ' ವೆಂಬ ತತ್ತ್ವ ನಮ್ಮಲ್ಲಿದೆ. ಅವತಾರಪುರು ಷರ ಕಥೆಯನ್ನೊಳಗೊಂಡ ರಾಮಾಯಣದಂತಹ ಪುಸ್ತಕದ ಅಧ್ಯಯನ

ದಿಂದಾಗಿ ಜೀವನವು ಸುಗಮವಾಗುತ್ತದೆ ; ನೈರಾಶ್ಯವು ದೂರವಾಗುತ್ತದೆ '- ಎಂದೂ ತಿಳಿಸಿದರು.

ಸಂಪುಟವನ್ನು ಪರಿಚಯಿಸಿ ಆಶೀರ್ವಚನವನ್ನು ಅನುಗ್ರಹಿಸಿದ ಪೂಜ್ಯ ಶ್ರೀ ಶ್ರೀ ರಂಗಪ್ರಿಯಸ್ವಾಮೀಜೀಯವರು '' ಇತ್ತೀಚಿನವರು ಶ್ರೀರಾಮನನ್ನು ಆದರ್ಶಪುರುಷನೆಂದು ತಿಳಿಸುತ್ತಿದ್ದಾರೆ. ಸಾಂಪ್ರದಾಯಿಗಳು ಆತನನ್ನು ಭಗವಂತನ ಅವತಾರವೆಂದೂ ಗೌರವಿಸಿದ್ದಾರೆ. ಸ್ಥೂಲದೃಷ್ಟಿಗೆ ಶ್ರೀರಾಮನು ಮಾನವನೂ, ಸೂಕ್ಷ್ಮದೃಷ್ಟಿಗೆ ದೇವತೆಯೂ, ಪರಾದೃಷ್ಟಿಗೆ ಪರಂಜ್ಯೋತಿಯೂ ಆಗಿದ್ದಾನೆ. 'ರಾಮಾಯ ಸ್ವಸ್ತಿ ; ರಾವಣಾಯ ಸ್ವಸ್ತಿ ; ಯಾರು ಬರುತ್ತಾರೋ ಅವರಿಗೇ ಬೆಂಬಲ, ಸ್ವಸ್ತಿವಾಚನ ಮಾಡುತ್ತೇನೆ ' - ಎಂದು ಹೇಳುವ ಜನರ ಅಭಿಪ್ರಾಯವು ಸರಿಯಲ್ಲ ; ಸತ್ಯಕ್ಕೇ ಜಯ - ಎಂದು ಸಾರ ಬೇಕು. ಶ್ರೀರಾಮಚಂದ್ರನ ಸೇವೆಯೆಂದರೆ ಶ್ರೀರಾಮನ ಆದರ್ಶಗಳಲ್ಲಿ ತನ್ಮಯತೆ ಹೊಂದುವುದೇ ಆಗಿದೆ '' ಎಂದು ತಿಳಿಸಿದರು.

ಅಂದು ಪ್ರಾತಃಕಾಲದಿಂದ ನಡೆದ ವಿವಿಧ ಪೂಜಾಕೈಂಕರ್ಯಗಳ ಬಗೆಗೆ ಮೆಚ್ಚಿಗೆ ವ್ಯಕ್ತಪಡಿಸಿದ ಅವರು ಮಂತ್ರಪಠನ, ಶ್ರವಣ, ನಾಮ ಸಂಕೀರ್ತನೆ, ಯಜ್ಞ, ಅಭಿಷೇಕ - ಇತ್ಯಾದಿಗಳಲ್ಲಿ ಒಂದೊಂದಿದ್ದರೂ ಅದರಿಂದ ಆಖಂಡ ಪುಣ್ಯವಿದೆ ; ಹೀಗಿರುವಾಗ ಇವೆಲ್ಲದರ ಸಮ್ಮಿಲನದ ಅಖಂಡಪುಣ್ಯ ಪ್ರವಾಹದಲ್ಲಿ ನಾವೆಲ್ಲರೂ ಮಿಂದು ಹೊರಬಂದಿರುವುದು ಸುಕೃತವಿಶೇಷ ದಿಂದಲೇ ಆಗಿದೆಯೆಂದು ತಿಳಿಸಿದರಲ್ಲದೇ ಇಡೀ ವಿಶ್ವವೇ ರಾಮಮಯವಾಗಿ ಶಾಂತಿಯು ನೆಲೆಸಲೆಂದೂ ಹಾರೈಸಿದರು.

ಶ್ರೀಮದ್ರಾಮಚಂದ್ರಾಪುರಮಠದ ಶ್ರೀ ಶ್ರೀಮದ್ರಾಘವೇಂದ್ರಭಾರತೀ ಸ್ವಾಮಿಗಳವರು ಅನುಗ್ರಹಿಸಿದ್ದ ಸುವರ್ಣಮಂತ್ರಾಕ್ಷತೆಗಳನ್ನು ಸಂಪಾದಕ ಮಂಡಳಿಯ ವಿದ್ವಾಂಸರಿಗೆ ಪೂಜ್ಯ ಶ್ರೀ ಶ್ರೀ ರಂಗಪ್ರಿಯಸ್ವಾಮಿಗಳವರು ನೀಡಿದರು. ಸಾಮೂಹಿಕ ಶಾಂತಿಪಾಠದೊಂದಿಗೆ ಕಾರ್ಯಕ್ರಮವು ಮುಕ್ತಾಯ ಗೊಂಡಿತು.

ಈ ಸಂಪುಟಕ್ಕೆ ಮುನ್ನುಡಿಯನ್ನು ಸಿ. ಒ. ಡಿ. ಇಲಾಖೆಯ ಡಿ. ಐ. ಜಿ. ಗಳಾದ ಡಾ || ಪಿ. ಎಸ್. ರಾಮಾನುಜಂ ಅವರು ಬರೆದುಕೊಟ್ಟಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಎಂದಿನಂತೆ ಪ್ರಕಾಶನಸಮಿತಿಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಸ್ವಾಮಿಗಳವರ ನಿರ್ದೇಶನದಲ್ಲಿ ಸಂಪಾದಕಮಂಡಲಿಯ ವಿದ್ವಾಂಸರು ಶ್ರದ್ಧೆಯಿಂದಲೂ, ನಿಃಸ್ಪೃಹತೆಯಿಂದಲೂ, ಧರ್ಮದ ಮೇಲಿನ ಅಭಿಮಾನದಿಂದಲೂ ಗ್ರಂಥವನ್ನು ಸಂಪಾದಿಸಿಕೊಡುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ತೆರೆಯ ಮರೆಯಲ್ಲಿ ಮಹಾಭಾರತ ಮತ್ತು ರಾಮಾಯಣದ ಪ್ರಚಾರಕ್ಕಾಗಿ ಶ್ರಮಿಸುತ್ತಿರುವ ನೂರಾರು ಮಂದಿ ಸ್ನೇಹಿತರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಭಾರತ ದರ್ಶನದ ಸಮಸ್ತ ಬಂಧುಗಳಿಗೂ ದಯಾಮಯನಾದ ಪರಮಾತ್ಮನು ಎಲ್ಲ ಇಷ್ಟಾರ್ಥಗಳನ್ನೂ ನೆರವೇರಿಸಿಕೊಡಲೆಂಬ ಅಂತರಂಗದ ಪ್ರಾರ್ಥನೆಯೊಡನೆ ವಿರಮಿಸುವೆವು. **-ಪ್ರಕಾಶಕರು**

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಮದ್ರಾಮಚಂದ್ರಾಪುರಮಠಸ್ಥ

ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ಭಾರತ ದರ್ಶನ ಸಂಪಾದಕರು,

ಮಂಜುನಾಥ ರಸ್ತೆ, ತ್ಯಾಗರಾಜನಗರ, ಬೆಂಗಳೂರು – ಇವರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ

ಸಂದೇಶಃ ॥

ಅದಾಗಿ- ಶ್ರೀ ಸವಾರಿಯು ಆರಾಧ್ಯ ಶ್ರೀ ಸೀತಾರಾಮಚಂದ್ರಾದಿ ದೇವತಾ ದಿವ್ಯಸನ್ನಿಧಿಯಲ್ಲಿ ಸಮಸ್ತ ಜನತೆಯ ಯೋಗ- ಕ್ಷೇಮಗಳನ್ನು ಸಂಪ್ರಾರ್ಥಿಸುತ್ತ, ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿಮಾಡಿದೆ.

ಶ್ರೀಮದ್ರಾಮಾಯಣದ ಮೂಲಶ್ಲೋಕಗಳನ್ನು ಅದರ ಕನ್ನಡಾನುವಾದಗಳನ್ನು ಸಂಪುಟ - ಸಂಪುಟವಾಗಿ ಪ್ರಕಟಿಸಲು ತೊಡಗಿ, 10ನೆಯ

ಸಂಪುಟವನ್ನು ಸದ್ಯವೇ ಪ್ರಕಾಶಿಸಲು ನಿಶ್ಚೈಸಿ, ಆಶೀರ್ವಾದ ಬಯಸಿದ್ದನ್ನು ತಿಳಿದು ಸಂತೋಷವಾಯಿತು.

ಈ 10ನೆಯ ಸಂಪುಟದಲ್ಲಿಯೂ, ಅನೇಕ ವಿಶೇಷವಿಷಯಗಳು ಅಡಕವಾಗಿದ್ದು, ಉತ್ತರಕಾಂಡದ ಅರ್ಧಭಾಗ ರಾವಣನ ಕಥೆಯೇ ಆಗಿದೆ. ಅಗಸ್ತ್ಯರು– ಶ್ರೀರಾಮನ ಮತ್ತು ರಾವಣ–ಕುಂಭಕರ್ಣ– ವಿಭೀಷಣ– ಇಂದ್ರಜಿತು – ಇವರ ಜನ್ಮಕಥೆಯನ್ನು ವಿವರಿಸಿ ಹೇಳಿದ್ದಾರೆ. ಈ ಪ್ರಕರಣದಲ್ಲಿಯೇ ಸೀತಾದೇವಿಯ ಜನ್ಮವೃತ್ತಾಂತವೂ ಬರುತ್ತದೆ. ಮುಂದೆ ಶ್ರೀರಾಮನ ಕಾರ್ಯಭಾರವು ಹೇಗೆ ನಡೆಯಿತೆಂದು ವರ್ಣಿತವಾಗಿದೆ. ರಾಮನು ದಿನವೆಲ್ಲ ಕಾದು ಕುಳಿತಿದ್ದರೂ ದೂರು ಕೊಡುವವರೇ ಬರುತ್ತಿರಲಿಲ್ಲವಂತೆ. ಪ್ರಜೆಗಳಿಗೆ ಕುಂದುಕೊರತೆಗಳೇ ಇರಲಿಲ್ಲ. ಸಾರಮೇಯದಂತಹ (ಶ್ವಾನದಂತಹ) ಪ್ರಾಣಿಗೂ ಶ್ರೀರಾಮನ ರಾಜ್ಯದಲ್ಲಿ ನ್ಯಾಯವು ದೊರಕುತ್ತಿದ್ದಿತು. ಇವೆಲ್ಲವೂ ಈ ಸಂಪುಟದಲ್ಲಿ ವಿಶದವಾಗಿ ಬಂದಿವೆ. ಚಕ್ರವರ್ತಿಯೇ ಆಗಿದ್ದರೂ ಶ್ರೀರಾಮನು ಜನಾಪವಾದಕ್ಕೆ ಬಹಳ ಹೆದರುತ್ತಿದ್ದನು ಮತ್ತು ಸ್ಪಂದಿಸುತ್ತಿದ್ದನು – ಎಂಬುದನ್ನು ನಾವು ಈ ಸಂಪುಟದಲ್ಲಿ ಕಾಣಬಹುದಾಗಿದೆ.

ಉಳಿದಿರುವ ಸಂಪುಟವೂ ಹೊರಬರುವಂತಾಗಿ ಭಾರತ ದರ್ಶನ ಸಂಸ್ಥೆಯವರು ಪ್ರಾರಂಭಿಸಿದ ಕಾರ್ಯ ಸಾಧಿಸುವ ಮೂಲಕ, ಉತ್ತರೋತ್ತರ ಅಭಿವೃದ್ಧಿ ಹೊಂದುವಂತೆ ಶ್ರೀ ಸೀತಾರಾಮಚಂದ್ರ, ಚಂದ್ರಮೌಳೀಶ್ವರರ ಪರಮಪ್ರಸಾದ ಪ್ರಾಪ್ತವಾಗಲೆಂದು ಸುವರ್ಣಮಂತ್ರಾಕ್ಷತೆಯೊಡನೆ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ :– ಶ್ರೀ ಪ್ರಮೋದ ಸಂ॥ ಚೈತ್ರ ಬಹುಳ ಪ್ರತಿಪದೆಯು

(ದಿನಾಂಕ 11–4–90ನೇ ಬುಧವಾರ)

ವಸತಿ :– ಶ್ರೀ ತೀರ್ಥರಾಜಪುರ ವಿರಾಜಿತ, ತೀರ್ಥಹಳ್ಳಿ,

ಶ್ರೀರಾಮಚಂದ್ರಾಪುರಮಠೇ.

ಮುನ್ನುಡಿ

ಒಂದಕ್ಷರವೂ ಅನೃತವಲ್ಲದ, ಯಾವುದೇ ಮಾನವಸಹಜದೋಷ ವಿಲ್ಲದ, ಇತಿಹಾಸ ಹಾಗೂ ಕಾವ್ಯಾಂಶಗಳ ಸುಂದರಸಮನ್ವಯವನ್ನು ಹೊಂದಿರುವ ಶ್ರೀಮದ್ರಾಮಾಯಣವು – ಭಾರತವು ಜಗತ್ತಿಗೆ ಕೊಟ್ಟ ಒಂದು ಅನರ್ಘ್ಯವಾದ ರತ್ನ, ಒಂದು ಅದ್ವಿತೀಯವಾದ ಅದ್ಭುತ. **'ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ '** ಎಂದು ಹೇಳಿ ರುವ ಪ್ರಕಾರ ಜ್ಞಾನರಾಶಿಯಾದ ವೇದದ ಸ್ಥಾನವನ್ನೇ ಹೊಂದಿರುವ ಶ್ರೀಮದ್ರಾಮಾಯಣವು ಅಧರ್ಮವನ್ನು ಹೇಗೆ ಮೆಟ್ಟಿನಿಲ್ಲಬೇಕೆಂದು ಶ್ರೀರಾಮನು ತೋರಿಸಿಕೊಟ್ಟ ಮಾರ್ಗ. ಇದು **'ಸೀತಾಯಾಶ್ಚರಿತಂ ಮಹತ್'** ಕೂಡ ಹೌದು.

ಯಾವುದೇ ಸಾಹಿತ್ಯದ ಪ್ರಯೋಜನ ಧರ್ಮಾಧರ್ಮವಿವೇಕವಾದುದ ರಿಂದ, ಹಾಗೂ ಅದರ ಗುರಿ ಚತುರ್ವರ್ಗಫಲಪ್ರಾಪ್ತಿಯಾದುದರಿಂದ **'ರಾಮಾದಿವತ್ ಪ್ರವರ್ತಿತವ್ಯಂ ನ ರಾವಣಾದಿವತ್ '** – ಎಂದು ತೋರಿಸಿಕೊಟ್ಟು ಕೃತ್ಯಾಕೃತ್ಯಪ್ರವೃತ್ತಿ – ನಿವೃತ್ತಿಗಳ ಬಗ್ಗೆ ಮಾರ್ಗದರ್ಶನ ಮಾಡುವುದೇ ಸಾಹಿತ್ಯದ ಪರಮೋದ್ದೇಶ. ಶ್ರೀಮದ್ರಾಮಾಯಣವು ಈ ಉದ್ದೇಶವನ್ನು ಸಾಧಿಸುತ್ತದೆ. ಇದು ಸಾಕ್ಷಾತ್ ಭಗವಂತನು ಭೂಮಿಯಲ್ಲಿ ಶ್ರೀರಾಮನ ರೂಪದಲ್ಲಿ ಅವತರಿಸಿ ಅಧರ್ಮದ ಮೂಲೋತ್ಪಾಟನೆಯನ್ನು ಮಾಡುವ ವಿಧಾನವನ್ನು ತೋರಿಸುವ ಒಂದು ಅದ್ವಿತೀಯ ಇತಿಹಾಸಕಾವ್ಯ. ಇಂದಿನ ಕೆಲವರು ಹೇಳುವಂತೆ ಇದು ; ನಾರಾಯಣನಾದ ನರನೊಬ್ಬನ ಬಗ್ಗೆ ಬರೆದ ಕಾವ್ಯವಲ್ಲ, ಇದು ನರನಾಗಿ ಅವತರಿಸಿ ಬಂದು ನರನಂತೆಯೇ ನಡೆದು, ನರನು ಸಾಧಿಸಬೇಕಾದುದನ್ನು ಸಾಧಿಸಿ ತೋರಿಸಿದ ನಾರಾಯಣನ ಬಗ್ಗೆ ಬರೆದ ಇತಿಹಾಸ ಕಾವ್ಯ. ಇದರಲ್ಲಿ ಅವತಾರದ ಉದ್ದೇಶವು ಸಂಪೂರ್ಣ ವಾಗಿ ಫಲಿತವಾದ ಮೇಲೆ ಅವತಾರಸಮಾಪ್ತಿಯಾಗುವವರೆಗಿನ ಇತಿಹಾಸ ವರ್ಣಿತವಾಗಿದ್ದು ಧರ್ಮಾಧರ್ಮಸಂಘರ್ಷದಲ್ಲಿ ಧರ್ಮವು ಜಯಗಳಿಸುವು ದನ್ನು ಕಾಣುತ್ತೇವೆ. ಇದರಿಂದಲೇ ರಾಮಾಯಣವು ಸ್ಥಾಯಿಯಾದ ಮೌಲ್ಯ ವನ್ನು ಹೊಂದಿದ್ದು, ಕಾಲಾತೀತವಾಗಿ ನಿಲ್ಲುತ್ತದೆ. ಯಾವುದೇ ಕಾಲಕ್ಕೂ ಅಪ್ರಸ್ತುತವಾಗದೇ ಉಳಿಯುವ ಶಕ್ತಿಯನ್ನು ಹೊಂದಿರುವ, ಇತಿಹಾಸದ

ಕಾವ್ಯಮಯ ಅಭಿವ್ಯಕ್ತಿಯಾದ ರಾಮಾಯಣವು ಜಗತ್ತಿನ ಎಲ್ಲ ಜನಾಂಗ ಗಳ ಮೇಲೂ ಪ್ರಭಾವವನ್ನು ಬೀರಿರುವುದು ಆಶ್ಚರ್ಯದ ವಿಷಯವೇನಲ್ಲ.

ರಾಮಾಯಣವು ಭಾರತದ ಆತ್ಮ, ಇಡೀ ಭಾರತದ ಜನತೆಯ ಒಂದು ಸಮಷ್ಟಿಪ್ರಜ್ಞೆಯ ತಪಃಫಲಿತ. ವಾಲ್ಮೀಕಿ ಮಹರ್ಷಿಗಳ ಹೃದಯದಲ್ಲಿ ಉದ್ಭವಿಸಿ, ಮುಖದಿಂದ ವಿನಿಃಸೃತವಾದ ರಾಮಾಯಣಮಹಾನದಿಯು ಇಡೀ ಭುವನವನ್ನು ಪವಿತ್ರೀಕೃತವನ್ನಾಗಿ ಮಾಡುತ್ತದೆ. **'ಪುನಾತಿ ಭುವನಂ ಪುಣ್ಯಾ ರಾಮಾಯಣಮಹಾನದೀ'** ಇದು ಮುಮುಕ್ಷುಗಳಿಗೆ ಭಕ್ತಿಯ ಕಲ್ಪದ್ರುಮ. ವ್ಯವಹಾರನಿಷ್ಠರಿಗೆ ನೀತಿಯ ಮಹಾಸಾಗರ. ತ್ಯಾಗ ದಲ್ಲಿ, ಶೌರ್ಯದಲ್ಲಿ, ಧರ್ಮಸಂಸ್ಥಾಪನೆಯಲ್ಲಿ, ವೈಯಕ್ತಿಕಜೀವನದ ಪರಿ ಶುದ್ಧತೆಯಲ್ಲಿ, ಪ್ರಜಾಪಾಲನೆಯಲ್ಲಿ ಆದರ್ಶವೆಂಬುದು ಏನೆಂದು ಶ್ರೀರಾಮನ ಮೂಲಕ ತೋರಿಸಿ ಕೊಡುವ ಈ ಮಹಾಗ್ರಂಥ ಇಡೀ ಜಗತ್ತಿಗೆ ಒಂದು ದಾರಿದೀಪ. ಆದರ್ಶಗಳ ಅಂತಿಮ ಹಂತ. ಮಾನವೀಯಸಂಬಂಧಗಳ ಉದಾತ್ತತೆಯನ್ನೂ, ಮಾನವನ ಅಧರ್ಮರೂಪ ಶತ್ರು ನಿರ್ಮೂಲನಕ್ಷಮತೆಯ ಸಾಧ್ಯತೆಗಳನ್ನೂ ತೋರಿಸಿಕೊಡುವ ಈ ಗ್ರಂಥ ಆದರ್ಶಗಳ ಆಗರ, ಸಮ್ಯಕ್ತ್ವದ ಸನ್ನಿಧಿ.

ರಾಮಾಯಣದಲ್ಲಿ ಪ್ರತಿಯೊಂದು ಆದರ್ಶವೂ ಪ್ರತ್ಯೇಕವಾಗಿ, ಹಾಗೂ ಸಮಷ್ಟಿಯಾಗಿ ಮೂರ್ತೀಭವಿಸಿ ನಮ್ಮ ಮುಂದೆ ನಿಲ್ಲುವುದನ್ನು ನಾವು ಕಾಣುತ್ತೇವೆ. ಒಂದೊಂದು ವಾಕ್ಯವೂ ಒಂದೊಂದು ಯುಗದ ಅನುಭವದ ಅಭಿವ್ಯಕ್ತಿಯೆನಿಸುವಷ್ಟು ಗಾಢವಾದ ಅರ್ಥವನ್ನು ಹೊಂದಿದೆ. ಧರ್ಮ ವನ್ನು ಒಂದು ಕಡೆ ಅಧರ್ಮವನ್ನು ಮತ್ತೊಂದು ಕಡೆ ನಿಲ್ಲಿಸಿ, ಅವುಗಳ ಸಂಘರ್ಷದಲ್ಲಿ ಧರ್ಮವೇ ಕೊನೆಗೆ ಹೇಗೆ ಜಯಿಸುತ್ತದೆಯೆಂಬುದನ್ನು ಭಗವಂತನೇ ಸ್ವತಃ ನಮಗೆ ತೋರಿಸಿರುವುದೇ ರಾಮಾಯಣದ ಚಿರಂತನತೆಯ ಗುಟ್ಟು. ರಾಮಾಯಣದ ತತ್ತ್ವಗಳ ಶಾಶ್ವತತೆಯಿಂದಲೇ ರಾಮಾ ಯಣವೂ ಶಾಶ್ವತವಾಗಿ ನಿಂತಿದೆ. ಶ್ರೀರಾಮನೇ ಹೇಳುವಂತೆ **' ಲೋಕಾಃ ಯಾವತ್ಸ್ಥಾಸ್ಯಂತಿ ತಾವತ್ಸ್ಥಾಸ್ಯಂತಿ ಮೇ ಕಥಾಃ** – ಜಗವಿರುವವರೆಗೆ ರಾಮಾಯಣ ಇರುತ್ತದೆ. ಅದು ಜಗತ್ತಿಗೆ ನಿರಂತರವಾದ ಸ್ಫೂರ್ತಿಕೇಂದ್ರ , ಸದಾ ಹರಿಯುವ ಜೀವನದಿ.

ಈಗ, ಪ್ರಕೃತ ಸಂಪುಟವು ರಾಮಾಯಣದ ಉತ್ತರಕಾಂಡದ ಪ್ರಥಮ ಸಂಪುಟವಾದುದರಿಂದ ಉತ್ತರಕಾಂಡದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳುವುದು ಉಚಿತವಾಗಿದೆ. ಉತ್ತರಕಾಂಡವು ರಾವಣವಧೆಯ ನಂತರ ಶ್ರೀರಾಮನು ರಾಜ್ಯಭಾರವನ್ನು ವಹಿಸಿಕೊಂಡ ನಂತರದ ವಿದ್ಯಮಾನಗಳ ನ್ನೊಳಗೊಂಡಿದೆ. ಸಾಮಾನ್ಯವಾಗಿ ಉತ್ತರಕಾಂಡದ ಪಾರಾಯಣವು ವಾಡಿಕೆಯಲ್ಲಿಲ್ಲದಿರುವುದರಿಂದ ಅದೊಂದು ಪ್ರಕ್ಷಿಪ್ತಭಾಗ ಹಾಗೂ ವಾಲ್ಮೀಕಿ ಮುನಿಗಳು ಇದರ ಕರ್ತೃವೇ ಅಲ್ಲ – ಎಂಬ ಅಭಿಪ್ರಾಯ ಕೂಡ ಕೆಲವರಲ್ಲಿ ಇರುವಂತಿದೆ. ಈ ಅಭಿಪ್ರಾಯ ಆಧಾರರಹಿತವಾದುದು. ಈ ಕಾಂಡದಲ್ಲಿ ಸೀತಾಪರಿತ್ಯಾಗ ಹಾಗೂ ಶ್ರೀರಾಮನ ಪರಮಪದಪ್ರಾಪ್ತಿಯ ವಿಷಯಗಳಿರು ವುದರಿಂದ ಕೇವಲ ಶ್ರೀರಾಮನ ಪಟ್ಟಾಭಿಷೇಕವನ್ನೇ ಕೊನೆಯಾಗಿಟ್ಟು ಕೊಂಡು ಮಂಗಳಾಂತವಾಗಿ ರಾಮಾಯಣವನ್ನು ಪಾರಾಯಣಮಾಡುವ ಪದ್ಧತಿಯು ಬಂದಿದೆಯೆಂದು ತೋರುತ್ತದೆ. ಇದರಿಂದ ಉತ್ತರಕಾಂಡವೇ ಪ್ರಕ್ಷಿಪ್ತವೆಂದು ಹೇಳುವಂತಿಲ್ಲ. ಉತ್ತರಕಾಂಡವು ರಾಮಾಯಣವು ಸಂಪೂರ್ಣವಾಗಲು ಬಹಳ ಆವಶ್ಯಕ. ಭೂಮಿಯಲ್ಲಿ ಅವತರಿಸಿದ ಭಗ ವಂತನು ಕೃತಕೃತ್ಯನಾಗಿ ಸ್ವಸ್ಥಾನಕ್ಕೆ ಮರಳುವ ವಿಷಯವನ್ನು ಹೇಳದಿದ್ದರೆ ಕಥೆಯು ಅಪೂರ್ಣವಾಗುತ್ತದೆ. ವಾಲ್ಮೀಕಿಮಹರ್ಷಿಗಳು ಶ್ರೀರಾಮನ ಇಡೀ ವೃತ್ತಾಂತವನ್ನು ಹೇಳುವವರಾದ್ದರಿಂದ ಅವರು ಉತ್ತರಕಾಂಡವನ್ನು ಬರೆದೇ ಈ ಗ್ರಂಥವನ್ನು ಪೂರ್ಣಗೊಳಿಸಿರಬೇಕಷ್ಟೆ! ಆದ್ದರಿಂದ ಉತ್ತರ ಕಾಂಡವು ರಾಮಾಯಣದ ಒಂದು ಭಾಗವೆಂಬುದರಲ್ಲಿ ಸಂದೇಹವಿಲ್ಲ. ಲೌಕಿಕ ಪ್ರಯೋಜನಗಳಿಗಾಗಿ ಮಾತ್ರ ಅಭಿಷೇಕಾಂತವಾದ ರಾಮಾಯಣದ ಪಾರಾ ಯಣವು ಪ್ರಚಲಿತವಾಗಿದೆಯೆಂದು ನಾವು ಅರ್ಥಮಾಡಿಕೊಳ್ಳಬಹುದು.

ಉತ್ತರಕಾಂಡವು ಪ್ರಾರಂಭವಾಗುವುದು – ರಾವಣವಧೆಯ ನಂತರ ಶ್ರೀರಾಮನನ್ನು ಅಭಿನಂದಿಸಲು ನಾನಾ ದಿಕ್ಕುಗಳಿಂದ ಮಹರ್ಷಿಗಳು ಬರುವ ಘಟ್ಟದಿಂದ. ಅಯೋಧ್ಯೆಗೆ ಬಂದು ಸೇರಿದ ಮಹರ್ಷಿಗಳು ಇಂದ್ರಜಿತುವಿನ ವಧೆಯನ್ನು ವಿಶೇಷವಾಗಿ ಶ್ಲಾಘಿಸಿದುದನ್ನು ಕೇಳಿ ಶ್ರೀರಾಮನು ಇಂದ್ರಜಿತು ವಿನ ಹಾಗೂ ರಾವಣನ ಪೂರ್ವವೃತ್ತಾಂತವನ್ನು ವಿವರಿಸಿ ಹೇಳಲು ಪ್ರಾರ್ಥಿಸಿ

ಕೊಳ್ಳುತ್ತಾನೆ. ಅದರ ಪ್ರಕಾರವೇ ಅಗಸ್ತ್ಯಮಹರ್ಷಿಗಳು ವಿಸ್ತಾರವಾಗಿ ಎಲ್ಲ ವಿಷಯಗಳನ್ನೂ ತಿಳಿಸುತ್ತಾರೆ.

ಉತ್ತರಕಾಂಡದ ಪ್ರಕೃತಸಂಪುಟದಲ್ಲಿ ಬಹಳಷ್ಟು ಭಾಗವು ರಾವಣನ ವಿಚಾರವನ್ನೇ ಹೇಳುತ್ತದೆ. ರಾವಣನ ಕುಲ, ಜನ್ಮ, ತಪಸ್ಸು, ವರ ಪ್ರಾಪ್ತಿ, ಅವನ ದುಸ್ಸಾಹಸಗಳು, ಅವನ ಅಧರ್ಮಕಾರ್ಯಗಳು – ಮುಂತಾದ ವಿಷಯಗಳ ವಿಸ್ತೃತ ವರ್ಣನೆಯಿದೆ. ಇದರಲ್ಲಿ ರಾವಣನು ಬಲದರ್ಪಿತ. ಅಣ್ಣನಾದ ಕುಬೇರನನ್ನೇ ಎದುರಿಸಿ ಅವನ ಪುಷ್ಪಕವಿಮಾನವನ್ನು ಅಪಹರಿಸಿ ದವನು. ರಾವಣನು ಅತ್ಯಾಚಾರಕ್ಕೆ ಹಿಂಜರಿಯದ ಕಾಮುಕ. ತಪೋ ನಿರತೆಯಾದ ವೇದವತಿಯನ್ನು ಧರ್ಷಿಸಲು ಹಿಂದೆ ಮುಂದೆ ನೋಡದವನು. ರಂಭೆಯನ್ನು ಬಲಾತ್ಕರಿಸಿದವನು. ತನ್ನ ದುಷ್ಕಾರ್ಯಗಳಿಂದ ಅನೇಕ ಸಾತ್ವಿಕ ಜೀವಗಳ ಶಾಪಗಳನ್ನು ಪಡೆದರೂ ನಿರ್ಲಕ್ಷ್ಯದಿಂದ ತನ್ನ ಲೋಕ ಪೀಡೆಯ ಕೆಲಸವನ್ನು ಮುಂದುವರಿಸಿದವನು. ಯಮನ ಸಂಗಡ ಕೂಡ ಯುದ್ಧಮಾಡಿದ ಮದೋನ್ಮತ್ತ. ಸಾಕ್ಷಾತ್ ಈಶ್ವರನ ಮೇಲೆಯೇ ಬೀಳಲು ಹೋದ ದುರ್ಮತಿ. ನಾನಾವರಗಳನ್ನು ಪಡೆದು ಬಲದರ್ಪಿತನಾದವನು. ಇಂದ್ರನ ಸಂಗಡ ನಡೆದ ಯುದ್ಧದಲ್ಲಿ ಮೇಘನಾದನು ಇಂದ್ರನನ್ನು ಬಂಧಿಸಿ ದುದರಿಂದ ಸ್ವರ್ಗದ ಮೇಲೂ ಅಧಿಕಾರ ಸ್ಥಾಪಿಸಿದವನು. ಕೊನೆಗೆ ಕಾರ್ತ ವೀರ್ಯಾರ್ಜುನ ಹಾಗೂ ವಾನರಶ್ರೇಷ್ಠನಾದ ವಾಲಿ – ಇವರಿಬ್ಬರಿಂದಲೂ ಪರಾಜಿತನಾಗಿ ಅವರ ಸ್ನೇಹ ಸಂಪಾದಿಸಿದವನು. ಒಟ್ಟಿನಲ್ಲಿ ಉತ್ತರಕಾಂಡದ ರಾವಣ ಲೋಕಕಂಟಕನಾಗಿ ದಾರುಣವಾದ, ಧರ್ಮವಿರುದ್ಧವಾದ ಕೃತಿ ಗಳನ್ನು ನಿಶ್ಶಂಕೆಯಿಂದ ಮಾಡಿ ವಿಜೃಂಭಿಸುವ ದುಷ್ಟಾತ್ಮನಾಗಿ ಚಿತ್ರಿತನಾಗಿ ದ್ದಾನೆ.

ರಾವಣನ ಚರಿತ್ರೆಯನ್ನು ವಿಸ್ತೃತವಾಗಿ ಅಗಸ್ತ್ಯರು ಹೇಳಿದ ಮೇಲೆ ಶ್ರೀರಾಮನು –ವಾಲಿಗೂ ರಾವಣನಿಗೂ ಅತುಲವಾದ ಬಲವಿದ್ದುದು ನಿಜ ವಾದರೂ, ಅವರಿಬ್ಬರೂ ಹನುಮಂತನಿಗೆ ಸಮಾನರಲ್ಲವೆಂಬ ತನ್ನ ಅಭಿ ಪ್ರಾಯವನ್ನು ಹೇಳಿ, ಹನುಮಂತನ ವಿಷಯವನ್ನೆಲ್ಲ ಯಥಾವತ್ತಾಗಿ ಹೇಳಲು ಪ್ರಾರ್ಥಿಸಿಕೊಂಡಾಗ –ಅಗಸ್ತ್ಯರು ಶೌರ್ಯ, ದಕ್ಷತೆ, ಬಲ, ಧೈರ್ಯ,

ಬುದ್ಧಿಮತ್ತೆ, ಕಾರ್ಯನೀತಿ ಮತ್ತು ಪರಾಕ್ರಮಗಳಲ್ಲಿ ಅಸಮಾನನಾದ ಹನುಮಂತನ ವಿಚಾರವನ್ನೆಲ್ಲಾ ವಿವರಿಸುತ್ತಾರೆ.

ಮಹರ್ಷಿಗಳು ನಿರ್ಗಮಿಸಿದ ನಂತರ ಅಲ್ಲಿಗೆ ಬಂದಿದ್ದ ಭೂಪಾಲರನ್ನೆಲ್ಲ ಯಥೋಚಿತವಾಗಿ ಸತ್ಕರಿಸಿ ಶ್ರೀರಾಮನು ಬೀಳ್ಕೊಡುತ್ತಾನೆ. ಜನಕರಾಜ, ಯುಧಾಜಿತ್, ಪ್ರತರ್ದನ ಮುಂತಾದವರನ್ನು ಕಳುಹಿಸಿಕೊಟ್ಟ ನಂತರ ಕೆಲವು ಕಾಲ ಅಯೋಧ್ಯೆಯಲ್ಲಿಯೇ ತಂಗಿದ್ದ ಸುಗ್ರೀವನೇ ಮೊದಲಾದ ವಾನರವೀರರನ್ನೂ ವಿಭೀಷಣನೇ ಮೊದಲಾದ ರಾಕ್ಷಸಶ್ರೇಷ್ಠರನ್ನೂ ಯಥೋ ಚಿತವಾಗಿ ಸತ್ಕಾರಮಾಡಿ ಕಳುಹಿಸಿಕೊಡುತ್ತಾನೆ. ಹನುಮಂತನ ಉಪಕಾರ ವನ್ನು ಶ್ರೀರಾಮನು ಮರೆಯಲು ಸಾಧ್ಯವೇ ? '' **ಏಕೈಕಸ್ಯೋಪಕಾರಸ್ಯ ಪ್ರಾಣಾನ್ ದಾಸ್ಯಾಮಿ ತೇ** '' '' ನೀನು ಮಾಡಿರುವ ಒಂದೊಂದು ಉಪಕಾರ ವನ್ನೂ ನನ್ನ ಪ್ರಾಣಗಳನ್ನು ಕೊಟ್ಟು ತೀರಿಸುತ್ತೇನೆ. '' ಅಷ್ಟರಲ್ಲಿ ಅದು ಮುಗಿಯುವುದಿಲ್ಲ, '' **ಶೇಷಸ್ಯೇಹೋಪಕಾರಾಣಾಂ ಭವಾಮ ಋಣಿನೋ ವಯಮ್** '' '' ಉಳಿದ ನಿನ್ನ ಉಪಕಾರಗಳಿಗೆ ಋಣಿಗಳಾ ಗಿಯೇ ಇರುತ್ತೇವೆ.'' ಎನ್ನುತ್ತಾನೆ ಶ್ರೀರಾಮ. ಅಂತೂ ಕೊನೆಯಲ್ಲಿ, ಶ್ರೀರಾಮನನ್ನು ಬಿಟ್ಟು ಹೋಗಬೇಕಾದುದರಿಂದ ದುಃಖಿತರಾಗಿ, ಕಂಬನಿ ಸುರಿಸುತ್ತಾ, ಜೀವಾತ್ಮನು ತನಗೆ ಇಚ್ಛೆಯಿಲ್ಲದಿದ್ದರೂ ಕಾಲವು ಸನ್ನಿಹಿತ ವಾದೊಡನೆಯೇ ದೇಹವನ್ನು ತ್ಯಜಿಸಿ ಹೊರಟುಹೋಗುವಂತೆ ಋಕ್ಷ - ವಾನರ- ರಾಕ್ಷಸರೆಲ್ಲರೂ ಸ್ವಸ್ಥಾನಗಳಿಗೆ ತೆರಳುತ್ತಾರೆ.

ನಂತರ ಪುಷ್ಪಕವಿಮಾನವು ಬಂದು '' ಕುಬೇರನ ಆಜ್ಞೆಯಂತೆ ನಿನ್ನ ಬಳಿಗೆ ಬಂದಿದ್ದೇನೆ, ನನ್ನನ್ನು ಪರಿಗ್ರಹಿಸು '' ಎನ್ನುತ್ತದೆ. ''ಕುಬೇರನಿಗೆ ನಿನ್ನನ್ನು ಕಳುಹಿಸುವ ಅನುಕೂಲವಿರುವುದಾದರೆ, ಸದ್ವ್ಯವಹಾರವನ್ನು ಉಲ್ಲಂಘಿಸಿದ ದೋಷವು ನಮಗೆ ಬರದಿದ್ದರೆ ನಿನಗೆ ಇಲ್ಲಿ ಸ್ವಾಗತವಿದೆ '' ಎಂದು ಹೇಳಿ ಅದನ್ನು ಪೂಜಿಸಿ '' ನಾನು ಸ್ಮರಿಸಿದಾಗ ಬರಬಹುದು. ಸ್ವೇಚ್ಛೆ ಯಿಂದ ಎಲ್ಲ ದಿಕ್ಕುಗಳಿಗೂ ಪ್ರಯಾಣಮಾಡು. ನಿನಗೆ ಎಲ್ಲಿಯೂ ಅಪಘಾತ ವಾಗದಿರಲಿ'' ಎಂದು ಹೇಳಿ ಕಳುಹಿಸಿಕೊಡುತ್ತಾನೆ. ಈ ವ್ಯವಹಾರವನ್ನು ನೋಡಿ ಭರತನು ಹೇಳುವ ಮಾತುಗಳನ್ನು ಕೇಳಬೇಕು :

ವಿಬುಧಾತ್ಮನಿ ದೃಶ್ಯನ್ತೇ ತ್ವಯಿ ವೀರ ಪ್ರಶಾಸತಿ ।
ಅಮಾನುಷಾಣಿ ಸತ್ತ್ವಾನಿ ವ್ಯಾಹೃತಾನಿ ಮುಹುರ್ಮುಹುಃ ॥

'' ದೇವಸ್ವರೂಪನಾಗಿರುವ ನೀನು ರಾಜ್ಯಭಾರಮಾಡುತ್ತಿರುವಾಗ ಮನುಷ್ಯೇತರ ಪ್ರಾಣಿಗಳೂ ಮನುಷ್ಯರಂತೆಯೇ ಸಂಭಾಷಣೆಮಾಡುತ್ತಿರುವುದು ಕಂಡುಬರುತ್ತಿದೆ.'' ಶ್ರೀರಾಮನ ರಾಜ್ಯಭಾರದ ಬಗ್ಗೆ ಭರತನು ಹೇಳುವ ಮಾತುಗಳು ಮನನೀಯ.

ಅನಾಮಯಶ್ಚ ಮರ್ತ್ಯಾನಾಂ ಸಾಗ್ರೋ ಮಾಸೋ ಗತೋ ಹ್ಯಯಮ್ ।
ಜೀರ್ಣಾನಾಮಪಿ ಸತ್ತ್ವಾನಾಂ ಮೃತ್ಯುರ್ನಾಯಾತಿ ರಾಘವ ॥

'' ನೀನು ಪಟ್ಟಾಭಿಷಿಕ್ತನಾಗಿ ಒಂದು ತಿಂಗಳ ಮೇಲಾಯಿತು. ಅಂದಿನಿಂದಲೇ ಪ್ರಜೆಗಳೆಲ್ಲರೂ ನೀರೋಗದೃಢಕಾಯರಾಗುತ್ತಿದ್ದಾರೆ. ಮುಪ್ಪಿನಿಂದ ಜೀರ್ಣವಾಗಿದ್ದರೂ ಯಾರಿಗೂ ಮೃತ್ಯುವು ಬರುತ್ತಿಲ್ಲ.''

ಅರೋಗಪ್ರಸವಾ ನಾರ್ಯೋ ವಪುಷ್ಮನ್ತೋ ಹಿ ಮಾನವಾಃ ।

ಸ್ತ್ರೀಯರು ಯಾವ ಸಂಕಟವೂ ಇಲ್ಲದೆ ಪ್ರಸವಿಸುತ್ತಿದ್ದಾರೆ. ಮನುಷ್ಯರೆಲ್ಲರೂ ಹೃಷ್ಟ-ಪುಷ್ಟವಾದ ಶರೀರಗಳಿಂದ ಕೂಡಿರುತ್ತಾರೆ.

ಹರ್ಷಶ್ಚಾಭ್ಯಧಿಕೋ ರಾಜನ್ ಜನಸ್ಯ ಪುರವಾಸಿನಃ ।
ಕಾಲೇ ವರ್ಷತಿ ಪರ್ಜನ್ಯಃ ಪಾತಯನ್ನಮೃತಂ ಪಯಃ ॥

ಅಯೋಧ್ಯಾಪುರನಿವಾಸಿಗಳಿಗೆ ಅಧಿಕವಾದ ಸಂತೋಷವುಂಟಾಗಿದೆ. ಯೋಗ್ಯಕಾಲಗಳಲ್ಲಿ ಮೇಘವು ಅಮೃತಕ್ಕೆ ಸಮಾನವಾದ ನೀರನ್ನು ಸುರಿಸುತ್ತಿದೆ.

ವಾತಾಶ್ಚಾಪಿ ಪ್ರವಾನ್ತ್ಯೇತೇ ಸ್ಪರ್ಶಯುಕ್ತಾಃ ಸುಖಾಃ ಶಿವಾಃ ।

ಶೀತಲವೂ ಸುಖಕರವೂ ಆದ ಮಾರುತವು ಎಲ್ಲೆಡೆಗಳಲ್ಲಿಯೂ ಬೀಸುತ್ತಿದೆ. ಇಂತಹ ಪ್ರಭಾವಶಾಲಿಯಾದ ರಾಜನು ನಮಗಾಗಿ ಚಿರಕಾಲದವರೆಗೆ ಬಾಳಲಿ - ಎಂದು ಪಟ್ಟಣಿಗರೂ ಪ್ರಾಂತೀಯಜನರೂ ಮಾತನಾಡಿಕೊಳ್ಳುತ್ತಿದ್ದಾರೆ. ''

ಇಷ್ಟಾದನಂತರ ಸೀತಾಪರಿತ್ಯಾಗದ ಭೂಮಿಕೆ ಸುಹೃದ್ವರ್ಗದ ವಾರ್ತಾಲಾಪದಲ್ಲಿ ಸಿದ್ಧವಾಗುತ್ತದೆ.

ಲಙ್ಕಾಮಪಿ ಪುರಾ ನೀತಾಂ ಅಶೋಕವನಿಕಾಂ ಗತಾಮ್ ।
ರಕ್ಷಸಾಂ ವಶಮಾಪನ್ನಾಂ ಕಥಂ ರಾಮೋ ನ ಕುತ್ಸ್ಯತಿ ॥

ಎಂದು ಪ್ರಜೆಗಳು ಮಾತನಾಡಿಕೊಳ್ಳುವುದನ್ನು ಭದ್ರನಿಂದ ಕೇಳಿದ ಶ್ರೀರಾಮನು ಮನಸ್ಸಿನಲ್ಲಿ ಮಾಡಬೇಕಾದ ಕೆಲಸಗಳನ್ನು ನಿಶ್ಚಯಿಸಿಕೊಂಡು ಬಿಡುತ್ತಾನೆ. ಪೌರಾಪವಾದವು ಅವನಿಗೆ ಮರ್ಮಭೇದಕ. ಸೀತಾದೇವಿಯ ಪರಿಶುದ್ಧತೆಯ ಬಗ್ಗೆ ರಾಮನಿಗೆ ಸಂದೇಹವಿಲ್ಲ. '' **ಅಂತರಾತ್ಮಾ ಚ ಮೇ ವೇತ್ತಿ ಸೀತಾಂ ಶುದ್ಧಾಂ ಯಶಸ್ವಿನೀಮ್** '' ಎನ್ನುವ ಶ್ರೀರಾಮ ಲೋಕಾಪವಾದವನ್ನು ಕಳೆದುಕೊಳ್ಳಲು ಪ್ರಾಣವನ್ನಾದರೂ ಬಿಡಲು ಸಿದ್ಧನಾಗಿರತಕ್ಕವನು.

ಅಪ್ಯಹಂ ಜೀವಿತಂ ಜಹ್ಯಾಂ ಯುಷ್ಮಾನ್ವಾ ಪುರುಷರ್ಷಭಾಃ ।
ಅಪವಾದಭಯಾದ್ಭೀತಃ ಕಿಂ ಪುನರ್ಜನಕಾತ್ಮಜಾಮ್ ॥

'' ಅಪವಾದದ ಭಯದಿಂದ ಪ್ರಾಣವನ್ನಾದರೂ ಬಿಟ್ಟೇನು. ಪುರುಷ ಶ್ರೇಷ್ಠರೇ ! ನಿಮ್ಮನ್ನಾದರೂ ತ್ಯಜಿಸಿಯೇನು, ಹೀಗಿರುವಾಗ ಸೀತೆಯ ತ್ಯಾಗದಲ್ಲಿ ಹೇಳುವುದೇನಿದೆ ?'' ಎನ್ನುವ ಶ್ರೀರಾಮ ಜನರನ್ನು ತೃಪ್ತಿಪಡಿಸಲು ತನಗೆ ಅತಿಪ್ರಿಯವಾದುದನ್ನೆಲ್ಲ ತ್ಯಜಿಸಲು ಸಿದ್ಧನಾಗಿರುವ ಪರಮ ಪುರುಷ. '' ನಾನೀಗ ಇದಕ್ಕಿಂತ ಅಧಿಕತರವಾದ ದುಃಖವನ್ನು ಹಿಂದೆಂದೂ ಅನುಭವಿಸಿದ ಸ್ಮರಣೆಯು ನನಗಿಲ್ಲ'' ಎನ್ನುವ ಶ್ರೀರಾಮನು ಸೀತಾದೇವಿಯನ್ನು ಗಂಗಾನದಿಯ ಆಚೆಯ ದಡದಲ್ಲಿರುವ ಮಹಾತ್ಮರಾದ ವಾಲ್ಮೀಕಿಗಳ ದಿವ್ಯಾಶ್ರಮದಲ್ಲಿ ನಿರ್ಜನಪ್ರದೇಶದಲ್ಲಿ ಬಿಟ್ಟು ಬರಬೇಕೆಂದು ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಒಂದು ಕಡೆ ಲೋಕಾಪವಾದಕ್ಕೆ ಕಿವಿಗೊಡಬೇಕಾದ ಕರ್ತವ್ಯ. ಮತ್ತೊಂದೆಡೆ ಪ್ರಾಣಕ್ಕೂ ಅಧಿಕಳಾದ ಸೀತಾದೇವಿ. ಲಕ್ಷ್ಮಣನಿಗೆ ಆಜ್ಞೆಯನ್ನು ಕೊಟ್ಟ ಮೇಲೆ ಶೋಕವ್ಯಾಕುಲಿತನಾಗುತ್ತಾನೆ. ವಾಲ್ಮೀಕಿ ಮಹರ್ಷಿಗಳು ಹೇಳುವಂತೆ ಈ ಆಜ್ಞೆಯನ್ನು ಕೊಟ್ಟ ಮೇಲೆ ಶ್ರೀರಾಮನು ಬಂಧನದಲ್ಲಿರುವ ಆನೆಯಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದನು.

ಸೀತಾದೇವಿಯು ತ್ಯಾಗದಲ್ಲಿ ಶ್ರೀರಾಮನಿಗೆ ಸಮಾನಳು. ರಾಮನಿಂದ ತಾನು ಪರಿತ್ಯಕ್ತೆಯಾದೆನೆಂಬ ವಿಷಯ ಶೋಕಾಕುಲನಾದ ಲಕ್ಷ್ಮಣನಿಂದ ತಿಳಿದ ಕೂಡಲೇ ರಾಮನಿಗೆ ಸೀತಾದೇವಿಯು ಕೊಡುವ ಸಂದೇಶವಿದು: '' ಲೋಕಾಪವಾದಕ್ಕೆ ಹೆದರಿ ನೀನು ನನ್ನನ್ನು ಪರಿತ್ಯಜಿಸಿರುವೆ. ಲೋಕದ ಪ್ರಜೆಗಳು ನಿನ್ನ ಮೇಲೆ ಹೊರಿಸುತ್ತಿರುವ ಅಪವಾದವನ್ನು ಪರಿಹರಿಸುವುದು ನನ್ನ ಕರ್ತವ್ಯವೂ ಆಗಿದೆ. ಪೌರರು ಮಾಡುತ್ತಿರುವ ಆಪಾದನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವಂತಹ ರೀತಿಯಲ್ಲಿ ನೀನು ವ್ಯವಹರಿಸು. ಹೆಂಗಸಿಗಾದರೋ ಪತಿಯೇ ದೈವವು, ಪತಿಯೇ ಗುರುವು, ಪತಿಯೇ ಬಂಧುವು. ಆದುದರಿಂದ ಪ್ರಾಣಗಳನ್ನಾದರೂ ಒತ್ತೆಯಿಟ್ಟು ವಿಶೇಷರೀತಿ ಯಲ್ಲಿ ಪತಿಗೆ ಪ್ರಿಯವಾಗುವಂತಹ ಕಾರ್ಯವನ್ನು ಮಾಡಲೇಬೇಕು.''

ರಾಮನಿಂದ ಪರಿತ್ಯಕ್ತೆಯಾಗಿಯೂ ಬದುಕಬೇಕೆಂಬ ಸೀತಾದೇವಿಯ ಇಚ್ಛೆಗೆ ರಾಮನ ವಂಶವನ್ನು ಮುಂದುವರಿಸಬೇಕೆಂಬ ಆದರ್ಶವೇ ಕಾರಣ. '' ಶ್ರೀರಾಮನು ಯಾವ ಅಪರಾಧಕ್ಕಾಗಿ ನಿನ್ನನ್ನು ತ್ಯಜಿಸಿದನೆಂದು ಮುನಿ ಜನರು ನನ್ನನ್ನೇನಾದರೂ ಪ್ರಶ್ನಿಸಿದರೆ ನನ್ನ ಯಾವ ಅಪರಾಧವನ್ನು ಅವರೊಡನೆ ಹೇಳಿಕೊಳ್ಳಲಿ ? ನಾನೀಗಲೇ ನನ್ನ ಶರೀರವನ್ನು ಗಂಗಾ ನದಿಯ ಶುಭಜಲದಲ್ಲಿ ವಿಸರ್ಜಿಸಿಬಿಡುತ್ತಿದ್ದೆನು. ನನ್ನ ಪತಿಯ ವಂಶವೇ ವಿನಾಶವಾಗಿಬಿಡುವುದರಿಂದ ಈಗ ಈ ಕಾರ್ಯವನ್ನು ಮಾಡುವುದಿಲ್ಲ.'' ಎನ್ನುವ ಸೀತಾದೇವಿಯ ಮಾತಿನಲ್ಲಿ ಈ ಅಂಶವು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಸೀತಾದೇವಿಯ ಪಾತ್ರ ಅನನ್ಯವಾಗಿ, ಅದ್ವಿತೀಯವಾಗಿ ಶೋಭಿ ಸುತ್ತದೆ. ಪರಿತ್ಯಕ್ತಳಾದ ಸಂದರ್ಭದಲ್ಲೂ ಪತಿಯ ಶ್ರೇಯಸ್ಸನ್ನೇ ಬಯ ಸುವ ಸೀತೆಯು ದೇವಿಯಾಗುವುದು ಇಂತಹ ಅನೇಕ ಸಂದರ್ಭಗಳಲ್ಲಿ.

ಮುಂದೆ ಜ್ಞಾನಿಗಳಾದ ವಾಲ್ಮೀಕಿ ಮಹರ್ಷಿಗಳು ಸೀತಾದೇವಿಯನ್ನು ಕಂಡು ಅವಳಿಗೆ ಅಭಯನೀಡುತ್ತಾರೆ. ' **ಅಪಾಪಾಂ ವೇದ್ಮಿ ಸೀತೇ ತ್ವಾಂ'** ಎನ್ನುವ ವಾಲ್ಮೀಕಿ ಮಹರ್ಷಿಗಳಿಗೆ ಸೀತೆಯು ನಿಷ್ಪಾಪಳೆಂಬುದು ತಿಳಿದಿದೆ. **'ಸ್ವಾಗತಂ ತೇ ಪತಿವ್ರತೇ** ' ಎಂದೇ ಆಕೆಯನ್ನು ಅವರು ಸ್ವಾಗತಿಸುವರು. ಆಕೆ ಅಲ್ಲಿಗೆ ಬಂದಿರುವ ವಿಷಯ ಅವರ ಅಂತರ್ದೃಷ್ಟಿ ಯಿಂದ ಅವರಿಗೆ ಗೊತ್ತಾಗುತ್ತದೆ.

ಸೀತಾಪರಿತ್ಯಾಗದ ಬಗ್ಗೆ ಆಧುನಿಕರಲ್ಲಿ ಕೆಲವರು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಸೀತೆಯ ಪರಿಶುದ್ಧತೆಯ ಬಗ್ಗೆ ನಿಸ್ಸಂದಿಗ್ಧವಾದ ಜ್ಞಾನವಿದ್ದರೂ ಅವಳನ್ನು ತನಗೆ ಲೋಕಾಪವಾದ ಬರಬಾರದೆಂಬ ಒಂದೇ ಉದ್ದೇಶದಿಂದ ನಿಷ್ಠುರನಾಗಿ, ಕರುಣೆಯಿಲ್ಲದೇ ಶ್ರೀರಾಮನು ಕಾಡಿಗಟ್ಟುವುದು ಅಂದು ಸ್ತ್ರೀಗೆ ಇದ್ದ ಅಭದ್ರಸ್ಥಾನವನ್ನು ಸೂಚಿಸುತ್ತದೆಯಲ್ಲವೇ ? ಎಂಬುದು ಅವರ ಪ್ರಶ್ನೆಗಳಲ್ಲೊಂದು. ಈ ಅಭಿಪ್ರಾಯದ ಪ್ರಕಾರ ರಾಮನ ಕಾಲದ ಸಮಾಜವು ಪುರುಷಪ್ರಧಾನವಾದ ಸಮಾಜವಾದುದರಿಂದ ಸ್ತ್ರೀಯ ವೈಯಕ್ತಿಕಭಾವನೆಗಳಿಗೆ ಅಲ್ಲಿ ಸ್ಥಾನವಿರಲಿಲ್ಲ ಹಾಗೂ ಅವಳನ್ನು ಪುರುಷನು ತನ್ನ ಮನಸ್ಸಿಗೆ ಬಂದಂತೆ ನಡೆಸಿಕೊಳ್ಳಬಹುದಿತ್ತು. ಪುರುಷನಿಗೆ ಸಾರ್ವಭೌಮತ್ವವನ್ನು ಕೊಟ್ಟು ಸ್ತ್ರೀಯನ್ನು ಅವನಿಗೆ ಅಡಿಯಾಳಾಗಿ ಮಾಡಿರುವ ಈ ಸನ್ನಿವೇಶ ಮಾರ್ಗದರ್ಶಕವಲ್ಲ, ಅದು ಖಂಡನೀಯವೂ ಕೂಡ ಎಂಬುದು ಈ ಅಭಿಪ್ರಾಯದ ಸಾರಾಂಶ.

ಆದರೆ ಈ ವಾದದಲ್ಲಿ ಹುರುಳಿಲ್ಲ. ರಾಮಾಯಣದ ಇತರ ಸನ್ನಿವೇಶಗಳನ್ನು ಮರೆತು, ರಾಮನ ಇತರ ಗುಣಗಳನ್ನು ಮರೆತು ಹೇಳುವ ಮಾತಾಗುತ್ತದೆ ಈ ವಾದ. ಅಲ್ಲದೇ ಸೀತಾದೇವಿಯನ್ನೇ ಅರ್ಥಮಾಡಿಕೊಳ್ಳದೇ ಹೇಳುವ ಮಾತು ಇದಾಗುತ್ತದೆ. ಪ್ರಜಾಸಂತೃಪ್ತಿ, ರಾಜನ ಅಪವಾದ ರಹಿತತೆ ಮುಂತಾದ ಧ್ಯೇಯಗಳನ್ನು ಹಾಗೂ ಅನಿವಾರ್ಯತೆಗಳನ್ನು ಮುಂದೆ ಇರಿಸಿಕೊಂಡು ಸೀತಾಪರಿತ್ಯಾಗದ ಸನ್ನಿವೇಶವನ್ನು ನಾವು ಗಮನಿಸಬೇಕಾಗುತ್ತದೆ. ಅಂದಿನ ಸ್ತ್ರೀಯ ಸ್ಥಾನದ ಬಗ್ಗೆ ರಾಮಾಯಣದ ಸಂದರ್ಭದಲ್ಲಿ ಹೇಳುವುದಾದರೆ ; ಸ್ತ್ರೀಯೊಬ್ಬಳನ್ನು ಅಪಹರಿಸಿದವನು ಎಂತಹ ಶಿಕ್ಷೆಗೆ ಗುರಿಯಾಗಬೇಕೆಂಬುದನ್ನು ರಾಕ್ಷಸಕುಲವನ್ನೇ ನಿರ್ನಾಮಮಾಡಿ ಆಕೆಯ ಸ್ಥಾನವನ್ನು ತೋರಿಸಿಕೊಟ್ಟಿದ್ದಾನೆ ಶ್ರೀರಾಮ.

ಪ್ರಜೆಗಳ ಯೋಗಕ್ಷೇಮವನ್ನೇ ಧ್ಯೇಯವಾಗಿಟ್ಟುಕೊಂಡಿರುವ ಆದರ್ಶ ರಾಜನಾದ ಶ್ರೀರಾಮನು ಸತ್ಯವಾಗಿರಲಿ ಅಥವಾ ಅಸತ್ಯವಾಗಿರಲಿ – ಪ್ರಜೆಗಳ ಮನಸ್ಸಿನಲ್ಲಿ ರಾಜನ ವೈಯಕ್ತಿಕವಿಷಯದಲ್ಲೇ ಆದರೂ, ಸಂದೇಹ ಅಥವಾ ಅಸಮ್ಮತಿಯು ಉಂಟಾದರೆ – ಅವರ ಮನಸ್ಸಿನ ಸಂದೇಹವನ್ನು ಪರಿಹರಿಸಲು ಎಂತಹ ತ್ಯಾಗಕ್ಕೂ ಸಿದ್ಧನಾಗಿರುವವನು. ತನಗೆ ಅತಿಪ್ರಿಯವಾದುದನ್ನೂ,

ತನ್ನ ಪ್ರಾಣಕ್ಕೆ ಸಮವಾದುದನ್ನೂ ತ್ಯಜಿಸುವ ಮನೋದಾರ್ಢ್ಯ ಸಾಧಾರಣ ವ್ಯಕ್ತಿಗಳಿಗೆ ಇರುವುದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಸೀತಾದೇವಿಗೆ ಶ್ರೀರಾಮನ ನಿರ್ಣಯದಿಂದ ಅತೀವ ದುಃಖವಾದರೂ ಸೀತೆಯನ್ನು ತ್ಯಜಿಸುವ ನಿರ್ಣಯವನ್ನು ಶ್ರೀರಾಮನು ಕೈಗೊಂಡಿದ್ದುದು ಅವನು ಪ್ರಜೆಗಳನ್ನು ತನ್ನ ವೈಯಕ್ತಿಕಜೀವನಕ್ಕಿಂತಲೂ ಮೇಲೆ ಇಟ್ಟು ಆದ್ಯತೆಯನ್ನು ಕೊಟ್ಟಿರುವುದ ರಿಂದ -ಎಂಬುದು ಸ್ಪಷ್ಟವಾಗುತ್ತದೆ. ಆದರ್ಶದ ಮಾರ್ಗವು ನಿಷ್ಠುರವೇ ಆಗಿದೆ. ಶ್ರೀರಾಮನು ಸ್ವತಃ ಯಾವ ಸೌಖ್ಯವನ್ನೂ ಅನುಭವಿಸಲಿಲ್ಲ. ಶ್ರೀರಾಮ ಹಾಗೂ ಸೀತಾದೇವಿ - ಇವರಿಬ್ಬರಲ್ಲೂ ತ್ಯಾಗಮನೋಭಾವ, ತ್ಯಾಗದ ಫಲಿತವಾದ ಕಷ್ಟಜೀವನದ ತಪಸ್ಸು, ವೈಯಕ್ತಿಕ ಜೀವನವನ್ನು ಪ್ರಜಾಲೋಕದ ಜೀವನಕ್ಕೆ ಗೌಣವಾಗಿಸುವ ದಾರ್ಢ್ಯ- ಇವೆಲ್ಲ ಮಹೋನ್ನತ ಗುಣಗಳು ಕಾಣಿಸುತ್ತವೆ. ನಮಗೆ ಎಟುಕದ ಈ ವರ್ತನೆಯ ಬಗ್ಗೆ ರಾಮಾಯಣದ ಅಂತರಂಗವನ್ನು ಗ್ರಹಿಸದವರಿಗೆ ನಾನಾವಿಧವಾದ ಪ್ರಶ್ನೆ ಗಳು ಏಳುವುದು ಸಹಜ. ಆದರೆ ರಾಮಾಯಣವನ್ನು ಆಳವಾಗಿ ಅಭ್ಯಸಿಸದೇ ಏಳುವ ಈ ಪ್ರಶ್ನೆಗಳಿಗೆ ರಾಮಾಯಣವನ್ನು ಆಳವಾಗಿ ಅಭ್ಯಸಿಸಿ ಉತ್ತರ ಕಂಡುಕೊಳ್ಳುವುದೇ ಸೂಕ್ತವಾದ ಮಾರ್ಗ.

ಸೀತಾಪರಿತ್ಯಾಗದ ಅರ್ಥವನ್ನು ತ್ಯಾಗದ ಹಿನ್ನೆಲೆಯಲ್ಲಿ ಕಂಡುಕೊಳ್ಳ ಬೇಕು. ಯಾವುದೇ ತ್ಯಾಗವು ಸುಖವಲ್ಲ. ತ್ಯಾಗವು ಸುಖವಾಗಿದ್ದರೆ ಎಲ್ಲರೂ ತ್ಯಾಗಿಗಳೇ ಆಗಿಬಿಡುತ್ತಿದ್ದರು. ಸೀತಾಪರಿತ್ಯಾಗ ರಾಮನಿಗೆ ಸುಖವಾದ ಕಾರ್ಯವಲ್ಲ. ಈ ತ್ಯಾಗದಿಂದ ರಾಮನೂ ಸೀತೆಯಷ್ಟೇ ದುಃಖಿ. ಸೀತೆಯೋ ಯಾವ ಪಾಪವನ್ನೂ ಮಾಡದಿದ್ದರೂ ಜನಾಪವಾದದಿಂದ ದುಃಸ್ಥಿತಿಗೆ ಬಿದ್ದ ಸಾಧ್ವಿ. ವಾಲ್ಮೀಕಿಮಹರ್ಷಿಗಳು ಹೇಳುವಂತೆ '**ಅಪಾಪಾ ಪತಿನಾ ತ್ಯಕ್ತಾ**' ಶ್ರೀರಾಮನೋ ಧರ್ಮನಿಷ್ಠುರ. ಸೀತಾಪರಿತ್ಯಾಗದ ದುಃಖವನ್ನು ಅಯಶೋಭೀರುವಾದ ಅವನು ಜನರಿಗಾಗಿ ಸಹಿಸಿಕೊಳ್ಳಲು ಸಿದ್ಧ. ಈ ಸನ್ನಿವೇಶವನ್ನು ಅಳೆದು ನಿರ್ಣಯಿಸುವುದು ಹೇಗೆ ? ದಶರಥನಿಗೆ ಹಿಂದೆಯೇ ದುರ್ವಾಸರು ಈ ಮಾತನ್ನು ಹೇಳಿದ್ದರು :

ಭವಿಷ್ಯತಿ ದೃಢಂ ರಾಮೋ ದುಃಖಪ್ರಾಯೋ ವಿಸೌಖ್ಯಭಾಕ್ ।
ಪ್ರಾಪ್ಸ್ಯತೇ ಚ ಮಹಾಬಾಹುರ್ವಿಪ್ರಯೋಗಂ ಪ್ರಿಯೈರ್ದ್ರುತಮ್ ॥

ಇದಕ್ಕೆ ಮಹಾವಿಷ್ಣುವಿಗೆ ಭೃಗುಮಹರ್ಷಿಗಳು ಕೊಟ್ಟ ಶಾಪವೇ ಕಾರಣವಾದರೂ ಮನುಷ್ಯನಾಗಿ ಶ್ರೀರಾಮನು ಅವತರಿಸಿರುವಾಗ ಮನುಷ್ಯ ಲೋಕದ ಧರ್ಮಾಧರ್ಮವಿವೇಕದ ದೃಷ್ಟಿಯಿಂದ ವಿವೇಚಿಸಿದಾಗ ರಾಮನು ಜನಪರಿಪಾಲನೆಯ ಆದರ್ಶಕ್ಕೆ ಸ್ವಸುಖವನ್ನು ತ್ಯಾಗಮಾಡಿರುವುದು ಕಂಡು ಬರುತ್ತದೆ. ಸಾಧಾರಣಮನುಷ್ಯನು ಇದೇ ಸನ್ನಿವೇಶದಲ್ಲಿ ತ್ಯಾಗಮಾಡ ದಿರಲು ನೆಪಗಳನ್ನು ಹುಡುಕುತ್ತಾನೆ. ಶ್ರೀರಾಮನು ಹಾಗೆ ಮಾಡುವುದಿಲ್ಲ. ತ್ಯಾಗದ ದುಃಖಕ್ಕೆ ರಾಮನು ಸಿದ್ಧನಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಸೀತಾ ಪರಿತ್ಯಾಗದ ಅರ್ಥವನ್ನು ಕಂಡುಕೊಳ್ಳಬೇಕು.

ಸೀತಾಪರಿತ್ಯಾಗದ ನಂತರ ಉತ್ತರಕಾಂಡದ ಈ ಸಂಪುಟದಲ್ಲಿ ಬರುವ ಮುಖ್ಯವಾದ ಘಟನೆಯೆಂದರೆ ಶತ್ರುಘ್ನನಿಂದ ಲವಣಾಸುರನ ವಧೆ. ದಾರಿ ಯಲ್ಲಿ ಸೀತಾದೇವಿಯ ದರ್ಶನ ಹಾಗೂ ಲವ-ಕುಶರನ್ನು ನೋಡುವುದು ಇತ್ಯಾದಿ ಘಟನೆಗಳು ಅವತಾರಸಮಾಪ್ತಿಯ ಕಡೆಗೆ ರಾಮಾಯಣದ ದಿಕ್ಕನ್ನು ತಿರುಗಿಸುತ್ತವೆ. ಇದರ ನಂತರ ನಡೆಯುವ ಸನ್ನಿವೇಶಗಳು ಶ್ರೀರಾಮನ ಜೀವನದ ಅಗ್ನಿಪರೀಕ್ಷೆಯ ಸನ್ನಿವೇಶಗಳು. ಇದನ್ನೆಲ್ಲ ಓದುವ ಭಾವುಕರ ಮನಸ್ಸು ವಿವಿಧ ಆಯಾಮಗಳೊಳಗೆ ತೆರೆದುಕೊಳ್ಳುತ್ತದೆ ಮತ್ತು ವಿವಿಧ ಒತ್ತಡಗಳಿಗೆ ಅಸಾಮಾನ್ಯವಾದ ಪ್ರತಿಸ್ಪಂದನವನ್ನು ತೋರುವ ಶ್ರೀರಾಮನ ಮನಸ್ಸಿನ ವಿಭುತ್ವವನ್ನು ಕಂಡು ಆಶ್ಚರ್ಯಗೊಂಡು ಮೂಕ ವಾಗುತ್ತದೆ.

ಇಂತಹ ರಾಮಾಯಣವನ್ನು ಅನೇಕ ಸಂಪುಟಗಳಲ್ಲಿ ಹೊರತರುವ ಮಹಾಸಾಹಸವನ್ನು ಯಶಸ್ವಿಯಾಗಿ ಕೈಗೊಂಡು ಉತ್ತರಕಾಂಡದ ಪ್ರಥಮ ಸಂಪುಟವನ್ನು ಹೊರತರುತ್ತಿರುವ ಭಾರತ ದರ್ಶನ ಪ್ರಕಾಶನವು, ವಿಶೇಷವಾಗಿ ಧರ್ಮನಿಷ್ಠರಾದ ಶ್ರೀ ಕೌಶಿಕ್ ಅವರು ಲೋಕೋಪಕಾರವನ್ನು ಮಾಡಿರು ವುದರಲ್ಲಿ ಸಂದೇಹವಿಲ್ಲ. ವಿವಿಧ ಆಕರ್ಷಣೆಗಳಿಗೆ ಬಲಿಯಾಗಿ ಸ್ವಧರ್ಮ ವನ್ನು ಜನರು ಮರೆಯುತ್ತಿರುವ ಈ ಕಾಲದಲ್ಲಿ ಪುನಃ ರಾಮಾಯಣ ಮಹಾ ನದಿಯನ್ನು ಜನರ ಹೃದಯದೊಳಕ್ಕೆ ಹರಿಯಿಸುವ ಪರಮಪವಿತ್ರಕಾರ್ಯ ವನ್ನು ಮಾಡಿರುವ ಈ ಸಂಸ್ಥೆಯ ಎಲ್ಲ ಸತ್ಪುರುಷರ ಪದಪಾದೋಜಗಳಲ್ಲಿ ನನ್ನ ವಂದನೆಗಳು. ಈ ಸಂಪುಟಗಳ ಉಪಯೋಗವನ್ನು ಎಲ್ಲ ಕನ್ನಡಿಗರೂ

ಸಂಪೂರ್ಣವಾಗಿ ಪಡೆದು ಅದರಿಂದ ಸ್ಫೂರ್ತಿಪಡೆದು ಸುಖ –ಸಂತೋಷಗಳನ್ನು ಪಡೆಯಲಿ ಹಾಗೂ ಮರ್ಯಾದಾಪುರುಷೋತ್ತಮನಾದ ಶ್ರೀರಾಮಚಂದ್ರನು ಅವರಿಗೆ ಸಮಸ್ತ ಸನ್ಮಂಗಳಗಳನ್ನೂ ಉಂಟುಮಾಡಲಿ – ಎಂದು ಹಾರೈಸುತ್ತೇನೆ.

ಉತ್ತರರಾಮಾಯಣದ ಈ ಸಂಪುಟಕ್ಕೆ ಅವತರಣಿಕೆಯನ್ನು ಬರೆಯಲು ನನಗೆ ಅವಕಾಶ ಒದಗಿಬಂದುದು ನನ್ನ ಪೂರ್ವಪುಣ್ಯವೆಂದು ಭಾವಿಸುತ್ತೇನೆ. ಶ್ರೀರಾಮನ ಮೇಲೆ ಶ್ರದ್ಧೆಯಿರುವವನೆಂಬ ಒಂದೇ ಯೋಗ್ಯತೆಯಿಂದಲಾದರೂ ಈ ಪುಣ್ಯಕರ್ತವ್ಯವು ನನಗೆ ಒದಗಿಬಂದುದು ನನ್ನ ಸೌಭಾಗ್ಯ. ಭಾರತೀಯ ಸಂಸ್ಕೃತಿಯ ಜೀವಾಳವಾಗಿರುವ, ಜಗತ್ತಿಗೇ ಮಾರ್ಗದರ್ಶಕವಾಗಿರುವ ಶ್ರೀಮದ್ರಾಮಾಯಣವು ಪ್ರತಿಯೊಬ್ಬರ ಮನೆಯನ್ನೂ ಮನವನ್ನೂ ಅಲಂಕರಿಸಿ ಧರ್ಮರಕ್ಷಣೆಯಲ್ಲಿ ಅವರಿಗೆ ಬೆಂಬಲವೀಯಲಿ– ಎಂದು ಹಾರೈಸುತ್ತೇನೆ.

ಡಾ ॥ ಪಿ. ಎಸ್. ರಾಮಾನುಜಂ

★ ★ ★

ಶ್ರೀಮದ್ವಾಲ್ಮೀಕಿರಾಮಾಯಣ - ಹತ್ತನೆಯ ಸಂಪುಟ
ಉತ್ತರಕಾಂಡದ ಸರ್ಗಾನುಕ್ರಮಣಿಕೆ ಮತ್ತು
ವಿಷಯಾನುಕ್ರಮಣಿಕೆ

(ವಿ.ಸೂ. ಮೊದಲನೆಯದು : ಮೂಲಶ್ಲೋಕಗಳ ಸರ್ಗಗಳ ಪುಟಸಂಖ್ಯೆ-
ಎರಡನೆಯದು : ವಿಷಯಗಳ ಪುಟಸಂಖ್ಯೆ)

ಶ್ರೀಮಹಾಗಣಪತಯೇ ನಮಃ   ಶ್ರೀಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ॐ

ದಶಮಃ ಸಂಪುಟಃ

ಶ್ರೀಮದ್ವಾಲ್ಮೀಕಿರಾಮಾಯಣೇ ಉತ್ತರಕಾಣ್ಡೇ

ಪ್ರಥಮಃ ಸರ್ಗಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನನ್ದಿತುಮ್ ॥1॥

ಕೌಶಿಕೋಽಥ ಯವಕ್ರೀತೋ ಗಾರ್ಗ್ಯೋ ಗಾಲವ ಏವ ಚ ।
ಕಣ್ವೋ ಮೇಧಾತಿಥೇಃ ಪುತ್ರಃ ಪೂರ್ವಸ್ಯಾಂ ದಿಶಿ ಯೇ ಶ್ರಿತಾಃ ॥2॥

ಸ್ವಸ್ತ್ಯಾತ್ರೇಯಶ್ಚ ಭಗವಾನ್ನಮುಚಿಃ ಪ್ರಮುಚಿಸ್ತಥಾ ।
ಅಗಸ್ತ್ಯೋಽತ್ರಿಶ್ಚ ಭಗವಾನ್ಸುಮುಖೋ ವಿಮುಖಸ್ತಥಾ ।
ಆಜಗ್ಮುಸ್ತೇ ಸಹಾಗಸ್ತ್ಯಾ ಯೇ ಶ್ರಿತಾ ದಕ್ಷಿಣಾಂ ದಿಶಮ್ ॥3॥

ನೃಷಙ್ಗುಃ ಕವಷೋ ಧೌಮ್ಯಃ ಕೌಶೇಯಶ್ಚ ಮಹಾನೃಷಿಃ ।
ತೇಽಪ್ಯಾಜಗ್ಮುಃ ಸಶಿಷ್ಯಾ ವೈ ಯೇ ಶ್ರಿತಾಃ ಪಶ್ಚಿಮಾಂ ದಿಶಮ್ ॥4॥

ವಸಿಷ್ಠಃ ಕಶ್ಯಪೋಽಥಾತ್ರಿರ್ವಿಶ್ವಾಮಿತ್ರಃ ಸಗೌತಮಃ ।
ಜಮದಗ್ನಿರ್ಭರದ್ವಾಜಸ್ತೇಽಪಿ ಸಪ್ತರ್ಷಯಸ್ತಥಾ ॥5॥

ಉದೀಚ್ಯಾಂ ದಿಶಿ ಸಪ್ತೈತೇ ನಿತ್ಯಮೇವ ನಿವಾಸಿನಃ ॥6॥

ಸಂಪ್ರಾಪ್ಯೈತೇ ಮಹಾತ್ಮಾನೋ ರಾಘವಸ್ಯ ನಿವೇಶನಮ್ ।
ವಿಷ್ಠಿತಾಃ ಪ್ರತಿಹಾರಾರ್ಥಂ ಹುತಾಶನಸಮಪ್ರಭಾಃ ॥7॥

ವೇದವೇದಾಙ್ಗವಿದುಷೋ ನಾನಾಶಾಸ್ತ್ರವಿಶಾರದಾಃ ।
ದ್ವಾಃಸ್ಥಂ ಪ್ರೋವಾಚ ಧರ್ಮಾತ್ಮಾ ಅಗಸ್ತ್ಯೋ ಮುನಿಸತ್ತಮಃ ।
ನಿವೇದ್ಯತಾಂ ದಾಶರಥೇಃ ಋಷಯೋ ವಯಮಾಗತಾಃ ॥8॥

ಪ್ರತೀಹಾರಸ್ತತಸ್ತೂರ್ಣಮಗಸ್ತ್ಯವಚನಾದ್ದ್ರುತಮ್ ।
ಸಮೀಪಂ ರಾಘವಸ್ಯಾಶು ಪ್ರವಿವೇಶ ಮಹಾತ್ಮನಃ ॥9॥

ನಯೇಙ್ಗಿತಜ್ಞಃ ಸದ್ವೃತ್ತೋ ದಕ್ಷೋ ಧೈರ್ಯಸಮನ್ವಿತಃ ।
ಸ ರಾಮಂ ದೃಶ್ಯ ಸಹಸಾ ಪೂರ್ಣಚನ್ದ್ರಸಮದ್ಯುತಿಮ್ ॥10॥

ಅಗಸ್ತ್ಯಂ ಕಥಯಾಮಾಸ ಸಂಪ್ರಾಪ್ತಮೃಷಿಸತ್ತಮಮ್ ॥11॥
ಶ್ರುತ್ವಾ ಪ್ರಾಪ್ತಾನ್ಮುನೀಂಸ್ತಾಂಸ್ತು ಬಾಲಸೂರ್ಯಸಮಪ್ರಭಾನ್ ।
ಪ್ರತ್ಯುವಾಚ ತತೋ ದ್ವಾಃಸ್ಥಂ ಪ್ರವೇಶಯ ಯಥಾಸುಖಮ್ ॥12॥

ದೃಷ್ಟ್ವಾ ಪ್ರಾಪ್ತಾನ್ಮುನೀಂಸ್ತಾಂಸ್ತು ಪ್ರತ್ಯುತ್ಥಾಯ ಕೃತಾಞ್ಜಲಿಃ ।
ಪಾದ್ಯಾರ್ಘ್ಯಾದಿಭಿರಾನರ್ಚ ಗಾಂ ನಿವೇದ್ಯ ಚ ಸಾದರಮ್ ॥13॥

ರಾಮೋಽಭಿವಾದ್ಯ ಪ್ರಯತ ಆಸನಾನ್ಯಾದಿದೇಶ ಹ ।
ತೇಷು ಕಾಞ್ಚನಚಿತ್ರೇಷು ಮಹತ್ಸು ಚ ವರೇಷು ಚ ॥14॥

ಕುಶಾನ್ತರ್ಧಾನದತ್ತೇಷು ಮೃಗಚರ್ಮಯುತೇಷು ಚ ।
ಯಥಾರ್ಹಮುಪವಿಷ್ಟಾಸ್ತೇ ಆಸನೇಷ್ವೃಷಿಪುಙ್ಗವಾಃ ॥15॥

ರಾಮೇಣ ಕುಶಲಂ ಪೃಷ್ಟಾಃ ಸಶಿಷ್ಯಾಃ ಸಪುರೋಗಮಾಃ ।
ಮಹರ್ಷಯೋ ವೇದವಿದೋ ರಾಮಂ ವಚನಮಬ್ರುವನ್ ।
ಕುಶಲಂ ನೋ ಮಹಾಬಾಹೋ ಸರ್ವತ್ರ ರಘುನನ್ದನ ॥16॥

ತ್ವಾಂ ತು ದಿಷ್ಟ್ಯಾ ಕುಶಲಿನಂ ಪಶ್ಯಾಮೋ ಹತಶಾತ್ರವಮ್ ।
ದಿಷ್ಟ್ಯಾ ತ್ವಯಾ ಹತೋ ರಾಜನ್ರಾವಣೋ ಲೋಕರಾವಣಃ ॥17॥

ನ ಹಿ ಭಾರಃ ಸ ತೇ ರಾಮ ರಾವಣಃ ಪುತ್ರಪೌತ್ರವಾನ್ ।
ಸಧನುಸ್ತ್ವಂ ಹಿ ಲೋಕಾಂಸ್ತ್ರೀನ್ವಿಜಯೇಥಾ ನ ಸಂಶಯಃ ॥18॥

ದಿಷ್ಟ್ಯಾ ತ್ವಯಾ ಹತೋ ರಾಮ ರಾವಣೋ ರಾಕ್ಷಸೇಶ್ವರಃ।
ದಿಷ್ಟ್ಯಾ ವಿಜಯಿನಂ ತ್ವಾದ್ಯ ಪಶ್ಯಾಮಃ ಸಹ ಸೀತಯಾ ॥19॥

ಲಕ್ಷ್ಮಣೇನ ಚ ಧರ್ಮಾತ್ಮನ್ ಭ್ರಾತ್ರಾ ತ್ವದ್ಧಿತಕಾರಿಣಾ।
ಮಾತೃಭಿರ್ಭ್ರಾತೃ ಸಹಿತಂ ಪಶ್ಯಾಮೋಽದ್ಯ ವಯಂ ನೃಪ ॥20॥

ದಿಷ್ಟ್ಯಾ ಪ್ರಹಸ್ತೋ ವಿಕಟೋ ವಿರೂಪಾಕ್ಷೋ ಮಹೋದರಃ ।
ಅಕಮ್ಪನಶ್ಚ ದುರ್ಧರ್ಷೋ ನಿಹತಾಸ್ತೇ ನಿಶಾಚರಾಃ ॥21॥

ಯಸ್ಯ ಪ್ರಮಾಣಾದ್ವಿಪುಲಂ ಪ್ರಮಾಣಂ ನೇಹ ವಿದ್ಯತೇ।
ದಿಷ್ಟ್ಯಾ ತೇ ಸಮರೇ ರಾಮ ಕುಮ್ಭಕರ್ಣೋ ನಿಪಾತಿತಃ ॥22॥

ತ್ರಿಶಿರಾಶ್ಚಾತಿಕಾಯಶ್ಚ ದೇವಾನ್ತಕನರಾನ್ತಕೌ।
ದಿಷ್ಟ್ಯಾ ತೇ ನಿಹತಾ ರಾಮ ಮಹಾವೀರ್ಯಾ ನಿಶಾಚರಾಃ ॥23॥

ಕುಮ್ಭಶ್ಚೈವ ನಿಕುಮ್ಭಶ್ಚ ರಾಕ್ಷಸೌ ಭೀಮದರ್ಶನೌ।
ದಿಷ್ಟ್ಯಾ ತೌ ನಿಹತೌ ರಾಮ ಕುಮ್ಭಕರ್ಣಸುತೌ ಮೃಧೇ ॥24॥

ಯುದ್ಧೋನ್ಮತ್ತಶ್ಚ ಮತ್ತಶ್ಚ ಕಾಲಾನ್ತಕಯಮೋಪಮೌ।
ಯಜ್ಞಕೋಪಶ್ಚ ಬಲವಾನ್ ಧೂಮ್ರಾಕ್ಷೋ ನಾಮ ರಾಕ್ಷಸಃ ॥25॥

ಕುರ್ವನ್ತಃ ಕದನಂ ಘೋರಮೇತೇ ಶಸ್ತ್ರಾಸ್ತ್ರಪಾರಗಾಃ।
ಅನ್ತಕಪ್ರತಿಮೈರ್ಬಾಣೈರ್ದಿಷ್ಟ್ಯಾ ವಿನಿಹತಾಸ್ತ್ವಯಾ ॥26॥

ದಿಷ್ಟ್ಯಾ ತ್ವಂ ರಾಕ್ಷಸೇನ್ದ್ರೇಣ ದ್ವನ್ದ್ವಯುದ್ಧಮುಪಾಗತಃ।
ದೇವತಾನಾಮವಧ್ಯೇನ ವಿಜಯಂ ಪ್ರಾಪ್ತವಾನಸಿ ॥27॥

ಸಂಖ್ಯೇ ತಸ್ಯ ನ ಕಿಂಚಿತ್ತು ರಾವಣಸ್ಯ ಪರಾಭವಃ।
ದ್ವನ್ದ್ವಯುದ್ಧಮನುಪ್ರಾಪ್ತೋ ದಿಷ್ಟ್ಯಾ ತೇ ರಾವಣಿರ್ಹತಃ ॥28॥

ದಿಷ್ಟ್ಯಾ ತಸ್ಯ ಮಹಾಬಾಹೋ ಕಾಲಸ್ಯೇವಾಭಿಧಾವತಃ।
ಮುಕ್ತಃ ಸುರರಿಪೋರ್ವೀರ ಪ್ರಾಪ್ತಶ್ಚ ವಿಜಯಸ್ತ್ವಯಾ ॥29॥

ಅಭಿನನ್ದಾಮ ತೇ ಸರ್ವೇ ಸಂಶ್ರುತ್ಯೇನ್ದ್ರ ಜಿತೋ ವಧಮ್।
ಅವಧ್ಯಃ ಸರ್ವಭೂತಾನಾಂ ಮಹಾಮಾಯಾಧರೋ ಯುಧಿ।
ವಿಸ್ಮಯಸ್ತ್ವೇಷ ಚಾಸ್ಮಾಕಂ ತಂ ಶ್ರುತ್ವೇನ್ದ್ರಜಿತಂ ಹತಮ್ ॥30॥

ಏತೇ ಚಾನ್ಯೇ ಚ ಬಹವೋ ರಾಕ್ಷಸಾಃ ಕಾಮರೂಪಿಣಃ।
ದಿಷ್ಟ್ಯಾ ತ್ವಯಾ ಹತಾ ವೀರಾ ರಘೂಣಾಂ ಕುಲವರ್ಧನ ॥31॥

ದತ್ತ್ವಾ ಪುಣ್ಯಾಮಿಮಾಂ ವೀರ ಸೌಮ್ಯಾಮಭಯದಕ್ಷಿಣಾಮ್।
ದಿಷ್ಟ್ಯಾ ವರ್ಧಸಿ ಕಾಕುತ್ಸ್ಥ ಜಯೇನಾಮಿತ್ರಕರ್ಶನ ॥32॥

ಶ್ರುತ್ವಾ ತು ವಚನಂ ತೇಷಾಂ ಮುನೀನಾಂ ಭಾವಿತಾತ್ಮನಾಮ್।
ವಿಸ್ಮಯಂ ಪರಮಂ ಗತ್ವಾ ರಾಮಃ ಪ್ರಾಞ್ಜಲಿರಬ್ರವೀತ್ ॥33॥

ಭಗವನ್ತಃ ಕುಮ್ಭಕರ್ಣಂ ರಾವಣಂ ಚ ನಿಶಾಚರಮ್।
ಅತಿಕ್ರಮ್ಯ ಮಹಾವೀರ್ಯೌ ಕಿಂ ಪ್ರಶಂಸಥ ರಾವಣಿಮ್ ॥34॥

ಮಹೋದರಂ ಪ್ರಹಸ್ತಂ ಚ ವಿರೂಪಾಕ್ಷಂ ಚ ರಾಕ್ಷಸಮ್।
ಮತ್ತೋನ್ಮತ್ತೌ ಚ ದುರ್ಧರ್ಷೌ ದೇವಾನ್ತಕನರಾನ್ತಕೌ ॥35॥

ಅತಿಕ್ರಮ್ಯ ಮಹಾವೀರಾನ್ಕಿಂ ಪ್ರಶಂಸಥ ರಾವಣಿಮ್ ॥36॥

ಅತಿಕಾಯಂ ತ್ರಿಶಿರಸಂ ಧೂಮ್ರಾಕ್ಷಂ ಚ ನಿಶಾಚರಮ್।
ಅತಿಕ್ರಮ್ಯ ಮಹಾವೀರ್ಯಾನ್ ಕಿಂ ಪ್ರಶಂಸಥ ರಾವಣಿಮ್ ॥37॥

ಕೀದೃಶೋ ವೈ ಪ್ರಭಾವೋಽಸ್ಯ ಕಿಂ ಬಲಂ ಕಃ ಪರಾಕ್ರಮಃ।
ಕೇನ ವಾ ಕಾರಣೇನೈಷ ರಾವಣಾದತಿರಿಚ್ಯತೇ ॥38॥

ಶಕ್ಯಂ ಯದಿ ಮಯಾ ಶ್ರೋತುಂ ನ ಖಲ್ವಾಜ್ಞಾಪಯಾಮಿ ವಃ।
ಯದಿ ಗುಹ್ಯಂ ನ ಚೇದ್ವಕ್ತುಂ ಶ್ರೋತುಮಿಚ್ಛಾಮಿ ಕಥ್ಯತಾಮ್ ॥39॥

ಶಕ್ರೋಽಪಿ ವಿಜಿತಸ್ತೇನ ಕಥಂ ಲಬ್ಧವರಶ್ಚ ಸಃ।
ಕಥಂ ಚ ಬಲವಾನ್ಪುತ್ರೋ ನ ಪಿತಾ ತಸ್ಯ ರಾವಣಃ ॥40॥

ಕಥಂ ಪಿತುಶ್ಚಾಪ್ಯಧಿಕೋ ಮಹಾಹವೇ
ಶಕ್ರಸ್ಯ ಜೇತಾ ಹಿ ಕಥಂ ಸ ರಾಕ್ಷಸಃ।
ವರಾಶ್ಚ ಲಬ್ಧಾಃ ಕಥಯಸ್ವ ಮೇಽದ್ಯ
ಪಾಪ್ರಚ್ಛತಶ್ಚಾಸ್ಯ ಮುನೀನ್ದ್ರ ಸರ್ವಮ್ ॥ 41 ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ
ಆದಿಕಾವ್ಯೇ ಉತ್ತರಕಾಣ್ಡೇ ಪ್ರಥಮಃ ಸರ್ಗಃ

ದ್ವಿತೀಯಃ ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ರಾಘವಸ್ಯ ಮಹಾತ್ಮನಃ।
ಕುಮ್ಭಯೋನಿರ್ಮಹಾತೇಜಾ ವಾಕ್ಯಮೇತದುವಾಚ ಹ ॥1॥

ಶೃಣು ರಾಮ ತಥಾ ವೃತ್ತಂ ತಸ್ಯ ತೇಜೋಬಲಂ ಮಹತ್।
ಜಘಾನ ಶತ್ರೂನ್ಯೇನಾಸೌ ನ ಚ ವಧ್ಯಃ ಸ ಶತ್ರುಭಿಃ ॥2॥

ತಾವತ್ತೇ ರಾವಣಸ್ಯೇದಂ ಕುಲಂ ಜನ್ಮ ಚ ರಾಘವ।
ವರಪ್ರದಾನಂ ಚ ತಥಾ ತಸ್ಮೈ ದತ್ತಂ ಬ್ರವೀಮಿ ತೇ ॥3॥

ಪುರಾ ಕೃತಯುಗೇ ರಾಮ ಪ್ರಜಾಪತಿಸುತಃ ಪ್ರಭುಃ।
ಪುಲಸ್ತ್ಯೋ ನಾಮ ಬ್ರಹ್ಮರ್ಷಿಃ ಸಾಕ್ಷಾದಿವ ಪಿತಾಮಹಃ ॥4॥

ನಾನುಕೀರ್ತ್ಯಾ ಗುಣಾಸ್ತಸ್ಯ ಧರ್ಮತಃ ಶೀಲತಸ್ತಥಾ।
ಪ್ರಜಾಪತೇಃ ಪುತ್ರ ಇತಿ ವಕ್ತುಂ ಶಕ್ಯಂ ಹಿ ನಾಮತಃ ॥5॥

ಪ್ರಜಾಪತಿಸುತತ್ವೇನ ದೇವಾನಾಂ ವಲ್ಲಭೋ ಹಿ ಸಃ ।
ಇಷ್ಟಃ ಸರ್ವಸ್ಯ ಲೋಕಸ್ಯ ಗುಣೈಃ ಶುಭ್ರೈರ್ಮಹಾಮತಿಃ ॥6॥

ಸ ತು ಧರ್ಮಪ್ರಸಙ್ಗೇನ ಮೇರೋಃ ಪಾರ್ಶ್ವೇ ಮಹಾಗಿರೇಃ।
ತೃಣಬಿನ್ದ್ವಾಶ್ರಮಂ ಗತ್ವಾಪ್ಯವಸನ್ಮುನಿಪುಙ್ಗವಃ ॥7॥

ತಪಸ್ತೇಪೇ ಸ ಧರ್ಮಾತ್ಮಾ ಸ್ವಾಧ್ಯಾಯನಿಯತೇನ್ದ್ರಿಯಃ ।
ಗತ್ವಾಶ್ರಮಪದಂ ತಸ್ಯ ವಿಘ್ನಂ ಕುರ್ವನ್ತಿ ಕನ್ಯಕಾಃ ॥8॥

ಋಷಿಪನ್ನಗಕನ್ಯಾಶ್ಚ ರಾಜರ್ಷಿತನಯಾಶ್ಚ ಯಾಃ ।
ಕ್ರೀಡನ್ತ್ಯೋಽಪ್ಸರಸಶ್ಚೈವ ತಂ ದೇಶಮುಪಪೇದಿರೇ ॥9॥

ಸರ್ವರ್ತುಷೂಪಭೋಗ್ಯತ್ವಾದ್ರಮ್ಯತ್ವಾತ್ಕಾನನಸ್ಯ ಚ ।
ನಿತ್ಯಶಸ್ತಾಸ್ತು ತಂ ದೇಶಂ ಗತ್ವಾ ಕ್ರೀಡನ್ತಿ ಕನ್ಯಕಾಃ ॥10॥

ದೇಶಸ್ಯ ರಮಣೀಯತ್ವಾತ್ಪುಲಸ್ತ್ಯೋ ಯತ್ರ ಸ ದ್ವಿಜಃ ।
ಗಾಯನ್ತ್ಯೋ ವಾದಯನ್ತ್ಯಶ್ಚ ಲಾಸಯನ್ತ್ಯಸ್ತಥೈವ ಚ ।
ಮುನೇಸ್ತಪಸ್ವಿನಸ್ತಸ್ಯ ವಿಘ್ನಂ ಚಕ್ರುರನಿನ್ದಿತಾಃ ॥11॥

ಅಥ ರುಷ್ಟೋ ಮಹಾತೇಜಾ ವ್ಯಾಜಹಾರ ಮಹಾಮುನಿಃ ।
ಯಾ ಮೇ ದರ್ಶನಮಾಗಚ್ಛೇತ್ಸಾ ಗರ್ಭಂ ಧಾರಯಿಷ್ಯತಿ ॥12॥

ತಾಸ್ತು ಸರ್ವಾಃ ಪ್ರತಿಶ್ರುತ್ಯ ತಸ್ಯ ವಾಕ್ಯಂ ಮಹಾತ್ಮನಃ ।
ಬ್ರಹ್ಮಶಾಪಭಯಾದ್ಭೀತಾಸ್ತಂ ದೇಶಂ ನೋಪಚಕ್ರಮುಃ ॥13॥

ತೃಣಬಿನ್ದೋಸ್ತು ರಾಜರ್ಷೇಸ್ತನಯಾ ನ ಶೃಣೋತಿ ತತ್ ।
ಗತ್ವಾಶ್ರಮಪದಂ ತತ್ರ ವಿಚಚಾರ ಸುನಿರ್ಭಯಾ ॥14॥

ನ ಚಾಪಶ್ಯಚ್ಚ ಸಾ ತತ್ರ ಕಾಂಚಿದಭ್ಯಾಗತಾಂ ಸಖೀಮ್ ।
ತಸ್ಮಿನ್ಕಾಲೇ ಮಹಾತೇಜಾಃ ಪ್ರಾಜಾಪತ್ಯೋ ಮಹಾನೃಷಿಃ ॥15॥

ಸ್ವಾಧ್ಯಾಯಮಕರೋತ್ತತ್ರ ತಪಸಾ ಭಾವಿತಃ ಸ್ವಯಮ್ ॥16॥

ಸಾ ತು ವೇದಶ್ರುತಿಂ ಶ್ರುತ್ವಾ ದೃಷ್ಟ್ವಾ ವೈ ತಪಸೋ ನಿಧಿಮ್ ।
ಅಭವತ್ಪಾಣ್ಡುದೇಹಾ ಸಾ ಸುವ್ಯಞ್ಜಿತಶರೀರಜಾ ॥17॥

ಬಭೂವ ಚ ಸಮುದ್ವಿಗ್ನಾ ದೃಷ್ಟ್ವಾ ತದ್ದೋಷಮಾತ್ಮನಃ ।
ಇದಂ ಮೇ ಕಿಂತ್ವಿತಿ ಜ್ಞಾತ್ವಾ ಪಿತುರ್ಗತ್ವಾಶ್ರಮೇ ಸ್ಥಿತಾ ॥18॥

ತಾಂ ತು ದೃಷ್ಟ್ವಾ ತಥಾಭೂತಾಂ ತೃಣಬಿನ್ದುರಥಾಬ್ರವೀತ್ ।
ಕಿಂ ತ್ವಮೇತತ್ತ್ವಸದೃಶಂ ಧಾರಯಸ್ಯಾತ್ಮನೋ ವಪುಃ ॥19॥

ಸಾ ತು ಕೃತ್ವಾಞ್ಜಲಿಂ ದೀನಾ ಕನ್ಯೋವಾಚ ತಪೋಧನಮ್ ।
ನ ಜಾನೇ ಕಾರಣಂ ತಾತ ಯೇನ ಮೇ ರೂಪಮೀದೃಶಮ್ ॥20॥

ಕಿಂ ತು ಪೂರ್ವಂ ಗತಾಸ್ಮ್ಯೇಕಾ ಮಹರ್ಷೇರ್ಭಾವಿತಾತ್ಮನಃ ।
ಪುಲಸ್ತ್ಯಸ್ಯಾಶ್ರಮಂ ದಿವ್ಯಮನ್ವೇಷ್ಟುಂ ಸ್ವಸಖೀಜನಮ್ ॥21॥

ನ ಚ ಪಶ್ಯಾಮ್ಯಹಂ ತತ್ರ ಕಾಂಚಿದಭ್ಯಾಗತಾಂ ಸಖೀಮ್ ।
ರೂಪಸ್ಯ ತು ವಿಪರ್ಯಾಸಂ ದೃಷ್ಟ್ವಾ ತ್ರಾಸಾದಿಹಾಗತಾ ॥22॥

ತೃಣಬಿನ್ದುಸ್ತು ರಾಜರ್ಷಿಸ್ತಪಸಾ ದ್ಯೋತಿತಪ್ರಭಃ ।
ಧ್ಯಾನಂ ವಿವೇಶ ತಚ್ಚಾಪಿ ಅಪಶ್ಯದೃಷಿಕರ್ಮಜಮ್ ॥23॥

ಸ ತು ವಿಜ್ಞಾಯ ತಂ ಶಾಪಂ ಮಹರ್ಷೇರ್ಭಾವಿತಾತ್ಮನಃ ।
ಗೃಹೀತ್ವಾ ತನಯಾಂ ಗತ್ವಾ ಪುಲಸ್ತ್ಯಮಿದಮಬ್ರವೀತ್ ॥24॥

ಭಗವಂಸ್ತನಯಾಂ ಮೇ ತ್ವಂ ಗುಣೈಃ ಸ್ವೈರೇವ ಭೂಷಿತಾಮ್ ।
ಭಿಕ್ಷಾಂ ಪ್ರತಿಗೃಹಾಣೇಮಾಂ ಮಹರ್ಷೇ ಸ್ವಯಮುದ್ಯತಾಮ್ ॥25॥

ತಪಶ್ಚರಣಯುಕ್ತಸ್ಯ ಶ್ರಾಮ್ಯಮಾಣೇನ್ದ್ರಿಯಸ್ಯ ತೇ ।
ಶುಶ್ರೂಷಣಪರಾ ನಿತ್ಯಂ ಭವಿಷ್ಯತಿ ನ ಸಂಶಯಃ ॥26॥

ತಂ ಬ್ರುವಾಣಂ ತು ತದ್ವಾಕ್ಯಂ ರಾಜರ್ಷಿಂ ಧಾರ್ಮಿಕಂ ತದಾ ।
ಜಿಘೃಕ್ಷುರಬ್ರವೀತ್ಕನ್ಯಾಂ ಬಾಢಮಿತ್ಯೇವ ಸ ದ್ವಿಜಃ ॥27॥

ದತ್ತ್ವಾ ತು ತನಯಾಂ ರಾಜಾ ಸ್ವಮಾಶ್ರಮಪದಂ ಗತಃ ।
ಸಾಪಿ ತತ್ರಾವಸತ್ಕನ್ಯಾ ತೋಷಯನ್ತೀ ಪತಿಂ ಗುಣೈಃ ॥28॥

ತಸ್ಯಾಸ್ತು ಶೀಲವೃತ್ತಾಭ್ಯಾಂ ತುತೋಷ ಮುನಿಪುಙ್ಗವಃ ।
ಪ್ರೀತಃ ಸ ತು ಮಹಾತೇಜಾ ವಾಕ್ಯಮೇತದುವಾಚ ಹ ॥29॥

ಪರಿತುಷ್ಟೋಽಸ್ಮಿ ಸುಶ್ರೋಣಿ ಗುಣಾನಾಂ ಸಂಪದಾ ಭೃಶಮ್ ।
ತಸ್ಮಾದ್ದೇವಿ ದದಾಮ್ಯದ್ಯ ಪುತ್ರಮಾತ್ಮಸಮಂ ತವ ।
ಉಭಯೋರ್ವಂಶಕರ್ತಾರಂ ಪೌಲಸ್ತ್ಯ ಇತಿ ವಿಶ್ರುತಮ್ ॥30॥

ಯಸ್ಮಾತ್ತು ವಿಶ್ರುತೋ ವೇದಸ್ತ್ವಯೇಹಾಧ್ಯಯತೋ ಮಮ ।
ತಸ್ಮಾತ್ಸ ವಿಶ್ರವಾ ನಾಮ ಭವಿಷ್ಯತಿ ನ ಸಂಶಯಃ ॥31॥

ಏವಮುಕ್ತಾ ತು ಸಾ ದೇವೀ ಪ್ರಹೃಷ್ಟೇನಾನ್ತರಾತ್ಮನಾ ।
ಅಚಿರೇಣೈವ ಕಾಲೇನಾಸೂತ ವಿಶ್ರವಸಂ ಸುತಮ್ ॥32॥

ತ್ರಿಷು ಲೋಕೇಷು ವಿಖ್ಯಾತಂ ಯಶೋಧರ್ಮಸಮನ್ವಿತಮ್ ॥33॥

ಶ್ರುತಿಮಾನ್ಸಮದರ್ಶೀ ಚ ವ್ರತಾಚಾರರತಸ್ತಥಾ ।
ಪಿತೇವ ತಪಸಾ ಯುಕ್ತೋ ಹ್ಯಭವದ್ವಿಶ್ರವಾ ಮುನಿಃ ॥34॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ದ್ವಿತೀಯಃ ಸರ್ಗಃ

ತೃತೀಯ ಸರ್ಗಃ

ಅಥ ಪುತ್ರಃ ಪುಲಸ್ತ್ಯಸ್ಯ ವಿಶ್ರವಾ ಮುನಿಪುಙ್ಗವಃ ।
ಅಚಿರೇಣೈವ ಕಾಲೇನ ಪಿತೇವ ತಪಸಿ ಸ್ಥಿತಃ ॥1॥

ಸತ್ಯವಾನ್ ಶೀಲವಾನ್ ದಾನ್ತಃ ಸ್ವಾಧ್ಯಾಯನಿರತಃ ಶುಚಿಃ ।
ಸರ್ವಭೋಗೇಷ್ವಸಂಸಕ್ತೋ ನಿತ್ಯಂ ಧರ್ಮಪರಾಯಣಃ ॥2॥

ಜ್ಞಾತ್ವಾ ತಸ್ಯ ತು ತದ್ವೃತ್ತಂ ಭರದ್ವಾಜೋ ಮಹಾಮುನಿಃ ।
ದದೌ ವಿಶ್ರವಸೇ ಭಾರ್ಯಾಂ ಸ್ವಸುತಾಂ ದೇವವರ್ಣಿನೀಮ್ ॥3॥

ಪ್ರತಿಗೃಹ್ಯ ತು ಧರ್ಮೇಣ ಭರದ್ವಾಜಸುತಾಂ ತದಾ ।
ಪ್ರಜಾನ್ವೀಕ್ಷಿಕಯಾ ಬುದ್ಧ್ಯಾ ಶ್ರೇಯೋ ಹ್ಯಸ್ಯ ವಿಚಿನ್ತಯನ್ ॥4॥

ಮುದಾ ಪರಮಯಾ ಯುಕ್ತೋ ವಿಶ್ರವಾ ಮುನಿಪುಙ್ಗವಃ ।
ಸ ತಸ್ಯಾಂ ವೀರ್ಯಸಂಪನ್ನಮಪತ್ಯಂ ಪರಮಾದ್ಭುತಮ್ ॥5॥

ಜನಯಾಮಾಸ ಧರ್ಮಜ್ಞಃ ಸರ್ವೈರ್ಬ್ರಹ್ಮಗುಣೈರ್ವೃತಮ್ ।
ತಸ್ಮಿನ್ ಜಾತೇ ತು ಸಂಹೃಷ್ಟಃ ಸ ಬಭೂವ ಪಿತಾಮಹಃ ॥6॥

ದೃಷ್ಟ್ವಾ ಶ್ರೇಯಸ್ಕರೀಂ ಬುದ್ಧಿಂ ಧನಾಧ್ಯಕ್ಷೋ ಭವಿಷ್ಯತಿ।
ನಾಮ ಚಾಪ್ಯಾಕರೋತ್ಪ್ರೀತಃ ಸಾರ್ಧಂ ದೇವರ್ಷಿಭಿಸ್ತದಾ ॥7॥

ಯಸ್ಮಾದ್ವಿಶ್ರವಸೋಽಪತ್ಯಂ ಸಾದೃಶ್ಯಾದ್ವಿಶ್ರವಾ ಇವ।
ತಸ್ಮಾದ್ವೈಶ್ರವಣೋ ನಾಮ ಭವಿಷ್ಯತ್ಯೇಷ ವಿಶ್ರುತಃ ॥8॥

ಸ ತು ವೈಶ್ರವಣಸ್ತತ್ರ ತಪೋವನಗತಸ್ತದಾ।
ಅವರ್ಧತಾಹುತಿಹುತೋ ಮಹಾತೇಜಾ ಯಥಾನಲಃ ॥9॥

ತಸ್ಯಾಶ್ರಮಪದಸ್ಥಸ್ಯ ಬುದ್ಧಿರ್ಜಜ್ಞೇ ಮಹಾತ್ಮನಃ।
ಚರಿಷ್ಯೇ ಪರಮಂ ಧರ್ಮಂ ಧರ್ಮೋ ಹಿ ಪರಮಾ ಗತಿಃ ॥10॥

ಸ ತು ವರ್ಷಸಹಸ್ರಾಣಿ ತಪಸ್ತಪ್ತ್ವಾ ಮಹಾವನೇ।
ಯನ್ತ್ರಿತೋ ನಿಯಮೈರುಗ್ರೈಶ್ಚಕಾರ ಸುಮಹತ್ತಪಃ ॥11॥

ಪೂರ್ಣೇ ವರ್ಷಸಹಸ್ರಾನ್ತೇ ತಂ ತಂ ವಿಧಿಮಕಲ್ಪಯತ್।
ಜಲಾಶೀ ಮಾರುತಾಹಾರೋ ನಿರಾಹಾರಸ್ತಥೈವ ಚ ।
ಏವಂ ವರ್ಷಸಹಸ್ರಾಣಿ ಜಗ್ಮುಸ್ತಾನ್ಯೇಕವರ್ಷವತ್ ॥12॥

ಅಥ ಪ್ರೀತೋ ಮಹಾತೇಜಾಃ ಸೇನ್ದ್ರೈಃ ಸುರಗಣೈಃ ಸಹ।
ಗತ್ವಾ ತಸ್ಯಾಶ್ರಮಪದಂ ಬ್ರಹ್ಮೇದಂ ವಾಕ್ಯಮಬ್ರವೀತ್ ॥13॥

ಪರಿತುಷ್ಟೋಽಸ್ಮಿ ತೇ ವತ್ಸ ಕರ್ಮಣಾನೇನ ಸುವ್ರತ।
ವರಂ ವೃಣೀಷ್ವ ಭದ್ರಂ ತೇ ವರಾರ್ಹಸ್ತ್ವಂ ಮಹಾಮತೇ ॥14॥

ಅಥಾಬ್ರವೀದ್ವೈಶ್ರವಣಃ ಪಿತಾಮಹಮುಪಸ್ಥಿತಮ್।
ಭಗವನ್ ಲೋಕಪಾಲತ್ವಮಿಚ್ಛೇಯಂ ಲೋಕರಕ್ಷಣಮ್ ॥15॥

ಅಥಾಬ್ರವಿದ್ವೈಶ್ರವಣಂ ಪರಿತುಷ್ಟೇನ ಚೇತಸಾ।
ಬ್ರಹ್ಮಾ ಸುರಗಣೈಃ ಸಾರ್ಧಂ ಬಾಢಮಿತ್ಯೇವ ಹೃಷ್ಟವತ್ ॥16॥

ಅಹಂ ವೈ ಲೋಕಪಾಲಾನಾಂ ಚತುರ್ಥಂ ಸ್ರಷ್ಟುಮುದ್ಯತಃ।
ಯಮೇನ್ದ್ರವರುಣಾನಾಂ ಚ ಪದಂ ಯತ್ತವ ಚೇಪ್ಸಿತಮ್ ॥17॥

ತದ್ಗಚ್ಛ ಬತ ಧರ್ಮಜ್ಞ ನಿಧೀಶತ್ವಮವಾಪ್ನುಹಿ।
ಶಕ್ರಾಮ್ಬುಪಯಮಾನಂ ಚ ಚತುರ್ಥಸ್ತ್ವಂ ಭವಿಷ್ಯಸಿ ॥18॥

ಏತಚ್ಚ ಪುಷ್ಪಕಂ ನಾಮ ವಿಮಾನಂ ಸೂರ್ಯಸಂನಿಭಮ್।
ಪ್ರತಿಗೃಹ್ಣೀಷ್ವ ಯಾನಾರ್ಥಂ ತ್ರಿದಶೈಃ ಸಮತಾಂ ವ್ರಜ ॥19॥

ಸ್ವಸ್ತಿ ತೇಽಸ್ತು ಗಮಿಷ್ಯಾಮಃ ಸರ್ವ ಏವ ಯಥಾಗತಮ್।
ಕೃತಕೃತ್ಯಾ ವಯಂ ತಾತ ದತ್ತ್ವಾ ತವ ವರದ್ವಯಮ್ ॥20॥

ಇತ್ಯುಕ್ತ್ವಾ ಸ ಗತೋ ಬ್ರಹ್ಮಾ ಸ್ವಸ್ಥಾನಂ ತ್ರಿದಶೈಃ ಸಹ।
ಗತೇಷು ಬ್ರಹ್ಮಪೂರ್ವೇಷು ದೇವೇಷ್ವಥ ನಭಸ್ತಲಮ್ ॥21॥

ಧನೇಶಃ ಪಿತರಂ ಪ್ರಾಹ ಪ್ರಾಞ್ಜಲಿಃ ಪ್ರಯತಾತ್ಮವಾನ್।
ಭಗವಲ್ಲಬ್ಧವಾನಸ್ಮಿ ವರಮಿಷ್ಟಂ ಪಿತಾಮಹಾತ್ ॥22॥

ನಿವಾಸನಂ ನ ಮೇ ದೇವೋ ವಿದಧೇ ಸ ಪ್ರಜಾಪತಿಃ।
ತಂ ಪಶ್ಯ ಭಗವನ್ಕಂಚಿನ್ನಿವಾಸಂ ಸಾಧು ಮೇ ಪ್ರಭೋ ॥23॥

ನ ಚ ಪೀಡಾ ಭವೇದ್ಯತ್ರ ಪ್ರಾಣಿನೋ ಯಸ್ಯ ಕಸ್ಯಚಿತ್ ॥24॥

ಏವಮುಕ್ತಸ್ತು ಪುತ್ರೇಣ ವಿಶ್ರವಾ ಮುನಿಪುಂಗವಃ।
ವಚನಂ ಪ್ರಾಹ ಧರ್ಮಜ್ಞ ಶ್ರೂಯತಾಮಿತಿ ಸತ್ತಮ ॥25॥

ದಕ್ಷಿಣಸ್ಯೋದಧೇಸ್ತೀರೇ ತ್ರಿಕೂಟೋ ನಾಮ ಪರ್ವತಃ।
ತಸ್ಯಾಗ್ರೇ ತು ವಿಶಾಲಾ ಸಾ ಮಹೇನ್ದ್ರಸ್ಯ ಪುರೀ ಯಥಾ ॥26॥

ಲಙ್ಕಾ ನಾಮ ಪುರೀ ರಮ್ಯಾ ನಿರ್ಮಿತಾ ವಿಶ್ವಕರ್ಮಣಾ।
ರಾಕ್ಷಸಾನಾಂ ನಿವಾಸಾರ್ಥಂ ಯಥೇನ್ದ್ರಸ್ಯಾಮರಾವತೀ ॥27॥

ತತ್ರ ತ್ವಂ ವಸ ಭದ್ರಂ ತೇ ಲಙ್ಕಾಯಾಂ ನಾತ್ರ ಸಂಶಯಃ।
ಹೇಮಪ್ರಾಕಾರಪರಿಖಾ ಯನ್ತ್ರಶಸ್ತ್ರಸಮಾವೃತಾ ॥28॥

ರಮಣೀಯಾ ಪುರೀ ಸಾ ಹಿ ರುಕ್ಮವೈದೂರ್ಯತೋರಣಾ।
ರಾಕ್ಷಸೈಃ ಸಾ ಪರಿತ್ಯಕ್ತಾ ಪುರಾ ವಿಷ್ಣುಭಯಾರ್ದಿತೈಃ ॥29॥

ಶೂನ್ಯಾ ರಕ್ಷೋಗಣೈಃ ಸರ್ವೈ ರಸಾತಲತಲಂ ಗತೈಃ ।
ಶೂನ್ಯಾ ಸಮ್ಪ್ರತಿ ಲಙ್ಕಾ ಸಾ ಪ್ರಭುಸ್ತಸ್ಯಾ ನ ವಿದ್ಯತೇ ॥30॥

ಸ ತ್ವಂ ತತ್ರ ನಿವಾಸಾಯ ಗಚ್ಛ ಪುತ್ರ ಯಥಾಸುಖಮ್ ।
ನಿರ್ದೋಷಸ್ತತ್ರ ತೇ ವಾಸೋ ನ ಬಾಧಸ್ತತ್ರ ಕಸ್ಯಚಿತ್ ॥31॥

ಏತಚ್ಛ್ರುತ್ವಾ ಸ ಧರ್ಮಾತ್ಮಾ ಧರ್ಮಿಷ್ಠಂ ವಚನಂ ಪಿತುಃ ।
ನಿವಾಸಯಾಮಾಸ ತದಾ ಲಙ್ಕಾಂ ಪರ್ವತಮೂರ್ಧನಿ ॥32॥

ನೈರ್ಋತಾನಾಂ ಸಹಸ್ರೈಸ್ತು ಹೃಷ್ಟೈಃ ಪ್ರಮುದಿತೈಃ ಸದಾ ।
ಅಚಿರೇಣೈವ ಕಾಲೇನ ಸಂಪೂರ್ಣಾ ತಸ್ಯ ಶಾಸನಾತ್ ॥33॥

ಸ ತು ತತ್ರಾವಸತ್ಪ್ರೀತೋ ಧರ್ಮಾತ್ಮಾ ನೈರ್ಋತರ್ಷಭಃ ।
ಸಮುದ್ರಪರಿಖಾಯಾಂ ಸ ಲಙ್ಕಾಯಾಂ ವಿಶ್ರವಾತ್ಮಜಃ ॥34॥

ಕಾಲೇ ಕಾಲೇ ತು ಧರ್ಮಾತ್ಮಾ ಪುಷ್ಪಕೇಣ ಧನೇಶ್ವರಃ ।
ಅಭ್ಯಾಗಚ್ಛದ್ವಿನೀತಾತ್ಮಾ ಪಿತರಂ ಮಾತರಂ ಚ ಹಿ ॥35॥

ಸ ದೇವಗನ್ಧರ್ವಗಣೈರಭಿಷ್ಟುತ -
ಸ್ತಥಾಪ್ಸರೋನೃತ್ಯವಿಭೂಷಿತಾಲಯಃ ।
ಗಭಸ್ತಿಭಿಃ ಸೂರ್ಯ ಇವಾವಭಾಸಯ-
ನ್ಪಿತುಃ ಸಮೀಪಂ ಪ್ರಯಯೌ ಸ ವಿತ್ತಪಃ ॥ 36॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ತೃತೀಯಃ ಸರ್ಗಃ

ಚತುರ್ಥಃ ಸರ್ಗಃ

ಶ್ರುತ್ವಾಗಸ್ತ್ಯೇರಿತಂ ವಾಕ್ಯಂ ರಾಮೋ ವಿಸ್ಮಯಮಾಗತಃ ।
ಕಥಮಾಸೀತ್ತು ಲಙ್ಕಾಯಾಂ ಸಮ್ಭವೋ ರಕ್ಷಸಾಂ ಪುರಾ ॥1॥

ತತಃ ಶಿರಃ ಕಮ್ಪಯಿತ್ವಾ ತ್ರೇತಾಗ್ನಿಸಮವಿಗ್ರಹಮ್ ।
ತಮಗಸ್ತ್ಯಂ ಮುಹುರ್ದೃಷ್ಟ್ವಾ ಸ್ಮಯಮಾನೋಽಭ್ಯಭಾಷತ ॥2॥

ಭಗವನ್ಪೂರ್ವಮಪ್ಯೇಷಾ ಲಙ್ಕಾಸೀತ್ಪಿಶಿತಾಶಿನಾಮ್ ।
ಶ್ರುತ್ವೇದಂ ಭಗವದ್ವಾಕ್ಯಂ ಜಾತೋ ಮೇ ವಿಸ್ಮಯಃ ಪರಃ ॥3॥

ಪುಲಸ್ತ್ಯವಂಶಾದುದ್ಭೂತಾ ರಾಕ್ಷಸಾ ಇತಿ ನಃ ಶ್ರುತಮ್ ।
ಇದಾನೀಮನ್ಯತಶ್ಚಾಪಿ ಸಮ್ಭವಃ ಕೀರ್ತಿತಸ್ತ್ವಯಾ ॥4॥

ರಾವಣಾತ್ಕುಮ್ಭಕರ್ಣಾಚ್ಚ ಪ್ರಹಸ್ತಾದ್ವಿಕಟಾದಪಿ ।
ರಾವಣಸ್ಯ ಚ ಪುತ್ರೇಭ್ಯಃ ಕಿಂ ನು ತೇ ಬಲವತ್ತರಾಃ ॥5॥

ಕ ಏಷಾಂ ಪೂರ್ವಕೋ ಬ್ರಹ್ಮನ್ಕಿಂನಾಮಾ ಚ ಬಲೋತ್ಕಟಃ ।
ಅಪರಾಧಂ ಚ ಕಂ ಪ್ರಾಪ್ಯ ವಿಷ್ಣುನಾ ದ್ರಾವಿತಾಃ ಕಥಮ್ ॥6॥

ಏತದ್ವಿಸ್ತರತಃ ಸರ್ವಂ ಕಥಯಸ್ವ ಮಮಾನಘ ।
ಕುತೂಹಲಮಿದಂ ಮಹ್ಯಂ ನುದ ಭಾನುರ್ಯಥಾ ತಮಃ ॥7॥

ರಾಘವಸ್ಯ ವಚಃ ಶ್ರುತ್ವಾ ಸಂಸ್ಕಾರಾಲಂಕೃತಂ ಶುಭಮ್ ।
ಅಥ ವಿಸ್ಮಯಮಾನಸ್ತಮಗಸ್ತ್ಯಃ ಪ್ರಾಹ ರಾಘವಮ್ ॥8॥

ಪ್ರಜಾಪತಿಃ ಪುರಾ ಸೃಷ್ಟ್ವಾ ಅಪಃ ಸಲಿಲಸಮ್ಭವಃ ।
ತಾಸಾಂ ಗೋಪಾಯನೇ ಸತ್ತ್ವಾನಸೃಜತ್ಪದ್ಮಸಮ್ಭವಃ ॥9॥

ತೇ ಸತ್ತ್ವಾಃ ಸತ್ತ್ವಕರ್ತಾರಂ ವಿನೀತವದುಪಸ್ಥಿತಾಃ ।
ಕಿಂ ಕುರ್ಮ ಇತಿ ಭಾಷನ್ತಃ ಕ್ಷುತ್ಪಿಪಾಸಾಭಯಾರ್ದಿತಾಃ ॥10॥

ಪ್ರಜಾಪತಿಸ್ತು ತಾನ್ಸರ್ವಾನ್ಪ್ರತ್ಯಾಹ ಪ್ರಹಸನ್ನಿವ ।
ಆಭಾಷ್ಯ ವಾಚಾ ಯತ್ನೇನ ರಕ್ಷಧ್ವಮಿತಿ ಮಾನದ ॥11॥

ರಕ್ಷಾಮ ಇತಿ ತತ್ರಾನ್ಯೈರ್ಯಕ್ಷಾಮ ಇತಿ ಚಾಪರೈಃ ।
ಭುಂಕ್ಷಿತಾಭುಂಕ್ಷಿತೈರುಕ್ತಸ್ತತಸ್ತಾನಾಹ ಭೂತಕೃತ್ ॥12॥

ರಕ್ಷಾಮ ಇತಿ ಯೈರುಕ್ತಂ ರಾಕ್ಷಸಾಸ್ತೇ ಭವನ್ತು ವಃ ।
ಯಕ್ಷಾಮ ಇತಿ ಯೈರುಕ್ತಂ ಯಕ್ಷಾ ಏವ ಭವನ್ತು ವಃ ॥13॥

ತತ್ರ ಹೇತಿಃ ಪ್ರಹೇತಿಶ್ಚ ಭ್ರಾತರೌ ರಾಕ್ಷಸಾಧಿಪೌ ।
ಮಧುಕೈಟಭಸಂಕಾಶೌ ಬಭೂವತುರರಿಂದಮೌ ॥14॥

ಪ್ರಹೇತಿರ್ಧಾರ್ಮಿಕಸ್ತತ್ರ ತಪೋವನಗತಸ್ತದಾ ।
ಹೇತಿರ್ದಾರಕ್ರಿಯಾರ್ಥೇ ತು ಪರಂ ಯತ್ನಮಥಾಕರೋತ್ ॥15॥

ಸ ಕಾಲಭಗಿನೀಂ ಕನ್ಯಾಂ ಭಯಾಂ ನಾಮ ಮಹಾಭಯಾಮ್ ।
ಉದಾವಹದಮೇಯಾತ್ಮಾ ಸ್ವಯಮೇವ ಮಹಾಮತಿಃ ॥16॥

ಸ ತಸ್ಯಾಂ ಜನಯಾಮಾಸ ಹೇತೀ ರಾಕ್ಷಸಪುಂಗವಃ ।
ಪುತ್ರಂ ಪುತ್ರವತಾಂ ಶ್ರೇಷ್ಠೋ ವಿದ್ಯುತ್ಕೇಶಮಿತಿ ಶ್ರುತಮ್ ॥17॥

ವಿದ್ಯುತ್ಕೇಶೋ ಹೇತಿಪುತ್ರಃ ಸ ದೀಪ್ತಾರ್ಕಸಮಪ್ರಭಃ ।
ವ್ಯವರ್ಧತ ಮಹಾತೇಜಾಸ್ತೋಯಮಧ್ಯ ಇವಾಮ್ಬುಜಮ್ ॥18॥

ಸ ಯದಾ ಯೌವನಂ ಭದ್ರಮನುಪ್ರಾಪ್ತೋ ನಿಶಾಚರಃ ।
ತತೋ ದಾರಕ್ರಿಯಾಂ ತಸ್ಯ ಕರ್ತುಂ ವ್ಯವಸಿತಃ ಪಿತಾ ॥19॥

ಸಂಧ್ಯಾದುಹಿತರಂ ಸೋಽಥ ಸಂಧ್ಯಾತುಲ್ಯಾಂ ಪ್ರಭಾವತಃ ।
ವರಯಾಮಾಸ ಪುತ್ರಾರ್ಥಂ ಹೇತೀ ರಾಕ್ಷಸಪುಙ್ಗವಃ ॥20॥

ಅವಶ್ಯಮೇವ ದಾತವ್ಯಾ ಪರಸ್ಮೈ ಸೇತಿ ಸಂಧ್ಯಯಾ ।
ಚಿನ್ತಯಿತ್ವಾ ಸುತಾ ದತ್ತಾ ವಿದ್ಯುತ್ಕೇಶಾಯ ರಾಘವ ॥21॥

ಸಂಧ್ಯಾಯಾಸ್ತನಯಾಂ ಲಬ್ಧ್ವಾ ವಿದ್ಯುತ್ಕೇಶೋ ನಿಶಾಚರಃ ।
ರಮತೇ ಸ ತಯಾ ಸಾರ್ಧಂ ಪೌಲೋಮ್ಯಾ ಮಘವಾನಿವ ॥22॥

ಕೇನಚಿತ್ತ್ವಥ ಕಾಲೇನ ರಾಮ ಸಾಲಕಟಙ್ಕಟಾ ।
ವಿದ್ಯುತ್ಕೇಶಾದ್ಗರ್ಭಮಾಪ ಘನರಾಜಿರಿವಾರ್ಣವಾತ್ ॥23॥

ತತಃ ಸಾ ರಾಕ್ಷಸೀ ಗರ್ಭಂ ಘನಗರ್ಭಸಮಪ್ರಭಮ್ ।
ಪ್ರಸೂತಾ ಮನ್ದರಂ ಗತ್ವಾ ಗಙ್ಗಾ ಗರ್ಭಮಿವಾಗ್ನಿಜಮ್ ।
ಸಮುತ್ಸೃಜ್ಯ ತು ಸಾ ಗರ್ಭಂ ವಿದ್ಯುತ್ಕೇಶರತಾರ್ಥಿನೀ ॥24॥

ರೇಮೇ ತು ಸಾರ್ಧಂ ಪತಿನಾ ವಿಸ್ಮೃತ್ಯ ಸುತಮಾತ್ಮಜಮ್ ।
ಉತ್ಸೃಷ್ಟಸ್ತು ತದಾ ಗರ್ಭೋ ಘನಶಬ್ದಸಮಸ್ವನಃ ॥25॥

ತಯೋತ್ಸೃಷ್ಟಃ ಸ ತು ಶಿಶುಃ ಶರದರ್ಕಸಮದ್ಯುತಿಃ ।
ನಿಧಾಯಾಸ್ಯೇ ಸ್ವಯಂ ಮುಷ್ಟಿಂ ರುರೋದ ಶನಕೈಸ್ತದಾ ॥26॥

ತತೋ ವೃಷಭಮಾಸ್ಥಾಯ ಪಾರ್ವತ್ಯಾ ಸಹಿತಃ ಶಿವಃ ।
ವಾಯುಮಾರ್ಗೇಣ ಗಚ್ಛನ್ವೈ ಶುಶ್ರಾವ ರುದಿತಸ್ವನಮ್ ॥27॥

ಅಪಶ್ಯದುಮಯಾ ಸಾರ್ಧಂ ರುದನ್ತಂ ರಾಕ್ಷಸಾತ್ಮಜಮ್ ।
ಕಾರುಣ್ಯಭಾವಾತ್ಪಾರ್ವತ್ಯಾ ಭವಸ್ತ್ರಿಪುರಸೂದನಃ ॥28॥

ತಂ ರಾಕ್ಷಸಾತ್ಮಜಂ ಚಕ್ರೇ ಮಾತುರೇವ ವಯಃಸಮಮ್ ।
ಅಮರಂ ಚೈವ ತಂ ಕೃತ್ವಾ ಮಹಾದೇವೋಽಕ್ಷರೋಽವ್ಯಯಃ ।
ಪುರಮಾಕಾಶಗಂ ಪ್ರಾದಾತ್ಪಾರ್ವತ್ಯಾಃ ಪ್ರಿಯಕಾಮ್ಯಯಾ ॥29॥

ಉಮಯಾಪಿ ವರೋ ದತ್ತೋ ರಾಕ್ಷಸೀನಾಂ ನೃಪಾತ್ಮಜ ॥30॥

ಸದ್ಯೋಪಲಬ್ಧಿರ್ಗರ್ಭಸ್ಯ ಪ್ರಸೂತಿಃ ಸದ್ಯ ಏವ ಚ ।
ಸದ್ಯ ಏವ ವಯಃಪ್ರಾಪ್ತಿಂ ಮಾತುರೇವ ವಯಃಸಮಮ್ ॥31॥

ತತಃ ಸುಕೇಶೋ ವರದಾನಗರ್ವಿತಃ
ಶ್ರಿಯಂ ಪ್ರಭೋಃ ಪ್ರಾಪ್ಯ ಹರಸ್ಯ ಪಾರ್ಶ್ವತಃ ।
ಚಚಾರ ಸರ್ವತ್ರ ಮಹಾನ್ಮಹಾಮತಿಃ
ಖಗಂ ಪುರಂ ಪ್ರಾಪ್ಯ ಪುರಂದರೋ ಯಥಾ ॥ 32॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಚತುರ್ಥಃ ಸರ್ಗಃ

ಪಞ್ಚಮಃ ಸರ್ಗಃ

ಸುಕೇಶಂ ಧಾರ್ಮಿಕಂ ದೃಷ್ಟ್ವಾ ವರಲಬ್ಧಂ ಚ ರಾಕ್ಷಸಮ್ ।
ಗ್ರಾಮಣೀರ್ನಾಮ ಗನ್ಧರ್ವೋ ವಿಶ್ವಾವಸುಸಮಪ್ರಭಃ ॥1॥

ತಸ್ಯ ದೇವವತೀ ನಾಮ ದ್ವಿತೀಯಾ ಶ್ರೀರಿವಾತ್ಮಜಾ ।
ತ್ರಿಷು ಲೋಕೇಷು ವಿಖ್ಯಾತಾ ರೂಪಯೌವನಶಾಲಿನೀ ।
ತಾಂ ಸುಕೇಶಾಯ ಧರ್ಮಾತ್ಮಾ ದದೌ ರಕ್ಷಃಶ್ರಿಯಂ ಯಥಾ ॥2॥

ವರದಾನಕೃತೈಶ್ವರ್ಯಂ ಸಾ ತಂ ಪ್ರಾಪ್ಯ ಪತಿಂ ಪ್ರಿಯಮ್ ।
ಆಸೀದ್ದೇವವತೀ ತುಷ್ಟಾ ಧನಂ ಪ್ರಾಪ್ಯೇವ ನಿರ್ಧನಃ ॥3॥

ಸ ತಯಾ ಸಹ ಸಂಯುಕ್ತೋ ರರಾಜ ರಜನೀಚರಃ ।
ಅಞ್ಜನಾದಭಿನಿಷ್ಕ್ರಾನ್ತಃ ಕರೇಣ್ವೇವ ಮಹಾಗಜಃ ॥4॥

ತತಃ ಕಾಲೇ ಸುಕೇಶಸ್ತು ಜನಯಾಮಾಸ ರಾಘವ ।
ತ್ರೀನ್ಪುತ್ರಾಞ್ಜನಯಾಮಾಸ ತ್ರೇತಾಗ್ನಿಸಮವಿಗ್ರಹಾನ್ ॥5॥

ಮಾಲ್ಯವನ್ತಂ ಸುಮಾಲಿಂ ಚ ಮಾಲಿಂ ಚ ಬಲಿನಾಂ ವರಮ್ ।
ತ್ರೀಂಸ್ತ್ರಿನೇತ್ರಸಮಾನ್ಪುತ್ರಾನ್ರಾಕ್ಷಸಾನ್ರಾಕ್ಷಸಾಧಿಪಃ ॥6॥

ತ್ರಯೋ ಲೋಕಾ ಇವಾವ್ಯಗ್ರಾಃ ಸ್ಥಿತಾಸ್ತ್ರಯ ಇವಾಗ್ನಯಃ ।
ತ್ರಯೋ ಮನ್ತ್ರಾ ಇವಾತ್ಯುಗ್ರಾಸ್ತ್ರಯೋ ಘೋರಾ ಇವಾಮಯಾಃ ॥7॥

ತ್ರಯಃ ಸುಕೇಶಸ್ಯ ಸುತಾಸ್ತ್ರೇತಾಗ್ನಿಸಮತೇಜಸಃ ।
ವಿವೃದ್ಧಿಮಗಮಂಸ್ತತ್ರ ವ್ಯಾಧಯೋಪೇಕ್ಷಿತಾ ಇವ ॥8॥

ವರಪ್ರಾಪ್ತಿಂ ಪಿತುಸ್ತೇ ತು ಜ್ಞಾತ್ವೈಶ್ವರ್ಯಂ ತಪೋಬಲಾತ್ ।
ತಪಸ್ತಪ್ತುಂ ಗತಾ ಮೇರುಂ ಭ್ರಾತರಃ ಕೃತನಿಶ್ಚಯಾಃ ॥9॥

ಪ್ರಗೃಹ್ಯ ನಿಯಮಾನ್ಘೋರಾನ್ರಾಕ್ಷಸಾ ನೃಪಸತ್ತಮ ।
ವಿಚೇರುಸ್ತೇ ತಪೋ ಘೋರಂ ಸರ್ವಭೂತಭಯಾವಹಮ್ ॥10॥

ಸತ್ಯಾರ್ಜವಶಮೋಪೇತೈಸ್ತಪೋಭಿರ್ಭುವಿ ದುರ್ಲಭೈಃ ।
ಸಂತಾಪಯನ್ತಸ್ತ್ರೀಂಲ್ಲೋಕಾನ್ಸದೇವಾಸುರಮಾನುಷಾನ್ ॥11॥

ತತೋ ವಿಭುಶ್ಚತುರ್ವಕ್ತ್ರೋ ವಿಮಾನವರಮಾಶ್ರಿತಃ ।
ಸುಕೇಶಪುತ್ರಾನಾಮನ್ತ್ರ್ಯ ವರದೋಽಸ್ಮೀತ್ಯಭಾಷತ ॥12॥

ಬ್ರಹ್ಮಾಣಂ ವರದಂ ಜ್ಞಾತ್ವಾ ಸೇನ್ದ್ರೈರ್ದೇವಗಣೈರ್ವೃತಮ್।
ಊಚುಃ ಪ್ರಾಞ್ಜಲಯಃ ಸರ್ವೇ ವೇಪಮಾನಾ ಇವ ದ್ರುಮಾಃ ॥13॥

ತಪಸಾರಾಧಿತೋ ದೇವ ಯದಿ ನೋ ದಿಶಸೇ ವರಮ್ ॥14॥

ಅಜೇಯಾಃ ಶತ್ರುಹನ್ತಾರಸ್ತಥೈವ ಚಿರಜೀವಿನಃ ।
ಪ್ರಭವಿಷ್ಣ್ವೋ ಭವಾಮೇತಿ ಪರಸ್ಪರಮನುವ್ರತಾಃ ॥15॥

ಏವಂ ಭವಿಷ್ಯಥೇತ್ಯುಕ್ತ್ವಾ ಸುಕೇಶತನಯಾನ್ವಿಭುಃ ।
ಸ ಯಯೌ ಬ್ರಹ್ಮಲೋಕಾಯ ಬ್ರಹ್ಮಾ ಬ್ರಾಹ್ಮಣವತ್ಸಲಃ ॥16॥

ವರಂ ಲಬ್ಧ್ವಾ ತು ತೇ ಸರ್ವೇ ರಾಮ ರಾತ್ರಿಂಚರಾಸ್ತದಾ ।
ಸುರಾಸುರಾನ್ಪ್ರಬಾಧನ್ತೇ ವರದಾನಸುನಿರ್ಭಯಾಃ ॥17॥

ತೈರ್ಬಾಧ್ಯಮಾನಾಸ್ತ್ರಿದಶಾಃ ಸರ್ಷಿಸಙ್ಘಾಃ ಸಚಾರಣಾಃ ।
ತ್ರಾತಾರಂ ನಾಧಿಗಚ್ಛನ್ತಿ ನಿರಯಸ್ಥಾ ಯಥಾ ನರಾಃ ॥18॥

ಅಥ ತೇ ವಿಶ್ವಕರ್ಮಾಣಂ ಶಿಲ್ಪಿನಾಂ ವರಮವ್ಯಯಮ್ ।
ಊಚುಃ ಸಮೇತ್ಯ ಸಂಹೃಷ್ಟಾ ರಾಕ್ಷಸಾ ರಘುಸತ್ತಮ ॥19॥

ಓಜಸ್ತೇಜೋಬಲವತಾಂ ಮಹತಾಮಾತ್ಮತೇಜಸಾ ।
ಗೃಹಕರ್ತಾ ಭವಾನೇವ ದೇವಾನಾಂ ಹೃದಯೇಪ್ಸಿತಮ್ ॥20॥

ಅಸ್ಮಾಕಮಪಿ ತಾವತ್ತ್ವಂ ಗೃಹಂ ಕುರು ಮಹಾಮತೇ ।
ಹಿಮವನ್ತಮುಪಾಶ್ರಿತ್ಯ ಮೇರುಂ ಮನ್ದರಮೇವ ವಾ ।
ಮಹೇಶ್ವರಗೃಹಪ್ರಖ್ಯಂ ಗೃಹಂ ನಃ ಕ್ರಿಯತಾಂ ಮಹತ್ ॥21॥

ವಿಶ್ವಕರ್ಮಾ ತತಸ್ತೇಷಾಂ ರಾಕ್ಷಸಾನಾಂ ಮಹಾಭುಜಃ ।
ನಿವಾಸಂ ಕಥಯಾಮಾಸ ಶಕ್ರಸ್ಯೇವಾಮರಾವತೀಮ್ ॥22॥

ದಕ್ಷಿಣಸ್ಯೋದಧೇಸ್ತೀರೇ ತ್ರಿಕೂಟೋ ನಾಮ ಪರ್ವತಃ ।
ಸುವೇಲ ಇತಿ ಚಾಪ್ಯನ್ಯೋ ದ್ವಿತೀಯೋ ರಾಕ್ಷಸೇಶ್ವರಃ ॥23॥

ಶಿಖರೇ ತಸ್ಯ ಶೈಲಸ್ಯ ಮಧ್ಯಮೇಽಮ್ಬುದಸಂನಿಭೇ ।
ಶಕುನೈರಪಿ ದುಷ್ಪ್ರಾಪೇ ಟಙ್ಕಚ್ಛಿನ್ನಚತುರ್ದಿಶಿ ॥24॥

ತ್ರಿಂಶದ್ಯೋಜನವಿಸ್ತೀರ್ಣಾ ಶತಯೋಜನಮಾಯತಾ ।
ಸ್ವರ್ಣಪ್ರಾಕಾರಸಂವೀತಾ ಹೇಮತೋರಣಸಂವೃತಾ ॥25॥

ಮಯಾ ಲಙ್ಕೇತಿ ನಗರೀ ಶಕ್ರಾಜ್ಞಪ್ತೇನ ನಿರ್ಮಿತಾ ।
ತಸ್ಯಾಂ ವಸತ ದುರ್ಧರ್ಷಾ ಯೂಯಂ ರಾಕ್ಷಸಪುಙ್ಗವಾಃ ॥26॥

ಅಮರಾವತೀಂ ಸಮಾಸಾದ್ಯ ಸೇನ್ದ್ರಾ ಇವ ದಿವೌಕಸಃ ।
ಲಙ್ಕಾದುರ್ಗಂ ಸಮಾಸಾದ್ಯ ರಾಕ್ಷಸೈರ್ಬಹುಭಿರ್ವೃತಾಃ ॥27॥

ಭವಿಷ್ಯಥ ದುರಾಧರ್ಷಾಃ ಶತ್ರೂಣಾಂ ಶತ್ರುಸೂದನಾಃ ।
ವಿಶ್ವಕರ್ಮವಚಃ ಶ್ರುತ್ವಾ ತತಸ್ತೇ ರಾಕ್ಷಸೋತ್ತಮಾಃ ॥28॥

ಸಹಸ್ರಾನುಚರಾ ಭೂತ್ವಾ ಗತ್ವಾ ತಾಮವಸನ್ಪುರೀಮ್ ।
ದೃಢಪ್ರಾಕಾರಪರಿಖಾಂ ಹೈಮೈರ್ಗೃಹಶತೈರ್ವೃತಾಮ್ ॥29॥

ಲಙ್ಕಾಮವಾಪ್ಯ ತೇ ಹೃಷ್ಟಾ ನ್ಯವಸನ್ರಜನೀಚರಾಃ ।
ಏತಸ್ಮಿನ್ನೇವ ಕಾಲೇ ತು ಯಥಾಕಾಮಂ ಚ ರಾಘವ ॥30॥

ನರ್ಮದಾ ನಾಮ ಗನ್ಧರ್ವೀ ಬಭೂವ ರಘುನನ್ದನ ।
ತಸ್ಯಾಃ ಕನ್ಯಾತ್ರಯಂ ಹ್ಯಾಸೀದ್ಧ್ರೀಶ್ರೀಕೀರ್ತಿಸಮದ್ಯುತಿ ॥31॥

ಜ್ಯೇಷ್ಠಕ್ರಮೇಣ ಸಾ ತೇಷಾಂ ರಾಕ್ಷಸಾನಾಮರಾಕ್ಷಸೀ ।
ಕನ್ಯಾಸ್ತಾಃ ಪ್ರದದೌ ಹೃಷ್ಟಾಃ ಪೂರ್ಣಚನ್ದ್ರನಿಭಾನನಾಃ ॥32॥

ತ್ರಯಾಣಾಂ ರಾಕ್ಷಸೇನ್ದ್ರಾಣಾಂ ತಿಸ್ರೋ ಗನ್ಧರ್ವಕನ್ಯಕಾಃ ।
ದತ್ತಾ ಮಾತ್ರಾ ಮಹಾಭಾಗಾ ನಕ್ಷತ್ರೇ ಭಗದೈವತೇ ॥33॥

ಕೃತದಾರಾಸ್ತು ತೇ ರಾಮ ಸುಕೇಶತನಯಾಸ್ತದಾ ।
ಚಿಕ್ರೀಡುಃ ಸಹ ಭಾರ್ಯಾಭಿರಪ್ಸರೋಭಿರಿವಾಮರಾಃ ॥34॥

ತತೋ ಮಾಲ್ಯವತೋ ಭಾರ್ಯಾ ಸುನ್ದರೀ ನಾಮ ಸುನ್ದರೀ ।
ಸ ತಸ್ಯಾಂ ಜನಯಾಮಾಸ ಯದಪತ್ಯಂ ನಿಬೋಧ ತತ್ ॥35॥

ವಜ್ರಮುಷ್ಟಿರ್ವಿರೂಪಾಕ್ಷೋ ದುರ್ಮುಖಶ್ಚೈವ ರಾಕ್ಷಸಃ ॥36॥

ಸುಪ್ತಘ್ನೋ ಯಜ್ಞಕೋಪಶ್ಚ ಮತ್ತೋನ್ಮತ್ತೌ ತಥೈವ ಚ ।
ಅನಲಾ ಚಾಭವತ್ಕನ್ಯಾ ಸುನ್ದರ್ಯಾಂ ರಾಮ ಸುನ್ದರೀ ॥37॥

ಸುಮಾಲಿನೋಽಪಿ ಭಾರ್ಯಾಸೀತ್ಪೂರ್ಣಚನ್ದ್ರನಿಭಾನನಾ ।
ನಾಮ್ನಾ ಕೇತುಮತೀ ನಾಮ ಪ್ರಾಣೇಭ್ಯೋಽಪಿ ಗರೀಯಸೀ ॥38॥

ಸುಮಾಲೀ ಜನಯಾಮಾಸ ಯದಪತ್ಯಂ ನಿಶಾಚರಃ ।
ಕೇತುಮತ್ಯಾಂ ಮಹಾರಾಜ ತನ್ನಿಬೋಧಾನುಪೂರ್ವಶಃ ॥39॥

ಪ್ರಹಸ್ತೋಽಕಮ್ಪನಶ್ಚೈವ ವಿಕಟಃ ಕಾಲಿಕಾಮುಖಃ ।
ಧೂಮ್ರಾಕ್ಷಶ್ಚೈವ ದಣ್ಡಶ್ಚ ಸುಪಾರ್ಶ್ವಶ್ಚ ಮಹಾಬಲಃ ॥40॥

ಸಂಹ್ರಾದಿಃ ಪ್ರಘಸಶ್ಚೈವ ಭಾಸಕರ್ಣಶ್ಚ ರಾಕ್ಷಸಃ ।
ರಾಕಾ ಪುಷ್ಪೋತ್ಕಟಾ ಚೈವ ಕೈಕಸೀ ಚ ಶುಚಿಸ್ಮಿತಾಃ ॥41॥

ಕುಮ್ಭೀನಸೀ ಚ ಇತ್ಯೇತೇ ಸುಮಾಲೇಃ ಪ್ರಸವಾಃಸ್ಮೃತಾಃ ॥42॥

ಮಾಲೇಸ್ತು ವಸುದಾ ನಾಮ ಗನ್ಧರ್ವೀ ರೂಪಶಾಲಿನೀ ।
ಭಾರ್ಯಾಸೀತ್ಪದ್ಮಪತ್ರಾಕ್ಷೀ ಸ್ವಕ್ಷೀ ಯಕ್ಷೀವರೋಪಮಾ ॥43॥

ಸುಮಾಲೇರನುಜಸ್ತಸ್ಯಾಂ ಜನಯಾಮಾಸ ಯತ್ಪ್ರಭೋ ।
ಅಪತ್ಯಂ ಕಥ್ಯಮಾನಂ ತು ಮಯಾ ತ್ವಂ ಶೃಣು ರಾಘವ ॥44॥

ಅನಲಶ್ಚಾನಿಲಶ್ಚೈವ ಹರಃ ಸಮ್ಪಾತಿರೇವ ಚ ।
ಏತೇ ವಿಭೀಷಣಾಮಾತ್ಯಾ ಮಾಲೇಯಾಸ್ತೇ ನಿಶಾಚರಾಃ ॥45॥

ತತಸ್ತು ತೇ ರಾಕ್ಷಸಪುಂಗವಾಸ್ತ್ರಯೋ
ನಿಶಾಚರೈಃ ಪುತ್ರಶತೈಶ್ಚ ಸಂವೃತಾಃ ।
ಸುರಾನ್ಸಹೇನ್ದ್ರಾನೃಷಿನಾಗಯಕ್ಷಾ-
ನ್ಬಬಾಧಿರೇ ತಾನ್ಬಹುವೀರ್ಯದರ್ಪಿತಾಃ ॥46॥

ಜಗದ್ಭ್ರಮನ್ತೋಽನಿಲವದ್ದುರಾಸದಾ
ರಣೇಷು ಮೃತ್ಯುಪ್ರತಿಮಾನತೇಜಸಃ ।
ವರಪ್ರದಾನಾದಪಿ ಗರ್ವಿತಾ ಭೃಶಂ
ಕ್ರತುಕ್ರಿಯಾಣಾಂ ಪ್ರಶಮಂಕರಾಃ ಸದಾ ॥47॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಪಞ್ಚಮಃ ಸರ್ಗಃ

ಷಷ್ಠಃ ಸರ್ಗಃ

ತೈರ್ವಧ್ಯಮಾನಾ ದೇವಾಶ್ಚ ಋಷಯಶ್ಚ ತಪೋಧನಾಃ ।
ಭಯಾರ್ತಾಃ ಶರಣಂ ಜಗ್ಮುರ್ದೇವದೇವಂ ಮಹೇಶ್ವರಮ್ ॥1॥

ಜಗತ್ಸೃಷ್ಟ್ಯನ್ತಕರ್ತಾರಮಜಮವ್ಯಕ್ತರೂಪಿಣಮ್ ।
ಆಧಾರಂ ಸರ್ವಲೋಕಾನಾಮಾರಾಧ್ಯಂ ಪರಮಂ ಗುರುಮ್ ॥2॥

ತೇ ಸಮೇತ್ಯ ತು ಕಾಮಾರಿಂ ತ್ರಿಪುರಾರಿಂ ತ್ರಿಲೋಚನಮ್ ।
ಊಚುಃ ಪ್ರಾಞ್ಜಲಯೋ ದೇವಾ ಭಯಗದ್ಗದಭಾಷಿಣಃ ॥3॥

ಸುಕೇಶಪುತ್ರೈರ್ಭಗವನ್ಪಿತಾಮಹವರೋದ್ಧತೈಃ ।
ಪ್ರಜಾಧ್ಯಕ್ಷ ಪ್ರಜಾಃ ಸರ್ವಾ ಬಾಧ್ಯನ್ತೇ ರಿಪುಬಾಧನೈಃ ॥4॥

ಶರಣ್ಯಾನ್ಯಶರಣ್ಯಾನಿ ಹ್ಯಾಶ್ರಮಾಣಿ ಕೃತಾನಿ ನಃ ।
ಸ್ವರ್ಗಾಚ್ಚ ದೇವಾನ್ಪ್ರಚ್ಯಾವ್ಯ ಸ್ವರ್ಗೇ ಕ್ರೀಡನ್ತಿ ದೇವವತ್ ॥5॥

ಅಹಂ ವಿಷ್ಣುರಹಂ ರುದ್ರೋ ಬ್ರಹ್ಮಾಹಂ ದೇವರಾಡಹಮ್।
ಅಹಂ ಯಮಶ್ಚ ವರುಣಶ್ಚನ್ದ್ರೋಽಹಂ ರವಿರಪ್ಯಹಮ್ ॥6॥

ಇತಿ ಮಾಲೀ ಸುಮಾಲೀ ಚ ಮಾಲ್ಯವಾಂಶ್ಚೈವ ರಾಕ್ಷಸಾಃ ।
ಬಾಧನ್ತೇ ಸಮರೋದ್ಧರ್ಷಾ ಯೇ ಚ ತೇಷಾಂ ಪುರಃಸರಾಃ ॥7॥

ತನ್ನೋ ದೇವ ಭಯಾರ್ತಾನಾಮಭಯಂ ದಾತುಮರ್ಹಸಿ ।
ಅಶಿವಂ ವಪುರಾಸ್ಥಾಯ ಜಹಿ ವೈ ದೇವಕಣ್ಟಕಾನ್ ॥8॥

ಇತ್ಯುಕ್ತಸ್ತು ಸುರೈಃ ಸರ್ವೈಃ ಕಪರ್ದೀ ನೀಲಲೋಹಿತಃ ।
ಸುಕೇಶಂ ಪ್ರತಿ ಸಾಪೇಕ್ಷಃ ಪ್ರಾಹ ದೇವಗಣಾನ್ಪ್ರಭುಃ ॥9॥

ಅಹಂ ತಾನ್ನ ಹನಿಷ್ಯಾಮಿ ಮಮಾವಧ್ಯಾ ಹಿ ತೇಽಸುರಾಃ ।
ಕಿಂತು ಮನ್ತ್ರಂ ಪ್ರದಾಸ್ಯಾಮಿ ಯೋ ವೈ ತಾನ್ ನಿಹನಿಷ್ಯತಿ ॥10॥

ಏತಮೇವ ಸಮುದ್ಯೋಗಂ ಪುರಸ್ಕೃತ್ಯ ಮಹರ್ಷಯಃ ।
ಗಚ್ಛಧ್ವಂ ಶರಣಂ ವಿಷ್ಣುಂ ಹನಿಷ್ಯತಿ ಸ ತಾನ್ಪ್ರಭುಃ ॥11॥

ತತಸ್ತು ಜಯಶಬ್ದೇನ ಪ್ರತಿನನ್ದ್ಯ ಮಹೇಶ್ವರಮ್ ।
ವಿಷ್ಣೋಃ ಸಮೀಪಮಾಜಗ್ಮುರ್ನಿಶಾಚರಭಯಾರ್ದಿತಾಃ ॥12॥

ಶಙ್ಖಚಕ್ರಧರಂ ದೇವಂ ಪ್ರಣಮ್ಯ ಬಹುಮಾನ್ಯ ಚ ।
ಊಚುಃ ಸಮ್ಭ್ರಾನ್ತವದ್ವಾಕ್ಯಂ ಸುಕೇಶತನಯಾನ್ಪ್ರತಿ ॥13॥

ಸುಕೇಶತನಯೈರ್ದೇವ ತ್ರಿಭಿಸ್ತ್ರೇತಾಗ್ನಿಸಂನಿಭೈಃ ।
ಆಕ್ರಮ್ಯ ವರದಾನೇನ ಸ್ಥಾನಾನ್ಯಪಹೃತಾನಿ ನಃ ॥14॥

ಲಙ್ಕಾ ನಾಮ ಪುರೀ ದುರ್ಗಾ ತ್ರಿಕೂಟಶಿಖರೇ ಸ್ಥಿತಾ ।
ತತ್ರ ಸ್ಥಿತಾಃ ಪ್ರಬಾಧನ್ತೇ ಸರ್ವಾನ್ನಃ ಕ್ಷಣದಾಚರಾಃ ॥15॥

ಸ ತ್ವಮಸ್ಮದ್ಧಿತಾರ್ಥಾಯ ಜಹಿ ತಾನ್ಮಧುಸೂದನ ।
ಶರಣಂ ತ್ವಾಂ ವಯಂ ಪ್ರಾಪ್ತಾ ಗತಿರ್ಭವ ಸುರೇಶ್ವರ ॥16॥

ಚಕ್ರಕೃತ್ತಾಸ್ಯಕಮಲಾನ್ನಿವೇದಯ ಯಮಾಯ ವೈ ।
ಭಯೇಷ್ವಭಯದೋಽಸ್ಮಾಕಂ ನಾನ್ಯೋಽಸ್ತಿ ಭವತಾ ವಿನಾ ॥17॥

ರಾಕ್ಷಸಾನ್ಸಮರೇ ಹೃಷ್ಟಾನ್ಸಾನುಬನ್ಧಾನ್ಮದೋದ್ಧತಾನ್ ।
ನುದ ತ್ವಂ ನೋ ಭಯಂ ದೇವ ನೀಹಾರಮಿವ ಭಾಸ್ಕರಃ ॥18॥

ಇತ್ಯೇವಂ ದೈವತೈರುಕ್ತೋ ದೇವದೇವೋ ಜನಾರ್ದನಃ ।
ಅಭಯಂ ಭಯದೋಽರೀಣಾಂ ದತ್ತ್ವಾ ದೇವಾನುವಾಚ ಹ ॥19॥

ಸುಕೇಶಂ ರಾಕ್ಷಸಂ ಜಾನೇ
ಈಶಾನವರದರ್ಪಿತಮ್ ।
ತಾಂಶ್ಚಾಸ್ಯ ತನಯಾಞ್ಜಾನೇ
ಯೇಷಾಂ ಜ್ಯೇಷ್ಠಃ ಸ ಮಾಲ್ಯವಾನ್ ॥20॥

ತಾನಹಂ ಸಮತಿಕ್ರಾನ್ತಮರ್ಯಾದಾನ್ರಾಕ್ಷಸಾಧಮಾನ್ ।
ನಿಹನಿಷ್ಯಾಮಿ ಸಂಕ್ರುದ್ಧಃ ಸುರಾ ಭವತ ವಿಜ್ವರಾಃ ॥21॥

ಇತ್ಯುಕ್ತಾಸ್ತೇ ಸುರಾಃ ಸರ್ವೇ
ವಿಷ್ಣುನಾ ಪ್ರಭವಿಷ್ಣುನಾ ।
ಯಥಾವಾಸಂ ಯಯುರ್ಹೃಷ್ಟಾಃ
ಪ್ರಶಂಸನ್ತೋ ಜನಾರ್ದನಮ್ ॥22॥

ವಿಬುಧಾನಾಂ ಸಮುದ್ಯೋಗಂ ಮಾಲ್ಯವಾಂಸ್ತು ನಿಶಾಚರಃ ।
ಶ್ರುತ್ವಾ ತೌ ಭ್ರಾತರೌ ವೀರಾವಿದಂ ವಚನಮಬ್ರವೀತ್ ॥23॥

ಅಮರಾ ಋಷಯಶ್ಚೈವ ಸಂಗಮ್ಯ ಕಿಲ ಶಂಕರಮ್ ।
ಅಸ್ಮದ್ವಧಂ ಪರೀಪ್ಸನ್ತ ಇದಂ ವಚನಮಬ್ರುವನ್ ॥24॥

ಸುಕೇಶತನಯಾ ದೇವ ವರದಾನಬಲೋದ್ಧತಾಃ ।
ಬಾಧನ್ತೇಽಸ್ಮಾನ್ಸಮುದ್ದೃಪ್ತಾ ಘೋರರೂಪಾಃ ಪದೇ ಪದೇ ॥25॥

ರಾಕ್ಷಸೈರಭಿಭೂತಾಃ ಸ್ಮೋ ನ ಶಕ್ತಾಃ ಸ್ಮ ಪ್ರಜಾಪತೇ ।
ಸ್ವೇಷು ಸದ್ಮಸು ಸಂಸ್ಥಾತುಂ ಭಯಾತ್ತೇಷಾಂ ದುರಾತ್ಮನಾಮ್ ॥26॥

ತದಸ್ಮಾಕಂ ಹಿತಾರ್ಥಾಯ ಜಹಿ ತಾಂಶ್ಚ ತ್ರಿಲೋಚನ ।
ರಾಕ್ಷಸಾನ್ ಹುಂಕೃತೇನೈವ ದಹ ಪ್ರದಹತಾಂ ವರ ॥27॥

ಇತ್ಯೇವಂ ತ್ರಿದಶೈರುಕ್ತೋ ನಿಶಮ್ಯಾನ್ಧಕಸೂದನಃ ।
ಶಿರಃ ಕರಂ ಚ ಧುನ್ವಾನ ಇದಂ ವಚನಮಬ್ರವೀತ್ ॥28॥

ಅವಧ್ಯಾ ಮಮ ತೇ ದೇವಾಃ ಸುಕೇಶತನಯಾ ರಣೇ ।
ಮನ್ತ್ರಂ ತು ವಃ ಪ್ರದಾಸ್ಯಾಮಿ ಯಸ್ತಾನ್ವೈ ನಿಹನಿಷ್ಯತಿ ॥29॥

ಯೋಽಸೌ ಚಕ್ರಗದಾಪಾಣಿಃ ಪೀತವಾಸಾ ಜನಾರ್ದನಃ ।
ಹರಿರ್ನಾರಾಯಣಃ ಶ್ರೀಮಾನ್ ಶರಣಂ ತಂ ಪ್ರಪದ್ಯಥ ॥30॥

ಹರಾದವಾಪ್ಯ ತೇ ಮನ್ತ್ರಂ ಕಾಮಾರಿಮಭಿವಾದ್ಯ ಚ ।
ನಾರಾಯಣಾಲಯಂ ಪ್ರಾಪ್ಯ ತಸ್ಮೈ ಸರ್ವಂ ನ್ಯವೇದಯನ್ ॥31॥

ತತೋ ನಾರಾಯಣೇನೋಕ್ತಾ ದೇವಾ ಇನ್ದ್ರಪುರೋಗಮಾಃ ।
ಸುರಾರೀಂಸ್ತಾನ್ಹನಿಷ್ಯಾಮಿ ಸುರಾ ಭವತ ನಿರ್ಭಯಾಃ ॥32॥

ದೇವಾನಾಂ ಭಯಭೀತಾನಾಂ ಹರಿಣಾ ರಾಕ್ಷಸರ್ಷಭೌ ।
ಪ್ರತಿಜ್ಞಾತೋ ವಧೋಽಸ್ಮಾಕಂ ಚಿನ್ತ್ಯತಾಂ ಯದಿಹ ಕ್ಷಮಮ್ ॥33॥

ಹಿರಣ್ಯಕಶಿಪೋರ್ಮೃತ್ಯುರನ್ಯೇಷಾಂ ಚ ಸುರದ್ವಿಷಾಮ್ ।
ನಮುಚಿಃ ಕಾಲನೇಮಿಶ್ಚ ಸಂಹ್ರಾದೋ ವೀರಸತ್ತಮಃ ॥34॥

ರಾಧೇಯೋ ಬಹುಮಾಯೀ ಚ ಲೋಕಪಾಲೋಽಥ ಧಾರ್ಮಿಕಃ ।
ಯಮಲಾರ್ಜುನೌ ಚ ಹಾರ್ದಿಕ್ಯಃ ಶುಮ್ಭಶ್ಚೈವ ನಿಶುಮ್ಭಕಃ ॥35॥

ಅಸುರಾ ದಾನವಾಶ್ಚೈವ ಸತ್ತ್ವವನ್ತೋ ಮಹಾಬಲಾಃ ।
ಸರ್ವೇ ಸಮರಮಾಸಾದ್ಯ ನ ಶ್ರೂಯನ್ತೇಽಪರಾಜಿತಾಃ ॥36॥

ಸರ್ವೈಃ ಕ್ರತುಶತೈರಿಷ್ಟಂ ಸರ್ವೇ ಮಾಯಾವಿದಸ್ತಥಾ ।
ಸರ್ವೇ ಸರ್ವಾಸ್ತ್ರಕುಶಲಾಃ ಸರ್ವೇ ಶತ್ರುಭಯಂಕರಾಃ ॥37॥

ನಾರಾಯಣೇನ ನಿಹತಾಃ ಶತಶೋಽಥ ಸಹಸ್ರಶಃ ।
ಏತತ್ ಜ್ಞಾತ್ವಾ ತು ಸರ್ವೇಷಾಂ ಕ್ಷಮಂ ಕರ್ತುಮಿಹಾರ್ಹಥ ।
ದುಃಖಂ ನಾರಾಯಣಂ ಜೇತುಂ ಯೋ ನೋ ಹನ್ತುಮಿಹೇಚ್ಛತಿ ॥38॥

ತತಃ ಸುಮಾಲೀ ಮಾಲೀ ಚ ಶ್ರುತ್ವಾ ಮಾಲ್ಯವತೋ ವಚಃ ।
ಊಚತುರ್ಭ್ರಾತರಂ ಜ್ಯೇಷ್ಠಮಶ್ವಿನಾವಿವ ವಾಸವಮ್ ॥39॥

ಸ್ವಧೀತಂ ದತ್ತಮಿಷ್ಟಂ ಚ ಐಶ್ವರ್ಯಂ ಪರಿಪಾಲಿತಮ್ ।
ಆಯುರ್ನಿರಾಮಯಂ ಪ್ರಾಪ್ತಂ ಸುಧರ್ಮಃ ಸ್ಥಾಪಿತಃ ಪಥಿ ॥40॥

ದೇವಸಾಗರಮಕ್ಷೋಭ್ಯಂ ಶಸ್ತ್ರೈಃ ಸಮವಗಾಹ್ಯ ಚ ।
ಜಿತಾ ದ್ವಿಷೋ ಹ್ಯಪ್ರತಿಮಾಸ್ತನ್ನೋ ಮೃತ್ಯುಕೃತಂ ಭಯಮ್ ॥41॥

ನಾರಾಯಣಶ್ಚ ರುದ್ರಶ್ಚ ಶಕ್ರಶ್ಚಾಪಿ ಯಮಸ್ತಥಾ ।
ಅಸ್ಮಾಕಂ ಪ್ರಮುಖೇ ಸ್ಥಾತುಂ ಸರ್ವೇ ಬಿಭ್ಯತಿ ಸರ್ವದಾ ॥42॥

ವಿಷ್ಣೋರ್ದ್ವೇಷಸ್ಯ ನಾಸ್ತ್ಯೇವ ಕಾರಣಂ ರಾಕ್ಷಸೇಶ್ವರ ।
ದೇವಾನಾಮೇವ ದೋಷೇಣ ವಿಷ್ಣೋಃ ಪ್ರಚಲಿತಂ ಮನಃ ॥43॥

ತಸ್ಮಾದದ್ಯೈವ ಸಹಿತಾಃ ಸರ್ವೇಽನ್ಯೋನ್ಯಸಮಾವೃತಾಃ ।
ದೇವಾನೇವ ಜಿಘಾಂಸಾಮೋ ಯೇಭ್ಯೋ ದೋಷಃ ಸಮುತ್ಥಿತಃ ॥44॥

ಏವಂ ಸಮ್ಮನ್ತ್ರ್ಯ ಬಲಿನಃ ಸರ್ವಸೈನ್ಯಸಮಾವೃತಾಃ ।
ಉದ್ಯೋಗಂ ಘೋಷಯಿತ್ವಾ ತು ಸರ್ವೇ ನೈರ್ಋತಪುಙ್ಗವಾಃ ।
ಯುದ್ಧಾಯ ನಿರ್ಯಯುಃ ಕ್ರುದ್ಧಾ
ಜಮ್ಭವೃತ್ರಾದಯೋ ಯಥಾ ॥45॥

ಇತಿ ತೇ ರಾಮ ಸಮ್ಮನ್ತ್ರ್ಯ ಸರ್ವೋದ್ಯೋಗೇನ ರಾಕ್ಷಸಾಃ ।
ಯುದ್ಧಾಯ ನಿರ್ಯಯುಃ ಸರ್ವೇ ಮಹಾಕಾಯಾ ಮಹಾಬಲಾಃ ॥46॥

ಸ್ಯನ್ದನೈರ್ವಾರಣೈಶ್ಚೈವ ಹಯೈಶ್ಚ ಕರಿಸಂನಿಭೈಃ ।
ಖರೈರ್ಗೋಭಿರಥೋಷ್ಟ್ರೈಶ್ಚ ಶಿಶುಮಾರೈರ್ಭುಜಙ್ಗಮೈಃ ॥47॥

ಮಕರೈಃ ಕಚ್ಛಪೈರ್ಮೀನೈರ್ವಿಹಂಗೈರ್ಗರುಡೋಪಮೈಃ ।
ಸಿಂಹೈರ್ವ್ಯಾಘ್ರೈರ್ವರಾಹೈಶ್ಚ ಸೃಮರೈಶ್ಚಮರೈರಪಿ ॥48॥

ತ್ಯಕ್ತ್ವಾ ಲಙ್ಕಾಂ ಗತಾಃ ಸರ್ವೇ ರಾಕ್ಷಸಾ ಬಲಗರ್ವಿತಾಃ ।
ಪ್ರಯಾತಾ ದೇವಲೋಕಾಯ ಯೋದ್ಧುಂ ದೈವತಶತ್ರವಃ ॥49॥

ಲಙ್ಕಾವಿಪರ್ಯಯಂ ದೃಷ್ಟ್ವಾ ಯಾನಿ ಲಙ್ಕಾಲಯಾನ್ಯಥ ।
ಭೂತಾನಿ ಭಯದರ್ಶೀನಿ ವಿಮನಸ್ಕಾನಿ ಸರ್ವತಃ ॥50॥

ರಥೋತ್ತಮೈರುಹ್ಯಮಾನಾಃ ಶತಶೋಽಥ ಸಹಸ್ರಶಃ ।
ಪ್ರಯಾತಾ ರಾಕ್ಷಸಾಸ್ತೂರ್ಣಂ ದೇವಲೋಕಂ ಪ್ರಯತ್ನತಃ ॥51॥

ರಕ್ಷಸಾಮೇವ ಮಾರ್ಗೇಣ ದೈವತಾನ್ಯಪಚಕ್ರಮುಃ ॥52॥

ಭೌಮಾಶ್ಚೈವಾನ್ತರಿಕ್ಷಾಶ್ಚ ಕಾಲಾಜ್ಞಪ್ತಾ ಭಯಾವಹಾಃ ।
ಉತ್ಪಾತಾ ರಾಕ್ಷಸೇನ್ದ್ರಾಣಾಮಭಾವಾಯ ಸಮುತ್ಥಿತಾಃ ॥53॥

ಅಸ್ಥೀನಿ ಮೇಘಾ ವವೃಷುರುಷ್ಣಂ ಶೋಣಿತಮೇವ ಚ ।
ವೇಲಾಂ ಸಮುದ್ರಾಶ್ಚೋತ್ಕ್ರಾನ್ತಾಶ್ಚೇಲುಶ್ಚಾಪ್ಯಥ ಭೂಧರಾಃ ॥54॥

ಅಟ್ಟಹಾಸಾನ್ವಿಮುಞ್ಚನ್ತೋ ಘನನಾದಸಮಸ್ವನಾಃ ।
ವಾಶ್ಯನ್ತ್ಯಶ್ಚ ಶಿವಾಸ್ತತ್ರ ದಾರುಣಂ ಘೋರದರ್ಶನಾಃ ॥55॥

ಸಮ್ಪತನ್ತ್ಯಥ ಭೂತಾನಿ ದೃಶ್ಯನ್ತೇ ಚ ಯಥಾಕ್ರಮಮ್ ।
ಗೃಧ್ರಚಕ್ರಂ ಮಹಚ್ಚಾತ್ರ ಪ್ರಜ್ವಾಲೋದ್ಗಾರಿಭಿರ್ಮುಖೈಃ ।
ರಕ್ಷೋಗಣಸ್ಯೋಪರಿಷ್ಟಾತ್ಪರಿಭ್ರಮತಿ ಕಾಲವತ್ ॥56॥

ಕಪೋತಾ ರಕ್ತಪಾದಾಶ್ಚ ಸಾರಿಕಾ ವಿದ್ರುತಾ ಯಯುಃ ।
ಕಾಕಾ ವಾಶ್ಯನ್ತಿ ತತ್ರೈವ ಬಿಡಾಲಾ ವೈ ದ್ವಿಪಾದಯಃ ॥57॥

ಉತ್ಪಾತಾಂಸ್ತಾನನಾದೃತ್ಯ ರಾಕ್ಷಸಾ ಬಲದರ್ಪಿತಾಃ ।
ಯಾನ್ತ್ಯೇವ ನ ನಿವರ್ತನ್ತೇ ಮೃತ್ಯುಪಾಶಾವಪಾಶಿತಾಃ ॥58॥

ಮಾಲ್ಯವಾಂಶ್ಚ ಸುಮಾಲೀ ಚ ಮಾಲೀ ಚ ಸುಮಹಾಬಲಃ ।
ಪುರಃಸರಾ ರಾಕ್ಷಸಾನಾಂ ಜ್ವಲಿತಾ ಇವ ಪಾವಕಾಃ ॥59॥

ಮಾಲ್ಯವನ್ತಂ ತು ತೇ ಸರ್ವೇ ಮಾಲ್ಯವನ್ತಮಿವಾಚಲಮ್ ।
ನಿಶಾಚರಾ ಆಶ್ರಯನ್ತಿ ಧಾತಾರಮಿವ ದೇವತಾಃ ॥60॥

ತದ್ಬಲಂ ರಾಕ್ಷಸೇನ್ದ್ರಾಣಾಂ ಮಹಾಭ್ರಘನನಾದಿತಮ್ ।
ಜಯೇಪ್ಸಯಾ ದೇವಲೋಕಂ ಯಯೌ ಮಾಲಿವಶೇ ಸ್ಥಿತಮ್ ॥61॥

ರಾಕ್ಷಸಾನಾಂ ಸಮುದ್ಯೋಗಂ ತಂ ತು ನಾರಾಯಣಃ ಪ್ರಭುಃ ।
ದೇವದೂತಾದುಪಶ್ರುತ್ಯ ಚಕ್ರೇ ಯುದ್ಧೇ ತದಾ ಮನಃ ॥62॥

ಸ ಸಜ್ಜಾಯುಧತೂಣೀರೋ ವೈನತೇಯೋಪರಿ ಸ್ಥಿತಃ ।
ಆಸಾದ್ಯ ಕವಚಂ ದಿವ್ಯಂ ಸಹಸ್ರಾರ್ಕಸಮದ್ಯುತಿ ॥63॥

ಆಬಧ್ಯ ಶರಸಂಪೂರ್ಣೇ ಇಷುಧೀ ವಿಮಲೇ ತದಾ ।
ಶ್ರೋಣಿಸೂತ್ರಂ ಚ ಖಡ್ಗಂ ಚ ವಿಮಲಂ ಕಮಲೇಕ್ಷಣಃ ॥64॥

ಶಙ್ಖಚಕ್ರಗದಾಶಾರ್ಙ್ಗಖಡ್ಗಾಂಶ್ಚೈವ ವರಾಯುಧಾನ್ ।
ಸುಪರ್ಣಂ ಗಿರಿಸಂಕಾಶಂ ವೈನತೇಯಮಥಾಸ್ಥಿತಃ ॥65॥

ರಾಕ್ಷಸಾನಾಮಭಾವಾಯ ಯಯೌ ತೂರ್ಣತರಂ ಪ್ರಭುಃ ॥66॥

ಸುಪರ್ಣಪೃಷ್ಠೇ ಸ ಬಭೌ ಶ್ಯಾಮಃ ಪೀತಾಮ್ಬರೋ ಹರಿಃ ।
ಕಾಞ್ಚನಸ್ಯ ಗಿರೇಃ ಶೃಙ್ಗೇ ಸತಡಿತ್ತೋಯದೋ ಯಥಾ ॥67॥

ಸ ಸಿದ್ಧದೇವರ್ಷಿಮಹೋರಗೈಶ್ಚ
ಗನ್ಧರ್ವಯಕ್ಷೈರುಪಗೀಯಮಾನಃ ।
ಸಮಾಸಸಾದಾಸುರಸೈನ್ಯಶತ್ರು-
ಶ್ಚಕ್ರಾಸಿಶಾರ್ಙ್ಗಾಯುಧಶಙ್ಖಪಾಣಿಃ ॥68॥

ಸುಪರ್ಣಪಕ್ಷಾನಿಲನುನ್ನಪಕ್ಷಂ
ಭ್ರಮತ್ಪತಾಕಂ ಪ್ರವಿಕೀರ್ಣಶಸ್ತ್ರಮ್ ।

ಚಚಾಲ ತದ್ರಾಕ್ಷಸರಾಜಸೈನ್ಯಂ
ಚಲೋಪಲಂ ನೀಲಮಿವಾಚಲಾಗ್ರಮ್ ॥ 69॥

ತತಃ ಶಿತೈಃ ಶೋಣಿತಮಾಂಸರೂಷಿತೈ-
ರ್ಯುಗಾನ್ತವೈಶ್ವಾನರತುಲ್ಯವಿಗ್ರಹೈಃ ।
ನಿಶಾಚರಾಃ ಸಂಪರಿವಾರ್ಯ ಮಾಧವಂ
ವರಾಯುಧೈರ್ನಿರ್ಬಿಭಿದುಃ ಸಹಸ್ರಶಃ ॥70॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಷಷ್ಠಃ ಸರ್ಗಃ

ಸಪ್ತಮಃ ಸರ್ಗಃ

ನಾರಾಯಣಗಿರಿಂ ತೇ ತು ಗರ್ಜನ್ತೋ ರಾಕ್ಷಸಾಮ್ಬುದಾಃ ।
ವವೃಷುರಸ್ತ್ರವರ್ಷೇಣ ವರ್ಷೇಣೇವಾದ್ರಿಮಮ್ಬುದಾಃ ॥1॥

ಶ್ಯಾಮಾವದಾತಸ್ತೈರ್ವಿಷ್ಣುರ್ನೀಲೈರ್ನಕ್ತಂಚರೋತ್ತಮೈಃ ।
ವೃತೋಽಞ್ಜನಗಿರೀವಾಯಂ ವರ್ಷಮಾಣೈಃ ಪಯೋಧರೈಃ ॥2॥

ಶಲಭಾ ಇವ ಕೇದಾರಂ ಮಶಕಾ ಇವ ಪಾವಕಮ್ ।
ಯಥಾಮೃತಘಟಂ ದಂಶಾ ಮಕರಾ ಇವ ಚಾರ್ಣವಮ್ ॥3॥

ತಥಾ ರಕ್ಷೋಧನುರ್ಮುಕ್ತಾ ವಜ್ರನೀಲಮನೋಜವಾಃ ।
ಹರಿಂ ವಿಶನ್ತಿ ಸ್ಮ ಶರಾ ಲೋಕಾ ಇವ ವಿಪರ್ಯಯೇ ॥4॥

ಸ್ಯನ್ದನೈಃ ಸ್ಯನ್ದನಗತಾ ಗಜೈಶ್ಚ ಗಜಮೂರ್ಧಗಾಃ ।
ತಸ್ಯ ತಾಂ ಪಾರ್ಥಿವೇನ್ದ್ರಸ್ಯ ಕಥಾಂ ಶ್ರುತ್ವಾ ಸುದಾರುಣಾಮ್ ।
ವಿವೇಶ ಪರ್ಣಶಾಲಾಯಾಂ ಮಹರ್ಷಿಮಭಿವಾದ್ಯ ಚ ॥39॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಪಞ್ಚಷಷ್ಟಿತಮಃ ಸರ್ಗಃ

ಷಟ್‌ಷಷ್ಟಿತಮಃ ಸರ್ಗಃ

ಯಾಮೇವ ರಾತ್ರಿಂ ಶತ್ರುಘ್ನಃ ಪರ್ಣಶಾಲಾಮುಪಾವಿಶತ್ ।
ತಾಮೇವ ರಾತ್ರಿಂ ಸೀತಾಪಿ ಪ್ರಸೂತಾ ದಾರಕದ್ವಯಮ್ ॥1॥

ತತೋಽರ್ಧರಾತ್ರಸಮಯೇ ಬಾಲಕಾ ಮುನಿದಾರಕಾಃ ।
ವಾಲ್ಮೀಕೇಃ ಪ್ರಿಯಮಾಚಖ್ಯುಃ ಸೀತಾಯಾಃ ಪ್ರಸವಂ ಶುಭಮ್ ॥2॥

ಭಗವನ್ರಾಮಪತ್ನೀ ಸಾ ಪ್ರಸೂತಾ ದಾರಕದ್ವಯಮ್ ।
ತತೋ ರಕ್ಷಾಂ ಮಹಾತೇಜಃ ಕುರು ಭೂತವಿನಾಶಿನೀಮ್ ॥3॥

ತೇಷಾಂ ತದ್ವಚನಂ ಶ್ರುತ್ವಾ ಮಹರ್ಷಿಃ ಸಮುಪಾಗಮತ್ ।
ಬಾಲಚನ್ದ್ರಪ್ರತೀಕಾಶೌ ದೇವಪುತ್ರೌ ಮಹೌಜಸೌ ॥4॥

ಜಗಾಮ ತತ್ರ ಹೃಷ್ಟಾತ್ಮಾ ದದರ್ಶ ಚ ಕುಮಾರಕೌ ।
ಭೂತಘ್ನೀಂ ಚಾಕರೋತ್ತಾಭ್ಯಾಂ ರಕ್ಷಾಂ ರಕ್ಷೋವಿನಾಶಿನೀಮ್ ॥5॥

ಕುಶಮುಷ್ಟಿಮುಪಾದಾಯ ಲವಂ ಚೈವ ತು ಸ ದ್ವಿಜಃ ।
ವಾಲ್ಮೀಕಿಃ ಪ್ರದದೌ ತಾಭ್ಯಾಂ ರಕ್ಷಾಂ ಭೂತವಿನಾಶಿನೀಮ್ ॥6॥

ಯಸ್ತಯೋಃ ಪೂರ್ವಜೋ ಜಾತಃ ಸ ಕುಶೈರ್ಮನ್ತ್ರಸತ್ಕೃತೈಃ ।
ನಿರ್ಮಾರ್ಜನೀಯಸ್ತು ತದಾ ಕುಶ ಇತ್ಯಸ್ಯ ನಾಮ ತತ್ ॥7॥

ಯಶ್ಚಾವರೋ ಭವೇತ್ತಾಭ್ಯಾಂ ಲವೇನ ಸುಸಮಾಹಿತಃ ।
ನಿರ್ಮಾರ್ಜನೀಯೋ ವೃದ್ಧಾಭಿರ್ಲವೇತಿ ಚ ಸ ನಾಮತಃ ॥8॥

ಏವಂ ಕುಶಲವೌ ನಾಮ್ನಾ ತಾವುಭೌ ಯಮಜಾತಕೌ ।
ಮತ್ಕೃತಾಭ್ಯಾಂ ಚ ನಾಮಭ್ಯಾಂ ಖ್ಯಾತಿಯುಕ್ತೌ ಭವಿಷ್ಯತಃ ॥9॥

ತಾಂ ರಕ್ಷಾಂ ಜಗೃಹುಸ್ತಾಂ ಚ ಮುನಿಹಸ್ತಾತ್ಸಮಾಹಿತಾಃ ।
ಅಕುರ್ವಂಶ್ಚ ತತೋ ರಕ್ಷಾಂ ತಯೋರ್ವಿಗತಕಲ್ಮಷಾಃ ॥10॥

ತಥಾ ತಾಂ ಕ್ರಿಯಮಾಣಾಂ ಚ ವೃದ್ಧಾಭಿರ್ಗೋತ್ರನಾಮ ಚ ।
ಸಂಕೀರ್ತನಂ ಚ ರಾಮಸ್ಯ ಸೀತಾಯಾಃ ಪ್ರಸವೌ ಶುಭೌ ॥11॥

ಅರ್ಧರಾತ್ರೇ ತು ಶತ್ರುಘ್ನಃ ಶುಶ್ರಾವ ಸುಮಹತ್ಪ್ರಿಯಮ್ ।
ಪರ್ಣಶಾಲಾಂ ತತೋ ಗತ್ವಾ ಮಾತರ್ದಿಷ್ಟ್ಯೇತಿ ಚಾಬ್ರವೀತ್ ॥12॥

ತದಾ ತಸ್ಯ ಪ್ರಹೃಷ್ಟಸ್ಯ ಶತ್ರುಘ್ನಸ್ಯ ಮಹಾತ್ಮನಃ ।
ವ್ಯತೀತಾ ವಾರ್ಷಿಕೀ ರಾತ್ರಿಃ ಶ್ರಾವಣೀ ಲಘುವಿಕ್ರಮಾ ॥13॥

ಪ್ರಭಾತೇ ಸುಮಹಾವೀರ್ಯಃ
ಕೃತ್ವಾ ಪೌರ್ವಾಹ್ಣಿಕೀಂ ಕ್ರಿಯಾಮ್ ।
ಮುನಿಂ ಪ್ರಾಞ್ಜಲಿರಾಮನ್ತ್ರ್ಯ
ಯಯೌ ಪಶ್ಚಾನ್ಮುಖಃ ಪುನಃ ॥14॥

ಸ ಗತ್ವಾ ಯಮುನಾತೀರಂ ಸಪ್ತರಾತ್ರೋಷಿತಃ ಪಥಿ ।
ಋಷೀಣಾಂ ಪುಣ್ಯಕೀರ್ತೀನಾಮಾಶ್ರಮೇ ವಾಸಮಭ್ಯಯಾತ್ ॥15॥

ಸ ತತ್ರ ಮುನಿಭಿಃ ಸಾರ್ಧಂ ಭಾರ್ಗವಪ್ರಮುಖೈರ್ನೃಪಃ ।
ಕಥಾಭಿರಭಿರೂಪಾಭಿರ್ವಾಸಂ ಚಕ್ರೇ ಮಹಾಯಶಾಃ ॥16॥

ಸ ಕಾಞ್ಚನಾದ್ಯೈರ್ಮುನಿಭಿಃ ಸಮೇತೋ
ರಘುಪ್ರವೀರೋ ರಜನೀಂ ತದಾನೀಮ್ ।
ಕಥಾಪ್ರಕಾರೈರ್ಬಹುಭಿರ್ಮಹಾತ್ಮಾ
ವಿರಾಮಯಾಮಾಸ ನರೇನ್ದ್ರಸೂನುಃ ॥17॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಷಟ್‌ಷಷ್ಟಿತಮಃ ಸರ್ಗಃ

ಸಪ್ತಷಷ್ಟಿತಮಃ ಸರ್ಗಃ

ಅಥ ರಾತ್ರ್ಯಾಂ ಪ್ರವೃತ್ತಾಯಾಂ ಶತ್ರುಘ್ನೋ ಭೃಗುನನ್ದನಮ್ ।
ಪಪ್ರಚ್ಛ ಚ್ಯವನಂ ವಿಪ್ರಂ ಲವಣಸ್ಯ ಯಥಾಬಲಮ್ ॥1॥

ಶೂಲಸ್ಯ ಚ ಬಲಂ ಬ್ರಹ್ಮನ್ಕೇ ಚ ಪೂರ್ವಂ ವಿನಾಶಿತಾಃ ।
ಅನೇನ ಶೂಲಮುಖ್ಯೇನ ದ್ವನ್ದ್ವಯುದ್ಧಮುಪಾಗತಾಃ ॥2॥

ತಸ್ಯ ತದ್ವಚನಂ ಶ್ರುತ್ವಾ ಶತ್ರುಘ್ನಸ್ಯ ಮಹಾತ್ಮನಃ ।
ಪ್ರತ್ಯುವಾಚ ಮಹಾತೇಜಾಶ್ಚ್ಯವನೋ ರಘುನನ್ದನಮ್ ॥3॥

ಅಸಂಖ್ಯೇಯಾನಿ ಕರ್ಮಾಣಿ ಯಾನ್ಯಸ್ಯ ರಘುನನ್ದನ ।
ಇಕ್ಷ್ವಾಕುವಂಶಪ್ರಭವೇ ಯದ್ವೃತ್ತಂ ತಚ್ಛೃಣುಷ್ವ ಮೇ ॥4॥

ಅಯೋಧ್ಯಾಯಾಂ ಪುರಾ ರಾಜಾ ಯುವನಾಶ್ವಸುತೋ ಬಲೀ ।
ಮಾಂಧಾತಾ ಇತಿ ವಿಖ್ಯಾತಸ್ತ್ರಿಷು ಲೋಕೇಷು ವೀರ್ಯವಾನ್ ॥5॥

ಸ ಕೃತ್ವಾ ಪೃಥಿವೀಂ ಕೃತ್ಸ್ನಾಂ ಶಾಸನೇ ಪೃಥಿವೀಪತಿಃ ।
ಸುರಲೋಕಮಿತೋ ಜೇತುಮುದ್ಯೋಗಮಕರೋನ್ನೃಪಃ ॥6॥

ಇನ್ದ್ರಸ್ಯ ಚ ಭಯಂ ತೀವ್ರಂ ಸುರಾಣಾಂ ಚ ಮಹಾತ್ಮನಾಮ್ ।
ಮಾಂಧಾತರಿ ಕೃತೋದ್ಯೋಗೇ ದೇವಲೋಕಜಿಗೀಷಯಾ ॥7॥

ಅರ್ಧಾಸನೇನ ಶಕ್ರಸ್ಯ ರಾಜ್ಯಾರ್ಧೇನ ಚ ಪಾರ್ಥಿವಃ ।
ವನ್ದ್ಯಮಾನಃ ಸುರಗಣೈಃ ಪ್ರತಿಜ್ಞಾಮಧ್ಯರೋಹತ ॥8॥

ತಸ್ಯ ಪಾಪಮಭಿಪ್ರಾಯಂ ವಿದಿತ್ವಾ ಪಾಕಶಾಸನಃ ।
ಸಾನ್ತ್ವಪೂರ್ವಮಿದಂ ವಾಕ್ಯಮುವಾಚ ಯುವನಾಶ್ವಜಮ್ ॥9॥

ರಾಜಾ ತ್ವಂ ಮಾನುಷೇ ಲೋಕೇ ನ ತಾವತ್ಪುರುಷರ್ಷಭ ।
ಅಕೃತ್ವಾ ಪೃಥಿವೀಂ ವಶ್ಯಾಂ ದೇವರಾಜ್ಯಮಿಹೇಚ್ಛಸಿ ॥10॥

ಯದಿ ವೀರ ಸಮಗ್ರಾ ತೇ ಮೇದಿನೀ ನಿಖಿಲಾ ವಶೇ ।
ದೇವರಾಜ್ಯಂ ಕುರುಷ್ವೇಹ ಸಭೃತ್ಯಬಲವಾಹನಃ ॥11॥

ಇನ್ದ್ರಮೇವಂ ಬ್ರುವಾಣಂ ತಂ ಮಾಂಧಾತಾ ವಾಕ್ಯಮಬ್ರವೀತ್ ।
ಕ್ವ ಮೇ ಶಕ್ರ ಪ್ರತಿಹತಂ ಶಾಸನಂ ಪೃಥಿವೀತಲೇ ॥12॥

ತಮುವಾಚ ಸಹಸ್ರಾಕ್ಷೋ ಲವಣೋ ನಾಮ ರಾಕ್ಷಸಃ ।
ಮಧುಪುತ್ರೋ ಮಧುವನೇ ನ ತೇಽಜ್ಞಾಂ ಕುರುತೇಽನಘ ॥13॥

ತಚ್ಛ್ರುತ್ವಾ ವಿಪ್ರಿಯಂ ಘೋರಂ ಸಹಸ್ರಾಕ್ಷೇಣ ಭಾಷಿತಮ್ ।
ವ್ರೀಡಿತೋಽವಾಙ್ಮುಖೋ ರಾಜಾ ವ್ಯಾಹರ್ತುಂ ನ ಶಶಾಕ ಹ ॥14॥

ಆಮನ್ತ್ರ್ಯ ತು ಸಹಸ್ರಾಕ್ಷಂ ಪ್ರಾಯಾತ್ಕಿಂಚಿದವಾಙ್ಮುಖಃ ।
ಪುನರೇವಾಗಮಚ್ಛ್ರೀಮಾನಿಮಂ ಲೋಕಂ ನರೇಶ್ವರಃ ॥15॥

ಸ ಕೃತ್ವಾ ಹೃದಯೇಽಮರ್ಷಂ ಸಭೃತ್ಯಬಲವಾಹನಃ ।
ಆಜಗಾಮ ಮಧೋಃ ಪುತ್ರಂ ವಶೇ ಕರ್ತುಮರಿಂದಮಃ ॥16॥

ಸ ಕಾಂಕ್ಷಮಾಣೋ ಲವಣಂ ಯುದ್ಧಾಯ ಪುರುಷರ್ಷಭಃ ।
ದೂತಂ ಸಂಪ್ರೇಷಯಾಮಾಸ ಸಕಾಶಂ ಲವಣಸ್ಯ ಸಃ ॥17॥

ಸ ಗತ್ವಾ ವಿಪ್ರಿಯಾಣ್ಯಾಹ ಬಹೂನಿ ಮಧುನಃ ಸುತಮ್ ।
ವದನ್ತಮೇವಂ ತಂ ದೂತಂ ಭಕ್ಷಯಾಮಾಸ ರಾಕ್ಷಸಃ ॥18॥

ಚಿರಾಯಮಾಣೇ ದೂತೇ ತು ರಾಜಾ ಕ್ರೋಧಸಮನ್ವಿತಃ ।
ಅರ್ದಯಾಮಾಸ ತದ್ರಕ್ಷಃ ಶರವೃಷ್ಟ್ಯಾ ಸಮನ್ತತಃ ॥19॥

ತತಃ ಪ್ರಹಸ್ಯ ತದ್ರಕ್ಷಃ ಶೂಲಂ ಜಗ್ರಾಹ ಪಾಣಿನಾ ।
ವಧಾಯ ಸಾನುಬನ್ಧಸ್ಯ ಮುಮೋಚಾಯುಧಮುತ್ತಮಮ್ ॥20॥

ತಚ್ಛೂಲಂ ದೀಪ್ಯಮಾನಂ ತು ಸಭೃತ್ಯಬಲವಾಹನಮ್ ।
ಭಸ್ಮೀಕೃತ್ವಾ ನೃಪಂ ಭೂಯೋ ಲವಣಸ್ಯಾಗಮತ್ಕರಮ್ ॥21॥

ಏವಂ ಸ ರಾಜಾ ಸುಮಹಾನ್ಹತಃ ಸಬಲವಾಹನಃ ।
ಶೂಲಸ್ಯ ತು ಬಲಂ ಸೌಮ್ಯ ಅಪ್ರಮೇಯಮನುತ್ತಮಮ್ ॥22॥

ಶ್ವಃ ಪ್ರಭಾತೇ ತು ಲವಣಂ ವಧಿಷ್ಯಸಿ ನ ಸಂಶಯಃ ।
ಅಗೃಹೀತಾಯುಧಂ ಕ್ಷಿಪ್ರಂ ಧ್ರುವೋ ಹಿ ವಿಜಯಸ್ತವ ॥23॥

ಲೋಕಾನಾಂ ಸ್ವಸ್ತಿ ಚೈವಂ ಸ್ಯಾತ್ಕೃತೇ ಕರ್ಮಣಿ ಚ ತ್ವಯಾ ।
ಏತತ್ತೇ ಸರ್ವಮಾಖ್ಯಾತಂ ಲವಣಸ್ಯ ದುರಾತ್ಮನಃ ॥24॥

ಶೂಲಸ್ಯ ಚ ಬಲಂ ಘೋರಮಪ್ರಮೇಯಂ ನರರ್ಷಭ ।
ವಿನಾಶಶ್ಚೈವ ಮಾಂಧಾತುರ್ಯತ್ನೇನಾಭೂಚ್ಚ ಪಾರ್ಥಿವ ॥25॥

ತ್ವಂ ಶ್ವಃ ಪ್ರಭಾತೇ ಲವಣಂ ಮಹಾತ್ಮ -
ನ್ವಧಿಷ್ಯಸೇ ನಾತ್ರ ತು ಸಂಶಯೋ ಮೇ ।
ಶೂಲಂ ವಿನಾ ನಿರ್ಗತಮಾಮಿಷಾರ್ಥೇ
ಧ್ರುವೋ ಜಯಸ್ತೇ ಭವಿತಾ ನರೇನ್ದ್ರ ॥26॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಸಪ್ತಷಷ್ಟಿತಮಃ ಸರ್ಗಃ

ಅಷ್ಟಷಷ್ಟಿತಮಃ ಸರ್ಗಃ

ಕಥಾಂ ಕಥಯತಾಂ ತೇಷಾಂ ಜಯಂ ಚಾಕಾಂಕ್ಷತಾಂ ಶುಭಮ್ ।
ವ್ಯತೀತಾ ರಜನೀ ಶೀಘ್ರಂ ಶತ್ರುಘ್ನಸ್ಯ ಮಹಾತ್ಮನಃ ॥1॥

ತತಃ ಪ್ರಭಾತೇ ವಿಮಲೇ ತಸ್ಮಿನ್ಕಾಲೇ ಸ ರಾಕ್ಷಸಃ ।
ನಿರ್ಗತಸ್ತು ಪುರಾದ್ವೀರೋ ಭಕ್ಷ್ಯಾಹಾರಪ್ರಚೋದಿತಃ ॥2॥

ಏತಸ್ಮಿನ್ನನ್ತರೇ ವೀರಃ ಶತ್ರುಘ್ನೋ ಯಮುನಾಂ ನದೀಮ್ ।
ತೀರ್ತ್ವಾ ಮಧುಪುರದ್ವಾರಿ ಧನುಷ್ಪಾಣಿರತಿಷ್ಠತ ॥3॥

ತತೋಽರ್ಧದಿವಸೇ ಪ್ರಾಪ್ತೇ ಕ್ರೂರಕರ್ಮಾ ಸ ರಾಕ್ಷಸಃ ।
ಆಗಚ್ಛದ್ಬಹುಸಾಹಸ್ರಂ ಪ್ರಾಣಿನಾಂ ಭಾರಮುದ್ವಹನ್ ॥4॥

ತತೋ ದದರ್ಶ ಶತ್ರುಘ್ನಂ ಸ್ಥಿತಂ ದ್ವಾರಿ ಧೃತಾಯುಧಮ್ ।
ತಮುವಾಚ ತತೋ ರಕ್ಷಃ ಕಿಮನೇನ ಕರಿಷ್ಯಸಿ ॥5॥

ಈದೃಶಾನಾಂ ಸಹಸ್ರಾಣಿ ಸಾಯುಧಾನಾಂ ನರಾಧಮ ।
ಭಕ್ಷಿತಾನಿ ಮಯಾ ರೋಷಾತ್ಕಾಲೇನಾನುಗತೋ ಹ್ಯಸಿ ॥6॥

ಆಹಾರಶ್ಚಾಪ್ಯಸಮ್ಪೂರ್ಣೋ ಮಮಾಯಂ ಪುರುಷಾಧಮ ।
ಸ್ವಯಂ ಪ್ರವಿಷ್ಟೋಽದ್ಯ ಮುಖಂ ಕಥಮಾಸಾದ್ಯ ದುರ್ಮತೇ ॥7॥

ತಸ್ಯೈವಂ ಭಾಷಮಾಣಸ್ಯ ಹಸತಶ್ಚ ಮುಹುರ್ಮುಹುಃ ।
ಶತ್ರುಘ್ನೋ ವೀರ್ಯಸಂಪನ್ನೋ ರೋಷಾದಶ್ರೂಣ್ಯವಾಸೃಜತ್ ॥8॥

ತಸ್ಯ ರೋಷಾಭಿಭೂತಸ್ಯ ಶತ್ರುಘ್ನಸ್ಯ ಮಹಾತ್ಮನಃ ।
ತೇಜೋಮಯಾ ಮರೀಚ್ಯಸ್ತು ಸರ್ವಗಾತ್ರೈರ್ವಿನಿಷ್ಪತನ್ ॥9॥

ಉವಾಚ ಚ ಸುಸಂಕ್ರುದ್ಧಃ ಶತ್ರುಘ್ನಃ ಸ ನಿಶಾಚರಮ್ ।
ಯೋದ್ಧುಮಿಚ್ಛಾಮಿ ದುರ್ಬುದ್ಧೇ ದ್ವನ್ದ್ವಯುದ್ಧಂ ತ್ವಯಾ ಸಹ ॥10॥

ಪುತ್ರೋ ದಶರಥಸ್ಯಾಹಂ ಭ್ರಾತಾ ರಾಮಸ್ಯ ಧೀಮತಃ ।
ಶತ್ರುಘ್ನೋ ನಾಮ ಶತ್ರುಘ್ನೋ ವಧಾಕಾಂಕ್ಷೀ ತವಾಗತಃ ॥11॥

ತಸ್ಯ ಮೇ ಯುದ್ಧಕಾಮಸ್ಯ ದ್ವನ್ದ್ವಯುದ್ಧಂ ಪ್ರದೀಯತಾಮ್ ।
ಶತ್ರುಸ್ತ್ವಂ ಸರ್ವಭೂತಾನಾಂ ನ ಮೇ ಜೀವನ್ಗಮಿಷ್ಯಸಿ ॥12॥

ತಸ್ಮಿಂಸ್ತಥಾ ಬ್ರುವಾಣೇ ತು ರಾಕ್ಷಸಃ ಪ್ರಹಸನ್ನಿವ ।
ಪ್ರತ್ಯುವಾಚ ನರಶ್ರೇಷ್ಠಂ ದಿಷ್ಟ್ಯಾ ಪ್ರಾಪ್ತೋಽಸಿ ದುರ್ಮತೇ ॥13॥

ಮಮ ಮಾತೃಷ್ವಸುರ್ಭ್ರಾತಾ ರಾವಣೋ ನಾಮ ರಾಕ್ಷಸಃ ।
ಹತೋ ರಾಮೇಣ ದುರ್ಬುದ್ಧೇ ಸ್ತ್ರೀಹೇತೋಃ ಪುರುಷಾಧಮ ॥14॥

ತಚ್ಚ ಸರ್ವಂ ಮಯಾ ಕ್ಷಾನ್ತಂ ರಾವಣಸ್ಯ ಕುಲಕ್ಷಯಮ್ ।
ಅವಜ್ಞಾಂ ಪುರತಃ ಕೃತ್ವಾ ಮಯಾ ಯೂಯಂ ವಿಶೇಷತಃ ॥15॥

ನಿಹತಾಶ್ಚ ಹಿ ತೇ ಸರ್ವೇ ಪರಿಭೂತಾಸ್ತೃಣಂ ಯಥಾ ।
ಭೂತಾಶ್ಚೈವ ಭವಿಷ್ಯಾಶ್ಚ ಯೂಯಂ ಚ ಪುರುಷಾಧಮಾಃ ॥16॥

ತಸ್ಯ ತೇ ಯುದ್ಧಕಾಮಸ್ಯ ಯುದ್ಧಂ ದಾಸ್ಯಾಮಿ ದುರ್ಮತೇ ।
ತಿಷ್ಠ ತ್ವಂ ಚ ಮುಹೂರ್ತಂ ತು ಯಾವದಾಯುಧಮಾನಯೇ ।
ಈಪ್ಸಿತಂ ಯಾದೃಶಂ ತುಭ್ಯಂ ಸಜ್ಜಯೇ ಯಾವದಾಯುಧಮ್ ॥17॥

ತಮುವಾಚಾಶು ಶತ್ರುಘ್ನಃ ಕ್ವ ಮೇ ಜೀವನ್ಗಮಿಷ್ಯಸಿ ।
ಸ್ವಯಮೇವಾಗತಃ ಶತ್ರುರ್ನ ಮೋಕ್ತವ್ಯಃ ಕೃತಾತ್ಮನಾ ॥18॥

ಯೋ ಹಿ ವಿಕ್ಲವಯಾ ಬುದ್ಧ್ಯಾ ಪ್ರಸರಂ ಶತ್ರವೇ ದಿಶೇತ್ ।
ಸ ಹತೋ ಮನ್ದಬುದ್ಧಿಃ ಸ್ಯಾದ್ಯಥಾ ಕಾಪುರುಷಸ್ತಥಾ ॥19॥

ತಸ್ಮಾತ್ಸುದೃಷ್ಟಂ ಕುರು ಜೀವಲೋಕಂ
ಶರೈಃ ಶಿತೈಸ್ತ್ವಾಂ ವಿವಿಧೈರ್ನಯಾಮಿ ।
ಯಮಸ್ಯ ಗೇಹಾಭಿಮುಖಂ ಹಿ ಪಾಪಂ
ರಿಪುಂ ತ್ರಿಲೋಕಸ್ಯ ಚ ರಾಘವಸ್ಯ ॥20॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಅಷ್ಟಷಷ್ಟಿತಮಃ ಸರ್ಗಃ

ಏಕೋನಸಪ್ತತಿತಮಃ ಸರ್ಗಃ

ತಚ್ಛ್ರುತ್ವಾ ಭಾಷಿತಂ ತಸ್ಯ ಶತ್ರುಘ್ನಸ್ಯ ಮಹಾತ್ಮನಃ ।
ಕ್ರೋಧಮಾಹಾರಯತ್ತೀವ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥1॥

ಪಾಣೌ ಪಾಣಿಂ ಸ ನಿಷ್ಪಿಷ್ಯ ದನ್ತಾನ್ಕಟಕಟಾಯ್ಯ ಚ ।
ಲವಣೋ ರಘುಶಾರ್ದೂಲಮಾಹ್ವಯಾಮಾಸ ಚಾಸಕೃತ್ ॥2॥

ತಂ ಬ್ರುವಾಣಂ ತಥಾ ವಾಕ್ಯಂ ಲವಣಂ ಘೋರದರ್ಶನಮ್ ।
ಶತ್ರುಘ್ನೋ ದೇವಶತ್ರುಘ್ನ ಇದಂ ವಚನಮಬ್ರವೀತ್ ॥3॥

ಶತ್ರುಘ್ನೋ ನ ತದಾ ಜಾತೋ ಯದಾನ್ಯೇ ನಿರ್ಜಿತಾಸ್ತ್ವಯಾ ।
ತದದ್ಯ ಬಾಣಾಭಿಹತೋ ವ್ರಜ ತ್ವಂ ಯಮಸಾದನಮ್ ॥4॥

ಋಷಯೋಽಪ್ಯದ್ಯ ಪಾಪಾತ್ಮನ್ಮಯಾ ತ್ವಾಂ ನಿಹತಂ ರಣೇ ।
ಪಶ್ಯನ್ತು ವಿಪ್ರಾ ವಿದ್ವಾಂಸಸ್ತ್ರಿದಶಾ ಇವ ರಾವಣಮ್ ॥5॥

ತ್ವಯಿ ಮದ್ಬಾಣನಿರ್ದಗ್ಧೇ ಪತಿತೇಽದ್ಯ ನಿಶಾಚರ ।
ಪುರೇ ಜನಪದೇ ಚಾಪಿ ಕ್ಷೇಮಮೇವ ಭವಿಷ್ಯತಿ ॥6॥

ಅದ್ಯ ಮದ್ಬಾಹುನಿಷ್ಕ್ರಾನ್ತಃ ಶರೋ ವಜ್ರನಿಭಾನನಃ ।
ಪ್ರವೇಕ್ಷ್ಯತೇ ತೇ ಹೃದಯಂ ಪದ್ಮಮಂಶುರಿವಾರ್ಕಜಃ ॥7॥

ಏವಮುಕ್ತೋ ಮಹಾವೃಕ್ಷಂ ಲವಣಃ ಕ್ರೋಧಮೂರ್ಛಿತಃ ।
ಶತ್ರುಘ್ನೋರಸಿ ಚಿಕ್ಷೇಪ ಸ ಚ ತಂ ಶತಧಾಚ್ಛಿನತ್ ॥8॥

ತದ್ದೃಷ್ಟ್ವಾ ವಿಫಲಂ ಕರ್ಮ ರಾಕ್ಷಸಃ ಪುನರೇವ ತು ।
ಪಾದಪಾನ್ಸುಬಹೂನ್ಗೃಹ್ಯ ಶತ್ರುಘ್ನಾಯಾಸೃಜದ್ಬಲೀ ॥9॥

ಶತ್ರುಘ್ನಶ್ಚಾಪಿ ತೇಜಸ್ವೀ ವೃಕ್ಷಾನಾಪತತೋ ಬಹೂನ್ ।
ತ್ರಿಭಿಶ್ಚತುರ್ಭಿರೇಕೈಕಂ ಚಿಚ್ಛೇದ ನತಪರ್ವಭಿಃ ॥10॥

ತತೋ ಬಾಣಮಯಂ ವರ್ಷಂ ವ್ಯಸೃಜದ್ರಾಕ್ಷಸೋಪರಿ ।
ಶತ್ರುಘ್ನೋ ವೀರ್ಯಸಂಪನ್ನೋ ವಿವ್ಯಥೇ ನ ಸ ರಾಕ್ಷಸಃ ॥11॥

ತತಃ ಪ್ರಹಸ್ಯ ಲವಣೋ ವೃಕ್ಷಮುದ್ಯಮ್ಯ ವೀರ್ಯವಾನ್ ।
ಶಿರಸ್ಯಭ್ಯಹನಚ್ಛೂರಂ ಸ್ರಸ್ತಾಙ್ಗಃ ಸ ಮುಮೋಹ ವೈ ॥12॥

ತಸ್ಮಿನ್ನಿಪತಿತೇ ವೀರೇ ಹಾಹಾಕಾರೋ ಮಹಾನಭೂತ್ ।
ಋಷೀಣಾಂ ದೇವಸಂಘಾನಾಂ ಗನ್ಧರ್ವಾಪ್ಸರಸಾಂ ತಥಾ ॥13॥

ತಮವಜ್ಞಾಯ ತು ಹತಂ ಶತ್ರುಘ್ನಂ ಭುವಿ ಪಾತಿತಮ್ ।
ರಕ್ಷೋ ಲಬ್ಧಾನ್ತರಮಪಿ ನ ವಿವೇಶ ಸ್ವಮಾಲಯಮ್ ॥14॥

ನಾಪಿ ಶೂಲಂ ಪ್ರಜಗ್ರಾಹ ತಂ ದೃಷ್ಟ್ವಾ ಭುವಿ ಪಾತಿತಮ್ ।
ತತೋ ಹತ ಇತಿ ಜ್ಞಾತ್ವಾ ತಾನ್ಬಕ್ಷಾನ್ಸಮುದಾವಹತ್ ॥15॥

ಮುಹೂರ್ತಾಲ್ಲಬ್ಧಸಂಜ್ಞಸ್ತು ಪುನಸ್ತಸ್ಥೌ ಧೃತಾಯುಧಃ ।
ಶತ್ರುಘ್ನೋ ವೈ ಪುರದ್ವಾರಿ ಋಷಿಭಿಃ ಸಂಪ್ರಪೂಜಿತಃ ॥16॥

ತತೋ ದಿವ್ಯಮಮೋಘಂ ತಂ ಜಗ್ರಾಹ ಶರಮುತ್ತಮಮ್ ।
ಜ್ವಲನ್ತಂ ತೇಜಸಾ ಘೋರಂ ಪೂರಯನ್ತಂ ದಿಶೋ ದಶ ॥17॥

ವಜ್ರಾನನಂ ವಜ್ರವೇಗಂ ಮೇರುಮನ್ದರಸಂನಿಭಮ್ ।
ನತಂ ಪರ್ವಸು ಸರ್ವೇಷು ಸಂಯುಗೇಷ್ವಪರಾಜಿತಮ್ ॥18॥

ಅಸೃಕ್ಚನ್ದನದಿಗ್ಧಾಙ್ಗಂ ಚಾರುಪತ್ರಂ ಪತತ್ರಿಣಮ್ ।
ದಾನವೇನ್ದ್ರಾಚಲೇನ್ದ್ರಾಣಾಮಸುರಾಣಾಂ ಚ ದಾರುಣಮ್ ॥19॥

ತಂ ದೀಪ್ತಮಿವ ಕಾಲಾಗ್ನಿಂ ಯುಗಾನ್ತೇ ಸಮುಪಸ್ಥಿತೇ ।
ದೃಷ್ಟ್ವಾ ಸರ್ವಾಣಿ ಭೂತಾನಿ ಪರಿತ್ರಾಸಮುಪಾಗಮನ್ ॥20॥

ಸದೇವಾಸುರಗನ್ಧರ್ವಂ ಮುನಿಭಿಃ ಸಾಪ್ಸರೋಗಣಮ್ ।
ಜಗದ್ಧಿ ಸರ್ವಮಸ್ವಸ್ಥಂ ಪಿತಾಮಹಮುಪಸ್ಥಿತಮ್ ॥21॥

ಊಚುಶ್ಚ ದೇವಾ ದೇವೇಶಂ ವರದಂ ಪ್ರಪಿತಾಮಹಮ್ ।
ದೇವಾನಾಂ ಭಯಸಮ್ಮೋಹೋ ಲೋಕಾನಾಂ ಸಂಕ್ಷಯಂ ಪ್ರತಿ ॥22॥

ಕಚ್ಚಿಲ್ಲೋಕಕ್ಷಯೋ ದೇವ ಸಂಪ್ರಾಪ್ತೋ ವಾ ಯುಗಕ್ಷಯಃ ।
ನೇದೃಶಂ ದೃಷ್ಟಪೂರ್ವಂ ಚ ನ ಶ್ರುತಂ ಪ್ರಪಿತಾಮಹ ॥23॥

ತೇಷಾಂ ತದ್ವಚನಂ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ।
ಭಯಕಾರಣಮಾಚಷ್ಟ ದೇವಾನಾಮಭಯಂಕರಃ ॥24॥

ಉವಾಚ ಮಧುರಾಂ ವಾಣೀಂ ಶೃಣುಧ್ವಂ ಸರ್ವದೇವತಾಃ ।
ವಧಾಯ ಲವಣಸ್ಯಾಜೌ ಶರಃ ಶತ್ರುಘ್ನಧಾರಿತಃ ॥25॥

ತೇಜಸಾ ತಸ್ಯ ಸಮ್ಮೂಢಾಃ ಸರ್ವೇ ಸ್ಮಃ ಸುರಸತ್ತಮಾಃ ।
ಏಷ ಪೂರ್ವಸ್ಯ ದೇವಸ್ಯ ಲೋಕಕರ್ತುಃ ಸನಾತನಃ ॥26॥

ಶರಸ್ತೇಜೋಮಯೋ ವತ್ಸಾ ಯೇನ ವೈ ಭಯಮಾಗತಮ್ ।
ಏಷ ವೈ ಕೈಟಭಸ್ಯಾರ್ಥೇ ಮಧುನಶ್ಚ ಮಹಾಶರಃ ॥27॥

ಸೃಷ್ಟೋ ಮಹಾತ್ಮನಾ ತೇನ ವಧಾರ್ಥೇ ದೈತ್ಯಯೋಸ್ತಯೋಃ ।
ಏಕ ಏವ ಪ್ರಜಾನಾತಿ ವಿಷ್ಣುಸ್ತೇಜೋಮಯಂ ಶರಮ್ ॥28॥

ಏಷಾ ಏವ ತನುಃ ಪೂರ್ವಾ ವಿಷ್ಣೋಸ್ತಸ್ಯ ಮಹಾತ್ಮನಃ ।
ಇತೋ ಗಚ್ಛತ ಪಶ್ಯಧ್ವಂ ವಧ್ಯಮಾನಂ ಮಹಾತ್ಮನಾ ।
ರಾಮಾನುಜೇನ ವೀರೇಣ ಲವಣಂ ರಾಕ್ಷಸೋತ್ತಮಮ್ ॥29॥

ತಸ್ಯ ತೇ ದೇವದೇವಸ್ಯ ನಿಶಮ್ಯ ವಚನಂ ಸುರಾಃ ।
ಆಜಗ್ಮುರ್ಯತ್ರ ಯುಧ್ಯೇತೇ ಶತ್ರುಘ್ನಲವಣಾವುಭೌ ॥30॥

ತಂ ಶರಂ ದಿವ್ಯಸಂಕಾಶಂ ಶತ್ರುಘ್ನಕರಧಾರಿತಮ್ ।
ದದೃಶುಃ ಸರ್ವಭೂತಾನಿ ಯುಗಾನ್ತಾಗ್ನಿಮಿವೋತ್ಥಿತಮ್ ॥31॥

ಆಕಾಶಮಾವೃತಂ ದೃಷ್ಟ್ವಾ ದೇವೈರ್ಹಿ ರಘುನನ್ದನಃ ।
ಸಿಂಹನಾದಂ ಭೃಶಂ ಕೃತ್ವಾ ದದರ್ಶ ಲವಣಂ ಪುನಃ ॥32॥

ಆಹೂತಶ್ಚ ಪುನಸ್ತೇನ ಶತ್ರುಘ್ನೇನ ಮಹಾತ್ಮನಾ ।
ಲವಣಃ ಕ್ರೋಧಸಂಯುಕ್ತೋ ಯುದ್ಧಾಯ ಸಮುಪಸ್ಥಿತಃ ॥33॥

ಆಕರ್ಣಾತ್ಸ ವಿಕೃಷ್ಯಾಥ ತದ್ಧನುರ್ಧನ್ವಿನಾಂ ವರಃ ।
ಸ ಮುಮೋಚ ಮಹಾಬಾಣಂ ಲವಣಸ್ಯ ಮಹೋರಸಿ ॥34॥

ಉರಸ್ತಸ್ಯ ವಿದಾರ್ಯಾಶು ಪ್ರವಿವೇಶ ರಸಾತಲಮ್ ।
ಗತ್ವಾ ರಸಾತಲಂ ದಿವ್ಯಃ ಶರೋ ವಿಬುಧಪೂಜಿತಃ ॥35॥

ಪುನರೇವಾಗಮತ್ತೂರ್ಣಮಿಕ್ಷ್ವಾಕುಕುಲನನ್ದನಮ್ ॥36॥

ಶತ್ರುಘ್ನಶರನಿರ್ಭಿನ್ನೋ ಲವಣಃ ಸ ನಿಶಾಚರಃ ।
ಪಪಾತ ಸಹಸಾ ಭೂಮೌ ವಜ್ರಾಹತ ಇವಾಚಲಃ ॥37॥

ತಚ್ಚ ಶೂಲಂ ಮಹದ್ದಿವ್ಯಂ ಹತೇ ಲವಣರಾಕ್ಷಸೇ ।
ಪಶ್ಯತಾಂ ಸರ್ವದೇವಾನಾಂ ರುದ್ರಸ್ಯ ವಶಮನ್ವಗಾತ್ ॥38॥

ಏಕೇಷುಪಾತೇನ ಭಯಂ ನಿಪಾತ್ಯ
ಲೋಕತ್ರಯಸ್ಯಾಸ್ಯ ರಘುಪ್ರವೀರಃ ।
ವಿನಿರ್ಬಭಾವುತ್ತಮಚಾಪಬಾಣ -
ಸ್ತಮಃ ಪ್ರಣುದ್ಯೇವ ಸಹಸ್ರರಶ್ಮಿಃ ॥39॥

ತತೋ ಹಿ ದೇವಾ ಋಷಿಪನ್ನಗಾಶ್ಚ
ಪ್ರಪೂಜಿರೇ ಹ್ಯಪ್ಸರಸಶ್ಚ ಸರ್ವಾಃ ।
ದಿಷ್ಟ್ಯಾ ಜಯೋ ದಾಶರಥೇರವಾಪ್ತ
ಸ್ತ್ಯಕ್ತ್ವಾ ಭಯಂ ಸರ್ಪ ಇವ ಪ್ರಶಾನ್ತಃ ॥40॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಏಕೋನಸಪ್ತತಿತಮಃ ಸರ್ಗಃ

ಅಥ ಸಪ್ತತಿತಮಃ ಸರ್ಗಃ

ಹತೇ ತು ಲವಣೇ ದೇವಾಃ ಸೇನ್ದ್ರಾಃ ಸಾಗ್ನಿಪುರೋಗಮಾಃ ।
ಊಚುಃ ಸುಮಧುರಾಂ ವಾಣೀಂ ಶತ್ರುಘ್ನಂ ಶತ್ರುತಾಪನಮ್ ॥1॥

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ   ಶ್ರೀ ಮಹಾ ಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ॐ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಶ್ರೀಮದ್ವಾಲ್ಮೀಕಿರಾಮಾಯಣ-ಹತ್ತನೆಯ ಸಂಪುಟ

ಉತ್ತರಕಾಂಡ

ಉತ್ತರಕಾಂಡ   1ನೆಯ ಸರ್ಗ

ಶ್ರೀರಾಮನನ್ನು ಅಭಿನಂದಿಸಲು ಮಹರ್ಷಿಗಳ ಆಗಮನ : ಮಹರ್ಷಿಗಳೊಡನೆ ಸಂಭಾಷಣೆ : ಶ್ರೀರಾಮನ ಪ್ರಶ್ನೆ

ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನನ್ದಿತುಮ್ ॥1॥

ರಾವಣನೇ ಮೊದಲಾದ ರಾಕ್ಷಸರನ್ನು ಸಂಹರಿಸಿದನಂತರ ರಾಜ್ಯಭಾರವನ್ನು ವಹಿಸಿಕೊಂಡ ಶ್ರೀರಾಮನನ್ನು ಅಭಿನಂದಿಸುವ ಸಲುವಾಗಿ ಸಮಸ್ತ ಮಹರ್ಷಿಗಳೂ ಅಯೋಧ್ಯಾಪಟ್ಟಣಕ್ಕೆ ಆಗಮಿಸಿದರು.

ಪೂರ್ವದಿಕ್ಕಿನಲ್ಲಿ ವಾಸಮಾಡುತ್ತಿದ್ದ ಕೌಶಿಕ, ಯವಕ್ರೀತ, ಗಾರ್ಗ್ಯ, ಗಾಲವ ಮತ್ತು ಮೇಧಾತಿಥಿಯ ಮಗನಾದ ಕಣ್ವ –ಇವರೆಲ್ಲರೂ ಅಯೋಧ್ಯೆಗೆ ಆಗಮಿಸಿದರು. ದಕ್ಷಿಣದಿಕ್ಕಿನಲ್ಲಿ ವಾಸಮಾಡುತ್ತಿದ್ದ ಸ್ವಸ್ತ್ಯಾತ್ರೇಯ, ಪೂಜ್ಯನಾದ ನಮುಚಿ, ಪ್ರಮುಚಿ, ಅಗಸ್ತ್ಯ , ಪೂಜ್ಯನಾದ ಅತ್ರಿ , ಸುಮುಖ, ಮತ್ತು ವಿಮುಖ – ಇವರೆಲ್ಲರೂ ಅಗಸ್ತ್ಯರನ್ನು ಮುಂದೆಮಾಡಿಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದರು. ಪಶ್ಚಿಮದಿಕ್ಕಿನಲ್ಲಿ ವಾಸಮಾಡುತ್ತಿದ್ದ ನೃಷಂಗು, ಕವಷ , ಧೌಮ್ಯ, ಮಹರ್ಷಿ ಕೌಶೇಯ – ಇವರೆಲ್ಲರೂ ಶಿಷ್ಯಸಮೇತರಾಗಿ ಅಯೋಧ್ಯಾಪಟ್ಟಣಕ್ಕೆ ಆಗಮಿಸಿದರು. ಅದೇ ರೀತಿಯಲ್ಲಿ ಉತ್ತರದಿಕ್ಕಿನಲ್ಲಿ ನಿರಂತರವಾಗಿ ವಾಸಮಾಡುತ್ತಿದ್ದ ವಸಿಷ್ಠ, ಕಶ್ಯಪ, ಅತ್ರಿ,

ವಿಶ್ವಾಮಿತ್ರ, ಗೌತಮ, ಜಮದಗ್ನಿ, ಭರದ್ವಾಜ – ಈ ಸಪ್ತರ್ಷಿಗಳೂ ಶ್ರೀರಾಮನನ್ನು ಅಭಿನಂದಿಸುವ ಸಲುವಾಗಿ ಅಯೋಧ್ಯೆಗೆ ಆಗಮಿಸಿದರು.★ ಅವರೆಲ್ಲರೂ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದರು. ವೇದ–ವೇದಾಂಗಪಾರಂಗತರಾಗಿದ್ದರು. ನಾನಾವಿಧವಾದ ಶಾಸ್ತ್ರಗಳಲ್ಲಿ ಪರಿಣತರಾಗಿದ್ದರು. ಮಹಾತ್ಮರಾದ ಆ ಎಲ್ಲ ಮಹರ್ಷಿಗಳೂ ಶ್ರೀರಾಮನ ಅರಮನೆಯ ಬಳಿಗೆ ಬಂದು ಪ್ರತೀಹಾರಿಯ ಮೂಲಕ ತಾವು ಬಂದಿರುವುದನ್ನು ಶ್ರೀರಾಮನಿಗೆ ಹೇಳಿಕಳುಹಿಸುವ ಸಲುವಾಗಿ ಮಹಾದ್ವಾರದಲ್ಲಿ ನಿಂತರು. ಧರ್ಮಪರಾಯಣರಾದ ಮುನಿಶ್ರೇಷ್ಠರಾದ ಅಗಸ್ತ್ಯರು ದ್ವಾರಪಾಲಕನಿಗೆ ಹೇಳಿದರು :

''ಪ್ರತೀಹಾರಿಯೇ ! ನಾವೆಲ್ಲರೂ ಶ್ರೀರಾಮನನ್ನು ಸಂದರ್ಶಿಸುವ ಸಲುವಾಗಿ ಬಂದಿರುವ ವಾರ್ತೆಯನ್ನು ಶ್ರೀರಾಮನಿಗೆ ನಿವೇದಿಸು.''

ರಾಜನೀತಿಯನ್ನು ತಿಳಿದಿದ್ದ, ನೋಡಿದೊಡನೆಯೇ ಇತರರ ಮನಸ್ಸಿನ ಅಭಿಪ್ರಾಯವನ್ನು ತಿಳಿಯುವುದರಲ್ಲಿ ಸಮರ್ಥನಾಗಿದ್ದ, ಸದಾಚಾರಿಯಾದ, ದಕ್ಷನಾದ, ಧೈರ್ಯಶಾಲಿಯಾದ ಪ್ರತೀಹಾರಿಯು ಅಗಸ್ತ್ಯರ ಮಾತಿನಂತೆ ಬಹಳ ಶೀಘ್ರವಾಗಿ ಮಹಾತ್ಮನಾದ ಶ್ರೀರಾಮನ ಬಳಿಗೆ ಹೋದನು. ಪೂರ್ಣಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದ ಶ್ರೀರಾಮನನ್ನು ನೋಡಿದೊಡನೆಯೇ ಪ್ರತೀಹಾರಿಯು ಋಷಿಶ್ರೇಷ್ಠರಾದ ಅಗಸ್ತ್ಯರು ಅನೇಕಮಹರ್ಷಿಗಳೊಡನೆ ಆಗಮಿಸಿರುವ ವಾರ್ತೆಯನ್ನು ಶ್ರೀರಾಮನಿಗೆ ನಿವೇದಿಸಿದನು. ಬಾಲಸೂರ್ಯನ ತೇಜಸ್ಸಿನಂತೆ ತೇಜೋವಿಶಿಷ್ಟರಾಗಿರುವ ಮಹರ್ಷಿಗಳು ತನ್ನನ್ನು ಕಾಣಲು ಬಂದಿರುವರೆಂಬ ವಾರ್ತೆಯು ತಿಳಿದೊಡನೆಯೇ ಶ್ರೀರಾಮನು ಅವರೆಲ್ಲರನ್ನೂ ಸುಖಪೂರ್ವಕ

★ ಇಲ್ಲಿ ಅಗಸ್ತ್ಯರು ದಕ್ಷಿಣದಿಂದಲೂ ವಸಿಷ್ಠರು ಉತ್ತರದಿಂದಲೂ ಬಂದರೆಂದು ಹೇಳಿದೆ. ಪೌರಾಣಿಕ ಕಥೆಗಳ ಪ್ರಕಾರ ಅಗಸ್ತ್ಯರು ಉತ್ತರಕ್ಕೆ ಹೋಗುವಂತೆಯೇ ಇಲ್ಲ. ನಮಸ್ಕರಿಸಿದ ವಿಂಧ್ಯನಿಗೆ ನಾನು ಪುನಃ ಬರುವವರೆಗೂ ಹೀಗೆಯೇ ಇರಬೇಕೆಂದು ಹೇಳಿ ದಕ್ಷಿಣದ ಕಡೆಗೆ ಹೋಗುತ್ತಾರೆ. ಅವರು ಪುನಃ ಉತ್ತರಕ್ಕೆ ಹಿಂದಿರುಗಲಿಲ್ಲವೆಂದೂ ಆ ಪ್ರಕರಣದಲ್ಲಿ ಹೇಳಿದೆ. ಹೀಗಿರುವಾಗ ಈಗ ಹೇಗೆ ಬಂದರು ? (2) ವಸಿಷ್ಠರು ಕುಲಪುರೋಹಿತರು. ಯಾವಾಗಲೂ ಶ್ರೀರಾಮನ

ಒಳಕ್ಕೆ ಕರೆತರುವಂತೆ ಆ ದ್ವಾರಪಾಲಕನಿಗೆ ಆಜ್ಞಾಪಿಸಿದನು. ಶ್ರೀರಾಮನ ಆಜ್ಞೆಯಂತೆ ದ್ವಾರಪಾಲಕನು ಬಾಗಿಲಿನಲ್ಲಿ ನಿಂತಿದ್ದ ಎಲ್ಲ ಮಹರ್ಷಿಗಳನ್ನೂ ಶ್ರೀರಾಮನ ಸನ್ನಿಧಿಗೆ ಕರೆತರಲು, ಶ್ರೀರಾಮನು ಒಡನೆಯೇ ಮೇಲೆದ್ದು ಕೈಜೋಡಿಸಿಕೊಂಡು ಆದರ ಪೂರ್ವಕವಾಗಿ ಅರ್ಘ್ಯಪಾದ್ಯಾದಿಗಳನ್ನಿತ್ತು ಗೋವನ್ನೂ ಮಹರ್ಷಿಗಳಿಗೆ ಸಮರ್ಪಿಸಿದನು. ಹೀಗೆ ಶ್ರೀರಾಮನು ಮಹರ್ಷಿಗಳಿಗೆಲ್ಲರಿಗೂ ಶುದ್ಧವಾದ ಮನಸ್ಸಿನಿಂದ ನಮಸ್ಕರಿಸಿ ಕುಳಿತುಕೊಳ್ಳಲು ಎಲ್ಲರಿಗೂ ಆಸನಗಳನ್ನು ಸಿದ್ಧಪಡಿಸಿದನು. ಆ ಎಲ್ಲ ಆಸನಗಳೂ ಚಿನ್ನದಿಂದ ಮಾಡಿದುವುಗಳಾಗಿದ್ದು ಕೆತ್ತನೆಯ ಕೆಲಸಗಳಿಂದ ಚಿತ್ರತವಾಗಿದ್ದು ವಿಶಾಲವೂ, ಶ್ರೇಷ್ಠವೂ ಮತ್ತು ಸುಂದರವೂ ಆಗಿದ್ದುವು. ಸುವರ್ಣಮಯವಾದ ಆ ಆಸನಗಳ ಮೇಲೆ ದರ್ಭೆಗಳನ್ನು ಹರಡಿ ಮೃಗಚರ್ಮಗಳನ್ನು ಹೊದ್ದಿಸಲಾಗಿತ್ತು. ಆ ಎಲ್ಲ ಮುನಿಶ್ರೇಷ್ಠರೂ ಶ್ರೇಷ್ಠವಾದ ಆ ಆಸನಗಳಲ್ಲಿ ಸುಖವಾಗಿ ಕುಳಿತುಕೊಂಡರು. ಶ್ರೀರಾಮನು ಶಿಷ್ಯಸಹಿತರಾಗಿದ್ದ ಆ ಎಲ್ಲ ಪ್ರಮುಖಮಹರ್ಷಿಗಳ ಕುಶಲಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡನು. ಅನಂತರ ವೇದವಿದರಾದ ಮಹರ್ಷಿಗಳು ಶ್ರೀರಾಮನಿಗೆ ಹೇಳತೊಡಗಿದರು :

'' ಮಹಾಬಾಹುವೇ ! ರಘುನಂದನ ! ನಾವು ಸರ್ವತ್ರ ಕುಶಲಿಗಳಾಗಿದ್ದೇವೆ. ಸೌಭಾಗ್ಯವಶದಿಂದ ಶತ್ರುಗಳನ್ನು ಧ್ವಂಸಮಾಡಿ ಕುಶಲನಾಗಿರುವ ನಿನ್ನನ್ನು ನಾವು ನೋಡುತ್ತಿದ್ದೇವೆ. ಸೌಭಾಗ್ಯದ ಕಾರಣದಿಂದಲೇ ಲೋಕಕಂಟಕನಾಗಿದ್ದ ರಾವಣನು ನಿನ್ನಿಂದ ಹತನಾದನು. ರಾಘವ ! ಮಕ್ಕಳು ಮೊಮ್ಮಕ್ಕಳಿಂದ ಕೂಡಿದ್ದ ರಾವಣನನ್ನು ನಿಗ್ರಹಿಸುವುದು

ಬಳಿಯಲ್ಲೇ ಇರತಕ್ಕವರು. ಸಪ್ತರ್ಷಿಗಳಲ್ಲಿ ಒಬ್ಬರೆಂಬುದೂ ನಿಜ. ಇಬ್ಬರೂ ಒಬ್ಬರೇ ? ಅಥವಾ ಬೇರೆಯವರೇ ? ಪ್ರಕೃತ ಸಂದರ್ಭದಲ್ಲಿ ಸಪ್ತರ್ಷಿಮಂಡಲದ ವಸಿಷ್ಠರೇ ಬೇರೆ. ಶ್ರೀರಾಮನ ಕುಲಪುರೋಹಿತರಾದ ವಸಿಷ್ಠರೇ ಬೇರೆ – ಎಂದೇ ಹೇಳಬೇಕಾಗುತ್ತದೆ. ಅಂತೆಯೇ ಇಲ್ಲಿಗೆ ಬಂದ ಅಗಸ್ತ್ಯರೇ ಬೇರೆ. ವಿಂಧ್ಯನಿಗೆ ಆಶೀರ್ವದಿಸಿ ದಕ್ಷಿಣದಿಕ್ಕಿಗೆ ಹೋದ ಅಗಸ್ತ್ಯರೇ ಬೇರೆ – ಎಂದು ಭಾವಿಸೋಣವೇ ?– ಎಂದರೆ ಅಗಸ್ತ್ಯರು ದಕ್ಷಿಣದಲ್ಲಿ ವಾಸಮಾಡುತ್ತಿದ್ದರೂ ಕಾಲವಿಶೇಷದಲ್ಲಿ ತಮ್ಮ ಯೋಗಬಲದಿಂದ ಶ್ರೀರಾಮನ ಬಳಿಗೆ ಹೋದರು ; ವಸಿಷ್ಠರು ಅರಣ್ಯದಲ್ಲೇ

ನಿನಗೇನೂ ಹೆಚ್ಚು ಹೊರೆಯಾಗಿರಲಿಲ್ಲ. ಧನುರ್ಧರನಾದ ನೀನು ಮೂರು ಲೋಕಗಳನ್ನೂ ಏಕಾಕಿಯಾಗಿ ಜಯಿಸಬಲ್ಲೆ - ಎಂಬುದರಲ್ಲಿ ಸಂಶಯವೇ ಇಲ್ಲ. ಸೌಭಾಗ್ಯದ ಕಾರಣದಿಂದಲೇ ನೀನು ರಾವಣನನ್ನು ಸಂಹರಿಸಿದೆ. ಅದೃಷ್ಟವಿಶೇಷದಿಂದಲೇ ವಿಜಯಿಯಾಗಿ ಸೀತೆಯೊಡನಿರುವ ನಿನ್ನನ್ನು ನಾವು ಕಾಣುತ್ತಿದ್ದೇವೆ. ರಘುನಂದನನೇ ! ನಿನ್ನ ತಮ್ಮನಾದ ಲಕ್ಷ್ಮಣನು ಯಾವಾಗಲೂ ನಿನ್ನ ಹಿತದಲ್ಲಿಯೇ ಆಸಕ್ತನಾಗಿರತಕ್ಕವನು. ಅಂತಹ ಭ್ರಾತೃಸೇವಾನಿಷ್ಠನಾದ ತಮ್ಮನಿಂದಲೂ, ಭರತ - ಶತ್ರುಘ್ನರಿಂದಲೂ, ಕೌಸಲ್ಯೆಯೇ ಮೊದಲಾದ ಮಾತೃವರ್ಗದವರಿಂದಲೂ ಸಂಪನ್ನನಾಗಿರುವ ನಿನ್ನನ್ನು ನಾವು ಕಾಣುತ್ತಿದ್ದೇವೆ. ಇದು ನಮ್ಮ ಸೌಭಾಗ್ಯವೇ ಸರಿ.

ಅದೃಷ್ಟದ ಕಾರಣದಿಂದ ಪ್ರಹಸ್ತ, ವಿಕಟ, ವಿರೂಪಾಕ್ಷ, ಮಹೋದರ, ದುರ್ಧರ್ಷ , ಅಕಂಪನ - ಇವರೇ ಮೊದಲಾದ ಶೂರರಾಕ್ಷಸರೆಲ್ಲರೂ ನಿನ್ನಿಂದ ಹತರಾದರು. ಯಾವನ ಶರೀರದ ಉದ್ದಗಲಗಳು ಪ್ರಪಂಚದಲ್ಲಿರುವ ಯಾವುದೇ ವ್ಯಕ್ತಿಗೂ ಇರಲು ಸಾಧ್ಯವಿಲ್ಲವೋ - ಅಂತಹ ಪರ್ವತೋಪಮನಾದ ಕುಂಭಕರ್ಣನನ್ನು ನೀನು ಸಂಹರಿಸಿದೆ. ಇದೂ ಸೌಭಾಗ್ಯದ ವಿಷಯವೇ ಆಗಿದೆ. ಅದೃಷ್ಟವಶದಿಂದಲೇ ನೀನು ತ್ರಿಶಿರಸ, ಅತಿಕಾಯ, ದೇವಾಂತಕ, ಹಾಗೂ ನರಾಂತಕ - ಇವರೇ ಮೊದಲಾದ ಮಹಾವೀರ್ಯರಾದ ರಾಕ್ಷಸರನ್ನು ಸಂಹರಿಸಿದೆ. ಕುಂಭಕರ್ಣನ ಮಕ್ಕಳಾದ ಕುಂಭ-ನಿಕುಂಭರು ಮಹಾಭಯಂಕರರಾಗಿ ಕಾಣುತ್ತಿದ್ದರು. ಅವರನ್ನು ಕೂಡ ನೀನು ಯುದ್ಧದಲ್ಲಿ ಭಾಗ್ಯವಶದಿಂದಲೇ ಸಂಹರಿಸಿದೆ. ಪ್ರಳಯಕಾಲದ ಅಂತಕನಂತೆಯೂ ಯಮರಾಜನಂತೆಯೂ ಇದ್ದ ಯುದ್ಧೋನ್ಮತ್ತ, ಮತ್ತ, ಬಲಿಷ್ಠನಾದ

ವಾಸಮಾಡುತ್ತಿದ್ದರು. ಅವರ ದರ್ಶನಕ್ಕಾಗಿ ದಿಲೀಪ ಮಹಾರಾಜ ತಾನೇ ವನಕ್ಕೆ ಹೋದ- ಎಂದು ಕಾಳಿದಾಸನು ಹೇಳುತ್ತಾನೆ. ಅವರು ಪ್ರಧಾನ ಪುರೋಹಿತರಾಗಿದ್ದು ವಿಶೇಷ ಸಮಯಗಳಲ್ಲಿ ಮಾತ್ರ ರಾಜಧಾನಿಗೆ ಹೋಗುತ್ತಿದ್ದರು. ಸಾಮಾನ್ಯ ಪೌರೋಹಿತ್ಯವನ್ನು ಅವರ ಪುತ್ರ ಸುಯಜ್ಞನು ನಿರ್ವಹಿಸುತ್ತಿದ್ದನು. ಕಾಲಾನಂತರ ದಲ್ಲಿ ಇದೇ ವಸಿಷ್ಠರೇ ಸಪ್ತರ್ಷಿಮಂಡಲವಾಸಿಗಳಾದರು ಎಂದು ಹೇಳಬಹುದು. ವಸಿಷ್ಠ ವಿಶ್ವಾಮಿತ್ರ ಇತ್ಯಾದಿಗಳು ಅಧಿಕಾರಿಕ ಪುರುಷರ ಹೆಸರುಗಳು. ಆದ್ದರಿಂದ ಅನೇಕ ಮಂದಿ ವಸಿಷ್ಠ - ವಿಶ್ವಾಮಿತ್ರರು ಇರುವುದೂ ಸಂಭವ.

ಯಜ್ಞಕೋಪ, ಧೂಮ್ರಾಕ್ಷ- ಇವರೇ ಮುಂತಾದ ಶಸ್ತ್ರಾಸ್ತ್ರಗಳ ಪ್ರಹಾರೋಪಸಂಹಾರಗಳಲ್ಲಿ ಪಂಡಿತರಾದ ರಾಕ್ಷಸರು ಮಹಾಘೋರವಾದ ಯುದ್ಧವನ್ನೇ ನಿನ್ನೊಡನೆ ಮಾಡುತ್ತಿದ್ದರು. ಅವರೆಲ್ಲರನ್ನೂ ನೀನು ಅಂತಕಸದೃಶವಾದ ಬಾಣಗಳಿಂದ ಸಂಹರಿಸಿದೆ. ಇದೂ ಸೌಭಾಗ್ಯದ ವಿಷಯವೇ ಆಗಿದೆ. ದೇವತೆಗಳಿಂದಲೂ ವಧಿಸಲ್ಪಡದವನಾಗಿದ್ದ ರಾಕ್ಷಸೇಂದ್ರನಾದ ರಾವಣನೊಡನೆ ನೀನು ದ್ವಂದ್ವಯುದ್ಧಮಾಡಿ ವಿಜಯಗಳಿಸಿದೆ. ಯುದ್ಧದಲ್ಲಿ ರಾವಣನ ಪರಾಭವವಾದುದು ಅಂತಹ ಮಹತ್ತ್ವದ ವಿಷಯವೇನಲ್ಲ. ನಿನ್ನ ತಮ್ಮನಿಂದ ರಾವಣನ ಮಗನಾದ ಇಂದ್ರಜಿತುವು ದ್ವಂದ್ವಯುದ್ದದಲ್ಲಿ ಹತನಾದುದು ನಿಶ್ಚಯವಾಗಿಯೂ ಅತಿಮಹತ್ತ್ವದ ವಿಷಯವೇ ಆಗಿದೆ. ★ ಕಾಲಪುರುಷನಂತೆಯೇ ಅದೃಶ್ಯನಾಗಿ ಎಲ್ಲ ಕಡೆಗಳಲ್ಲಿಯೂ ಓಡಾಡುತ್ತಾ ಯುದ್ಧಮಾಡುತ್ತಿದ್ದ ದೇವಶತ್ರುವಾದ ಇಂದ್ರಜಿತುವಿನಿಂದ ಬಿಡಲ್ಪಟ್ಟ ನಾಗಪಾಶದಿಂದ ನೀವು ಬಿಡುಗಡೆಹೊಂದಿದುದೂ ಅದೃಷ್ಟದ ವಿಷಯವೇ ಸರಿ. ಇಂದ್ರಜಿತುವು ಲಕ್ಷ್ಮಣನಿಂದ ವಧಿಸಲ್ಪಟ್ಟನೆಂಬ ವಾರ್ತೆಯನ್ನು ಕೇಳಿದೊಡನೆಯೇ ನಾವೆಲ್ಲರೂ ಅಚ್ಚರಿಗೊಂಡೆವು. ಅವನು ಸಮಸ್ತಪ್ರಾಣಿಗಳಿಂದಲೂ ಅವಧ್ಯನಾಗಿದ್ದನು. ಮಹಾಮಾಯೆಯನ್ನಾಶ್ರಯಿಸಿ ಯುದ್ಧಮಾಡುತ್ತಿದ್ದನು. ಅಂತಹ ದುಷ್ಟರಾಕ್ಷಸನನ್ನು ಸಂಹರಿಸಿದ ನಿಮ್ಮನ್ನು ನಾವೆಲ್ಲರೂ ಅಭಿನಂದಿಸುತ್ತೇವೆ.

ರಘುಕುಲವರ್ಧನನೇ! ರಾಘವ! ಇವರೇ ಅಲ್ಲದೇ ಕಾಮರೂಪಿಗಳಾದ ಇನ್ನೂ ಅನೇಕ ರಾಕ್ಷಸರು ನಿನ್ನಿಂದ ಹತರಾದರು. ಇಂದ್ರಜಿತುವಿನ ಸಂಹಾರರೂಪವಾದ, ಪುಣ್ಯತಮವಾದ, ಸೌಮ್ಯವಾದ ಈ ಅಭಯವನ್ನು ಲೋಕಕ್ಕೆ ದಾನಮಾಡಿ ವಿಜಯಗಳಿಸಿದ ಕಾರಣ ಮುಂದೆ ನೀನು ನಮ್ಮೆಲ್ಲರ ಆಶೀರ್ವಾದಗಳಿಂದ ಅಭಿವೃದ್ಧಿಹೊಂದುವೆ.''

★ ಈ ಶ್ಲೋಕದಲ್ಲಿ ದಿಷ್ಟ್ಯಾ ತೇ ರಾವಣಿರ್ಹತಃ ಎಂಬುದಾಗಿದ್ದು 'ಅದೃಷ್ಟವಿಶೇಷದಿಂದಲೇ ನಿನ್ನಿಂದ ಇಂದ್ರಜಿತುವು ವಧಿಸಲ್ಪಟ್ಟನು ' ಎಂದೇ ನೇರವಾದ ಅರ್ಥವಾಗುತ್ತದೆ. ಆದರೆ ಇಂದ್ರಜಿತುವನ್ನು ಲಕ್ಷ್ಮಣನು ಸಂಹರಿಸಿರುವುದರಿಂದ ಭ್ರಾತ್ರಾ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು ಅರ್ಥಮಾಡಬೇಕು. ತೇ ಭ್ರಾತ್ರಾ ರಾವಣಿರ್ಹತಃ ಅಥವಾ ಲಕ್ಷ್ಮಣನ ಪ್ರತಿಜ್ಞಾವಚನದ ಪ್ರಕಾರ 'ಧರ್ಮಾತ್ಮಾ ಸತ್ಯಸಂಧಶ್ಚ' ರಾಮನ ಬಲದಿಂದಲೇ ಹತನಾದನು.

ಪವಿತ್ರ ಹೃದಯರಾದ ಮುನಿಗಳ ಮಾತುಗಳನ್ನು ಕೇಳಿ ಶ್ರೀರಾಮನು ಅಚ್ಚರಿಯನ್ನು ವ್ಯಕ್ತಪಡಿಸುತ್ತಾ ಹೇಳಿದನು :

'' ಪೂಜ್ಯಪಾದರಾದ ಮಹರ್ಷಿಗಳೇ ! ಕುಂಭಕರ್ಣ ಮತ್ತು ರಾವಣ ಈ ಇಬ್ಬರು ರಾಕ್ಷಸರೂ ಮಹಾಪರಾಕ್ರಮಿಗಳು. ಅವರನ್ನು ಕಡೆಗಾಣಿಸಿ ಇಂದ್ರಜಿತುವನ್ನೇಕೆ ನೀವು ಇಷ್ಟೊಂದು ಪ್ರಶಂಸೆಮಾಡುತ್ತಿರುವಿರಿ ? ಅತಿಕಾಯ, ತ್ರಿಶಿರಸ, ಧೂಮ್ರಾಕ್ಷ- ಇವರೆಲ್ಲರೂ ಮಹಾಪರಾಕ್ರಮಿಗಳೇ. ಇವರೆಲ್ಲರನ್ನೂ ಬಿಟ್ಟು ನೀವು ರಾವಣಿಯನ್ನೇಕೆ ಅಷ್ಟೊಂದು ಪ್ರಶಂಸೆಮಾಡುತ್ತಿರುವಿರಿ ? ಒಂದು ವೇಳೆ ರಾವಣನಿಗಿಂತಲೂ ರಾವಣಿಯೇ ಹೆಚ್ಚು ಪರಾಕ್ರಮಿಯೆಂಬುದು ನಿಮ್ಮ ಅಭಿಪ್ರಾಯವಾಗಿದ್ದರೆ ಅವನ ಪ್ರಭಾವವೆಂತಹುದು? ಅವನ ಬಲ-ಪರಾಕ್ರಮಗಳೆಷ್ಟು? ರಾವಣನಿಗಿಂತಲೂ ಅವನು ಪ್ರಭಾವಶಾಲಿಯೆನ್ನಲು ಏನು ಕಾರಣ ? - ಎಂಬುದನ್ನಾದರೂ ಹೇಳಿರಿ. ಈ ವಿಷಯವನ್ನು ನಾನು ಕೇಳಬಹುದಾಗಿದ್ದರೆ ರಹಸ್ಯವಲ್ಲದಿದ್ದರೆ ಹೇಳುವ ಕೃಪೆ ಮಾಡಿರಿ. ಈ ವಿಷಯದಲ್ಲಿ ನಾನು ನಿಮಗೆ ಆಜ್ಞೆ ಮಾಡುತ್ತಿಲ್ಲ, ಪ್ರಾರ್ಥನೆಮಾಡಿಕೊಳ್ಳುತ್ತಿದ್ದೇನೆ. ರಾವಣನ ಮಗನಾದ ಅವನು ಇಂದ್ರನನ್ನು ಹೇಗೆ ಜಯಿಸಿದನು? ಅವನು ವರವನ್ನು ಪಡೆದುದು ಹೇಗೆ ? ಅವನಷ್ಟು ಬಲಿಷ್ಠನಾದುದು ಹೇಗೆ ? ರಾವಣನು ತನ್ನ ಮಗನಷ್ಟೇಕೆ ಬಲಿಷ್ಠನಾಗಲಿಲ್ಲ ?

ಮುನಿಶ್ರೇಷ್ಠರೇ ! ಸಮರಾಂಗಣದಲ್ಲಿ ಇಂದ್ರಜಿತುವು ತಂದೆಗಿಂತಲೂ ಅಧಿಕಬಲಶಾಲಿಯಾಗಿ ಹೇಗೆ ಯುದ್ಧ ಮಾಡಿದನು ? ಆ ರಾಕ್ಷಸನು ಇಂದ್ರನನ್ನು ಹೇಗೆ ಜಯಿಸಿದನು ? ಹಲವಾರು ವರಗಳನ್ನು ಪಡೆಯಲು ಅವನಿಗೆ ಹೇಗೆ ಸಾಧ್ಯವಾಯಿತು ?- ಈ ನನ್ನ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸಿರಿ. ಇಂದ್ರಜಿತುವಿನ ಸಂಬಂಧವಾದ ಎಲ್ಲ ವಿಷಯಗಳನ್ನೂ ಹೇಳಿರಿ.''

1ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 2ನೆಯ ಸರ್ಗ

ಅಗಸ್ತ್ಯರಿಂದ ಪುಲಸ್ತ್ಯನ ಗುಣ ಮತ್ತು ತಪಸ್ಸಿನ ಪ್ರಭಾವಗಳ ವರ್ಣನೆ :ವಿಶ್ರವಸಮುನಿಯ ಜನ್ಮವೃತ್ತಾಂತ

ತಸ್ಯ ತದ್ವಚನಂ ಶ್ರುತ್ವಾ ರಾಘವಸ್ಯ ಮಹಾತ್ಮನಃ ।
ಕುಮ್ಭಯೋನಿರ್ಮಹಾತೇಜಾ ವಾಕ್ಯಮೇತದುವಾಚ ಹ ।।1।।

ಮಹಾತ್ಮನಾದ ಶ್ರೀರಾಮನ ಮಾತನ್ನು ಕೇಳಿ ಕುಂಭಸಂಭವರಾದ ಮಹಾತೇಜಸ್ವಿಗಳಾದ ಅಗಸ್ತ್ಯರು ಹೇಳಿದರು :

''ರಾಘವ ! ಇಂದ್ರಜಿತುವಿಗೆ ಮಹತ್ತಾದ ತೇಜಸ್ಸು ಮತ್ತು ಬಲಗಳು ಹೇಗೆ ಪ್ರಾಪ್ತವಾದುವೆಂಬ ವೃತ್ತಾಂತವನ್ನು ಹೇಳುವೆನು, ಕೇಳು. ಯಾವ ತಪಸ್ಸಿನ ಬಲದಿಂದ ಅವನು ಶತ್ರುಗಳನ್ನು ಸಂಹರಿಸುತ್ತಿದ್ದನು ಮತ್ತು ಅವನು ಶತ್ರುಗಳಿಂದ ಹೇಗೆ ಅವಧ್ಯನಾಗಿದ್ದನು ? - ಎಂಬ ಸಮಾಚಾರವನ್ನೂ ಹೇಳುವೆನು. ಇಂದ್ರಜಿತುವಿನ ತಪಸ್ಸಿನ ಪ್ರಭಾವ ಮತ್ತು ತಪಸ್ಸಿನಿಂದ ಅವನು ಪಡೆದುಕೊಂಡ ಬಲ- ಇವುಗಳನ್ನು ಹೇಳುವ ಮೊದಲು ನಾನು ಅವನ ತಂದೆಯಾದ ರಾವಣನ ಕುಲ –ಜನ್ಮ–ತಪಸ್ಸು – ವರಪ್ರಾಪ್ತಿ ಮುಂತಾದುವನ್ನು ವಿವರಿಸಿ ಹೇಳುವೆನು.

ರಾಘವ ! ಸತ್ಯಯುಗ (ಕೃತಯುಗ) ದಲ್ಲಿ ಪ್ರಜಾಪತಿಬ್ರಹ್ಮನಿಗೆ ಪುಲಸ್ತ್ಯನೆಂಬ ಹೆಸರಿನ ಪ್ರಭಾವಶಾಲಿಯಾದ ಒಬ್ಬ ಪುತ್ರನಿದ್ದನು. ಬ್ರಹ್ಮರ್ಷಿಯೂ ಆಗಿದ್ದ ಅವನು ಸಾಕ್ಷಾತ್ ಪಿತಾಮಹನಂತೆಯೇ ತೇಜಸ್ವಿ ಯಾಗಿದ್ದನು. ಪುಲಸ್ತ್ಯನ ಗುಣ –ಧರ್ಮ ಮತ್ತು ಶೀಲಗಳನ್ನು ವಿವರಿಸಿ ಹೇಳಲು ಶಕ್ಯವೇ ಇಲ್ಲ. ಪ್ರಜಾಪತಿಯ ಮಗ ಎಂದು ಹೇಳಿದರೆ ಸಾಕು, ಅವನ ಎಲ್ಲ ಗುಣಗಳನ್ನೂ ವರ್ಣಿಸಿದಂತಾಗುತ್ತದೆ. ಪುಲಸ್ತ್ಯನು ಬ್ರಹ್ಮನ ಮಗನಾಗಿದ್ದುದರಿಂದ ದೇವತೆಗಳಿಗೂ ಅತ್ಯಂತಪ್ರಿಯನಾಗಿದ್ದನು. ಮಹಾ ಬುದ್ಧಿವಂತನಾಗಿದ್ದ ಅವನು ತನ್ನ ಉಜ್ಜ್ವಲವಾದ ಗುಣಗಳಿಂದ ಸಮಸ್ತ ಲೋಕಗಳಿಗೂ ಪ್ರಿಯನಾಗಿದ್ದನು.

ಒಮ್ಮೆ ಪುಲಸ್ತ್ಯನು ಧರ್ಮಾಚರಣೆಗಾಗಿ ಮಹಾಗಿರಿಯಾದ ಮೇರು ಪರ್ವತದ ಪಕ್ಕದಲ್ಲಿದ್ದ ರಾಜರ್ಷಿಯಾದ ತೃಣಬಿಂದುವಿನ ಆಶ್ರಮಕ್ಕೆ ಹೋಗಿ

ಸ್ವಲ್ಪಕಾಲ ಅಲ್ಲಿಯೇ ವಾಸಮಾಡುತ್ತಿದ್ದನು. ಧರ್ಮಾತ್ಮನಾದ ಅವನು ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಅನುದಿನವೂ ವೇದಾಧ್ಯಯನ ಮಾಡುತ್ತಾ ತಪಸ್ಸನ್ನು ಮಾಡುತ್ತಿದ್ದನು. ಆದರೆ ಕೆಲವರು ಕನ್ಯೆಯರು ಅವನಿದ್ದ ಆಶ್ರಮಕ್ಕೆ ಬಂದು ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಿದ್ದರು. ಋಷಿಕನ್ಯೆಯರೂ, ನಾಗಕನ್ಯೆಯರೂ, ರಾಜರ್ಷಿ ಕನ್ಯೆಯರೂ ಮತ್ತು ಅಪ್ಸರೆಯರೂ ಕ್ರೀಡೆಯಾಡುತ್ತಾ ಪುಲಸ್ತ್ಯನ ಆಶ್ರಮದ ಬಳಿಗೆ ಬಂದರು. ಪುಲಸ್ತ್ಯನು ತಪಸ್ಸುಮಾಡುತ್ತಿದ್ದ ಆ ಪ್ರದೇಶವು ಎಲ್ಲ ಋತುಗಳಲ್ಲಿಯೂ ನಲಿದಾಡಲು ಯೋಗ್ಯವಾಗಿದ್ದುದರಿಂದಲೂ ಮತ್ತು ಅತ್ಯಂತ ರಮಣೀಯವಾಗಿದ್ದುದರಿಂದಲೂ ಆ ಎಲ್ಲ ಕನ್ಯೆಯರೂ ನಿತ್ಯವೂ ಅಲ್ಲಿಗೆ ಹೋಗಿ ವಿಹರಿಸುತ್ತಿದ್ದರು. ಪುಲಸ್ತ್ಯನು ತಪಸ್ಸುಮಾಡುತ್ತಿದ್ದ ಪ್ರದೇಶವಂತೂ ಇನ್ನೂ ಅತಿಶಯವಾಗಿ ರಮಣೀಯವಾಗಿದ್ದಿತು. ಈ ಕಾರಣದಿಂದ ಆ ಕನ್ಯೆಯರು ಪ್ರತಿನಿತ್ಯವೂ ಅಲ್ಲಿಗೆ ಬಂದು ಹಾಡುತ್ತಿದ್ದರು. ವಾದ್ಯಗಳನ್ನು ಬಾರಿಸುತ್ತಿದ್ದರು. ಕುಣಿದಾಡುತ್ತಿದ್ದರು. ಕನ್ಯೆಯರ ಈ ಸ್ವೇಚ್ಛಾವರ್ತನೆಯಿಂದಾಗಿ ಪುಲಸ್ತ್ಯನು ಕುಪಿತನಾಗಿ ಹೀಗೆ ಹೇಳಿದನು :

ಯಾ ಮೇ ದರ್ಶನಮಾಗಚ್ಛೇತ್ಸಾ ಗರ್ಭಂ ಧಾರಯಿಷ್ಯತಿ ||12||

'' ನನ್ನ ದೃಷ್ಟಿಪಥಕ್ಕೆ ಯಾವ ಕನ್ಯೆಯು ಗೋಚರವಾಗುವಳೋ ಅವಳು ಒಡನೆಯೇ ಗರ್ಭವನ್ನು ಧರಿಸುವಳು.''

ಮಹಾತ್ಮನಾದ ಪುಲಸ್ತ್ಯನ ಮಾತನ್ನು ಕೇಳಿ ಆ ಎಲ್ಲ ಕನ್ಯೆಯರೂ ಬ್ರಹ್ಮಶಾಪದ ಭಯದಿಂದಾಗಿ ಆ ಪ್ರದೇಶಕ್ಕೆ ಹೋಗುವುದನ್ನೇ ನಿಲ್ಲಿಸಿದರು. ಆದರೆ ರಾಜರ್ಷಿಯಾದ ತೃಣಬಿಂದುವಿನ ಮಗಳಿಗೆ ಪುಲಸ್ತ್ಯನ ಆ ಶಾಪದ ಸಮಾಚಾರವು ತಿಳಿದಿರಲಿಲ್ಲವಾದುದರಿಂದ ಅವಳು ಮರುದಿನ ಯಾವ ವಿಧವಾದ ಭಯವೂ ಇಲ್ಲದೇ ಹಿಂದಿನಂತೆಯೇ ಆ ಆಶ್ರಮಪ್ರದೇಶದಲ್ಲಿ ನಲಿದಾಡುತ್ತಿದ್ದಳು. ಅವಳ ಸಖಿಯರಾರೂ ಅಲ್ಲಿಗೆ ಬಂದಿರಲಿಲ್ಲ. ರಾಜಪುತ್ರಿಯೊಬ್ಬಳೇ ಅಲ್ಲಿ ಆಡುತ್ತಾ –ಪಾಡುತ್ತಾ ನಲಿದಾಡುತ್ತಿದ್ದಳು. ಅದೇ ಸಮಯದಲ್ಲಿ ಮಹಾ ತೇಜಸ್ವಿಯಾದ, ಪ್ರಜಾಪತಿಯ ಮಗನಾದ, ಮಹರ್ಷಿಯಾದ ಪುಲಸ್ತ್ಯನು ತಪಸ್ಸಿನಿಂದ ತೇಜೋವಿಶಿಷ್ಟನಾಗಿ ವೇದಾಧ್ಯಯನವನ್ನು ಮಾಡುತ್ತಿದ್ದನು.

ಅಲ್ಲಿಯೇ ನಲಿದಾಡುತ್ತಿದ್ದ ರಾಜಪುತ್ರಿಯು ತಪೋನಿಧಿಯಾದ ಪುಲಸ್ತ್ಯನು ಹೇಳುತ್ತಿದ್ದ ವೇದದ ಧ್ವನಿಯನ್ನು ಆಲಿಸುತ್ತಾ ಅವನ ಬಳಿಗೆ ಹೋಗಿ ನೋಡಿದಳು. ಪುಲಸ್ತ್ಯನ ದೃಷ್ಟಿಯೂ ಅವಳ ಮೇಲೆ ಬಿದ್ದಿತು. ಮರು ಕ್ಷಣದಲ್ಲಿಯೇ ಅವಳ ಶರೀರವು ಬಿಳಿಚಿಕೊಂಡು ಗರ್ಭಧರಿಸಿದ ಚಿಹ್ನೆಯು ಅವಳಲ್ಲಿ ಕಾಣಿಸಿಕೊಂಡಿತು. ತನ್ನ ಶರೀರದಲ್ಲುಂಟಾದ ದೋಷವನ್ನು ಕಂಡು ರಾಜಕುಮಾರಿಯು ಗಾಬರಿಗೊಂಡಳು. ' ನನ್ನ ಶರೀರದಲ್ಲಿ ಈಗೇನಾಗಿದೆ? ಹೀಗಾಗಲು ಕಾರಣವೇನಿರಬಹುದು ?' ಹೀಗೆ ಚಿಂತಿಸುತ್ತಾ ತಂದೆಯ ಆಶ್ರಮಕ್ಕೆ ಹೋದಳು. ಗರ್ಭವನ್ನು ಧರಿಸಿ ಬಂದಿದ್ದ ಮಗಳನ್ನು ನೋಡಿ ತೃಣಬಿಂದುವು ಹೇಳಿದನು :

'' ಕುಮಾರಿ ! ನಿನ್ನ ಶರೀರಕ್ಕೆ ಇಂತಹ ಅವಸ್ಥೆಯು ಹೇಗುಂಟಾಯಿತು? ಈಗಿನ ನಿನ್ನ ಶರೀರದ ಬದಲಾವಣೆಯು ಸರ್ವಥಾ ಅಯೋಗ್ಯವೂ ಅನುಚಿತವೂ ಆಗಿದೆ.''

ತಂದೆಯ ಮಾತನ್ನು ಕೇಳಿ ದೀನೆಯಾದ ರಾಜಕನ್ಯೆಯು ಕೈಮುಗಿದು ಕೊಂಡು ಹೇಳಿದಳು :

'' ಇಂತಹ ಅವಸ್ಥೆಯು ನನ್ನ ಶರೀರಕ್ಕೆ ಬಂದೊದಗಿರುವುದಕ್ಕೆ ಕಾರಣ ವೇನೂ ತಿಳಿಯದು. ತಂದೆಯೇ ! ಸ್ವಲ್ಪ ಹೊತ್ತಿನ ಮೊದಲು ನಾನು ಪವಿತ್ರಾತ್ಮನಾದ ಪುಲಸ್ತ್ಯ ಮಹರ್ಷಿಯ ದಿವ್ಯಾಶ್ರಮಕ್ಕೆ ನನ್ನ ಸಖಿಯರನ್ನು ಹುಡುಕುವ ಸಲುವಾಗಿ ಹೋಗಿದ್ದೆನು. ಆದರೆ ಅಲ್ಲಿಗೆ ನನ್ನ ಯಾವ ಸಖಿಯೂ ಬಂದಿರಲಿಲ್ಲ, ಆದರೆ ನನ್ನ ರೂಪವು ಮಾತ್ರ ಹೀಗೆ ಬದಲಾ ಯಿಸಿತು. ಇದರಿಂದ ಭಯಗೊಂಡು ನಾನು ನಿನ್ನಲ್ಲಿಗೆ ಬಂದೆನು.''

ತಪಸ್ಸಿನಿಂದ ಪ್ರಕಾಶಮಾನನಾಗಿ ಬೆಳಗುತ್ತಿದ್ದ, ರಾಜರ್ಷಿಯಾದ ತೃಣಬಿಂದುವು ಮಗಳು ಹೇಳಿದ ಆ ಮಾತನ್ನು ಕೇಳಿ ಧ್ಯಾನಮಗ್ನನಾದನು. ಅಂತರ್ಮುಖನಾದ ರಾಜರ್ಷಿಗೆ ಅದು ಬ್ರಹ್ಮರ್ಷಿಯಾದ ಪುಲಸ್ತ್ಯನ ಕಾರ್ಯವೇ ಎಂಬ ಅರಿವುಂಟಾಯಿತು. ಪವಿತ್ರಾತ್ಮನಾದ ಮಹರ್ಷಿಯ ಶಾಪದ ವಿಷಯವನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಂಡ ರಾಜರ್ಷಿಯು ಮಗಳನ್ನು ಜೊತೆಯಲ್ಲಿಯೇ ಕರೆದುಕೊಂಡು ಪುಲಸ್ತ್ಯನ ಬಳಿಗೆ ಹೋಗಿ ಹೇಳಿದನು :

'' ಪೂಜ್ಯನೇ ! ಈ ನನ್ನ ಮಗಳು ತನ್ನ ಕಲ್ಯಾಣಗುಣಗಳಿಂದ ವಿಭೂಷಿತಳಾಗಿದ್ದಾಳೆ. ತಾನಾಗಿಯೇ ಬಂದಿರುವ ಇವಳನ್ನು ನೀನು ಭಿಕ್ಷೆಯ ರೂಪದಲ್ಲಿ ಪ್ರತಿಗ್ರಹಿಸು. ಸದಾ ತಪಸ್ಸಿನಲ್ಲಿಯೇ ನಿರತನಾಗಿರುವ ನೀನು ಬಹಳ ಬಳಲುವೆ. ನಿನ್ನ ಇಂದ್ರಿಯಗಳೆಲ್ಲವೂ ಆಯಾಸಗೊಳ್ಳುತ್ತವೆ. ನಿನ್ನನ್ನು ಇವಳು ಯಾವಾಗಲೂ ಶುಶ್ರೂಷೆಮಾಡುತ್ತಿರುತ್ತಾಳೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.''

ಪುಲಸ್ತ್ಯನು ಆ ಕನ್ಯೆಯನ್ನು ಪ್ರತಿಗ್ರಹಿಸುವ ಅಪೇಕ್ಷೆಯಿಂದ ಹೀಗೆ ಹೇಳುತ್ತಿದ್ದ ಧಾರ್ಮಿಕನಾದ ರಾಜರ್ಷಿಗೆ '**ಬಾಢಂ**' 'ಹಾಗೆಯೇ ಆಗಲಿ – ನೀನು ಹೇಳಿದಂತೆ ಇವಳನ್ನು ಭಿಕ್ಷೆಯ ರೂಪದಲ್ಲಿ ಪ್ರತಿಗ್ರಹಿಸುತ್ತೇನೆ' – ಎಂದು ಹೇಳಿದನು.

ಈ ರೀತಿಯಲ್ಲಿ ಕನ್ಯೆಯನ್ನು ಪುಲಸ್ತ್ಯನಿಗೆ ಒಪ್ಪಿಸಿಕೊಟ್ಟು ರಾಜನು ತನ್ನ ಆಶ್ರಮಕ್ಕೆ ಹಿಂದಿರುಗಿದನು. ಆ ಕನ್ಯೆಯು ಕೂಡ ತನ್ನ ಕಲ್ಯಾಣಗುಣಗಳಿಂದ ಪತಿಯನ್ನು ಸಂತೋಷಗೊಳಿಸುತ್ತಾ ಪುಲಸ್ತ್ಯನ ಆಶ್ರಮದಲ್ಲಿಯೇ ವಾಸವಾಗಿದ್ದಳು. ಕನ್ಯೆಯ ಶೀಲ– ಸದಾಚಾರಗಳಿಂದ ಸಂತುಷ್ಟನಾದ ಮಹಾತೇಜಸ್ವಿಯಾದ, ಮುನಿಶ್ರೇಷ್ಠನಾದ ಪುಲಸ್ತ್ಯನು ಕನ್ಯೆಗೆ ಹೇಳಿದನು :

'' ಸುಂದರಿ ! ಸಂಪದ್ರೂಪವಾದ ನಿನ್ನ ಕಲ್ಯಾಣಗುಣಗಳಿಂದ ನಾನು ಸಂತುಷ್ಟನಾಗಿದ್ದೇನೆ. ಈ ಕಾರಣದಿಂದ ನನಗೆ ಅನುರೂಪನಾದ ಪುತ್ರನನ್ನು ನಿನಗೆ ಅನುಗ್ರಹಿಸುತ್ತೇನೆ. ಎರಡು ವಂಶಗಳ ಅಭಿವೃದ್ಧಿಗೂ ಕಾರಣನಾಗುವ ಪೌಲಸ್ತ್ಯ ಎಂಬ ಹೆಸರಿನಿಂದ ವಿಖ್ಯಾತನಾಗುವ ಪುತ್ರನನ್ನು ದಯಪಾಲಿಸುತ್ತೇನೆ. ದೇವಿ ! ನಾನಿಲ್ಲಿ ವೇದಾಭ್ಯಾಸವನ್ನು ಮಾಡುತ್ತಿದ್ದೆನು. ಆ ಸಮಯದಲ್ಲಿ ನೀನು ನಾನು ಹೇಳುತ್ತಿದ್ದ ವೇದಮಂತ್ರಗಳನ್ನು ವಿಶೇಷವಾದ ಆಸಕ್ತಿಯಿಂದ ಕೇಳುತ್ತಿದ್ದೆ. ಈ ಕಾರಣದಿಂದ ನಿನ್ನಲ್ಲಿ ಹುಟ್ಟುವ ಪುತ್ರನು ವಿಶ್ರವಸ ಅಥವಾ ವಿಶ್ರವಣ – ಎಂಬ ಹೆಸರಿನಿಂದಲೂ ವಿಖ್ಯಾತನಾಗುತ್ತಾನೆ.''

ಪ್ರಸನ್ನವಾದ ಅಂತಃಕರಣದಿಂದ ಕೂಡಿದ್ದ ಪತಿದೇವನು ಹೀಗೆ ಹೇಳಲು ರಾಜಕುಮಾರಿಯು ಆನಂದಭರಿತಳಾಗಿ ಸ್ವಲ್ಪದಿವಸಗಳಲ್ಲಿಯೇ ಮೂರು ಲೋಕಗಳಲ್ಲಿಯೂ ವಿಖ್ಯಾತನಾದ, ಯಶಸ್ಸಿನಿಂದಲೂ ಧರ್ಮದಿಂದಲೂ ಸಂಪನ್ನನಾದ ವಿಶ್ರವಸನೆಂಬ ಮಗನನ್ನು ಹಡೆದಳು. ಆ ಮುನಿಯು ತನ್ನ

ತಂದೆಯಾದ ಪುಲಸ್ತ್ಯನಂತೆಯೇ ವೇದವಿದನೂ, ಸಮದರ್ಶಿಯೂ, ವ್ರತನಿಷ್ಠನೂ, ಆಚಾರನಿಷ್ಠನೂ, ತಪಸ್ವಿಯೂ ಆದನು.

2ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 3ನೆಯ ಸರ್ಗ

ವಿಶ್ರವಸನಿಂದ ಕುಬೇರನ ಜನ್ಮ : ಕುಬೇರನ ತಪಸ್ಸು : ವರ ಪ್ರಾಪ್ತಿ : ಲಂಕಾನಿವಾಸ

ಅಥ ಪುತ್ರಃ ಪುಲಸ್ತ್ಯಸ್ಯ ವಿಶ್ರವಾ ಮುನಿಪುಙ್ಗವಃ ।
ಅಚಿರೇಣೈವ ಕಾಲೇನ ಪಿತೇವ ತಪಸಿ ಸ್ಥಿತಃ ॥1॥

ಪುಲಸ್ತ್ಯನ ಮಗನಾದ ಮುನಿಶ್ರೇಷ್ಠನಾದ ವಿಶ್ರವಸನು ತಂದೆ ಯಂತೆಯೇ ಅತ್ಯಲ್ಪಕಾಲದಲ್ಲಿ ತಪಸ್ಸಿನಲ್ಲಿ ನಿರತನಾದನು.

ವಿಶ್ರವಸನು ಸತ್ಯವಾದಿಯೂ, ಶೀಲವಂತನೂ, ಜಿತೇಂದ್ರಿಯನೂ, ಸ್ವಾಧ್ಯಾಯಪರಾಯಣನೂ, ಅಂತಃ–ಶುದ್ಧಿಬಹಿಃಶುದ್ಧಿಗಳುಳ್ಳವನೂ, ಸಕಲ ಭೋಗಗಳಲ್ಲಿ ಅನಾಸಕ್ತನೂ, ಸರ್ವಕಾಲದಲ್ಲಿಯೂ ಧರ್ಮಾಚರಣೆ ಗಳಲ್ಲಿಯೇ ನಿರತನೂ ಆಗಿದ್ದನು.

ವಿಶ್ರವಸನ ಸದಾಚಾರ – ಸಚ್ಚಾರಿತ್ರ್ಯಗಳನ್ನು ನೋಡಿ ಮಹಾಮುನಿ ಯಾದ ಭರದ್ವಾಜನು ದೇವಾಂಗನೆಯಂತೆ ಕಡುಚಲುವೆಯಾಗಿದ್ದ ತನ್ನ ಮಗಳನ್ನು ವಿಶ್ರವಸನಿಗೆ ಮದುವೆಮಾಡಿಕೊಟ್ಟನು. ಧರ್ಮಜ್ಞನಾದ, ಮುನಿ ಶ್ರೇಷ್ಠನಾದ ವಿಶ್ರವಸನು ಪರಮಹೃಷ್ಟನಾಗಿ ಧರ್ಮಾನುಸಾರವಾಗಿ ಭರದ್ವಾಜಮುನಿಯ ಮಗಳ ಪಾಣಿಗ್ರಹಣಮಾಡಿದನು. ಲೋಕದ ಪ್ರಜೆ ಗಳಿಗೆ ಹಿತವನ್ನುಂಟುಮಾಡುವ ಬುದ್ಧಿಯಿಂದ ಕೂಡಿದವನಾಗಿ ಲೋಕದ ಶ್ರೇಯಸ್ಸನ್ನೇ ಚಿಂತಿಸುತ್ತಾ ಭರದ್ವಾಜಕನ್ಯೆಯಲ್ಲಿ ವೀರ್ಯಸಂಪನ್ನನಾದ ಮತ್ತು ಪರಮಾದ್ಭುತನಾದ ಒಬ್ಬ ಪುತ್ರನನ್ನು ಪಡೆದುಕೊಂಡನು. ಆ ಬಾಲಕನು ಧರ್ಮಜ್ಞನೂ, ಬ್ರಾಹ್ಮಣೋಚಿತವಾದ ಸಮಸ್ತಗುಣಗಳಿಂದ ಸಂಪನ್ನನೂ ಆಗಿದ್ದನು. ಅಂತಹ ಮೊಮ್ಮಗನು ಹುಟ್ಟಲು ಪಿತಾಮಹನಾದ ಪುಲಸ್ತ್ಯನಿಗೂ ಆನಂದವಾಯಿತು.

ಪುಲಸ್ತ್ಯನು ಆ ಬಾಲಕನಿಗೆ ಪ್ರಪಂಚಕ್ಕೆ ಕಲ್ಯಾಣವನ್ನುಂಟು ಮಾಡುವ ಬುದ್ಧಿಯಿರುವುದನ್ನು ದಿವ್ಯದೃಷ್ಟಿಯಿಂದ ಕಂಡುಕೊಂಡು ಅವನು ಮುಂದೆ ಧನಾಧ್ಯಕ್ಷನಾಗುವನೆಂದು ಭವಿಷ್ಯವನ್ನು ಹೇಳಿದನು. ದೇವರ್ಷಿ ಗಳೊಡನೆ ಅವನಿಗೆ ನಾಮಕರಣವನ್ನೂ ಮಾಡಿದನು.

ಯಸ್ಮಾದ್ವಿಶ್ರವಸೋಽಪತ್ಯಂ ಸಾದೃಶ್ಯಾದ್ವಿಶ್ರವಾ ಇವ ।
ತಸ್ಮಾದ್ವೈಶ್ರವಣೋ ನಾಮ ಭವಿಷ್ಯತ್ಯೇಷ ವಿಶ್ರುತಃ ॥8॥

''ವಿಶ್ರವಸನ ಮಗನಾಗಿರುವುದರಿಂದಲೂ ವಿಶ್ರವಸನನ್ನೇ ಹೋಲುತ್ತಿರುವುದರಿಂದಲೂ ಇವನು ವೈಶ್ರವಣನೆಂಬ ಹೆಸರಿನಿಂದಲೇ ಪ್ರಸಿದ್ಧನಾಗುತ್ತಾನೆ. ''

ವಿಶ್ರವಸನು ಮಗನಿಗೆ ಹೀಗೆ ನಾಮಕರಣಮಾಡಿ ತಪಸ್ಸು ಮಾಡಲು ತಪೋವನಕ್ಕೆ ಹೊರಟುಹೋದನು. ಆಹುತಿಯಿಂದ ಹುತಮಾಡಲ್ಪಟ್ಟ ಮಹಾತೇಜಸ್ಸಿನಿಂದ ಕೂಡಿದ ಯಜ್ಞೇಶ್ವರನಂತೆಯೇ ವೈಶ್ರವಣನು ಅಭಿವೃದ್ಧಿ ಹೊಂದುತ್ತಿದ್ದನು.

ಆಶ್ರಮದಲ್ಲಿ ವಾಸಮಾಡುತ್ತಿದ್ದ ಮಹಾತ್ಮನಾದ ವೈಶ್ರವಣನಿಗೆ ಒಮ್ಮೆ ಹೀಗೆ ಬುದ್ಧಿಯುಂಟಾಯಿತು.

ಚರಿಷ್ಯೇ ಪರಮಂ ಧರ್ಮಂ ಧರ್ಮೋ ಹಿ ಪರಮಾ ಗತಿಃ ॥ 10॥

'' ನಾನು ಶ್ರೇಷ್ಠವಾದ ಧರ್ಮಾಚರಣೆಯನ್ನು ಮಾಡುತ್ತೇನೆ. ಏಕೆಂದರೆ ಧರ್ಮವೇ ಪರಮಗತಿಯಾಗಿದೆ.''

ವೈಶ್ರವಣನು ಹೀಗೆ ಯೋಚಿಸಿ ತಪಸ್ಸು ಮಾಡಲು ನಿಶ್ಚಯಿಸಿ ಕಠೋರ ನಿಯಮಗಳಿಗೆ ಒಳಪಟ್ಟು ಮಹಾವನದಲ್ಲಿ ಒಂದು ಸಾವಿರ ವರ್ಷಗಳ ಕಾಲ ಮಹತ್ತರವಾದ ತಪಸ್ಸನ್ನು ಮಾಡಿದನು.

ಒಂದು ಸಾವಿರ ವರ್ಷಗಳು ಕಳೆದ ನಂತರ ವೈಶ್ರವಣನು ಹೊಸ ಹೊಸ ನಿಯಮಗಳನ್ನು ಕಲ್ಪಿಸಿಕೊಂಡು ತಪಸ್ಸು ಮಾಡತೊಡಗಿದನು. ಒಂದು ಸಾವಿರ ವರ್ಷಗಳ ಕಾಲ ಅವನು ನೀರನ್ನು ಮಾತ್ರ ಕುಡಿಯುತ್ತಾ ತಪಸ್ಸು ಮಾಡಿದನು. ಮತ್ತೊಂದು ಸಾವಿರ ವರ್ಷಗಳ ಕಾಲ ಗಾಳಿಯನ್ನೇ ಆಹಾರ

ವನ್ನಾಗಿ ಮಾಡಿಕೊಂಡು ತಪಸ್ಸು ಮಾಡಿದನು. ಅನಂತರ ಯಾವುದೇ ಆಹಾರ ವನ್ನೂ ತೆಗೆದುಕೊಳ್ಳದೇ ಒಂದು ಸಾವಿರ ವರ್ಷದವರೆಗೆ ತಪಸ್ಸು ಮಾಡಿದನು. ಹೀಗೆ ಅವನು ತಪಸ್ಸು ಮಾಡುತ್ತಾ ಸಾವಿರ ವರ್ಷಗಳನ್ನು ಒಂದು ವರ್ಷ ದಂತೆಯೇ ಕಳೆಯುತ್ತಿದ್ದನು. ವೈಶ್ರವಣನ ಆ ಘೋರವಾದ ತಪಸ್ಸಿನಿಂದ ಸುಪ್ರೀತನಾದ ಮಹಾತೇಜಸ್ವಿಯಾದ ಬ್ರಹ್ಮನು ಇಂದ್ರನೇ ಮೊದಲಾದ ದೇವತೆಗಳೊಡನೆ ವೈಶ್ರವಣನ ಆಶ್ರಮದ ಬಳಿಗೆ ಬಂದು ಅವನಿಗೆ ಹೇಳಿದನು:

ಪರಿತುಷ್ಟೋಽಸ್ಮಿ ತೇ ವತ್ಸ ಕರ್ಮಣಾನೇನ ಸುವ್ರತ ।

ವರಂ ವೃಣೀಷ್ವ ಭದ್ರಂ ತೇ ವರಾರ್ಹಸ್ತ್ವಂ ಮಹಾಮತೇ ॥ 14॥

'' ವತ್ಸ! ನಿನ್ನ ಈ ಪರಮಾದ್ಭುತವಾದ ತಪಃಕರ್ಮದಿಂದ ನಾನು ಸಂತುಷ್ಟನಾಗಿದ್ದೇನೆ. ಮಹಾಮತಿಯೇ ! ನೀನು ವರವನ್ನು ಪಡೆದು ಕೊಳ್ಳಲು ಯೋಗ್ಯನಾಗಿರುವೆ. ನಿನಗೆ ಮಂಗಳವಾಗಲಿ ; ಯಾವ ವರವು ಬೇಕೆಂಬುದನ್ನು ಹೇಳು.''

ಹೀಗೆ ಹೇಳಿದ ಪಿತಾಮಹನಿಗೆ ವೈಶ್ರವಣನು ಹೇಳಿದನು :

ಭಗವನ್ ಲೋಕಪಾಲತ್ವಮಿಚ್ಛೇಯಂ ಲೋಕರಕ್ಷಣಮ್ ॥ 15॥

'' ಪೂಜ್ಯನೇ ! ಲೋಕಗಳನ್ನು ರಕ್ಷಣೆಮಾಡಲು ಸಾಧ್ಯವಾಗುವ ಲೋಕಪಾಲಪದವಿಯನ್ನು ನಾನು ಬಯಸುವೆನು.''

ವೈಶ್ರವಣನ ಆ ಮಾತನ್ನು ಕೇಳಿ ಸಂತುಷ್ಟಹೃದಯನಾದ ಪಿತಾ ಮಹನು ದೇವತೆಗಳೊಡನೆ '**ಬಾಢಂ** –ಹಾಗೆಯೇ ಆಗಲಿ ' ನೀನು ಲೋಕ ಪಾಲನಾಗು.' ನಾನು ನಾಲ್ಕನೆಯ ಲೋಕಪಾಲನನ್ನು ಸೃಷ್ಟಿಸಲು ಉದ್ಯುಕ್ತ ನಾಗಿದ್ದೆನು. ಈಗ ನಿನ್ನ ಅಭಿಲಾಷೆಯಂತೆ ಯಮ –ಇಂದ್ರ ಮತ್ತು ವರುಣ ರಂತೆ ನೀನೂ ಒಬ್ಬ ಲೋಕಪಾಲನಾಗು. ಧರ್ಮಜ್ಞನೇ! ನೀನು ಒಳ್ಳೆಯ ಮನಸ್ಸಿನಿಂದ ಈ ಪದವಿಯನ್ನು ಪರಿಗ್ರಹಿಸು. ಅದರ ಜೊತೆಗೆ ನೀನು ಸಮಸ್ತವಾದ ನಿಧಿಗಳಿಗೂ ಸ್ವಾಮಿಯಾಗುವೆ. ಲೋಕಪಾಲರಲ್ಲಿ ಇಂದ್ರ – ವರುಣ ಮತ್ತು ಯಮರೊಡನೆ ನಾಲ್ಕನೆಯ ಲೋಕಪಾಲನು ನೀನಾಗುವೆ. ಸೂರ್ಯಸದೃಶವಾಗಿರುವ ಈ ಪುಷ್ಪಕವಿಮಾನವನ್ನು ಸಂಚಾರಾರ್ಥವಾಗಿ ಪ್ರತಿಗ್ರಹಿಸು. ದೇವತೆಗಳಿಗೆ ಸಮಾನನಾಗು. ನಿನಗೆ ಮಂಗಳವಾಗಲಿ.

ನಾವೆಲ್ಲರೂ ಎಲ್ಲಿಂದ ಬಂದಿದ್ದೆವೋ ಅಲ್ಲಿಗೆ ಪ್ರಯಾಣಮಾಡುತ್ತೇವೆ. ನಿನಗೆ ಎರಡು ವರಗಳನ್ನು ಕೊಟ್ಟು ನಾವು ಕೃತಕೃತ್ಯರಾದೆವು.''

ಪಿತಾಮಹನು ಹೀಗೆ ಹೇಳಿ ದೇವತೆಗಳೊಡನೆ ಸ್ವರ್ಗಕ್ಕೆ ಹೊರಟು ಹೋದನು. ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಆಕಾಶಮಾರ್ಗದಲ್ಲಿ ಹೊರಟುಹೋದನಂತರ ಧನೇಶನು ಕೈಮುಗಿದುಕೊಂಡು ವಿನೀತನಾಗಿ ತಂದೆಗೆ ಹೇಳಿದನು :

'' ಪೂಜ್ಯನೇ ! ಪಿತಾಮಹನಿಂದ ನಾನು ಇಷ್ಟವಾದ ವರಗಳನ್ನು ಪಡೆದುಕೊಂಡಿರುವೆನು. ಆದರೆ ಪ್ರಜಾಪತಿದೇವನು ನನಗೆ ವಾಸಕ್ಕಾಗಿ ನಿವಾಸವನ್ನು ಕಲ್ಪಿಸಿಕೊಡಲಿಲ್ಲ. ಆದುದರಿಂದ ನಾನು ವಾಸಮಾಡಿಕೊಂಡಿರಲು ಒಳ್ಳೆಯ ಸ್ಥಾನವೊಂದನ್ನು ನೀನೇ ಹುಡುಕಿಕೊಡು. ನಾನು ವಾಸ ಮಾಡಲಿರುವ ಆ ಸ್ಥಾನದಲ್ಲಿ ಪ್ರಾಣಿಗಳಿಗೆ ಯಾವ ವಿಧವಾದ ಪೀಡೆಯೂ ಉಂಟಾಗಬಾರದು. ಅಂತಹ ಸ್ಥಾನವೊಂದನ್ನು ನನಗೆ ಕಲ್ಪಿಸಿಕೊಡು.''

ಮಗನು ಹೀಗೆ ಹೇಳಲು ಮುನಿಶ್ರೇಷ್ಠನಾದ ವಿಶ್ರವಸನು ಮಗನಿಗೆ ಹೇಳಿದನು :

'' ಧರ್ಮಜ್ಞನೇ ! ನಾನು ಹೇಳುವುದನ್ನು ಲಾಲಿಸು. ದಕ್ಷಿಣ ಸಮುದ್ರದ ಆಚೆಯ ದಡದಲ್ಲಿ ತ್ರಿಕೂಟವೆಂಬ ಪರ್ವತವಿದೆ. ಅದರ ಮೇಲ್ಭಾಗದಲ್ಲಿ ವಿಶಾಲವಾಗಿಯೂ ಇಂದ್ರನ ಅಮರಾವತಿಯಂತೆಯೂ ಇರುವ ಸುಂದರವಾದ ಪಟ್ಟಣವಿದೆ. ವಿಶ್ವಕರ್ಮನಿಂದಲೇ ನಿರ್ಮಿಸಲ್ಪಟ್ಟಿರುವ ಆ ಪಟ್ಟಣಕ್ಕೆ 'ಲಂಕಾ' ಎಂದು ಹೆಸರು. ಅಮರಾವತಿಯಂತೆಯೇ ಇರುವ ಆ ಲಂಕಾಪಟ್ಟಣವು ರಾಕ್ಷಸರ ವಾಸಕ್ಕಾಗಿ ನಿರ್ಮಿತವಾಗಿದೆ. ಅದು ಯಂತ್ರ –ಶಸ್ತ್ರಗಳಿಂದ ಸಮಾವೃತವಾಗಿದೆ. ಸುವರ್ಣಮಯವಾದ ಪ್ರಾಕಾರದಿಂದ ಕೂಡಿದೆ. ಲಂಕಾಪಟ್ಟಣದ ಸುತ್ತಲೂ ಕಂದಕಗಳಿವೆ. ನಿನಗೆ ಮಂಗಳ ವಾಗಲಿ. ನೀನು ಆ ಲಂಕಾಪಟ್ಟಣದಲ್ಲಿ ವಾಸವಾಗಿರು. ಅದರ ಹೆಬ್ಬಾಗಿಲು ಸುವರ್ಣದಿಂದಲೂ ವೈಡೂರ್ಯಮಣಿಗಳಿಂದಲೂ ಮಾಡಲ್ಪಟ್ಟಿದೆ. ಅತ್ಯಂತ ರಮಣೀಯವಾಗಿದೆ. ವಿಷ್ಣುವಿನ ಭಯದಿಂದ ಪೀಡಿತರಾದ ರಾಕ್ಷಸರು ಆ ಲಂಕಾಪಟ್ಟಣವನ್ನು ಬಿಟ್ಟು ಓಡಿಹೋದರು. ಎಲ್ಲ ರಾಕ್ಷಸರೂ ರಸಾತಲಕ್ಕೆ

ಓಡಿಹೋದುದರಿಂದ ಆ ಲಂಕಾಪಟ್ಟಣವೀಗ ಶೂನ್ಯವಾಗಿದೆ. ಈ ಕಾರಣ ದಿಂದಲೇ ಅಲ್ಲಿ ಯಾವ ರಾಜನೂ ಇಲ್ಲ. ಅಲ್ಲಿ ನೀನು ಸುಖವಾಗಿ ವಾಸ ಮಾಡಿಕೊಂಡಿರಬಹುದು. ಆದುದರಿಂದ ನೀನೀಗಲೇ ಲಂಕಾಪಟ್ಟಣಕ್ಕೆ ಹೋಗು. ಅಲ್ಲಿ ನಿನಗೆ ಯಾವ ವಿಧವಾದ ಬಾಧೆಯೂ ಉಂಟಾಗುವುದಿಲ್ಲ. ನಿನ್ನ ವಾಸವೂ ಅಲ್ಲಿ ದೋಷರಹಿತವಾಗಿರುತ್ತದೆ. ''

ಹೀಗೆಂದು ಹೇಳಿದ ತಂದೆಯ ಧರ್ಮಸಮ್ಮತವಾದ ಮಾತನ್ನು ಕೇಳಿ ವೈಶ್ರವಣನು ತ್ರಿಕೂಟಪರ್ವತದ ಶಿಖರದಲ್ಲಿದ್ದ ಲಂಕಾಪಟ್ಟಣದಲ್ಲಿ ವಾಸ ಮಾಡತೊಡಗಿದನು. ಅವನಲ್ಲಿ ವಾಸಮಾಡಲು ಪ್ರಾರಂಭಿಸಿದ ಸ್ವಲ್ಪ ದಿವಸ ಗಳಲ್ಲಿಯೇ ಅವನ ಧರ್ಮಶಾಸನದ ಪ್ರಭಾವದಿಂದಾಗಿ ಸಾವಿರಾರು ರಾಕ್ಷಸರು ಪರಮಹೃಷ್ಟರಾಗಿ ಪುನಃ ಅಲ್ಲಿಗೆ ಬಂದು ನೆಲೆಸಿದರು. ಧರ್ಮಾತ್ಮನಾದ, ರಾಕ್ಷಸಶ್ರೇಷ್ಠನಾದ, ವಿಶ್ರವಸನ ಮಗನಾದ ವೈಶ್ರವಣನು ಪರಮಪ್ರೀತನಾಗಿ ಸಮುದ್ರವೇ ಕಂದಕದ ರೂಪದಲ್ಲಿದ್ದ ಲಂಕಾಪಟ್ಟಣದಲ್ಲಿ ವಾಸ ಮಾಡುತ್ತಿದ್ದನು. ಧರ್ಮಾತ್ಮನಾದ ವಿನಯಶೀಲನಾದ ಕುಬೇರನು ಆಯಾ ಕಾಲಗಳಲ್ಲಿ ಪುಷ್ಪಕವಿಮಾನದಲ್ಲಿ ಕುಳಿತು ತಂದೆ-ತಾಯಿಗಳ ಬಳಿಗೂ ಹೋಗಿ ಬರುತ್ತಿದ್ದನು. ದೇವ-ಗಂಧರ್ವರೂ ಕುಬೇರನನ್ನು ಸ್ತೋತ್ರಮಾಡುತ್ತಿದ್ದರು. ಅವನ ಭವ್ಯವಾದ ಅರಮನೆಯು ಅಪ್ಸರೆಯರ ನೃತ್ಯದಿಂದ ಸುಶೋಭಿತ ವಾಗಿದ್ದಿತು. ಸೂರ್ಯನಂತೆಯೇ ದಿವ್ಯವಾದ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುತ್ತಿದ್ದ ಧನಪತಿಯು ಒಮ್ಮೆ ತನ್ನ ತಂದೆಯ ಬಳಿಗೆ ಹೋದನು.''

3ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **4ನೆಯ ಸರ್ಗ**

ರಾಕ್ಷಸವಂಶದ ವರ್ಣನೆ :
ಹೇತಿ, ವಿದ್ಯುತ್ಕೇಶ ಮತ್ತು ಸುಕೇಶರ ಜನನ

ಶ್ರುತ್ವಾಗಸ್ತ್ಯೇರಿತಂ ವಾಕ್ಯಂ ರಾಮೋ ವಿಸ್ಮಯಮಾಗತಃ ।
ಕಥಮಾಸೀತ್ತು ಲಙ್ಕಾಯಾಂ ಸಮ್ಭವೋ ರಕ್ಷಸಾಂ ಪುರಾ ॥ 1॥

ಅಗಸ್ತ್ಯರ ಮಾತನ್ನು ಕೇಳಿ ಶ್ರೀರಾಮನಿಗೆ ವಿಸ್ಮಯವುಂಟಾಯಿತು.

ಲಂಕೆಯಲ್ಲಿ ರಾಕ್ಷಸರ ಉತ್ಪತ್ತಿಯು ಹೇಗೆ ? ಯಾರಿಂದಾಯಿತು? ಎಂದು ಮುಂತಾಗಿ ಶ್ರೀರಾಮನು ಅಚ್ಚರಿಗೊಂಡನು.

ಶ್ರೀರಾಮನು ಅಚ್ಚರಿಯನ್ನು ಸೂಚಿಸುತ್ತಾ ತಲೆಯಲ್ಲಾಡಿಸಿದನು. ತ್ರೇತಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದ ಅಗಸ್ತ್ಯರನ್ನು ಬಾರಿ –ಬಾರಿಗೂ ನೋಡುತ್ತಾ ಮುಗುಳ್ನಗೆಯೊಡನೆ ಹೇಳಿದನು :

'' ಪೂಜ್ಯರೇ ! ಕುಬೇರ – ರಾವಣ –ಕುಂಭಕರ್ಣರಿಗೂ ಮೊದಲು ಆ ಲಂಕಾಪಟ್ಟಣವು ರಾಕ್ಷಸರದಾಗಿತ್ತೆಂಬ ಪೂಜ್ಯಪಾದರ ಮಾತನ್ನು ಕೇಳಿ ನನಗೆ ಅತ್ಯಂತ ವಿಸ್ಮಯವಾಗಿದೆ. ರಾಕ್ಷಸರು ಪುಲಸ್ತ್ಯನ ವಂಶದವರೆಂದು ನಾವು ಕೇಳಿದ್ದೆವು. ಆದರೆ ಈಗ ನೀವು ಬೇರೆಯ ವಂಶದ ರಾಕ್ಷಸರೂ ಇದ್ದರೆಂಬ ವಿಷಯವನ್ನು ಹೇಳುತ್ತಿರುವಿರಿ. ತಮ್ಮ ಅಭಿಪ್ರಾಯದಂತೆ ಆ ಹಿಂದಿನ ರಾಕ್ಷಸರು ರಾವಣ – ಕುಂಭಕರ್ಣ – ಪ್ರಹಸ್ತ – ವಿಕಟ ಮತ್ತು ರಾವಣ ಪುತ್ರರಿಗಿಂತಲೂ ಹೆಚ್ಚು ಬಲಿಷ್ಠರಾಗಿದ್ದರೇ ? ಅವರ ಪೂರ್ವಜನು ಯಾರು ? ಅಂತಹ ಬಲೋತ್ಕಟನಾಗಿದ್ದ ರಾಕ್ಷಸರಾಜನ ಹೆಸರೇನು ? ಯಾವ ಅಪರಾಧಕ್ಕಾಗಿ ಅವರು ವಿಷ್ಣುವಿನಿಂದ ಓಡಿಸಲ್ಪಟ್ಟರು ಮತ್ತು ಅವರನ್ನು ಮಹಾವಿಷ್ಣುವು ಹೇಗೆ ಓಡಿಸಿದನು ? ಈ ಎಲ್ಲ ವಿಷಯಗಳನ್ನೂ ತಾವು ವಿಸ್ತಾರವಾಗಿ ಹೇಳಿರಿ. ಸೂರ್ಯದೇವನು ಅಂಧಕಾರವನ್ನು ಹೋಗಲಾಡಿಸುವಂತೆ – ನನಗೆ ಉಂಟಾಗಿರುವ ಈ ಕುತೂಹಲವನ್ನು ತಾವು ಹೋಗಲಾಡಿಸಿರಿ.''

ಶ್ರೀರಾಮನ ಆ ಮಾತು ನಿಶ್ಚಯವಾಗಿಯೂ ಪದಸಂಸ್ಕಾರ ಮತ್ತು ವಾಕ್ಯಸಂಸ್ಕಾರಗಳಿಂದ ಕೂಡಿದ್ದು ಅತಿಸುಂದರವಾಗಿದ್ದಿತು. ಶ್ರೀರಾಮನು ಸರ್ವಜ್ಞನಾಗಿದ್ದರೂ ಹೀಗೆ ನಟಿಸುತ್ತಿರುವುದನ್ನು ಕಂಡು ಅಗಸ್ತ್ಯರಿಗೆ ವಿಸ್ಮಯವುಂಟಾಯಿತು. ಆದರೂ ರಾಘವನ ಪ್ರಶ್ನೆಗೆ ಉತ್ತರಿಸಲು ಪ್ರಾರಂಭಿಸಿದರು.

'' ರಾಘವ ! ಕಮಲದಿಂದ ಉತ್ಪನ್ನನಾದ ಪ್ರಜಾಪತಿಯು ಮೊದಲು ನೀರನ್ನು (ಸಮುದ್ರಗಳನ್ನು) ಸೃಷ್ಟಿಸಿ ಅವುಗಳ ರಕ್ಷಣೆಗಾಗಿ ದೊಡ್ಡ–ದೊಡ್ಡ ಜಲಚರಪ್ರಾಣಿಗಳನ್ನು ಸೃಷ್ಟಿಸಿದನು. ಹಸಿವು –ಬಾಯಾರಿಕೆಗಳ ಭಯದಿಂದ ಪೀಡಿತವಾಗಿದ್ದ ಆ ಪ್ರಾಣಿಗಳೆಲ್ಲವೂ ತಮ್ಮ ಉತ್ಪತ್ತಿಗೆ ಕಾರಣನಾದ

ಪ್ರಜಾಪತಿಯ ಬಳಿಗೆ ಹೋಗಿ ವಿನಯಭಾವದಿಂದ ನಿಂತು 'ನಾವೇನು ಮಾಡಬೇಕು ?'- ಎಂದು ಪ್ರಜಾಪತಿಯನ್ನು ಪ್ರಶ್ನಿಸಿದುವು. ಪ್ರಜಾಪತಿಯು ನಸುನಗುತ್ತಾ ಆ ಎಲ್ಲ ಪ್ರಾಣಿಗಳನ್ನೂ ಉದ್ದೇಶಿಸಿ ಹೇಳಿದನು :

''ಜಲಚರಗಳೇ! ನೀವೆಲ್ಲರೂ ಪ್ರಯತ್ನಪೂರ್ವಕವಾಗಿ ಸಮುದ್ರಗಳ ರಕ್ಷಣೆಯನ್ನು ಮಾಡಿರಿ. ''

ಹಸಿವು–ಬಾಯಾರಿಕೆಗಳಿಂದ ಕೂಡಿದ್ದ ಆ ಪ್ರಾಣಿಗಳಲ್ಲಿ ಕೆಲವು '**ರಕ್ಷಾಮ** - ನೀನು ಹೇಳಿದಂತೆ ನಾವು ಜಲವನ್ನು ರಕ್ಷಣೆ ಮಾಡುತ್ತೇವೆ.' - ಎಂದು ಹೇಳಿದುವು. ಮತ್ತೆ ಕೆಲವು '**ಯಕ್ಷಾಮ** – ನಾವು ಈ ಜಲವನ್ನು ಪೂಜಿಸುತ್ತೇವೆ ' - ಎಂದು ಹೇಳಿದುವು.

ಆ ಪ್ರಾಣಿಗಳ ಮಾತನ್ನು ಕೇಳಿ ಭೂತಕರ್ತೃವಾದ ಪ್ರಜಾಪತಿಯು ಹೇಳಿದನು :

ರಕ್ಷಾಮ ಇತಿ ಯೈರುಕ್ತಂ ರಾಕ್ಷಸಾಸ್ತೇ ಭವನ್ತು ವಃ ।
ಯಕ್ಷಾಮ ಇತಿ ಯೈರುಕ್ತಂ ಯಕ್ಷಾ ಏವ ಭವನ್ತು ವಃ ।।13।।

''ನಿಮ್ಮಲ್ಲಿ ಯಾರು '**ರಕ್ಷಾಮ**' – ಎಂದು ಹೇಳಿದಿರೋ ಅವರೆಲ್ಲರೂ ರಾಕ್ಷಸರಾಗಿರಿ. ಯಾರು ' **ಯಕ್ಷಾಮ**' – ಎಂದು ಹೇಳಿದಿರೋ ಅವರೆಲ್ಲರೂ 'ಯಕ್ಷರು ' ಎಂಬ ಹೆಸರಿನಿಂದಲೇ ಪ್ರಸಿದ್ಧಿ ಹೊಂದಿರಿ.''

ಹೀಗೆ ಪ್ರಜಾಪತಿಯ ವರದಿಂದಾಗಿ ಆ ಪ್ರಾಣಿಗಳು ರಾಕ್ಷಸರಾಗಿಯೂ ಯಕ್ಷರಾಗಿಯೂ ವಿಭಾಗವಾದುವು. ಬ್ರಹ್ಮನ ಮಾತಿನಂತೆ ರಾಕ್ಷಸರಾದವರಲ್ಲಿ ಹೇತಿ ಮತ್ತು ಪ್ರಹೇತಿಗಳೆಂಬ ಸಹೋದರರಿದ್ದರು. ಅವರು ಎಲ್ಲ ರಾಕ್ಷಸರಿಗೂ ಅಧಿಪತಿಗಳೂ ಆಗಿದ್ದರು. ಶತ್ರುಗಳನ್ನು ಮರ್ದಿಸುವುದರಲ್ಲಿ ಅತ್ಯಂತಸಮರ್ಥರಾಗಿದ್ದ ಆ ರಾಕ್ಷಸರು ಮಧು –ಕೈಟಭರಂತೆಯೇ ಶಕ್ತಿಶಾಲಿಗಳಾಗಿದ್ದರು. ಆ ಇಬ್ಬರು ರಾಕ್ಷಸರಲ್ಲಿ ಪ್ರಹೇತಿಯು ಪರಮಧಾರ್ಮಿಕನಾಗಿದ್ದು ವಿರಕ್ತನಾಗಿ ತಪೋವನಕ್ಕೆ ಹೋಗಿ ತಪಸ್ಸಿನಲ್ಲಿ ನಿರತನಾದನು. ಹೇತಿಯು ವಿವಾಹಮಾಡಿಕೊಳ್ಳಲು ಬಹಳವಾಗಿ ಪ್ರಯತ್ನಿಸುತ್ತಿದ್ದನು. ಮಹಾಬುದ್ಧಿಶಾಲಿಯಾದ ಮತ್ತು ಮಹಾತ್ಮನಾದ ಹೇತಿಯು ಕಾಲಪುರುಷ

ನನ್ನು ತಾನೇ ಯಾಚಿಸಿ ಅವನ ತಂಗಿಯಾದ ಮಹಾಭಯಂಕರಳಾಗಿದ್ದ 'ಭಯಾ' ಎಂಬ ಹೆಸರಿನ ಕನ್ಯೆಯನ್ನು ವಿವಾಹವಾದನು. ಬಳಿಕ ರಾಕ್ಷಸ ಶ್ರೇಷ್ಠನಾದ ಮತ್ತು ಪುತ್ರವಂತರಲ್ಲಿ ಶ್ರೇಷ್ಠನಾದ ಹೇತಿಯು ಅವಳಲ್ಲಿ ವಿದ್ಯುತ್ಕೇಶನೆಂಬ ಮಗನನ್ನು ಪಡೆದುಕೊಂಡನು. ಪ್ರದೀಪ್ತನಾದ ಸೂರ್ಯನ ಪ್ರಭೆಗೆ ಸಮಾನವಾದ ಪ್ರಭೆಯನ್ನು ಹೊಂದಿದ್ದ, ಹೇತಿಯ ಮಗನಾದ, ಮಹಾತೇಜಸ್ವಿಯಾದ ವಿದ್ಯುತ್ಕೇಶನು ನೀರಿನ ಮಧ್ಯದಲ್ಲಿರುವ ಕಮಲದಂತೆ ದಿನ–ದಿನಕ್ಕೂ ವೃದ್ಧಿಹೊಂದುತ್ತಿದ್ದನು. ರಾಕ್ಷಸನಾದ ವಿದ್ಯುತ್ಕೇಶನಿಗೆ ಮಂಗಳಕರವಾದ ಯುವಾವಸ್ಥೆಯು ಪ್ರಾಪ್ತವಾದಾಗ ತಂದೆಯಾದ ಹೇತಿಯು ಮಗನಿಗೆ ಮದುವೆಮಾಡಲು ನಿಶ್ಚಯಿಸಿದನು. ಪ್ರಭಾವದಲ್ಲಿ ತನ್ನ ತಾಯಿಯನ್ನೇ ಮೀರಿಸಿದ್ದ ಸಂಧ್ಯಾದೇವಿಯ ಮಗಳನ್ನು ಹೇತಿಯು ತನ್ನ ಮಗನಿಗೆ ಆರಿಸಿಕೊಂಡನು. ಹೇತಿಯು ಸಂಧ್ಯಾದೇವಿಯನ್ನು ಪ್ರಾರ್ಥಿಸಲು ಅವಳು ಹೀಗೆ ಯೋಚಿಸಿದಳು –'' ನನ್ನ ಮಗಳನ್ನು ಯಾರಿಗಾದರೂ ಮದುವೆ ಮಾಡಿಕೊಡಲೇಬೇಕು. ಆದುದರಿಂದ ಪ್ರಾರ್ಥಿಸಲು ಬಂದಿರುವ ಹೇತಿಯ ಮಗನಿಗೇ ನನ್ನ ಮಗಳನ್ನು ಏಕೆ ಕೊಡಬಾರದು ?'' – ಹೀಗೆ ಯೋಚಿಸಿದ ಸಂಧ್ಯಾದೇವಿಯು ತನ್ನ ಮಗಳನ್ನು ವಿದ್ಯುತ್ಕೇಶನಿಗೆ ಮದುವೆಮಾಡಿ ಕೊಟ್ಟಳು. ರಾಕ್ಷಸನಾದ ವಿದ್ಯುತ್ಕೇಶನು ಸಂಧ್ಯಾದೇವಿಯ ಮಗಳನ್ನು ಮದುವೆಯಾಗಿ ಇಂದ್ರನು ಶಚೀದೇವಿಯೊಡನೆ ರಮಿಸುವಂತೆ ಅವಳೊಡನೆ ರಮಿಸತೊಡಗಿದನು. ಕೆಲವು ದಿವಸಗಳು ಕಳೆದನಂತರ ಮೇಘಗಳ ಸಾಲು ಸಮುದ್ರದಿಂದ ನೀರನ್ನು ತುಂಬಿಕೊಳ್ಳುವಂತೆ ಸಂಧ್ಯಾದೇವಿಯ ಪುತ್ರಿಯಾದ ಸಾಲಕಟಂಕಟೆಯು ವಿದ್ಯುತ್ಕೇಶನಿಂದ ಗರ್ಭವತಿಯಾದಳು. ಅನಂತರ ಸಾಲ ಕಟಂಕಟೆಯೆಂಬ ಆ ರಾಕ್ಷಸಿಯು – ಅಗ್ನಿಯು ತನ್ನಲ್ಲಿಟ್ಟಿದ್ದ ಶಿವನ ಸಂಬಂಧ ವಾದ ಗರ್ಭವನ್ನು ಗಂಗಾದೇವಿಯು ವಿಸರ್ಜಿಸಿದ್ದಂತೆ – ತನ್ನಲ್ಲಿ ಆವಿರ್ಭವಿಸಿದ್ದ ವಿದ್ಯುತ್ಕೇಶನ ಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದ ಗರ್ಭವನ್ನು ಮಂದರಪರ್ವತದ ತಪ್ಪಲಿನಲ್ಲಿ ವಿಸರ್ಜಿಸಿ ವಿದ್ಯುತ್ಕೇಶನೊಡನೆ ರತಿ ಕ್ರೀಡೆಯನ್ನು ಮುಂದುವರಿಸಲು ಹೊರಟುಹೋದಳು. ಪತಿಯೊಡನೆ ರತಿ ಕ್ರೀಡೆಯಲ್ಲಿ ತಲ್ಲೀನಳಾಗಿದ್ದ ಸಾಲಕಟಂಕಟೆಯು ಮಗನನ್ನೇ ಸಂಪೂರ್ಣ ವಾಗಿ ಮರೆತುಬಿಟ್ಟಳು. ಅವಳಿಂದ ಉತ್ಸೃಷ್ಟವಾಗಿದ್ದ ಆ ಗರ್ಭವು

ಮೇಘದಂತೆ ಗರ್ಜಿಸತೊಡಗಿತು. ತಾಯಿಯಿಂದ ಪರಿತ್ಯಜಿಸಲ್ಪಟ್ಟಿದ್ದ ಆ ಶಿಶುವು ಶರತ್ಕಾಲದ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದಿತು. ಮುಷ್ಟಿಯನ್ನು ಬಾಯಲ್ಲಿಟ್ಟುಕೊಂಡು ನಿಧಾನವಾಗಿ ಅಳತೊಡಗಿತು. ಆ ಸಮಯಕ್ಕೆ ಸರಿಯಾಗಿ ಪಾರ್ವತಿಯೊಡನೆ ಗೂಳಿಯ ಮೇಲೆ ಕುಳಿತು ವಾಯುಮಾರ್ಗದಲ್ಲಿ ಪ್ರಯಾಣಮಾಡುತ್ತಿದ್ದ ಪರಶಿವನಿಗೆ ಆ ಮಗುವಿನ ಅಳುವಿನ ಶಬ್ದವು ಕೇಳಿಸಿತು. ಕೂಡಲೇ ಉಮಾದೇವಿಯೊಡನೆ ಪರಶಿವನು ಮಗುವಿದ್ದ ಸ್ಥಳಕ್ಕೆ ಹೋಗಿ ನೋಡಿದನು. ತ್ರಿಪುರಾಂತಕನಾದ ಭವನು ಪಾರ್ವತಿಯ ಪ್ರೇರಣೆಯಂತೆ ಕಾರುಣ್ಯಭಾವದಿಂದ ಆ ಶಿಶುವನ್ನು ಅದರ ತಾಯಿಯ ವಯಸ್ಸಿಗೆ ಅನುಗುಣವಾದ ವಯಸ್ಕನನ್ನಾಗಿ ಮಾಡಿದನು. ಶಿವನ ಅನುಗ್ರಹದಿಂದ ರಾಕ್ಷಸಶಿಶುವು ಸಾಲಕಟಂಕಟೆಯಷ್ಟು ವಯಸ್ಸಿನದೇ ಆಯಿತು. ಇಷ್ಟು ಮಾತ್ರವಲ್ಲ. ಅವಿನಾಶಿಯಾದ ಮತ್ತು ನಿರ್ವಿಕಾರನಾದ ಮಹಾದೇವನು ಪಾರ್ವತಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಆ ರಾಕ್ಷಸಶಿಶುವನ್ನು ಮರಣರಹಿತವನ್ನಾಗಿಯೂ ಮಾಡಿ ಆಕಾಶ ದಲ್ಲಿ ಸಂಚರಿಸುವ ಪಟ್ಟಣದಂತೆಯೇ ಕಾಣುತ್ತಿದ್ದ ವಿಮಾನವೊಂದನ್ನೂ ಅವನಿಗೆ ಅನುಗ್ರಹಿಸಿಕೊಟ್ಟನು. ಅನಂತರ ಉಮಾದೇವಿಯು ಎಲ್ಲ ರಾಕ್ಷಸರಿಗೂ ಅಮೋಘವಾದ ಈ ವರವನ್ನಿತ್ತಳು.

ಸದ್ಯೋಪಲಬ್ಧಿರ್ಗರ್ಭಸ್ಯ ಪ್ರಸೂತಿಃ ಸದ್ಯ ಏವ ಚ ।
ಸದ್ಯ ಏವ ವಯಃಪ್ರಾಪ್ತಿಂ ಮಾತುರೇವ ವಯಃಸಮಮ್ ॥ 31॥

ಪುರುಷಸಂಗವಾದೊಡನೆಯೇ ರಾಕ್ಷಸಿಯರಿಗೆ ಗರ್ಭಧಾರಣೆ, ಒಡನೆಯೇ ಮಗುವಿನ ಜನನ, ಒಡನೆಯೇ ಯೌವನ, ತಾಯಿಯ ವಯಸ್ಸಿನಷ್ಟೇ ವಯಸ್ಸನ್ನು ಪಡೆಯುವುದು - ಇವಿಷ್ಟನ್ನೂ ಉಮಾದೇವಿಯು ರಾಕ್ಷಸರಿಗೆ ಅನುಗ್ರಹಮಾಡಿದಳು.

ಶಿವನಿಂದ ವರದಾನವನ್ನು ಪಡೆದ ವಿದ್ಯುತ್ಕೇಶನ ಆ ಪುತ್ರನು ಮುಂದೆ ಸುಕೇಶನೆಂಬ ಹೆಸರಿನಿಂದ ಪ್ರಸಿದ್ಧನಾದನು. ಮಹಾಮತಿಯಾಗಿದ್ದ ಅವನು ಪೂಜ್ಯನಾದ ಶಂಕರನಿಂದ ವರದಾನವನ್ನು ಪಡೆದು ಅತಿಗರ್ವಿಷ್ಠನಾದನು. ಪರಮೇಶ್ವರನ ಅನುಗ್ರಹದಿಂದ ಅಪಾರವಾದ ಸಂಪತ್ತನ್ನೂ ಮತ್ತು ಆಕಾಶ

ದಲ್ಲಿ ಸಂಚರಿಸುವ ವಿಮಾನವನ್ನೂ ಪಡೆದುಕೊಂಡು ದೇವರಾಜನಾದ ಇಂದ್ರನಂತೆಯೇ ಯಾವ ವಿಧವಾದ ಆತಂಕಗಳೂ ಇಲ್ಲದೆ ಎಲ್ಲ ಕಡೆಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದನು.

4ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **5ನೆಯ ಸರ್ಗ**

ಸುಕೇಶನ ಮಕ್ಕಳಾದ ಮಾಲ್ಯವಂತ, ಸುಮಾಲೀ ಮತ್ತು ಮಾಲೀ-ಇವರ ಸಂತಾನದ ವರ್ಣನೆ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಸುಕೇಶಂ ಧಾರ್ಮಿಕಂ ದೃಷ್ಟ್ವಾ ವರಲಬ್ಧಂ ಚ ರಾಕ್ಷಸಮ್ ।
ಗ್ರಾಮಣೀರ್ನಾಮಗನ್ಧರ್ವೋ ವಿಶ್ವಾವಸುಸಮಪ್ರಭಃ ॥1॥

ತಸ್ಯ ದೇವವತೀ ನಾಮ ದ್ವಿತೀಯಾ ಶ್ರೀರಿವಾತ್ಮಜಾ ।
ತ್ರಿಷು ಲೋಕೇಷು ವಿಖ್ಯಾತಾ ರೂಪಯೌವನಶಾಲಿನೀ ।
ತಾಂ ಸುಕೇಶಾಯ ಧರ್ಮಾತ್ಮಾ ದದೌ ರಕ್ಷಃಶ್ರಿಯಂ ಯಥಾ ॥2॥

ವಿಶ್ವಾವಸುವಿನಂತೆ ಪ್ರಭಾವಶಾಲಿಯಾಗಿದ್ದ ಗ್ರಾಮಣೀ ಎಂಬ ಗಂಧರ್ವನು ಸುಕೇಶರಾಕ್ಷಸನು ಧಾರ್ಮಿಕನಾಗಿರುವುದನ್ನೂ ಮತ್ತು ಮಹಾದೇವನಿಂದ ವರವನ್ನು ಪಡೆದಿರುವುದನ್ನೂ ತಿಳಿದು ಎರಡನೆಯ ಲಕ್ಷ್ಮಿಯಂತೆಯೇ ಇದ್ದ ದೇವವತೀ ಎಂಬ ತನ್ನ ಮಗಳನ್ನು ಮದುವೆಮಾಡಿಕೊಟ್ಟನು. ಅನುಪಮವಾದ ರೂಪದಿಂದಲೂ ಯೌವನದಿಂದಲೂ ಸಂಪನ್ನಳಾಗಿದ್ದ ದೇವವತಿಯು ಮೂರು ಲೋಕಗಳಲ್ಲಿಯೂ ಕಡುಚೆಲುವೆಯೆಂದು ಪ್ರಸಿದ್ಧಳಾಗಿದ್ದಳು. ಅಂತಹ ಸುಂದರಿಯಾದ, ರಾಕ್ಷಸರ ಮೂರ್ತಿಮತ್ತಾದ ಲಕ್ಷ್ಮೀದೇವಿಯಂತೆಯೇ ಇದ್ದ ದೇವವತಿಯನ್ನು ಧರ್ಮಾತ್ಮನಾದ ಗ್ರಾಮಣಿಯು ಸುಕೇಶನಿಗೆ ಮದುವೆಮಾಡಿಕೊಟ್ಟನು.

ವರದಾನದಿಂದ ಐಶ್ವರ್ಯಸಂಪನ್ನನಾಗಿದ್ದ ಪ್ರಿಯನಾದ ಪತಿಯನ್ನು ಪಡೆದು ದೇವವತಿಯು ದರಿದ್ರನು ಧನವನ್ನು ಪಡೆದು ಆನಂದಿಸುವಂತೆ ಪರಮಹೃಷ್ಟಳಾದಳು. ಅಂಜನ ಎಂಬ ಹೆಸರಿನ ದಿಗ್ಗಜದಿಂದ ಹುಟ್ಟಿದ

ಮಹಾಗಜವು ಹೆಣ್ಣಾನೆಯೊಡನೆ ಸೇರಿ ವಿಹರಿಸುವಂತೆ - ಸುಕೇಶರಾಕ್ಷಸನು ಗಂಧರ್ವಿಯಾದ ದೇವವತಿಯೊಡನೆ ಸೇರಿ ರಾರಾಜಿಸಿದನು. ಸ್ವಲ್ಪ ಕಾಲಾ ನಂತರ ಸುಕೇಶನು ದೇವವತಿಯಲ್ಲಿ ತ್ರೇತಾಗ್ನಿಗಳಿಗೆ★ ಸಮಾನರಾದ ಮೂವರು ಮಕ್ಕಳನ್ನು ಪಡೆದನು. ರಾಕ್ಷಸಶ್ರೇಷ್ಠನಾದ ಸುಕೇಶನು ಮಾಲ್ಯವಂತ, ಸುಮಾಲೀ ಮತ್ತು ಬಲಶಾಲಿಗಳಲ್ಲಿ ಶ್ರೇಷ್ಠನಾದ ಮಾಲೀ - ಎಂಬ ಮುಕ್ಕಣ್ಣನಿಗೆ ಸಮಾನ ಬಲರಾದ ಮಕ್ಕಳನ್ನು ಪಡೆದುಕೊಂಡನು.

ತ್ರಯೋ ಲೋಕಾ ಇವಾವ್ಯಗ್ರಾಃ ಸ್ಥಿತಾಸ್ತ್ರಯ ಇವಾಗ್ನಯಃ।
ತ್ರಯೋ ಮನ್ತ್ರಾ ಇವಾತ್ಯುಗ್ರಾಸ್ತ್ರಯೋ ಘೋರಾ ಇವಾಮಯಾಃ॥

ಆ ಮೂವರು ಮಕ್ಕಳೂ ಮೂರು ಲೋಕಗಳಂತೆ ಸುಸ್ಥಿರರಾಗಿದ್ದರು. ಮೂರು ಅಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದರು. ಮೂರು ಆಭಿಚಾರಿಕ ಮಂತ್ರಗಳಂತೆ [2] ಉಗ್ರರಾಗಿದ್ದರು. ಪ್ರಭುಶಕ್ತಿ - ಮಂತ್ರ ಶಕ್ತಿ- ಉತ್ಸಾಹಶಕ್ತಿಗಳಂತೆ ಸಾಮರ್ಥ್ಯಶಾಲಿಗಳಾಗಿದ್ದರು. ಮೂರು ರೋಗ ಗಳಂತೆ (ವಾತ -ಪಿತ್ತ -ಕಫಗಳ ಪ್ರಕೋಪದಿಂದುಂಟಾಗುವ ಭಯಂಕರವ್ಯಾಧಿ ಗಳಂತೆ) ಭಯಂಕರರಾಗಿಯೂ ಇದ್ದರು.

ತ್ರೇತಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಸುಕೇಶನ ಮೂವರು ಮಕ್ಕಳೂ ಚಿಕಿತ್ಸೆಯಿಲ್ಲದೇ ಉಪೇಕ್ಷಿಸಲ್ಪಟ್ಟ ರೋಗ ಗಳು ಕ್ಷಣ-ಕ್ಷಣಕ್ಕೂ ಉಲ್ಬಣಿಸುವಂತೆ - ಯಾವ ವಿಧವಾದ ಅಡೆ-ತಡೆಗಳೂ ಇಲ್ಲದೆ ವೃದ್ಧಿಹೊಂದುತ್ತಿದ್ದರು. ತಪಸ್ಸಿನ ಬಲದಿಂದ ತಮ್ಮ ತಂದೆಗೆ ಐಶ್ವರ್ಯವೂ ವರವೂ ಲಭಿಸಿತೆಂಬುದನ್ನು ತಿಳಿದು ಮಾಲ್ಯವಂತನೇ ಮೊದಲಾದ ಮೂವರು ಸೋದರರೂ ತಪಸ್ಸನ್ನು ಮಾಡಲು ನಿಶ್ಚಯಿಸಿ ಮೇರುಪರ್ವತಕ್ಕೆ ಹೋದರು. ಘೋರವಾದ ನಿಯಮಗಳನ್ನು ಕೈಗೊಂಡು ಆ ಮೂವರು ರಾಕ್ಷಸರೂ ಘೋರವಾದ, ಸಮಸ್ತ ಪ್ರಾಣಿಗಳಿಗೂ ಭಯವನ್ನುಂಟು ಮಾಡುವುದಾಗಿದ್ದ ತಪಸ್ಸನ್ನು ಮಾಡಲು ಉಪಕ್ರಮಿಸಿದರು.

ಭೂಮಂಡಲದಲ್ಲಿ ಕಾಣಸಿಗದಿದ್ದ ಸತ್ಯ, ಸರಳತೆ, ಶಮ , ದಮ -ಇವೇ ಮುಂತಾದ ನಿಯಮಗಳ ಮೂಲಕವಾಗಿ ತಪಸ್ಸನ್ನು ಮಾಡುತ್ತಾ ಮೂವರು

★ ತ್ರೇತಾಗ್ನಿಗಳು : ಗಾರ್ಹಪತ್ಯ, ಆಹವನೀಯ ಮತ್ತು ದಕ್ಷಿಣಾಗ್ನಿ.

2. ಉಗ್ರ ಆಭಿಚಾರಿಕ ಮಂತ್ರಗಳು : ಸ್ತಂಭನ, ವಿದ್ವೇಷಣ, ಮಾರಣ.

ಸಹೋದರರೂ ದೇವಾಸುರ – ಮನುಷ್ಯರಿಂದ ಕೂಡಿರುವ ಮೂರು ಲೋಕಗಳನ್ನೂ ಸಂತಾಪಗೊಳಿಸಿದರು. ಹೀಗೆ ಭೀಕರವಾಗಿ ತಪಸ್ಸು ಮಾಡುತ್ತಿರುವಾಗ ಚತುರ್ಮುಖನಾದ ಪೂಜ್ಯನಾದ ಬ್ರಹ್ಮನು ವಿಮಾನದಲ್ಲಿ ಕುಳಿತು ಸುಕೇಶನ ಮಕ್ಕಳ ಬಳಿಗೆ ಬಂದು ' ನಾನು ವರಕೊಡಲು ಬಂದಿದ್ದೇನೆ '– ಎಂದು ಹೇಳಿದನು. ಇಂದ್ರನೇ ಮೊದಲಾದ ದೇವತೆಗಳಿಂದ ಪರಿವೃತನಾಗಿ ಬ್ರಹ್ಮನು ವರಕೊಡಲು ಬಂದಿರುವನೆಂಬುದನ್ನು ತಿಳಿದು ಸುಕೇಶನ ಮಕ್ಕಳು ಬಿರುಗಾಳಿಯಿಂದ ತೂರಾಡುವ ಮರಗಳಂತೆ ತರ –ತರನೆ ನಡುಗುತ್ತಾ ಕೈ ಮುಗಿದುಕೊಂಡು ಹೇಳಿದರು :

ತಪಸಾರಾಧಿತೋ ದೇವ ಯದಿ ನೋ ದಿಶಸೇ ವರಮ್ ।
ಅಜೇಯಾಃ ಶತ್ರುಹನ್ತಾರಸ್ತಥೈವ ಚಿರಜೀವಿನಃ ।
ಪ್ರಭವಿಷ್ಣೋ ಭವಾಮೇತಿ ಪರಸ್ಪರಮನುವ್ರತಾಃ ॥15॥

''ದೇವ! ನೀನೇನಾದರೂ ನಾವು ಮಾಡಿದ ತಪಸ್ಸಿನಿಂದ ಸಂತುಷ್ಟನಾಗಿ ನಮಗೆ ವರವನ್ನು ಕೊಡಲು ಆಶಿಸಿರುವೆಯಾದರೆ – ನಮ್ಮನ್ನು ಯಾರೂ ಜಯಿಸಲಾಗದಂತೆಯೂ, ನಾವು ಶತ್ರುಗಳನ್ನು ವಧಿಸಲು ಸಮರ್ಥರಾಗುವಂತೆಯೂ, ಚಿರಂಜೀವಿಗಳಾಗುವಂತೆಯೂ, ಪ್ರಭಾವಶಾಲಿಗಳಾಗುವಂತೆಯೂ ಮತ್ತು ನಾವು ಮೂವರೂ ಪರಸ್ಪರವಾಗಿ ಅನುರಾಗಿಗಳಾಗಿರುವಂತೆಯೂ ಅನುಗ್ರಹಿಸು.''

ಸುಕೇಶನ ಮೂವರು ಮಕ್ಕಳೂ ಹೀಗೆ ವರಗಳನ್ನು ಕೇಳಲು ಬ್ರಾಹ್ಮಣವತ್ಸಲನಾದ, ವಿಭುವಾದ ಬ್ರಹ್ಮನು ' **ಏವಂ ಭವಿಷ್ಯಥ** – ನೀವು ಹೀಗೆಯೇ ಆಗುವಿರಿ' – ಎಂದು ಹೇಳಿ ಬ್ರಹ್ಮಲೋಕಕ್ಕೆ ತೆರಳಿದನು.

ರಾಘವ! ಆ ರಾಕ್ಷಸರು ಬ್ರಹ್ಮನಿಂದ ಅಮೋಘವಾದ ವರಗಳನ್ನು ಪಡೆದು ಭಯರಹಿತರಾಗಿ ಸುರರನ್ನೂ ಅಸುರರನ್ನೂ ಬಹಳವಾಗಿ ಪೀಡಿಸತೊಡಗಿದರು. ಅವರಿಂದ ಸತತವಾಗಿ ಪೀಡಿಸಲ್ಪಡುತ್ತಿದ್ದ ದೇವತೆಗಳಿಗೆ, ಋಷಿಗಳಿಗೆ, ಚಾರಣರಿಗೆ – ನರಕಕ್ಕೆ ಹೋದ ಮನುಷ್ಯರಿಗೆ ರಕ್ಷಕರು ಸಿಗದಂತೆ – ರಕ್ಷಕರೇ ಸಿಗಲಿಲ್ಲ. ಅವರನ್ನು ರಕ್ಷಿಸಲು ಯಾರೂ ಮುಂದೆ ಬರಲಿಲ್ಲ. ಸತತವಾದ ತಮ್ಮ ವಿಜಯದಿಂದ ಸಂತುಷ್ಟರಾದ ಆ ಮೂವರು ರಾಕ್ಷಸರೂ ಶಿಲ್ಪಿಗಳಲ್ಲಿ ಶ್ರೇಷ್ಠನಾದ ವಿಶ್ವಕರ್ಮನ ಬಳಿಗೆ ಹೋಗಿ ಹೇಳಿದರು :

'' ಮಹಾಮತಿಯೇ ! ಆತ್ಮತೇಜಸ್ಸಿನಿಂದ ಮಹಾತ್ಮರಾಗಿರುವ, ಓಜಸ್ಸು, ತೇಜಸ್ಸು ಮತ್ತು ಬಲಗಳಿಂದ ಸಂಪನ್ನರಾಗಿರುವ ದೇವತೆಗಳಿಗೆ ಮನೋವಾಂಛಿತವಾದ ಭವನಗಳನ್ನು ಕಟ್ಟಿಕೊಡುವವನು ನೀನೇ ಆಗಿರುವೆ. ಅಂತೆಯೇ ನಮಗೂ ಕೂಡ ನೀನು ದಿವ್ಯವಾದ ಭವನಗಳನ್ನು ನಿರ್ಮಿಸಿಕೊಡಬೇಕು. ಹಿಮವತ್ಪರ್ವತವನ್ನಾಗಲೀ, ಮೇರು – ಮಂದರಪರ್ವತಗಳನ್ನಾಗಲೀ ಆಶ್ರಯಿಸಿ ಕೈಲಾಸಪರ್ವತದಲ್ಲಿರುವ ಮಹೇಶ್ವರನ ಭವನಕ್ಕೆ ಸದೃಶವಾದ ವಿಶಾಲವಾದ ಗೃಹವನ್ನು ನಿರ್ಮಿಸಿಕೊಡಬೇಕು. ''

ರಾಕ್ಷಸರು ಹೀಗೆ ಆಜ್ಞಾಪಿಸಲು ಮಹಾಭುಜನಾದ ವಿಶ್ವಕರ್ಮನು ಆ ರಾಕ್ಷಸರಿಗೆ ಇಂದ್ರನ ಅಮರಾವತಿಯೋಪಾದಿಯಲ್ಲಿ ನಿವಾಸವನ್ನು ನಿರ್ಮಿಸಿ ಹೇಳಿದನು :

'' ರಾಕ್ಷಸಶಿರೋಮಣಿಗಳೇ ! ದಕ್ಷಿಣಸಮುದ್ರದ ಆಚೆಯ ದಡದಲ್ಲಿ ತ್ರಿಕೂಟ ಎಂಬ ಹೆಸರಿನ ಪರ್ವತವಿದೆ. ಅದರ ಬಳಿ ಸುವೇಲ ಎಂಬ ಮತ್ತೊಂದು ಪರ್ವತವೂ ಇದೆ. ಆ ತ್ರಿಕೂಟಪರ್ವತದಲ್ಲಿ ಮೇಘಸದೃಶವಾದ, ಪಕ್ಷಿಗಳಿಗೂ ಹೋಗಲು ಅಸಾಧ್ಯವಾದ, ನಾಲ್ಕು ದಿಕ್ಕುಗಳಲ್ಲಿಯೂ ಉಳಿಗಳಿಂದ ಕೆತ್ತಿ ನಯಗೊಳಿಸಿರುವ, ಮೂವತ್ತು ಯೋಜನಗಳಷ್ಟು ವಿಶಾಲವಾಗಿಯೂ ನೂರು ಯೋಜನಗಳಷ್ಟು ಅಗಲವಾಗಿಯೂ ಇರುವ, ಸುವರ್ಣಮಯವಾದ ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿರುವ, ಸುವರ್ಣಮಯವಾದ ಮಹಾದ್ವಾರದಿಂದ ಸಮಾವೃತವಾಗಿರುವ ಲಂಕಾ ಎಂಬ ಪಟ್ಟಣವನ್ನು ನಾನು ಇಂದ್ರನ ಆಜ್ಞಾನುಸಾರವಾಗಿ ನಿರ್ಮಿಸಿರುವೆನು. ಅಮರಾವತಿಯಲ್ಲಿ ಇಂದ್ರನೊಡನೆ ದೇವತೆಗಳು ವಾಸಿಸುತ್ತಿರುವಂತೆ – ರಾಕ್ಷಸಶ್ರೇಷ್ಠರಾದ ನೀವೆಲ್ಲರೂ ನಾನು ನಿರ್ಮಿಸಿರುವ ಆ ಲಂಕಾಪಟ್ಟಣದಲ್ಲಿ ವಾಸಮಾಡಿರಿ. ಶತ್ರುನಾಶಕರಾದ, ಎದುರಿಸಲು ಅಸಾಧ್ಯರಾದ ರಾಕ್ಷಸರೇ ! ಲಂಕಾದುರ್ಗದಲ್ಲಿ ಆಶ್ರಯವನ್ನು ಪಡೆದು ಬಹುಸಂಖ್ಯಾತರಾದ ರಾಕ್ಷಸರಿಂದ ಪರಿವೃತರಾಗಿ ಅಲ್ಲಿ ನೆಲೆಸಿದ್ದೇ ಆದರೆ ಶತ್ರುಗಳಿಗೆ ನಿಮ್ಮನ್ನು ಜಯಿಸಲು ಅಸಾಧ್ಯವಾಗುತ್ತದೆ. ನಿಮ್ಮನ್ನು ಯಾರೂ ಜಯಿಸಲಾರರು.''

ರಾಘವ ! ವಿಶ್ವಕರ್ಮನ ಆ ಮಾತನ್ನು ಕೇಳಿ ಆ ರಾಕ್ಷಸಶ್ರೇಷ್ಠರು ಸಾವಿರಾರು ಮಂದಿ ಅನುಚರರೊಡನೆ ಲಂಕಾಪಟ್ಟಣಕ್ಕೆ ಹೋಗಿ ಅಲ್ಲಿ ವಾಸ

ಮಾಡತೊಡಗಿದರು. ಲಂಕಾಪಟ್ಟಣದ ಪ್ರಾಕಾರಗಳೂ ಮತ್ತು ಕಂದಕಗಳೂ ಬಹಳ ದೃಢವಾಗಿದ್ದುವು. ಆ ಪಟ್ಟಣವು ಸುವರ್ಣಮಯವಾದ ನೂರಾರು ಭವನಗಳಿಂದ ಸಮಾವೃತವಾಗಿದ್ದಿತು. ರಾಕ್ಷಸಶ್ರೇಷ್ಠರು ಅಂತಹ ಲಂಕಾಪಟ್ಟಣವನ್ನು ಪಡೆದುಕೊಂಡು ಪರಮಹೃಷ್ಟರಾಗಿ ಅಲ್ಲಿಯೇ ವಾಸ ಮಾಡತೊಡಗಿದರು.

ಅದೇ ಸಮಯದಲ್ಲಿ ನರ್ಮದಾ ಎಂಬ ಗಂಧರ್ವಿಯೊಬ್ಬಳು ಲಂಕಾಪಟ್ಟಣಕ್ಕೆ ಬಂದಳು. ಅವಳಿಗೆ ಹ್ರೀ , ಶ್ರೀ ಮತ್ತು ಕೀರ್ತಿಗಳ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿದ್ದ ಮೂವರು ಹೆಣ್ಣುಮಕ್ಕಳಿದ್ದರು. ಆ ಮೂವರು ಹೆಣ್ಣುಮಕ್ಕಳೂ ಲಜ್ಜೆ, ಶೋಭೆ ಮತ್ತು ಕೀರ್ತಿಗಳಿಂದ ಸಂಪನ್ನರಾಗಿದ್ದರು. ನರ್ಮದೆಯು ರಾಕ್ಷಸಿಯಲ್ಲದಿದ್ದರೂ ತನ್ನ ಹೆಣ್ಣುಮಕ್ಕಳನ್ನು ಸುಕೇಶನ ಮೂವರು ಮಕ್ಕಳಿಗೆ ಜ್ಯೇಷ್ಠಾನುಕ್ರಮವಾಗಿ ಮದುವೆ ಮಾಡಿಕೊಟ್ಟಳು. ಇದರಿಂದಾಗಿ ಪೂರ್ಣಚಂದ್ರನಿಗೆ ಸದೃಶವಾದ ಮುಖಮಂಡಲಗಳನ್ನು ಹೊಂದಿದ್ದ ಆ ಗಂಧರ್ವಕನ್ಯೆಯರೂ ಪರಮಹೃಷ್ಟರಾದರು. ಉತ್ತರಾಫಲ್ಗುನೀನಕ್ಷತ್ರದಲ್ಲಿ ಮಹಾಭಾಗ್ಯಶಾಲಿನಿಯರಾದ ಮೂವರು ಹೆಣ್ಣುಮಕ್ಕಳೂ ಮೂವರು ರಾಕ್ಷಸಶ್ರೇಷ್ಠರನ್ನು ಕ್ರಮವಾಗಿ ವರಿಸಿದರು. ರಾಘವ ! ಮಾಲ್ಯವಂತನೇ ಮೊದಲಾದ ಮೂವರು ರಾಕ್ಷಸರೂ ಗಂಧರ್ವಕನ್ಯೆಯರನ್ನು ಮದುವೆಮಾಡಿಕೊಂಡನಂತರ ದೇವತೆಗಳು ಅಪ್ಸರಸ್ತ್ರೀಯರೊಡನೆ ವಿಹರಿಸುವಂತೆ – ಸುಕೇಶನ ಮೂವರು ಮಕ್ಕಳೂ ನರ್ಮದೆಯ ಮೂವರು ಹೆಣ್ಣುಮಕ್ಕಳೊಡನೆ ಯಥೇಚ್ಛವಾಗಿ ವಿಹರಿಸತೊಡಗಿದರು.

ಮಾಲ್ಯವಂತನ ಭಾರ್ಯೆಯ ಹೆಸರು ಸುಂದರೀ. ಹೆಸರಿಗೆ ಅನುಗುಣವಾಗಿ ಅವಳು ಪರಮಸುಂದರಿಯೇ ಆಗಿದ್ದಳು. ಅವಳಲ್ಲಿ ಮಾಲ್ಯವಂತನಿಗೆ ವಜ್ರಮುಷ್ಟಿ, ವಿರೂಪಾಕ್ಷ, ದುರ್ಮುಖ, ಸುಪ್ತಘ್ನ, ಯಜ್ಞಕೋಪ, ಮತ್ತ ಮತ್ತು ಉನ್ಮತ್ತ ಎಂಬ ಏಳು ಮಂದಿ ಪುತ್ರರೂ ಅನಲಾ ಎಂಬ ಹೆಸರಿನ ಸುಂದರಿಯಾದೊಬ್ಬ ಮಗಳೂ ಜನಿಸಿದರು. ಹೀಗೆ ಮಾಲ್ಯವಂತನಿಗೆ ಸುಂದರಿಯಲ್ಲಿ ಎಂಟು ಮಕ್ಕಳು ಹುಟ್ಟಿದರು.

ಸುಮಾಲಿಯ ಹೆಂಡತಿಯ ಹೆಸರು ಕೇತುಮತೀ. ಅವಳು ಪೂರ್ಣಚಂದ್ರನಿಗೆ ಸದೃಶವಾದ ಮುಖವುಳ್ಳವಳಾಗಿದ್ದಳು. ಸುಮಾಲಿಯು ಅವಳನ್ನು

ಪ್ರಾಣಗಳಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದನು. ಸುಮಾಲಿಗೂ ಕೇತುಮತಿಯಲ್ಲಿ ಹಲವಾರು ಮಕ್ಕಳು ಹುಟ್ಟಿದರು. ಪ್ರಹಸ್ತ, ಅಕಂಪನ, ವಿಕಟ, ಕಾಲಿಕಾಮುಖ, ಧೂಮ್ರಾಕ್ಷ, ದಂಡ, ಮಹಾಬಲಿಷ್ಠನಾದ ಸುಪಾರ್ಶ್ವ, ಸಂಹ್ರಾದಿ , ಪ್ರಘಸ, ಭಾಸಕರ್ಣ ಇವರೆಲ್ಲರೂ ಸುಮಾಲಿಯ ಗಂಡುಮಕ್ಕಳು. ಶುಚಿಸ್ಮಿತೆಯರಾದ ರಾಕಾ, ಪುಷ್ಪೋತ್ಕಟಾ, ಕೈಕಸೀ ಮತ್ತು ಕುಂಭೀನಸೀ ಎಂಬ ನಾಲ್ವರು ಹೆಣ್ಣುಮಕ್ಕಳೂ ಸುಮಾಲಿಗೆ ಕೇತು ಮತಿಯಲ್ಲಿ ಹುಟ್ಟಿದರು. ಸುಕೇಶನ ಮೂರನೆಯ ಮಗನಾದ ಮಾಲಿಯ ಗಾಂಧರ್ವೀಪತ್ನಿಯ ಹೆಸರು ವಸುಧಾ. ಅವಳು ಅತ್ಯಂತ ರೂಪವತಿ ಯಾಗಿದ್ದಳು. ಅವಳ ಕಣ್ಣುಗಳು ಕಮಲದಳಗಳಂತೆ ವಿಶಾಲವಾಗಿಯೂ, ಸುಂದರ ವಾಗಿಯೂ ಇದ್ದುವು. ಅವಳು ಶ್ರೇಷ್ಠರಾದ ಯಕ್ಷಪತ್ನಿಯರಂತೆ ಕಡು ಚೆಲುವೆಯಾಗಿದ್ದಳು.

ರಾಘವ ! ನಾನೀಗ ಮಾಲಿಗೆ ವಸುಧೆಯಲ್ಲಿ ಹುಟ್ಟಿದ ಮಕ್ಕಳಾರೆಂಬು ದನ್ನು ವಿವರಿಸಿ ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು.

ಅನಲ, ಅನಿಲ, ಹರ ಮತ್ತು ಸಂಪಾತಿ ಈ ನಾಲ್ವರು ರಾಕ್ಷಸರೂ ಮಾಲಿಗೆ ವಸುಧೆಯಲ್ಲಿ ಹುಟ್ಟಿದವರು. ಅವರೆಲ್ಲರೂ ಮುಂದೆ ವಿಭೀಷಣನಿಗೆ ಅಮಾತ್ಯರಾದರು. ಹೀಗೆ ಮಾಲ್ಯವಂತ – ಸುಮಾಲಿ ಮತ್ತು ಮಾಲಿ ಈ ಮೂವರು ರಾಕ್ಷಸರ ಸಂತಾನವು ನೂರಾರು ಸಂಖ್ಯೆಯಲ್ಲಿ ಬೆಳೆಯಿತು. ತೋಳ್ಬಲದಿಂದ ಕೊಬ್ಬಿದ್ದ ಮೂವರು ರಾಕ್ಷಸರೂ ತಮ್ಮ ಮಕ್ಕಳು –ಮೊಮ್ಮಕ್ಕಳೊಡನೆಯೂ ಇತರ ರಾಕ್ಷಸರೊಡನೆಯೂ ಕೂಡಿಕೊಂಡು ಇಂದ್ರ ಸಹಿತರಾದ ದೇವತೆಗಳನ್ನೂ, ಋಷಿಗಳನ್ನೂ, ನಾಗ-ಯಕ್ಷರನ್ನೂ ಪೀಡಿಸ ತೊಡಗಿದರು. ಇತರರಿಂದ ಎದುರಿಸಲು ಅಸಾಧ್ಯರಾಗಿದ್ದ ಆ ರಾಕ್ಷಸರು ಯಾವ ವಿಧವಾದ ಅಡೆ-ತಡೆಗಳೂ ಇಲ್ಲದೇ ವಾಯುವಿನಂತೆ ಸರ್ವತ್ರ ಸಂಚರಿಸುತ್ತಿದ್ದರು. ಮೃತ್ಯುವಿಗೆ ಸಮಾನವಾದ ತೇಜಸ್ಸಿನಿಂದ ಕೂಡಿ ಯುದ್ಧಗಳಲ್ಲಿ ಶತ್ರುಗಳೊಡನೆ ಯುದ್ಧ ಮಾಡುತ್ತಿದ್ದರು. ತಪಸ್ಸುಮಾಡಿ ವರಗಳನ್ನು ಪಡೆದು ಅತಿದರ್ಪಿಷ್ಠರಾಗಿದ್ದರು. ಯಾವಾಗಲೂ ಯಜ್ಞವೇ ಮೊದಲಾದ ಸತ್ಕರ್ಮಗಳನ್ನು ವಿನಾಶಗೊಳಿಸುತ್ತಿದ್ದರು.

5ನೆಯ ಸರ್ಗವು ಮುಗಿಯಿತು.

ದೇವತೆಗಳು ಪೂಜ್ಯನಾದ ಶಂಕರನ ಸಲಹೆಯಂತೆ ಮಹಾವಿಷ್ಣುವನ್ನು ಶರಣುಹೊಂದಿದುದು : ವಿಷ್ಣುವಿನಿಂದ ಆಶ್ವಾಸನೆ : ದೇವತೆಗಳ ಮೇಲೆ ರಾಕ್ಷಸರ ಆಕ್ರಮಣ : ದೇವತೆಗಳ ಸಹಾಯಕ್ಕಾಗಿ ಮಹಾವಿಷ್ಣುವಿನ ಆಗಮನ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ತೈರ್ವಧ್ಯಮಾನಾ ದೇವಾಶ್ಚ ಋಷಯಶ್ಚ ತಪೋಧನಾಃ ।
ಭಯಾರ್ತಾಃ ಶರಣಂ ಜಗ್ಮುರ್ದೇವದೇವಂ ಮಹೇಶ್ವರಮ್ ॥1॥

ರಾಘವ! ರಾಕ್ಷಸರಿಂದ ಬಹಳವಾಗಿ ಪೀಡಿಸಲ್ಪಡುತ್ತಿದ್ದ ದೇವತೆಗಳೂ ಮತ್ತು ತಪೋಧನರಾದ ಋಷಿಗಳೂ ಭಯಪೀಡಿತರಾಗಿ ದೇವ–ದೇವನಾದ ಪರಮೇಶ್ವರನನ್ನು ಮೊರೆಹೊಕ್ಕರು.

ಜಗತ್ತಿನ ಸೃಷ್ಟಿ–ಸಂಹಾರಗಳನ್ನು ಮಾಡುವ, ಹುಟ್ಟು– ಸಾವುಗಳಿಲ್ಲದ, ಅವ್ಯಕ್ತರೂಪಿಯಾದ, ಸಮಸ್ತಜಗತ್ತಿಗೂ ಆಧಾರಭೂತನಾದ, ಆರಾಧ್ಯ ದೇವನಾದ, ಪರಮಗುರುವಾದ, ಕಾಮಾರಿಯಾದ, ತ್ರಿಪುರಹಂತಕನಾದ, ಮುಕ್ಕಣ್ಣನಾದ, ಪೂಜ್ಯನಾದ ಪರಶಿವನ ಬಳಿಗೆ ಹೋಗಿ ಭಯದಿಂದ ಗದ್ಗದಿತ ವಾದ ಧ್ವನಿಯಿಂದ ಮಾತನಾಡುತ್ತಿದ್ದ ದೇವತೆಗಳೂ ಋಷಿಗಳೂ ಕೈಜೋಡಿಸಿ ಕೊಂಡು ಮಹೇಶನಿಗೆ ಹೇಳಿದರು :

'' ಭಗವಂತನೇ! ಪ್ರಜಾನಾಥನೇ! ಪರಶಿವನೇ! ಬ್ರಹ್ಮನ ವರದಾನ ದಿಂದ ಉನ್ಮತ್ತರಾಗಿರುವ ಸುಕೇಶನ ಮಕ್ಕಳು ಶತ್ರುಗಳಿಗೆ ಪೀಡೆಯನ್ನುಂಟು ಮಾಡುವ ಸಾಧನಗಳಿಂದ ಸಮಸ್ತಪ್ರಜೆಗಳಿಗೂ ಬಾಧೆಯನ್ನುಂಟುಮಾಡು ತ್ತಿದ್ದಾರೆ. ಎಲ್ಲರಿಗೂ ಆಶ್ರಯವನ್ನು ನೀಡಲು ಸಮರ್ಥವಾದ ನಮ್ಮ ಆಶ್ರಮಗಳನ್ನು ಆ ರಾಕ್ಷಸರು ಆಶ್ರಯಕ್ಕೆ ಅಯೋಗ್ಯವನ್ನಾಗಿ ಮಾಡಿದ್ದಾರೆ. ಸ್ವರ್ಗದಿಂದ ದೇವತೆಗಳನ್ನು ಓಡಿಸಿ ತಾವೇ ಸ್ವರ್ಗದಲ್ಲಿರುತ್ತಾ ದೇವತೆಗಳಂತೆಯೇ ವಿಹರಿಸುತ್ತಿದ್ದಾರೆ.

ಅಹಂ ವಿಷ್ಣುರಹಂ ರುದ್ರೋ ಬ್ರಹ್ಮಾಹಂ ದೇವರಾಡಹಮ್ ।
ಅಹಂ ಯಮಶ್ಚ ವರುಣಶ್ಚನ್ದ್ರೋಽಹಂ ರವಿರಪ್ಯಹಮ್ ॥6॥

ಇತಿ ಮಾಲೀ ಸುಮಾಲೀ ಚ ಮಾಲ್ಯವಾಂಶ್ಚೈವ ರಾಕ್ಷಸಾಃ ।
ಬಾಧನ್ತೇ ಸಮರೋದ್ಧರ್ಷಾ ಯೇ ಚ ತೇಷಾಂ ಪುರಃಸರಾಃ ॥7॥

ಮಾಲೀ, ಸುಮಾಲೀ ಮತ್ತು ಮಾಲ್ಯವಂತ – ಈ ಮೂವರು ರಾಕ್ಷಸರೂ ನಾನೇ ವಿಷ್ಣು, ನಾನೇ ರುದ್ರ, ನಾನೇ ಬ್ರಹ್ಮ, ನಾನೇ ದೇವರಾಜನಾದ ಇಂದ್ರ, ನಾನೇ ಯಮ, ನಾನೇ ವರುಣ, ನಾನೇ ಚಂದ್ರ, ನಾನೇ ಸೂರ್ಯ –ಎಂದು ಹೇಳಿಕೊಳ್ಳುತ್ತಾರೆ. ರಣದುರ್ಜಯರಾದ ಅವರ ಅನುಯಾಯಿಗಳಾದ ರಾಕ್ಷಸರೂ ನಮ್ಮನ್ನು ಬಹಳವಾಗಿ ಬಾಧೆಪಡಿಸುತ್ತಿದ್ದಾರೆ.

ದೇವದೇವನೇ! ಅವರ ಭಯದಿಂದ ನಾವು ಬಹಳ ಪೀಡಿತರಾಗಿದ್ದೇವೆ. ಆದುದರಿಂದ ನೀನು ನಮಗೆ ಅಭಯದಾನಮಾಡು. ನಿನ್ನ ರೌದ್ರರೂಪವನ್ನು ಧರಿಸಿ ದೇವತೆಗಳಿಗೆ ಕಂಟಕಪ್ರಾಯರಾಗಿರುವ ಆ ರಾಕ್ಷಸರನ್ನು ಸಂಹಾರ ಮಾಡು.''

ದೇವತೆಗಳು ಹೀಗೆ ಹೇಳಲು ನೀಲಲೋಹಿತವರ್ಣನಾದ, ಜಟಾ ಜೂಟಧರನಾದ, ಪೂಜ್ಯನಾದ ಶಂಕರನು ಸುಕೇಶನ ವಿಷಯದಲ್ಲಿ ಅನುಗ್ರಹಬುದ್ಧಿಯುಳ್ಳವನಾಗಿದ್ದುದರಿಂದ ದೇವತೆಗಳಿಗೆ ಹೇಳಿದನು :

ಅಹಂ ತಾನ್ನ ಹನಿಷ್ಯಾಮಿ ಮಮಾವಧ್ಯಾ ಹಿ ತೇಽಸುರಾಃ ।
ಕಿಂತು ಮನ್ತ್ರಂ ಪ್ರದಾಸ್ಯಾಮಿ ಯೋ ವೈ ತಾನ್ ನಿಹನಿಷ್ಯತಿ ॥10॥

''ದೇವತೆಗಳೇ! ನಾನು ಅವರನ್ನು ಸಂಹರಿಸಲಾರೆನು. ಅವರು ನನ್ನಿಂದ ವಧಿಸಲ್ಪಡತಕ್ಕವರಲ್ಲ. ಆದರೆ ಅವರನ್ನು ಯಾರು ಸಂಹರಿಸಬಲ್ಲರೆಂಬ ವಿಷಯವಾಗಿ ಉಪಾಯವನ್ನು ತಿಳಿಸುತ್ತೇನೆ. ನೀವೆಲ್ಲರೂ ಇದೇ ಸಂಕಲ್ಪದಿಂದಲೇ ಮಹಾವಿಷ್ಣುವಿನ ಬಳಿಗೆ ಹೋಗಿ ಅವನಿಗೆ ಶರಣಾಗಿರಿ. ಪ್ರಭುವಾದ ಮಹಾವಿಷ್ಣುವು ಆ ರಾಕ್ಷಸರನ್ನು ಖಂಡಿತವಾಗಿಯೂ ಸಂಹರಿಸುವನು.''

ಶಿವನು ಹೀಗೆ ಹೇಳಲು ' ಜಯ ಜಯ ' ಎಂದೆನ್ನುತ್ತಾ ರಾಕ್ಷಸರ

ಭಯದಿಂದ ಪೀಡಿತರಾಗಿದ್ದ ದೇವರ್ಷಿಗಳು ಮಹೇಶ್ವರನನ್ನು ಪ್ರತಿವಂದಿಸಿ ವಿಷ್ಣುವಿನ ಬಳಿಗೆ ಹೋದರು.

ಶಂಖ–ಚಕ್ರಧರನಾದ ಮಹಾವಿಷ್ಣುವಿಗೆ ದೇವತೆಗಳೆಲ್ಲರೂ ಪ್ರಣಾಮ ಮಾಡಿ ಗೌರವಿಸಿದನಂತರ ಭಯಗೊಂಡವರಂತೆ ಗದ್ಗದಸ್ವರದಿಂದ ಸುಕೇಶನ ಮಕ್ಕಳ ವಿಷಯವಾಗಿ ಮಹಾವಿಷ್ಣುವಿಗೆ ಹೇಳಿದರು :

ಸುಕೇಶತನಯೈರ್ದೇವ ತ್ರಿಭಿಸ್ತ್ರೇತಾಗ್ನಿಸಂನಿಭೈಃ ।
ಆಕ್ರಮ್ಯ ವರದಾನೇನ ಸ್ಥಾನಾನ್ಯಪಹೃತಾನಿ ನಃ ॥4॥

'' ದೇವದೇವನೇ ! ತ್ರೇತಾಗ್ನಿ ಸದೃಶರಾಗಿರುವ ಸುಕೇಶನ ಮೂವರು ಮಕ್ಕಳೂ ವರದಾನದ ಪ್ರಭಾವದಿಂದ ಸ್ವರ್ಗವನ್ನು ಆಕ್ರಮಿಸಿರುವುದಲ್ಲದೇ ನಮ್ಮ ಸ್ಥಾನ –ಮಾನಗಳನ್ನೂ ಅಪಹರಿಸಿದ್ದಾರೆ. ತ್ರಿಕೂಟಪರ್ವತದ ಶಿಖರದ ಮೇಲೆ ಲಂಕೆಯೆಂಬ ದುರ್ಗವಿದೆ. ಅಲ್ಲಿ ವಾಸಮಾಡುತ್ತಿರುವ ರಾಕ್ಷಸರು ನಮ್ಮೆಲ್ಲರನ್ನೂ ಹೀಗೆ ಬಾಧೆಪಡಿಸುತ್ತಿದ್ದಾರೆ. ಮಧುಸೂದನನೇ ! ನೀನು ನಮ್ಮೆಲ್ಲರ ಹಿತಾರ್ಥಕ್ಕಾಗಿ ಆ ರಾಕ್ಷಸರನ್ನು ಸಂಹರಿಸು. ನಾವು ನಿನಗೆ ಶರಣಾಗತರಾಗಿದ್ದೇವೆ. ದೇವೇಶ್ವರನೇ ! ನೀನೇ ನಮಗೆ ಪರಮಾಶ್ರಯನಾಗು. ನಿನ್ನ ಚಕ್ರದಿಂದ ಕತ್ತರಿಸಲ್ಪಡುವ ಅವರ ಕಮಲಸದೃಶವಾದ ಮುಖಗಳನ್ನು ಯಮಧರ್ಮನಿಗೆ ಅರ್ಪಿಸು. ಇಂತಹ ಸಂಕಟಗಳಲ್ಲಿ ನೀನೇ ನಮಗೆ ಅಭಯದಾತನು. ನಿನ್ನನ್ನು ಬಿಟ್ಟರೆ ನಮಗೆ ಅಭಯಪ್ರದಾನ ಮಾಡುವವರು ಬೇರೆ ಯಾರೂ ಇಲ್ಲ. ರಾಕ್ಷಸರು ಮದೋದ್ಧತರಾಗಿದ್ದಾರೆ. ನಮ್ಮ ಕಷ್ಟಗಳನ್ನು ನೋಡಿ ಪರಮಹೃಷ್ಟರಾಗಿದ್ದಾರೆ. ಆ ರಾಕ್ಷಸರನ್ನು ಬಂಧುಗಳೊಡನೆ ಸಂಹರಿಸಿ ಸೂರ್ಯನು ಹುಟ್ಟಿದೊಡನೆಯೇ ಮಂಜನ್ನು ಕರಗಿಸುವಂತೆ – ನಮ್ಮ ಭಯವನ್ನು ದೂರೀಕರಿಸು.''

ದೇವತೆಗಳು ಹೀಗೆ ಹೇಳಲು ದೇವದೇವನಾದ ಶತ್ರುಗಳಿಗೆ ಅತಿ ಭಯಂಕರನಾದ ಜನಾರ್ದನನು ದೇವತೆಗಳಿಗೆ ಅಭಯವನ್ನು ನೀಡುತ್ತಾ ಹೇಳಿದನು :

'' ದೇವತೆಗಳೇ ! ಈಶ್ವರನ ವರದಿಂದ ದರ್ಪಿಷ್ಠನಾಗಿರುವ ಸುಕೇಶನನ್ನು ನಾನು ಬಲ್ಲೆನು. ಮಾಲ್ಯವಂತನನ್ನು ಜ್ಯೇಷ್ಠನನ್ನಾಗಿ ಹೊಂದಿರುವ

ಆ ಮೂವರು ಸುಕೇಶನ ಮಕ್ಕಳನ್ನೂ ನಾನು ಬಲ್ಲೆನು. ಧರ್ಮದ ಮರ್ಯಾದೆಯನ್ನು ಉಲ್ಲಂಘಿಸಿರುವ ಆ ರಾಕ್ಷಸಾಧಮರನ್ನು ಸಂಕ್ರುದ್ಧನಾಗಿ ನಾನು ಸಂಹರಿಸುವೆನು. ನೀವೆಲ್ಲರೂ ನಿಶ್ಚಿಂತರಾಗಿರಿ. ''

ಯಾವುದೇ ಕಾರ್ಯವನ್ನಾದರೂ ಮಾಡಲು ಸಮರ್ಥನಾದ ವಿಷ್ಣುವು ಹೀಗೆ ಅಭಯಪ್ರದಾನಮಾಡಲು ದೇವತೆಗಳೆಲ್ಲರೂ ಆನಂದತುಂದಿಲರಾಗಿ ಜನಾರ್ದನನನ್ನು ಪ್ರಶಂಸಿಸುತ್ತಾ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು.

ತಮ್ಮನ್ನು ಸಂಹರಿಸಬೇಕೆನ್ನುವ ದೇವತೆಗಳ ಪ್ರಯತ್ನದ ಸಮಾಚಾರ ವನ್ನು ಕೇಳಿದ ಮಾಲ್ಯವಂತನು ಅನುಜರಿಗೆ ಹೇಳಿದನು :

'' ಸಹೋದರರೇ ! ದೇವತೆಗಳೂ ಮತ್ತು ಋಷಿಗಳೂ ಒಟ್ಟಾಗಿ ಸೇರಿ ನಮ್ಮೆಲ್ಲರ ವಧೆಯನ್ನಾಶಿಸಿ ಶಂಕರನ ಬಳಿಗೆ ಹೋಗಿ ಅವನಲ್ಲಿ ಹೀಗೆ ಹೇಳಿದರಂತೆ:

ಸುಕೇಶತನಯಾ ದೇವ ವರದಾನಬಲೋದ್ಧತಾಃ ।
ಬಾಧನ್ತೇಽಸ್ಮಾನ್ಸಮುದ್ವೃಪ್ತಾ ಘೋರರೂಪಾಃ ಪದೇ ಪದೇ ॥ 25॥

'ದೇವ ! ನಿನ್ನ ವರದಾನದ ಬಲದಿಂದ ಉದ್ಧತರಾಗಿರುವ ಘೋರ ರೂಪಿಗಳಾದ ಸುಕೇಶನ ಮಕ್ಕಳು ನಮ್ಮೆಲ್ಲರನ್ನೂ ಪದೇ-ಪದೇ ಬಾಧೆಪಡಿಸು ತ್ತಲೇ ಇರುವರು.

ಪ್ರಜಾನಾಥನೇ ! ರಾಕ್ಷಸರಿಂದ ಪರಾಜಿತರಾಗಿರುವ ನಾವು ದುರಾತ್ಮ ರಾದ ಅವರ ಭಯದಿಂದ ನಮ್ಮ ಮನೆಗಳಲ್ಲಿರಲು ಕೂಡ ಅಸಮರ್ಥರಾಗಿ ದ್ದೇವೆ. ತ್ರಿಲೋಚನನೇ ! ದಹನ ಮಾಡುವವರಲ್ಲಿ ಶ್ರೇಷ್ಠನಾದ ರುದ್ರ ದೇವನೇ ! ನಮ್ಮೆಲ್ಲರ ಹಿತಕ್ಕಾಗಿ ಆ ದುಷ್ಟ ರಾಕ್ಷಸರನ್ನು ನಿನ್ನ ಹುಂಕಾರ ದಿಂದಲೇ ದಹಿಸಿಬಿಡು.'

ದೇವತೆಗಳು ಹೀಗೆ ರುದ್ರನಿಗೆ ಹೇಳಲು ಅಂಧಕಾಸುರಸಂಹಾರಕನಾದ ಈಶಾನನು ತಲೆಯನ್ನೂ ಕೈಗಳನ್ನೂ ಕೊಡವುತ್ತಾ ದೇವತೆಗಳಿಗೆ ಹೀಗೆ ಹೇಳಿದನಂತೆ :

''ದೇವತೆಗಳೇ ! ಸುಕೇಶನ ಮಕ್ಕಳು ನನ್ನಿಂದ ವಧಿಸಲ್ಪಡತಕ್ಕವರಲ್ಲ.

ನಾನು ಅವರನ್ನು ಸಂಹರಿಸುವುದಿಲ್ಲ. ಆದರೆ ಅವರನ್ನು ಯಾರು ಸಂಹರಿಸ ಬಲ್ಲರೆಂಬ ವಿಷಯವಾಗಿ ನಿಮಗೆ ಸಲಹೆಯನ್ನು ನೀಡುತ್ತೇನೆ. ಯಾವನು ಚಕ್ರ–ಗದಾಪಾಣಿಯೋ, ಪೀತಾಂಬರಧಾರಿಯೋ, ದಿವ್ಯಕಾಂತಿಯಿಂದ ಸಂಪನ್ನ ನಾಗಿರುವನೋ –ಅಂತಹ ಜನಾರ್ದನನನ್ನು ಹರಿನಾರಾಯಣನನ್ನು ನೀವು ಶರಣುಹೊಂದಿರಿ. ಅವನು ಆ ರಾಕ್ಷಸರನ್ನು ಸಂಹರಿಸಬಲ್ಲನು.''

ಸಹೋದರರೇ ! ದೇವತೆಗಳು ಕಾಮಾರಿಯಾದ ಹರನಿಂದ ಹೀಗೆ ಸಲಹೆಯನ್ನು ಪಡೆದು ಅವನಿಗೆ ಅಭಿವಾದನಮಾಡಿ ನಾರಾಯಣನ ದಿವ್ಯಧಾಮಕ್ಕೆ ಹೋಗಿ ಅವನೊಡನೆ ತಮ್ಮ ಕಷ್ಟಗಳೆಲ್ಲವನ್ನೂ ಹೇಳಿಕೊಂಡರಂತೆ. ದೇವತೆ ಗಳ ಮಾತನ್ನು ಕೇಳಿದ ನಾರಾಯಣನು ಇಂದ್ರನೇ ಮೊದಲಾದ ದೇವತೆಗಳಿಗೆ ಅಭಯಪ್ರದಾನವನ್ನು ಮಾಡಿರುವನಂತೆ.

ಸುರಾರೀಂಸ್ತಾನ್ವಧಿಷ್ಯಾಮಿ ಸುರಾ ಭವತ ನಿರ್ಭಯಾಃ ॥32॥

'ಇಂದ್ರಪ್ರಮುಖರಾದ ದೇವತೆಗಳೇ ! ದೇವಶತ್ರುಗಳಾದ ಅವರೆಲ್ಲ ರನ್ನೂ ನಾನು ಸಂಹರಿಸುತ್ತೇನೆ. ನೀವು ಭಯರಹಿತರಾಗಿರಿ. '

ರಾಕ್ಷಸಶ್ರೇಷ್ಠರೇ ! ಅನುಜರೇ ! ಭಯಭೀತರಾದ ದೇವತೆಗಳಿಗೆ ಹರಿಯು ಹೀಗೆ ಹೇಳಿ ನಮ್ಮನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿರು ವನು. ಈ ಸಮಯದಲ್ಲಿ ನಾವು ಹೇಗೆ ನಡೆದುಕೊಂಡರೆ ನಮ್ಮ ಹಿತಸಾಧನೆ ಯಾಗುವುದೆಂಬುದನ್ನು ನಾವೀಗಲೇ ಸಮಾಲೋಚಿಸಬೇಕಾಗಿದೆ. ಹಿರಣ್ಯ ಕಶಿಪುವೇ ಮೊದಲಾದ ದೇವಶತ್ರುಗಳು ನಾರಾಯಣನಿಂದಲೇ ಕೊಲ್ಲ ಲ್ಪಟ್ಟರು. ನಮುಚಿ, ಕಾಲನೇಮಿ, ವೀರಶಿರೋಮಣಿಯಾದ ಸಂಹ್ರಾದ, ನಾನಾಪ್ರಕಾರವಾದ ಮಾಯೆಗಳನ್ನು ತಿಳಿದಿದ್ದ ರಾಧೇಯ, ಧಾರ್ಮಿಕನಾಗಿದ್ದ ಲೋಕಪಾಲ, ಯಮಲ, ಅರ್ಜುನ, ಹಾರ್ದಿಕ್ಯ, ಶುಂಭ, ನಿಶುಂಭಕ ಇವರೇ ಮೊದಲಾದ ಮಹಾಬಲರಾದ, ಸತ್ತ್ವವಂತರಾದ ಅಸುರ– ದಾನವರು ಸಮರಭೂಮಿಗೆ ಹೋಗಿ ನಾರಾಯಣನನ್ನು ಎದುರಿಸಿ ಪರಾಜಿತರಾಗಲಿಲ್ಲ ಎಂಬ ವಾರ್ತೆಯನ್ನು ನಾವು ಇದುವರೆಗೂ ಕೇಳಿಲ್ಲ. ನಾರಾಯಣನನ್ನು ಯುದ್ಧದಲ್ಲಿ ಎದುರಿಸಿ ಮಡಿದವರೆಲ್ಲರೂ ನೂರಾರು ಯಾಗಗಳನ್ನು ಮಾಡಿ ದ್ದರು. ಸಮಸ್ತವಾದ ಮಾಯೆಗಳನ್ನೂ ತಿಳಿದವರಾಗಿದ್ದರು. ಸಮಸ್ತವಾದ

ಅಸ್ತ್ರಗಳಲ್ಲಿಯೂ ಕುಶಲರಾಗಿದ್ದರು. ಶತ್ರುಗಳಿಗೆ ಅತಿಭಯಂಕರರಾಗಿದ್ದರು. ಅಂತಹ ನೂರಾರು ಸಾವಿರಾರು ರಾಕ್ಷಸರು ನಾರಾಯಣನಿಂದ ಹತರಾಗಿದ್ದಾರೆ. ಈ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಈ ಸಮಯದಲ್ಲಿ ನಾವು ನಮ್ಮೆಲ್ಲರಿಗೂ ಹಿತವಾಗುವಂತಹ ಕಾರ್ಯಮಾಡುವುದು ಉಚಿತವಾಗಿ ಕಾಣುತ್ತದೆ. ನಮ್ಮನ್ನು ಸಂಹರಿಸಲು ನಿಶ್ಚಯಿಸಿರುವ ನಾರಾಯಣನನ್ನು ಜಯಿಸುವುದು ದುಷ್ಕರವೇ ಸರಿ.''

ಮಾಲ್ಯವಂತನ ಮಾತನ್ನು ಕೇಳಿ ಸುಮಾಲೀ ಮತ್ತು ಮಾಲಿಗಳು ಅಶ್ವಿನೀದೇವತೆಗಳು ಇಂದ್ರನಿಗೆ ಸಲಹೆಯನ್ನಿತ್ತಂತೆ – ಅಣ್ಣನಿಗೆ ಹೇಳಿದರು:

'' ಅಣ್ಣ ! ನಾವು ಅಧ್ಯಯನ ಮಾಡಿದ್ದೇವೆ. ಯಜ್ಞಗಳನ್ನು ಮಾಡಿದ್ದೇವೆ. ಹೇರಳವಾಗಿ ದಾನಗಳನ್ನು ಕೊಟ್ಟಿದ್ದೇವೆ. ಐಶ್ವರ್ಯವನ್ನು ರಕ್ಷಿಸಿದ್ದೇವೆ ಮತ್ತು ಉಪಭೋಗಿಸಿದ್ದೇವೆ. ಆಧಿ –ವ್ಯಾಧಿಗಳಿಂದ ಮುಕ್ತವಾದ ಆಯುಷ್ಯವನ್ನು ಪಡೆದುಕೊಂಡಿದ್ದೇವೆ. ಕರ್ತವ್ಯದ ಮಾರ್ಗದಲ್ಲಿ ಹೆಜ್ಜೆಗಳನ್ನಿಡುತ್ತಾ ಉತ್ತಮವಾದ ಧರ್ಮವನ್ನು ಸ್ಥಾಪಿಸಿದ್ದೇವೆ. ಅಗಾಧವಾದ ದೇವಸೈನ್ಯವೆಂಬ ಸಮುದ್ರದಲ್ಲಿ ಶಸ್ತ್ರಾಣಿಗಳಾಗಿ ಮುಳುಗಿ ಅಪ್ರತಿಮಸಾಹಸಿಗಳೆನಿಸಿದ ನಮ್ಮ ಶತ್ರುಗಳನ್ನು ಪರಾಜಯಗೊಳಿಸಿದ್ದೇವೆ. ಆದುದರಿಂದ ನಮಗೆಂದಿಗೂ ಮೃತ್ಯುವಿನ ಭಯವಿಲ್ಲ, ನಾರಾಯಣನೇ ಆಗಲೀ, ರುದ್ರನೇ ಆಗಲೀ, ಇಂದ್ರ –ಯಮರೇ ಆಗಲೀ, ಎಲ್ಲ ದೇವತೆಗಳೂ ಒಟ್ಟಾಗಿಯೇ ಆಗಲೀ – ನಮ್ಮನ್ನೆದುರಿಸಿ ಯುದ್ಧಮಾಡಲು ಯಾವಾಗಲೂ ಭಯಪಡುತ್ತಾರೆ. ರಾಕ್ಷಸೇಶ್ವರನೇ! ಮೇಲಾಗಿ ವಿಷ್ಣುವು ನಮ್ಮನ್ನು ದ್ವೇಷಿಸಲು ಯಾವ ಕಾರಣವೂ ಇಲ್ಲ, ಅವನ ವಿಷಯದಲ್ಲಿ ನಾವು ಯಾವ ಅಪರಾಧವನ್ನೂ ಮಾಡಿಲ್ಲ, ದೇವತೆಗಳು ಚಾಡಿಹೇಳಿದ ಕಾರಣದಿಂದಲೇ ವಿಷ್ಣುವಿನ ಮನಸ್ಸು ಕೆಟ್ಟಿದೆ. ಆದುದರಿಂದ ನಾವೆಲ್ಲರೂ ಸೇರಿ ಪರಸ್ಪರವಾಗಿ ರಕ್ಷಣೆಮಾಡಿಕೊಳ್ಳುತ್ತಾ ವಿಷ್ಣುವನ್ನು ಪ್ರಚೋದಿಸಿದ ದೇವತೆಗಳನ್ನೇ ಧ್ವಂಸ ಮಾಡೋಣ.''

ಬಲಿಷ್ಠರಾದ ಮಾಲ್ಯವಂತನೇ ಮೊದಲಾದ ರಾಕ್ಷಸರು ಹೀಗೆ ಸಮಾಲೋಚಿಸಿ ಸಮಸ್ತಸೈನಿಕರಿಂದಲೂ ಸಮಾವೃತರಾಗಿ ತಮ್ಮ ಕಾರ್ಯವನ್ನು

ಉದ್ಘೋಷಿಸುತ್ತಾ ಜಂಭ-ವೃತ್ರರಂತೆ ಅತ್ಯಂತಕ್ರುದ್ಧರಾಗಿ ದೇವತೆಗಳೊಡನೆ ಯುದ್ಧಮಾಡಲು ಹೊರಟರು.

ರಾಘವ ! ದೇವತೆಗಳನ್ನೇ ಧ್ವಂಸಮಾಡಬೇಕೆಂದು ರಾಕ್ಷಸರೆಲ್ಲರೂ ನಿಶ್ಚಯಿಸಿ ಮಹಾಕಾಯರೂ ಮಹಾಬಲರೂ ಆಗಿದ್ದ ಸುಕೇಶನ ಮಕ್ಕಳನ್ನು ಮುಂದೆಮಾಡಿಕೊಂಡು ಯುದ್ಧಕ್ಕೆ ಹೊರಟರು. ಬಲದರ್ಪಿತರಾಗಿದ್ದ ದೇವ ಶತ್ರುಗಳಾದ ಆ ರಾಕ್ಷಸರು ರಥ, ಆನೆ, ಆನೆಯಂತಿದ್ದ ಕುದುರೆ, ಕತ್ತೆ, ಎತ್ತು, ಒಂಟೆ, ಶಿಶುಮಾರ, ಸರ್ಪ, ಮೊಸಳೆ, ಆಮೆ, ಮೀನು, ಗರುಡನಂತಹ ಪಕ್ಷಿ, ಸಿಂಹ, ಹುಲಿ, ಹಂದಿ, ಜಿಂಕೆ, ಚಮರೀಮೃಗ - ಇವೇ ಮುಂತಾದ ವಾಹನಗಳಲ್ಲಿ ಕುಳಿತು ಲಂಕೆಯನ್ನು ಬಿಟ್ಟು ದೇವತೆಗಳೊಡನೆ ಯುದ್ಧ ಮಾಡುವ ಸಲುವಾಗಿ ದೇವಲೋಕಕ್ಕೆ ತೆರಳಿದರು. ಲಂಕೆಯೇ ವಾಸಸ್ಥಾನ ವಾಗಿದ್ದ ಇತರ ಪ್ರಾಣಿಗಳೂ ದೇವತೆಗಳೂ ಲಂಕೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಶುಭಸೂಚಕಗಳಾದ ಶಕುನಗಳನ್ನು ನೋಡಿ ಭಯಗೊಂಡು ದುಃಖಿತ ವಾದುವು. ನೂರಾರು ಸಾವಿರಾರು ರಾಕ್ಷಸರು ಶ್ರೇಷ್ಠವಾದ ರಥಗಳಲ್ಲಿ ಕುಳಿತು ಪ್ರಯತ್ನಪೂರ್ವಕವಾಗಿ ಬಹಳ ಬೇಗ ದೇವಲೋಕಕ್ಕೆ ತೆರಳಿದರು. ಲಂಕಾ ಪಟ್ಟಣದಲ್ಲಿ ರಾಕ್ಷಸರಿಂದ ಪೂಜಿಸಲ್ಪಡುತ್ತಿದ್ದ ದೇವತೆಗಳು ಕೂಡ ರಾಕ್ಷಸರು ಹೊರಟ ಆ ಮಾರ್ಗದಿಂದಲೇ ಲಂಕೆಯಿಂದ ಹೊರಟರು.

ಆ ಸಮಯದಲ್ಲಿ ಕಾಲನ ಪ್ರೇರಣೆಯಂತೆ ಭೂಮ್ಯಂತರಿಕ್ಷಗಳಲ್ಲಿ ಭಯಂಕರವಾದ ಹಲವಾರು ಉತ್ಪಾತಗಳು ಕಾಣಿಸಿಕೊಂಡುವು. ಅವೆಲ್ಲವೂ ರಾಕ್ಷಸರು ಸಂಪೂರ್ಣವಾಗಿ ವಿನಾಶಹೊಂದುವರೆಂಬುದನ್ನು ಸೂಚಿಸುತ್ತಿದ್ದುವು. ಮೇಘಗಳು ಬಿಸಿ -ಬಿಸಿಯ ರಕ್ತ ಮತ್ತು ಮೂಳೆಗಳನ್ನು ಮಳೆಯಂತೆಯೇ ಸುರಿಸತೊಡಗಿದುವು. ಸಮುದ್ರವು ಎಲ್ಲೆಯನ್ನು ಮೀರಿ ಭೂಮಿಯ ಮೇಲೆ ಬರತೊಡಗಿತು. ಪರ್ವತಗಳು ಅಲ್ಲಾಡತೊಡಗಿದುವು. ಮೇಘದಂತೆ ಗಂಭೀರಧ್ವನಿಮಾಡುತ್ತಿದ್ದ ಪ್ರಾಣಿಗಳು ವಿಕಟಾಟ್ಟಹಾಸವನ್ನು ಮಾಡ ತೊಡಗಿದುವು. ಭಯಂಕರವಾಗಿ ಕಾಣುತ್ತಿದ್ದ ಗುಳ್ಳೇನರಿಗಳು ಗಟ್ಟಿಯಾಗಿ ಅರಚಿಕೊಳ್ಳುತ್ತಿದ್ದುವು. ಪೃಥ್ವಿಯೇ ಮೊದಲಾದ ಪಂಚಭೂತಗಳು ಅನು ಕ್ರಮವಾಗಿ ಕೆಳಗೆ ಬೀಳುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಪ್ರಜ್ವಲಿ ಸುತ್ತಿರುವ ಬೆಂಕಿಯ ಜ್ವಾಲೆಗಳನ್ನು ಮುಖಗಳಿಂದ ಕಾರುತ್ತಿದ್ದ ದೊಡ್ಡದಾದ

ರಣಹದ್ದುಗಳ ಸಮೂಹವು ಕಾಲಪುರುಷನೋಪಾದಿಯಲ್ಲಿ ರಾಕ್ಷಸಸೈನಿಕರ ಮೇಲೆ ಹಾರಾಡುತ್ತಿದ್ದಿತು. ಕಪೋತಗಳು, ಗಿಣಿಗಳು ಮತ್ತು ಮೈನಾಕ ಪಕ್ಷಿಗಳು ಲಂಕಾಪಟ್ಟಣವನ್ನು ತೊರೆದು ಶೀಘ್ರಗತಿಯಲ್ಲಿ ಹಾರಿಹೋದುವು. ಕಾಗೆಗಳು ಮತ್ತು ಬೆಕ್ಕುಗಳು ಕೂಗಿಕೊಳ್ಳುತ್ತಿದ್ದುವು. ಆನೆಯೇ ಮೊದಲಾದ ಪ್ರಾಣಿಗಳು ಆರ್ತನಾದಗಳನ್ನು ಮಾಡುತ್ತಿದ್ದುವು. ಬಲದರ್ಪಿತರಾದ, ಮೃತ್ಯುಪಾಶದಿಂದ ಬಂಧಿಸಲ್ಪಟ್ಟಿದ್ದ ರಾಕ್ಷಸರು ಅಂತಹ ವಿನಾಶಸೂಚಕಗಳಾದ ಉತ್ಪಾತಗಳನ್ನೂ ನಿರ್ಲಕ್ಷಿಸಿ ದೇವತೆಗಳೊಡನೆ ಯುದ್ಧಮಾಡುವ ಸಲುವಾಗಿ ಪ್ರಯಾಣಮಾಡುತ್ತಲೇ ಇದ್ದರು. ಒಮ್ಮೆಯಾದರೂ ಹಿಂದಿರುಗಿ ನೋಡುತ್ತಿರಲಿಲ್ಲ. ಮಾಲ್ಯವಂತ, ಸುಮಾಲೀ ಮತ್ತು ಮಹಾಬಲಿಷ್ಠನಾದ ಮಾಲೀ– ಈ ಮೂವರೂ ಪ್ರಜ್ವಲಿಸುವ ತ್ರೇತಾಗ್ನಿಗಳಂತೆ ರಾಕ್ಷಸಸೈನಿಕರ ಮುಂಭಾಗದಲ್ಲಿ ಹೋಗುತ್ತಿದ್ದರು. ಮಾಲ್ಯವತ್ಪರ್ವತದಂತೆಯೇ ಮಹಾಕಾಯನಾಗಿದ್ದ ಮಾಲ್ಯವಂತನನ್ನು ಆ ಎಲ್ಲ ರಾಕ್ಷಸರೂ – ದೇವತೆಗಳು ಬ್ರಹ್ಮನನ್ನು ಆಶ್ರಯಿಸುವಂತೆ – ಆಶ್ರಯಿಸಿದ್ದರು. ರಾಕ್ಷಸರ ಆ ಸೈನ್ಯವು ಮಹಾಮೇಘದ ಗರ್ಜನೆಯಂತೆ ಗರ್ಜನೆಮಾಡುತ್ತಾ ವಿಜಯಗಳಿಸುವ ಇಚ್ಛೆಯಿಂದ ಮಾಲಿಯ ನೇತೃತ್ವದಲ್ಲಿ ದೇವಲೋಕಕ್ಕೆ ತೆರಳಿತು. ದೇವದೂತನ ಮೂಲಕ ರಾಕ್ಷಸರ ಯುದ್ಧೋದ್ಯಮವನ್ನು ಕೇಳಿದ ಪ್ರಭುವಾದ ಮಹಾವಿಷ್ಣುವು ಅವರೊಡನೆ ಯುದ್ಧಮಾಡಲು ನಿಶ್ಚಯಿಸಿದನು. ಒಡನೆಯೇ ನಾರಾಯಣನು ಸಾವಿರ ಸೂರ್ಯರ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಕವಚವನ್ನು ಧರಿಸಿ, ಬಾಣಗಳಿಂದ ತುಂಬಿದ್ದ ಬತ್ತಳಿಕೆಯನ್ನು ತೆಗೆದುಕೊಂಡು ಧನುಸ್ಸನ್ನು ಸಜ್ಜುಗೊಳಿಸಿ ಗರುಡನ ಮೇಲೆ ಕುಳಿತನು. ಬಾಣಗಳಿಂದ ತುಂಬಿದ್ದ ಥಳಥಳಿಸುತ್ತಿದ್ದ ಬತ್ತಳಿಕೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಸೊಂಟಪಟ್ಟಿಯನ್ನು ಕಟ್ಟಿಕೊಂಡು ಪರಿಶುದ್ಧವಾದ ಕತ್ತಿಯನ್ನು ಧರಿಸಿ ಕಮಲಾಕ್ಷನಾದ ವಿಷ್ಣುವು ಯುದ್ಧಕ್ಕೆ ಸಿದ್ಧನಾದನು. ಶಂಖ –ಚಕ್ರ –ಗದೆಗಳನ್ನೂ, ಶಾರ್ಙ್ಗವೆಂಬ ಧನುಸ್ಸನ್ನೂ, ಕತ್ತಿಯನ್ನೂ ಮತ್ತು ಇತರ ಶ್ರೇಷ್ಠವಾದ ಆಯುಧಗಳನ್ನೂ ಧರಿಸಿ, ಸುಂದರವಾದ ರೆಕ್ಕೆಗಳಿರುವ ಪರ್ವತೋಪಮನಾಗಿದ್ದ ಗರುತ್ಮಂತನ ಮೇಲೆ ಕುಳಿತು, ರಾಕ್ಷಸರ ವಿನಾಶಕ್ಕಾಗಿ

ಪ್ರಭುವಾದ ಶ್ರೀಹರಿಯು ಬಹಳ ಶೀಘ್ರವಾಗಿ ರಣರಂಗಕ್ಕೆ ಹೊರಟನು. ಆ ಸಮಯದಲ್ಲಿ ಸಿದ್ಧರೂ, ದೇವರ್ಷಿಗಳೂ, ಮಹಾ–ಮಹಾನಾಗರೂ, ಗಂಧರ್ವ–ಯಕ್ಷರೂ ನಾರಾಯಣನ ಗುಣಗಾನಮಾಡುತ್ತಿದ್ದರು. ರಾಕ್ಷಸಸೈನ್ಯದ ಶತ್ರುವಾದ ಶ್ರೀಹರಿಯು ಶಂಖ–ಚಕ್ರ–ಗದಾ– ಖಡ್ಗಧರನಾಗಿ ಯುದ್ಧ ಭೂಮಿಗೆ ಆಗಮಿಸಿದನು. ವಿಷ್ಣುವಿನ ವಾಹನವಾದ ಗರುಡನ ರೆಕ್ಕೆಗಳಿಂದ ಹೊರಬರುತ್ತಿದ್ದ ಬಿರುಸಾದ ಗಾಳಿಯಿಂದಲೇ ರಾಕ್ಷಸಸೈನ್ಯವು ಕ್ಷೋಭೆಗೊಂಡಿತು. ರಾಕ್ಷಸರ ರಥಗಳಲ್ಲಿದ್ದ ಪತಾಕೆಗಳು ಅಳ್ಳಾಡತೊಡಗಿದುವು. ಅವರ ಕೈಗಳಲ್ಲಿದ್ದ ಅಸ್ತ್ರ–ಶಸ್ತ್ರಗಳೆಲ್ಲವೂ ಜಾರಿ ಕೆಳಗೆ ಬೀಳತೊಡಗಿದುವು. ಈ ರೀತಿಯಲ್ಲಿ ನಾರಾಯಣನು ಗರುಡಾರೂಢನಾಗಿ ಬರುತ್ತಿದ್ದಂತೆಯೇ ರಾಕ್ಷಸ ರಾಜನಾದ ಮಾಲ್ಯವಂತನ ಸೈನ್ಯವು ನಡುಗಿಹೋಯಿತು. ನೀಲವರ್ಣದ ಪರ್ವತದ ಶಿಖರವು ತನ್ನಲ್ಲಿರುವ ಬಂಡೆಗಳನ್ನು ಎಲ್ಲ ಕಡೆಗಳಿಗೂ ಉರುಳಿಸುತ್ತಿರುವುದೋ ಎಂಬಂತೆ ಧೃತಿಗೆಟ್ಟು ಕಂಪಿಸುತ್ತಿದ್ದ ಆ ರಾಕ್ಷಸಸೈನ್ಯವು ಕಾಣುತ್ತಿದ್ದಿತು. ಆ ಸಮಯದಲ್ಲಿ ರಾಕ್ಷಸರ ನಿಶಿತವಾದ ಶಸ್ತ್ರಾಸ್ತ್ರಗಳು ರಕ್ತದಿಂದಲೂ ಮಾಂಸದಿಂದಲೂ ಲೇಪಿತವಾಗಿದ್ದ ಪ್ರಳಯಕಾಲದ ಅಗ್ನಿಗಳಂತೆಯೇ ಕಾಣುತ್ತಿದ್ದುವು. ಮಹಾವಿಷ್ಣುವು ಗರುಡವಾಹನನಾಗಿ ಬಂದೊಡನೆಯೇ ಸಾವಿರಾರು ರಾಕ್ಷಸರು ಅವನನ್ನು ಸುತ್ತುವರಿದು ಉಗ್ರ ವಾದ ಆಯುಧಗಳಿಂದ ಇರಿಯತೊಡಗಿದರು.

6ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **7ನೆಯ ಸರ್ಗ**

ವಿಷ್ಣುವಿನಿಂದ ರಾಕ್ಷಸರ ಸಂಹಾರ : ಮಾಲಿಯ ವಧೆ : ಅಳಿದುಳಿದ ರಾಕ್ಷಸರ ಪಲಾಯನ

ನಾರಾಯಣಗಿರಿಂ ತೇ ತು ಗರ್ಜನ್ತೋ ರಾಕ್ಷಸಾಮ್ಬುದಾಃ ।
ವವೃಷುರಸ್ತ್ರವರ್ಷೇಣ ವರ್ಷೇಣೇವಾದ್ರಿಮಮ್ಬುದಾಃ ॥1॥

ರಾಘವ ! ಮೇಘಗಳು ಮಳೆಯಿಂದ ಪರ್ವತವನ್ನು ಮುಚ್ಚಿಬಿಡುವಂತೆ ಮೇಘರೂಪಿಗಳಾದ ರಾಕ್ಷಸರು ಮಳೆಯರೂಪವಾದ ಅಸ್ತ್ರಗಳಿಂದ

ಗರ್ಜನೆಮಾಡುತ್ತಾ ಪರ್ವತದಂತೆ ಸ್ಥಿರವಾಗಿ ನಿಂತಿದ್ದ ನಾರಾಯಣನನ್ನು ಪೀಡಿಸತೊಡಗಿದರು.

ಮಹಾವಿಷ್ಣುವು ಉಜ್ಜ್ವಲವಾದ ಶ್ಯಾಮಲವರ್ಣದಿಂದ ಸುಶೋಭಿಸುತ್ತಿದ್ದನು. ಅವನ ಸುತ್ತಲೂ ನಿಂತು ಅಸ್ತ್ರ–ಶಸ್ತ್ರಗಳನ್ನು ಸುರಿಸುತ್ತಿದ್ದ ರಾಕ್ಷಸಶ್ರೇಷ್ಠರೂ ಶ್ಯಾಮಲವರ್ಣದವರಾಗಿಯೇ ಇದ್ದರು. ಅದನ್ನು ನೋಡಿದರೆ ಅಂಜನಪರ್ವತದ ಸುತ್ತಲೂ ನಿಂತು ನೀಲಮೇಘಗಳೇನಾದರೂ ಮಳೆಗರೆಯುತ್ತಿವೆಯೋ ಎಂಬಂತೆ ಕಾಣುತ್ತಿದ್ದಿತು. ಮಿಡತೆಗಳು ಪೈರಿರುವ ಗದ್ದೆಯನ್ನು ಮುತ್ತುವಂತೆ – ಪತಂಗದ ಹುಳುಗಳು ಬೆಂಕಿಯನ್ನು ಮುತ್ತುವಂತೆ– ಜೇನುತುಪ್ಪದ ಗಡಿಗೆಯನ್ನು ಕಾಡುನೊಣಗಳು ಮುತ್ತಿಕೊಳ್ಳುವಂತೆ – ಮೊಸಳೆಗಳು ಸಮುದ್ರವನ್ನು ಪ್ರವೇಶಿಸುವಂತೆ – ರಾಕ್ಷಸರು ಪ್ರಯೋಗಿಸುತ್ತಿದ್ದ, ವಜ್ರಾಯುಧಕ್ಕೆ ಸಮಾನವಾದ, ವಾಯುವೇಗ –ಮನೋವೇಗಗಳಿಂದ ಕೂಡಿದ ಬಾಣಗಳು ಪ್ರಳಯಕಾಲದಲ್ಲಿ ಸಮಸ್ತಲೋಕಗಳೂ ಹರಿಯಲ್ಲಿ ಪ್ರವೇಶಿಸಿ ಲೀನವಾಗಿ ಹೋಗುವಂತೆ – ನಾರಾಯಣನಲ್ಲಿ ಪ್ರವೇಶಿಸಿ ಲೀನವಾಗಿ ಹೋದುವು. ರಥದಲ್ಲಿ ಕುಳಿತಿದ್ದ ಯೋಧರು ತಮ್ಮ–ತಮ್ಮ ರಥಗಳೊಡನೆ, ಆನೆಯ ಮೇಲೆ ಕುಳಿತಿದ್ದ ಯೋಧರು ತಮ್ಮ–ತಮ್ಮ ಆನೆಗಳೊಡನೆ, ಕುದುರೇ ಸವಾರರು ತಮ್ಮ–ತಮ್ಮ ಕುದುರೆಗಳೊಡನೆ ಯುದ್ಧದ ಸಲುವಾಗಿ ಆಕಾಶದಲ್ಲಿ ನಿಂತಿದ್ದರು. ಅಂತೆಯೇ ಪದಾತಿಸೈನಿಕರೂ ನಿಂತಿದ್ದರು. ಪರ್ವತೋಪಮರಾದ ರಾಕ್ಷಸಶ್ರೇಷ್ಠರು ಬಾಣಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಋಷ್ಟಿ–ತೋಮರಗಳಿಂದಲೂ ಪ್ರಾಣಾಯಾಮಗಳು ಸಾಧಕನಾದ ಬ್ರಾಹ್ಮಣನನ್ನು ಉಚ್ಛ್ವಾಸ – ನಿಃಶ್ವಾಸರಹಿತನನ್ನಾಗಿ ಮಾಡುವಂತೆ – ನಾರಾಯಣನನ್ನು ಉಚ್ಛ್ವಾಸರಹಿತನನ್ನಾಗಿ ಮಾಡಿಬಿಟ್ಟರು. ಮೀನುಗಳಿಂದ ಮಹಾಸಮುದ್ರವು ಬಡಿಯಲ್ಪಡುವಂತೆ –ರಾಕ್ಷಸರಿಂದ ಪ್ರಹರಿಸಲ್ಪಟ್ಟ, ಎದುರಿಸಲು ಅಸಾಧ್ಯನಾದ ಶ್ರೀಹರಿಯು ಶಾರ್ಙ್ಗಧನುಸ್ಸನ್ನು ಬಗ್ಗಿಸಿ ಶಿಂಜಿನಿಯನ್ನು ಬಿಗಿದು ಬಾಣಗಳನ್ನು ಹೂಡಿ ರಾಕ್ಷಸರ ಮೇಲೆ ಸುರಿಸತೊಡಗಿದನು. ಶಿಂಜಿನಿಯನ್ನು ದೀರ್ಘವಾಗಿ ಸೆಳೆದು ಬಿಡಲ್ಪಡುತ್ತಿದ್ದ, ವಜ್ರಾಯುಧಸದೃಶವಾಗಿದ್ದ, ಮನೋವೇಗದಿಂದ ಕೂಡಿದ್ದ ನಿಶಿತವಾದ ಬಾಣಗಳಿಂದ ನೂರಾರು ಸಾವಿರಾರು ರಾಕ್ಷಸರ ತಲೆಗಳನ್ನು ಕತ್ತರಿಸಿ ಹಾಕಿದನು. ಬಿರುಗಾಳಿಯು

ಸುರಿಯುತ್ತಿರುವ ಮಳೆಯನ್ನೂ ಮತ್ತು ಮಳೆಗರೆಯುತ್ತಿರುವ ಮೇಘಗಳನ್ನೂ ಚೆಲ್ಲಾಪಿಲ್ಲಿಯಾಗಿ ಮಾಡಿಬಿಡುವಂತೆ – ಪುರುಷೋತ್ತಮನು ಬಾಣಗಳ ವರ್ಷಗಳಿಂದ ರಾಕ್ಷಸರನ್ನು ದಿಕ್ಕಾಪಾಲಾಗಿ ಓಡಿಸಿ ಮಹಾಶಂಖವಾದ ಪಾಂಚಜನ್ಯವನ್ನು ಗಟ್ಟಿಯಾಗಿ ಊದಿದನು. ಸಂಪೂರ್ಣವಾಗಿ ಉಸಿರು ಬಿಟ್ಟು ಹರಿಯಿಂದ ಊದಲ್ಪಟ್ಟ ಶ್ರೇಷ್ಠಶಂಖವಾದ ಸಮುದ್ರದಲ್ಲಿ ಹುಟ್ಟಿದ್ದ ಆ ಪಾಂಚಜನ್ಯವು ಭಯಂಕರವಾದ ಶಬ್ದದಿಂದ ಮೂರು ಲೋಕಗಳಿಗೂ ವ್ಯಥೆಯನ್ನುಂಟುಮಾಡುವುದೋ ಎಂಬ ರೀತಿಯಲ್ಲಿ ಸರ್ವತ್ರ ಪ್ರತಿಧ್ವನಿಸಿತು. ಅರಣ್ಯದಲ್ಲಿ ಮೃಗಗಳಿಗೆ ಒಡೆಯನಾದ ಸಿಂಹವು ಮದಿಸಿದ ಆನೆಗಳನ್ನು ಗರ್ಜನೆಯಿಂದ ಭಯಪಡಿಸುವಂತೆ – ಶಂಖಗಳಿಗೆಲ್ಲಾ ರಾಜನಾದ ಪಾಂಚಜನ್ಯದ ಧ್ವನಿಯು ರಾಕ್ಷಸರನ್ನು ಭಯಗೊಳಿಸಿತು. ದುರ್ಬಲವಾದ ಕುದುರೆಗಳು ಶಂಖಧ್ವನಿಯನ್ನು ಕೇಳಿದೊಡನೆಯೇ ಶಕ್ತಿಗುಂದಿ ರಣರಂಗದಲ್ಲಿ ನಿಲ್ಲಲಾರದೆ ಹೋದುವು. ಆನೆಗಳು ಮದರಹಿತವಾದುವು. ಅತಿರಥ – ಮಹಾರಥರು ಶಕ್ತಿಗುಂದಿ ರಥಗಳಿಂದ ಕೆಳಕ್ಕುರುಳಿದರು. ಮಹಾವಿಷ್ಣುವಿನ ಶಾರ್ಙ್ಗಧನುಸ್ಸಿನಿಂದ ಬಿಡಲ್ಪಟ್ಟ ವಜ್ರಾಯುಧದ ಮುಖಕ್ಕೆ ಅನುರೂಪವಾದ ಮುಖಗಳನ್ನು ಹೊಂದಿದ್ದ ಬಾಣಗಳು ಅಲ್ಲಿದ್ದ ಎಲ್ಲ ರಾಕ್ಷಸರನ್ನೂ ಸೀಳಿಹಾಕಿ ರೆಕ್ಕೆಗಳ ಸಮೇತವಾಗಿ ಭೂಮಿಯನ್ನು ಹೊಕ್ಕುವು. ಆ ಮಹಾಯುದ್ಧದಲ್ಲಿ ನಾರಾಯಣನ ಕೈಗಳಿಂದ ಹೊರಬಂದ ಬಾಣಗಳಿಂದ ಸತತವಾಗಿ ಭೇದಿಸಲ್ಪಡುತ್ತಿದ್ದ ರಾಕ್ಷಸರು ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತಗಳಂತೆ ಭೂಮಿಯಲ್ಲಿ ತೊಪ –ತೊಪನೆ ಬೀಳುತ್ತಿದ್ದರು. ವಿಷ್ಣುಚಕ್ರದಿಂದ ಶತ್ರುಗಳ ಶರೀರಗಳಲ್ಲಿ ಉಂಟಾದ ಗಾಯಗಳು ಪರ್ವತಗಳು ಗೈರಿಕಾದಿಧಾತುಗಳಿಂದ ಮಿಶ್ರವಾದ ಚಿನ್ನದ ಬಣ್ಣದ ಜಲಧಾರೆಗಳನ್ನು ಹೊರಸೂಸುವಂತೆ – ರಕ್ತಧಾರೆಗಳನ್ನು ಚೆಲ್ಲುತ್ತಿದ್ದುವು. ಪಾಂಚಜನ್ಯಶಂಖದ ನಿನಾದ, ಶಾರ್ಙ್ಗಧನುಸ್ಸಿನ ಟಂಕಾರಧ್ವನಿ ಮತ್ತು ವಿಷ್ಣುವಿನ ಗರ್ಜನೆ – ಇವುಗಳು ರಾಕ್ಷಸರ ಕೋಲಾಹಲ ಧ್ವನಿಗಳನ್ನೂ ಅಡಗಿಸುತ್ತಿದ್ದುವು. ಭಯಂಕರವಾದ ಆ ಶಬ್ದಗಳ ಮಧ್ಯದಲ್ಲಿ ರಾಕ್ಷಸರ ಕೂಗೇ ಕೇಳಿಬರುತ್ತಿರಲಿಲ್ಲ. ಶ್ರೀಹರಿಯು ನಿಶಿತವಾದ ಬಾಣಗಳಿಂದ ರಾಕ್ಷಸರ ತೂರಾಡುತ್ತಿದ್ದ ತಲೆಗಳನ್ನೂ, ಅವರಿಂದ ಬಿಡಲ್ಪಡುತ್ತಿದ್ದ ಬಾಣಗಳನ್ನೂ, ಅವರು ಹಿಡಿದಿದ್ದ ಧನುಸ್ಸುಗಳನ್ನೂ, ರಥ –

ಪತಾಕೆಗಳನ್ನೂ, ಕತ್ತಿಗಳನ್ನೂ ಕತ್ತರಿಸಿಹಾಕುತ್ತಿದ್ದನು. ಸೂರ್ಯನಿಂದ ಪ್ರಖರವಾದ ಕಿರಣಗಳು ಹೊರಬರುವಂತೆ – ಸಮುದ್ರದಿಂದ ಜಲರಾಶಿಗಳು ಅಲೆಗಳ ರೂಪದಲ್ಲಿ ಸಾಲುಸಾಲಾಗಿ ಹೊರಬರುವಂತೆ – ಪರ್ವತದಿಂದ ಹಾವುಗಳು ಹೊರಬರುವಂತೆ ಆಕಾಶದಿಂದ ಜಲಧಾರೆಗಳು ಬೀಳುವಂತೆ ನಾರಾಯಣನಿಂದ ಪ್ರೇರಿತವಾಗಿ ಶಾರ್ಙ್ಗಧನುಸ್ಸಿನಿಂದ ನೂರಾರು ಸಾವಿರಾರು ಸಂಖ್ಯೆಯಲ್ಲಿ ಪುಂಖಾನುಪುಂಖವಾಗಿ ಬಾಣಗಳು ಹೊರಬರುತ್ತಿದ್ದುವು. ಶರಭಕ್ಕೆ ಸಿಂಹಗಳು ಹೆದರುವಂತೆ – ಸಿಂಹಕ್ಕೆ ಆನೆಗಳು ಹೆದರುವಂತೆ – ಆನೆಗೆ ಹುಲಿಗಳು ಹೆದರುವಂತೆ – ಹುಲಿಗೆ ಚಿರತೆಗಳು ಹೆದರುವಂತೆ– ಚಿರತೆಗಳಿಗೆ ನಾಯಿಗಳು ಹೆದರುವಂತೆ – ನಾಯಿಗಳಿಗೆ ಬೆಕ್ಕುಗಳು ಹೆದರುವಂತೆ – ಬೆಕ್ಕುಗಳಿಗೆ ಸರ್ಪಗಳು ಹೆದರುವಂತೆ ಸರ್ಪಗಳಿಗೆ ಇಲಿಗಳು ಹೆದರುವಂತೆ – ಪ್ರಭಾವಶಾಲಿಯಾದ ವಿಷ್ಣುವಿನ ಪ್ರಹಾರಕ್ಕೆ ಸಮಸ್ತರಾಕ್ಷಸರೂ ಹೆದರಿ ಪಲಾಯನಮಾಡಿದರು. ಹಾಗೆ ಓಡಿಹೋಗುವಾಗ ಅನೇಕರಾಕ್ಷಸರು ಕೆಳಕ್ಕೆ ಬಿದ್ದು ಪ್ರಾಣಗಳನ್ನು ತೊರೆದರು. ಹೀಗೆ ಮಧುಸೂದನನು ಸಾವಿರಾರು ರಾಕ್ಷಸರನ್ನು ಸಂಹರಿಸಿ ವಿಜಯಸೂಚಕವಾಗಿ ತನ್ನ ಪಾಂಚಜನ್ಯವೆಂಬ ಶಂಖವನ್ನು ಮೇಘರಾಜನಾದ ಇಂದ್ರನು ಮೇಘಗಳನ್ನು ನೀರಿನಿಂದ ತುಂಬುವಂತೆ ತನ್ನ ಉಸಿರಿನಿಂದ ತುಂಬಿದನು. ನಾರಾಯಣಾಸ್ತ್ರಗಳಿಂದ ಪೀಡಿಸಲ್ಪಡುತ್ತಿದ್ದ, ಶಂಖನಾದದಿಂದ ಭಯಗೊಂಡಿದ್ದ ರಾಕ್ಷಸರ ಆ ಅಪಾರಸೈನ್ಯವು ಲಂಕಾಪಟ್ಟಣದ ಕಡೆಗೆ ಓಡಿಹೋಯಿತು. ನಾರಾಯಣನ ಬಾಣಗಳ ಪ್ರಹಾರದಿಂದ ರಾಕ್ಷಸರ ಸೈನ್ಯವು ಭಗ್ನವಾಗಲಾಗಿ ಸುಮಾಲಿಯು ಬಾಣಗಳ ವರ್ಷದಿಂದ ಹರಿಯನ್ನು ತಡೆದನು. ಹಿಮದ ರಾಶಿಯು ಸೂರ್ಯನನ್ನು ಮುಚ್ಚಿಬಿಡುವಂತೆ – ಬಾಣಗಳ ಸಮೂಹದಿಂದ ಸುಮಾಲಿಯು ನಾರಾಯಣನನ್ನು ಮುಚ್ಚಿಬಿಟ್ಟನು. ಅದನ್ನು ನೋಡಿ ಸತ್ತ್ವಸಂಪನ್ನರಾದ ರಾಕ್ಷಸರು ಧೈರ್ಯಗೊಂಡರು. ಬಲದರ್ಪಿತನಾಗಿದ್ದ ಆ ರಾಕ್ಷಸನು ಗಟ್ಟಿಯಾಗಿ ಗರ್ಜನೆ ಮಾಡುತ್ತಾ ರಾಕ್ಷಸರಿಗೆ ಪುನಃ ಜೀವವನ್ನು ತುಂಬುವನೋ ಎಂಬಂತೆ ಪರಮಕ್ರುದ್ಧನಾಗಿ ವಿಷ್ಣುವನ್ನು ಆಕ್ರಮಿಸಿದನು. ಆನೆಯು ಸೊಂಡಿಲನ್ನೆತ್ತಿಕೊಂಡು ಚೀತ್ಕಾರಮಾಡುವಂತೆ – ಸುಮಾಲಿಯು ಜೋತುಬಿದ್ದ ಆಭರಣಗಳಿಂದ ಶೋಭಿಸುತ್ತಿದ್ದ ತೋಳನ್ನು ಮೇಲಕ್ಕೆತ್ತಿಕೊಂಡು ಅತ್ಯಂತಹರ್ಷದಿಂದ

ಮಿಂಚಿನಿಂದ ಯುಕ್ತವಾದ ಮೇಘದಂತೆ ಗಟ್ಟಿಯಾಗಿ ಗರ್ಜಿಸಿದನು. ಆ ಸಮಯದಲ್ಲಿ ನಾರಾಯಣನು ಗರ್ಜಿಸುತ್ತಿದ್ದ, ಕರ್ಣಕುಂಡಲಗಳಿಂದ ಸುಭೂಷಿತವಾಗಿದ್ದ ಸುಮಾಲಿಯ ಸಾರಥಿಯ ತಲೆಯನ್ನು ಬಾಣಗಳಿಂದ ಕತ್ತರಿಸಿದನು. ಮರುಕ್ಷಣದಲ್ಲಿಯೇ ರಾಕ್ಷಸನ ರಥದ ಕುದುರೆಗಳು ಭ್ರಾಂತಿಗೊಂಡುವು. ಕಡಿವಾಣವನ್ನು ಹಿಡಿಯುವವರಿಲ್ಲದೇ ಕುದುರೆಗಳು ಭ್ರಾಂತಿಯಿಂದ ತತ್ತರಿಸುತ್ತಿದ್ದಾಗ ರಥದಲ್ಲಿ ಕುಳಿತಿದ್ದ ಸುಮಾಲಿಯೂ ತತ್ತರಿಸುತ್ತಿದ್ದನು.

ಇನ್ದ್ರಿಯಾಶ್ವೈಃ ಪರಿಭ್ರಾನ್ತೈರ್ಧೃತಿಹೀನೋ ಯಥಾ ನರಃ ॥30॥

ಯಾವ ರೀತಿಯಲ್ಲಿ ಜಿತೇಂದ್ರಿಯನಲ್ಲದ ಮನುಷ್ಯನು ಇಂದ್ರಿಯಗಳೆಂಬ ಕುದುರೆಗಳ ಎಳೆದಾಟಕ್ಕೆ ಸಿಕ್ಕಿ ಅವುಗಳು ಸೆಳೆದುಕೊಂಡು ಹೋಗುವ ಕಡೆಗೇ ತಾನೂ ಹೋಗುತ್ತಿರುವನೋ – ಅದೇ ರೀತಿಯಲ್ಲಿ ಕಡಿವಾಣಗಳಿಲ್ಲದ ಕುದುರೆಗಳು ಹೋದ ಕಡೆಗೆ ಸುಮಾಲಿಯೂ ಹೋಗುತ್ತಿದ್ದನು.

ಹೀಗೆ ಸುಮಾಲಿಯ ರಥದ ಕುದುರೆಗಳು ರಥವನ್ನು ಸಿಕ್ಕಿದ ಕಡೆಗೆ ಸೆಳೆದುಕೊಂಡು ಹೋಗುತ್ತಿರುವಾಗ ರಾಕ್ಷಸರ ಮೇಲೆ ಸತತವಾಗಿ ಆಕ್ರಮಣ ನಡೆಸುತ್ತಿದ್ದ ನಾರಾಯಣನ ರಥದ ಬಳಿಗೆ ಮಾಲೀ ಎಂಬ ರಾಕ್ಷಸನು ಧನುರ್ಬಾಣಗಳನ್ನು ಹಿಡಿದು ಧಾವಿಸಿದನು. ಮಾಲಿಯ ಧನುಸ್ಸಿನಿಂದ ಹೊರಬಂದ ಸುವರ್ಣಭೂಷಿತವಾದ ಬಾಣಗಳು ಕ್ರೌಂಚಪರ್ವತದ ಬಿಲವನ್ನು ಪಕ್ಷಿಗಳು ಪ್ರವೇಶಿಸುವಂತೆ – ಮಹಾವಿಷ್ಣುವಿನ ಶರೀರದ ಒಳಹೊಕ್ಕುವು. ಮಾಲಿಯಿಂದ ಬಿಡಲ್ಪಡುತ್ತಿದ್ದ ಸಾವಿರಾರು ಬಾಣಗಳಿಂದ ಶ್ರೀಹರಿಯು ಪೀಡಿಸಲ್ಪಡುತ್ತಿದ್ದರೂ –ಜಿತೇಂದ್ರಿಯನಾದವನು ಮಾನಸಿಕವಾದ ವ್ಯಾಧಿಗಳಿಗೆ ಕ್ಷೋಭೆಗೊಳ್ಳದಂತೆ – ಸ್ವಲ್ಪವಾದರೂ ಕ್ಷುಭಿತನಾಗಲಿಲ್ಲ. ಅನಂತರ ಖಡ್ಗ– ಗದಾಧರನಾದ, ಪ್ರಾಣಿಗಳ ಧಾರಕನೂ ಮತ್ತು ನಿಯಾಮಕನೂ ಆದ ನಾರಾಯಣನು ಮಾಲಿಯ ಧನುಷ್ಟಂಕಾರವನ್ನು ಕೇಳಿ ಅವನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ವಜ್ರಾಯುಧದಂತೆ ಮತ್ತು ಮಿಂಚಿನಂತೆ ಅನುಪಮವಾದ ಕಾಂತಿಯಿಂದ ಕೂಡಿದ್ದ ನಾರಾಯಣನು ಬಿಟ್ಟ ಬಾಣಗಳು ಮಾಲಿಯ ದೇಹದ ಒಳಹೊಕ್ಕು ಸರ್ಪಗಳು ಹಿಂದೆ ಗರುಡನು ತಂದ ಅಮೃತದ ರಸವನ್ನು ಕುಡಿ

ದಂತೆ – ಮಾಲಿಯ ರಕ್ತವನ್ನು ಪಾನಮಾಡುತ್ತಿದ್ದುವು. ಅನಂತರ ಶಂಖ–ಚಕ್ರ–ಗದಾಧರನಾದ ಶ್ರೀಹರಿಯು ಮಾಲಿಯ ಕಿರೀಟವನ್ನು ಕೆಳಗುರುಳಿಸಿ ಧ್ವಜ ಮತ್ತು ಧನುಸ್ಸುಗಳನ್ನೂ ಕತ್ತರಿಸಿ ಕುದುರೆಗಳನ್ನೂ ಸಂಹರಿಸಿ ಮಾಲಿಯು ಯುದ್ಧದಿಂದ ಹಿಂದಿರುಗುವಂತೆ ಮಾಡಿದನು. ಆದರೆ ರಥದಿಂದ ರಹಿತನಾಗಿದ್ದ ರಾಕ್ಷಸೋತ್ತಮನಾದ ಮಾಲಿಯು ಯುದ್ಧದಿಂದ ಹಿಮ್ಮೆಟ್ಟ ಲಿಲ್ಲ, ಗದೆಯನ್ನು ಹಿಡಿದು ಸಿಂಹವು ಪರ್ವತದ ತುದಿಯಿಂದ ಆರ್ಭಟಿಸಿ ಕೊಂಡು ಬರುವಂತೆ – ಆರ್ಭಟಿಸುತ್ತಾ ಹರಿಯನ್ನು ಆಕ್ರಮಿಸಿದನು. ಹಿಂದೊಮ್ಮೆ ಯಮನು ಶಿವನನ್ನು ಗದೆಯಿಂದ ಪ್ರಹರಿಸಿದ್ದಂತೆ –ಇಂದ್ರನು ವಜ್ರಾಯುಧದಿಂದ ಪರ್ವತದ ರೆಕ್ಕೆಗಳನ್ನು ಕತ್ತರಿಸಿದ್ದಂತೆ – ಮಾಲಿಯು ಗದೆ ಯಿಂದ ವಿಷ್ಣುವನ್ನು ಹೊತ್ತಿದ್ದ ಗರುಡನ ತಲೆಯ ಮೇಲೆ ಪ್ರಹರಿಸಿದನು. ಮಾಲಿಯ ಗದೆಯಿಂದ ಪ್ರಹರಿಸಲ್ಪಟ್ಟ ಗರುಡನು ವೇದನೆಯಿಂದ ಸಂಕಟ ಪಡುತ್ತಾ ಬಹಳ ಬೇಗ ತನ್ನ ಮೇಲೆ ಕುಳಿತಿದ್ದ ನಾರಾಯಣನನ್ನು ಪರಾಙ್ಮುಖನನ್ನಾಗಿ ಮಾಡಿ ಯುದ್ಧಭೂಮಿಯಿಂದ ಹಿಂದಿರುಗಿಸಿದನು.

ದೇವದೇವನಾದ ನಾರಾಯಣನು ಹಿಂದಿರುಗಿದ ಕಾರಣ ಮಾಲಿಯಿಂದ ಪರಾಙ್ಮುಖನಾದಂತಾಗಲು ಆನಂದಭರಿತರಾಗಿ ಗರ್ಜಿಸುತ್ತಿದ್ದ ರಾಕ್ಷಸರ ನಿನಾದವು ಎಲ್ಲ ಕಡೆಗಳಲ್ಲಿಯೂ ಪ್ರತಿಧ್ವನಿಸಿತು. ಗರ್ಜನೆಮಾಡುತ್ತಿದ್ದ ರಾಕ್ಷಸರ ಸಿಂಹನಾದಗಳನ್ನು ಕೇಳಿ ಇಂದ್ರನ ತಮ್ಮನಾದ ವಿಷ್ಣುವು ಅತ್ಯಂತಕ್ರುದ್ಧನಾಗಿ ಮಾಲಿಯನ್ನು ಸಂಹರಿಸುವ ಆಶಯದಿಂದ ಗರುಡನ ಮೇಲೆ ಹಿಂದು ಮುಂದಾಗಿ ಕುಳಿತು ರಾಕ್ಷಸರಿಗೆ ಅಭಿಮುಖವಾಗಿ ಸುದರ್ಶನ ಚಕ್ರವನ್ನು ಪ್ರಯೋಗಿಸಿದನು. ಸೂರ್ಯಮಂಡಲಸದೃಶವಾಗಿದ್ದ, ತನ್ನ ಕಾಂತಿಯಿಂದ ನಭೋಮಂಡಲವನ್ನೇ ಬೆಳಗುತ್ತಿದ್ದ, ಕಾಲಚಕ್ರದಂತೆಯೇ ಇದ್ದ ಆ ವಿಷ್ಣುಚಕ್ರವು ಕ್ಷಣಮಾತ್ರದಲ್ಲಿ ಮಾಲಿಯ ಶಿರಸ್ಸನ್ನು ಕೆಳಕ್ಕೆ ಕೆಡವಿತು. ಚಕ್ರದಿಂದ ಕತ್ತರಿಸಲ್ಪಟ್ಟು ಭಯಂಕರವಾಗಿ ಕಾಣುತ್ತಿದ್ದ ಆ ರಾಕ್ಷಸೇಂದ್ರನ ಶಿರಸ್ಸು, ರಕ್ತವನ್ನು ಸುರಿಸುತ್ತಾ ಹಿಂದೆ ರಾಹುವಿನ ತಲೆಯು ಕೆಳಗುರುಳಿದಂತೆ ನೆಲದ ಮೇಲೆ ಬಿದ್ದಿತು. ಮಾಲಿಯ ಶಿರಸ್ಸು ಕೆಳಕ್ಕೆ ಬಿದ್ದೊಡನೆಯೇ ದೇವತೆಗಳು ಆನಂದಭರಿತರಾದರು. ‘ ಸಾಧು

ದೇವ ಸಾಧು!' ಎಂದು ಹೇಳುತ್ತಾ ತಮ್ಮ ಪ್ರಾಣಶಕ್ತಿಯೆಲ್ಲವನ್ನೂ ಕೇಂದ್ರೀಕರಿಸಿ ಗಟ್ಟಿಯಾಗಿ ಸಿಂಹನಾದಗಳನ್ನು ಮಾಡಿದರು.

ಮಾಲಿಯು ಮೃತನಾದುದನ್ನು ಕಂಡು ಸುಮಾಲೀ– ಮಾಲ್ಯವಂತರಿಬ್ಬರೂ ಶೋಕತಪ್ತರಾದ ತಮ್ಮ ಸೈನಿಕರೊಡನೆ ಲಂಕೆಗೆ ತೆರಳಿದರು. ಆ ವೇಳೆಗೆ ಗರುಡನು ಸುಧಾರಿಸಿಕೊಂಡಿದ್ದನು. ಹಿಂದಿದ್ದ ಸ್ಥಳಕ್ಕೆ ಮತ್ತೆ ಬಂದು ಅತ್ಯಂತಕುಪಿತನಾಗಿ ರೆಕ್ಕೆಗಳ ಬಿರುಸಾದ ಗಾಳಿಯಿಂದಲೇ ಅನೇಕ ರಾಕ್ಷಸರನ್ನು ಓಡಿಸಿಬಿಟ್ಟನು. ಯುದ್ಧಭೂಮಿಯಲ್ಲಿ ಹಲವಾರು ರಾಕ್ಷಸರ ಕಮಲಸದೃಶವಾದ ಮುಖಗಳು ಚಕ್ರದಿಂದ ಕತ್ತರಿಸಲ್ಪಟ್ಟು ನೆಲದ ಮೇಲೆ ಬಿದ್ದಿದ್ದುವು. ಗದೆಯ ಪ್ರಹಾರಗಳಿಂದಾಗಿ ಅನೇಕ ರಾಕ್ಷಸರ ವಕ್ಷಃಸ್ಥಳಗಳು ಒಡೆದುಹೋಗಿದ್ದುವು. ಹಲಾಯುಧದಿಂದ ಹಲವಾರು ರಾಕ್ಷಸರ ತಲೆಗಳು ಕತ್ತರಿಸಲ್ಪಟ್ಟಿದ್ದುವು. ಮುಸಲಾಯುಧಪ್ರಹಾರದಿಂದ ಅನೇಕ ರಾಕ್ಷಸರ ತಲೆಗಳು ಛಿನ್ನ–ಭಿನ್ನವಾಗಿದ್ದುವು. ಕೆಲವು ರಾಕ್ಷಸರು ಕತ್ತಿಯಿಂದ ಕತ್ತರಿಸಲ್ಪಟ್ಟು ಛಿನ್ನ –ಭಿನ್ನರಾಗಿದ್ದರು. ಮತ್ತೆ ಕೆಲವರು ಬಾಣಗಳ ಪ್ರಹಾರದಿಂದ ಪೀಡಿತರಾಗಿ ಆಕಾಶದಿಂದ ಸಮುದ್ರದಲ್ಲಿ ತೊಪ –ತೊಪನೆ ಬೀಳುತ್ತಿದ್ದರು. ಮಹಾವಿಷ್ಣುವು ಧನುಸ್ಸಿನಿಂದ ಚ್ಯುತವಾದ ಶ್ರೇಷ್ಠವಾದ ಬಾಣಗಳಿಂದ ತಲೆಗೆದರಿಕೊಂಡಿದ್ದ ರಾಕ್ಷಸರನ್ನು ಸಂಹರಿಸುತ್ತಿದ್ದನು. ಪೀತಾಂಬರಧರನಾದ, ಶ್ಯಾಮಲವರ್ಣದವನಾದ ಶ್ರೀಹರಿಯು ಆ ಸಮಯದಲ್ಲಿ ಮಿಂಚಿನಿಂದ ಕೂಡಿದ ಮಹಾಮೇಘದಂತೆಯೇ ಪ್ರಕಾಶಿಸುತ್ತಿದ್ದನು.

ರಾಕ್ಷಸರ ರಥಗಳಲ್ಲಿರುತ್ತಿದ್ದ ಛತ್ರಗಳು ವಿಷ್ಣುವಿನ ಬಾಣಗಳಿಂದ ಕತ್ತರಿಸಲ್ಪಟ್ಟು ಕೆಳಕ್ಕೆ ಬೀಳುತ್ತಿದ್ದುವು. ಅಸ್ತ್ರ–ಶಸ್ತ್ರಗಳೆಲ್ಲವೂ ರಾಕ್ಷಸರ ಕೈಗಳಿಂದ ಜಾರಿಬೀಳುತ್ತಿದ್ದುವು. ಬಾಣಗಳ ಪ್ರಹಾರಗಳಿಂದಾಗಿ ಅವರ ಸೌಮ್ಯವಾದ ವೇಷವು ಬದಲಾಯಿತು. ಅಸ್ತ್ರ–ಶಸ್ತ್ರಗಳ ಪ್ರಹಾರ ಗಳಿಂದ ಅವರ ಶರೀರದಲ್ಲಿದ್ದ ನರಗಳು ಹೊರಬಂದಿದ್ದುವು. ಭಯದಿಂದಾಗಿ ರಾಕ್ಷಸರ ಕಣ್ಣುಗಳು ಚಂಚಲವಾಗಿದ್ದುವು. ಈ ರೀತಿಯಲ್ಲಿದ್ದ ರಾಕ್ಷಸರ ಸೈನ್ಯವು ಉನ್ಮತ್ತವಾಗಿರುವಂತೆ ಕಾಣುತ್ತಿದ್ದಿತು.

ಸಿಂಹಗಳಿಂದ ಪೀಡಿಸಲ್ಪಟ್ಟ ಆನೆಗಳ ಚೀತ್ಕಾರವೂ ಮತ್ತು ವೇಗವೂ ಏಕಕಾಲದಲ್ಲಿ ಹೇಗೆ ಸಂಭವಿಸುತ್ತದೆಯೋ – ಹಾಗೆಯೇ ಪುರಾಣಸಿಂಹನಾದ

ಶ್ರೀಹರಿಯಿಂದ ವಿಮರ್ದಿತರಾದ ರಾಕ್ಷಸರ ಚೀತ್ಕಾರ ಮತ್ತು ವೇಗಗಳು ಏಕಕಾಲದಲ್ಲಿ ಪ್ರಕಟವಾದುವು. ಶ್ರೀಹರಿಯಿಂದ ಬಿಡಲ್ಪಡುತ್ತಿದ್ದ ಬಾಣಗಳ ಸಮೂಹಗಳಿಂದ ತಡೆಯಲ್ಪಡುತ್ತಿದ್ದ ರಾಕ್ಷಸಯೋಧರು ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಪರಿತ್ಯಜಿಸಿ ಓಡಿಹೋಗುತ್ತಿದ್ದರು. ಹಾಗೆ ಓಡುತ್ತಿದ್ದ ಕಾಲಮೇಘರೂಪಿಗಳಾದ ರಾಕ್ಷಸರು ವಾಯುವಿನಿಂದ ಪ್ರಚೋದಿತವಾದ ಕಾರ್ಮುಗಿಲುಗಳು ಓಡಿಹೋಗುವಂತೆಯೇ ಓಡಿಹೋಗುತ್ತಿದ್ದರು. ಚಕ್ರಪ್ರಹಾರದಿಂದ ಕತ್ತರಿಸಲ್ಪಟ್ಟ ತಲೆಗಳಿಂದಲೂ, ಗದಾಪ್ರಹಾರಗಳಿಂದ ಛಿನ್ನ-ಭಿನ್ನವಾದ ಅವಯವಗಳಿಂದಲೂ, ಕತ್ತಿಯ ಪ್ರಹಾರದಿಂದ ಎರಡಾಗಿ ಕತ್ತರಿಸಲ್ಪಟ್ಟ ಅಂಗಾಂಗಗಳಿಂದಲೂ ಕೂಡಿದ್ದ ರಾಕ್ಷಸಶ್ರೇಷ್ಠರು ಪರ್ವತಗಳಂತೆಯೇ ರಣರಂಗದಲ್ಲಿ ಬೀಳುತ್ತಿದ್ದರು. ತೂಗಾಡುತ್ತಿದ್ದ ಮುಕ್ತಾಹಾರಗಳಿಂದಲೂ, ಕುಂಡಲಗಳಿಂದಲೂ ಸುಶೋಭಿತರಾಗಿದ್ದ ರಾಕ್ಷಸರ ನೀಲಮೇಘಸದೃಶವಾದ ಮೃತದೇಹಗಳಿಂದ ಆ ರಣಭೂಮಿಯು ಮುಚ್ಚಿಹೋಗಿದ್ದಿತು. ನೆಲದಲ್ಲಿ ಬಿದ್ದಿದ್ದ ಆ ರಾಕ್ಷಸರು ನೀಲಪರ್ವತದಂತೆಯೇ ಕಾಣುತ್ತಿದ್ದರು. ಸ್ವಲ್ಪವೂ ಅವಕಾಶವೇ ಇಲ್ಲದ ರೀತಿಯಲ್ಲಿ ಆ ರಣರಂಗವು ರಾಕ್ಷಸರ ಹೆಣಗಳಿಂದ ತುಂಬಿಹೋಗಿದ್ದಿತು.

7ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **8ನೆಯ ಸರ್ಗ**

ವಿಷ್ಣುವಿನೊಡನೆ ಮಾಲ್ಯವಂತನ ಯುದ್ಧ ಮತ್ತು ಪರಾಜಯ : ಸುಮಾಲಿಯೇ ಮೊದಲಾದ ರಾಕ್ಷಸರು ರಸಾತಲವನ್ನು ಪ್ರವೇಶಿಸಿದುದು

ಹನ್ಯಮಾನೇ ಬಲೇ ತಸ್ಮಿನ್ಪದ್ಮನಾಭೇನ ಪೃಷ್ಠತಃ ।

ಮಾಲ್ಯವಾನ್ಸಂನಿವೃತ್ತೋಽಥ ವೇಲಾಮೇತ್ಯ ಇವಾರ್ಣವಃ ॥ 1॥

ಪದ್ಮನಾಭನು ಹಿಂಬದಿಯಿಂದಲೇ ಹೋಗಿ ರಾಕ್ಷಸಸೈನ್ಯವನ್ನು ಧ್ವಂಸ ಮಾಡಲು ಉಪಕ್ರಮಿಸಲಾಗಿ ಸಮುದ್ರವು ತೀರಕ್ಕೆ ಅಪ್ಪಳಿಸಿ ಹಿಂದಿರುಗುವಂತೆ-ಮಾಲ್ಯವಂತನು ರಣರಂಗಕ್ಕೆ ಹಿಂದಿರುಗಿದನು.

ಮಾಲ್ಯವಂತನ ಕಣ್ಣುಗಳು ಕೋಪದಿಂದ ರಕ್ತದಂತೆ ಕೆಂಪಾಗಿದ್ದುವು.

ಅವನ ಕಿರೀಟವು ಅಳ್ಳಾಡುತ್ತಿದ್ದಿತು. ಅಂತಹ ಸ್ಥಿತಿಯಲ್ಲಿದ್ದ ನಿಶಾಚರನು ಮಹಾವಿಷ್ಣುವಿಗೆ ಹೇಳಿದನು :

ನಾರಾಯಣ ನ ಜಾನೀಷೇ ಕ್ಷಾತ್ರಧರ್ಮಂ ಪುರಾತನಮ್ ।
ಅಯುದ್ಧಮನಸೋ ಭೀತಾನಸ್ಮಾನ್ಹಂಸಿ ಯಥೇತರಃ ॥3॥

''ನಾರಾಯಣ ! ನೀನು ಪುರಾತನವಾದ ಕ್ಷತ್ರಧರ್ಮವನ್ನು ಖಂಡಿತವಾಗಿಯೂ ತಿಳಿದವನಾಗಿಲ್ಲ. ಸಾಮಾನ್ಯನಾದೊಬ್ಬ ಮನುಷ್ಯನಂತೆ ನೀನು ಯುದ್ಧಮಾಡಲು ಮನಸ್ಸಿಲ್ಲದೇ ಭಯಗೊಂಡು ಓಡಿಹೋಗುತ್ತಿರುವ ನಮ್ಮನ್ನು ಕೊಲ್ಲುತ್ತಿರುವೆ.

ಪರಾಙ್ಮುಖವಧಂ ಪಾಪಂ ಯಃ ಕರೋತಿ ಸುರೇಶ್ವರ ।
ಸ ಹನ್ತಾ ನ ಗತಃ ಸ್ವರ್ಗಂ ಲಭತೇ ಪುಣ್ಯಕರ್ಮಣಾಮ್ ॥4॥

ಸುರೇಶ್ವರನೇ ! ಯುದ್ಧದಿಂದ ವಿಮುಖರಾಗುತ್ತಿರುವ ಸೈನಿಕರನ್ನು ವಧಿಸಿ ಪಾಪಕಾರ್ಯವನ್ನು ಮಾಡುವ ಘಾತಕನು ಪುಣ್ಯಕರ್ಮಿಗಳಿಗೆ ಲಭಿಸುವ ಸ್ವರ್ಗಲೋಕವನ್ನು ಸರ್ವಥಾ ಪಡೆಯಲಾರನು.

ಶಂಖ–ಚಕ್ರ –ಗದಾಧಾರಿಯೇ ! ಒಂದು ವೇಳೆ ನಿನಗೆ ಯುದ್ಧಮಾಡುವುದರಲ್ಲಿಯೇ ಶ್ರದ್ಧೆಯಿರುವುದಾದರೆ - ನಾನು ನಿನ್ನ ಮುಂದೆ ಯುದ್ಧಕ್ಕೆ ನಿಲ್ಲುತ್ತೇನೆ. ನಿನ್ನ ಬಲವೆಷ್ಟೆಂಬುದನ್ನು ನಾನು ನೋಡುತ್ತೇನೆ. ನನಗೆ ನಿನ್ನ ಬಲವನ್ನು ಪ್ರದರ್ಶಿಸು.''

ಮಾಲ್ಯವತ್ಪರ್ವತದಂತೆಯೇ ಸ್ಥಿರನಾಗಿ ನಿಂತಿದ್ದ ಮಾಲ್ಯವಂತ ರಾಕ್ಷಸನನ್ನು ನೋಡುತ್ತಾ ಇಂದ್ರಾನುಜನಾದ, ಬಲಿಷ್ಠನಾದ ಶ್ರೀಹರಿಯು ರಾಕ್ಷಸನಿಗೆ ಹೇಳಿದನು :

'' ರಾಕ್ಷಸಶ್ರೇಷ್ಠನೇ ! ನಿಮ್ಮಿಂದ ದೇವತೆಗಳಿಗೆ ಮಹಾಭಯವುಂಟಾಗಿದೆ. ದೇವಶತ್ರುಗಳಾದ ರಾಕ್ಷಸರನ್ನು ಸಂಹರಿಸುವೆನೆಂದು ನಾನು ದೇವತೆಗಳಿಗೆ ಅಭಯದಾನಮಾಡಿದ್ದೇನೆ. ಆದುದರಿಂದ ನಾನು ರಾಕ್ಷಸರನ್ನು ಧ್ವಂಸಮಾಡುತ್ತಾ ನನ್ನ ಪ್ರತಿಜ್ಞೆಯ ಪರಿಪಾಲನೆಯನ್ನು ಮಾಡುತ್ತಿದ್ದೇನೆ.

ಪ್ರಾಣೈರಪಿ ಪ್ರಿಯಂ ಕಾರ್ಯಂ ದೇವಾನಾಂ ಹಿ ಸದಾ ಮಯಾ ।
ಸೋಽಹಂ ವೋ ನಿಹನಿಷ್ಯಾಮಿ ರಸಾತಲಗತಾನಪಿ ॥8॥

ನನ್ನ ಪ್ರಾಣಗಳನ್ನಾದರೂ ಒತ್ತೆಯಿಟ್ಟು ದೇವತೆಗಳಿಗೆ ಪ್ರಿಯವಾದ ಕಾರ್ಯವನ್ನು ಮಾಡುವುದೇ ನನ್ನ ಕರ್ತವ್ಯವಾಗಿದೆ. ಆದುದರಿಂದ ನೀವೆಲ್ಲರೂ ರಸಾತಲವನ್ನು ಹೊಕ್ಕರೂ ಅಲ್ಲಿಗೂ ಬಂದು ನಾನು ನಿಮ್ಮನ್ನು ಸಂಹರಿಸುತ್ತೇನೆ. ''

ಕೆಂದಾವರೆಯಂತೆ ಕೆಂಪಾದ ಕಣ್ಣುಗಳನ್ನು ಹೊಂದಿದ್ದ ದೇವದೇವನಾದ ಮಹಾವಿಷ್ಣುವು ಹೀಗೆ ಹೇಳುತ್ತಿರಲು ಅತ್ಯಂತಕ್ರುದ್ಧನಾದ, ರಾಕ್ಷಸೇಂದ್ರ ನಾದ ಮಾಲ್ಯವಂತನು ಶಕ್ತ್ಯಾಯುಧದಿಂದ ವಿಷ್ಣುವಿನ ವಕ್ಷಃಸ್ಥಳಕ್ಕೆ ರಭಸದಿಂದ ಪ್ರಹರಿಸಿದನು.

ಮಾಲ್ಯವಂತನ ಭುಜದಿಂದ ಎಸೆಯಲ್ಪಟ್ಟ ಆ ಶಕ್ತ್ಯಾಯುಧವು ಘಂಟಾನಾದವನ್ನು ಮಾಡುತ್ತಾ ಶ್ರೀಹರಿಯ ವಕ್ಷಃಸ್ಥಳದಲ್ಲಿ ಬಿದ್ದು ಮೇಘ ಮಂಡಲದ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮಿಂಚಿನಂತೆಯೇ ಪ್ರಕಾಶಿಸಿತು.

ಶಕ್ತ್ಯಾಯುಧವನ್ನು ಹಿಡಿದಿರುವ ಸ್ಕಂದನಿಗೆ ಅತಿಪ್ರಿಯನಾದ ಕಮಲಾಕ್ಷನಾದ ಮಹಾವಿಷ್ಣುವು ವಕ್ಷಃಸ್ಥಳದಲ್ಲಿ ನೆಟ್ಟುಕೊಂಡಿದ್ದ ಶಕ್ತ್ಯಾಯುಧವನ್ನೇ ಕಿತ್ತು ಮಾಲ್ಯವಂತನನ್ನು ಲಕ್ಷಿಸಿ ಪ್ರಹರಿಸಿದನು. ಸ್ಕಂದನಿಂದ ಬಿಡಲ್ಪಟ್ಟ ಶಕ್ತ್ಯಾಯುಧದಂತೆಯೇ ಮಹಾವಿಷ್ಣುವಿನಿಂದ ಬಿಡಲ್ಪಟ್ಟ ಆ ಶಕ್ತಿಯು ಉಲ್ಕೆಯೊಂದು ಅಂಜನಾಚಲದ ಕಡೆಗೆ ಹೋಗು ವಂತೆ ರಾಕ್ಷಸನ ಕಡೆಗೆ ರಭಸದಿಂದ ಹೋಯಿತು. ಪುಷ್ಪಹಾರಗಳ ಭಾರ ದಿಂದ ಪ್ರಕಾಶಮಾನವಾಗಿ ಕಾಣುತ್ತಿದ್ದ ಮತ್ತು ವಿಶಾಲವಾಗಿದ್ದ ಮಾಲ್ಯ ವಂತನ ವಕ್ಷಃಸ್ಥಳದಲ್ಲಿ ಪರ್ವತದ ಶಿಖರದಲ್ಲಿ ವಜ್ರಾಯುಧವು ಬೀಳುವಂತೆ ರಭಸದಿಂದ ಬಿದ್ದಿತು. ಶಕ್ತ್ಯಾಯುಧದ ಪ್ರಹಾರದಿಂದ ರಾಕ್ಷಸನು ತೊಟ್ಟಿದ್ದ ಕವಚವು ಧ್ವಂಸವಾಗಿ ಅವನು ಬಹಳ ಹೊತ್ತಿನವರೆಗೆ ಮೂರ್ಛಿತನಾಗಿ ಬಿದ್ದಿದ್ದನು. ಅನಂತರ ಎಚ್ಚರಗೊಂಡ ಮಾಲ್ಯವಂತನು ಶ್ರಮವನ್ನು ಪರಿಹರಿಸಿಕೊಂಡು ಪುನಃ ನಾರಾಯಣನ ಮುಂದೆ ಪರ್ವತದೋಪಾದಿಯಲ್ಲಿ ಸುಸ್ಥಿರನಾಗಿ ನಿಂತನು. ಬಳಿಕ ರಾಕ್ಷಸನು ಕಬ್ಬಿಣದಿಂದ ಮಾಡಿದ್ದ ಹಲವಾರು ಚೂಪಾದ ಮುಳ್ಳುಗಳಿಂದ ಸಮಾವೃತವಾಗಿದ್ದ ಶೂಲವನ್ನೆತ್ತಿ ವಿಷ್ಣುವಿನ ವಕ್ಷಃಸ್ಥಳಕ್ಕೆ ಗುರಿಯಿಟ್ಟು ಪ್ರಹರಿಸಿದನು. ಅಲ್ಲದೇ ಯುದ್ಧಪ್ರೇಮಿ ಯಾದ ರಾಕ್ಷಸನು ವಿಷ್ಣುವನ್ನು ಮುಷ್ಟಿಯಿಂದಲೂ ಪ್ರಹರಿಸಿ ಧನುಸ್ಸಿನ

ಪ್ರಮಾಣದಷ್ಟು ದೂರ ಹಿಂದಕ್ಕೆ ಸರಿಯುವಂತೆ ಮಾಡಿದನು. ಅದನ್ನು ನೋಡಿ ಆಕಾಶದಲ್ಲಿದ್ದ ರಾಕ್ಷಸರು ಗಟ್ಟಿಯಾಗಿ ಜಯಘೋಷಗಳನ್ನು ಮಾಡಿದರು. 'ಸಾಧು ಮಾಲ್ಯವಂತ ! ಸಾಧು !' – ಎಂದು ಪ್ರಶಂಸೆ ಮಾಡಿದರು. ವಿಷ್ಣುವನ್ನು ಮುಷ್ಟಿಯಿಂದ ಪ್ರಹರಿಸಿದನಂತರ ರಾಕ್ಷಸನು ಅವನ ವಾಹನವಾದ ಗರುಡನನ್ನೂ ಪ್ರಹರಿಸಿದನು. ಅದರಿಂದ ಕ್ರುದ್ಧನಾದ ವೈನತೇಯನು ತನ್ನ ರೆಕ್ಕೆಗಳ ಗಾಳಿಯಿಂದಲೇ – ಗಾಳಿಯು ತರಗೆಲೆಗಳನ್ನು ಬಹಳ ದೂರಕ್ಕೆ ಹಾರಿಸುವಂತೆ – ರಾಕ್ಷಸನನ್ನು ಬಹಳ ದೂರಕ್ಕೆ ಹಾರಿಸಿಬಿಟ್ಟನು. ಪಕ್ಷಿರಾಜನ ರೆಕ್ಕೆಗಳ ಗಾಳಿಯಿಂದಲೇ ತನ್ನ ಪೂರ್ವಜನಾದ ಮಾಲ್ಯವಂತನು ಬಹಳ ದೂರಕ್ಕೆ ಒಯ್ಯಲ್ಪಟ್ಟುದನ್ನು ಕಂಡು ಸುಮಾಲಿಯು ತನ್ನ ಸೈನಿಕರೊಡನೆ ಲಂಕೆಗೆ ಅಭಿಮುಖವಾಗಿ ಪ್ರಯಾಣಮಾಡಿದನು. ಗರುಡನ ರೆಕ್ಕೆಗಳಿಂದ ಹುಟ್ಟಿದ ಗಾಳಿಯಿಂದ ಬಹಳ ದೂರದವರೆಗೆ ಎಸೆಯಲ್ಪಟ್ಟ ಮಾಲ್ಯವಂತನೂ ಲಜ್ಜೆಗೊಂಡು ತನ್ನ ಸೈನಿಕರೊಡನೆ ಲಂಕೆಯನ್ನು ಪ್ರವೇಶಿಸಿದನು.

ರಾಘವ ! ಕಮಲಾಕ್ಷನೇ ! ಹೀಗೆ ವಿಷ್ಣುವಿನೊಡನೆ ಆ ರಾಕ್ಷಸರು ಹಲವಾರು ಬಾರಿ ಯುದ್ಧಮಾಡಿದರು. ಪ್ರಧಾನಭೂತರಾದ ನಾಯಕರನ್ನು ಕಳೆದುಕೊಂಡು ಭಗ್ನರಾಗಿ ಹೋದರು. ವಿಷ್ಣುವನ್ನು ಯುದ್ಧದಲ್ಲಿ ಎದುರಿಸಿ ನಿಲ್ಲಲು ವಿಷ್ಣುವಿನ ಬಲದಿಂದ ಪೀಡಿಸಲ್ಪಡುತ್ತಿದ್ದ ಆ ರಾಕ್ಷಸರಿಗೆ ಸಾಧ್ಯವಾಗಲೇ ಇಲ್ಲ. ಅನಂತರ ಅವರು ಲಂಕಾಪಟ್ಟಣವನ್ನು ತ್ಯಜಿಸಿ ವಾಸಮಾಡಲು ಪತ್ನಿಯರೊಡನೆ ಪಾತಾಳಕ್ಕೆ ಹೊರಟುಹೋದರು. ವಿಖ್ಯಾತರಾದ ಮತ್ತು ಪರಾಕ್ರಮಿಗಳಾದ ಆ ರಾಕ್ಷಸರು ಸಾಲಕಟಂಕಟೆಯ ವಂಶದಲ್ಲಿ ಹುಟ್ಟಿದ್ದ ಸುಮಾಲಿಯನ್ನು ಆಶ್ರಯಿಸಿ ಪಾತಾಳದಲ್ಲಿ ವಾಸಮಾಡುತ್ತಿದ್ದರು.

ರಾಘವ ! ನಿನ್ನಿಂದ ಹತರಾದವರೆಲ್ಲರೂ 'ಪೌಲಸ್ತ್ಯ' ಎಂಬ ಹೆಸರಿನ ರಾಕ್ಷಸರು. ಸುಮಾಲೀ, ಮಾಲ್ಯವಂತ, ಮಾಲೀ ಮತ್ತು ಅವರ ಮುಂದಿನ ರಾಕ್ಷಸರೆಲ್ಲರೂ ಮಹಾಭಾಗ್ಯಶಾಲಿಗಳು. ರಾವಣನಿಗಿಂತಲೂ ಬಲಿಷ್ಠರಾದವರು. ದೇವತೆಗಳಿಗೆ ಕಂಟಕರೂಪದಲ್ಲಿದ್ದ ದೇವಶತ್ರುಗಳಾದ ಆ ರಾಕ್ಷಸರನ್ನು ವಧೆಮಾಡಲು ಶಂಖ– ಚಕ್ರ–ಗದಾಧಾರಿಯಾದ ದೇವದೇವನಾದ ನಾರಾಯಣನ ಹೊರತಾಗಿ ಮತ್ತಾರಿಂದಲೂ ಸಾಧ್ಯವಿರಲಿಲ್ಲ.

ಭವಾನ್ನಾರಾಯಣೋ ದೇವಶ್ಚತುರ್ಬಾಹುಃ ಸನಾತನಃ ।
ರಾಕ್ಷಸಾನ್ಹನ್ತುಮುತ್ಪನ್ನೋ ಹ್ಯಜಯ್ಯಃ ಪ್ರಭುರವ್ಯಯಃ ॥ 26॥

ರಾಘವ ! ನೀನಾದರೋ ಚತುರ್ಭುಜನಾದ, ಸನಾತನನಾದ ನಾರಾಯಣದೇವನೇ ಆಗಿರುವೆ. ಅಜಯ್ಯನಾದ, ಅವ್ಯಯನಾದ ಮತ್ತು ಪ್ರಭುವಾದ ನೀನು ರಾಕ್ಷಸರನ್ನು ಸಂಹರಿಸಲೆಂದೇ ಅವತಾರಮಾಡಿರುವೆ.

ನೀನೇ ಈ ಪ್ರಾಣಿಗಳ ಸೃಷ್ಟಿಕರ್ತನೂ – ಶರಣಾಗತವತ್ಸಲನೂ ಆಗಿರುವೆ. ಧರ್ಮದ ವ್ಯವಸ್ಥೆಯನ್ನು ನಷ್ಟಗೊಳಿಸುವ ದಸ್ಯುಗಳು ಹುಟ್ಟಿದಾಗ ಆ ಸಮಯಗಳಲ್ಲಿ ನೀನು ಅವರ ಸಂಹಾರಕ್ಕಾಗಿ ಜನ್ಮ ತಾಳುವೆ.

ರಾಮಭದ್ರ ! ಹೀಗೆ ನಾನು ನಿನಗೆ ರಾಕ್ಷಸರ ಉತ್ಪತ್ತಿಯ ವಿಷಯವನ್ನು ಯಥಾವತ್ತಾಗಿ ಹೇಳಿರುವೆನು. ಮುಂದೆ ನಾನು ರಾವಣನ ಮತ್ತು ಅವನ ಮಗನ ಜನ್ಮವೃತ್ತಾಂತವನ್ನೂ ಹಾಗೂ ಅವರ ಅನುಪಮಪ್ರಭಾವ ಇವುಗಳನ್ನೂ ವಿವರಿಸಿ ಹೇಳುವೆನು. ಏಕಾಗ್ರಚಿತ್ತನಾಗಿ ಕೇಳು.

ಬಹಳ ಕಾಲದವರೆಗೆ ವಿಷ್ಣುವಿನ ಭಯದಿಂದ ಪೀಡಿತನಾಗಿದ್ದ ಸುಮಾಲಿಯು ತನ್ನ ಮಕ್ಕಳು–ಮೊಮ್ಮಕ್ಕಳೊಡನೆ ರಸಾತಲದಲ್ಲಿಯೇ ವಾಸ ಮಾಡುತ್ತಿದ್ದನು. ಆ ಸಮಯದಲ್ಲಿ ಧನಾಧ್ಯಕ್ಷನಾದ ಕುಬೇರನು ಲಂಕೆಯನ್ನು ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡನು.

8ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **9ನೆಯ ಸರ್ಗ**

ರಾವಣಾದಿಗಳ ಜನ್ಮ : ತಪಸ್ಸಿಗಾಗಿ ಗೋಕರ್ಣಕ್ಕೆ ಪ್ರಯಾಣ

ಕಸ್ಯಚಿತ್ತ್ವಥ ಕಾಲಸ್ಯ ಸುಮಾಲೀ ನಾಮ ರಾಕ್ಷಸಃ ।
ರಸಾತಲಾನ್ಮರ್ತ್ಯಲೋಕಂ ಸರ್ವಂ ವೈ ವಿಚಚಾರ ಹ ॥1॥
ನೀಲಜೀಮೂತಸಂಕಾಶಸ್ತಪ್ತಕಾಞ್ಚನಕುಣ್ಡಲಃ ।
ಕನ್ಯಾಂ ದುಹಿತರಂ ಗೃಹ್ಯ ವಿನಾ ಪದ್ಮಮಿವ ಶ್ರಿಯಮ್ ॥2॥

ಸ್ವಲ್ಪ ಕಾಲ ಕಳೆದನಂತರ ನೀಲಮೇಘದಂತೆ ಶೋಭಿತನಾಗಿದ್ದ, ಪುಟಕ್ಕೆ

ಹಾಕಿದ ಚಿನ್ನದಿಂದ ಮಾಡಿದ ಕುಂಡಲಗಳಿಂದ ಸಮಲಂಕೃತನಾಗಿದ್ದ ಸುಮಾಲಿ ಯೆಂಬ ರಾಕ್ಷಸನು ಪದ್ಮದಿಂದ ರಹಿತಳಾದ ಲಕ್ಷ್ಮೀದೇವಿಯಂತೆಯೇ ಇದ್ದ ತನ್ನ ಮಗಳನ್ನು ಕರೆದುಕೊಂಡು ರಸಾತಲದಿಂದ ಭೂಮಂಡಲಕ್ಕೆ ಬಂದು ಅಖಂಡಭೂಮಂಡಲವನ್ನೂ ಮಗಳ ಜೊತೆಯಲ್ಲಿ ಸುತ್ತಾಡುತ್ತಿದ್ದನು.

ಹೀಗೆ ಆ ರಾಕ್ಷಸರಾಜನು ಭೂಮಂಡಲದಲ್ಲಿ ಸಂಚರಿಸುತ್ತಿದ್ದಾಗ ಪುಷ್ಪಕವಿಮಾನದಲ್ಲಿ ಕುಳಿತು ತಂದೆಯಾದ ಪುಲಸ್ತ್ಯನ ಮಗನಾದ ವಿಶ್ರವಸನನ್ನು ನೋಡಲು ಹೋಗುತ್ತಿದ್ದ ಧನೇಶ್ವರನಾದ ಕುಬೇರನನ್ನು ನೋಡಿದನು. ದೇವಸದೃಶನಾದ, ಪ್ರಜ್ವಲಿಸುವ ಅಗ್ನಿದೇವನಂತೆಯೇ ಕಂಗೊಳಿಸುತ್ತಿದ್ದ ಕುಬೇರನನ್ನು ನೋಡಿ ವಿಸ್ಮಿತನಾದ ರಾಕ್ಷಸರಾಜನು ಭೂಮಂಡಲದಿಂದ ರಸಾತಲಕ್ಕೆ ಹಿಂದಿರುಗಿದನು. ಅನಂತರ ಸುಮಾಲಿಯು ತನ್ನಲ್ಲಿಯೇ ಯೋಚಿಸತೊಡಗಿದನು : ' ಏನು ಮಾಡುವುದರಿಂದ ನಮಗೆ ಶ್ರೇಯಸ್ಸುಂಟಾಗುತ್ತದೆ ? ನಾವೂ ಕೂಡ ಔನ್ನತ್ಯವನ್ನು ಹೇಗೆ ಪಡೆದು ಕೊಳ್ಳಬಲ್ಲೆವು? ' ಹೀಗೆ ವಿಚಾರಮಾಡುತ್ತಾ ಸುಮಾಲಿಯು ತನ್ನ ಮಗಳಾದ ಕೈಕಸಿಯೊಡನೆ ಹೇಳಿದನು :

'' ಮಗಳೇ ! ಕನ್ಯಾದಾನಕ್ಕೆ ಇದು ಯೋಗ್ಯವಾದ ಕಾಲವಾಗಿದೆ. ಹೀಗೆಯೇ ಇದ್ದರೆ ನಿನ್ನ ಯೌವನವು ಕಳೆದುಹೋಗುತ್ತದೆ. ನೀನು ತಿರಸ್ಕರಿ ಸುವೆಯೆಂಬ ಭಯದಿಂದಾಗಿ ಶ್ರೇಷ್ಠರಾದ ಯುವಕರು ನಿನ್ನನ್ನು ವಿವಾಹ ವಾಗಲು ಮುಂದೆ ಬರುತ್ತಿಲ್ಲ. ನಿನಗೆ ಶ್ರೇಷ್ಠನಾದ ವರನು ಸಿಕ್ಕಲೆಂದು ನಾವು ಆಶಿಸುತ್ತೇವೆ. ಇದಕ್ಕಾಗಿ ನಾವು ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಏಕೆಂದರೆ : ಕನ್ಯಾದಾನದ ವಿಷಯದಲ್ಲಿ ನಾವು ಧರ್ಮಬುದ್ಧಿಯುಳ್ಳವರಾಗಿ ದ್ದೇವೆ. ನೀನಾದರೋ ಸಾಕ್ಷಾತ್ ಲಕ್ಷ್ಮೀದೇವಿಯಂತೆ ಸಕಲಗುಣಸಂಪನ್ನಳಾಗಿರುವೆ. ಆದುದರಿಂದ ನಿನ್ನನ್ನು ವರಿಸುವ ವರನು ಕೂಡ ಸರ್ವಥಾ ನಿನಗೆ ಅನುರೂಪನಾಗಿಯೇ ಇರಬೇಕು.

ಕನ್ಯಾಪಿತೃತ್ವಂ ದುಃಖಂ ಹಿ ಸರ್ವೇಷಾಂ ಮಾನಕಾಂಕ್ಷಿಣಾಮ್ ।
ನ ಜ್ಞಾಯತೇ ಚ ಕಃ ಕನ್ಯಾಂ ವರಯೇದಿತಿ ಕನ್ಯಕೇ ॥9॥

ಮಾನವಾಗಿ ಬಾಳಬೇಕೆಂದು ಬಯಸುವ ಎಲ್ಲ ಜನರಿಗೂ ಕನ್ಯಾ ಪಿತೃತ್ವವು ಸಾಮಾನ್ಯವಾಗಿ ದುಃಖಕ್ಕೇ ಕಾರಣವಾಗುತ್ತದೆ. ಏಕೆಂದರೆ

ತನ್ನ ಮಗಳನ್ನು ಯಾರು ವರಿಸುವರೆಂಬುದು ಕನ್ಯಾಪಿತೃವಿಗೆ ಕಡೆಯ ವರೆಗೂ ತಿಳಿದಿರುವುದೇ ಇಲ್ಲ.

ಮಾತುಃ ಕುಲಂ ಪಿತೃಕುಲಂ ಯತ್ರ ಚೈವ ಚ ದೀಯತೇ ।
ಕುಲತ್ರಯಂ ಸದಾ ಕನ್ಯಾ ಸಂಶಯೇ ಸ್ಥಾಪ್ಯ ತಿಷ್ಠತಿ ॥10॥

ತಾಯಿಯ ಮನೆಯವರು (ಸೋದರಮಾವ–ಮಾತಾಮಹ–ಮಾತಾ ಮಹಿಯರು), ತಂದೆಯ ಮನೆಯವರು (ಚಿಕ್ಕಪ್ಪ –ದೊಡ್ಡಪ್ಪ– ಪಿತಾಮಹ – ಪಿತಾಮಹಿಯರು), ಕನ್ಯೆಯು ಸೇರಬೇಕಾಗಿರುವ ಮನೆ - ಈ ಮೂರು ಮನೆತನದವರನ್ನೂ ಕನ್ಯೆಯಾದವಳು ಸಂಶಯದಲ್ಲಿಯೇ ಇಟ್ಟಿರುತ್ತಾಳೆ. ★

ಆದುದರಿಂದ ಈಗ ನಾನು ನಿನಗೆ ಅನುರೂಪನಾಗಿರುವ ವರನನ್ನು ಗೊತ್ತುಮಾಡಬೇಕಾಗಿದೆ. ಪ್ರಜಾಪತಿಯ ಕುಲದಲ್ಲಿ ಹುಟ್ಟಿರುವ, ಶ್ರೇಷ್ಠ ಗುಣಗಳಿಂದ ಸಂಪನ್ನನಾಗಿರುವ, ಪುಲಸ್ತ್ಯನ ಮಗನಾದ, ಮುನಿಶ್ರೇಷ್ಠನಾದ ವಿಶ್ರವಸನ ಬಳಿಗೆ ನೀನೇ ಹೋಗಿ ಅವನನ್ನು ಪತಿಯನ್ನಾಗಿ ವರಿಸು. ಅವನು ನಿನಗೆ ಅನುರೂಪನಾದ ಪತಿಯಾಗಿರುತ್ತಾನೆ. ನೀನು ವಿಶ್ರವಸನನ್ನು ಪತಿ ಯನ್ನಾಗಿ ವರಿಸಿದರೆ - ಅಂತಹ ಧನೇಶ್ವರನಾದ ಕುಬೇರನಿಗೆ ಸಮಾನರಾದ ಪುತ್ರರೇ ನಿನಗೆ ಹುಟ್ಟುವರು. ಇದರಲ್ಲಿ ಸಂಶಯವೇ ಇಲ್ಲ. ಧನೇಶ್ವರನು ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾದವನು.''

ತಂದೆಯು ಹೀಗೆ ಹೇಳಿದೊಡನೆಯೇ ಕೈಕಸಿಯು ತಂದೆಯ ಮಾತನ್ನು ಗೌರವಿಸುವ ಸಲುವಾಗಿ ವಿಶ್ರವಸನು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಹೋಗಿ ನಿಂತಳು. ಅದೇ ಸಮಯದಲ್ಲಿ ಪುಲಸ್ತ್ಯನ ಮಗನಾದ ವಿಶ್ರವಸನು ಸಾಯಂಕಾಲದ ಅಗ್ನಿಹೋತ್ರವನ್ನು ಮಾಡುತ್ತಿದ್ದನು. ಮಹಾತೇಜಸ್ವಿ ಯಾಗಿದ್ದ ಆ ಮುನಿಯು ಅಗ್ನಿಹೋತ್ರವನ್ನು ಮಾಡುತ್ತಿದ್ದಾಗ ಮೂರು ಅಗ್ನಿಗಳ ಜೊತೆಯಲ್ಲಿರುವ ನಾಲ್ಕನೆಯ ಅಗ್ನಿಯಂತೆಯೇ ಪ್ರಕಾಶಿಸು ತ್ತಿದ್ದನು.

★ ಕನ್ಯೆಯು ಎಂತಹ ಮನೆಯನ್ನು ಸೇರುವಳೋ ತೌರುಮನೆಗೆ ಮರ್ಯಾದೆ ತರುವಳೋ ಎಂದು ಮೊದಲಿಬ್ಬರು ಆತಂಕಪಡುವುದು ಸಹಜ. ಗಂಡಿನ ಮನೆ ಯವರು, ಬರುವ ಕನ್ಯೆಯು ಎಂತಹವಳೋ ತಮ್ಮ ಮನೆತನದ ಗೌರವವನ್ನು ಉಳಿಸು ವಳೋ ಎಂದು ಸಂಶಯಪಡುವುದೂ ಸಹಜ.

ಸಂಧ್ಯಾಸಮಯದ ಆ ಪ್ರದೋಷಕಾಲವು ಘೋರವಾದುದೆಂಬುದನ್ನು ಯೋಚಿಸದೇ ಕೈಕಸೆಯು ತಂದೆಯ ಮಾತನ್ನು ಗೌರವಿಸಬೇಕೆಂಬ ಒಂದೇ ಧ್ಯೇಯದಿಂದ ವಿಶ್ರವಸನ ಮುಂಭಾಗಕ್ಕೆ ಹೋಗಿ ಮುನಿಯ ಪಾದಗಳ ಮೇಲೆ ದೃಷ್ಟಿಯನ್ನಿರಿಸಿ ಅಧೋಮುಖಳಾಗಿ ನಿಂತಳು. ಆ ಸಮಯದಲ್ಲಿಅವಳು ಬಾರಿ –ಬಾರಿಗೂ ತನ್ನ ಹೆಬ್ಬೆಟ್ಟಿನ ಉಗುರಿನಿಂದ ನೆಲವನ್ನು ಕೆರೆಯುತ್ತಿದ್ದಳು. ಪೂರ್ಣಚಂದ್ರನಿಗೆ ಹೋಲುವ ಮುಖದಿಂದ ಕಂಗೊಳಿಸುತ್ತಿದ್ದ, ಸುಂದರವಾದ ಕಟಿಪ್ರದೇಶವುಳ್ಳ, ದಿವ್ಯತೇಜಸ್ಸಿನಿಂದ ದೇದೀಪ್ಯಮಾನಳಾಗಿ ಬೆಳಗುತ್ತಿದ್ದ ಕನ್ಯೆಯನ್ನು ನೋಡಿ ಪರಮೋದಾರನಾದ ಮುನಿಯು ಹೇಳಿದನು :

ಭದ್ರೇ ಕಸ್ಯಾಸಿ ದುಹಿತಾ ಕುತೋ ವಾ ತ್ವಮಿಹಾಗತಾ ।
ಕಿಂ ಕಾರ್ಯಂ ಕಸ್ಯ ವಾ ಹೇತೋಸ್ತತ್ತ್ವತೋ ಬ್ರೂಹಿ ಶೋಭನೇ ॥ 18 ॥

'' ಮಂಗಳಾಂಗಿಯೇ! ನೀನು ಯಾರ ಮಗಳು ? ಎಲ್ಲಿಂದ ಬಂದಿರುವೆ? ನನ್ನಿಂದ ನಿನಗೇನಾಗಬೇಕಾಗಿದೆ ? ಯಾವ ಉದ್ದೇಶದಿಂದಾಗಿ ಇಲ್ಲಿಗೆ ಆಗಮಿಸಿರುವೆ ? ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳು.''

ವಿಶ್ರವಸಮುನಿಯು ಹೀಗೆ ಪ್ರಶ್ನಿಸಲು ಕೈಕಸಿಯು ಕೈಮುಗಿದು ಕೊಂಡು ಹೇಳಿದಳು :

''ಮುನಿಶ್ರೇಷ್ಠನೇ ! ನೀನು ನಿನ್ನ ಆತ್ಮಪ್ರಭಾವದಿಂದಲೇ ನನ್ನ ಅಭಿಮತವನ್ನು ತಿಳಿಯಲು ಸಮರ್ಥನಾಗಿರುವೆ. ಆದರೆ ನೀನು ಪ್ರಶ್ನಿಸಿದ ಕಾರಣ ಇಷ್ಟುಮಾತ್ರ ಹೇಳಬಯಸುತ್ತೇನೆ. ಬ್ರಹ್ಮರ್ಷಿಯೇ ! ನಾನು ನನ್ನ ತಂದೆಯ ಆಜ್ಞೆಯಂತೆ ನಿನ್ನ ಬಳಿಗೆ ಬಂದಿರುವೆನು. ಕೈಕಸೀ ಎಂಬ ಹೆಸರಿನಿಂದ ನಾನು ವಿಖ್ಯಾತಳಾಗಿದ್ದೇನೆ. ಉಳಿದ ವಿಷಯವನ್ನು ನೀನೇ ತಿಳಿಯಬಲ್ಲೆ. ನನ್ನಿಂದ ಹೇಳಿಸುವ ಅವಶ್ಯಕತೆಯಿಲ್ಲ. ''

ಕೈಕಸಿಯ ಮಾತನ್ನು ಕೇಳಿ ವಿಶ್ರವಸಮುನಿಯು ಧ್ಯಾನಮಗ್ನನಾಗಿ ಕ್ಷಣಕಾಲ ಯೋಚಿಸಿ ಅನಂತರ ಹೇಳಿದನು :

'' ಮಂಗಳಾಂಗಿಯೇ ! ನಿನ್ನ ಮನಸ್ಸಿನ ಅಭಿಪ್ರಾಯವೇನೆಂಬುದನ್ನು

ನಾನು ತಿಳಿದುಕೊಂಡೆನು. ಮದಿಸಿದ ಆನೆಯಂತೆ ನಡಿಗೆಯುಳ್ಳವಳೇ ! ನನ್ನಿಂದ ಮಕ್ಕಳನ್ನು ಪಡೆಯುವುದು ನಿನ್ನ ಆಶಯವಾಗಿದೆ. ಆದರೆ ನೀನು ಭಯಂಕರವಾದ ಈ ಪ್ರದೋಷಕಾಲದಲ್ಲಿ ನನ್ನ ಬಳಿಗೆ ಬಂದಿರುವೆ. ಈ ಕಾರಣದಿಂದ ನನ್ನಿಂದ ಎಂತಹ ಪುತ್ರರನ್ನು ಪಡೆಯುವೆಯೆಂಬುದನ್ನು ಕೇಳು.

ದಾರುಣಾನ್ದಾರುಣಾಕಾರಾನ್ದಾರುಣಾಭಿಜನಪ್ರಿಯಾನ್ ।
ಪ್ರಸವಿಷ್ಯಸಿ ಸುಶ್ರೋಣಿ ರಾಕ್ಷಸಾನ್ಕ್ರೂರಕರ್ಮಣಃ ॥23॥

ಸುಂದರವಾದ ಕಟಿಪ್ರದೇಶದಿಂದ ಕಂಗೊಳಿಸುವವಳೇ ! ನಿನ್ನ ಮಕ್ಕಳು ಸ್ವಭಾವದಿಂದಲೂ ಕ್ರೂರಿಗಳಾಗಿರುತ್ತಾರೆ. ಶರೀರದಿಂದಲೂ ಭಯಂಕರ ರಾಗಿರುತ್ತಾರೆ. ಕ್ರೂರಕರ್ಮಿಗಳೊಡನೆಯೇ ಅವರ ಸಂಬಂಧವಿರುತ್ತದೆ. ಕ್ರೂರಕರ್ಮಿಗಳಲ್ಲಿಯೇ ಅವರಿಗೆ ಹೆಚ್ಚಿನ ಪ್ರೀತಿ –ವಿಶ್ವಾಸಗಳಿರುತ್ತವೆ. ಅಂತಹ ಕ್ರೂರಕರ್ಮಿಗಳಾದ ರಾಕ್ಷಸರನ್ನು ನೀನು ಹಡೆಯುವೆ. ''

ಮುನಿವರನ ಮಾತುಗಳನ್ನು ಕೇಳಿ ಖಿನ್ನೆಯಾದ ಕೈಕಸಿಯು ಅವನ ಕಾಲುಗಳಿಗೆ ಬಿದ್ದು ಬೇಡಿಕೊಂಡಳು.

'' ಪೂಜ್ಯನೇ ! ನಾನು ಬ್ರಹ್ಮವಾದಿಯಾದ ಮಹಾತ್ಮನಾದ ನಿನ್ನಿಂದ ಇಂತಹ ದುರಾಚಾರಿಗಳಾದ ಕ್ರೂರಿಗಳಾದ ಪುತ್ರರನ್ನು ಬಯಸುವುದಿಲ್ಲ. ಸತ್ಪುತ್ರರನ್ನು ದಯಪಾಲಿಸಿ ನನ್ನನ್ನು ಅನುಗ್ರಹಿಸುವುದು ಯೋಗ್ಯವಾಗಿದೆ.''

ಕನ್ಯೆಯು ಹೀಗೆ ಬೇಡಿಕೊಳ್ಳಲು ಪೂರ್ಣಚಂದ್ರನಂತೆ ಪ್ರಕಾಶಮಾನ ನಾಗಿದ್ದ ವಿಶ್ರವಸಮುನಿಯು ರೋಹಿಣಿಯಂತೆ ಕಡುಚೆಲುವೆಯಾಗಿದ್ದ ಕೈಕಸಿಗೆ ಪುನಃ ಹೇಳಿದನು :

ಪಶ್ಚಿಮೋ ಯಸ್ತವ ಸುತೋ ಭವಿಷ್ಯತಿ ಶುಭಾನನೇ ।
ಮಮ ವಂಶಾನುರೂಪಃ ಸ ಧರ್ಮಾತ್ಮಾ ಚ ನ ಸಂಶಯಃ ॥27॥

''ಶುಭಾನನೆಯೇ ! ನಿನ್ನ ಕಿರಿಯ ಮಗನೊಬ್ಬನು ಧರ್ಮಾತ್ಮನಾಗಿದ್ದು ನನ್ನ ವಂಶಕ್ಕೆ ಅನುರೂಪನಾಗಿರುತ್ತಾನೆ. ಇದರಲ್ಲಿ ಸಂಶಯವಿಲ್ಲ.''

ರಾಘವ ! ವಿಶ್ರವಸಮುನಿಯು ಹೀಗೆ ಹೇಳಿ ಸ್ವಲ್ಪಕಾಲವು ಕಳೆದ

ಬಳಿಕ ಕೈಕಸಿಯು ಅತ್ಯಂತಭಯಂಕರನಾದ, ಕ್ರೂರಸ್ವಭಾವದವನಾದ ರಾಕ್ಷಸನಿಗೆ ಜನ್ಮವನ್ನಿತ್ತಳು. ಅವನಿಗೆ ಹತ್ತು ತಲೆಗಳಿದ್ದುವು. ದೊಡ್ಡ-ದೊಡ್ಡ ಕೋರೆದಾಡೆಗಳಿದ್ದುವು. ಕೆಂಪಾದ ತುಟಿಗಳಿದ್ದುವು. ಇಪ್ಪತ್ತು ತೋಳುಗಳಿದ್ದುವು. ಅಗಲವಾದ ಮುಖವಿದ್ದಿತು. ದೇದೀಪ್ಯಮಾನವಾದ ಕೇಶರಾಶಿಯಿದ್ದಿತು. ಕಾಡಿಗೆಯ ಪರ್ವತದಂತೆಯೇ ಅವನ ಶರೀರಕಾಂತಿಯಿದ್ದಿತು. ಅಂತಹ ರಾಕ್ಷಸನು ಹುಟ್ಟುತ್ತಲೇ ಹೆಣ್ಣು ಗುಳ್ಳೇನರಿಗಳು ಬಾಯಿಂದ ಉರಿಯುತ್ತಿರುವ ಬೆಂಕಿಯುಂಡೆಗಳನ್ನು ಉಗುಳುತ್ತಿದ್ದುವು. ಮಾಂಸಭಕ್ಷಿಗಳಾದ ಪಕ್ಷಿಗಳು ಅಪ್ರದಕ್ಷಿಣವಾಗಿ ಮಂಡಲಾಕಾರದಲ್ಲಿ ಸುತ್ತತೊಡಗಿದುವು. ಪರ್ಜನ್ಯನು ರಕ್ತದ ಮಳೆಗರೆದನು. ಮೇಘಗಳು ಕತ್ತೆಗಳು ಕಿರುಚುವಂತೆ ಕರ್ಕಶವಾಗಿ ಗುಡುಗಿದುವು. ಸೂರ್ಯನು ಪ್ರಕಾಶಮಾನನಾಗಿ ಕಾಣುತ್ತಿರಲಿಲ್ಲ. ದೊಡ್ಡ-ದೊಡ್ಡ ಉಲ್ಕೆಗಳು ಭೂಮಿಗೆ ಬೀಳುತ್ತಿದ್ದುವು. ಭೂಮಂಡಲವು ನಡುಗಿತು. ಭಯಂಕರವಾದ ಬಿರುಗಾಳಿಯು ಬೀಸತೊಡಗಿತು. ಯಾರಿಂದಲೂ ಕ್ಷೋಭೆಗೊಳಿಸಲು ಅಸಾಧ್ಯವಾಗಿದ್ದ ಸರಿತ್ಪತಿಯಾದ ಸಮುದ್ರವು ಕ್ಷೋಭೆಗೊಂಡಿತು. ಬ್ರಹ್ಮನಿಗೆ ಸಮಾನನಾದ ಅವನ ತಂದೆ ವಿಶ್ರವಸನು ಹಾಗೆ ಹುಟ್ಟಿದ ತನ್ನ ಮಗನಿಗೆ ನಾಮಕರಣಮಾಡಿದನು.

ದಶಗ್ರೀವಃ ಪ್ರಸೂತೋಽಯಂ ದಶಗ್ರೀವೋ ಭವಿಷ್ಯತಿ ॥33॥

"ಹತ್ತು ತಲೆಗಳಿಂದ ಕೂಡಿ ಹುಟ್ಟಿರುವುದರಿಂದ ಇವನು 'ದಶಗ್ರೀವ' -ಎಂಬ ಹೆಸರಿನಿಂದಲೇ ವಿಖ್ಯಾತನಾಗುತ್ತಾನೆ." ದಶಗ್ರೀವನು ಹುಟ್ಟಿದನಂತರ ಮಹಾಬಲನಾದ ಕುಂಭಕರ್ಣನು ಹುಟ್ಟಿದನು. ಜಗತ್ತಿನಲ್ಲಿ ಅವನ ಶರೀರಕ್ಕಿಂತಲೂ ದೊಡ್ಡದಾದ ಬೇರೊಂದು ಶರೀರವೇ ಇರಲಿಲ್ಲ. ಅನಂತರ ವಿಕೃತವಾದ ಮುಖವನ್ನು ಹೊಂದಿದ್ದ ಶೂರ್ಪಣಖಾ ಎಂಬ ಹೆಸರಿನ ಹೆಣ್ಣುಮಗು ಹುಟ್ಟಿತು. ಕೈಕಸಿಯ ಕಡೆಯ ಮಗನೇ ಧರ್ಮಾತ್ಮನಾದ ವಿಭೀಷಣ. ಮಹಾಸತ್ತ್ವನಾದ ವಿಭೀಷಣನು ಹುಟ್ಟಿದೊಡನೆಯೇ ಆಕಾಶದಿಂದ ಹೂಮಳೆಗರೆಯಿತು. ದೇವದುಂದುಭಿಗಳು ಮೊಳಗಿದುವು. ಅಂತರಿಕ್ಷದ ಕಡೆಯಿಂದ 'ಸಾಧು- ಸಾಧು' ಎಂಬ ಶಬ್ದಗಳು ಕೇಳಿಬರುತ್ತಿದ್ದುವು. ಲೋಕಕ್ಕೇ ಉದ್ವೇಗವನ್ನುಂಟುಮಾಡುವವರಾಗಿದ್ದ ಮಹಾತೇಜಸ್ವಿಗಳಾದ ರಾವಣ-ಕುಂಭಕರ್ಣರಿಬ್ಬರೂ ಆ ಮಹಾರಣ್ಯದಲ್ಲಿ ದಿನ-ದಿನಕ್ಕೂ ವೃದ್ಧಿ

ಹೊಂದುತ್ತಿದ್ದರು. ಅವರಲ್ಲಿ ಕುಂಭಕರ್ಣನು ಪ್ರಮತ್ತನಾಗಿದ್ದನು. ಅವನಿಗೆ ಎಷ್ಟು ತಿಂದರೂ ತೃಪ್ತಿಯೆಂಬುದೇ ಇರುತ್ತಿರಲಿಲ್ಲ. ಅವನು ತನ್ನ ಹಸಿವು ತೀರಿಸಿಕೊಳ್ಳುವುದಕ್ಕಾಗಿ ಧರ್ಮವತ್ಸಲರಾದ ಮಹರ್ಷಿಗಳನ್ನೇ ಭಕ್ಷಿಸುತ್ತಾ ಮೂರು ಲೋಕಗಳಲ್ಲಿಯೂ ಸುತ್ತಾಡುತ್ತಿದ್ದನು. ಧರ್ಮಾತ್ಮನಾದ ವಿಭೀಷಣನು ನಿತ್ಯವೂ ಧರ್ಮಮಾರ್ಗದಲ್ಲಿಯೇ ಇರುತ್ತಾ ಅಧ್ಯಯನವನ್ನು ಮಾಡುತ್ತಾ ನಿಯತಾಹಾರನಾಗಿ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟು ಕೊಂಡಿದ್ದನು.

ಕೆಲವು ಕಾಲ ಕಳೆದನಂತರ ಕುಬೇರನು ತನ್ನ ತಂದೆಯನ್ನು ಕಾಣಲು ಪುಷ್ಪಕವಿಮಾನದಲ್ಲಿ ವಿಶ್ರವಸನ ಆಶ್ರಮಕ್ಕೆ ಹೋಗುತ್ತಿದ್ದನು. ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದ ಧನೇಶ್ವರನನ್ನು ನೋಡಿದೊಡನೆಯೇ ರಾಕ್ಷಸಿಯಾದ ಕೈಕಸಿಯು ದಶಗ್ರೀವನ ಬಳಿಗೆ ಹೋಗಿ ಹೇಳಿದಳು :

'' ಪುತ್ರನೇ ! ತೇಜಃಪುಂಜನಾಗಿರುವ ನಿಮ್ಮಣ್ಣನನ್ನು ನೋಡು. ನೀನು ಅವನ ತಮ್ಮನಾಗಿರುವುದರಿಂದ ಅವನಿಗೆ ಸಮಾನನೇ ಆಗಿರುವೆ. ಆದರೆ ನಿನ್ನ ಈಗಿನ ಅವಸ್ಥೆಯನ್ನು ನೀನೇ ಗಮನಿಸು. ನೀನೇನು ಸಾಮಾನ್ಯನಲ್ಲ. ಅಪಾರಪರಾಕ್ರಮಿಯಾಗಿರುವೆ. ವೈಶ್ರವಣನಂತೆಯೇ ವೈಭವೋಪೇತನಾಗಲು ನೀನೂ ಪ್ರಯತ್ನಿಸು. ಅಂತಹ ವೈಭವವನ್ನು ಹೊಂದಲು ನಿನಗೂ ಸಾಧ್ಯವಾಗುವುದು. ''

ತಾಯಿಯ ಆ ಮಾತನ್ನು ಕೇಳಿ ಪ್ರತಾಪಶಾಲಿಯಾದ ದಶಗ್ರೀವನಿಗೆ ಬಹಳವಾದ ಅಸಹನೆಯುಂಟಾಯಿತು.ಕೂಡಲೇ ಹೀಗೆ ಪ್ರತಿಜ್ಞೆ ಮಾಡಿದನು:

ಸತ್ಯಂ ತೇ ಪ್ರತಿಜಾನಾಮಿ ಭ್ರಾತೃತುಲ್ಯೋಽಧಿಕೋಽಪಿ ವಾ ।
ಭವಿಷ್ಯಾಮ್ಯೋಜಸಾ ಚೈವ ಸಂತಾಪಂ ತ್ಯಜ ಹೃದ್ಗತಮ್ ॥45॥

'' ತಾಯೇ ! ನೀನು ನಿನ್ನ ಮನಸ್ಸಿನಲ್ಲಿರುವ ಚಿಂತೆಯನ್ನು ಬಿಟ್ಟು ಬಿಡು. ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ. ಪರಾಕ್ರಮದಲ್ಲಿ ಮತ್ತು ವೈಭವದಲ್ಲಿ ನಾನು ಕುಬೇರನಿಗೆ ಸಮಾನನು ಮಾತ್ರವಲ್ಲ; ಅಧಿಕನೂ ಆಗುವೆನು.''

ಹೀಗೆ ಹೇಳಿದ ದಶಗ್ರೀವನು ಅದೇ ಕೋಪದ ಆವೇಶದಲ್ಲಿಯೇ ತನ್ನ ಅನುಜರೊಡನೆ ಅತ್ಯಂತದುಷ್ಕರವಾದ ಕಾರ್ಯಮಾಡಲು ನಿಶ್ಚಯಿಸಿದನು. '' ನಾನು ತಪಸ್ಸಿನಿಂದಲೇ ನನ್ನ ಮನೋರಥವನ್ನು ಪೂರ್ಣಮಾಡಿಕೊಳ್ಳು ವೆನು.'' ಹೀಗೆ ನಿಶ್ಚಯಿಸಿ ತನ್ನ ಅಭಿವೃದ್ಧಿಗಾಗಿ ಗೋಕರ್ಣದಲ್ಲಿದ್ದ ಪವಿತ್ರ ವಾದ ಆಶ್ರಮಕ್ಕೆ ತೆರಳಿದನು. ಅನುಜರಿಂದೊಡಗೂಡಿದ್ದ ಭಯಂಕರ ಪರಾಕ್ರಮಿಯಾದ ದಶಗ್ರೀವನು ಅತಿಘೋರವಾದ ತಪಸ್ಸನ್ನು ಮಾಡಿದನು. ಆ ತಪಸ್ಸಿನ ಮೂಲಕವಾಗಿ ವಿಭುವಾದ ಪಿತಾಮಹಬ್ರಹ್ಮನನ್ನು ಸಂತೋಷ ಗೊಳಿಸಿದನು. ಪ್ರಸನ್ನನಾದ ಬ್ರಹ್ಮನು ರಾವಣನಿಗೆ ಶತ್ರುಗಳನ್ನು ಜಯಿಸುವ ಸಾಮರ್ಥ್ಯವನ್ನು ದಯಪಾಲಿಸಿದನು.

9ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **10ನೆಯ ಸರ್ಗ**

ದಶಗ್ರೀವನೇ ಮೊದಲಾದವರ ತಪಸ್ಸು ಮತ್ತು ವರಪ್ರಾಪ್ತಿ

ಅಥಾಬ್ರವೀನ್ಮುನಿಂ ರಾಮಃ ಕಥಂ ತೇ ಭ್ರಾತರೋ ವನೇ ।
ಕೀದೃಶಂ ತು ತದಾ ಬ್ರಹ್ಮಂಸ್ತಪಸ್ತೇಪುರ್ಮಹಾಬಲಾಃ ॥1॥

ಇಲ್ಲಿಯವರೆಗಿನ ಕಥೆಯನ್ನು ಕೇಳಿ ಶ್ರೀರಾಮನು ಅಗಸ್ತ್ಯರನ್ನು ಪ್ರಶ್ನಿಸಿದನು :

'' ಬ್ರಾಹ್ಮಣಶ್ರೇಷ್ಠರೇ ! ಆ ಮೂವರು ರಾಕ್ಷಸರೂ ಅರಣ್ಯದಲ್ಲಿ ಹೇಗಿದ್ದರು? ಅವರು ಯಾವ ವಿಧವಾದ ತಪಸ್ಸುಗಳನ್ನು ಮಾಡುತ್ತಿದ್ದರು ? ಈ ವಿಷಯಗಳನ್ನು ನನಗೆ ದಯಮಾಡಿ ಹೇಳಿರಿ.''

ಅತ್ಯಂತಪ್ರಸನ್ನಹೃದಯನಾದ ಶ್ರೀರಾಮನಿಗೆ ಅಗಸ್ತ್ಯರು ಹೇಳಿದರು:

'' ರಘುನಂದನನೇ ! ಆ ಮೂವರು ಸಹೋದರರೂ ಪ್ರತ್ಯೇಕ – ಪ್ರತ್ಯೇಕವಾಗಿ ಧರ್ಮವಿಧಿಗಳನ್ನು ಅನುಷ್ಠಾನಮಾಡುತ್ತಿದ್ದರು.

ಕುಂಭಕರ್ಣನು ತನ್ನ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಅನುದಿನವೂ ಧರ್ಮಮಾರ್ಗದಲ್ಲಿಯೇ ವ್ಯವಹರಿಸುತ್ತಾ ಬೇಸಿಗೆಯಲ್ಲಿ

ಪಂಚಾಗ್ನಿಗಳ ★ ಮಧ್ಯದಲ್ಲಿ ಕುಳಿತು ಅತಿಘೋರವಾದ ತಪಸ್ಸನ್ನು ಮಾಡುತ್ತಿದ್ದನು.

ಮೇಘಾಮ್ಬುಸಿಕ್ತೋ ವರ್ಷಾಸು ವೀರಾಸನಮಸೇವತ ।
ನಿತ್ಯಂ ಚ ಶಿಶಿರೇ ಕಾಲೇ ಜಲಮಧ್ಯಪ್ರತಿಶ್ರಯಃ ॥4॥

ಮಳೆಗಾಲದಲ್ಲಿ ಮೇಘಗಳು ಧಾರಾಕಾರವಾಗಿ ಮಳೆಗರೆಯುತ್ತಿದ್ದಾಗ ಬಯಲಿನಲ್ಲಿ ವೀರಾಸನದಲ್ಲಿ ಕುಳಿತು ಏಕಾಗ್ರತೆಯಿಂದ ತಪಸ್ಸು ಮಾಡು ತ್ತಿದ್ದನು. ಶೀತಕಾಲದಲ್ಲಿ ನೀರಿನ ಮಧ್ಯದಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದನು.

ಸನ್ಮಾರ್ಗದಲ್ಲಿ ನಿಷ್ಠೆಯುಳ್ಳವನಾಗಿದ್ದ, ಧರ್ಮಕಾರ್ಯಗಳನ್ನು ಮಾಡುವುದರಲ್ಲಿಯೇ ಪ್ರಯತ್ನಶೀಲನಾಗಿದ್ದ ಕುಂಭಕರ್ಣನು ಹತ್ತು ಸಾವಿರ ವರ್ಷಗಳನ್ನು ಹೀಗೆ ಕಠೋರವಾದ ತಪಸ್ಸಿನಿಂದಲೇ ಕಳೆದನು.

ಧರ್ಮಾತ್ಮನಾದ, ನಿತ್ಯವೂ ಧರ್ಮಪರಾಯಣನಾಗಿರುತ್ತಿದ್ದ, ಪವಿತ್ರಾತ್ಮನಾದ ವಿಭೀಷಣನು ಐದು ಸಾವಿರ ವರ್ಷಗಳವರೆಗೆ ಒಂದೇ ಕಾಲಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದನು. ಅವನ ತಪಸ್ಸು ಸಮಾಪ್ತವಾಗಲು ಅಪ್ಸರೆಯರು ಆನಂದದಿಂದ ನೃತ್ಯಮಾಡಿದರು. ಅವನ ಮೇಲೆ ಪುಷ್ಪವರ್ಷ ವಾಯಿತು. ದೇವತೆಗಳೂ ವಿಭೀಷಣನನ್ನು ಬಹಳವಾಗಿ ಸ್ತೋತ್ರಮಾಡಿದರು.

ಅನಂತರ ಪುನಃ ವಿಭೀಷಣನು ಎರಡು ಕೈಗಳನ್ನೂ ತಲೆಯನ್ನೂ ಮೇಲಕ್ಕೆತ್ತಿಕೊಂಡು ಸ್ವಾಧ್ಯಾಯಪರಾಯಣನಾಗಿ ಐದು ಸಾವಿರ ವರ್ಷಗಳವರೆಗೆ ಸೂರ್ಯನ ಆರಾಧನೆಯನ್ನು ಮಾಡಿದನು. ಸ್ವರ್ಗದಲ್ಲಿರುವ ನಂದನ ವನದಲ್ಲಿ ವಾಸಮಾಡುತ್ತಿರುವನೋ ಎಂಬಂತೆ ಜಿತೇಂದ್ರಿಯನಾದ ವಿಭೀಷಣನು ಹತ್ತು ಸಾವಿರ ವರ್ಷಗಳನ್ನು ತಪಸ್ಸು ಮಾಡುತ್ತಾ ಆಯಾಸವಿಲ್ಲದೇ ಕಳೆದನು. ರಾವಣನ ತಪಸ್ಸು ಉಗ್ರವಾದುದು ಮತ್ತು ಭಯಂಕರವಾದುದು. ಅವನು ಹತ್ತು ಸಾವಿರ ವರ್ಷಗಳವರೆಗೆ ಆಹಾರವನ್ನು ತೆಗೆದುಕೊಳ್ಳದೆಯೇ ಉಪವಾಸದಿಂದಿರುತ್ತಾ ತಪಸ್ಸುಮಾಡುತ್ತಿದ್ದನು. ಒಂದೊಂದು ಸಾವಿರ

★ ಪಂಚಾಗ್ನಿಗಳ ತಪಸ್ಸು: ಬೇಸಿಗೆಯ ಕಾಲದಲ್ಲಿ ನಾಲ್ಕು ಕಡೆಗಳಲ್ಲಿಯೂ ಅಗ್ನಿಯನ್ನು ಪ್ರತಿಷ್ಠಾಪಿಸಿಕೊಂಡು ಸೂರ್ಯನು ನೆತ್ತಿಯ ಮೇಲಿದ್ದಾಗ ಧ್ಯಾನಪರನಾಗಿ ಮಾಡುವ ತಪಸ್ಸಿಗೆ ಪಂಚಾಗ್ನಿಕ ತಪಸ್ಸೆಂದು ಹೆಸರು.

ವರ್ಷವು ಮುಗಿದಾಗಲೂ ತನ್ನ ಒಂದೊಂದು ತಲೆಯನ್ನು ಅಗ್ನಿಗೆ ಆಹುತಿಯನ್ನಾಗಿ ಸಮರ್ಪಿಸುತ್ತಿದ್ದನು. ಹೀಗೆ ಒಂಬತ್ತು ಸಾವಿರ ವರ್ಷಗಳು ಕಳೆದುವು. ಅಂತೆಯೇ ಒಂಬತ್ತು ಶಿರಸ್ಸುಗಳೂ ಅಗ್ನಿಗೆ ಅರ್ಪಿತವಾದುವು. ಹತ್ತನೆಯ ಸಾವಿರ ವರ್ಷವು ಮುಗಿದನಂತರ ಹತ್ತನೆಯ ತಲೆಯನ್ನೂ ಕತ್ತರಿಸಿ ಅಗ್ನಿಯಲ್ಲಿ ಹೋಮಮಾಡಲು ದಶಗ್ರೀವನು ಉದ್ಯುಕ್ತನಾದನು. ಅಷ್ಟರಲ್ಲಿಯೇ ಪಿತಾಮಹನು ಪ್ರತ್ಯಕ್ಷನಾದನು. ದಶಗ್ರೀವನ ತಪಸ್ಸಿನಿಂದ ಸುಪ್ರೀತನಾಗಿದ್ದ ಪಿತಾಮಹನು ದೇವತೆಗಳೊಡನೆ ಬಂದು ರಾವಣನಿಗೆ ಹೇಳಿದನು :

'' ದಶಗ್ರೀವನೇ ! ನಿನ್ನ ತಪಸ್ಸಿನಿಂದ ನಾನು ಸುಪ್ರೀತನಾಗಿರುವೆನು. ಧರ್ಮಜ್ಞನೇ ! ನಿನಗೆ ಯಾವ ವರವು ಬೇಕೆಂಬುದನ್ನು ಶೀಘ್ರವಾಗಿ ಹೇಳು. ನೀನು ಅಪೇಕ್ಷಿಸಿರುವ ವರವು ಯಾವುದು ? ನಿನ್ನ ಯಾವ ಕಾಮನೆಯನ್ನು ನಾನು ಪೂರೈಸಿಕೊಡಲಿ ? ನಿನ್ನ ಹತ್ತು ಸಾವಿರ ವರ್ಷಗಳ ಈ ಪರಿಶ್ರಮವು ವ್ಯರ್ಥವಾಗಬಾರದು.''

ಪಿತಾಮಹನ ಆ ಮಾತನ್ನು ಕೇಳಿ ದಶಗ್ರೀವನ ಮನಸ್ಸು ಪ್ರಸನ್ನವಾಯಿತು. ಬ್ರಹ್ಮದೇವನಿಗೆ ತಲೆಬಾಗಿ ನಮಸ್ಕರಿಸಿ ಹರ್ಷದಿಂದುಂಟಾದ ಗದ್ಗದಧ್ವನಿಯ ಮಾತುಗಳಿಂದ ಪ್ರಾರ್ಥಿಸಿದನು :

ಭಗವನ್ ಪ್ರಾಣಿನಾಂ ನಿತ್ಯಂ ನಾನ್ಯತ್ರ ಮರಣಾದ್ಭಯಮ್ ।
ನಾಸ್ತಿ ಮೃತ್ಯುಸಮಃ ಶತ್ರುರಮರತ್ವಮಹಂ ವೃಣೇ ॥16॥

'' ಪೂಜ್ಯನೇ ! ಪ್ರಾಣಿಗಳಿಗೆ ಮರಣಕ್ಕಿಂತಲೂ ಅಧಿಕವಾದ ಮತ್ತೊಂದು ಭಯವಿರುವುದಿಲ್ಲ. ಮೃತ್ಯುವಿಗೆ ಸಮಾನನಾದ ಬೇರೊಬ್ಬ ಶತ್ರುವೂ ಇಲ್ಲ. ಆದುದರಿಂದ ನಾನು ಮರಣವೇ ಇಲ್ಲದ ವರವನ್ನು ನಿನ್ನಿಂದ ಪ್ರಾರ್ಥಿಸುತ್ತೇನೆ.''

ದಶಗ್ರೀವನು ಅಮರತ್ವದ ವರವನ್ನು ಕೇಳಲು ಪ್ರಜಾಪತಿಬ್ರಹ್ಮನು ದಶಮುಖನಿಗೆ ಹೇಳಿದನು :

ನಾಸ್ತಿ ಸರ್ವಾಮರತ್ವಂ ತೇ ವರಮನ್ಯಂ ವೃಣೀಷ್ವ ಮೇ ॥17॥

''ನಿನಗೆ ಸರ್ವಥಾ ಅಮರತ್ವವು ಸಿದ್ಧಿಸುವುದಿಲ್ಲ. ನೀನು ಮರಣ

ವಿಲ್ಲದವನೇ ಆಗಲಾರೆ. ಆದುದರಿಂದ ಬೇರೆ ಯಾವುದಾದರೂ ವರವನ್ನು ಕೇಳು.''

ರಾಘವ ! ಲೋಕಕರ್ತೃವಾದ ಬ್ರಹ್ಮನು ಹೀಗೆ ಹೇಳಲು ದಶಗ್ರೀವನು ಕೈಮುಗಿದುಕೊಂಡು ಬ್ರಹ್ಮನ ಮುಂದೆ ನಿಂತು ಹೇಳಿದನು :

ಸುಪರ್ಣನಾಗಯಕ್ಷಾಣಾಂ ದೈತ್ಯದಾನವರಕ್ಷಸಾಮ್ ।
ಅವಧ್ಯೋಽಹಂ ಪ್ರಜಾಧ್ಯಕ್ಷ ದೇವತಾನಾಂ ಚ ಶಾಶ್ವತ ॥19॥

''ಸನಾತನನೇ! ಪ್ರಜಾಧ್ಯಕ್ಷನೇ! ನಾನು ಗರುಡ–ನಾಗ–ಯಕ್ಷರಿಂದಲೂ, ದೈತ್ಯ –ದಾನವ –ರಾಕ್ಷಸರಿಂದಲೂ, ದೇವತೆಗಳಿಂದಲೂ ವಧಿಸಲ್ಪಡ ದಿರುವ ವರವನ್ನು ನನಗೆ ದಯಪಾಲಿಸು.

ನ ಹಿ ಚಿನ್ತಾ ಮಮಾನ್ಯೇಷು ಪ್ರಾಣಿಷ್ವಮರಪೂಜಿತ ।
ತೃಣಭೂತಾ ಹಿ ತೇ ಮನ್ಯೇ ಪ್ರಾಣಿನೋ ಮಾನುಷಾದಯಃ ॥ 20॥

ದೇವಪೂಜಿತನೇ! ಇತರ ಯಾವುದೇ ಪ್ರಾಣಿಗಳಿಂದಲೂ ನನಗೆ ಯಾವ ವಿಧವಾದ ಚಿಂತೆಯೂ ಇಲ್ಲ. ಮನುಷ್ಯನೇ ಮೊದಲಾದ ಪ್ರಾಣಿಗಳು ನನಗೆ ತೃಣಪ್ರಾಯರು.''

ದಶಗ್ರೀವರಾಕ್ಷಸನು ಧರ್ಮಾತ್ಮನಾದ ಬ್ರಹ್ಮನಿಗೆ ಹೀಗೆ ಹೇಳಲು ದೇವತೆಗಳೊಡನಿದ್ದ ಪಿತಾಮಹನು ದಶಗ್ರೀವನಿಗೆ ಹೇಳಿದನು :

'' ರಾಕ್ಷಸಶ್ರೇಷ್ಠನೇ ! ನೀನು ಪ್ರಾರ್ಥಿಸಿದಂತೆಯೇ ಎಲ್ಲವೂ ನಡೆಯು ವುದು. ದೇವ –ದಾನವ, ಯಕ್ಷ–ರಾಕ್ಷಸ, ಗರುಡ, ಸರ್ಪ – ಇವರಾರಿಂದಲೂ ನಿನಗೆ ಮರಣವು ಸಂಭವಿಸುವುದಿಲ್ಲ. ನಿನ್ನ ತಪಸ್ಸಿನಿಂದ ಪ್ರಸನ್ನನಾಗಿರುವ ನಾನು ಶುಭಕರವಾದ ಮತ್ತೊಂದು ವರವನ್ನೂ ದಯಪಾಲಿಸುತ್ತೇನೆ. ಈ ಹಿಂದೆ ನೀನು ಅಗ್ನಿಯಲ್ಲಿ ನಿನ್ನ ಯಾವ ತಲೆಗಳನ್ನು ಹೋಮಮಾಡಿರುವೆಯೋ– ಆ ಒಂಬತ್ತು ತಲೆಗಳೂ ಪುನಃ ನಿನಗೆ ಲಭಿಸುತ್ತವೆ. ಈ ವರವು ಮಾತ್ರವಲ್ಲದೇ ಅತಿದುರ್ಲಭವಾದ ಮತ್ತೊಂದು ವರವನ್ನೂ ನಿನಗೆ ಕೊಡು ವೆನು. ನಿನ್ನ ಮನಸ್ಸಿನಲ್ಲಿ ನೀನು ಯಾವ ರೂಪವನ್ನು ತಾಳಲು ಅಪೇಕ್ಷಿಸು ವೆಯೋ ಆ ರೂಪವೇ ನಿನಗೆ ಲಭಿಸುತ್ತದೆ. ನೀನು ಕಾಮರೂಪನಾಗುವೆ.''

ಪಿತಾಮಹನು ಹೀಗೆ ಹೇಳಿದೊಡನೆಯೇ ಅಗ್ನಿಯಲ್ಲಿ ಹೋಮಮಾಡಿದ್ದ ರಾವಣನ ಒಂಬತ್ತು ತಲೆಗಳೂ ಪುನಃ ಪ್ರಕಟವಾದುವು.

ರಾಘವ! ಲೋಕಪಿತಾಮಹನು ದಶಗ್ರೀವನಿಗೆ ಹೀಗೆ ಹೇಳಿ ವಿಭೀಷಣನ ಬಳಿಗೆ ಹೋಗಿ ಹೇಳಿದನು :

'' ಧರ್ಮಾತ್ಮನೇ ! ವಿಭೀಷಣ ! ನಿನ್ನ ಬುದ್ಧಿಯು ಯಾವಾಗಲೂ ಧರ್ಮದೊಡನೆಯೇ ಸೇರಿರುತ್ತದೆ. ಆದುದರಿಂದ ನಾನು ನಿನ್ನ ವಿಷಯದಲ್ಲಿ ಸಂತುಷ್ಟನಾಗಿದ್ದೇನೆ. ಸುವ್ರತನೇ ! ನಿನಗೆ ಇಷ್ಟವಾದ ವರವನ್ನು ಕೇಳು.''

ಪ್ರಜಾಪತಿಯ ಮಾತನ್ನು ಕೇಳಿ ಧರ್ಮಾತ್ಮನಾದ ವಿಭೀಷಣನು ಪರಮಹೃಷ್ಟನಾಗಿ ಕೈಮುಗಿದುಕೊಂಡು ಬ್ರಹ್ಮನಿಗೆ ಹೇಳಿದನು : ಚಂದ್ರನು ತನ್ನ ಕಿರಣಗಳಿಂದ ಸದಾ ಬೆಳಗುತ್ತಿರುವಂತೆ ಸಮುಸ್ತಗುಣಗಳಿಂದಲೂ ಸಂಪನ್ನನಾಗಿದ್ದ ವಿಭೀಷಣನು ವಿನೀತನಾಗಿ ಹೇಳಿದನು :

''ಪೂಜ್ಯನೇ! ಲೋಕಗುರುವಾದ ನೀನೇ ನನ್ನ ವಿಷಯದಲ್ಲಿ ಪ್ರಸನ್ನನಾದೆಯಾದರೆ ನಾನು ಕೃತಕೃತ್ಯನಾದಂತೆಯೇ ಸರಿ. ಸುವ್ರತನೇ ! ನೀನು ಪ್ರೀತಿಯಿಂದ ನನಗೇನಾದರೂ ವರವನ್ನು ಕೊಡುವುದಾಗಿದ್ದರೆ ಈ ನನ್ನ ಮಾತನ್ನು ಲಾಲಿಸು :

ಪರಮಾಪದ್ಗತಸ್ಯಾಪಿ ಧರ್ಮೇ ಮಮ ಮತಿರ್ಭವೇತ್ ।
ಅಶಿಕ್ಷಿತಂ ಚ ಬ್ರಹ್ಮಾಸ್ತ್ರಂ ಭಗವನ್ ಪ್ರತಿಭಾತು ಮೇ ॥30॥

ಎಂತಹುದೇ ಮಹತ್ತರವಾದ ಆಪತ್ತು ಒದಗಿಬಂದರೂ ನನ್ನ ಬುದ್ಧಿಯು ಧರ್ಮದಲ್ಲಿಯೇ ಸ್ಥಿರವಾಗಲಿ. ಬ್ರಹ್ಮಾಸ್ತ್ರಮಂತ್ರವು ಉಪದೇಶ ವಿಲ್ಲದೆಯೇ ನನಗೆ ಸ್ಫುರಿಸಲಿ.

ಯಾ ಯಾ ಮೇ ಜಾಯತೇ ಬುದ್ಧಿರ್ಯೇಷು -
ಯೇಷ್ವಾಶ್ರಮೇಷು ಚ ।
ಸಾ ಸಾ ಭವತು ಧರ್ಮಿಷ್ಠಾ ತಂ ತಂ ಧರ್ಮಂ ಚ ಪಾಲಯೇ ।
ಏಷ ಮೇ ಪರಮೋದಾರೋ ವರಃ ಪರಮಕೋ ಮತಃ ॥ 32॥

ಯಾವ ಯಾವ ಆಶ್ರಮಗಳಲ್ಲಿ ನನಗೆ ಎಂತೆಂತಹ ಬುದ್ಧಿಯುಂಟಾಗುವುದೋ ಅಂತಂತಹ ನನ್ನ ಬುದ್ಧಿಯು ಧರ್ಮಿಷ್ಠವಾಗಿರಲಿ. ಆಯಾ

ಆಶ್ರಮಧರ್ಮಗಳನ್ನು ನಾನು ಪರಿಪಾಲಿಸುವೆನು. ಇದೇ ನನ್ನ ಅಭೀಷ್ಟ ವಾಗಿದೆ. ಧರ್ಮಸಮ್ಮತವಾದ ಮಾರ್ಗದಲ್ಲಿರಲು ನೀನು ಅನುಗ್ರಹಮಾಡಿದೆ ಯಾದರೆ ಇದೇ ನಾನು ಬೇಡುವ ಉತ್ಕೃಷ್ಟವಾದ ವರವಾಗಿದೆ.

ನ ಹಿ ಧರ್ಮಾಭಿರಕ್ತಾನಾಂ ಲೋಕೇ ಕಿಂಚನ ದುರ್ಲಭಮ್ ।

ಧರ್ಮದಲ್ಲಿಯೇ ಆಸಕ್ತರಾಗಿರುವವರಿಗೆ ಲೋಕದಲ್ಲಿ ಯಾವುದೂ ದುರ್ಲಭವಲ್ಲ.''

ವಿಭೀಷಣನ ಮಾತುಗಳನ್ನು ಕೇಳಿ ಬ್ರಹ್ಮನು ಪರಮಪ್ರೀತನಾಗಿ ಪುನಃ ಹೇಳಿದನು :

'' ವತ್ಸ ! ನೀನು ಧರ್ಮಿಷ್ಠನು. ಆದುದರಿಂದ ನೀನು ಯಾವುದನ್ನು ಅಭಿಲಾಷಿಸುವೆಯೋ ಅದೇ ನಿನಗೆ ಕೈಗೂಡುವುದು. ಶತ್ರುಸಂತಾಪಕನೇ ! ನೀನು ರಾಕ್ಷಸಯೋನಿಯಲ್ಲಿ ಹುಟ್ಟಿರುವೆಯಾದರೂ ನಿನ್ನ ಬುದ್ಧಿಯು ಅಧರ್ಮದ ಮಾರ್ಗದಲ್ಲಿ ಇಲ್ಲದೇ ಇರುವುದರಿಂದ ನಾನು ನಿನಗೆ ಅಮರತ್ವ ವನ್ನು ದಯಪಾಲಿಸುತ್ತೇನೆ. ''

ಬ್ರಹ್ಮನು ವಿಭೀಷಣನಿಗೆ ಇಂತಹ ಅನುಪಮವಾದ ವರವನ್ನು ಕೊಟ್ಟು ಕುಂಭಕರ್ಣನಿಗೆ ವರಕೊಡುವುದರಲ್ಲಿದ್ದಾಗ ಎಲ್ಲ ದೇವತೆಗಳೂ ಕೈಮುಗಿದು ಕೊಂಡು ಬ್ರಹ್ಮನಿಗೆ ಹೇಳಿದರು :

''ಪ್ರಭುವೇ ! ಈ ಕುಂಭಕರ್ಣನಿಗೆ ನೀನು ಯಾವ ವರವನ್ನೂ ಕೊಡ ಬಾರದು. ಈ ದುರ್ಮತಿಯು ಮೂರು ಲೋಕಗಳನ್ನೂ ಹೇಗೆ ಪೀಡಿಸು ತ್ತಿರುವನೆಂಬ ವಿಷಯವು ನಿನಗೆ ತಿಳಿದೇ ಇದೆ. ನಂದನವನದಲ್ಲಿದ್ದ ಏಳು ಮಂದಿ ಅಪ್ಸರೆಯರನ್ನೂ, ಇಂದ್ರನ ಹತ್ತು ಮಂದಿ ಸೇವಕರನ್ನೂ, ಹಲವಾರು ಋಷಿಗಳನ್ನೂ, ಮನುಷ್ಯರನ್ನೂ ನುಂಗಿಹಾಕಿದ್ದಾನೆ. ವರವನ್ನು ಪಡೆದುಕೊಳ್ಳದಿದ್ದಾಗಲೇ ಇವನು ಇಷ್ಟು ದಾಂಧಲೆಯನ್ನು ನಡೆಸಿದ್ದಾನೆ. ವರವನ್ನೂ ಪಡೆದುಕೊಂಡುಬಿಟ್ಟರೆ ಮೂರು ಲೋಕಗಳನ್ನೂ ನುಂಗಿಹಾಕು ವುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಅಮಿತಪ್ರಭೆಯುಳ್ಳವನೇ ! ದೇವದೇವನೇ ! ವರದ ವ್ಯಾಜದಿಂದ ಇವನಲ್ಲಿ ಮೋಹವುಂಟಾಗುವಂತೆ ಮಾಡು. ಇದರಿಂದ ಮೂರು ಲೋಕಗಳಿಗೂ ಮಂಗಳವಾಗಲಿ ಮತ್ತು ಇವನನ್ನೂ ವರಪ್ರದಾನದಿಂದ ಸಮ್ಮಾನಿಸಿದಂತಾಗಲಿ. ''

ದೇವತೆಗಳು ಹೀಗೆ ಹೇಳಲು : ಕಮಲಯೋನಿಯಾದ ಬ್ರಹ್ಮನು ಸರಸ್ವತಿಯನ್ನು ಸ್ಮರಿಸಿದನು. ಮರುಕ್ಷಣದಲ್ಲಿಯೇ ಸರಸ್ವತಿಯು ಬ್ರಹ್ಮನ ಪಕ್ಕದಲ್ಲಿ ನಿಂತು ಕೈಮುಗಿದುಕೊಂಡು ಹೇಳಿದಳು :

'' ದೇವ ! ಇದೋ ನಾನೀಗ ಬಂದಿದ್ದೇನೆ. ನಾನು ನಿನಗಾಗಿ ಯಾವ ಕಾರ್ಯವನ್ನು ಮಾಡಿಕೊಡಲಿ ?''

ಸ್ಮರಿಸಿದೊಡನೆಯೇ ಆಗಮಿಸಿದ ಸರಸ್ವತಿಗೆ ಬ್ರಹ್ಮನು ಹೇಳಿದನು :

ವಾಣಿ ತ್ವಂ ರಾಕ್ಷಸೇನ್ದ್ರಸ್ಯ ಭವ ವಾಗ್ದೇವತೇಪ್ಸಿತಾ ॥42॥

'' ವಾಣಿ ! ನೀನು ರಾಕ್ಷಸೇಂದ್ರನಾದ ಈ ಕುಂಭಕರ್ಣನ ನಾಲಿಗೆಯಲ್ಲಿ ವಿರಾಜಮಾನಳಾಗಿದ್ದು ದೇವತೆಗಳಿಗೆ ಇಷ್ಟವಾದ ಮಾತನ್ನು ಹೇಳಿಸು.''

ರಾಘವ ! ಸರಸ್ವತಿಯು ಹಾಗೆಯೇ ಆಗಲೆಂದು ಹೇಳಿ ಕುಂಭಕರ್ಣನ ನಾಲಿಗೆಯಲ್ಲಿ ಆವಿರ್ಭವಿಸಿದಳು. ಅನಂತರ ಪ್ರಜಾಪತಿಯು ಕುಂಭಕರ್ಣನಿಗೆ ಹೇಳಿದನು :

ಕುಮ್ಭಕರ್ಣ ಮಹಾಬಾಹೋ ವರಂ ವರಯ ಯೋ ಮತಃ ॥43॥

'' ಮಹಾಬಾಹುವೇ ! ಕುಂಭಕರ್ಣ ! ನಿನಗೆ ಅಭೀಷ್ಟವಾದ ವರವನ್ನು ಕೇಳು.''

ಕುಂಭಕರ್ಣನು ಬ್ರಹ್ಮನ ಆ ಮಾತನ್ನು ಕೇಳಿ ಪರಮಸಂತುಷ್ಟನಾಗಿ ವರವನ್ನು ಯಾಚಿಸಿದನು :

ಸ್ವಪ್ತುಂ ವರ್ಷಾಣ್ಯನೇಕಾನಿ ದೇವ ದೇವ ಮಮೇಪ್ಸಿತಮ್ ॥44॥

''ದೇವದೇವನೇ ! ಅನೇಕಾನೇಕ ವರ್ಷಗಳವರೆಗೆ ನಾನು ಮಲಗಿಯೇ ಇರಬೇಕು. ಇದೇ ನನ್ನ ಆಶಯವಾಗಿದೆ. ''

ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಕುಂಭಕರ್ಣನಿಗೆ ಸುದೀರ್ಘವಾದ ನಿದ್ರೆಯನ್ನು ಅನುಗ್ರಹಿಸಿ ದೇವತೆಗಳೊಡನೆ ತನ್ನ ಲೋಕಕ್ಕೆ ಹೊರಟುಹೋದನು. ನಾಲಿಗೆಯಲ್ಲಿ ಆವಿರ್ಭೂತಳಾಗಿದ್ದ ಸರಸ್ವತಿಯೂ ದೇವಕಾರ್ಯವಾದ ನಂತರ ಹೊರಬಂದಳು. ದೇವತೆಗಳೆಲ್ಲರೂ ಬ್ರಹ್ಮನೊಡನೆ ಆಕಾಶದ ಕಡೆಗೆ ಹೊರಟುಹೋದ ನಂತರ ಸರಸ್ವತಿಯಿಂದ ಮುಕ್ತನಾದ

ಕುಂಭಕರ್ಣನು ತನ್ನ ಬುದ್ಧಿಯನ್ನು ಮರಳಿ ಹೊಂದಿದನು. ತಾನು ದೀರ್ಘ ಕಾಲದ ನಿದ್ರೆಯನ್ನು ಬ್ರಹ್ಮನಿಂದ ಕೇಳಿದೆನೆಂಬ ಅರಿವಾಯಿತು. ದುಷ್ಟಾತ್ಮನಾದ ಕುಂಭಕರ್ಣನು ಬಹಳ ದುಃಖಿತನಾಗಿ ಚಿಂತಿಸತೊಡಗಿದನು.

ಈದೃಶಂ ಕಿಮಿದಂ ವಾಕ್ಯಂ ಮಮಾದ್ಯ ವದನಾಚ್ಚ್ಯುತಮ್ ।
ಅಹಂ ವ್ಯಾಮೋಹಿತೋ ದೇವೈರಿತಿ ಮನ್ಯೇ ತದಾಗತೈಃ ॥48॥

'' ಅಯ್ಯೋ ! ಇಂತಹ ಮಾತು ನನ್ನ ಬಾಯಿಂದೇಕೆ ಬಂದಿತು ? ನಿಶ್ಚಯವಾಗಿಯೂ ಬ್ರಹ್ಮನೊಡನೆ ಬಂದಿದ್ದ ದೇವತೆಗಳು ನನಗೆ ವ್ಯಾಮೋಹವನ್ನುಂಟುಮಾಡಿರಬೇಕು. ಹಾಗಿಲ್ಲದಿದ್ದರೆ ಇಂತಹ ವರವನ್ನು ನಾನು ಖಂಡಿತವಾಗಿಯೂ ಕೇಳುತ್ತಿರಲಿಲ್ಲ.''

ಕುಂಭಕರ್ಣನು ಹೀಗೆ ಹೇಳಿಕೊಂಡು ಬಹಳವಾಗಿ ದುಃಖಿಸಿದನು.

ರಾಘವ ! ಹೀಗೆ ಮಹಾತೇಜಸ್ವಿಗಳಾಗಿದ್ದ ಆ ಮೂವರು ಸಹೋದರರೂ ಬ್ರಹ್ಮನಿಂದ ವರಗಳನ್ನು ಪಡೆದುಕೊಂಡು ಶ್ಲೇಷ್ಮಾತಕವನಕ್ಕೆ (ಚಳ್ಳೇ ಮರಗಳ ಕಾಡು) ಹೋಗಿ ಅಲ್ಲಿ ಸುಖವಾಗಿದ್ದರು.

10ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 11ನೆಯ ಸರ್ಗ

ರಾವಣನ ಸಂದೇಶವನ್ನು ಕೇಳಿ ಕುಬೇರನು ತಂದೆಯ ಆಜ್ಞೆಯಂತೆ ಲಂಕೆಯನ್ನು ಪರಿತ್ಯಜಿಸಿ ಕೈಲಾಸಪರ್ವತಕ್ಕೆ ಹೋದುದು : ಲಂಕೆಯಲ್ಲಿ ರಾವಣನ ರಾಜ್ಯಾಭಿಷೇಕ : ರಾಕ್ಷಸರ ನಿವಾಸ

ಸುಮಾಲೀ ವರಲಬ್ಧಾಂಸ್ತು ಜ್ಞಾತ್ವಾ ಚೈತಾನ್ನಿಶಾಚರಾನ್ ।
ಉದತಿಷ್ಠದ್ಭಯಂ ತ್ಯಕ್ತ್ವಾ ಸಾನುಗಃ ಸ ರಸಾತಲಾತ್ ॥1॥

ರಾವಣನೇ ಮೊದಲಾದ ರಾಕ್ಷಸರು ಬ್ರಹ್ಮನಿಂದ ವರಗಳನ್ನು ಪಡೆದುಕೊಂಡಿರುವ ವಿಷಯವನ್ನು ತಿಳಿದು ರಸಾತಲದಲ್ಲಿದ್ದ ಸುಮಾಲಿಯು ಭಯವನ್ನು ತೊರೆದು ಭೂಮಂಡಲಕ್ಕೆ ಬಂದನು.

ಅವನೊಡನೆಯೇ ಮಾರೀಚ, ಪ್ರಹಸ್ತ, ವಿರೂಪಾಕ್ಷ ಮತ್ತು ಮಹೋದರರೆಂಬ ಸುಮಾಲಿಯ ಮಂತ್ರಿಗಳೂ ಮೇಲೆ ಬಂದರು. ಅವ

ರೆಲ್ಲರೂ ಅತ್ಯಂತಕುಪಿತರಾಗಿದ್ದರು. ಸುಮಾಲಿಯು ರಾಕ್ಷಸಶ್ರೇಷ್ಠರಾದ ತನ್ನ ನಾಲ್ವರು ಸಚಿವರೊಡನೆ ದಶಗ್ರೀವನ ಬಳಿಗೆ ಬಂದು ಅವನನ್ನು ಆಲಿಂಗಿಸಿಕೊಂಡು ಸ್ನೇಹಪೂರ್ವಕವಾಗಿ ಹೇಳಿದನು :

''ವತ್ಸ ! ನೀನು ಮೂರು ಲೋಕಗಳಿಗೂ ಶ್ರೇಷ್ಠನಾದ ಬ್ರಹ್ಮನಿಂದ ವರಗಳನ್ನು ಪಡೆದುಬಂದಿರುವುದು ನಿಶ್ಚಯವಾಗಿಯೂ ಸೌಭಾಗ್ಯದ ವಿಷಯವೇ ಆಗಿದೆ. ನಾನು ಬಹಳ ಕಾಲದಿಂದ ಚಿಂತಿಸುತ್ತಿದ್ದ ಮನೋರಥವನ್ನು ಈಗ ನೀನು ಪಡೆದುಕೊಂಡಿರುವೆ. ನಾವೆಲ್ಲರೂ ವಿಷ್ಣುವಿನ ಭಯದಿಂದಾಗಿ ರಸಾತಲಕ್ಕೆ ಹೋಗಿದ್ದೆವು. ಈಗ ಆ ನಮ್ಮ ಭಯವು ದೂರವಾಯಿತು. ನೀನು ದೇವತೆಗಳಿಂದಲೂ ಅವಧ್ಯತ್ವದ ವರವನ್ನು ಪಡೆದಿರುವ ಕಾರಣ ನಮಗೆ ಈಗ ವಿಷ್ಣುವಿನಿಂದ ಯಾವ ಭಯವೂ ಇಲ್ಲ. ನಾವು ಹಲವಾರು ಬಾರಿ ಅವನಿಂದ ಭಗ್ನರಾದೆವು. ಈ ಕಾರಣದಿಂದಲೇ ಅವನ ಭಯದಿಂದಾಗಿ ನಾವು ನಮ್ಮ ನಿವಾಸಸ್ಥಾನವಾಗಿದ್ದ ಲಂಕೆಯನ್ನು ಪರಿತ್ಯಜಿಸಿ ರಸಾತಲದಲ್ಲಿ ಸೇರಿಕೊಂಡೆವು. ಧೀಮಂತನಾದ ನಿನ್ನ ಅಣ್ಣನಾದ ಧನಾಧ್ಯಕ್ಷನು ವಾಸಮಾಡುತ್ತಿರುವ ಲಂಕೆಯು ನಮ್ಮದೇ ಆಗಿದೆ. ಹಿಂದೆ ರಾಕ್ಷಸರೇ ಅಲ್ಲಿ ವಾಸಮಾಡುತ್ತಿದ್ದರು. ಮಹಾಬಾಹುವೇ ಸಾಮದಿಂದಾಗಲೀ, ದಾನದಿಂದಾಗಲೀ, ಅಥವಾ ಬಲಪ್ರಯೋಗದಿಂದಲೇ ಆಗಲೀ – ಲಂಕೆಯನ್ನು ನೀನು ವಶಪಡಿಸಿ ಕೊಂಡರೆ ನಮ್ಮ ಕಾರ್ಯವನ್ನು ಸಾಧಿಸಿಕೊಂಡಂತಾಗುತ್ತದೆ. ನೀನು ಲಂಕೇಶ್ವರನೂ ಆಗುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ರಸಾತಲದಲ್ಲಿ ಮುಳುಗಿಹೋಗಿದ್ದ ರಾಕ್ಷಸವಂಶವನ್ನೇ ನೀನೀಗ ಮೇಲೆತ್ತಿರುವೆ. ಮಹಾ ಬಲನೇ! ನೀನು ನಮ್ಮೆಲ್ಲರಿಗೂ ಪ್ರಭುವಾಗುವೆ.''

ಮಾತಾಮಹನಾದ ಸುಮಾಲಿಯು ಹೇಳುತ್ತಿರುವ ಮಾತನ್ನು ಕೇಳಿ ರಾವಣನು ಉತ್ತರಿಸಿದನು :

ವಿತ್ತೇಶೋ ಗುರುರಸ್ಮಾಕಂ ನಾರ್ಹಸೇ ವಕ್ತುಮೀದೃಶಮ್ ||10||

'' ಮಾತಾಮಹನೇ ! ಕುಬೇರನು ನಮ್ಮೆಲ್ಲರಿಗೂ ಅಣ್ಣನಾಗಬೇಕು. ಆದುದರಿಂದ ಇಂತಹ ಮಾತನ್ನು ಹೇಳುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ.''

ಶ್ರೇಷ್ಠನಾದ, ರಾಕ್ಷಸೇಂದ್ರನಾದ ದಶಗ್ರೀವನು ಶಾಂತಭಾವದಿಂದಲೇ ಹೇಳುತ್ತಿರುವುದನ್ನು ನೋಡಿ ಅವನ ಮನೋಗತವಾದ ಅಭಿಲಾಷೆಯನ್ನು ತಿಳಿದು ಸುಮಾಲಿಯು ಮುಂದೆ ಯಾವ ಮಾತನ್ನೂ ಆಡಲಿಲ್ಲ.

ಕೆಲವು ಕಾಲವು ಕಳೆದನಂತರ ಸುಮಾಲಿಗೆ ಸೌಮ್ಯವಾದ ಉತ್ತರ ವನ್ನೇ ಕೊಟ್ಟಿದ್ದ ಶ್ಲೇಷ್ಮಾತಕವನದಲ್ಲಿ ವಾಸಮಾಡುತ್ತಿದ್ದ ರಾವಣನನ್ನು ಕುರಿತು ಪ್ರಹಸ್ತನೆಂಬ ರಾಕ್ಷಸನು (ಸುಮಾಲಿಯ ಮಂತ್ರಿಯು) ವಿನಯ ಪೂರ್ವಕವಾದ ಮತ್ತು ಯುಕ್ತಿಯುಕ್ತವಾದ ಈ ಮಾತನ್ನು ಹೇಳಿದನು :

'' ದಶಗ್ರೀವ! ನೀನು ಹೀಗೆ ಹೇಳಬಾರದು. ನನ್ನ ಮಾತನ್ನು ಕೇಳು. ಶೂರರಾದವರಿಗೆ ಭ್ರಾತೃಭಾವವೆಲ್ಲಿಯದು ? **ಸೌಭ್ರಾತ್ರಂ ನಾಸ್ತಿ ಶೂರಾಣಾಂ** – ಶೂರರಾದವರಿಗೆ ಅಣ್ಣ– ತಮ್ಮಂದಿರೆಂಬ ಭಾವನೆಯೇ ಇರುವುದಿಲ್ಲ.

ಅದಿತಿ ಮತ್ತು ದಿತಿ ಎಂಬ ಅಕ್ಕ –ತಂಗಿಯರು ಯಾವಾಗಲೂ ಜೊತೆ ಯಲ್ಲೇ ಇರುತ್ತಿದ್ದರು. ಕಡುಚೆಲುವೆಯರಾಗಿದ್ದ ಅವರು ಕಶ್ಯಪಪ್ರಜಾ ಪತಿಯ ಭಾರ್ಯೆಯರಾಗಿದ್ದರು. ಅದಿತಿಯು ಮೂರು ಲೋಕಗಳಿಗೂ ಒಡೆಯರಾದ ದೇವತೆಗಳಿಗೆ ಜನ್ಮವನ್ನಿತ್ತಳು. ಕಶ್ಯಪರಿಂದ ದಿತಿಯು ದೈತ್ಯರನ್ನು ಮಕ್ಕಳನ್ನಾಗಿ ಪಡೆದಳು. ಪರ್ವತ– ಸಮುದ್ರಗಳಿಂದ ಸಹಿತವಾದ ಈ ಭೂಮಂಡಲವು ಮೊದಲು ದೈತ್ಯರ ಅಧೀನದಲ್ಲಿಯೇ ಇದ್ದಿತು. ದೈತ್ಯರೇ ಆ ಸಮಯದಲ್ಲಿ ಅತ್ಯಂತಪ್ರಭಾವಶಾಲಿಗಳಾಗಿದ್ದರು. ಆದರೆ ಸರ್ವಶಕ್ತಿ ವಂತನಾದ ವಿಷ್ಣುವು ಯುದ್ಧದಲ್ಲಿ ದೈತ್ಯರನ್ನು ಸಂಹರಿಸಿ ಅಕ್ಷಯವಾದ ಈ ಮೂರು ಲೋಕಗಳ ಆಧಿಪತ್ಯವನ್ನು ದೇವತೆಗಳ ವಶಕ್ಕೊಪ್ಪಿಸಿದನು. ಇಂತಹ ವಿಪರೀತವಾದ ಆಚರಣೆಯಲ್ಲಿ (ಅಣ್ಣನನ್ನು ದೇಶಭ್ರಷ್ಟನನ್ನಾಗಿ ಮಾಡಿ ರಾಜ್ಯವನ್ನು ಪಡೆದವರಲ್ಲಿ) ನೀನೇನೂ ಮೊದಲಿಗನಲ್ಲ, ದೇವತೆ ಗಳೂ ಮತ್ತು ಅಸುರರೂ ಹಿಂದೆ ಇದೇ ನೀತಿಯನ್ನೇ ಅನುಸರಿಸಿಕೊಂಡು ಬಂದಿರುವರು. ಆದುದರಿಂದ ನನ್ನ ಮಾತಿನಂತೆ ಆಚರಿಸು.''

ಪ್ರಹಸ್ತನ ಈ ಮಾತನ್ನು ಕೇಳಿ ದಶಗ್ರೀವನ ಮನಸ್ಸು ಪ್ರಸನ್ನ ವಾಯಿತು. ಮುಹೂರ್ತಕಾಲ ಚಿಂತಿಸಿ – **'ಬಾಢಂ'** 'ಹಾಗೆಯೇ ಆಗಲಿ.

ನೀನು ಹೇಳಿದಂತೆಯೇ ನಾನು ಮಾಡುವೆನು '- ಎಂದು ಉತ್ತರಿಸಿದನು. ಹರ್ಷದಿಂದ ಉತ್ಸಾಹಿತನಾದ ದಶಗ್ರೀವನು ಅದೇ ದಿನವೇ ಸಹಚರರೊಡನೆ ಲಂಕಾಪಟ್ಟಣದ ಸಮೀಪದಲ್ಲಿದ್ದ ಅರಣ್ಯಕ್ಕೆ ಪ್ರಯಾಣಮಾಡಿದನು. ಚಿತ್ರಕೂಟ ಪರ್ವತದ ಶಿಖರಕ್ಕೆ ಹೋದನಂತರ ನಿಶಾಚರನಾದ ದಶಗ್ರೀವನು ವಾಕ್ಯಕೋವಿದನಾದ ಪ್ರಹಸ್ತನನ್ನೇ ದೂತನನ್ನಾಗಿ ಕುಬೇರನ ಬಳಿಗೆ ಕಳುಹಿಸಿಕೊಡುತ್ತಾ ಹೇಳಿದನು :

''ಪ್ರಹಸ್ತ ! ಶೀಘ್ರವಾಗಿ ಇಲ್ಲಿಂದ ನೀನು ಲಂಕಾಪಟ್ಟಣಕ್ಕೆ ಹೋಗಿ ನನ್ನನಿರ್ದೇಶದಂತೆ ಯಕ್ಷಶ್ರೇಷ್ಠನಾದ ಮತ್ತು ಧನಾಧಿಪತಿಯಾದ ಕುಬೇರನಿಗೆ ನನ್ನ ಈ ಮಾತುಗಳನ್ನು ಸೌಮ್ಯವಾಗಿಯೇ ಹೇಳು.

ಇಯಂ ಲಙ್ಕಾಪುರೀ ರಾಜನ್ರಾಕ್ಷಸಾನಾಂ ಮಹಾತ್ಮನಾಮ್ ।
ತ್ವಯಾ ನಿವೇಶಿತಾ ಸೌಮ್ಯ ನೈತದ್ಯುಕ್ತಂ ತವಾನಘ ॥23॥

'ಸೌಮ್ಯನೇ ! ನೀನೀಗ ವಾಸಮಾಡುತ್ತಿರುವ ಈ ಲಂಕಾಪಟ್ಟಣವು ಮಹಾತ್ಮರಾದ ರಾಕ್ಷಸರಿಗೆ ಸೇರಿದ್ದಾಗಿದೆ. ಇಲ್ಲಿ ನೀನು ವಾಸಮಾಡುವುದು ಉಚಿತವಾಗಿ ಕಾಣುವುದಿಲ್ಲ.

''ಅತುಲಪರಾಕ್ರಮಿಯಾದ ಧನೇಶ್ವರನೇ ! ಈಗ ನೀನೇನಾದರೂ ಲಂಕಾ ಪಟ್ಟಣವನ್ನು ನಮಗೆ ಬಿಟ್ಟುಕೊಟ್ಟುದಾದರೆ – ಇದರಿಂದ ನನಗೆ ಬಹಳ ಸಂತೋಷವುಂಟಾಗುತ್ತದೆ ಮತ್ತು ನೀನು ಧರ್ಮದ ಪಾಲನೆಯನ್ನೂ ಮಾಡಿದಂತಾಗುತ್ತದೆ.'' ಹೀಗೆ ನೀನು ಕುಬೇರನಿಗೆ ಹೇಳಬೇಕು.

ರಾವಣನ ನಿರ್ದೇಶದಂತೆ ಪ್ರಹಸ್ತನು ಕುಬೇರನಿಂದ ರಕ್ಷಿಸಲ್ಪಡುತ್ತಿದ್ದ ಲಂಕಾಪಟ್ಟಣಕ್ಕೆ ಹೋಗಿ ಉದಾರಿಯಾದ ಅವನನ್ನು ಸಂಧಿಸಿ ಈ ಮಾತನ್ನು ಹೇಳಿದನು :

''ಸುವ್ರತನೇ! ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೇ ! ಸರ್ವಶಾಸ್ತ್ರವಿಶಾರದನೇ! ಧನಾಧಿಪತಿಯೇ ! ನಿನ್ನ ತಮ್ಮನಾದ ದಶಗ್ರೀವನು ನನ್ನನ್ನು ಕಳುಹಿಸಿರುವನು. ಅವನ ದೂತನಾಗಿ ನಾನು ನಿನ್ನ ಬಳಿಗೆ ಬಂದಿರುವೆನು. ಮಹಾಪ್ರಾಜ್ಞನೇ ! ದಶಾನನನು ಏನು ಹೇಳಿರುವನೆಂಬುದನ್ನು ಕೇಳು.

ರಮ್ಯವಾದ ಈ ಲಂಕಾಪಟ್ಟಣವನ್ನು ಹಿಂದೆ ಭಯಂಕರಪರಾಕ್ರಮಿ

ಗಳಾದ ಸುಮಾಲಿಯೇ ಮೊದಲಾದ ರಾಕ್ಷಸರು ಆಳುತ್ತಿದ್ದರು. ಅವರಿಗೆ ಸೇರಿರುವ ಈ ಲಂಕಾರಾಜ್ಯವನ್ನು ನೀನು ಬಹುಕಾಲದಿಂದ ಉಪಭೋಗಿಸುತ್ತಿರುವೆ.

ಆದುದರಿಂದ ಈಗ ದಶಗ್ರೀವನು ವಿಜ್ಞಾಪಿಸಿಕೊಳ್ಳುತ್ತಿದ್ದಾನೆ. ಈ ಮೊದಲು ರಾಕ್ಷಸರಿಗೆ ಸೇರಿದ್ದ ಈ ಲಂಕಾರಾಜ್ಯವನ್ನು ಸೌಮ್ಯಭಾವದಿಂದಲೇ ಯಾಚಿಸುತ್ತಿರುವ ರಾವಣನಿಗೆ ಕೊಟ್ಟುಬಿಡು.''

ಪ್ರಹಸ್ತನ ಮುಖದಿಂದ ಹೊರಟ ಮಾತನ್ನು ಕೇಳಿ ಮಾತಿನ ಅರ್ಥವನ್ನು ತಿಳಿಯುವುದರಲ್ಲಿ ಅತಿನಿಪುಣನಾಗಿದ್ದ ವೈಶ್ರವಣನು ದಶಗ್ರೀವನ ದೂತನಿಗೆ ಹೇಳಿದನು :

'' ರಾಕ್ಷಸನೇ ! ಈ ಲಂಕಾಪಟ್ಟಣವು ರಾಕ್ಷಸರಿಂದ ಶೂನ್ಯವಾಗಿದ್ದಿತು. ಆ ಸಮಯದಲ್ಲಿ ನನ್ನ ತಂದೆಯು ಇಲ್ಲಿ ವಾಸಮಾಡಿಕೊಂಡಿರುವಂತೆ ನನಗೆ ಆಜ್ಞಾಪಿಸಿದನು. ಅವನ ಆಜ್ಞಾನುಸಾರವಾಗಿ ದಾನ–ಮಾನಗಳೇ ಮುಂತಾದ ಗುಣಗಳಿಂದ ಯುಕ್ತನಾಗಿ ಯಕ್ಷರೊಡನೆ ನಾನಿಲ್ಲಿ ವಾಸಮಾಡಿಕೊಂಡಿದ್ದೇನೆ.

ದೂತನೇ ! ಈಗ ನೀನು ಹೋಗಿ ದಶಗ್ರೀವನಿಗೆ ಹೇಳು.

ಮಹಾಬಾಹುವೇ ! ಈ ಪಟ್ಟಣವೂ ಮತ್ತು ನಿಷ್ಕಂಟಕವಾದ ಈ ಲಂಕಾರಾಜ್ಯವೂ ನನ್ನದು ಹೇಗೋ ಹಾಗೆಯೇ ನಿನ್ನದೂ ಆಗಿದೆ. ಆದುದರಿಂದ ನೀನು ರಾಜ್ಯವನ್ನು ಅವಶ್ಯವಾಗಿ ಉಪಭೋಗಿಸಬಹುದು. ರಾಜ್ಯವನ್ನಾಗಲೀ ನನ್ನಲ್ಲಿರುವ ಐಶ್ವರ್ಯವನ್ನಾಗಲೀ ನಾನು ನಿನ್ನಿಂದ ವಿಭಾಗ ಮಾಡಿಕೊಂಡಿರುವುದಿಲ್ಲ. ನಮ್ಮ ಈ ಐಶ್ವರ್ಯವೆಲ್ಲವೂ ಅವಿಭಕ್ತವಾಗಿಯೇ ಇದೆ. ಆದುದರಿಂದ ಮುಂದೆ ನೀನು ಲಂಕಾರಾಜ್ಯವನ್ನು ಆಳಿಕೊಂಡಿರಲು ನನ್ನ ಅಭ್ಯಂತರವೇನೂ ಇಲ್ಲ''

ಕುಬೇರನು ದೂತನಿಗೆ ಹೀಗೆ ಹೇಳಿ ತಂದೆಯಾದ ವಿಶ್ರವಸನ ಬಳಿಗೆ ಹೊರಟುಹೋದನು. ತಂದೆಗೆ ಅಭಿವಾದನಮಾಡಿ ನಮಸ್ಕರಿಸಿ ರಾವಣನ ಅಭಿಲಾಷೆಯನ್ನು ಅವನಿಗೆ ವಿವರಿಸಿ ಹೇಳಿದನು :

'' ತಂದೆಯೇ ! ದಶಗ್ರೀವನು ನನ್ನ ಬಳಿಗೆ ದೂತನೊಬ್ಬನನ್ನು ಕಳುಹಿಸಿ ಹಿಂದೆ ರಾಕ್ಷಸರಿಂದ ಉಪಭೋಗಿಸಲ್ಪಡುತ್ತಿದ್ದ ಲಂಕಾನಗರಿಯನ್ನು

ತನಗೆ ಒಪ್ಪಿಸುವಂತೆ ನಿರ್ದೇಶಿಸಿರುವನು. ಸುವ್ರತನೇ ! ಈಗ ನಾನೇನು ಮಾಡಬೇಕೆಂಬುದನ್ನು ಹೇಳು.''

ಹಿರಿಯ ಮಗನು ಹೀಗೆ ಹೇಳಲು ಬ್ರಹ್ಮರ್ಷಿಯಾದ ಮುನಿಶ್ರೇಷ್ಠನಾದ ವಿಶ್ರವಸನು ಕೈಮುಗಿದುಕೊಂಡು ನಿಂತಿದ್ದ ಕುಬೇರನಿಗೆ ಹೇಳಿದನು :

'' ಮಗು ! ನನ್ನ ಮಾತನ್ನು ಕೇಳು. ಮಹಾಬಾಹುವಾದ ದಶಗ್ರೀವನು ನನ್ನ ಬಳಿಗೂ ಬಂದು ಇದೇ ಮಾತನ್ನೇ ಹೇಳಿದನು. ದುರ್ಮತಿ ಯಾದ ಅವನಿಗೆ ನಾನು ಹೀಗೆ ಮಾಡಕೂಡದೆಂದು ಮೊದಲು –ಮೊದಲು ಸೌಮ್ಯಭಾವದಿಂದ ಕಡೆಗೆ ಬೆದರಿಕೆಯನ್ನೂ ಹಾಕಿ ಹಲವಾರು ಬಾರಿ ಹೇಳಿ ದೆನು –' ನೀನೇನಾದರೂ ನಿಮ್ಮ ಅಣ್ಣನಿಂದ ರಾಜ್ಯವನ್ನು ಅಪಹರಿಸಿದೆ ಯಾದರೆ ನೀನು ಹಾಳಾಗಿ ಹೋಗುವೆ. **ಧ್ವಂಸಸೇ** ' – ಎಂದು ಕೋಪ ದಿಂದಲೇ ಹೇಳಿದೆನು. ಆದರೆ ನನ್ನ ಮಾತು ಫಲಕಾರಿಯಾಗಲಿಲ್ಲ. ಆದುದ ರಿಂದ ವತ್ಸ! ನಾನು ಹೇಳಲಿರುವ ಧರ್ಮಾನುಕೂಲವಾದ ಮತ್ತು ಮಂಗಳ ಕರವಾದ ಮಾತನ್ನು ಕೇಳು. ಬ್ರಹ್ಮನ ವರಪ್ರದಾನದಿಂದ ಅವನು ಅತಿ ಮೂರ್ಖನಾಗಿದ್ದಾನೆ. ಮದಮತ್ತನಾಗಿದ್ದಾನೆ. ವಿವೇಕಶೂನ್ಯನಾಗಿದ್ದಾನೆ. ನನ್ನ ಶಾಪದ ಕಾರಣದಿಂದಾಗಿ ಅವನ ಸ್ವಭಾವವೂ ಕ್ರೂರವಾಗಿದೆ. ನೀನು ಲಂಕೆಯನ್ನು ನಿನ್ನ ಅನುಯಾಯಿಗಳೊಡನೆ ಪರಿತ್ಯಜಿಸಿ ಕೈಲಾಸಪರ್ವತಕ್ಕೆ ಹೋಗು. ನಿನ್ನ ವಾಸಕ್ಕಾಗಿ ಕೈಲಾಸಪರ್ವತದಲ್ಲಿ ಮತ್ತೊಂದು ನಗರವನ್ನು ನಿರ್ಮಿಸು. ಕೈಲಾಸಪರ್ವತದ ಸಮೀಪದಲ್ಲಿಯೇ ನದಿಗಳಲ್ಲಿಯೇ ಶ್ರೇಷ್ಠ ವಾದ ರಮ್ಯವಾದ ಮಂದಾಕಿನಿಯು ಪ್ರವಹಿಸುತ್ತಿದೆ. ಆ ನದಿಯು ಸೂರ್ಯ ನಂತೆ ಪ್ರಭೆಯುಳ್ಳ ಮತ್ತು ಸ್ವರ್ಣಮಯವಾದ ಕಮಲಗಳುಳ್ಳ ನೀರಿ ನಿಂದ ಪರಿಶೋಭಿಸುತ್ತಿದೆ. ಕುಮುದಗಳಿಂದಲೂ, ಕನ್ನೈದಿಲೆಗಳಿಂದಲೂ ಮತ್ತು ಇತರ ಸುಗಂಧಯುಕ್ತವಾದ ಅನೇಕ ಪುಷ್ಪಗಳಿಂದಲೂ ಆ ನದಿಯು ಶೋಭಾಯಮಾನವಾಗಿ ಕಾಣುತ್ತಿದೆ. ಆ ಕೈಲಾಸಪರ್ವತದಲ್ಲಿ ದೇವತೆ ಗಳೂ, ಅಪ್ಸರೆಯರೂ, ಕಿನ್ನರೋರಗರೂ ಗಂಧರ್ವರೊಡನೆ ವಿಹರಿಸುತ್ತಾ ಆನಂದತುಂದಿಲರಾಗಿದ್ದಾರೆ. ಆದುದರಿಂದ ಅಲ್ಲಿ ನೀನು ವಾಸಮಾಡಿ ಕೊಂಡಿರು. ಬ್ರಹ್ಮನಿಂದ ರಾವಣನು ಎಂತಹ ಅಮೋಘವಾದ ವರಗಳನ್ನು

ಪಡೆದುಕೊಂಡಿರುವನೆಂಬುದು ನಿನಗೂ ತಿಳಿದಿದೆ. ಆದುದರಿಂದ ಅವನೊಡನೆ ವೈರಕಟ್ಟಿಕೊಳ್ಳುವುದು ಉಚಿತವಾಗಿ ಕಾಣುವುದಿಲ್ಲ.''

ತಂದೆಯು ಹೀಗೆ ಹೇಳಲು ಕುಬೇರನು ತಂದೆಯ ಮಾತನ್ನು ಗೌರವಿಸುತ್ತಾ ಪತ್ನೀ –ಪುತ್ರ –ಮಂತ್ರಿ –ಸೇನಾಪತಿಗಳೊಡನೆಯೂ, ವಾಹನಗಳೊಡನೆಯೂ, ಐಶ್ವರ್ಯದೊಡನೆಯೂ ಕೈಲಾಸಪರ್ವತಕ್ಕೆ ಪ್ರಯಾಣಮಾಡಿದನು.

ಅನಂತರ ಪ್ರಹಸ್ತನು ಪ್ರಸನ್ನಚಿತ್ತನಾಗಿ ಮಂತ್ರಿಗಳೊಡನೆಯೂ ಅನುಜರೊಡನೆಯೂ ಕುಳಿತಿದ್ದ ಮಹಾತ್ಮನಾದ ದಶಗ್ರೀವನ ಬಳಿಗೆ ಹೋಗಿ ಹೇಳಿದನು :

''ಪ್ರಭುವೇ! ಕುಬೇರನು ಲಂಕೆಯನ್ನು ಪರಿತ್ಯಜಿಸಿ ಹೊರಟು ಹೋದನು. ಅದೀಗ ಶೂನ್ಯವಾಗಿದೆ. ಈಗ ನೀನು ನಮ್ಮೊಡನೆ ಲಂಕಾ ಪಟ್ಟಣವನ್ನು ಪ್ರವೇಶಿಸು. ಅಲ್ಲಿ ನೀನು ನಿನ್ನ ಧರ್ಮವನ್ನು ಪರಿಪಾಲಿಸುತ್ತಿರು.''

ಪ್ರಹಸ್ತನು ಹೀಗೆ ಹೇಳಲು ಮಹಾಬಲನಾದ ರಾವಣನು ಅನುಜರೊಡನೆಯೂ ಅಮಾತ್ಯ –ಸೇನಾಪತಿಗಳೊಡನೆಯೂ ಕುಬೇರನಿಂದ ಪರಿತ್ಯಜಿಸಲ್ಪಟ್ಟಿದ್ದ, ಸರಿಯಾಗಿ ವಿಭಾಗಿಸಿ ರಚಿಸಿದ್ದ ದೊಡ್ಡ– ದೊಡ್ಡ–ಬೀದಿಗಳಿಂದ ಪರಿಶೋಭಿಸುತ್ತಿದ್ದ ಲಂಕಾಪಟ್ಟಣವನ್ನು ಪ್ರವೇಶಿಸಿದನು. ದೇವಾಧಿಪನಾದ ಇಂದ್ರನು ಸ್ವರ್ಗದಲ್ಲಿ ಪಟ್ಟಾಭಿಷಿಕ್ತನಾದಂತೆ ದೇವಾರಿಯಾದ ರಾವಣನು ಲಂಕೆಯಲ್ಲಿ ಪಟ್ಟಾಭಿಷಿಕ್ತನಾದನು. ರಾಕ್ಷಸರೆಲ್ಲರೂ ಸೇರಿ ರಾವಣನಿಗೆ ಲಂಕಾರಾಜ್ಯದಲ್ಲಿ ಅಭಿಷೇಕಮಾಡಿದರು. ರಾವಣನು ತನ್ನ ಅನುಯಾಯಿಗಳೊಡನೆ ಲಂಕೆಯಲ್ಲಿ ವಾಸಮಾಡತೊಡಗಿದನು. ದಿನಗಳು ಕಳೆದಂತೆ ಆ ಪಟ್ಟಣವು ನೀಲಮೇಘಗಳಂತೆ ಶ್ಯಾಮಲವರ್ಣದವರಾಗಿದ್ದ ರಾಕ್ಷಸರಿಂದ ತುಂಬಿಹೋಯಿತು.

ಇತ್ತಲಾಗಿ ಧನೇಶ್ವರನಾದ ಕುಬೇರನು ತಂದೆಯ ಆಜ್ಞೆಯನ್ನು ಗೌರವಿಸುತ್ತಾ ಚಂದ್ರನಂತೆ ವಿಮಲವಾಗಿದ್ದ ಕೈಲಾಸಪರ್ವತದಲ್ಲಿ ಶ್ರೇಷ್ಠ ಭವನಗಳಿಂದ ಸಮಲಂಕೃತವಾಗಿದ್ದ ಅಲಕಾಪುರಿಯನ್ನು ನಿರ್ಮಿಸಿದನು.

ಇಂದ್ರನು ದೇವಲೋಕದಲ್ಲಿ ಅಮರಾವತಿಯನ್ನು ನಿರ್ಮಿಸಿಕೊಂಡಿದ್ದಂತೆಯೇ ಕುಬೇರನು ಅಲಕಾಪುರಿಯನ್ನು ನಿರ್ಮಿಸಿಕೊಂಡನು.

11ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 12ನೆಯ ಸರ್ಗ

ರಾವಣ –ಕುಂಭಕರ್ಣ – ವಿಭೀಷಣ ಮತ್ತು ಶೂರ್ಪಣಖೆಯರ ವಿವಾಹ : ಮೇಘನಾದನ ಜನ್ಮ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ರಾಕ್ಷಸೇನ್ದ್ರೋಽಭಿಷಿಕ್ತಸ್ತು ಭ್ರಾತೃಭಿಃ ಸಹಿತಸ್ತದಾ ।
ತತಃ ಪ್ರದಾನಂ ರಾಕ್ಷಸ್ಯಾ ಭಗಿನ್ಯಾಃ ಸಮಚಿನ್ತಯತ್ ॥1॥

ರಾಘವ ! ಪಟ್ಟಾಭಿಷಿಕ್ತನಾದನಂತರ ರಾವಣನು ಅನುಜರೊಡನೆ ಲಂಕೆಯಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದನು. ಹೀಗೆಯೇ ಇರುತ್ತಿರಲಾಗಿ ರಾವಣನಿಗೆ ತಂಗಿಯಾದ ಶೂರ್ಪಣಖೆಗೆ ವಿವಾಹಮಾಡಬೇಕೆಂಬ ಚಿಂತೆಯುಂಟಾಯಿತು.

ಸ್ವಲ್ಪ ದಿವಸಗಳಲ್ಲಿಯೇ ರಾವಣನು ಶೂರ್ಪಣಖೆಯನ್ನು ಕಾಲಕೇಯನೆಂಬ ದಾನವನ ಮಗನಾದ ವಿದ್ಯುಜ್ಜಿಹ್ವನೆಂಬ ರಾಕ್ಷಸನಿಗೆ ವಿಧಿಪೂರ್ವಕವಾಗಿ ಮದುವೆಮಾಡಿಕೊಟ್ಟನು.

ತಂಗಿಯ ವಿವಾಹವಾದನಂತರ ರಾವಣನೊಮ್ಮೆ ಪ್ರಾಣಿಗಳನ್ನು ಬೇಟೆಯಾಡಲು ಅರಣ್ಯದಲ್ಲಿ ಅಲೆದಾಡುತ್ತಿದ್ದನು. ಅಲ್ಲಿಯೇ ಅವನು ಅನಿರೀಕ್ಷಿತವಾಗಿ ದಿತಿಯ ಮಗನಾದ ಮಯನನ್ನು ನೋಡಿದನು. ಅವನ ಸಂಗಡ ಕನ್ಯೆಯೊಬ್ಬಳಿದ್ದುದನ್ನು ಕಂಡು ರಾವಣನು ಮಯಾಸುರನನ್ನು ಪ್ರಶ್ನಿಸಿದನು:

‘‘ನೀನೊಬ್ಬನೇ ಏಕಾಕಿಯಾಗಿ ಮರಿಜಿಂಕೆಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ ಕಂಗೊಳಿಸುತ್ತಿರುವ ಈ ಕನ್ಯೆಯೊಡನೆ ಮನುಷ್ಯರಾಗಲೀ ಪ್ರಾಣಿಗಳಾಗಲೀ ಇಲ್ಲದಿರುವ ಈ ಕಾಡಿನಲ್ಲೇಕಿರುವೆ ? ’’

ಹಾಗೇ ಪ್ರಶ್ನಿಸಿದ ರಾವಣನಿಗೆ ಮಯನು ಯಥೋಚಿತವಾಗಿ ಉತ್ತರಿಸಿದನು :

'' ನಿಶಾಚರನೇ ! ಎಲ್ಲ ವೃತ್ತಾಂತಗಳನ್ನೂ ನಿನಗೆ ಯಥಾವತ್ತಾಗಿ ಹೇಳುವೆನು : ಕೇಳು. 'ಹೇಮಾ' ಎಂಬ ಅಪ್ಸರೆಯೊಬ್ಬಳಿದ್ದಳು. ಅವಳ ಹೆಸರನ್ನು ನೀನೂ ಕೇಳಿರಬಹುದು. ಪುಲೋಮನೆಂಬ ದಾನವನ ಕನ್ಯೆಯಾದ ಶಚೀದೇವಿಯನ್ನು ಇಂದ್ರನಿಗೆ ಮದುವೆಮಾಡಿಕೊಟ್ಟಂತೆ – ದೇವತೆ ಗಳು ಆ ಗಂಧರ್ವಿಯನ್ನು ನನಗೆ ಮದುವೆ ಮಾಡಿಕೊಟ್ಟರು. ನಾನು ಅವಳಲ್ಲಿಯೇ ಆಸಕ್ತನಾಗಿರುತ್ತಾ ಒಂದು ಸಾವಿರ ವರ್ಷಗಳವರೆಗೆ ಅವಳೊಡನೆಯೇ ಇದ್ದುಬಿಟ್ಟೆನು. ಹೇಮೆಯು ದೇವಕಾರ್ಯದ ಸಲುವಾಗಿ ಹದಿನಾಲ್ಕು ವರ್ಷಗಳ ಕಾಲ ನನ್ನನ್ನಗಲಿ ಹೊರಟುಹೋದಳು. ಅವಳಲ್ಲಿಯೇ ಅನುರಕ್ತನಾಗಿದ್ದ ನಾನು ಆ ಸಮಯದಲ್ಲಿ ಅವಳ ನೆನಪಿಗಾಗಿ ಹೇಮಮಯವಾದ ಒಂದು ಪಟ್ಟಣವನ್ನೇ ನಿರ್ಮಿಸಿದೆನು. ವಜ್ರ–ವೈಡೂರ್ಯಗಳಿಂದಲೂ ಚಿತ್ರಿತವಾಗಿದ್ದ ಆ ಪುರವನ್ನು ನಾನು ಮಾಯೆಯಿಂದ ನಿರ್ಮಿಸಿದೆನು. ಅವಳಿಂದ ವಿಹೀನನಾಗಿದ್ದ ನಾನು ವಿರಹವೇದನೆಯನ್ನು ತಾಳಲಾರದೇ ಅತ್ಯಂತದುಃಖಿತನಾಗಿ ಆ ಪಟ್ಟಣದಲ್ಲಿಯೇ ವಾಸವಾಗಿದ್ದೆನು. ಅವಳಲ್ಲಿ ನನಗೆ ಹುಟ್ಟಿರುವ ಈ ಕನ್ಯೆಯನ್ನೂ ಅವಳು ಇಲ್ಲಿಯೇ ಬಿಟ್ಟುಹೋಗಿದ್ದಳು. ಇವಳನ್ನು ಇದುವರೆಗೂ ನಾನೇ ಸಾಕಿ ಸಲಹಿದ್ದೇನೆ. ಹೇಮಪುರದಿಂದ ಇವಳನ್ನು ಕರೆದುಕೊಂಡು ಈ ಅರಣ್ಯಕ್ಕೆ ಬಂದಿರುವೆನು. ಇವಳಿಗೆ ಅನು ರೂಪನಾದ ಪತಿಯನ್ನು ಅರಸುತ್ತಾ ಇವಳೊಡನೆ ನಾನು ಹೊರಟು ಬಂದಿದ್ದೇನೆ.

ಕನ್ಯಾಪಿತೃತ್ವಂ ದುಃಖಂ ಹಿ ಸರ್ವೇಷಾಂ ಮಾನಕಾಂಕ್ಷಿಣಾಮ್ ।
ಕನ್ಯಾ ಹಿ ದ್ವೇ ಕುಲೇ ನಿತ್ಯಂ ಸಂಶಯೇ ಸ್ಥಾಪ್ಯ ತಿಷ್ಠತಿ ॥11॥

ಮಾನ–ಮರ್ಯಾದೆಗಳಿಂದ ಬದುಕಿಬಾಳಬೇಕೆಂಬ ಅಭಿಲಾಷೆಯಿರುವವರಿಗೆ ಕನ್ಯಾಪಿತೃತ್ವವು ಅತ್ಯಂತದುಃಖದಾಯಕವಾದುದು. ಏಕೆಂದರೆ ಕನ್ಯೆಯಾದವಳು ಹುಟ್ಟಿದ – ಸೇರಿದ ಎರಡು ಕುಲದವರನ್ನೂ ಸಂಶಯಗ್ರಸ್ತರನ್ನಾಗಿ ಮಾಡುತ್ತಾಳೆ. (ವರನು ತನ್ನ ಮಗಳಿಗೆ ಅನುರೂಪನಾಗಿರುವನೇ ? ಎಂದು ಹೆಣ್ಣಿನ ತಾಯಿ–ತಂದೆಗಳಿಗೆ ಸಂಶಯ. ಕನ್ಯೆಯು ತನ್ನ ಮಗನಿಗೆ

ಅನುರೂಪಳಾಗಿದ್ದು ತಮ್ಮ ವಂಶದ ಮರ್ಯಾದೆಯನ್ನು ಕಾಪಾಡುವಳೇ?– ಎಂಬ ಸಂಶಯ ವರನ ಕಡೆಯವರಿಗೆ.)

ಇವಳಲ್ಲದೇ ಇನ್ನೂ ಇಬ್ಬರು ಪುತ್ರರು ಹೇಮೆಯಲ್ಲಿ ನನಗೆ ಹುಟ್ಟಿದ್ದಾರೆ. ಅವರಲ್ಲಿ ಮಾಯಾವಿಯು ಜ್ಯೇಷ್ಠನು. ದುಂದುಭಿಯು ಎರಡನೆಯವನು.

ಮಹಾನುಭಾವನೇ ! ಹೀಗೆ ನಾನು ಎಲ್ಲ ವಿಷಯಗಳನ್ನೂ ನಿನಗೆ ಯಥಾವತ್ತಾಗಿ ಹೇಳಿದ್ದೇನೆ. ಈಗ ನನಗೆ ನೀನಾರೆಂಬುದನ್ನು ತಿಳಿಯುವ ಅಭಿಲಾಷೆಯುಂಟಾಗಿದೆ. ಅದನ್ನು ನಾನು ಹೇಗೆ ತಿಳಿಯಲಿ ?''

ಮಯನು ಹೀಗೆ ಪ್ರಶ್ನಿಸಲು ರಾವಣನು ವಿನೀತನಾಗಿ ಹೇಳಿದನು :

'' ನಾನು ಪುಲಸ್ತ್ಯನ ಮಗನಾದ ವಿಶ್ರವಸನ ಮಗನಾಗಿದ್ದೇನೆ. ನನ್ನ ಹೆಸರು ದಶಗ್ರೀವನೆಂದು. ನನ್ನ ತಂದೆಯಾದ ವಿಶ್ರವಸನು ಬ್ರಹ್ಮನಿಂದ ಮೂರನೆಯ ತಲೆಮಾರಿನವನು.''

ರಾವಣನು ತನ್ನ ಪರಿಚಯವನ್ನು ಹೀಗೆ ಮಾಡಿಕೊಡಲು – ಅವನು ಮಹರ್ಷಿಯಾದ ವಿಶ್ರವಸನ ಮಗನೆಂದು ತಿಳಿದು – ಮಯನಿಗೆ ಸಂತೋಷವಾಯಿತು. ತನ್ನ ಮಗಳನ್ನು ದಶಗ್ರೀವನಿಗೆ ಕೊಟ್ಟು ಮದುವೆಮಾಡಬೇಕೆಂಬ ಅಭಿಲಾಷೆಯು ಮಯನ ಮನಸ್ಸಿನಲ್ಲಿ ಮೂಡಿತು.

ಅನಂತರ ಮಯನು ಮಗಳ ಬಲಗೈಯನ್ನು ರಾವಣನ ಬಲಗೈಯಿನಲ್ಲಿಡುತ್ತಾ ಹೇಳಿದನು :

ಇಯಂ ಮಮಾತ್ಮಜಾ ರಾಜನ್ಹೇಮಯಾಪ್ಸರಸಾ ಧೃತಾ ।
ಕನ್ಯಾ ಮನ್ದೋದರೀ ನಾಮ ಪತ್ನ್ಯರ್ಥಂ ಪ್ರತಿಗೃಹ್ಯತಾಮ್ ॥18॥

'' ಮಹಾರಾಜ ! ಹೇಮೆಯೆಂಬ ಅಪ್ಸರೆಯು ಗರ್ಭದಲ್ಲಿ ಧರಿಸಿದ್ದ ಇವಳು ನನ್ನ ಮಗಳು. ಈ ಕನ್ಯೆಯು ಮಂದೋದರೀ ಎಂಬ ಹೆಸರಿನಿಂದ ವಿಖ್ಯಾತಳಾಗಿದ್ದಾಳೆ. ಇವಳನ್ನು ನೀನು ಭಾರ್ಯೆಯನ್ನಾಗಿ ಪ್ರತಿಗ್ರಹಿಸು.''

ರಾಘವ ! ಮಯನ ಮಾತನ್ನು ಕೇಳಿ ರಾವಣನು '**ಬಾಢಂ**' 'ಹಾಗೆಯೇ ಆಗಲೀ' ಎಂದೆನ್ನುತ್ತಾ ತನ್ನ ಒಪ್ಪಿಗೆಯನ್ನಿತ್ತನು. ಬಳಿಕ ದಶಗ್ರೀವನು ಅಲ್ಲಿಯೇ ಅಗ್ನಿಯನ್ನು ಪ್ರತಿಷ್ಠಾಪಿಸಿ ಯಜ್ಞೇಶ್ವರನ ಸಮ್ಮುಖ

ದಲ್ಲಿ ಮಂದೋದರಿಯ ಪಾಣಿಗ್ರಹಣಮಾಡಿದನು. ಮಯನಿಗೆ ರಾವಣನು ಶಾಪಗ್ರಸ್ತನಾಗಿರುವನೆಂಬುದೂ, ವಿಶ್ರವಸನ ಶಾಪದಿಂದಾಗಿ ಕ್ರೂರಸ್ವಭಾವ ದವನಾಗಿರುವನೆಂಬುದೂ ತಿಳಿದಿದ್ದಿತು. ಆದರೂ ರಾವಣನು ಪಿತಾಮಹನಿಗೆ ಸಂಬಂಧಿಸಿದ ಪವಿತ್ರಕುಲದವನೆಂದು ಭಾವಿಸಿ ತನ್ನ ಮಗಳನ್ನು ದಶಗ್ರೀವನಿಗೆ ಮದುವೆಮಾಡಿಕೊಟ್ಟನು. ಮಯನು ರಾವಣನಿಗೆ ಕನ್ಯೆಯೊಡನೆ ಉತ್ಕೃಷ್ಟ ವಾದ ತಪಸ್ಸಿನಿಂದ ಲಭಿಸಿದ್ದ ಪರಮಾದ್ಭುತವಾದ ಶಕ್ತ್ಯಾಯುಧವನ್ನೂ ಬಳುವಳಿಯಾಗಿ ಕೊಟ್ಟನು. ರಾಮಚಂದ್ರ ! ರಾವಣನು ಲಕ್ಷ್ಮಣನನ್ನು ಪ್ರಹರಿಸಿದ್ದು ಆ ಶಕ್ತ್ಯಾಯುಧದಿಂದಲೇ.

ಹೀಗೆ ಪ್ರಭಾವಶಾಲಿಯಾದ ರಾವಣನು ಮಂದೋದರಿಯನ್ನು ವಿವಾಹ ಮಾಡಿಕೊಂಡು ಲಂಕಾಪಟ್ಟಣಕ್ಕೆ ಹಿಂದಿರುಗಿ ತನ್ನ ಇಬ್ಬರು ತಮ್ಮಂದಿರಿಗೂ ಅನುರೂಪರಾದ ಕನ್ಯೆಯರನ್ನು ತಂದು ವಿವಾಹಮಾಡಿದನು.

ವಿರೋಚನಪುತ್ರನಾದ ಬಲಿಯ ಮಗಳ ಮಗಳಾದ ವಜ್ರಜ್ವಾಲೆ ಯೆಂಬ ಹೆಸರಿನ ಕನ್ಯೆಯನ್ನು ತಂದು ಕುಂಭಕರ್ಣನಿಗೂ ಗಂಧರ್ವರಾಜ ನಾದ ಮಹಾತ್ಮನಾದ ಶೈಲೂಷನ ಮಗಳಾದ, ಧರ್ಮಜ್ಞೆಯಾದ ಸರಮಾ ಎಂಬ ಹೆಸರಿನ ಕನ್ಯೆಯನ್ನು ತಂದು ವಿಭೀಷಣನಿಗೂ ಮದುವೆಮಾಡಿಸಿದನು.

ವಿಭೀಷಣನ ಪತ್ನಿಗೆ ಸರಮಾ ಎಂಬ ಹೆಸರು ಬರಲು ಒಂದು ಐತಿಹ್ಯವಿದೆ.

ತೀರೇ ತು ಸರಸೋ ವೈ ತು ಸಂಜಜ್ಞೇ ಮಾನಸಸ್ಯ ಹಿ ।
ಸರಸ್ತದಾ ಮಾನಸಂ ತು ವವೃಧೇ ಜಲದಾಗಮೇ ॥25॥
ಮಾತ್ರಾ ತು ತಸ್ಯಾಃ ಕನ್ಯಾಯಾಃ ಸ್ನೇಹೇನಾಕ್ರನ್ದಿತಂ ವಚಃ ।
ಸರೋ ಮಾ ವರ್ಧಯಸ್ವೇತಿ ತತಃ ಸಾ ಸರಮಾಭವತ್ ॥26॥

ಸರಮೆಯು ಹುಟ್ಟಿದ್ದು ಮಾನಸಸರೋವರದ ತೀರದಲ್ಲಿ. ಆ ಸಮಯವು ಮಳೆಗಾಲವಾದ್ದರಿಂದ ಸರೋವರವು ತುಂಬಿ ತುಳುಕತೊಡ ಗಿತು. ಅದನ್ನು ಕಂಡು ಅವಳ ತಾಯಿಯು – **'ಸರೋ ಮಾ ವರ್ಧಸ್ವ!** ಸರೋವರವೇ ! ಮುಂದೆ ವೃದ್ಧಿಹೊಂದಬೇಡ ' – ಎಂದು ಮಗುವಿನ ಮೇಲಿನ ಪ್ರೀತಿಯಿಂದ ಕೂಗಿಕೊಂಡಳು. ಅವಳ ಮಾತಿನಂತೆಯೇ ಸರೋವರವು

ತುಂಬಿ ಹರಿಯಲಿಲ್ಲ. ಈ ಕಾರಣದಿಂದ ಆ ಕನ್ಯೆಗೆ 'ಸರಮಾ' ಎಂದೇ ಹೆಸರಾಯಿತು.

ಹೀಗೆ ಮೂವರು ರಾಕ್ಷಸರೂ ಮದುವೆಮಾಡಿಕೊಂಡು ತಮ್ಮ-ತಮ್ಮ ಪತ್ನಿಯರೊಡನೆ ಗಂಧರ್ವರು ನಂದನವನದಲ್ಲಿ ವಿಹರಿಸುವಂತೆ– ಲಂಕಾಪಟ್ಟಣದ ವನಪ್ರದೇಶಗಳಲ್ಲಿ ವಿಹರಿಸುತ್ತಿದ್ದರು.

ಸ್ವಲ್ಪಕಾಲವು ಕಳೆದನಂತರ ಮಂದೋದರಿಯು ಗಂಡುಶಿಶುವಿಗೆ ಜನ್ಮವನ್ನಿತ್ತಳು. ಅವನಿಗೆ ಮೇಘನಾದನೆಂದು ಅನ್ವರ್ಥನಾಮವನ್ನಿಟ್ಟರು. ಅವನನ್ನೇ ನೀವು ಇಂದ್ರಜಿತು ಎಂಬ ಹೆಸರಿನಿಂದ ತಿಳಿದಿರುವಿರಿ.

ಜಾತಮಾತ್ರೇಣ ಹಿ ಪುರಾ ತೇನ ರಾವಣಸೂನುನಾ ।
ರುದತಾ ಸುಮಹಾನ್ಮುಕ್ತೋ ನಾದೋ ಜಲಧರೋಪಮಃ ॥29॥

ರಾವಣನ ಆ ಮಗನು ಹುಟ್ಟಿದೊಡನೆಯೇ ಮೇಘವು ಗುಡುಗುವಂತೆ ಗಂಭೀರಧ್ವನಿಯಿಂದ ಅಳುತ್ತಿದ್ದನು.

ಜಡೀಕೃತಾ ಚ ಸಾ ಲಙ್ಕಾ ತಸ್ಯ ನಾದೇನ ರಾಘವ ।
ಪಿತಾ ತಸ್ಯಾಕರೋನ್ನಾಮ ಮೇಘನಾದ ಇತಿ ಸ್ವಯಮ್ ॥30॥

ಮೇಘದ ಗರ್ಜನೆಗೆ ಅನುರೂಪವಾದ ಆ ಅಳುವನ್ನು ಕೇಳಿ ಲಂಕಾಪಟ್ಟಣವೇ ಸ್ತಬ್ಧವಾಗಿ ಹೋಯಿತು. ಅದನ್ನು ನೋಡಿದ ರಾವಣನೇ ತನ್ನ ಮಗನಿಗೆ ಮೇಘನಾದನೆಂದು ನಾಮಕರಣಮಾಡಿದನು.

ಮೇಘನಾದನು ರಾವಣನ ಮಂಗಳಮಯವಾದ ಅಂತಃಪುರದಲ್ಲಿ ತಂದೆ – ತಾಯಿಗಳಿಗೆ ಆನಂದವನ್ನುಂಟುಮಾಡುತ್ತಾ ದಿನ–ದಿನಕ್ಕೂ ವೃದ್ಧಿಹೊಂದುತ್ತಿದ್ದನು. ಯಜ್ಞೇಶ್ವರನು ಕಟ್ಟಿಗೆಗಳಿಂದ ರಕ್ಷಿಸಲ್ಪಡುವಂತೆ ಶ್ರೇಷ್ಠರಾದ ನಾರಿಯರು ರಾವಣಕುಮಾರನನ್ನು ಸಂರಕ್ಷಿಸುತ್ತಿದ್ದರು.

12ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 13ನೆಯ ಸರ್ಗ

ರಾವಣನು ಕಟ್ಟಿಸಿಕೊಟ್ಟ ಶಯನಾಗಾರದಲ್ಲಿ ಕುಂಭಕರ್ಣನ ಶಯನ : ರಾವಣನ ಅತ್ಯಾಚಾರ : ಸದಾಚಾರದಲ್ಲಿರುವಂತೆ ರಾವಣನಿಗೆ ಕುಬೇರನಿಂದ ದೂತನ ಮೂಲಕ ಸಂದೇಶ : ರಾವಣನಿಂದ ದೂತನ ವಧೆ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ಅಥ ಲೋಕೇಶ್ವರೋತ್ಸೃಷ್ಟಾ ತತ್ರ ಕಾಲೇನ ಕೇನಚಿತ್ ।
ನಿದ್ರಾ ಸಮಭವತ್ತೀವ್ರಾ ಕುಮ್ಭಕರ್ಣಸ್ಯ ರೂಪಿಣೀ ॥ 1॥

'' ರಾಘವ! ಸ್ವಲ್ಪಕಾಲ ಕಳೆದನಂತರ ಲೋಕೇಶ್ವರನಾದ ಬ್ರಹ್ಮನಿಂದ ಕಳುಹಿಸಲ್ಪಟ್ಟ ನಿದ್ರಾದೇವಿಯು ಆಕಳಿಕೆಯೇ ಮೊದಲಾದ ರೂಪಗಳನ್ನು ಧರಿಸಿ ಕುಂಭಕರ್ಣನಲ್ಲಿ ಕಾಣಿಸಿಕೊಂಡಳು. ಆಗ ಕುಂಭಕರ್ಣನು ಸಿಂಹಾಸನದಲ್ಲಿ ಕುಳಿತಿದ್ದ ರಾವಣನಿಗೆ ಹೇಳಿದನು :

'' ಮಹಾರಾಜ ! ನನ್ನನ್ನು ನಿದ್ರೆಯು ಬಾಧೆಪಡಿಸುತ್ತಿದೆ. ಆದುದರಿಂದ ನಾನು ಮಲಗಲು ಒಂದು ಶಯನಾಗಾರವನ್ನು ನಿರ್ಮಿಸಿಕೊಡು.''

ಸಹೋದರನ ಮಾತನ್ನು ಕೇಳಿ ರಾಕ್ಷಸರಾಜನಾದ ರಾವಣನು ವಿಶ್ವಕರ್ಮನಿಗೆ ಸಮಾನರಾದ ಶಿಲ್ಪಿಗಳನ್ನು ಕರೆಯಿಸಿ ಸುಂದರವಾದೊಂದು ಸೌಧವನ್ನು ನಿರ್ಮಿಸಲು ಆಜ್ಞೆಮಾಡಿದನು. ಅತ್ಯಲ್ಪಕಾಲದಲ್ಲಿಯೇ ಆ ಶಿಲ್ಪಿಗಳು ಎರಡು ಯೋಜನಗಳಷ್ಟು ಉದ್ದವಾಗಿಯೂ ಮತ್ತು ಒಂದು ಯೋಜನದಷ್ಟು ಅಗಲವಾಗಿಯೂ ಇದ್ದ ಸುಂದರವಾದ ಶಯನಾಗಾರವನ್ನು ನಿರ್ಮಿಸಿದರು. ಆ ಭವನವು ನೋಡಲು ಅತಿಸುಂದರವಾಗಿದ್ದಿತು. ನಿದ್ರಿಸಲು ಯಾವ ವಿಧವಾದ ತೊಂದರೆಯೂ ಅಲ್ಲಿರಲಿಲ್ಲ. ಸ್ಫಟಿಕದ ಮಣಿಗಳಿಂದಲೂ ಮತ್ತು ಸುವರ್ಣದಿಂದಲೂ ಚಿತ್ರಿತವಾದ ಕಂಬಗಳಿಂದ ಕೂಡಿ ಸರ್ವತ್ರ ಸುಶೋಭಿತವಾಗಿದ್ದ ಸುಂದರವಾದ ಶಯನಾಗಾರವನ್ನು ಶಿಲ್ಪಿಗಳು ಕುಂಭಕರ್ಣನ ಸಲುವಾಗಿ ನಿರ್ಮಿಸಿದರು. ಆ ಶಯನಾಗಾರದಲ್ಲಿ ವೈಡೂರ್ಯದಿಂದ ನಿರ್ಮಿತವಾದ ಸೋಪಾನಗಳಿದ್ದುವು. ಕಿರುಗಂಟೆಗಳಿಂದ ಸಮಲಂಕೃತವಾದ ಜಾಲರಿಗಳಿದ್ದುವು. ಅದರ ಮಹಾದ್ವಾರವು ಆನೆಯ ದಂತದಿಂದ ಮಾಡಿದ ಕೆತ್ತನೆಯ

ಕೆಲಸದಿಂದ ಸುಶೋಭಿಸುತ್ತಿದ್ದಿತು. ವಜ್ರಖಚಿತವಾದ ಮತ್ತು ಸ್ಫಟಿಕದಿಂದ ನಿರ್ಮಿಸಲ್ಪಟ್ಟ ಜಗುಲಿಗಳು ಆ ಭವನದ ಸುತ್ತಲೂ ಇದ್ದುವು. ರಮ್ಯವಾಗಿದ್ದ ಆ ಶಯನಾಗಾರವು ಮೇರುಪರ್ವತದಲ್ಲಿರುವ ಸುಂದರವಾದ ಗುಹೆಯಂತೆ ಸರ್ವಪ್ರಕಾರದಿಂದಲೂ ಸುಖದಾಯಕವಾಗಿದ್ದಿತು. ಅಂತಹ ಸುಂದರವಾದ ಮತ್ತು ಭವ್ಯವಾದ ಶಯನಾಗಾರವನ್ನು ರಾವಣನು ತನ್ನ ತಮ್ಮ ಕುಂಭಕರ್ಣನ ಸಲುವಾಗಿ ಕಟ್ಟಿಸಿಕೊಟ್ಟನು. ಮಹಾಬಲನಾದ ಕುಂಭಕರ್ಣನು ಆ ಶಯನಾಗಾರದಲ್ಲಿ ಸುಖವಾಗಿ ಮಲಗಿದನು. ಅನೇಕ ಸಾವಿರ ವರ್ಷಗಳ ವರೆಗೂ ಅವನು ಅಲ್ಲಿ ಮಲಗಿ ನಿದ್ರಿಸುತ್ತಲೇ ಇದ್ದನು. ಎಚ್ಚರಗೊಳ್ಳಲೇ ಇಲ್ಲ. ಕುಂಭಕರ್ಣನು ಹೀಗೆ ನಿದ್ರಿಸುತ್ತಿರುವಾಗ ರಾವಣನು ಯಾವ ವಿಧ ವಾದ ಅಡೆ –ತಡೆಗಳೂ ಇಲ್ಲದೆ ದೇವರ್ಷಿಗಳನ್ನೂ ಯಕ್ಷ–ಗಂಧರ್ವರನ್ನೂ ಹಿಂಸಿಸಲು ಪ್ರಾರಂಭಿಸಿದನು. ಕ್ರುದ್ಧನಾದ ದಶಗ್ರೀವನು ನಂದನವನವೇ ಮೊದಲಾದ ವಿಚಿತ್ರವಾದ ಉದ್ಯಾನವನಗಳಿಗೆ ಹೋಗಿ ಅವುಗಳನ್ನು ಧ್ವಂಸ ಮಾಡುತ್ತಿದ್ದನು. ನದಿಯಲ್ಲಿ ಆನೆಯಂತೆ ಕ್ರೀಡೆಯಾಡುತ್ತಾ ಅದರ ತೀರವನ್ನೇ ಧ್ವಂಸಮಾಡುತ್ತಿದ್ದನು. ಬಿರುಗಾಳಿಯಂತೆ ವೃಕ್ಷಗಳನ್ನು ಕಿತ್ತೆಸೆಯುತ್ತಿದ್ದನು. ಪರ್ವತಗಳನ್ನು ಇಂದ್ರನ ವಜ್ರಾಯುಧದಂತೆ ಕತ್ತರಿಸಿಹಾಕುತ್ತಿದ್ದನು. ತಮ್ಮನಾದ ದಶಗ್ರೀವನು ಅಷ್ಟೊಂದು ಸ್ವೇಚ್ಛಾಚಾರಿಯಾಗಿರುವ ನೆಂಬ ವಾರ್ತೆಯನ್ನು ಕೇಳಿ ಧರ್ಮಜ್ಞನಾದ ಕುಬೇರನು ತಮ್ಮ ಕುಲಧರ್ಮ ವನ್ನು ಸ್ಮರಿಸಿಕೊಂಡು ಉತ್ತಮವಾದ ಭ್ರಾತೃಪ್ರೇಮವನ್ನು ಪರಿಚಯ ಮಾಡಿಕೊಡುವುದಕ್ಕೂ ಮತ್ತು ದಶಗ್ರೀವನಿಗೆ ಹಿತವನ್ನುಂಟುಮಾಡುವ ಸಲುವಾಗಿಯೂ ದೂತನೊಬ್ಬನನ್ನು ರಾವಣನ ಬಳಿಗೆ ಕಳುಹಿಸಿಕೊಟ್ಟನು. ಕುಬೇರನ ದೂತನು ಲಂಕೆಗೆ ಹೋಗಿ ವಿಭೀಷಣನನ್ನು ಸಂಧಿಸಿದನು. ವಿಭೀಷಣನು ಧರ್ಮಾನುಸಾರವಾಗಿ ಕುಬೇರನ ದೂತನನ್ನು ಸತ್ಕರಿಸಿ ಲಂಕೆಗೆ ಬಂದುದರ ಕಾರಣವನ್ನು ಪ್ರಶ್ನಿಸಿದನು. ಬಂಧುಗಳ ಕುಶಲವನ್ನು ಕೇಳಿದ ನಂತರ ವಿಭೀಷಣನು ಆ ದೂತನನ್ನು ರಾವಣನ ಸಭೆಗೆ ಕರೆದೊಯ್ದು ಸಿಂಹಾಸನಾರೂಢನಾಗಿದ್ದ ರಾವಣನನ್ನು ತೋರಿಸಿದನು. ತನ್ನ ತೇಜಸ್ಸಿನಿಂದ ದೇದೀಪ್ಯಮಾನನಾಗಿ ಬೆಳಗುತ್ತಿದ್ದ ರಾವಣರಾಜನನ್ನು ನೋಡಿ ಕುಬೇರನ ದೂತನು 'ದಶಗ್ರೀವನಿಗೆ ಜಯವಾಗಲಿ ' ಎಂದು ಹೇಳಿ ಮುಂದೆ ಯಾವ

ಮಾತನ್ನೂ ಆಡದೇ ನಿಂತುಕೊಂಡನು. ಸ್ವಲ್ಪಹೊತ್ತು ಕಳೆದನಂತರ ಶ್ರೇಷ್ಠವಾದ ಮೇಲುಹೊದ್ದಿಕೆಯಿಂದ ಸುಶೋಭಿತವಾಗಿದ್ದ ಹಂಸತೂಲಿಕಾತಲ್ಪದಲ್ಲಿ ಕುಳಿತಿದ್ದ ದಶಗ್ರೀವನಿಗೆ ಹೇಳಿದನು :

‘‘ ಮಹಾರಾಜ ! ರಾವಣೇಶ್ವರ ! ನಿನ್ನ ಅಗ್ರಜನಾದ ಕುಬೇರನು ಮಾತೃಕುಲ ಮತ್ತು ಪಿತೃಕುಲ - ಇವೆರಡಕ್ಕೂ ಅನುರೂಪವಾದ ಮತ್ತು ಸದಾಚಾರಯುಕ್ತವಾದ ಯಾವ ಸಂದೇಶವನ್ನು ನನ್ನೊಡನೆ ಕಳುಹಿಸಿರುವನೋ ಅದನ್ನು ಯಥಾವತ್ತಾಗಿ ಹೇಳುವೆನು ; ಅವಧರಿಸು.

‘ದಶಗ್ರೀವ! ನಿನ್ನ ಸ್ವೇಚ್ಛಾಚಾರವನ್ನು ಇನ್ನಾದರೂ ಸಾಕು ಮಾಡು. ಸದಾಚಾರವನ್ನು ಆಚರಿಸು. ಸಾಧ್ಯವಾಗುವುದಾದರೆ ಧರ್ಮ ಮಾರ್ಗದಲ್ಲಿಯೇ ವ್ಯವಹರಿಸಲು ಪ್ರಯತ್ನಿಸು. ಇದರಿಂದ ನಿನಗೆ ಒಳ್ಳೆಯ ದಾಗುವುದು. ನಂದನವನವನ್ನು ಧ್ವಂಸಮಾಡಿದೆ. ಇದನ್ನು ನಾನು ಪ್ರತ್ಯಕ್ಷ ವಾಗಿಯೇ ಕಂಡೆನು. ನೀನು ಅನೇಕ ಮುನಿಗಳನ್ನು ಸಂಹರಿಸಿದೆಯೆಂಬ ವಾರ್ತೆಯನ್ನೂ ನಾನು ಕೇಳಿದೆನು. ಈ ಕಾರಣಗಳಿಂದಾಗಿ ದೇವತೆಗಳು ನಿನಗೆ ವಿರುದ್ಧವಾದ ಕಾರ್ಯಗಳನ್ನು ಆರಂಭಿಸಿರುವರೆಂದು ತಿಳಿದುಬಂದಿದೆ. ನೀನು ಹಲವಾರು ಬಾರಿ ನನ್ನನ್ನು ತಿರಸ್ಕರಿಸಿರುವೆ. ಬಾಲಕನೊಬ್ಬನು ಅಪರಾಧಮಾಡಿದರೆ ಬಂಧುಗಳು ಅವನನ್ನು ರಕ್ಷಿಸಲೇಬೇಕು. ಈ ಕಾರಣ ದಿಂದ ನಿನಗೆ ಹಿತಕರವಾದ ಸಲಹೆಯನ್ನು ನಾನೀಗ ಕೊಡುತ್ತಿದ್ದೇನೆ. ನಾನಾದರೋ ನಿಯತಾಹಾರನಾಗಿ, ನಿಯತೇಂದ್ರಿಯನಾಗಿ ರೌದ್ರವೆಂಬ ವ್ರತವನ್ನು ಕೈಗೊಂಡು ಧರ್ಮಾನುಷ್ಠಾನಕ್ಕಾಗಿ ಹಿಮಾಲಯದ ಶಿಖರಕ್ಕೆ ಹೊರಟುಹೋದೆನು. ಅಲ್ಲಿ ನಾನು ಉಮಾಸಮೇತನಾದ ಮಹಾದೇವನನ್ನು ಸಂದರ್ಶಿಸಿದೆನು. ಆ ಸಮಯದಲ್ಲಿ ದೈವವಶಾತ್ ನನ್ನ ಎಡಗಣ್ಣಿನ ದೃಷ್ಟಿಯು ದೇವಿಯ ಮೇಲೆ ಬಿದ್ದಿತು. ಇವಳಾರೆಂದು ಕುತೂಹಲದಿಂದ ನಾನವಳನ್ನು ನೋಡಿದೆನೇ ಹೊರತು ಬೇರಾವ ದುರ್ಭಾವನೆಯಿಂದಲೂ ನಾನು ದೇವಿಯನ್ನು ನೋಡಲಿಲ್ಲ. ರುದ್ರಾಣಿಯು ಅನುಪಮವಾದ ರೂಪ ಸೌಂದರ್ಯದಿಂದ ಬೆಳಗುತ್ತಾ ಮಹಾದೇವನ ಸಮೀಪದಲ್ಲಿ ನಿಂತಿದ್ದಳು. ದೇವಿಯ ದಿವ್ಯಪ್ರಭಾವದಿಂದ ಅವಳ ಕಡೆಗೆ ಹೊರಳಿದ್ದ ನನ್ನ ಎಡಗಣ್ಣು ಸುಟ್ಟುಹೋಯಿತು. ನನ್ನ ಬಲಗಣ್ಣು ಕೂಡ ಧೂಳಿನಿಂದ ಮುಚ್ಚಿಹೋದಂತಾಗಿ ಕಂದುಹಳದೀ ಬಣ್ಣವಾಯಿತು. ಅನಂತರ ನಾನು ಅತ್ಯಂತ

ವಿಸ್ತೀರ್ಣವಾಗಿದ್ದ ಪರ್ವತದ ಮತ್ತೊಂದು ತಪ್ಪಲಿಗೆ ಹೋಗಿ ನೂರೆಂಟು ವರ್ಷಗಳವರೆಗೆ ಮೌನಭಾವದಿಂದಿರುತ್ತಾ ಆ ಮಹಾವ್ರತವನ್ನು ಅನುಷ್ಠಾನ ಮಾಡಿದೆನು. ಆ ಮಹಾವ್ರತದ ಸಮಾಪ್ತಿಯಾದ ನಂತರ ದೇವದೇವನಾದ ಮಹೇಶ್ವರನು ನನಗೆ ಪ್ರತ್ಯಕ್ಷನಾಗಿ ಸುಪ್ರಸನ್ನವಾದ ಮನಸ್ಸಿನಿಂದ ಹೀಗೆ ಹೇಳಿದನು :

ಪ್ರೀತೋಽಸ್ಮಿ ತವ ಧರ್ಮಜ್ಞ ತಪಸಾನೇನ ಸುವ್ರತ ।
ಮಯಾ ಚೈತದ್ವ್ರತಂ ಚೀರ್ಣಂ ತ್ವಯಾ ಚೈವ ಧನಾಧಿಪ ॥27॥

'ಸುವ್ರತನೇ ! ಧರ್ಮಜ್ಞನೇ ! ಧನೇಶ್ವರನೇ ! ನಿನ್ನ ಈ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ಮೊದಲು ನಾನು ಈ ವ್ರತವನ್ನು ಮಾಡಿದ್ದೆನು. ಈಗ ನೀನು ಮಾಡಿರುವೆ. ನಮ್ಮಿಬ್ಬರನ್ನು ಬಿಟ್ಟರೆ ಮೂರನೆಯವನು ಇಂತಹ ವ್ರತವನ್ನು ಮಾಡಲಾರನು. ಈ ವ್ರತವು ಅತ್ಯಂತ ದುಷ್ಕರವಾದುದು. ಇದರ ಪ್ರವರ್ತಕನು ನಾನೇ ಆಗಿದ್ದೇನೆ. ನೀನು ನನ್ನ ಈ ತಪಸ್ಸಿನಿಂದ ನನ್ನನ್ನು ಗೆದ್ದಿರುವೆ. ನೀನು ನನಗೆ ಮಿತ್ರನಾಗು. ನನ್ನೊಡನೆ ಗೆಳೆತನವು ನಿನಗೆ ರುಚಿಸುವಂತಾಗಲಿ. ಪಾರ್ವತೀದೇವಿಯ ಅನುಪಮವಾದ ರೂಪದ ಮೇಲೆ ದೃಷ್ಟಿಯಿಟ್ಟ ಪರಿಣಾಮವಾಗಿ ಅವಳ ಪ್ರಭಾವದಿಂದ ನಿನ್ನ ಎಡಗಣ್ಣು ಸುಟ್ಟುಹೋಯಿತು. ಬಲದ ಕಣ್ಣೂ ಕಂದುಹಳದೀ ಬಣ್ಣವಾಯಿತು. ಆದುದರಿಂದ ನಿನಗೆ ' ಏಕಾಕ್ಷಪಿಙ್ಗಲೀ' ಎಂಬ ಹೆಸರು ಶಾಶ್ವತವಾಗಿರುತ್ತದೆ. ' ಹೀಗೆ ನಾನು ಶಂಕರನ ಗೆಳೆತನವನ್ನೂ ಮತ್ತು ಅನುಜ್ಞೆಯನ್ನೂ ಪಡೆದು ಹಿಂದಿರುಗಿದೆನು. ಆ ಸಮಯದಲ್ಲಿಯೇ ನಾನು ನಿನ್ನ ಪಾಪಪೂರ್ಣವಾದ ಸಂಕಲ್ಪವೇನೆಂಬುದನ್ನು ತಿಳಿದುಕೊಂಡೆನು. ರಾಕ್ಷಸಾಧಿಪನೇ ! ಈಗಲಾದರೂ ನೀನು ಕುಲಕ್ಕೆ ಕಳಂಕವನ್ನುಂಟುಮಾಡುವ ಪಾಪಕರ್ಮಗಳ ಸಂಬಂಧದಿಂದ ದೂರವಿರು. ಈಗಾಗಲೇ ದೇವತೆಗಳೂ ಮತ್ತು ಋಷಿಗಳೂ ನಿನ್ನನ್ನು ವಧಿಸುವ ಉಪಾಯವನ್ನು ಯೋಚಿಸುತ್ತಿದ್ದಾರೆ. ''

ಕುಬೇರನ ದೂತನು ಹೀಗೆ ಹೇಳಲು ದಶಗ್ರೀವನು ಪರಮಕ್ರುದ್ಧನಾದನು. ಅವನ ಕಣ್ಣುಗಳು ಕೆಂಪಾದುವು. ಕೈಗಳನ್ನುಜ್ಜಿಕೊಂಡು ಹಲ್ಲುಗಳನ್ನು ಕಟ– ಕಟಾಯಿಸುತ್ತಾ ದೂತನಿಗೆ ಹೇಳಿದನು.

'' ದೂತ! ನೀನೇನು ಹೇಳಿದೆಯೋ ಅದರ ಅಭಿಪ್ರಾಯವನ್ನು ನಾನು ತಿಳಿದುಕೊಂಡೆನು. ಇಂತಹ ಕಟುವಾದ ಮಾತನ್ನು ಹೇಳಿದ ನೀನೂ ಜೀವಿಸಿರಲಾರೆ. ಹೇಳಿ ಕಳುಹಿಸಿದ ಆ ನಮ್ಮ ಅಣ್ಣನೂ ಜೀವಿಸಿರಲಾರನು ಧನರಕ್ಷಕನಾದ ಕುಬೇರನು ಕಳುಹಿಸಿರುವ ಸಂದೇಶವು ನನ್ನ ಹಿತಕ್ಕಾಗಿ ಅಲ್ಲ. ಆ ಮೂಢನು ನನಗೆ ಹಿತವನ್ನು ಹೇಳುವ ವ್ಯಾಜದಿಂದ ನನ್ನನ್ನು ಬೆದರಿಸುವ ಸಲುವಾಗಿ ಮಹೇಶ್ವರನೊಡನೆ ತನಗೆ ಗೆಳೆತನವು ಪ್ರಾಪ್ತವಾಗಿರುವುದೆಂಬು ದನ್ನು ಹೇಳಿ ಕಳುಹಿಸಿದ್ದಾನೆ. ಮೂಢದೂತನೇ ! ನೀನು ಹೇಳಿರುವ ಈ ಮಾತುಗಳನ್ನು ನಾನು ಖಂಡಿತವಾಗಿಯೂ ಕ್ಷಮಿಸಲಾರೆನು. ಕುಬೇರನು ನನ್ನ ಅಗ್ರಜನಾಗಿರುವನೆಂದೂ, ಆದುದರಿಂದ ಅವನನ್ನು ವಧಿಸುವುದು ಉಚಿತವಲ್ಲವೆಂದೂ ಭಾವಿಸಿ ನಾನು ಇದುವರೆಗೂ ಸುಮ್ಮನಿದ್ದೆನು. ಆದರೆ ಇಂದು ನಿನ್ನ ಮೂಲಕವಾಗಿ ಅವನ ಮಾತನ್ನು ಕೇಳಿದನಂತರ ನಾನು ನನ್ನ ಭುಜಬಲವನ್ನೇ ಆಶ್ರಯಿಸಿ ಮೂರು ಲೋಕಗಳನ್ನೂ ಗೆಲ್ಲುವ ನಿಶ್ಚಯಮಾಡಿ ಬಿಡುತ್ತೇನೆ. ಇದೇ ಮುಹೂರ್ತದಲ್ಲಿ ನಾನು ಅವನೊಬ್ಬನು ಮಾಡಿರುವ ಅಪರಾಧಕ್ಕಾಗಿ ನಾಲ್ವರು ಲೋಕಪಾಲಕರನ್ನೂ ಯಮಲೋಕಕ್ಕೆ ಕಳುಹಿಸಿ ಬಿಡುತ್ತೇನೆ. ''

ಹೀಗೆ ಹೇಳುತ್ತಲೇ ಲಂಕೇಶನು ಕುಬೇರನ ದೂತನನ್ನು ಕತ್ತಿಯಿಂದ ಕತ್ತರಿಸಿ ಅವನ ದೇಹವನ್ನು ದುರಾತ್ಮರಾದ ರಾಕ್ಷಸರಿಗೆ ಭಕ್ಷಿಸಲು ಕೊಟ್ಟನು. ಅನಂತರ ಮೂರು ಲೋಕಗಳನ್ನೂ ಜಯಿಸುವ ಉತ್ಕಟೇಚ್ಛೆಯಿಂದ ಕೂಡಿದ್ದ ರಾವಣನು ಬ್ರಾಹ್ಮಣರಿಂದ ಮಂಗಳಾಶಾಸನವನ್ನು ಮಾಡಿಸಿ ಕೊಂಡು ರಥವನ್ನೇರಿ ಕುಬೇರನ ನಿವಾಸಸ್ಥಾನಕ್ಕೆ ತೆರಳಿದನು.

13ನೆಯ ಸರ್ಗವು ಮುಗಿಯಿತು.

ಯಕ್ಷರೊಡನೆ ರಾವಣನ ಸೈನಿಕರ ಯುದ್ಧ : ಯಕ್ಷರ ಪರಾಜಯ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ತತಃ ಚ ಸಚಿವೈಃ ಸಾರ್ಧಂ ಷಡ್ಭಿರ್ನಿತ್ಯಬಲೋದ್ಧತಃ ।
ಮಹೋದರಪ್ರಹಸ್ತಾಭ್ಯಾಂ ಮಾರೀಚಶುಕಸಾರಣೈಃ ॥1॥

ಧೂಮ್ರಾಕ್ಷೇಣ ಚ ವೀರೇಣ ನಿತ್ಯಂ ಸಮರಗರ್ಧಿನಾ ।
ವೃತಃ ಸಂಪ್ರಯಯೌ ಶ್ರೀಮಾನ್ ಕ್ರೋಧಾಲ್ಲೋಕಾನ್ದಹನ್ನಿವ ॥2॥

'' ರಘುನಂದನನೇ ! ವರದ ಬಲದಿಂದಲೂ ಬಾಹುಬಲದಿಂದಲೂ ಮದೋನ್ಮತ್ತನಾಗಿದ್ದ ದಶಕಂಠನು ಮಹೋದರ, ಪ್ರಹಸ್ತ, ಮಾರೀಚ, ಶುಕ, ಸಾರಣ, ಯುದ್ಧಪ್ರಿಯನಾದ ಧೂಮ್ರಾಕ್ಷ- ಈ ಆರು ಮಂದಿ ಮಂತ್ರಿಗಳಿಂದ ಪರಿವೃತನಾಗಿ ಕ್ರೋಧದಿಂದಲೇ ಲೋಕಗಳೆಲ್ಲವನ್ನೂ ಸುಟ್ಟುಬಿಡುವನೋ ಎಂಬಂತೆ ಲಂಕಾಪಟ್ಟಣದಿಂದ ಹೊರಟನು.

ಆತನು ಹಲವಾರು ನಗರಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ, ವನಗಳನ್ನೂ ಮತ್ತು ಉಪವನಗಳನ್ನೂ ದಾಟಿ ಮುಹೂರ್ತಮಾತ್ರದಲ್ಲಿ ಅನುಯಾಯಿಗಳೊಡನೆ ಕೈಲಾಸಪರ್ವತವನ್ನು ಸೇರಿದನು. ದುರಾತ್ಮನಾದ ರಾಕ್ಷಸೇಂದ್ರನಾದ ರಾವಣನು ಯುದ್ಧಮಾಡುವ ಉತ್ಸಾಹದಿಂದ ಮಂತ್ರಿಗಳೊಡನೆ ಕೈಲಾಸಪರ್ವತಕ್ಕೆ ಬಂದಿರುವನೆಂಬ ವಾರ್ತೆಯು ಅಲ್ಲಿದ್ದ ಯಕ್ಷನಾಯಕರಿಗೆ ತಿಳಿಯಿತು. ಆದರೆ ಅವರು ರಾವಣನನ್ನು ಎದುರಿಸುವಷ್ಟು ಸಮರ್ಥರಾಗಿರಲಿಲ್ಲ. ಮೇಲಾಗಿ ಬಂದಿದ್ದವನು ತಮ್ಮ ರಾಜನಾದ ಕುಬೇರನ ತಮ್ಮನೇ ಆಗಿದ್ದನು. ಈ ವಿಷಯವನ್ನೂ ಅರಿತಿದ್ದ ಯಕ್ಷರು ಕುಬೇರನ ಬಳಿಗೆ ಧಾವಿಸಿದರು. ರಾವಣೇಶ್ವರನ ಅಭಿಪ್ರಾಯವನ್ನು ಕುಬೇರನಿಗೆ ತಿಳಿಸಿದರು. ಒಡನೆಯೇ ಕುಬೇರನು ಯುದ್ಧಕ್ಕೆ ಸಿದ್ಧರಾಗುವಂತೆ ಯಕ್ಷರಿಗೆ ಆಜ್ಞಾಪಿಸಿದನು. ಯಕ್ಷರು ಪರಮಹರ್ಷಿತರಾಗಿ ಕುಬೇರನ ಜೊತೆಯಲ್ಲಿ ಯುದ್ಧಕ್ಕೆ ಹೊರಟರು. ಯಕ್ಷರಾಜನ ಸೈನಿಕರ ದರ್ಪವು ಪರ್ವಕಾಲದ

ಸಮುದ್ರದಂತೆ ವೃದ್ಧಿಸುತ್ತಿದ್ದಿತು. ಅದರ ವೇಗದಿಂದ ಪರ್ವತವೇ ಅಳ್ಳಾಡುತ್ತಿದೆಯೋ ಎಂಬಂತೆ ಕಾಣುತ್ತಿದ್ದಿತು. ಅನಂತರ ಯಕ್ಷರಿಗೂ ರಾಕ್ಷಸರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಯಕ್ಷಸೈನಿಕರ ಸತತಪ್ರಹಾರದಿಂದ ರಾವಣನ ಮಂತ್ರಿಗಳು ವ್ಯಥಿತರಾದರು. ತನ್ನ ಸೈನಿಕರಿಗಾದ ದುರ್ದೆಸೆಯನ್ನು ಕಂಡು ದಶಗ್ರೀವನು ಹರ್ಷೋತ್ಸಾಹದಾಯಕವಾದ ಗರ್ಜನೆಗಳನ್ನು ಮಾಡುತ್ತಾ ಸೈನಿಕರನ್ನು ಹುರಿದುಂಬಿಸುತ್ತಾ ರೋಷಪೂರ್ವಕವಾಗಿ ಯಕ್ಷರ ಮೇಲೆ ನುಗ್ಗಿದನು. ನಿಶ್ಚಯವಾಗಿಯೂ ರಾವಣನ ಸಚಿವರು ಭಯಂಕರಪರಾಕ್ರಮಿಗಳಾಗಿದ್ದರು. ಒಬ್ಬೊಬ್ಬ ಸಚಿವನೂ ಒಂದು ಸಾವಿರ ಯಕ್ಷರನ್ನು ಎದುರಿಸಿ ಯುದ್ಧ ಮಾಡುತ್ತಿದ್ದನು. ಆ ಸಮಯದಲ್ಲಿ ಗದೆಗಳಿಂದಲೂ, ಮುಸಲಗಳಿಂದಲೂ, ಕತ್ತಿಗಳಿಂದಲೂ, ಶಕ್ತ್ಯಾಯುಧಗಳಿಂದಲೂ ಪ್ರಹರಿಸಲ್ಪಡುತ್ತಿದ್ದ ರಾವಣನು ಯಾವುದನ್ನೂ ಲೆಕ್ಕಿಸದೇ ಯಕ್ಷಸೈನ್ಯದೊಳಗೆ ನುಗ್ಗಿಹೋಗುತ್ತಿದ್ದನು. ಮಳೆಗರೆಯುವ ಮೇಘಗಳ ಜಲಧಾರೆಗಳಿಂದ ದಾರಿಹೋಕರು ತಡೆಯಲ್ಪಡುವಂತೆ– ಯಕ್ಷರು ರಾವಣನನ್ನು ತಡೆಯುತ್ತಿದ್ದರು ಮತ್ತು ಉಸಿರಾಡಲಾಗದಂತೆ ಯಕ್ಷ ಸೈನಿಕರು ಅವನನ್ನು ನಾನಾಪ್ರಹಾರಗಳಿಂದ ಸತತವಾಗಿ ಪ್ರಹರಿಸುತ್ತಿದ್ದರು. ಮೇಘಗಳಿಂದ ಸುರಿಸಲ್ಪಡುವ ನೂರಾರು ಸಾವಿರಾರು ಜಲಧಾರೆಗಳಿಂದಲೂ ಪರ್ವತವು ವಿಚಲಿತವಾಗದಂತೆ– ಯಕ್ಷರ ಸತತವಾದ ಶಸ್ತ್ರಪ್ರಹಾರಗಳಿಂದಲೂ ರಾವಣನು ವಿಚಲಿತನಾಗಲಿಲ್ಲ, ಅವನಿಗೆ ಅದರಿಂದ ವ್ಯಥೆಯೂ ಉಂಟಾಗ ಲಿಲ್ಲ. ಮಹಾಕಾಯನಾದ ರಾವಣನು ಕಾಲದಂಡಕ್ಕೆ ಸಮಾನವಾಗಿದ್ದ ಭಯಂಕರವಾದ ಗದೆಯನ್ನೆತ್ತಿಕೊಂಡು ಯಕ್ಷರ ಸೈನ್ಯದೊಳಗೆ ನುಗ್ಗಿ ಕ್ಷಣಮಾತ್ರದಲ್ಲಿ ಯಕ್ಷಸೈನಿಕರನ್ನು ಯಮಲೋಕಕ್ಕೆ ಕಳುಹಿಸುತ್ತಿದ್ದನು. ಗಾಳಿಯಿಂದ ಪ್ರಜ್ವಲಿಸುವ ಅಗ್ನಿಯು ವಿಶಾಲವಾದ ಒಣಮರಗಳ ಕಾಡನ್ನೂ ಒಣಗಿದ ಕಟ್ಟಿಗೆಯ ರಾಶಿಗಳನ್ನೂ ಭಸ್ಮ ಮಾಡಿ ಬಿಡುವಂತೆ – ವ್ಯಾಕುಲ ಗೊಂಡಿದ್ದ ಯಕ್ಷಸೈನಿಕರನ್ನು ರಾವಣನು ಸುಟ್ಟು ಭಸ್ಮ ಮಾಡಿದನು. ಬಿರುಗಾಳಿಗಳಿಂದ ಮೋಡಗಳು ಚದುರಿಸಲ್ಪಡುವಂತೆ ಮಹಾಮಾತ್ಯರಾದ ಮಹೋದರ –ಶುಕ–ಸಾರಣರಿಂದ ಯಕ್ಷರು ಧ್ವಂಸಮಾಡಲ್ಪಟ್ಟು ಅಲ್ಪ ಸಂಖ್ಯಾತರಾಗಿ ಉಳಿದುಕೊಂಡರು. ಅಪಾರವಾಗಿದ್ದ ಯಕ್ಷಸೈನ್ಯದಲ್ಲಿ ಅಳಿ

ದುಳಿದವರ ಸಂಖ್ಯೆಯು ಬಹಳ ಕಡಿಮೆಯಾಗಿದ್ದಿತು. ಕೆಲವರು ಶಸ್ತ್ರಗಳ ಪ್ರಹಾರಗಳಿಂದ ಕೈ –ಕಾಲುಗಳನ್ನು ಕಳೆದುಕೊಂಡು ರಣಾಂಗಣದಲ್ಲಿ ಬಿದ್ದಿದ್ದರು. ಕೆಲವರು ಸೈನಿಕರು ಕುಪಿತರಾಗಿ ಅವುಡುಗಚ್ಚುತ್ತಿದ್ದರು. ಕೆಲವರು ಬಹಳವಾಗಿ ಆಯಾಸಗೊಂಡು ಆಶ್ರಯಕ್ಕಾಗಿ ಒಬ್ಬರು ಮತ್ತೊಬ್ಬರನ್ನು ತಬ್ಬಿಕೊಂಡಿದ್ದರು. ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡಿದ್ದ ಕೆಲವರು ಯಕ್ಷ ಸೈನಿಕರು ನದಿಯ ಪ್ರವಾಹದಿಂದ ತೀರಪ್ರದೇಶವು ಕೊಚ್ಚಿಹೋಗುವಂತೆ–ಕುಸಿದು ಬೀಳುತ್ತಿದ್ದರು. ಯುದ್ಧಮಾಡುತ್ತಾ ಹತರಾಗಿ ಸ್ವರ್ಗಕ್ಕೆ ಹೋಗುತ್ತಿದ್ದ ಯಕ್ಷರಿಂದಲೂ ಯುದ್ಧವನ್ನು ನೋಡುತ್ತಿದ್ದ ಋಷಿಗಳ ಸಮೂಹಗಳಿಂದಲೂ ತುಂಬಿಹೋಗಿದ್ದ ಆಕಾಶವು ಅತ್ಯಂತ ನಿಬಿಡವಾಗಿದ್ದಿತು. ಮಹಾಬಾಹುವಾದ ಧನಾಧ್ಯಕ್ಷನು ತಾನು ಕಳುಹಿಸಿದ್ದ ಯಕ್ಷ ಸೈನಿಕರೆಲ್ಲರೂ ಭಗ್ನರಾದುದನ್ನು ಕಂಡು ಮಹಾಬಲರಾದ ಇತರ ಯಕ್ಷರಾಜರನ್ನು ರಾವಣನೊಡನೆ ಯುದ್ಧ ಮಾಡಲು ಕಳುಹಿಸಿಕೊಟ್ಟನು. ಕುಬೇರನ ಆಜ್ಞೆಯಂತೆ ಸಂಯೋಧಕಂಟಕನೆಂಬ ಯಕ್ಷನು ವಿಶಾಲವಾದ ಸೈನ್ಯದೊಡನೆಯೂ ಆನೆ, ಕುದುರೆ ಮುಂತಾದ ವಾಹನಗಳೊಡನೆಯೂ ರಾವಣನೊಡನೆ ಯುದ್ಧ ಮಾಡುವ ಸಲುವಾಗಿ ಆಗಮಿಸಿದನು. ಅವನು ಯುದ್ಧಕ್ಕೆ ಬರುತ್ತಿದ್ದಂತೆಯೇ ಮಹಾವಿಷ್ಣುವಿನಂತೆ ಮಾರೀಚರಾಕ್ಷಸನನ್ನು ಚಕ್ರದಿಂದ ಪ್ರಹರಿಸಿದನು. ಆದರಿಂದ ಗಾಯಗೊಂಡ ಮಾರೀಚನು ಪುಣ್ಯವು ಕ್ಷೀಣಿಸಿದ ನಂತರ ಸ್ವರ್ಗಲೋಕದಲ್ಲಿರುವ ಗ್ರಹವು ಭೂಮಿಗೆ ಬೀಳುವಂತೆ ಕೈಲಾಸ ಪರ್ವತದಿಂದ ಕೆಳಗುರುಳಿದನು. ಮುಹೂರ್ತಾನಂತರ ಪುನಃ ಎಚ್ಚರಗೊಂಡ ಮಾರೀಚನು ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಯಕ್ಷರಾಜನೊಡನೆ ಯುದ್ಧ ಮಾಡಲು ಉಪಕ್ರಮಿಸಿದನು. ಯಕ್ಷನು ಮಾರೀಚನ ಪ್ರಹಾರವನ್ನು ಸಹಿಸಿಕೊಳ್ಳಲಾರದೇ ಪಲಾಯನಮಾಡಿದನು.

ಅನಂತರ ರಾವಣನು ಸುವರ್ಣದಿಂದ ಚಿತ್ರಿತವಾಗಿ ಮಾಡಲ್ಪಟ್ಟಿದ್ದ ವೈಡೂರ್ಯ – ರಜತಗಳಿಂದಲೂ ಸಮಲಂಕೃತವಾಗಿದ್ದ ಮಹಾದ್ವಾರವನ್ನು ಪ್ರವೇಶಿಸಿದನು. ಅದು ಕಾವಲುಗಾರರ ಗಡಿಪ್ರದೇಶವಾಗಿತ್ತು. ಆ ಮಹಾದ್ವಾರದಲ್ಲಿ ದ್ವಾರಪಾಲಕರು ಪಹರೆಕಾಯುತ್ತಿದ್ದರು. ಹಾಗೆ ಪ್ರವೇಶಿಸುತ್ತಿದ್ದ ದಶಗ್ರೀವನನ್ನು ಸೂರ್ಯಭಾನು ಎಂಬ ಹೆಸರಿನ ದ್ವಾರಪಾಲಕನು

ತಡೆದು ನಿಲ್ಲಿಸಿದನು. ದ್ವಾರಪಾಲಕನಿಂದ ತಡೆಯಲ್ಪಡುತ್ತಿದ್ದರೂ ರಾಕ್ಷಸ ರಾಜನು ಮುನ್ನುಗ್ಗಿ ಹೋಗುತ್ತಲೇ ಇದ್ದನು. ದ್ವಾರಪಾಲಕನು ಕುಪಿತನಾಗಿ ಹೊರಬಾಗಿಲನ್ನೇ ಕಿತ್ತು ಅದರಿಂದಲೇ ರಾವಣನನ್ನು ಪ್ರಹರಿಸಿದನು. ಪರ್ವತದಿಂದ ಗೈರಿಕಾದಿಧಾತುಗಳು ಒಸರುವಂತೆ ರಾವಣನ ಶರೀರದಿಂದ ರಕ್ತವು ಪ್ರವಹಿಸತೊಡಗಿತು. ಪರ್ವತಶಿಖರದಂತಿದ್ದ ಬಾಗಿಲಿನಿಂದ ಪ್ರಹರಿಸ ಲ್ಪಟ್ಟರೂ ರಾವಣನಿಗೆ ಬ್ರಹ್ಮನ ವರದಾನದ ಕಾರಣದಿಂದ ಗಾಯವಾಗಲೇ ಇಲ್ಲ. ರಾವಣನು ದ್ವಾರಪಾಲಕನ ಕೈಯಲ್ಲಿದ್ದ ದ್ವಾರವನ್ನೇ ಕಿತ್ತುಕೊಂಡು ಅದರಿಂದಲೇ ಯಕ್ಷನನ್ನು ಪ್ರಹರಿಸಿದನು. ಮರುಕ್ಷಣದಲ್ಲಿಯೇ ಯಕ್ಷನು ಸತ್ತು ಚೂರು–ಚೂರಾಗಿ ಕಣ್ಣಿಗೆ ಕಾಣದಂತಾದನು. ಬಳಿಕ ಯಕ್ಷರು ರಾವಣರಾಕ್ಷಸನ ಪರಾಕ್ರಮವನ್ನು ಕಂಡು ಪಲಾಯನಮಾಡಿದರು. ಭಯ ಪೀಡಿತರಾಗಿದ್ದ ಕೆಲವರು ನದಿಯಲ್ಲಿ ಈಜಿಕೊಂಡು ಹೋದರು. ಕೆಲವರು ಗುಹೆಗಳಲ್ಲಿ ಅಡಗಿಕೊಂಡರು. ಕೆಲವರು ತಮ್ಮಲ್ಲಿದ್ದ ಆಯುಧಗಳೆಲ್ಲವನ್ನೂ ಬಿಸುಟರು. ಅಳಿದುಳಿದಿದ್ದ ಎಲ್ಲ ಯಕ್ಷರೂ ಬಳಲಿಕೆಯಿಂದ ಕಾಂತಿಹೀನ ರಾಗಿದ್ದರು.''

14ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **15ನೆಯ ಸರ್ಗ**

ಮಣಿಭದ್ರ ಮತ್ತು ಕುಬೇರರ ಪರಾಜಯ : ರಾವಣನಿಂದ ಪುಷ್ಪಕವಿಮಾನದ ಹರಣ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ.

ತತಸ್ತಾನ್ ಲಕ್ಷ್ಯ ವಿತ್ರಸ್ತಾನ್ ಯಕ್ಷೇನ್ದ್ರಾಂಶ್ಚ ಸಹಸ್ರಶಃ ।
ಧನಾಧ್ಯಕ್ಷೋ ಮಹಾಯಕ್ಷಂ ಮಣಿಭದ್ರಮಥಾಬ್ರವೀತ್ ॥1॥

'' ರಾಘವ ! ಧನಾಧ್ಯಕ್ಷನಾದ ಕುಬೇರನು ತನ್ನ ಕಡೆಯ ಸಾವಿರಾರು ಮಂದಿ ಯಕ್ಷಸೈನಿಕರು ರಾವಣನನ್ನು ಎದುರಿಸಿ ಯುದ್ಧಮಾಡಲಾಗದೇ ಪಲಾಯನಮಾಡುತ್ತಿರುವುದನ್ನು ನೋಡಿ ಮಹಾಯಕ್ಷನಾದ ಮಣಿಭದ್ರನಿಗೆ ಹೇಳಿದನು :

'' ಯಕ್ಷಶ್ರೇಷ್ಠನೇ! ಪಾಪಾತ್ಮನಾದ ದುರಾಚಾರಿಯಾದ ರಾವಣ ನನ್ನು ನೀನು ಯುದ್ಧದಲ್ಲಿ ಸಂಹರಿಸಿ ಯುದ್ಧಶೋಭಿಗಳಾದ ವೀರಯಕ್ಷರಿಗೆ ನೀನು ಶರಣ್ಯನಾಗು.''

ಕುಬೇರನು ಹೀಗೆ ಹೇಳಲು ಮಹಾಬಾಹುವಾದ, ಸುದುರ್ಜಯನಾದ ಮಣಿಭದ್ರನು ನಾಲ್ಕು ಸಾವಿರ ಯಕ್ಷಸೈನಿಕರೊಡನೆ ರಾವಣನನ್ನೆದುರಿಸಿ ಯುದ್ಧ ಮಾಡತೊಡಗಿದನು. ಆ ಸಮಯದಲ್ಲಿ ಯಕ್ಷಯೋಧರು ಗದಾ –ಮುಸಲ–ಪ್ರಾಸ – ಶಕ್ತಿ– ತೋಮರ –ಮುದ್ಗರಾಯುಧಗಳಿಂದ ರಾಕ್ಷಸಸೈನಿಕ ರನ್ನು ಪ್ರಹರಿಸುತ್ತಾ ಅವರನ್ನು ಆಕ್ರಮಿಸಿದರು. ಮಹಾಘೋರವಾಗಿ ಯುದ್ಧ ಮಾಡುತ್ತಿದ್ದ ಅವರು ಗಿಡಗಪಕ್ಷಿಗಳಂತೆ ಬಹಳ ವೇಗವಾಗಿ ಸಮರಾಂಗಣದ ಸುತ್ತಲೂ ಸಂಚರಿಸುತ್ತಿದ್ದರು. ಯಕ್ಷಸೈನಿಕರು ಮಣಿಭದ್ರನ ಬಳಿಗೆ ಬಂದು ಹೇಳುತ್ತಿದ್ದರು: **'ಬಾಢಂ ಪ್ರಯಚ್ಛ'** 'ಹಾಗೆಯೇ ಆಗಲಿ. ನಾವು ರಾವಣನೊಡನೆ ಯುದ್ಧಮಾಡಲು ಸಿದ್ಧರಾಗಿ ಬಂದಿದ್ದೇವೆ. ಅನುಮತಿಯನ್ನು ನೀಡು ' **' ನೇಚ್ಛಾಮಿ** – ರಾವಣನನ್ನು ಸಂಹರಿಸದೇ ನಾನು ಯುದ್ಧದಿಂದ ಹಿಂದಿರುಗಲು ಇಷ್ಟಪಡುವುದಿಲ್ಲ. ' **'ದೀಯತಾಂ** –ನನಗೆ ಬೇಕಾಗುವ ಆಯುಧಗಳನ್ನು ಕೊಡಿರಿ ' – ಎಂದು ಹೇಳುತ್ತಿದ್ದರು.

ಯಕ್ಷ–ರಾಕ್ಷಸರ ಭಯಂಕರವಾದ ಆ ಮಹಾಯುದ್ಧವನ್ನು ನೋಡಿ ದೇವ–ಗಂಧರ್ವರೂ, ಋಷಿಗಳೂ, ಬ್ರಹ್ಮವಾದಿಗಳೂ ವಿಸ್ಮಯಗೊಂಡರು. ಪ್ರಹಸ್ತನು ಯುದ್ಧದಲ್ಲಿ ಸಾವಿರ ಯಕ್ಷಸೈನಿಕರನ್ನು ಸಂಹರಿಸಿದನು. ಮಹೋದರನು ಪ್ರಶಂಸನೀಯರಾದ ಮತ್ತೊಂದು ಸಾವಿರ ಯಕ್ಷರನ್ನು ಸಂಹರಿಸಿದನು. ಯುದ್ಧೋತ್ಸಾಹಿಯಾದ ಕ್ರುದ್ಧನಾದ ಮಾರೀಚನು ಎವೆಯಿಕ್ಕುವುದರೊಳಗಾಗಿ ಉಳಿದ ಎರಡು ಸಾವಿರ ಯಕ್ಷಸೈನಿಕರನ್ನು ಸಂಹರಿಸಿದನು.

ಕ್ವ ಚ ಯಕ್ಷಾರ್ಜವಂ ಯುದ್ಧಂ ಕ್ವಚ ಮಾಯಾಬಲಾಶ್ರಯಮ್ ।
ರಕ್ಷಸಾಂ ಪುರುಷವ್ಯಾಘ್ರ ತೇನ ತೇಽಭ್ಯಧಿಕಾ ಯುಧಿ ॥9॥

ರಾಘವ! ಯಕ್ಷರ ಋಜುಮಾರ್ಗದ ಯುದ್ಧವೆಲ್ಲಿ? ಮಾಯಾಬಲ ವನ್ನೇ ಆಶ್ರಯಿಸಿದ್ದ ರಾಕ್ಷಸರ ಕಪಟಯುದ್ಧವೆಲ್ಲಿ? ರಾಕ್ಷಸರು ವಂಚನೆಯ

ಮಾಯಾಯುದ್ಧವನ್ನು ಆಶ್ರಯಿಸಿದ್ದುದರಿಂದಲೇ ಯಕ್ಷರಿಗಿಂತಲೂ ಮೇಲಾದರು.

ಯಕ್ಷ–ರಾಕ್ಷಸರಿಗೆ ನಡೆಯುತ್ತಿದ್ದ ಆ ಮಹಾಯುದ್ಧದಲ್ಲಿ ಧೂಮ್ರಾಕ್ಷನು ಕ್ರುದ್ಧನಾಗಿ ಮಣಿಭದ್ರನನ್ನು ಆಕ್ರಮಿಸಿ ಮುಸಲಾಯುಧದಿಂದ ಅವನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಆದರೆ ಅದರಿಂದ ಮಣಿಭದ್ರನು ವಿಚಲಿತ ನಾಗಲಿಲ್ಲ. ಕುಪಿತನಾದ ಮಣಿಭದ್ರನು ಗದೆಯನ್ನೆತ್ತಿ ತಿರುಗಿಸುತ್ತಾ ಧೂಮ್ರಾಕ್ಷನ ತಲೆಯನ್ನು ಗಟ್ಟಿಯಾಗಿ ಪ್ರಹರಿಸಿದನು. ಆ ಮಹಾಪ್ರಹಾರ ದಿಂದ ಧೂಮ್ರಾಕ್ಷನು ವ್ಯಾಕುಲನಾಗಿ ಕೆಳಗೆ ಬಿದ್ದನು. ಮಣಿಭದ್ರನು ಧೂಮ್ರಾಕ್ಷನನ್ನು ಗದೆಯಿಂದ ಪ್ರಹರಿಸಿದುದನ್ನೂ ಮತ್ತು ಅದರಿಂದ ಧೂಮ್ರಾಕ್ಷನು ರಕ್ತದಿಂದ ತೋಯ್ದು ಕೆಳಗೆ ಬಿದ್ದುದನ್ನೂ ನೋಡಿ ದಶಾನನನೇ ಮಣಿಭದ್ರನನ್ನು ಆಕ್ರಮಿಸಿದನು. ಯಕ್ಷಶ್ರೇಷ್ಠನಾದ ಮಣಿಭದ್ರನು ಪರಮಕ್ರುದ್ಧನಾಗಿ ತನ್ನ ಮೇಲೆ ಬೀಳಲು ಬರುತ್ತಿದ್ದ ರಾವಣನನ್ನು ಮೂರು ಶಕ್ತ್ಯಾಯುಧಗಳಿಂದ ಏಕಕಾಲದಲ್ಲಿ ಪ್ರಹರಿಸಿದನು. ಮಣಿಭದ್ರ ನಿಂದ ಪೆಟ್ಟುತಿಂದ ರಾವಣನು ಅವನ ಮುಕುಟದಲ್ಲಿ ಪ್ರಹರಿಸಿದನು. ರಾವಣನ ಆ ಪ್ರಹಾರದಿಂದ ಮಣಿಭದ್ರನ ಕಿರೀಟವು ಪಕ್ಕಕ್ಕೆ ಸರಿದು ಓರೆ ಯಾಯಿತು. ಅಲ್ಲಿಂದ ಮುಂದೆ ಆ ಯಕ್ಷರಾಜನು ‘ ಪಾರ್ಶ್ವಮೌಲಿ ’ ಎಂಬ ಹೆಸರಿನಿಂದಲೇ ಪ್ರಸಿದ್ಧನಾದನು. ಮಣಿಭದ್ರನು ಕೂಡ ಪರಾಜಿತನಾಗಿ ಹಿಂದಿರುಗಲು ಕೈಲಾಸಪರ್ವತದಲ್ಲಿ ರಾಕ್ಷಸರ ಮಹಾಗರ್ಜನೆಯು ಸರ್ವತ್ರ ಪ್ರತಿಧ್ವನಿಸಿತು. ಆ ಸಮಯದಲ್ಲಿ ಗದಾಧರನಾದ ಕುಬೇರನು ದೂರದಲ್ಲಿ ಕಾಣಿಸಿಕೊಂಡನು. ಅವನ ಜೊತೆಯಲ್ಲಿ ಶುಕ್ರ–ಪ್ರೌಷ್ಠಪದರೆಂಬ ಮಂತ್ರಿ ಗಳೂ, ಪದ್ಮ–ಶಂಖರೆಂಬ ನಿಧಿಯ ಅಧಿದೇವತೆಗಳೂ ಇದ್ದರು. ವಿಶ್ರವಸ ಮುನಿಯ ಶಾಪದಿಂದ ಕ್ರೂರಪ್ರಕೃತಿಯವನಾಗಿದ್ದ ಕಾರಣ ರಾವಣನಿಗೆ ಗುರುಜನರನ್ನು ಹೇಗೆ ಗೌರವಿಸಬೇಕೆಂಬ ವಿವೇಚನೆಯೂ ಇರಲಿಲ್ಲ. ತಮ್ಮ ನಾದ ದಶಾನನನು ಯುದ್ಧಸನ್ನದ್ಧನಾಗಿರುವುದನ್ನು ಕಂಡು ಕುಬೇರನು ಪಿತಾಮಹನ ಕುಲಕ್ಕೆ ಯೋಗ್ಯವಾದ ಈ ಮಾತುಗಳನ್ನು ಹೇಳಿದನು:

‘‘ ದುರ್ಬುದ್ಧಿಯವನೇ ! ದಶಗ್ರೀವ ! ಇಂತಹ ಕುತ್ಸಿತವಾದ ಕಾರ್ಯ

ಗಳನ್ನು ಮಾಡಬೇಡವೆಂದು ನಾನೆಷ್ಟೇ ತಡೆಯುತ್ತಿದ್ದರೂ ನೀನದನ್ನು ಲಕ್ಷಿಸುತ್ತಿಲ್ಲ. ಈ ನಿನ್ನ ದುಷ್ಕರ್ಮಗಳಿಗೆ ಅನುರೂಪವಾದ ಫಲವನ್ನು ಪಡೆದು ನರಕಕ್ಕೆ ಹೋದನಂತರವೇ ನನ್ನ ಮಾತನ್ನು ನೀನು ಅರ್ಥಮಾಡಿಕೊಳ್ಳುವೆ.

ಯೋ ಹಿ ಮೋಹಾದ್ವಿಷಂ ಪೀತ್ವಾ ನಾವಗಚ್ಛತಿ ದುರ್ಮತಿಃ ।
ಸ ತಸ್ಯ ಪರಿಣಾಮಾನ್ತೇ ಜಾನೀತೇ ಕರ್ಮಣಃ ಫಲಮ್ ॥19॥

ಯಾವ ದುರ್ಬುದ್ಧಿಯ ಮನುಷ್ಯನು ವಿಷವನ್ನೇ ಕುಡಿಯುತ್ತಿದ್ದರೂ ಅದನ್ನು ವಿಷವೆಂದು ಭಾವಿಸಿಕೊಳ್ಳುವುದಿಲ್ಲವೋ – ಅಂತಹ ತಿಳಿಗೇಡಿಯು ಕುಡಿದ ವಿಷವು ಪರಿಣಾಮಕಾರಿಯಾದನಂತರವೇ ತಾನು ಮಾಡಿದ ಕರ್ಮದ ಫಲವೇನೆಂಬುದನ್ನು ಅರಿಯುತ್ತಾನೆ. ಹಾಗೆಯೇ ನೀನೂ ಕೂಡ ನಿನ್ನ ದುಷ್ಕರ್ಮಗಳು ಫಲನೀಡುವವರೆಗೂ ದುಷ್ಕರ್ಮಗಳನ್ನು ಮಾಡುತ್ತಿರುವೆನೆಂಬುದನ್ನು ನೀನು ಅರಿಯುವುದಿಲ್ಲ.

ಕೆಲವು ವೇಳೆ ನೀನು ಧರ್ಮಸಮ್ಮತವಾದ ಯಾವುದಾದರೂ ಕಾರ್ಯಗಳನ್ನು ಮಾಡಬಹುದು. ಆದರೆ ಯಾವಾಗಲೂ ದುರಾಚಾರಿಯಾಗಿರುವ ಆ ನಿನ್ನ ಧರ್ಮಕಾರ್ಯಗಳಿಂದ ದೇವತೆಗಳು ಪ್ರಸನ್ನರಾಗುವುದಿಲ್ಲ. ನಿನ್ನ ಸತತವಾದ ಅಧರ್ಮಕಾರ್ಯಗಳಲ್ಲಿ ಮಾಡುವ ಧರ್ಮಕಾರ್ಯಗಳು ಮುಚ್ಚಿಹೋಗುವಷ್ಟು ನೀನು ಕ್ರೂರಸ್ವಭಾವದವನಾಗಿರುವೆ. ಅದನ್ನು ನೀನು ತಿಳಿಯುತ್ತಿಲ್ಲ.

ಮಾತರಂ ಪಿತರಂ ವಿಪ್ರಮಾಚಾರ್ಯಂ ಚಾವಮನ್ಯತೇ ।
ಸ ಪಶ್ಯತಿ ಫಲಂ ತಸ್ಯ ಪ್ರೇತರಾಜವಶಂ ಗತಃ ॥21॥

ಯಾರು ತಂದೆ–ತಾಯಿಗಳನ್ನೂ, ಬ್ರಾಹ್ಮಣನನ್ನೂ, ಆಚಾರ್ಯನನ್ನೂ ಅವಮಾನಿಸುತ್ತಿರುವರೋ – ಅವರು ಯಮರಾಜನ ವಶನಾದ ನಂತರವೇ ಆ ಪಾಪಕರ್ಮದ ಫಲವನ್ನು ಅನುಭವಿಸುವರು.

ಅಧ್ರುವೇ ಹಿ ಶರೀರೇ ಯೋ ನ ಕರೋತಿ ತಪೋಽರ್ಜನಮ್ ।
ಸ ಪಶ್ಚಾತ್ತಪ್ಯತೇ ಮೂಢೋ ಮೃತೋ ಗತ್ವಾತ್ಮನೋ ಗತಿಮ್ ॥

ಈ ಶರೀರವು ಅಶಾಶ್ವತವಾದುದು. ಈ ಶರೀರವನ್ನು ಧರಿಸಿರುವ ಕಾಲದಲ್ಲಾದರೂ ಯಾವನು ತಪಸ್ಸನ್ನು ಮಾಡಿ ಪುಣ್ಯವನ್ನು ಸಂಪಾದಿಸಿ

ಕೊಳ್ಳುವುದಿಲ್ಲವೋ ಅಂತಹ ಮೂರ್ಖನು ಮೃತನಾದನಂತರ ತನ್ನ ದುಷ್ಕರ್ಮಫಲಗಳನ್ನು ಅನುಭವಿಸುವಾಗ ಪಶ್ಚಾತ್ತಾಪಪಡಬೇಕಾಗುತ್ತದೆ.

ಧರ್ಮಾದ್ರಾಜ್ಯಂ ಧನಂ ಸೌಖ್ಯಮಧರ್ಮಾದ್ದುಃಖಮೇವ ಚ ।
ತಸ್ಮಾದ್ಧರ್ಮಂ ಸುಖಾರ್ಥಾಯ ಕುರ್ಯಾತ್ಪಾಪಂ ವಿಸರ್ಜಯೇತ್ ॥ 23॥

ಧರ್ಮಮಾರ್ಗವನ್ನು ಅನುಸರಿಸಿ ನಡೆಯುವುದರಿಂದ ರಾಜ್ಯಲಾಭ ವಾಗುತ್ತದೆ. ಐಶ್ವರ್ಯದ ಸಂಗ್ರಹವಾಗುತ್ತದೆ. ಸುಖವುಂಟಾಗುತ್ತದೆ. ಅಧರ್ಮಮಾರ್ಗವನ್ನು ಅನುಸರಿಸುವುದರಿಂದ ದುಃಖವೇ ಉಂಟಾಗುತ್ತದೆ. ಆದುದರಿಂದ ಸುಖದ ಸಲುವಾಗಿ ಧರ್ಮಕಾರ್ಯವನ್ನು ಮಾಡಬೇಕು. ಪಾಪಕಾರ್ಯವನ್ನು ಸಂಪೂರ್ಣವಾಗಿ ಬಿಡಬೇಕು.

ಪಾಪಸ್ಯ ಹಿ ಫಲಂ ದುಃಖಂ ತದ್ಭೋಕ್ತವ್ಯಮಿಹಾತ್ಮನಾ ।
ತಸ್ಮಾದಾತ್ಮಾಪಘಾತಾರ್ಥಂ ಮೂಢಃ ಪಾಪಂ ಕರಿಷ್ಯತಿ ॥24॥

ದುಃಖವೇ ಪಾಪದ ಫಲ. ಅದನ್ನು ಮನುಷ್ಯನು ಈ ಜನ್ಮದಲ್ಲಿಯೇ ಉಪಭೋಗಿಸಬೇಕಾಗುತ್ತದೆ. ಆದುದರಿಂದ ಮೂರ್ಖನಾದವನು ಆತ್ಮ ವಿನಾಶಕ್ಕಾಗಿಯೇ ಪಾಪಕರ್ಮಗಳನ್ನು ಮಾಡುತ್ತಾನೆ.

ಕಸ್ಯಚಿನ್ನ ಹಿ ದುರ್ಬುದ್ಧೇಶ್ಛಂದತೋ ಜಾಯತೇ ಮತಿಃ ।
ಯಾದೃಶಂ ಕುರುತೇ ಕರ್ಮ ತಾದೃಶಂ ಫಲಮಶ್ನುತೇ ॥25॥

ದುರ್ಬುದ್ಧಿಯ ಮನುಷ್ಯನಿಗೆ ಸತ್ಕರ್ಮಾನುಷ್ಠಾನ ಮಾಡದೇ, ಗುರು-ಹಿರಿಯರ ಸೇವೆಯನ್ನು ಮಾಡದೇ ಸ್ವೇಚ್ಛಾಚಾರದಿಂದ ಉತ್ತಮವಾದ ಬುದ್ಧಿಯು ಬರುವುದಿಲ್ಲ, ಯಾವ ವಿಧವಾದ ಕರ್ಮಗಳನ್ನು ಮಾಡುವನೋ ಅಂತಹ ಕರ್ಮಗಳಿಗೆ ಅನುಸಾರವಾಗಿ ಅವನು ಫಲವನ್ನು ಅನುಭವಿಸುತ್ತಾನೆ.

ಋದ್ಧಿಂ ರೂಪಂ ಬಲಂ ಪುತ್ರಾನ್ವಿತ್ತಂ ಶೂರತ್ವಮೇವ ಚ ।
ಪ್ರಾಪ್ನುವನ್ತಿ ನರಾ ಲೋಕೇ ನಿರ್ಜಿತಂ ಪುಣ್ಯಕರ್ಮಭಿಃ ॥26॥

ಪ್ರಪಂಚದಲ್ಲಿ ಮನುಷ್ಯರು ಸಮೃದ್ಧಿ, ಸುಂದರವಾದ ರೂಪ, ಬಲ, ವೈಭವ, ಶೌರ್ಯ, ಸುಪುತ್ರರು – ಈ ಎಲ್ಲವನ್ನೂ ಪುಣ್ಯಕರ್ಮಗಳ ಅನುಷ್ಠಾನ ದಿಂದಲೇ ಪಡೆದುಕೊಳ್ಳುತ್ತಾರೆ.

ದಶಗ್ರೀವ ! ನೀನು ಮಾಡುತ್ತಿರುವ ದುಷ್ಕರ್ಮಗಳ ಫಲವಾಗಿ ನೀನು – ನರಕಕ್ಕೆ ಹೋಗಲೇಬೇಕಾಗುತ್ತದೆ. ಏಕೆಂದರೆ ; ನಿನ್ನ ಬುದ್ಧಿಯು ಯಾವಾಗಲೂ ಪಾಪಕರ್ಮಗಳಲ್ಲಿಯೇ ಆಸಕ್ತವಾಗಿದೆ. ದುರಾಚಾರಿಗಳೊಡನೆ ಮಾತನಾಡಬಾರದೆಂಬುದು ಶಾಸ್ತ್ರಗಳ ಸಿದ್ಧಾಂತ. ಆದುದರಿಂದ ನಾನು ನಿನ್ನೊಡನೆ ಯಾವ ಮಾತನ್ನೂ ಆಡುವುದಿಲ್ಲ.''

ಇದೇ ಮಾತನ್ನು ಕುಬೇರನು ರಾವಣನ ಮಂತ್ರಿಗಳೊಡನೆಯೂ ಹೇಳಿ ಅವರೆಲ್ಲರನ್ನೂ ಗದೆಯಿಂದ ಪ್ರಹರಿಸಿದನು. ಕುಬೇರನಿಂದ ಪ್ರಹರಿಸಲ್ಪಟ್ಟ ಮಾರೀಚನೇ ಮೊದಲಾದ ಸಮಸ್ತರಾಕ್ಷಸರೂ ಯುದ್ಧದಿಂದ ವಿಮುಖರಾಗಿ ಪಲಾಯನಮಾಡಿದರು. ಬಳಿಕ ಯಕ್ಷರಾಜನಾದ ಕುಬೇರನು ಗದೆಯಿಂದ ರಾವಣನ ತಲೆಗೆ ಅಪ್ಪಳಿಸಿದನು. ಆ ಪ್ರಹಾರದಿಂದಲೂ ರಾವಣನು ನಿಂತಿದ್ದ ಸ್ಥಳದಿಂದ ವಿಚಲಿತನಾಗಲಿಲ್ಲ. ಅನಂತರ ಯಕ್ಷ– ರಾಕ್ಷಸರಾಜರ ನಡುವೆ ಘೋರವಾದ ಯುದ್ಧವು ಪ್ರಾರಂಭವಾಯಿತು. ಒಬ್ಬರು ಮತ್ತೊಬ್ಬರನ್ನು ನಾನಾವಿಧವಾದ ಆಯುಧಗಳಿಂದ ಪ್ರಹರಿಸುತ್ತಿದ್ದರು. ಆದರೆ ಆ ಇಬ್ಬರಲ್ಲಿ ಯಾರೊಬ್ಬರೂ ಘೋರವಾದ ಯುದ್ಧವನ್ನು ಮಾಡಿಯೂ ಆಯಾಸಗೊಳ್ಳಲಿಲ್ಲ. ಭಯಗ್ರಸ್ತರೂ ಆಗಲಿಲ್ಲ. ಹಾಗೆಯೇ ಯುದ್ಧ ಮಾಡುತ್ತಾ ಕುಬೇರನು ರಾವಣನ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಅದಕ್ಕೆ ಪ್ರತಿಯಾಗಿ ರಾವಣನು ವಾರುಣಾಸ್ತ್ರವನ್ನು ಪ್ರಯೋಗಿಸಿ ಆಗ್ನೇಯಾಸ್ತ್ರದ ಪ್ರಭಾವವನ್ನು ತಡೆದು ನಿಲ್ಲಿಸಿದನು. ಅನಂತರ ರಾಕ್ಷಸೇಶ್ವರನಾದ ರಾವಣನು ಮಾಯೆಯನ್ನಾಶ್ರಯಿಸಿ ಕುಬೇರನನ್ನು ವಿನಾಶಗೊಳಿಸಬೇಕೆಂಬ ಆಶಯದಿಂದ ಲಕ್ಷಗಟ್ಟಲೆ ವಿಧ –ವಿಧವಾದ ರೂಪಗಳನ್ನು ಧರಿಸಿದನು. ಆ ಸಮಯದಲ್ಲಿ ದಶಗ್ರೀವನು ಹುಲಿ, ಹಂದಿ, ಮೇಘ , ಪರ್ವತ, ಸಾಗರ, ವೃಕ್ಷ, ಯಕ್ಷ, ದೈತ್ಯ – ಇವೇ ಮುಂತಾದ ರೂಪಗಳಿಂದ ಕಾಣಿಸಿಕೊಂಡನು. ಹೀಗೆ ದಶಾನನನು ಹಲವಾರು ರೂಪಗಳನ್ನು ಧರಿಸಿಕೊಂಡು ಕುಬೇರನೊಡನೆ ಯುದ್ಧ ಮಾಡುತ್ತಿದ್ದನು. ಆದರೆ ಅವನು ಮಾತ್ರ ನಿಜಸ್ವರೂಪದಿಂದ ಕಾಣಿಸಿಕೊಳ್ಳುತ್ತಿರಲಿಲ್ಲ. ಅನಂತರ ದಶಗ್ರೀವನು ದೊಡ್ಡದಾದೊಂದು ಗದೆಯನ್ನು ಕೈಗೆತ್ತಿಕೊಂಡು ರಭಸದಿಂದ ತಿರುಗಿಸುತ್ತಾ ಕುಬೇರನ ತಲೆಯ ಮೇಲೆ ಅಪ್ಪಳಿಸಿದನು. ಆ ಮಹಾಪ್ರಹಾರದಿಂದ ಕುಬೇರನು ವ್ಯಾಕುಲಗೊಂಡನು.

ಅವನ ಅಂಗಾಂಗಗಳೆಲ್ಲವೂ ರಕ್ತದಿಂದ ತೋಯ್ದು ಹೋದುವು. ಬುಡದಲ್ಲಿ ಕತ್ತರಿಸಿದ ಅಶೋಕವೃಕ್ಷದಂತೆ ನೆಲದ ಮೇಲೆ ಬಿದ್ದನು. ಒಡನೆಯೇ ಪದ್ಮನೇ ಮೊದಲಾದ ಅಷ್ಟನಿಧಿಗಳ ದೇವತೆಗಳು ಕುಬೇರನನ್ನು ನಂದನವನಕ್ಕೊಯ್ದು ಉಸಿರಾಡುವಂತೆ ಅವನಿಗೆ ಶೈತ್ಯೋಪಚಾರ ಮಾಡಿದರು.

ಹೀಗೆ ರಾವಣನು ಕುಬೇರನನ್ನು ಜಯಿಸಿ ಪರಮಹೃಷ್ಟನಾಗಿ ವಿಜಯದ ನೆನಪಿಗಾಗಿ ಕುಬೇರನಲ್ಲಿದ್ದ ಪುಷ್ಪಕವಿಮಾನವನ್ನು ತನ್ನದನ್ನಾಗಿಮಾಡಿ ಕೊಂಡನು. ಆ ವಿಮಾನವಾದರೋ ಸುವರ್ಣಮಯವಾದ ಕಂಬಗಳಿಂದಲೂ ವೈಡೂರ್ಯಮಣಿಗಳಿಂದ ಯುಕ್ತವಾದ ಮಹಾದ್ವಾರದಿಂದಲೂ ವಿರಾಜಿಸುತ್ತಿತ್ತು. ಮುತ್ತುಗಳಿಂದ ಮಾಡಲ್ಪಟ್ಟ ಬಲೆಗಳಿಂದ ಅದು ಆಚ್ಛಾದಿತವಾಗಿದ್ದಿತು. ಸರ್ವರ್ತುಗಳಲ್ಲಿಯೂ ಹಣ್ಣುಬಿಡುವ ಹಲವಾರು ವೃಕ್ಷಗಳು ಅದರಲ್ಲಿದ್ದುವು. ಆ ವಿಮಾನವು ಮನೋವೇಗಕ್ಕೆ ಸಮಾನವಾದ ವೇಗದಿಂದ ಹೋಗುವ ಸಾಮರ್ಥ್ಯವನ್ನು ಹೊಂದಿದ್ದಿತು. ತನ್ನಲ್ಲಿ ಕುಳಿತಿರುವವರ ಇಚ್ಛೆಗೆ ಅನುಸಾರವಾಗಿ ಎಲ್ಲಿಗೆಂದರಲ್ಲಿಗೆ ಹೋಗುತ್ತಿದ್ದಿತು. ಬೇಕು–ಬೇಕಾದಂತೆ ರೂಪಗಳನ್ನು ಧರಿಸುತ್ತಿದ್ದಿತು.★ ಆಕಾಶದಲ್ಲಿ ಎಲ್ಲ ಕಡೆಗಳಲ್ಲಿಯೂ ಸಂಚರಿಸುವ ಸಾಮರ್ಥ್ಯವನ್ನು ಹೊಂದಿದ್ದಿತು. ಅದಕ್ಕೆ ಮಣಿ ಮತ್ತುಸುವರ್ಣಮಯವಾದ ಸೋಪಾನಗಳಿದ್ದುವು. ಅದರಲ್ಲಿ ಪುಟಕ್ಕೆ ಹಾಕಿದ ಚಿನ್ನದ ಜಗುಲಿಗಳಿದ್ದುವು. ದೇವತೆಗಳಿಗೂ ಅದು ವಾಹನವಾಗಿದ್ದು ಅಕ್ಷಯವೂ ಅವಿನಾಶಿಯೂ ಆಗಿದ್ದಿತು. ಅದು ಪ್ರೇಕ್ಷಕರ ದೃಷ್ಟಿ ಮತ್ತು ಮನಸ್ಸುಗಳನ್ನು ಬಹಳವಾಗಿ ಪ್ರಸನ್ನಗೊಳಿಸುತ್ತಿದ್ದಿತು. ಅದರೊಳಗಡೆ ಆಶ್ಚರ್ಯಕರವಾದ ಹಲವಾರು ದೃಶ್ಯಗಳಿದ್ದುವು. ನಾನಾವಿಧವಾದ ಭಂಗಿಗಳಲ್ಲಿದ್ದ ಸ್ತ್ರೀ–ಪುರುಷರ ಚಿತ್ರಗಳಿದ್ದುವು. ಆ ದಿವ್ಯವಿಮಾನವು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದಿತು. ಅದು ಮನೋವಾಂಛಿತವಾದ ಸಮಸ್ತ ಕಾಮನಾವಸ್ತುಗಳಿಂದಲೂ ಸಂಪನ್ನವಾಗಿತ್ತಲ್ಲದೇ ಮನೋಹರವೂ ಪರಮ ಶ್ರೇಷ್ಠವೂ ಆಗಿದ್ದಿತು. ಅದರ ಒಳಭಾಗದಲ್ಲಿ ಹೆಚ್ಚು ಚಳಿಯಾಗಲೀ,

★ ನೂರು ಮಂದಿ ಕುಳಿತುಕೊಳ್ಳಬೇಕೆಂದರೆ ವಿಮಾನವು ಅಷ್ಟೇ ವಿಶಾಲವಾಗುತ್ತಿದ್ದಿತು. ಸಾವಿರ ಮಂದಿ ಕುಳಿತುಕೊಳ್ಳಬೇಕೆಂದರೆ ಸಾವಿರ ಮಂದಿ ಕುಳಿತುಕೊಳ್ಳುವಷ್ಟು ವಿಸ್ತಾರವಾಗುತ್ತಿದ್ದಿತು.

ಹೆಚ್ಚು ಸೆಕೆಯಾಗಲೀ ಇಲ್ಲದೇ ಯಾವಾಗಲೂ ಸಮ-ಶೀತೋಷ್ಣವಾಗಿರುತ್ತಿದ್ದಿತು. ಎಲ್ಲ ಋತುಗಳಲ್ಲಿಯೂ ಅದು ಸಂಚಾರಕ್ಕೆ ಯೋಗ್ಯವಾಗಿದ್ದು ಸುಖಾವಹವಾಗಿದ್ದಿತು.

ಮಹಾಮೂರ್ಖನಾದ ರಾವಣನು ಇಚ್ಛಾನುಸಾರವಾಗಿ ಹೋಗುವುದಾಗಿದ್ದ, ಪರಾಕ್ರಮದಿಂದ ಪಡೆದುಕೊಂಡ ಆ ಪುಷ್ಪಕವಿಮಾನದಲ್ಲಿ ಕುಳಿತು ಉತ್ಕಟವಾದ ದರ್ಪದಿಂದ ಕೂಡಿದವನಾಗಿ ಮೂರು ಲೋಕಗಳನ್ನೂ ಗೆದ್ದುಕೊಂಡೆನೆಂದೇ ಭಾವಿಸಿಕೊಂಡನು. ಹೀಗೆ ಕುಬೇರನನ್ನು ಜಯಿಸಿದ ನಂತರ ರಾವಣನು ಕೈಲಾಸಪರ್ವತದಿಂದ ಕೆಳಗಿಳಿದನು.

ನಿರ್ಮಲವಾದ ಕಿರೀಟದಿಂದಲೂ ಮತ್ತು ಹಾರಗಳಿಂದಲೂ ವಿಭೂಷಿತನಾಗಿದ್ದ ಪ್ರತಾಪವಂತನಾದ ರಾವಣರಾಕ್ಷಸನು ಪರಾಕ್ರಮದಿಂದ ಯುದ್ಧಗಳಲ್ಲಿ ವಿಜಯವನ್ನು ಗಳಿಸಿ ವಿಮಾನದಲ್ಲಿ ಕುಳಿತು ಯಜ್ಞಕುಂಡದಲ್ಲಿ ಪ್ರಜ್ವಲಿಸುವ ಅಗ್ನಿದೇವನಂತೆ ಜಾಜ್ವಲ್ಯಮಾನನಾಗಿ ಪ್ರಕಾಶಿಸಿದನು.

15ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **16ನೆಯ ಸರ್ಗ**

ದಶಾನನನಿಗೆ ನಂದೀಶ್ವರನ ಶಾಪ : ಭಗವಾನ್ ಶಂಕರನಿಂದ ರಾವಣನ ಮಾನಭಂಗ : ರಾವಣನೆಂಬ ನಾಮಧೇಯ : ಚಂದ್ರಹಾಸ ಖಡ್ಗಪ್ರಾಪ್ತಿ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಸ ಜಿತ್ವಾ ಧನದಂ ರಾಮ ಭ್ರಾತರಂ ರಾಕ್ಷಸಾಧಿಪಃ ।
ಮಹಾಸೇನಪ್ರಸೂತಿಂ ತದ್ಯಯೌ ಶರವಣಂ ಮಹತ್ ॥1॥

''ರಾಘವ ! ಹೀಗೆ ರಾವಣನು ಅಣ್ಣನಾದ ಕುಬೇರನನ್ನು ಜಯಿಸಿ ಮಹಾಸೇನನು ಹುಟ್ಟಿದ ಶರವಣವೆಂಬ ವಿಶಾಲವಾದ ನೊಜೆಹುಲ್ಲಿನ ವನಕ್ಕೆ ಹೋದನು.

ಅಲ್ಲಿ ರಾವಣನು ಸುವರ್ಣಮಯವಾದ ವಿಶಾಲವಾದ ನೊಜೆಹುಲ್ಲಿನ ಅರಣ್ಯವನ್ನು ನೋಡಿದನು. ಆ ಅರಣ್ಯವು ಕಿರಣಗಳ ಸಮೂಹಗಳಿಂದ

ವ್ಯಾಪ್ತವಾಗಿದ್ದು ಎರಡನೆಯ ಸೂರ್ಯನಂತೆಯೇ ಕಾಣುತ್ತಿದ್ದಿತು. ಆ ವನದ ಸಮೀಪದಲ್ಲಿಯೇ ಒಂದು ಪರ್ವತವಿದ್ದಿತು. ಅದರ ಸುತ್ತಲೂ ರಮ್ಯವಾದ ಅರಣ್ಯವಿದ್ದಿತು. ರಾವಣನು ಪುಷ್ಪಕ ವಿಮಾನದಲ್ಲಿ ಕುಳಿತು ಆ ಪರ್ವತವನ್ನು ಹತ್ತುತ್ತಿದ್ದಾಗ ಪುಷ್ಪಕವು ಮುಂದೆ ಹೋಗದೇ ಸ್ತಬ್ಧವಾಗಿ ನಿಂತುಬಿಟ್ಟಿತು. ಆಗ ರಾವಣನು ಮಂತ್ರಿಗಳೊಡನೆ ಸಮಾಲೋಚಿಸ ತೊಡಗಿದನು.

'' ಅಮಾತ್ಯರೇ ! ಯಾವ ಕಾರಣದಿಂದ ಈ ವಿಮಾನವು ಮುಂದೆ ಹೋಗುತ್ತಿಲ್ಲ? ಈ ವಿಮಾನವಾದರೋ ಒಡೆಯನ ಇಚ್ಛೆಗೆ ಅನುಗುಣವಾಗಿ ಚಲಿಸುವ ವಿಮಾನವಾಗಿರುತ್ತದೆ. ನಾನು ಮುಂದೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಆದರೂ ಇದು ನನ್ನ ಇಚ್ಛೆಯಂತೆ ಮುಂದೆ ಹೋಗುತ್ತಿಲ್ಲ. ಈಗ ಈ ವಿಮಾನವು ಮುಂದೆ ಹೋಗದಿರಲು ಕಾರಣವೇನಿರಬಹುದು ? ಹಾಗೆ ಹೋಗದಿರಲು ಈ ಪರ್ವತದ ಮೇಲಿರುವ ಯಾವನೋ ಒಬ್ಬನ ಕುತಂತ್ರವಾಗಿರಬಹುದೇ ? ಅವನ ಕಾರ್ಯವೇ ಇದಾಗಿರಬಹುದು.''

ರಾವಣನ ಮಾತನ್ನು ಕೇಳಿ ಅಮಾತ್ಯರಲ್ಲೊಬ್ಬನಾದ ಬುದ್ಧಿಕೋವಿದನಾದ ಮಾರೀಚನು ಹೇಳಿದನು :

'' ಮಹಾರಾಜ ! ಯಾವುದೋ ಕಾರಣದಿಂದಲೇ ಈ ವಿಮಾನವು ಮುಂದೆ ಹೋಗುತ್ತಿಲ್ಲ. ನಿಷ್ಕಾರಣವಾಗಿ ಈ ವಿಮಾನವು ಯಾವಾಗಲೂ ಹೀಗೆ ನಿಲ್ಲಲಾರದು. ಅಥವಾ ಈ ವಿಮಾನವು ಕುಬೇರನಲ್ಲದೇ ಬೇರೆಯವರಿಗೆ ವಾಹನವಾಗದೆಯೂ ಇರಬಹುದು. ಆದುದರಿಂದ ಈ ವಿಮಾನದಲ್ಲಿ ಧನಾಧ್ಯಕ್ಷನಿಲ್ಲದೇ ಇರುವುದರಿಂದ ಇದು ಸ್ಥಗಿತವಾಗಿರಬಹುದು.''

ಅವರು ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಈಶ್ವರನ ಅನುಚರನಾದ ನಂದೀಶ್ವರನು ರಾವಣನ ಬಳಿಗೆ ಬಂದನು. ಅವನು ಕುಬ್ಜನಾಗಿದ್ದನು. ಭಯಂಕರನಾಗಿದ್ದನು. ಅವನ ತಲೆಯು ಬೋಳಾಗಿದ್ದಿತು. ಕೈಗಳು ಗಿಡ್ಡಾಗಿದ್ದುವು. ಅವನು ಮಹಾಬಲಿಷ್ಠನಾಗಿದ್ದನು. ಯಾವ ಶಂಕೆಯೂ ಇಲ್ಲದೇ, ರಾವಣನ ಪಕ್ಕಕ್ಕೆ ಬಂದು ಹೇಳಿದನು :

''ದಶಗ್ರೀವ ! ಹಿಂದಿರುಗು. ಈ ಪರ್ವತಶಿಖರದಲ್ಲಿ ಶಂಕರನು

ಉಮಾದೇವಿಯೊಡನೆ ಕ್ರೀಡಿಸುತ್ತಿದ್ದಾನೆ. ಸುಪರ್ಣ–ನಾಗ–ಯಕ್ಷರಾಗಲೀ, ದೇವ–ಗಂಧರ್ವ–ರಾಕ್ಷಸರೇ ಆಗಲೀ, ಯಾವುದೇ ಪ್ರಾಣಿಯಾಗಲೀ – ಈಗ ಈ ಪರ್ವತದ ಶಿಖರಕ್ಕೆ ಹೋಗುವಂತಿಲ್ಲ.''

ನಂದೀಶ್ವರನ ಮಾತನ್ನು ಕೇಳಿದೊಡನೆಯೇ ರಾವಣನು ಪರಮ ಕ್ರುದ್ಧನಾದನು. ಅವನ ಕುಂಡಲಗಳು ತೂಗಾಡಿದುವು. ಕೆಂಗಣ್ಣನಾದನು. ವಿಮಾನದಿಂದ ಕೆಳಗಿಳಿದು – ' ನನ್ನ ಮಾರ್ಗವನ್ನು ನಿರೋಧಿಸುವ ಆ ಶಂಕರನಾರು ?' –ಎಂದು ಗರ್ಜಿಸುತ್ತಾ ಪರ್ವತದ ಬುಡಕ್ಕೆ ಹೋದನು. ಅಲ್ಲಿಗೆ ಹೋದೊಡನೆಯೇ ಭಗವಾನ್ ಶಂಕರನ ಸಮೀಪದಲ್ಲಿಯೇ ನಿಂತಿದ್ದ, ಝುಗ-ಝುಗಿಸುತ್ತಿದ್ದ ಶೂಲವನ್ನು ಹಿಡಿದು ಎರಡನೆಯ ಶಂಕರನೋ ಎಂಬಂತೆ ಕಾಣುತ್ತಿದ್ದ ನಂದೀಶ್ವರನನ್ನು ನೋಡಿದನು. ವಾನರನ ಮುಖದಂತೆ ಮುಖವುಳ್ಳವನಾಗಿದ್ದ ಅವನನ್ನು ಅವಮಾನಗೊಳಿಸುತ್ತಾ ದಶಗ್ರೀವನು ನೀರಿನಿಂದ ತುಂಬಿರುವ ಕಾರ್ಮುಗಿಲು ಗುಡುಗುವಂತೆ ಗಹ–ಗಹಿಸಿ ನಕ್ಕನು. ಅದನ್ನು ನೋಡಿ ಶಿವನ ಮತ್ತೊಂದು ಸ್ವರೂಪವೇ ಆದ ನಂದೀಶ್ವರನು ಪರಮಕ್ರುದ್ಧನಾಗಿ ನಗುತ್ತಾ ನಿಂತಿದ್ದ ದಶಗ್ರೀವನಿಗೆ ಹೇಳಿದನು :

ಯಸ್ಮಾದ್ವಾನರರೂಪಂ ಮಾಮವಜ್ಞಾಯ ದಶಾನನ ।
ಅಶನೀಪಾತಸಂಕಾಶಮುಪಹಾಸಂ ಪ್ರಮುಕ್ತವಾನ್ ॥ 16॥
ತಸ್ಮಾನ್ಮದ್ವೀರ್ಯಸಂಯುಕ್ತಾ ಮದ್ರೂಪಸಮತೇಜಸಃ ।
ಉತ್ಪತ್ಸ್ಯಂತಿ ವಧಾರ್ಥಂ ಹಿ ಕುಲಸ್ಯ ತವ ವಾನರಾಃ ॥ 17॥

'' ದಶಾನನನೇ ! ವಾನರರ ಮುಖದಂತೆ ಮುಖವಿರುವ ನನ್ನನ್ನು ನೋಡಿ ನೀನು ಸಿಡಿಲಿಗೆ ಸಮಾನವಾಗಿ ಗಹ–ಗಹಿಸಿ ಅಟ್ಟಹಾಸದಿಂದ ನಗುತ್ತಿರುವೆಯಲ್ಲವೇ ? ಆದುದರಿಂದ ನಿನ್ನ ಕುಲದ ವಿನಾಶಕ್ಕಾಗಿ ನನ್ನಂತೆಯೇ ಪರಾಕ್ರಮಶಾಲಿಗಳಾದ ನನ್ನಂತೆಯೇ ರೂಪಸಂಪನ್ನರಾದ ವಾನರರು ಹುಟ್ಟುವರು.

ಕ್ರೂರನಿಶಾಚರನೇ ! ಆ ವಾನರರಿಗೆ ಉಗುರು ಮತ್ತು ಹಲ್ಲುಗಳೇ ಆಯುಧಗಳಾಗಿರುತ್ತವೆ. ಮನೋವೇಗದಷ್ಟು ವೇಗವಾಗಿ ಅವರ ಗತಿಯಿರುತ್ತದೆ. ಯುದ್ಧೋನ್ಮತ್ತರೂ ಬಲೋತ್ಕಟರೂ, ಸಂಚರಿಸುವ ಪರ್ವತ

ಗಳಂತೆಯೇ ಮಹಾಕಾಯರೂ ಆಗಿರುತ್ತಾರೆ. ಅವರೆಲ್ಲರೂ ಒಟ್ಟಾಗಿ ಬಂದು ಮಂತ್ರೀ– ಪುತ್ರಸಹಿತನಾದ ನಿನ್ನ ಪ್ರಬಲವಾದ ದರ್ಪವನ್ನೂ ಎಲ್ಲ ರೀತಿಯ ಸೊಕ್ಕನ್ನೂ ಅಡಗಿಸುವರು.

ಕಿಂ ತ್ವಿದಾನೀಂ ಮಯಾ ಶಕ್ಯಂ ಹನ್ತುಂ ತ್ವಾಂ ಹೇ ನಿಶಾಚರ ।

ನ ಹನ್ತವ್ಯೋ ಹತಸ್ತ್ವಂ ಹಿ ಪೂರ್ವಮೇವ ಸ್ವಕರ್ಮಭಿಃ ॥ 20॥

ನಿಶಾಚರನೇ ! ನಾನೀಗಲೇ ನಿನ್ನನ್ನು ಸಂಹರಿಸಬಲ್ಲೆ. ಆದರೂ ಸಂಹರಿಸುವುದಿಲ್ಲ. ಏಕೆಂದರೆ : ಹತನಾಗಿ ಹೋಗಿರುವವನನ್ನು ಯಾರು ತಾನೇ ಪುನಃ ಸಂಹರಿಸುತ್ತಾರೆ. ನಿನ್ನ ಕುತ್ಸಿತವಾದ ಕರ್ಮಗಳಿಂದ ನೀನೀಗಲೇ ಹತನಾಗಿ ಹೋಗಿರುವೆ.''

ಮಹಾತ್ಮನಾದ, ಪೂಜ್ಯನಾದ ನಂದೀಶ್ವರನು ಹೀಗೆ ಹೇಳುತ್ತಿದ್ದಂತೆಯೇ ದೇವದುಂದುಭಿಗಳು ಮೊಳಗತೊಡಗಿದುವು. ಆಕಾಶದಿಂದ ಪುಷ್ಪವೃಷ್ಟಿಯಾಯಿತು.

ಮಹಾಬಲನಾದ ರಾವಣನು ನಂದೀಶ್ವರನ ಮಾತನ್ನು ಸ್ವಲ್ಪವಾದರೂ ಲೆಕ್ಕಿಸದೇ ಪರ್ವತದ ಬುಡದ ಬಳಿಗೆ ಹೋಗಿ ಹೇಳಿದನು :

ಪುಷ್ಪಕಸ್ಯ ಗತಿಶ್ಛಿನ್ನಾ ಯತ್ಕೃತೇ ಮಮ ಗಚ್ಛತಃ ।
ತಮಿಮಂ ಶೈಲಮುನ್ಮೂಲಂ ಕರೋಮಿ ತವ ಗೋಪತೇ ॥23॥

''ಪಶುಪತಿಯೇ ! ಯಾವುದರ ಕಾರಣದಿಂದ ನನ್ನ ವಿಮಾನದ ಗತಿಯು ತಡೆಯಲ್ಪಟ್ಟಿತೋ ನನ್ನ ಎದುರಾಗಿರುವ ಈ ನಿನ್ನ ಪರ್ವತವನ್ನೇ ನಾನು ಬುಡಸಹಿತವಾಗಿ ಕೀಳುತ್ತೇನೆ.

ಕೇನ ಪ್ರಭಾವೇಣ ಭವೋ ನಿತ್ಯಂ ಕ್ರೀಡತಿ ರಾಜವತ್ ।
ವಿಜ್ಞಾತವ್ಯಂ ನ ಜಾನೀತೇ ಭಯಸ್ಥಾನಮುಪಸ್ಥಿತಮ್ ॥24॥

ಯಾವ ಪ್ರಭಾವದಿಂದ ಶಂಕರನು ಈ ಪರ್ವತದಲ್ಲಿ ರಾಜನಂತೆ ವಿಹರಿಸುತ್ತಿರುವನು ? ಭಯವು ಸನ್ನಿಹಿತವಾಗಿರುವುದೆಂಬುದನ್ನು ಈ ವೇಳೆಗಾಗಲೇ ಅವನು ತಿಳಿಯಬೇಕಾಗಿದ್ದಿತು. ಅದನ್ನೂ ಅವನು ತಿಳಿದಿಲ್ಲ.''

ರಾಘವ ! ಬಲೋದ್ಧತನಾದ ರಾವಣನು ಹೀಗೆ ಹೇಳಿ ತನ್ನ ಇಪ್ಪತ್ತು ತೋಳುಗಳನ್ನೂ ಚಾಚಿ ಅತ್ಯಂತಶೀಘ್ರವಾಗಿ ಶಿವನಿದ್ದ ಆ ಪರ್ವತವನ್ನು

ಎತ್ತಿಯೇ ಬಿಟ್ಟನು. ಪರ್ವತವು ಅಲುಗಾಡಿತು. ಭವನ ಭೂತಗಣಗಳೂ ಕಂಪಿಸತೊಡಗಿದುವು. ಪಾರ್ವತಿಯೂ ನಡುಗುತ್ತಾ ಶಂಕರನನ್ನು ಬಿಗಿಯಾಗಿ ತಬ್ಬಿಕೊಂಡಳು. ಅನಂತರ ದೇವಶ್ರೇಷ್ಠನಾದ ಹರನು ತನ್ನ ಕಾಲಿನ ಹೆಬ್ಬೆರಳಿನಿಂದ ಪರ್ವತವನ್ನೊಮ್ಮೆ ಲೀಲೆಯಿಂದ ಅದುಮಿದನು. ಮರುಕ್ಷಣ ದಲ್ಲಿಯೇ ಪರ್ವತಸ್ತಂಭಗಳಂತಿದ್ದ ರಾವಣನ ತೋಳುಗಳು ಪರ್ವತದ ಅಡಿ ಯಲ್ಲಿ ಸಿಕ್ಕಿ ಜಜ್ಜಿಹೋದುವು. ಅದನ್ನು ನೋಡಿ ರಾವಣನ ಮಂತ್ರಿಗಳು ವಿಸ್ಮಿತರಾದರು. ಭುಜಗಳ ಪೀಡನೆಯಿಂದಲೂ ಮತ್ತು ಕ್ರೋಧದಿಂದಲೂ ರಾಕ್ಷಸನು ಗಟ್ಟಿಯಾಗಿ ಅರಚತೊಡಗಿದನು. ಆ ಕೂಗಿನ ಕಠೋರಧ್ವನಿ ಯಿಂದ ಮೂರು ಲೋಕಗಳೂ ನಡುಗಿದುವು. ಪ್ರಳಯಕಾಲದ ಸಿಡಿಲಿನ ಆರ್ಭಟವೋ ಎಂದು ರಾವಣನ ಸಚಿವರು ಬಗೆದರು. ನಕ್ಷತ್ರಪಥದಲ್ಲಿದ್ದ ಇಂದ್ರನೇ ಮೊದಲಾದ ದೇವತೆಗಳು ವಿಚಲಿತರಾದರು. ಸಮುದ್ರಗಳೂ ಅಲ್ಲೋಲ–ಕಲ್ಲೋಲವಾದುವು. ಪರ್ವತಗಳು ನಡುಗಿದುವು. ಸಿದ್ಧ –ಯಕ್ಷ–ವಿದ್ಯಾಧರರು– '**ಕಿಮೇತತ್**–ಇದೇನಿದು ?' – ಎಂದು ಪರಸ್ಪರವಾಗಿ ಪ್ರಶ್ನಿಸತೊಡಗಿದರು.

ಅನಂತರ ವಿಷಯವನ್ನು ಗ್ರಹಿಸಿದ ದಶಗ್ರೀವನ ಮಂತ್ರಿಗಳು ರಾವಣ ನಿಗೆ ಹೇಳಿದರು :

ತೋಷಯಸ್ವ ಮಹಾದೇವಂ ನೀಲಕಣ್ಠಮುಮಾಪತಿಮ್ ।
ತಮೃತೇ ಶರಣಂ ನಾನ್ಯಂ ಪಶ್ಯಾಮೋಽತ್ರ ದಶಾನನ ॥32॥

'' ದಶಾನನ ! ನೀನೀಗಲೇ ನೀಲಕಂಠನಾದ, ಉಮಾಪತಿಯಾದ ಮಹಾದೇವನನ್ನು ಸ್ತೋತ್ರಗಳಿಂದ ಸಂತೋಷಗೊಳಿಸು. ಅವನನ್ನು ಬಿಟ್ಟರೆ ನಿನಗೆ ಈ ಸಮಯದಲ್ಲಿ ಶರಣ್ಯನಾಗುವ ಬೇರೆ ಯಾರನ್ನೂ ನಾವು ಕಾಣೆವು.

ಸ್ತುತಿಭಿಃ ಪ್ರಣತೋ ಭೂತ್ವಾ ತಮೇವ ಶರಣಂ ವ್ರಜ ।
ಕೃಪಾಲುಃ ಶಙ್ಕರಸ್ತುಷ್ಟಃ ಪ್ರಸಾದಂ ತೇ ವಿಧಾಸ್ಯತಿ ॥33॥

ಸ್ತೋತ್ರಗಳ ಮೂಲಕ ಅವನಿಗೆ ಪ್ರಣಾಮಮಾಡಿ ಅವನನ್ನೇ ಶರಣುಹೊಂದು. ದಯಾಳುವಾದ ಶಂಕರನು ಸಂತುಷ್ಟನಾಗಿ ನಿನ್ನನ್ನು ಅನುಗ್ರಹಿಸುವನು.''

ಅಮಾತ್ಯರು ಹೀಗೆ ಹೇಳಲು ದಶಾನನನು ವಿಧ –ವಿಧವಾದ ಸಾಮಗಳಿಂದಲೂ ಸ್ತುತಿಗಳಿಂದಲೂ ಶಂಕರನಿಗೆ ನಮಸ್ಕರಿಸುತ್ತಾ ಕೊಂಡಾಡಿದನು. ಹೀಗೆ ತೋಳುಗಳ ನೋವಿನಿಂದ ರೋದನಮಾಡುತ್ತಾ ಸಾಮಗಾನಗಳಿಂದ ಪರಶಿವನ ಸ್ತೋತ್ರವನ್ನೂ ಮಾಡುತ್ತಾ ರಾವಣನು ಒಂದು ಸಾವಿರ ವರ್ಷಗಳನ್ನು ಕಳೆದನು. ಅನಂತರ ಪರ್ವತದ ಶಿಖರದಲ್ಲಿದ್ದ ಮಹಾದೇವನು ಸುಪ್ರೀತನಾಗಿ ಪರ್ವತವನ್ನು ಸಡಿಲಿಸಿ ರಾವಣನ ತೋಳುಗಳನ್ನು ಬಿಡಿಸಿ ಹೇಳಿದನು :

'' ದಶಾನನ ! ನೀನು ಮಹಾವೀರನು. ನಿನ್ನ ಪರಾಕ್ರಮಕ್ಕೆ ನಾನು ಮೆಚ್ಚಿದ್ದೇನೆ.

ಯಸ್ಮಾಲ್ಲೋಕತ್ರಯಂ ಚೈತದ್ರಾವಿತಂ ಭಯಮಾಗತಮ್ ।
ತಸ್ಮಾತ್ತ್ವಂ ರಾವಣೋ ನಾಮ ನಾಮ್ನಾ ರಾಜನ್ಭವಿಷ್ಯಸಿ ॥37॥

ಈ ಪರ್ವತದ ಅಡಿಯಲ್ಲಿ ಸಿಲುಕಿಕೊಂಡು ದಾರುಣವಾಗಿ ಕೂಗಿಕೊಂಡುದಲ್ಲದೇ ಆ ನಿನ್ನ ಕೂಗಿನಿಂದ ಮೂರು ಲೋಕಗಳೂ ಸುದಾರುಣವಾದ ರೀತಿಯಲ್ಲಿ ಶಬ್ದಿತವಾದುವು. ನಿನ್ನ ಆ ಕರ್ಕಶವಾದ ಕೂಗನ್ನು ಕೇಳಿ ಮೂರು ಲೋಕಗಳೂ ಭಯಗೊಂಡು ಕೂಗತೊಡಗಿದುವು. ನೀನು ಎಲ್ಲ ಲೋಕಗಳನ್ನೂ ಕೂಗಿಕೊಳ್ಳುವಂತೆ (ರಾವಿತವಾಗುವಂತೆ) ಮಾಡಿದೆಯಾದ ಕಾರಣ ನೀನು ಇನ್ನು ಮುಂದೆ 'ರಾವಣ' ಎಂಬ ಹೆಸರಿನಿಂದಲೇ ಪ್ರಸಿದ್ಧನಾಗುವೆ.

ದೇವತೆಗಳೂ, ಮನುಷ್ಯರೂ, ಯಕ್ಷರೂ ಮತ್ತು ಭೂಮಂಡಲದಲ್ಲಿ ವಾಸಮಾಡುವ ಸಮಸ್ತರೂ - ಲೋಕರಾವಣನಾದ (ಕೂಗಿನಿಂದಲೇ ಮೂಲೋಕವನ್ನೇ ಕೂಗುವಂತೆ ಮಾಡಿದ) ನಿನ್ನನ್ನು 'ರಾವಣ ' ಎಂದೇ ಕರೆಯುತ್ತಾರೆ.

ಪೌಲಸ್ತ್ಯನೇ! ಈಗ ನೀನು ಇಷ್ಟಬಂದೆಡೆಗೆ ನೆಮ್ಮದಿಯಿಂದ ಹೋಗಬಹುದಾಗಿದೆ. ನಾನೂ ಹೋಗಲು ಅನುಮತಿಯನ್ನಿತ್ತಿದ್ದೇನೆ. ನೀನಿನ್ನು ಮುಂದೆ ಪ್ರಯಾಣಮಾಡಬಹುದು.''

ಶಂಕರನು ಹೀಗೆ ಹೇಳಲು ರಾವಣನು ಪುನಃ ಈಶ್ವರನನ್ನು ಪ್ರಾರ್ಥಿಸುತ್ತಾ ಹೇಳಿದನು:

''ಮಹಾದೇವನೇ! ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿರುವೆ ಯಾದರೆ ನಾನು ಯಾಚಿಸಲಿರುವ ಈ ವರವನ್ನೂ ದಯಪಾಲಿಸು. ನಾನು ದೇವ–ಗಂಧರ್ವ–ದಾನವರಿಂದಲೂ, ರಾಕ್ಷಸ–ಗುಹ್ಯಕ–ನಾಗರಿಂದಲೂ, ಇತರ ಮಹಾಸತ್ತ್ವಶಾಲಿಗಳಾದ ಪ್ರಾಣಿಗಳಿಂದಲೂ ವಧಿಸಲ್ಪಡದಿರಲು ವರವನ್ನು ಪಡೆದುಕೊಂಡಿರುವೆನು. ಮನುಷ್ಯರನ್ನು ನಾನೆಂದೂ ಸತ್ತ್ವಶಾಲಿಗಳೆಂದು ಪರಿಗಣಿಸಿಯೇ ಇಲ್ಲ. ನನ್ನ ಅಭಿಪ್ರಾಯದಲ್ಲಿ ಮಾನವರು ಅಲ್ಪಬಲರು. ಬ್ರಹ್ಮನಿಂದ ನಾನು ದೀರ್ಘಾಯುಷ್ಯವನ್ನು ಪಡೆದುಕೊಂಡಿದ್ದೇನೆ. ಬ್ರಹ್ಮನು ನನಗೆ ಅನುಗ್ರಹಿಸಿಕೊಟ್ಟಿರುವ ಪೂರ್ಣಾಯುಷ್ಯದಲ್ಲಿ ಈಗ ಎಷ್ಟು ಉಳಿದಿರುವುದೋ ಅಷ್ಟು ವರ್ಷಗಳ ಆಯುಷ್ಯವನ್ನು ನಾನು ಪೂರ್ಣವಾಗಿ ಕಳೆಯುವಂತೆ ನೀನು ನನಗೆ ಅನುಗ್ರಹಿಸು. (ಶಾಪದಿಂದಾಗಲೀ ಯಾವುದೇ ಕಾರಣಗಳಿಂದಾಗಲೀ ಬ್ರಹ್ಮನು ದಯಪಾಲಿಸಿರುವ ದೀರ್ಘಾಯುಷ್ಯದಲ್ಲಿ ಸ್ವಲ್ಪವೂ ಕಡಿಮೆಯಾಗಬಾರದು. ಮಧ್ಯದಲ್ಲಿ ಯಾವುದೇ ಅಪಘಾತಗಳೂ ಉಂಟಾಗಬಾರದು.) ಇಂತಹ ವರವನ್ನು ನೀನು ನನಗೆ ದಯಪಾಲಿಸು. ಮಹಾದೇವ ! ಈ ವರದ ಜೊತೆಯಲ್ಲಿಯೇ ನನಗೆ ಶಸ್ತ್ರವೊಂದನ್ನೂ ದಯಪಾಲಿಸು.''

ರಾವಣನು ಹೀಗೆ ಪ್ರಾರ್ಥಿಸಲು ಭೂತಪತಿಯಾದ ಶಂಕರನು ರಾವಣನಿಗೆ ಚಂದ್ರಹಾಸವೆಂಬ ಪ್ರಸಿದ್ಧವಾದ ಉಗ್ರವಾದ ಖಡ್ಗವನ್ನೂ, ದೀರ್ಘಾಯುಷ್ಯದ ಉಳಿದ ಭಾಗವು ಮಧ್ಯದಲ್ಲಿ ಯಾವ ವಿಧವಾದ ಆಪತ್ತಿಗೂ ಒಳಗಾಗದೇ ಪೂರ್ಣವಾಗಿ ಕಳೆಯುವ ವರವನ್ನೂ ದಯಪಾಲಿಸಿ ರಾವಣನಿಗೆ ಹೇಳಿದನು :

''ರಾವಣ ! ನಾನು ದಯಪಾಲಿಸಿರುವ ಚಂದ್ರಹಾಸವೆಂಬ ಈ ಖಡ್ಗವನ್ನು ಯಾವುದೇ ಕಾರಣದಿಂದಲೂ ಅವಹೇಳನ ಮಾಡಬಾರದು. ಹಾಗೇನಾದರೂ ಉಪೇಕ್ಷಿಸಿದರೆ ಅದು ನನ್ನನ್ನೇ ಬಂದು ಸೇರುತ್ತದೆ. ಇದರಲ್ಲಿ ಸಂಶಯವೇ ಇಲ್ಲ.''

ಹೀಗೆ ಮಹೇಶ್ವರನಿಂದ ಅನ್ವರ್ಥವಾಗಿ 'ರಾವಣ' ಎಂದು ನಾಮಕರಣಗೊಂಡ ದಶಗ್ರೀವನು ಮಹಾದೇವನಿಗೆ ಅಭಿವಂದಿಸಿ ಪುಷ್ಪಕವಿಮಾನ

ವನ್ನು ಹತ್ತಿದನು. ಅನಂತರ ಅವನು ದಿಗ್ವಿಜಯಕ್ಕಾಗಿ ಮಹಾವೀರ್ಯ ರಾದ ಕ್ಷತ್ರಿಯರನ್ನು ಬಾಧೆಪಡಿಸುತ್ತಾ ಹಲವಾರು ಬಾರಿ ಭೂಮಂಡಲದಲ್ಲಿ ಸಂಚರಿಸಿದನು. ಯುದ್ಧೋನ್ಮತ್ತರಾಗಿದ್ದ, ಮಹಾಶೂರರೂ ತೇಜಸ್ವಿಗಳೂ ಆಗಿದ್ದ ಕೆಲವರು ಕ್ಷತ್ರಿಯರು ರಾವಣನ ಆಜ್ಞೆಯನ್ನು ಪರಿಪಾಲಿಸದ ಕಾರಣ ದಿಂದ ಪರಿವಾರಸಹಿತರಾಗಿ ವಿನಾಶಹೊಂದಿದರು. ಬುದ್ಧಿವಂತರೆನಿಸಿಕೊಂಡಿದ್ದ ಕೆಲವರು ರಾಜರು ರಾಕ್ಷಸನು ದುರ್ಜಯನೆಂದು ಮನಗಂಡು ಬಲದರ್ಪಿತ ನಾದ ರಾವಣನಿಗೆ -' **ಜಿತಾಃ ಸ್ಮಃ** ' 'ನಾವು ಪರಾಜಿತರಾಗಿದ್ದೇವೆ' – ಎಂದು ಹೇಳಿಕೊಂಡು ಅವನ ಆಜ್ಞಾಧಾರಕರಾಗಿರುತ್ತಿದ್ದರು.

16ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **17ನೆಯ ಸರ್ಗ**

ಬಲಾತ್ಕರಿಸಿದ ರಾವಣನಿಗೆ ವೇದವತಿಯ ಶಾಪ : ವೇದವತಿಯ ಅಗ್ನಿಪ್ರವೇಶ : ಜನ್ಮಾಂತರದಲ್ಲಿ ಸೀತಾರೂಪದಿಂದ ಅವಳ ಪ್ರಾದುರ್ಭಾವ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಅಥ ರಾಜನ್ಮಹಾಬಾಹುರ್ವಿಚರನ್ಪೃಥಿವೀತಲೇ ।
ಹಿಮವದ್ವನಮಾಸಾದ್ಯ ಪರಿಚಕ್ರಾಮ ರಾವಣಃ ॥1॥

''ರಾಘವ ! ಅನಂತರ ಮಹಾಬಾಹುವಾದ ರಾವಣನು ದಿಗ್ವಿಜಯ ಕ್ಕಾಗಿ ಭೂಮಂಡಲವನ್ನು ಸಂಚರಿಸುತ್ತಾ ಹಿಮವತ್ಪರ್ವತಕ್ಕೂ ಹೋಗಿ ಅಲ್ಲಿದ್ದ ಉದ್ಯಾನವನವೊಂದರಲ್ಲಿ ಅಲೆದಾಡುತ್ತಿದ್ದನು.

ಆ ಉದ್ಯಾನವನದಲ್ಲಿ ರಾವಣನು ಅನಿರೀಕ್ಷಿತವಾಗಿ ಕೃಷ್ಣಾಜಿನವನ್ನು ಹೊದೆದುಕೊಂಡು ಜಟಾಧಾರಿಣಿಯಾಗಿದ್ದ ಕನ್ಯೆಯೊಬ್ಬಳನ್ನು ನೋಡಿದನು. ಅವಳು ಋಷಿಪ್ರೋಕ್ತವಾದ ವಿಧಿಯಿಂದ ತಪಸ್ಸನ್ನಾಚರಿಸುತ್ತಿದ್ದು ದೇವಾಂಗನೆಯಂತೆಯೇ ಪ್ರದೀಪ್ತವಾದ ತೇಜಸ್ಸಿನಿಂದ ಬೆಳಗುತ್ತಿದ್ದಳು. ಉತ್ತಮವಾದ ಮತ್ತು ಮಹತ್ತಾದ ವ್ರತವನ್ನಾಚರಿಸುತ್ತಿದ್ದ ರೂಪಸಂಪನ್ನೆ ಯಾದ ಆ ಕನ್ಯೆಯನ್ನು ನೋಡಿದೊಡನೆಯೇ ಕಾಮಮೋಹಿತನಾದ ರಾವಣನು ಗಟ್ಟಿಯಾಗಿ ನಗುತ್ತಾ ಋಷಿಕನ್ಯೆಯನ್ನು ಪ್ರಶ್ನಿಸಿದನು :

ಕಿಮಿದಂ ವರ್ತಸೇ ಭದ್ರೇ ವಿರುದ್ಧಂ ಯೌವನಸ್ಯ ತೇ ।
ನ ಹಿ ಯುಕ್ತಾ ತವೈತಸ್ಯ ರೂಪಸ್ಯೈವಂ ಪ್ರತಿಕ್ರಿಯಾ ॥4॥

''ಮಂಗಳಾಂಗಿಯೇ! ನೀನು ನಿನ್ನ ಯೌವನಕ್ಕೆ ವಿರುದ್ಧವಾಗಿ ಹೀಗೇಕೆ ವ್ಯವಹರಿಸುತ್ತಿರುವೆ ? ನಿನ್ನಲ್ಲಿರುವ ಇಂತಹ ರೂಪಲಾವಣ್ಯಕ್ಕೆ ನಿನ್ನ ಈ ಕ್ರಿಯೆಯು ಸ್ವಲ್ಪವಾದರೂ ಉಚಿತವಾಗಿಲ್ಲ.

ರೂಪಂ ತೇಽನುಪಮಂ ಭೀರು ಕಾಮೋನ್ಮಾದಕರಂ ನೃಣಾಮ್ ।
ನ ಯುಕ್ತಂ ತಪಸಿ ಸ್ಥಾತುಂ ನಿರ್ಗತೋ ಹ್ಯೇಷ ನಿರ್ಣಯಃ ॥5॥

ನಿಶ್ಚಯವಾಗಿಯೂ ನಿನ್ನ ಈ ದಿವ್ಯರೂಪವು ಅನುಪಮವಾದುದು. ಈ ನಿನ್ನ ರೂಪಕ್ಕೆ ಸಾಟಿಯೇ ಇಲ್ಲ. ಅಸಾಧಾರಣವಾದ ನಿನ್ನ ಈ ರೂಪವು ಪುರುಷರ ಹೃದಯದಲ್ಲಿ ಕಾಮಜನಿತವಾದ ಉನ್ಮಾದವನ್ನುಂಟುಮಾಡುತ್ತದೆ. ಆದುದರಿಂದ ಇಂತಹ ಅನುಪಮರೂಪವತಿಯಾಗಿರುವ ನೀನು ಹೀಗೆ ತಪಸ್ಸಿನಲ್ಲಿ ತೊಡಗಿರುವುದು ಉಚಿತವಲ್ಲ. ಇದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ.

ಕಸ್ಯಾಸಿ ಕಿಮಿದಂ ಭದ್ರೇ ಕಶ್ಚ ಭರ್ತಾ ವರಾನನೇ ।
ಯೇನ ಸಮ್ಭುಜ್ಯಸೇ ಭೀರು ಸ ನರಃ ಪುಣ್ಯಭಾಗ್ಭುವಿ ।
ಪೃಚ್ಛತಃ ಶಂಸ ಮೇ ಸರ್ವಂ ಕಸ್ಯ ಹೇತೋಃ ಪರಿಶ್ರಮಃ ॥6॥

ಮಂಗಳಾಂಗಿಯೇ ! ಹೇಳು. ನೀನು ಯಾರ ಮಗಳು ? ನೀನು ಯಾವ ವ್ರತವನ್ನು ಅನುಷ್ಠಾನಮಾಡುತ್ತಿರುವೆ ? ನಿನ್ನ ಪತಿಯು ಯಾರು ? ಯಾರಿಂದ ನೀನು ಉಪಭೋಗಿಸಲ್ಪಡುವೆ ? ನಿನ್ನನ್ನು ಉಪಭೋಗಿಸುವ ಆ ಮನುಷ್ಯನು ನಿಶ್ಚಯವಾಗಿಯೂ ಪುಣ್ಯಾತ್ಮನೇ ಸರಿ. ಯಾವನ ಸಲುವಾಗಿ ನೀನು ಹೀಗೆ ಕಷ್ಟಪಡುತ್ತಿರುವೆ ? ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನನಗೆ ಹೇಳು.''

ರಾವಣನು ಹೀಗೆ ಪ್ರಶ್ನಿಸಲು ಯಶೋವತಿಯಾದ ತಪೋಧನೆಯಾದ ಆ ಋಷಿಕನ್ಯೆಯು ರಾವಣನಿಗೆ ವಿಧಿವತ್ತಾಗಿ ಆತಿಥ್ಯವನ್ನು ಮಾಡಿ ಹೇಳಿದಳು :

''ಪೂಜ್ಯನೇ ! ಮಹಾತೇಜಸ್ವಿಯಾದ ಬ್ರಹ್ಮರ್ಷಿಯಾದ ಕುಶಧ್ವಜ

ನೆಂಬುವನು ನನ್ನ ತಂದೆ. ಶ್ರೀಮಂತನಾದ ಆ ನನ್ನ ತಂದೆಯು ಬೃಹಸ್ಪತಿಯ ಮಗನು. ಬುದ್ಧಿಯಲ್ಲಿಯೂ ನನ್ನ ತಂದೆಯು ದೇವಗುರುವಾದ ಬೃಹಸ್ಪತಿಗೆ ಅನುರೂಪನಾಗಿಯೇ ಇದ್ದನು. ಅನುದಿನವೂ ವೇದಾಭ್ಯಾಸವನ್ನು ಮಾಡುತ್ತಿದ್ದ ಆ ನನ್ನ ತಂದೆಗೆ ವಾಙ್ಮಯದ ಮೂರ್ತಸ್ವರೂಪಳಾಗಿ ನಾನು ಪ್ರಾದುರ್ಭವಿಸಿದೆನು. ಈ ಕಾರಣದಿಂದಲೇ ನನ್ನ ಹೆಸರು ವೇದವತೀ ಎಂದು. ನಾನು ಪ್ರೌಢೆಯಾದ ನಂತರ ದೇವ –ಗಂಧರ್ವ–ಯಕ್ಷ–ರಾಕ್ಷಸ–ನಾಗರು ನನ್ನ ತಂದೆಯ ಬಳಿಗೆ ಬಂದು ನನ್ನನ್ನು ವಿವಾಹಮಾಡಿಕೊಳ್ಳಬೇಕೆನ್ನುವ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ನನ್ನ ತಂದೆಯು ಅವರಾರಿಗೂ ನನ್ನನ್ನು ವಿವಾಹಮಾಡಿಕೊಡಲಿಲ್ಲ. ರಾಕ್ಷಸೇಶ್ವರನೇ! ಅದಕ್ಕೆ ಕಾರಣವೇನೆಂಬುದನ್ನು ಹೇಳುವೆನು ; ಕೇಳು :

ನನ್ನ ತಂದೆಗೆ ತ್ರಿಲೋಕೇಶ್ವರನಾದ ಮಹಾವಿಷ್ಣುವೇ ತನ್ನ ಅಳಿಯನಾಗಬೇಕೆಂಬ ಅಭಿಲಾಷೆಯಿದ್ದಿತು. ಈ ಕಾರಣದಿಂದಲೇ ಅವನು ನನ್ನನ್ನು ಬೇರೆ ಯಾರಿಗೂ ಮದುವೆಮಾಡಿಕೊಡಲು ಇಷ್ಟಪಡಲಿಲ್ಲ. ಅವನ ಈ ಅಭಿಪ್ರಾಯವನ್ನು ಕೇಳಿ ಬಲದರ್ಪಿತನಾಗಿದ್ದ, ದೈತ್ಯರಾಜನಾದ, ಪಾಪಿಷ್ಠನಾದ ಶಂಭು ಎಂಬುವನು ನನ್ನ ತಂದೆಯ ಮೇಲೆ ಕೋಪಗೊಂಡು ರಾತ್ರಿಯಲ್ಲಿ ನನ್ನ ತಂದೆಯು ಮಲಗಿದ್ದಾಗ ಅವನನ್ನು ಸಂಹರಿಸಿದನು. ಅನಂತರ ಮಹಾಭಾಗ್ಯಶಾಲಿನಿಯಾದ ನನ್ನ ತಾಯಿಯು ಪತಿಯ ಮರಣದಿಂದ ಅತ್ಯಂತ ದುಃಖಿತಳಾಗಿ ಅವನನ್ನು ತಬ್ಬಿಕೊಂಡೇ ಚಿತೆಯೇರಿದಳು. ಅಂದಿನಿಂದಲೂ ನಾನು ನನ್ನ ತಂದೆಯ ಮನೋರಥವನ್ನು ಪೂರ್ಣಗೊಳಿಸುವ ಪ್ರತಿಜ್ಞೆಯನ್ನು ಕೈಗೊಂಡು ಯಾವಾಗಲೂ ಶ್ರೀಮನ್ನಾರಾಯಣನನ್ನೇ ಹೃತ್ಕಮಲದಲ್ಲಿ ಧ್ಯಾನಮಾಡುತ್ತಿರುವೆನು. ಇಂತಹ ಪ್ರತಿಜ್ಞೆಯನ್ನು ಮಾಡಿರುವ ನಾನು ಅದನ್ನು ಸಾಧಿಸುವ ಸಲುವಾಗಿ ವಿಪುಲವಾದ ತಪಸ್ಸನ್ನೂ ಆಚರಿಸುತ್ತಿದ್ದೇನೆ. ನಾನು ತಪಸ್ಸನ್ನಾಚರಿಸುತ್ತಿರುವುದಕ್ಕೂ, ಮಹಾವ್ರತನಿಷ್ಠಳಾಗಿರುವುದಕ್ಕೂ ಇದೇ ಕಾರಣವಾಗಿದೆ. ರಾಕ್ಷಸಶ್ರೇಷ್ಠನೇ ! ನನ್ನ ಕುಲ–ಗೋತ್ರಗಳನ್ನು ಪ್ರಶ್ನಿಸಿದ ನಿನಗೆ ಎಲ್ಲ ವಿಷಯಗಳನ್ನೂ ಯಥಾ ವತ್ತಾಗಿ ಹೇಳಿರುವೆನು.

ನಾರಾಯಣೋ ಮಮ ಪತಿರ್ನ ತ್ವನ್ಯಃ ಪುರುಷೋತ್ತಮಾತ್ ।
ಆಶ್ರಯೇ ನಿಯಮಂ ಘೋರಂ ನಾರಾಯಣಪರೀಪ್ಸಯಾ ॥18॥

ನಾರಾಯಣನೇ ನನ್ನ ಪತಿಯು, ಪುರುಷೋತ್ತಮನಾದ ನಾರಾಯಣನನ್ನು ಬಿಟ್ಟು ಬೇರೆ ಯಾವನೂ ನನಗೆ ಪತಿಯಾಗಲಾರನು. ನಾರಾಯಣನನ್ನೇ ಪತಿಯನ್ನಾಗಿ ಹೊಂದಲು ಇನ್ನೂ ಕಠೋರವಾದ ವ್ರತಗಳನ್ನಾದರೂ ಆಚರಿಸುತ್ತೇನೆ.

ಪೌಲಸ್ತ್ಯತನಯನೇ! ನೀನಾರೆಂಬುದೂ ನನಗೆ ತಿಳಿದಿದೆ. ಮೂರು ಲೋಕಗಳಲ್ಲಿಯೂ ಯಾವ ವಸ್ತುಗಳಿವೆಯೋ ಮತ್ತು ಯಾವುದು ನಡೆಯುತ್ತದೆಯೋ - ಅವೆಲ್ಲವನ್ನೂ ನಾನು ನನ್ನ ತಪಸ್ಸಿನ ಪ್ರಭಾವದಿಂದ ತಿಳಿದಿರು ತ್ತೇನೆ. ನೀನಿನ್ನು ಪ್ರಯಾಣಮಾಡಬಹುದು.''

ವೇದವತಿಯ ಆ ಮಾತನ್ನು ಕೇಳಿ ಕಾಮನ ಬಾಣಗಳಿಂದ ಪೀಡಿತ ನಾಗಿದ್ದ ರಾವಣನು ವಿಮಾನದ ಮುಂಭಾಗದಿಂದ ಕೆಳಗಿಳಿದು ಬಂದು ಮಹಾವ್ರತನಿಷ್ಠಳಾಗಿದ್ದ ಕನ್ಯೆಗೆ ಹೇಳಿದನು :

''ಸುಂದರವಾದ ನಿತಂಬವುಳ್ಳವಳೇ! ಇಂತಹ ವಿಪರೀತವಾದ ಬುದ್ಧಿಯನ್ನು ಹೊಂದಿರುವ ನೀನು ನಿಶ್ಚಯವಾಗಿಯೂ ಗರ್ವಿಷ್ಠಳಾಗಿರುವೆ. ಹರಿಣಲೋಚನೆಯೇ ! ಕಠೋರತಪಸ್ಸಿನ ಮೂಲಕ ಪುಣ್ಯಸಂಚಯವೆಂಬುದು ವೃದ್ಧರಾದವರಿಗೇ ಹೊರತು ನಿನ್ನಂತಹ ಯುವತಿಯರಿಗಲ್ಲ. ನೀನು ಸರ್ವಗುಣಸಂಪನ್ನೆಯಾಗಿರುವೆ. ತ್ರಿಲೋಕಸುಂದರಿಯಾಗಿರುವೆ. ನಿನ್ನಂತಹವಳು ಇಂತಹ ಮಾತುಗಳನ್ನಾಡಬಾರದು. ನಿನ್ನ ಈ ಯೌವನವು ದಿನ-ದಿನಕ್ಕೂ ಕಳೆದುಹೋಗುತ್ತಿರುವುದು.

ಮಂಗಳಾಂಗಿಯೇ ! ನಾನು ಲಂಕೇಶ್ವರನು. ದಶಗ್ರೀವನೆಂದು ಭುವಿಯಲ್ಲಿ ಖ್ಯಾತನಾಗಿರುವೆನು. ಅಂತಹ ನನಗೆ ನೀನು ಭಾರ್ಯೆಯಾಗು. ಸುಖಪೂರ್ವಕವಾಗಿ ಎಲ್ಲ ಭೋಗಗಳನ್ನೂ ಯಥೇಷ್ಟವಾಗಿ ಉಪಭೋಗಿಸು.

'ವಿಷ್ಣು-ವಿಷ್ಣು' ಎಂದು ನೀನು ಯಾವನ ವಿಷಯವಾಗಿ ಮಾತನಾಡಿದೆಯೋ ಮತ್ತು ಯಾವನನ್ನು ನೀನು ಕಾಮಿಸಿರುವೆಯೋ - ಆ ವಿಷ್ಣುವೆಂಬುವನು ಯಾರು ? ಅವನು ಯಾರೇ ಆಗಿರಲಿ ! ವೀರ್ಯ - ತಪಸ್ಸು-

ಭೋಗ-ಬಲ ಇವುಗಳಲ್ಲಿ ಅವನು ನನಗೆ ಖಂಡಿತವಾಗಿಯೂ ಸಮಾನನಾಗಲಾರನು.''

ದಶಗ್ರೀವನು ಹೀಗೆ ಹೇಳಲು ಕುಮಾರಿಯಾದ ವೇದವತಿಯು ಕುಪಿತಳಾಗಿ ಹೇಳಿದಳು :

ಮಾ ಮೈವಂ -ರಾಕ್ಷಸೇಶ್ವರ ! ಹೀಗೆಂದಿಗೂ ಹೇಳಬೇಡ.

ತ್ರೈಲೋಕ್ಯಾಧಿಪತಿಂ ವಿಷ್ಣುಂ ಸರ್ವಲೋಕನಮಸ್ಕೃತಮ್ ।
ತ್ವದೃತೇ ರಾಕ್ಷಸೇನ್ದ್ರಾನ್ಯಃ ಕೋಽವಮನ್ಯೇತ ಬುದ್ಧಿಮಾನ್ ॥26॥

''ರಾಕ್ಷಸೇಂದ್ರನೇ ! ಭಗವಾನ್ ವಿಷ್ಣುವು ಮೂರು ಲೋಕಗಳಿಗೂ ಅಧಿಪತಿಯು. ಸಮಸ್ತರಿಂದಲೂ ನಮಸ್ಕರಿಸಲ್ಪಡತಕ್ಕವನು. ನಿನ್ನೊಬ್ಬನ ಹೊರತಾಗಿ ಬುದ್ಧಿವಂತನಾದ ಯಾವನು ತಾನೇ ಪರಮಪುರುಷನಾದ ಮಹಾವಿಷ್ಣುವನ್ನು ಅವಮಾನಿಸುವನು ?''

ವೇದವತಿಯು ಹೀಗೆ ಹೇಳಲು ನಿಶಾಚರನು ವೇದವತಿಯ ಮುಡಿಯನ್ನು ಹಿಡಿದನು. ಅದರಿಂದ ವೇದವತಿಯು ಪರಮಕ್ರುದ್ಧೆಯಾದಳು. ತನ್ನ ಕೈಯನ್ನೇ ಕತ್ತಿಯನ್ನಾಗಿ ಮಾಡಿಕೊಂಡು ರಾವಣನು ಕೈಯಲ್ಲಿ ಹಿಡಿದಿದ್ದ ಮುಡಿಯನ್ನು ಕತ್ತರಿಸಿಬಿಟ್ಟಳು. ರಾವಣನ ಕೈಯಲ್ಲಿ ಅವಳ ಕೇಶರಾಶಿಯುಳಿಯಿತು. ಆ ಸಮಯದಲ್ಲಿ ವೇದವತಿಯು ಕೋಪದಿಂದ ಉರಿಯುತ್ತಾ ದಶಗ್ರೀವನನ್ನೇ ದಹಿಸಿಬಿಡುವಳೋ ಎಂಬಂತೆ ಕಾಣುತ್ತಿದ್ದಳು. ದೇಹತ್ಯಾಗಮಾಡಲು ನಿಶ್ಚಯಿಸಿ ಅಗ್ನಿಯನ್ನು ಪ್ರತಿಷ್ಠಾಪಿಸಿ ರಾವಣನಿಗೆ ಹೇಳಿದಳು :

ಧರ್ಷಿತಾಯಾಸ್ತ್ವಯಾನಾರ್ಯ ನ ಮೇ ಜೀವಿತಮಿಷ್ಯತೇ ।
ರಕ್ಷಸ್ತಸ್ಮಾತ್ಪ್ರವೇಕ್ಷ್ಯಾಮಿ ಪಶ್ಯತಸ್ತೇ ಹುತಾಶನಮ್ ॥30॥

'' ಅನಾರ್ಯನೇ ! ನೀನು ನನ್ನನ್ನು ಬಲಾತ್ಕಾರದಿಂದ ಆಕ್ರಮಿಸಿದೆಯಾದ್ದರಿಂದ ನಾನು ಬದುಕಿರಲು ಬಯಸುವುದಿಲ್ಲ. ನಿಶಾಚರನೇ ! ಆದುದರಿಂದ ನೀನು ನೋಡುತ್ತಿರುವಂತೆಯೇ ಬೆಂಕಿಯಲ್ಲಿ ಬೀಳುತ್ತೇನೆ.

ಪಾಪಾತ್ಮನಾದ ನೀನು ಈ ಅರಣ್ಯದಲ್ಲಿ ನನ್ನನ್ನು ಮುಟ್ಟಿ ಅಪಮಾನ

ಗೊಳಿಸಿದ ಕಾರಣ ನಿನ್ನನ್ನು ಸಂಹರಿಸುವ ಸಲುವಾಗಿಯೇ ನಾನು ಮತ್ತೆ ಹುಟ್ಟಿಬರುವೆನು.

ನ ಹಿ ಶಕ್ಯಃ ಸ್ತ್ರಿಯಾ ಹನ್ತುಂ ಪುರುಷಃ ಪಾಪನಿಶ್ಚಯಃ ।
ಶಾಪೇ ತ್ವಯಿ ಮಯೋತ್ಸೃಷ್ಟೇ ತಪಸಶ್ಚ ವ್ಯಯೋ ಭವೇತ್ ॥

ಹೆಂಗಸಾದವಳಿಗೆ ತನ್ನ ಶರೀರದ ಬಲದಿಂದ ಪಾಪಿಷ್ಠನಾದ ಪುರುಷ ನನ್ನು ಸಂಹರಿಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ನಾನೇನಾದರೂ ಶಾಪಕೊಟ್ಟೆನಾದರೆ ನಾನು ಮಾಡಿರುವ ತಪಸ್ಸಿನ ಫಲವು ಕ್ಷೀಣಿಸುತ್ತದೆ.

ಯದಿ ತ್ವಸ್ತಿ ಮಯಾ ಕಿಂಚಿತ್ಕೃತಂ ದತ್ತಂ ಹುತಂ ತಥಾ ।
ತಸ್ಮಾತ್ತ್ವಯೋನಿಜಾ ಸಾಧ್ವೀ ಭವೇಯಂ ಧರ್ಮಿಣಃ ಸುತಾ ॥33॥

ನಾನೇನಾದರೂ ಈ ಜನ್ಮದಲ್ಲಿ ಸ್ವಲ್ಪವಾದರೂ ಸತ್ಕರ್ಮವನ್ನು ಮಾಡಿದ್ದರೆ, ದಾನಮಾಡಿದ್ದರೆ, ಹೋಮಮಾಡಿದ್ದರೆ – ಅದರ ಫಲದಿಂದಾಗಿ ನಾನು ಅಯೋನಿಜೆಯಾಗಿ ಹುಟ್ಟುವಂತಾಗಲಿ. ಧರ್ಮಾತ್ಮನೊಬ್ಬನ ಮಗಳಾಗಿ ಸಾಧ್ವಿಯಾಗಿ ಬಾಳುವಂತಾಗಲಿ.''

ಹೀಗೆ ಹೇಳುತ್ತಲೇ ವೇದವತಿಯು ಧಗಧಗನೆ ಉರಿಯುತ್ತಿದ್ದ ಬೆಂಕಿಯಲ್ಲಿ ಹಾರಿದಳು. ಆ ಸಮಯದಲ್ಲಿ ಸರ್ವತ್ರ ದಿವ್ಯವಾದ ಪುಷ್ಪಗಳ ವೃಷ್ಟಿಯಾಯಿತು.

ಮರುಹುಟ್ಟಿನಲ್ಲಿ ವೇದವತಿಯು ಕಮಲದಲ್ಲಿ ಪ್ರಾದುರ್ಭವಿಸಿದಳು. ತಾವರೆಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದ ಅವಳು ಪುನಃ ರಾವಣಾಸುರನ ಕೈಗೆ ಸಿಕ್ಕಿದಳು. ಕಮಲದ ಒಳಭಾಗದಂತೆ ಮನೋಹರವಾದ ಕಾಂತಿಯಿಂದ ಕೂಡಿದ್ದ, ಕಮಲದಲ್ಲಿ ಸಿಕ್ಕಿದ ಆ ಕನ್ಯೆಯನ್ನು ರಾವಣನು ಅರಮನೆಗೆ ಒಯ್ದು ಮಂತ್ರಿಗೆ ತೋರಿಸಿದನು. ಆ ಮಂತ್ರಿಯು ಬಾಲಕ–ಬಾಲಕಿಯರ ಶುಭಾಶುಭಲಕ್ಷಣಗಳನ್ನು ಚೆನ್ನಾಗಿ ತಿಳಿದವನಾಗಿದ್ದನು. ಕನ್ಯೆಯನ್ನು ಪರೀಕ್ಷಿಸಿ ರಾವಣನಿಗೆ ಹೇಳಿದನು :

ಗೃಹಸ್ಥೈಷಾ ಹಿ ಸುಶ್ರೋಣೀ ತ್ವದ್ವಧಾಯೈವ ದೃಶ್ಯತೇ ॥ 37॥

'' ಈ ಸುಂದರಕನ್ಯೆಯೇನಾದರೂ ನಿನ್ನ ಮನೆಯಲ್ಲೇ ಇದ್ದುದಾದರೆ ನಿಶ್ಚಯವಾಗಿಯೂ ಇವಳು ನಿನ್ನ ವಧೆಗೇ ಕಾರಣಳಾಗುವಳು.''

ರಾಘವ ! ಮಂತ್ರಿಯು ಹೇಳಿದ ಮಾತನ್ನು ಕೇಳಿ ಭಯಗೊಂಡ ರಾವಣನು ಕನ್ಯೆಯನ್ನು ಒಂದು ಪೆಟ್ಟಿಗೆಯಲ್ಲಿರಿಸಿ ಸಮುದ್ರದಲ್ಲಿ ಹಾಕಿಬಿಟ್ಟನು. ಮುಂದೆ ಆ ಪೆಟ್ಟಿಗೆಯು ಹೇಗೋ ಜನಕರಾಜನ ಯಜ್ಞಭೂಮಿಯ ಮಧ್ಯದಲ್ಲಿ ಸೇರಿಕೊಂಡಿತು. ಜನಕರಾಜನು ಯಜ್ಞದ ಸಲುವಾಗಿ ಭೂಮಿಯನ್ನು ಉಳುತ್ತಿದ್ದಾಗ ಆ ಪೆಟ್ಟಿಗೆಯು ನೇಗಿಲ ಗುಳಕ್ಕೆ ಸಿಕ್ಕಿ ಸಾಲುಗಳ ಮಧ್ಯೆ ಗೆರೆಯ ಮೂಲಕವಾಗಿ ಹೊರಬಂದಿತು. ಆ ಪೆಟ್ಟಿಗೆಯನ್ನು ತೆಗೆಸಿ ಅದರಲ್ಲಿದ್ದ ಹೆಣ್ಣುಶಿಶುವನ್ನು ಜನಕರಾಜನು ತನ್ನ ಮಗಳೆಂದೇ ಭಾವಿಸಿ ಸಾಕತೊಡಗಿದನು. ಅವಳೇ ಸಾಧ್ವೀ ವೇದವತಿಯು. ಧರ್ಮಾತ್ಮನಾದ ಜನಕನಿಗೆ ಮಗಳಾದಳು. ಮುಂದೆ ಅವಳೇ ನಿನ್ನ ಪತ್ನಿಯೂ ಆದಳು. ಮಹಾವಿಷ್ಣುವನ್ನೇ ಪತಿಯನ್ನಾಗಿ ಪಡೆಯಬೇಕೆಂದು ತಪಸ್ಸನ್ನು ಮಾಡಿ ಜನಕನ ಮಗಳಾದ ವೇದವತಿಯು ನಿನ್ನನ್ನು ಮದುವೆಯಾದ ಕಾರಣ ನೀನು ಮಹಾವಿಷ್ಣುವೆಂಬುದರಲ್ಲಿ ಸಂಶಯವೇ ಇಲ್ಲ. **ವಿಷ್ಣುಸ್ತ್ವಂ ಹಿ ಸನಾತನಃ-** ಸನಾತನನಾದ ವಿಷ್ಣುವೇ ನೀನಾಗಿರುವೆ.

ಹಿಂದೆ ವೇದವತಿಯು ಕೋಪದಿಂದ ಸಂಹರಿಸಿದ್ದ ಪರ್ವತಾಕಾರನಾದ ರಾವಣರಾಕ್ಷಸನನ್ನೇ ಅಮಾನುಷವಾದ ಪರಾಕ್ರಮವನ್ನು ಆಶ್ರಯಿಸಿ ನೀನೀಗ ಸಂಹರಿಸಿರುವೆ. ಹೀಗೆ ಮಹಾಭಾಗ್ಯಶಾಲಿನಿಯಾದ ವೇದವತೀದೇವಿಯು ಪ್ರತಿಯೊಂದು ಕಲ್ಪದಲ್ಲಿಯೂ ರಾವಣನ ವಧೆಯ ಸಲುವಾಗಿ ಭೂಮಂಡಲದಲ್ಲಿ ಅವತರಿಸುತ್ತಿರುತ್ತಾಳೆ. ನೇಗಿಲಿನಿಂದ ಉಳುವಾಗ ಕ್ಷೇತ್ರದಲ್ಲಿ ಯಜ್ಞವೇದಿಯಲ್ಲಿರುವ ಅಗ್ನಿಶಿಖೆಯಂತೆ ಇವಳ ಪ್ರಾದುರ್ಭಾವವಾಗುತ್ತದೆ. ಕೃತಯುಗದಲ್ಲಿ ಇವಳ ಹೆಸರು ವೇದವತೀ ಎಂಬುದಾಗಿದ್ದಿತು. ತ್ರೇತಾಯುಗವು ಪ್ರಾರಂಭವಾದನಂತರ ಇವಳು ರಾವಣನ ಸಂಹಾರಕ್ಕಾಗಿಯೇ ಮಿಥಿಲೇಶ್ವರನಾದ ಮಹಾತ್ಮನಾದ ಜನಕಮಹಾರಾಜನ ಕುಲದಲ್ಲಿ ಹುಟ್ಟಿದಳು. ನೇಗಿಲಿನ ಗುಳದ ಗೀರಿನಲ್ಲಿ ಇವಳ ಆವಿರ್ಭಾವವಾದುದರಿಂದ ಮಾನವರು ಇವಳನ್ನು ಸೀತಾ ★ ಎಂದೇ ಕರೆದರು.

17ನೆಯ ಸರ್ಗವು ಮುಗಿಯಿತು.

★ ಸೀತಾ : ನೇಗಿಲಿನಿಂದ ಉತ್ತ ಭೂಮಿಯಲ್ಲಿ ಉಂಟಾಗುವ ನೇಗಿಲಿನ ಗೀರು. ಸೀತಾ ಲಾಂಗಲ ಪದ್ಧತಿಃ (ಅಮರಃ)

ರಾವಣನಿಂದ ಮರುತ್ತನ ಪರಾಜಯ : ಇಂದ್ರಾದಿ ದೇವತೆಗಳಿಂದ ಪಕ್ಷಿಗಳಿಗೆ ವರಪ್ರದಾನ

ಪ್ರವಿಷ್ಟಾಯಾಂ ಹುತಾಶಂ ತು ವೇದವತ್ಯಾಂ ಸ ರಾವಣಃ ।
ಪುಷ್ಪಕಂ ತು ಸಮಾರುಹ್ಯ ಪರಿಚಕ್ರಾಮ ಮೇದಿನೀಮ್ ॥ 1॥

ರಾಘವ ! ವೇದವತಿಯು ಅಗ್ನಿಪ್ರವೇಶಮಾಡಿದನಂತರ ರಾವಣನು ಪುಷ್ಪಕವಿಮಾನದಲ್ಲಿ ಕುಳಿತು ಭೂಮಂಡಲದಲ್ಲಿ ಸಂಚರಿಸತೊಡಗಿದನು.

ಹಾಗೆಯೇ ಸಂಚರಿಸುತ್ತಿದ್ದಾಗ ರಾವಣನು ಉಶೀರಬೀಜವೆಂಬ ಹೆಸರಿನ ದೇಶದಲ್ಲಿಳಿದು ಮರುತ್ತನೆಂಬ ರಾಜನು ದೇವತೆಗಳೊಡನೆ ಯಜ್ಞ ಮಾಡುತ್ತಿರುವುದನ್ನು ನೋಡಿದನು. ಬೃಹಸ್ಪತಿಯ ಸಹೋದರನೂ ಧರ್ಮಜ್ಞನೂ ಆದ ಸಂವರ್ತನೆಂಬ ಬ್ರಹ್ಮರ್ಷಿಯು ಸಮಸ್ತದೇವತೆಗಳಿಂದಲೂ ಪರಿವೃತನಾಗಿ ಮರುತ್ತನಿಂದ ಯಜ್ಞವನ್ನು ಮಾಡಿಸುತ್ತಿದ್ದನು. ಬ್ರಹ್ಮನಿಂದ ವರಗಳನ್ನು ಪಡೆದು ಯಾರಿಂದಲೂ ಜಯಿಸಲ್ಪಡದವನಾಗಿದ್ದ ರಾವಣನನ್ನು ನೋಡಿದೊಡನೆಯೇ ಅವನು ತಮ್ಮ ಮೇಲೆ ಆಕ್ರಮಣನಡೆಸುವನೆಂಬ ಭಯದಿಂದ ದೇವತೆಗಳೆಲ್ಲರೂ ಪಶು –ಪಕ್ಷಿಗಳ ರೂಪಗಳನ್ನು ತಾಳಿದರು.

ಇನ್ದ್ರೋ ಮಯೂರಃ ಸಂವೃತ್ತೋ ಧರ್ಮರಾಜಸ್ತು ವಾಯಸಃ ।
ಕೃಕಲಾಸೋ ಧನಾಧ್ಯಕ್ಷೋ ಹಂಸಶ್ಚ ವರುಣೋಽಭವತ್ ॥5॥

ಇಂದ್ರನು ನವಿಲಿನ ರೂಪ ಧರಿಸಿದನು. ಯಮಧರ್ಮನು ಕಾಗೆಯಾದನು. ಕುಬೇರನು ಓತೀಕೇತವಾದನು. ವರುಣನು ಹಂಸಪಕ್ಷಿಯಾದನು.

ಇಂದ್ರಾದಿಗಳಂತೆಯೇ ಇತರ ದೇವತೆಗಳೂ ಪಶು –ಪಕ್ಷಿಗಳಾಗಿ ರೂಪಾಂತರವನ್ನು ಹೊಂದಲಾಗಿ – ರಾವಣನು ಅಪವಿತ್ರವಾದ ನಾಯಿಯಂತೆ ಯಜ್ಞಮಂಟಪವನ್ನು ಪ್ರವೇಶಿಸಿದನು. ಬಳಿಕ ರಾವಣನು ಯಜ್ಞದ ಯಜಮಾನನಾಗಿದ್ದ ಮರುತ್ತನನ್ನು ಸಮೀಪಿಸಿ ಹೇಳಿದನು : '' ನರೇಶನೇ ! ನನ್ನೊಡನೆ ಯುದ್ಧಮಾಡು ಅಥವಾ ಪರಾಜಿತನಾದೆನೆಂದಾದರೂ ಹೇಳು.''

ಆದಕ್ಕುತ್ತರವಾಗಿ ಮರುತ್ತನು ನೀನಾರೆಂದು ಪ್ರಶ್ನಿಸಿದನು. ಹೀಗೆ ಪ್ರಶ್ನಿಸುತ್ತಲೇ ರಾವಣನು ಅಟ್ಟಹಾಸದಿಂದ ನಗುತ್ತಾ ಹೇಳಿದನು :

'' ಭೂಪಾಲನೇ ! ನಾನು ಕುಬೇರನ ತಮ್ಮ ರಾವಣನು. ನಾನಾರೆಂಬುದು ನಿನಗೆ ತಿಳಿದೇ ಇಲ್ಲವೇ ? ನನ್ನನ್ನು ನೋಡಿದ ನಂತರವೂ ನಿನ್ನ ಮನಸ್ಸಿನಲ್ಲಿ ಕುತೂಹಲವೇ ಉಂಟಾಗಲಿಲ್ಲವೇ ? ನನ್ನನ್ನು ಪ್ರತ್ಯಕ್ಷವಾಗಿ ನೋಡಿಯೂ ಭಯಪಡದೇ ಇರುವುದಕ್ಕಾಗಿ ನಿನ್ನ ವಿಷಯದಲ್ಲಿ ನಾನು ಪ್ರಸನ್ನನಾದೆನು. ಮೂರು ಲೋಕಗಳಲ್ಲಿಯೂ ನಾನಾರೆಂಬುದನ್ನೂ ನನ್ನ ಬಲವನ್ನೂ ತಿಳಿಯದವನು ಯಾವನಿದ್ದಾನೆ ? ಈಗಲಾದರೋ ನಾನು ನಮ್ಮಣ್ಣನನ್ನೇ ಪರಾಜಯಗೊಳಿಸಿ ಈ ಪುಷ್ಪಕವಿಮಾನವನ್ನು ವಿಜಯದ ಕುರುಹಾಗಿ ತಂದಿರುವೆನು.''

ರಾವಣನ ಆ ಮಾತನ್ನು ಕೇಳಿ ಮರುತ್ತನು ಹೇಳಿದನು :

ಧನ್ಯಃ ಖಲು ಭವಾನ್ಯೇನ ಜ್ಯೇಷ್ಠೋ ಭ್ರಾತಾ ರಣೇ ಜಿತಃ ॥11॥

''ಭಲೇ ರಾವಣೇಶ್ವರ ! ನೀನೇ ಧನ್ಯನು ; ಹಿರಿಯಣ್ಣನನ್ನೇ ಪರಾಜಯಗೊಳಿಸಿದೆಯಲ್ಲವೇ !

ನ ತ್ವಯಾ ಸದೃಶಃ ಶ್ಲಾಘ್ಯಸ್ತ್ರಿಷು ಲೋಕೇಷು ವಿದ್ಯತೇ ।
ಕಂ ತ್ವಂ ಪ್ರಾಕ್ಕೇವಲಂ ಧರ್ಮಂ ಚರಿತ್ವಾ ಲಬ್ಧವಾನ್ ವರಮ್ ॥12॥

ನಿನಗೆ ಸದೃಶನಾದ ಶ್ಲಾಘ್ಯಪುರುಷನು ಮೂರುಲೋಕಗಳಲ್ಲಿಯೂ ಬೇರೊಬ್ಬನಿರಲಾರನು. ನೀನು ಹಿಂದೆ ಯಾವ ಶುದ್ಧವಾದ ಧರ್ಮವನ್ನು ಆಚರಿಸಿ ಇಂತಹ ಅಮೋಘವಾದ ವರಗಳನ್ನು ಪಡೆದುಕೊಂಡೆ ?

ನೀನು ಹೇಳುತ್ತಿರುವ ಮಾತುಗಳನ್ನು ಹಿಂದೆಂದೂ ನಾನು ಕೇಳಿದವನೇ ಅಲ್ಲ. ದುರ್ಬುದ್ಧಿಯವನೇ ! ಯುದ್ಧ ಸನ್ನದ್ಧನಾಗಿ ನಿಲ್ಲು. ಜೀವಸಹಿತನಾಗಿ ನನ್ನಿಂದ ನೀನು ತಪ್ಪಿಸಿಕೊಂಡು ಹೋಗಲಾರೆ. ಈಗಲೇ ನಾನು ನನ್ನಲ್ಲಿರುವ ನಿಶಿತವಾದ ಬಾಣಗಳ ಪ್ರಹಾರಗಳಿಂದ ನಿನ್ನನ್ನು ಯಮನ ಅರಮನೆಗೆ ಕಳುಹಿಸಿಬಿಡುತ್ತೇನೆ. ''

ಹೀಗೆ ಹೇಳುತ್ತಲೇ ಮರುತ್ತನು ಧನುರ್ಬಾಣಗಳನ್ನು ತೆಗೆದುಕೊಂಡು ರಾವಣನೊಡನೆ ಯುದ್ಧಕ್ಕೆ ಸಜ್ಜಾದನು. ಅಷ್ಟರಲ್ಲಿ ಪುರೋಹಿತನಾಗಿದ್ದ

ಸಂವರ್ತಮಹರ್ಷಿಯು ಮಾರ್ಗದಲ್ಲಿ ಅಡ್ಡಬಂದು ಸ್ನೇಹಯುಕ್ತವಾದ ಮಾತನ್ನು ಮರುತ್ತನಿಗೆ ಹೇಳಿದನು :

ಶ್ರೋತವ್ಯಂ ಯದಿ ಮದ್ವಾಕ್ಯಂ ಸಂಪ್ರಹಾರೋ ನ ತೇ ಕ್ಷಮಃ ।
ಮಾಹೇಶ್ವರಮಿದಂ ಸತ್ರಮಸಮಾಪ್ತಂ ಕುಲಂ ದಹೇತ್ ।
ದೀಕ್ಷಿತಸ್ಯ ಕುತೋ ಯುದ್ಧಂ ಕ್ರೋಧಿತ್ವಂ ದೀಕ್ಷಿತೇ ಕುತಃ ॥16॥

''ಮಹಾರಾಜ ! ನನ್ನ ಮಾತನ್ನು ನೀನು ಕೇಳುವುದಾದರೆ ಈ ಸಮಯದಲ್ಲಿ ನೀನು ಯುದ್ಧಮಾಡುವುದು ಸರಿಯಿಲ್ಲ. ನೀನೀಗ ಮಾಡುತ್ತಿರುವುದು ಮಹೇಶ್ವರನ ಸಂಬಂಧವಾದ ಯಜ್ಞ. ಇದನ್ನು ಪೂರ್ಣಗೊಳಿಸದಿದ್ದರೆ ಇದು ನಿನ್ನ ಕುಲವನ್ನೇ ಸುಟ್ಟುಹಾಕಿಬಿಡುತ್ತದೆ. ಯಜ್ಞದೀಕ್ಷೆಯನ್ನು ಕೈಗೊಂಡವನಿಗೆ ಯುದ್ಧವೆಲ್ಲಿಯದು ? ದೀಕ್ಷಿತನಲ್ಲಿ ಕೋಪವಿರಲು ಹೇಗೆ ಸಾಧ್ಯ ?

ಸಂಶಯಶ್ಚ ಜಯೇ ನಿತ್ಯಂ ರಾಕ್ಷಸಶ್ಚ ಸುದುರ್ಜಯಃ ॥17॥

ಯುದ್ಧದಲ್ಲಿ ಜಯವು ಯಾವಾಗಲೂ ಸಂಶಯಗ್ರಸ್ತವಾಗಿಯೇ ಇರುತ್ತದೆ. ಮೇಲಾಗಿ ರಾಕ್ಷಸನು ವರಲಾಭದಿಂದ ದುರ್ಜಯನಾಗಿರುವನು. ಆದುದರಿಂದ ನೀನು ಈ ಸಮಯದಲ್ಲಿ ಯುದ್ಧಕ್ಕೂ ಹೋಗಬಾರದು ; ಕೋಪಿಸಿಕೊಳ್ಳಲೂ ಬಾರದು.''

ಪುರೋಹಿತನ ಮಾತಿಗೆ ಗೌರವವನ್ನಿತ್ತು ಪೃಥಿವೀಪತಿಯಾದ ಮರುತ್ತನು ಹಿಂದಿರುಗಿದನು. ಧನುರ್ಬಾಣಗಳನ್ನು ಪರಿತ್ಯಜಿಸಿ ಶಾಂತಚಿತ್ತನಾಗಿ ಯಜ್ಞದಲ್ಲಿ ನಿರತನಾದನು.

ಮರುತ್ತನು ಪರಾಜಯಹೊಂದಿದನೆಂದು ತಿಳಿದು ಶುಕನು –'ರಾವಣರಾಜನಿಗೆ ಜಯವಾಗಲಿ !' – ಎಂದು ಘೋಷಿಸಿದನು. ಅದನ್ನು ಕೇಳಿ ರಾವಣನು ಅತ್ಯಂತಹರ್ಷದಿಂದ ಸಿಂಹನಾದಮಾಡಿದನು. ಬಳಿಕ ರಾಕ್ಷಸನು ಆ ಯಜ್ಞದಲ್ಲಿ ಭಾಗವಹಿಸಿದ್ದ ಋಷಿಗಳೆಲ್ಲರನ್ನೂ ತಿಂದು ತೇಗಿ ಅವರ ರಕ್ತವನ್ನು ಕುಡಿದು ತೃಪ್ತನಾಗಿ ಪುನಃ ವಿಮಾನದಲ್ಲಿ ಕುಳಿತು ಭೂಮಂಡಲದಲ್ಲಿ ಸುತ್ತಾಡಲು ಹೊರಟುಹೋದನು.

ರಾವಣನು ಹೊರಟುಹೋದನಂತರ ಇಂದ್ರಾದಿದೇವತೆಗಳು ನಿಜರೂಪ

ಗಳನ್ನು ಹೊಂದಿ ತಾವು ಯಾವ ಪಕ್ಷಿಗಳ ಆಕಾರಗಳನ್ನು ಪಡೆದಿದ್ದರೋ ಅವುಗಳಿಗೆ ಹೇಳಿದರು :

ನವಿಲಿನ ರೂಪವನ್ನು ಹೊಂದಿದ್ದ ಇಂದ್ರನು ಆ ಪಕ್ಷಿಗೆ ವರ ವನ್ನಿತ್ತನು.

ಪ್ರೀತೋಽಸ್ಮಿ ತವ ಧರ್ಮಜ್ಞ ಭುಜಙ್ಗಾದ್ಧಿ ನ ತೇ ಭಯಮ್ ॥

'' ಧರ್ಮಜ್ಞನೇ ! ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ. ನಿನ್ನ ರೂಪವನ್ನು ಧರಿಸಿದ್ದರಿಂದ ನನ್ನ ಪ್ರಾಣವುಳಿಯಿತು. ಆದುದರಿಂದ ಇನ್ನು ಮುಂದೆ ನಿನಗೆ ಸರ್ಪಗಳಿಂದ ಭಯವಿರುವುದಿಲ್ಲ.

ಇದಂ ನೇತ್ರಸಹಸ್ರಂ ತು ಯತ್ತದ್ಬರ್ಹೇ ಭವಿಷ್ಯತಿ ।
ವರ್ಷಮಾಣೇ ಮಯಿ ಮುದಂ ಪ್ರಾಪ್ಸ್ಯಸೇ ಪ್ರೀತಿಲಕ್ಷಣಮ್ ॥

ನನ್ನಲ್ಲಿರುವ ಸಾವಿರ ಕಣ್ಣುಗಳೂ ನಿನ್ನ ರೆಕ್ಕೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ನಾನು ಮಳೆಗರೆಯುವಾಗ ನೀನು ಪ್ರೀತಿಯ ಗುರುತಾಗಿ ಜಾಗರ ಮಾಡುವೆ.''

ಹೀಗೆ ದೇವರಾಜನಾದ ಇಂದ್ರನು ನವಿಲಿಗೆ ವರವನ್ನಿತ್ತನು.

ರಾಘವ ! ಅದಕ್ಕೆ ಮೊದಲು ನವಿಲುಗಳ ರೆಕ್ಕೆಗಳು ನೀಲವರ್ಣದವು ಗಳಾಗಿದ್ದುವು. ಇಂದ್ರನಿಂದ ವರವನ್ನು ಪಡೆದನಂತರ ಅವುಗಳಿಗೆ ಕಣ್ಣು ಗಳಿರುವ ರೆಕ್ಕೆಗಳು ಲಭಿಸಿದುವು.

ಅನಂತರ ಯಮಧರ್ಮನು ಪ್ರಾಗ್ವಂಶದಲ್ಲಿ★ ಕುಳಿತಿದ್ದ ಕಾಗೆಗೆ ಹೇಳಿದನು :

ಪಕ್ಷಿಂಸ್ತವಾಸ್ಮಿ ಸುಪ್ರೀತಃ ಪ್ರೀತಸ್ಯ ವಚನಂ ಶೃಣು ॥26॥
ಯಥಾನ್ಯೇ ವಿವಿಧೈ ರೋಗೈಃ ಪೀಡ್ಯನ್ತೇ ಪ್ರಾಣಿನೋ ಮಯಾ ।
ತೇ ನ ತೇ ಪ್ರಭವಿಷ್ಯನ್ತಿ ಮಯಿ ಪ್ರೀತೇ ನ ಸಂಶಯಃ ॥ 27॥

'' ವಾಯಸನೇ ! ನಿನ್ನ ವಿಷಯದಲ್ಲಿ ಸುಪ್ರೀತನಾಗಿರುವ ನನ್ನ ಈ

★ಪ್ರಾಗ್ವಂಶಃ : ಯಜ್ಞಶಾಲೆಯ ಪೂರ್ವದಿಕ್ಕಿನಲ್ಲಿ ಯಜಮಾನ ಮತ್ತು ಯಜಮಾನನ ಪತ್ನಿಯು ವಾಸಿಸಲು ನಿರ್ಮಿಸಿರುವ ಪೂರ್ವಾಗ್ರವಾದ ಬಿದಿರುಗಳುಳ್ಳ ವಾಸಗೃಹಕ್ಕೆ ಪ್ರಾಗ್ವಂಶವೆಂದು ಹೆಸರು.

ಮಾತುಗಳನ್ನು ಕೇಳು ; ನಾನು ಇತರ ಪ್ರಾಣಿಗಳನ್ನು ರೋಗ –ರುಜಿನಾದಿ ಗಳಿಂದ ಪೀಡಿಸುವಂತೆ ನಿನ್ನನ್ನು ಪೀಡಿಸುವುದಿಲ್ಲ. ನಾನು ನಿನ್ನ ವಿಷಯದಲ್ಲಿ ಸುಪ್ರೀತನಾಗಲು ರೋಗ–ರುಜಿನಾದಿಗಳು ನಿನ್ನನ್ನೇನೂ ಮಾಡಲಾರವು. ಇದರಲ್ಲಿ ಸಂಶಯವೇ ಇಲ್ಲ.

ಮೃತ್ಯುತಸ್ತೇ ಭಯಂ ನಾಸ್ತಿ ವರಾನ್ಮಮ ವಿಹಂಗಮ ।
ಯಾವತ್ತ್ವಾಂ ನ ವಧಿಷ್ಯನ್ತಿ ನರಾಸ್ತಾವದ್ಭವಿಷ್ಯಸಿ ॥28॥

ವಿಹಂಗಮನೇ! ನನ್ನ ವರದ ಪ್ರಭಾವದಿಂದಾಗಿ ನಿನಗೆ ಮೃತ್ಯು ಭಯವೂ ಇರುವುದಿಲ್ಲ. ಮನುಷ್ಯರೇ ಮೊದಲಾದ ಪ್ರಾಣಿಗಳು ನಿನ್ನನ್ನು ಕೊಲ್ಲುವವರೆಗೂ ನೀನು ಬದುಕಿಯೇ ಇರುವೆ. [1]

ಯೇ ಚ ಮದ್ವಿಷಯಸ್ಥಾ ವೈ ಮಾನವಾಃ ಕ್ಷುಧಯಾರ್ದಿತಾಃ ।
ತ್ವಯಿ ಭುಕ್ತೇ ಸುತೃಪ್ತಾಸ್ತೇ ಭವಿಷ್ಯನ್ತಿ ಸಬಾನ್ಧವಾಃ ॥29॥

ಯಮಲೋಕವನ್ನು ಸೇರಿರುವ ಮಾನವರು ಹಸಿವಿನ ಬಾಧೆಯಿಂದ ಬಳಲುವಾಗ ಅವರ ಮಕ್ಕಳೇನಾದರೂ ಭೂಲೋಕದಲ್ಲಿ ನಿನ್ನನ್ನು ಭೋಜನ ದಿಂದ ತೃಪ್ತಿಪಡಿಸಿದ್ದೇ ಆದರೆ ಅವರೆಲ್ಲರೂ ತೃಪ್ತರಾಗುತ್ತಾರೆ. (ವಾಯಸಕ್ಕೆ ಬಲಿಯಿಡುವುದರಿಂದ ಯಮಲೋಕದಲ್ಲಿರುವ ಪಿತೃಗಳು ಅಲ್ಲಿರುವ ಅವರ ಬಂಧುಗಳ ಸಮೇತ ತೃಪ್ತರಾಗುತ್ತಾರೆ.)''

ಬಳಿಕ ಗಂಗೆಯ ನೀರಿನಲ್ಲಿ ವಿಹರಿಸುವ ಹಂಸಪಕ್ಷಿಗೆ ವರುಣನು ಹೇಳಿದನು :

ಶ್ರೂಯತಾಂ ಪ್ರೀತಿಸಂಯುಕ್ತಂ ವಚಃ ಪತ್ರರಥೇಶ್ವರ ॥30॥
ವರ್ಣೋ ಮನೋರಮಂ ಸೌಮ್ಯಶ್ಚನ್ದ್ರಮಣ್ಡಲಸಂನಿಭಃ ।
ಭವಿಷ್ಯತಿ ತವೋದಗ್ರಃ ಶುದ್ಧಫೇನಸಮಪ್ರಭಃ ॥31॥

''ಹಂಸಪಕ್ಷಿಯೇ! ಪ್ರೀತಿಯುಕ್ತವಾದ ನನ್ನ ಈ ಮಾತನ್ನು ಕೇಳು. ನಿನ್ನ ಶರೀರದ ಬಣ್ಣವು ಚಂದ್ರಮಂಡಲದಂತೆ, ಪರಿಶುದ್ಧವಾದ ನೀರಿನಪೊರೆ

---

1 ಕಾಗೆಯನ್ನು ಚಿರಜೀವಿಯೆಂದೂ ಕರೆಯುತ್ತಾರೆ. ಚಿರಜೀವೀ ಚೈಕದೃಷ್ಟಿಃ [ಅಮರಃ]

ಯಂತೆ ಪರಮೋಜ್ವಲವಾಗಿಯೂ, ಸೌಮ್ಯವಾಗಿಯೂ, ಮನೋಹರ ವಾಗಿಯೂ ಇರುತ್ತದೆ.

ಮಚ್ಛರೀರಂ ಸಮಾಸಾದ್ಯ ಕಾನ್ತೋ ನಿತ್ಯಂ ಭವಿಷ್ಯಸಿ ।
ಪ್ರಾಪ್ಸ್ಯಸೇ ಚಾತುಲಾಂ ಪ್ರೀತಿಮೇತನ್ಮೇ ಪ್ರೀತಿಲಕ್ಷಣಮ್ ॥32॥

ನನ್ನ ಶರೀರಭೂತವಾಗಿರುವ ನೀರಿನಲ್ಲಿ ನೆಲೆಸಿ ನೀನು ಪ್ರಕಾಶಿಸುವೆ. ನೀರಿನಲ್ಲಿರುವಾಗ ನಿನ್ನ ಸೊಬಗನ್ನು ನೋಡಲು ಜನರು ಆಶಿಸುತ್ತಾರೆ. ಎಲ್ಲರ ಪ್ರೀತಿಗೂ ನೀನು ಪಾತ್ರನಾಗುವೆ. ನಿನ್ನಲ್ಲಿ ನನಗೆ ಪ್ರೀತಿಯುಂಟಾಗಿರುವುದಕ್ಕೆ ಇದೇ ಕುರುಹಾಗಿದೆ.''

ರಾಘವ! ಹೀಗೆ ವರುಣನು ಹಂಸಪಕ್ಷಿಗೆ ವರದಾನಮಾಡಿದನು. ಹಿಂದೆ ಹಂಸಗಳಿಗೆ ಬೆಳದಿಂಗಳಿನಂತೆ ಬಿಳಿಯದಾದ ಬಣ್ಣವೇನೂ ಇರಲಿಲ್ಲ. ಅವುಗಳ ರೆಕ್ಕೆಗಳ ಅಗ್ರಭಾಗಗಳು ನೀಲವರ್ಣವಾಗಿಯೂ, ಎರಡು ಭುಜಗಳ ಮಧ್ಯಭಾಗವು ಗರಿಕೇಹುಲ್ಲಿನ ಅಗ್ರಭಾಗದಂತೆ ಕೋಮಲವಾಗಿಯೂ ಮತ್ತು ಹಸಿರುಬಣ್ಣವಾಗಿಯೂ ಇದ್ದುವು.

ಹೀಗೆ ವರುಣನು ಹಂಸಪಕ್ಷಿಗಳಿಗೆ ವರವನ್ನು ಕೊಟ್ಟನಂತರ ಕುಬೇರನು ಪರ್ವತದ ಪೊಟರೆಯಲ್ಲಿದ್ದ ಓತಿಕೇತಕ್ಕೆ ಹೇಳಿದನು. ''ನಿನ್ನ ವಿಷಯದಲ್ಲಿ ಪ್ರಸನ್ನನಾಗಿರುವ ನಾನು ನಿನಗೆ ಚಿನ್ನದ ಬಣ್ಣಕ್ಕೆ ಸಮಾನವಾದ ಬಣ್ಣವನ್ನು ಅನುಗ್ರಹಿಸುತ್ತೇನೆ. ನಿನ್ನ ಶರೀರವು ಚಿನ್ನದ ಬಣ್ಣದ್ದಾಗಲಿ. ನಿನ್ನ ತಲೆಯು ಯವಾಗಲೂ ಸುವರ್ಣವರ್ಣಕ್ಕೆ ಸಮಾನವಾದ ಬಣ್ಣದಿಂದ ಕೂಡಿರುತ್ತದೆ. ನನ್ನ ಅನುಗ್ರಹದಿಂದಾಗಿ ನಿನಗೆ ಈಗಿರುವ ಕಪ್ಪುಬಣ್ಣವು ಹೋಗಿ ನಿನ್ನ ಶರೀರವು ಚಿನ್ನದ ಬಣ್ಣವಾಗುತ್ತದೆ.''

ರಾಘವ ! ಹೀಗೆ ಲೋಕಪಾಲರು ಪಕ್ಷಿಗಳಿಗೆ ವರಗಳನ್ನಿತ್ತು ಯಜ್ಞೋತ್ಸವವು ಮುಗಿದ ಬಳಿಕ ಮರುತ್ತ ರಾಜನೊಡನೆ ತಮ್ಮ ನಿವಾಸಸ್ಥಾನವಾದ ಸ್ವರ್ಗಕ್ಕೆ ತೆರಳಿದರು.''

18ನೆಯ ಸರ್ಗವು ಮುಗಿಯಿತು.

ರಾವಣನಿಗೆ ಅನರಣ್ಯನ ಶಾಪ : ರಾವಣನಿಂದ ಅನರಣ್ಯನ ವಧೆ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ಅಥ ಜಿತ್ವಾ ಮರುತ್ತಂ ಸ ಪ್ರಯಯೌ ರಾಕ್ಷಸಾಧಿಪಃ।
ನಗರಾಣಿ ನರೇನ್ದ್ರಾಣಾಂ ಯುದ್ಧಕಾಂಕ್ಷೀ ದಶಾನನಃ ॥1॥

ರಾಘವ! ಹೀಗೆ ಯುದ್ಧೋತ್ಸಾಹಿಯಾದ ರಾವಣನು ಮರುತ್ತನನ್ನು ಜಯಿಸಿ ಇತರ ರಾಜರ ದೇಶಗಳಲ್ಲಿಯೂ ಸಂಚರಿಸತೊಡಗಿದನು.

ಮಹೇಂದ್ರ –ವರುಣರಿಗೆ ಸಮಾನರಾಗಿದ್ದ ರಾಜಶ್ರೇಷ್ಠರ ಬಳಿಗೆ ಹೋಗಿ ರಾವಣನು ಹೇಳುತ್ತಿದ್ದನು: ''**ಯುದ್ಧಂ ಮೇ ದೀಯತಾಂ**'' ನನ್ನೊಡನೆ ಯುದ್ಧಮಾಡಿರಿ. ನಿಮಗೆ ನನ್ನೊಡನೆ ಯುದ್ಧಮಾಡಲು ಸಾಧ್ಯವಾಗದಿದ್ದರೆ '**ನಿರ್ಜಿತಾಃ ಸ್ಮೇತಿ ವಾ ಬ್ರೂತ**' ನಾವು ಪರಾಜಿತರಾದೆವೆಂದಾದರೂ ಹೇಳಿರಿ. ನಿಮ್ಮೆಲ್ಲರನ್ನೂ ಪರಾಜಯಗೊಳಿಸಬೇಕೆಂಬುದೇ ನನ್ನ ದೃಢನಿಶ್ಚಯವಾಗಿದೆ. ಯುದ್ಧಮಾಡಬೇಕು; ಇಲ್ಲದಿದ್ದರೆ ಸೋಲನ್ನು ಒಪ್ಪಿಕೊಳ್ಳಬೇಕು. ಇವೆರಡು ಮಾರ್ಗಗಳನ್ನು ಬಿಟ್ಟರೆ ನಿಮ್ಮ ಮುಕ್ತಿಗೆ ಬೇರೆಯ ಮಾರ್ಗವೇ ಇಲ್ಲ.'

ರಾವಣನ ಆ ಮಾತನ್ನು ಕೇಳಿ ಭೀತಿಯೆಂಬುದನ್ನೇ ಅರಿಯದ, ಪ್ರಾಜ್ಞರಾದ, ಮಹಾಬಲಿಷ್ಠರಾದ, ಧರ್ಮದಲ್ಲಿ ನಿಶ್ಚಯಜ್ಞಾನವುಳ್ಳ ರಾಜರು ಕೂಡ ತಮ್ಮ –ತಮ್ಮಲ್ಲಿಯೇ ಸಮಾಲೋಚಿಸಿ ಶತ್ರುವಿಗಿರುವ ಬಲವನ್ನು ಗಮನಿಸಿ ಪರಾಜಿತರಾದೆವೆಂದೇ ಒಪ್ಪಿಕೊಳ್ಳುತ್ತಿದ್ದರು. ದುಷ್ಯಂತ, ಸುರಥ, ಗಾಧಿ, ಗಯ, ಪುರೂರವಸ – ಇವರೇ ಮುಂತಾದ ಸುಪ್ರಸಿದ್ಧರಾದ ರಾಜರೆಲ್ಲರೂ ರಾವಣನು ತಮ್ಮ ದೇಶಗಳಿಗೆ ಬಂದಾಗ ಪರಾಜಿತರಾದೆವೆಂದೇ ಹೇಳಿ ಅವನಿಗೆ ಸಾಮಂತರಾಗುತ್ತಿದ್ದರು. ಹೀಗೆಯೇ ಭೂಮಂಡಲದ ಎಲ್ಲ ರಾಜರನ್ನೂ ಪರಾಜಯಗೊಳಿಸುತ್ತಾ ರಾವಣನು ಅಯೋಧ್ಯೆಗೂ ಹೋದನು. ಆ ಸಮಯದಲ್ಲಿ ಅನರಣ್ಯನೆಂಬ ರಾಜನು ಇಂದ್ರನು ಅಮರಾವತಿಯನ್ನು ರಕ್ಷಿಸುತ್ತಿದ್ದಂತೆ ಅಯೋಧ್ಯೆಯನ್ನು ರಕ್ಷಿಸುತ್ತಿದ್ದನು. ಅಂತಹ ಇಂದ್ರೋಪಮನಾದ, ಪುರುಷಸಿಂಹನಾದ ಅನರಣ್ಯನ ಬಳಿಗೆ ಹೋಗಿ ರಾವಣನು

ಹೇಳಿದನು : ''**ಯುದ್ಧಂ ದೇಹಿ** ಯುದ್ಧದ ಆತಿಥ್ಯವನ್ನು ನೀಡು ಅಥವಾ **ನಿರ್ಜಿತೋಽಸ್ಮೀತಿ ವಾ ಬ್ರೂಹಿ** ಪರಾಜಿತನಾಗಿದ್ದೇನೆ - ಎಂದಾದರೂ ಹೇಳು. ಇದು ನನ್ನ ಶಾಸನವಾಗಿದೆ. ''

ಅಯೋಧ್ಯಾಧಿಪತಿಯಾಗಿದ್ದ ಅನರಣ್ಯನು ಪಾಪಾತ್ಮನಾದ ರಾವಣನ ಮಾತನ್ನು ಕೇಳಿ ಪರಮಕ್ರುದ್ಧನಾಗಿ ಹೇಳಿದನು :

ದೀಯತೇ ದ್ವನ್ದ್ವಯುದ್ಧಂ ತೇ ರಾಕ್ಷಸಾಧಿಪತೇ ಮಯಾ ।
ಸಂತಿಷ್ಠ ಕ್ಷಿಪ್ರಮಾಯತ್ತೋ ಭವ ಚೈವಂ ಭವಾಮ್ಯಹಮ್ ॥10॥

''ರಾಕ್ಷಸಾಧಿಪತಿಯೇ ! ನಾನು ನಿನ್ನೊಡನೆ ದ್ವಂದ್ವಯುದ್ಧವನ್ನು ಮಾಡುತ್ತೇನೆ. ಶೀಘ್ರವಾಗಿ ಯುದ್ಧ ಸನ್ನದ್ಧನಾಗು. ಅಷ್ಟರಲ್ಲಿಯೇ ನಾನೂ ಯುದ್ಧ ಸನ್ನದ್ಧನಾಗಿ ಬರುತ್ತೇನೆ.''

ದೊಡ್ಡ – ದೊಡ್ಡ ರಾಜರನ್ನೂ ಅವರ ಸೈನ್ಯಗಳನ್ನೂ ರಾವಣನು ಪರಾಜಯಗೊಳಿಸಿ ಬಂದಿರುವನೆಂಬ ವಾರ್ತೆಯು ಆ ಮೊದಲೇ ಅನರಣ್ಯನಿಗೂ ತಿಳಿದಿತ್ತು. ಈ ಕಾರಣದಿಂದಲೇ ಅಯೋಧ್ಯಾಧಿಪತಿಯು ರಾವಣನನ್ನು ಕೊಲ್ಲುವ ಸಲುವಾಗಿ ದೊಡ್ಡದಾದೊಂದು ಸೈನ್ಯವನ್ನೇ ಸಿದ್ಧಗೊಳಿಸಿದನು. ಆ ಮಹಾಸೈನ್ಯವು ರಾಕ್ಷಸನನ್ನು ಸಂಹರಿಸಬೇಕೆಂಬ ಉತ್ಸಾಹದಿಂದ ಕೂಡಿದ್ದು ನಗರದಿಂದ ಹೊರಟಿತು. ಅನರಣ್ಯನ ಆ ಚತುರಂಗಬಲದಲ್ಲಿ ಹತ್ತುಸಾವಿರ ಗಜಸೈನಿಕರೂ, ಒಂದು ಲಕ್ಷ ಅಶ್ವಸೈನಿಕರೂ, ಅನೇಕ ಸಾವಿರ ರಥಸೈನಿಕರೂ ಪದಾತಿಸೈನಿಕರೂ ಇದ್ದರು. ಸಂಖ್ಯಾಬಲದಿಂದ ಭೂಮಿಯನ್ನೇ ಮುಚ್ಚಿಬಿಡುವರೋ ಎಂಬಂತೆ ಕಾಣುತ್ತಿದ್ದ ಆ ಸೈನಿಕರು ರಣರಂಗಕ್ಕೆ ಧಾವಿಸಿದರು. ಅನಂತರ ಅಯೋಧ್ಯಾಧಿಪತಿಯಾದ ಅನರಣ್ಯನಿಗೂ ಲಂಕಾಧಿಪತಿಯಾದ ದಶಗ್ರೀವನಿಗೂ ಅದ್ಭುತವಾದ ಯುದ್ಧವು ಪ್ರಾರಂಭವಾಯಿತು. ಅನರಣ್ಯನ ಸೈನ್ಯವು ರಾವಣನೊಡನೆ ಪರಾಕ್ರಮವನ್ನು ತೋರುತ್ತಾ ಬಹಳ ಹೊತ್ತಿನವರೆಗೂ ಯುದ್ಧಮಾಡುತ್ತಿದ್ದಿತು. ಆದರೆ ಮಹಾತೇಜಸ್ವಿಯಾದ ರಾವಣನನ್ನು ಎದುರಿಸಿದ್ದ ಆ ಸೈನ್ಯವು ಕಡೆಯಲ್ಲಿ ವಿನಾಶಹೊಂದಿತು. ಅಪಾರಸಂಖ್ಯೆಯಲ್ಲಿದ್ದ ಚತುರಂಗಸೈನಿಕರಲ್ಲಿ ಕೆಲವರು ಮಾತ್ರವೇ

ಉಳಿದರು. ಪತಂಗದ ಹುಳುಗಳು ಬೆಂಕಿಯನ್ನು ಮುತ್ತಲು ಹೋಗಿ ವಿನಾಶವಾಗುವಂತೆ – ಸಮಸ್ತಸೈನಿಕರೂ ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ರಾವಣನೊಡನೆ ಸೆಣೆಸಿ ವಿನಾಶಹೊಂದಿದರು. ನೂರಾರು ನದಿಗಳು ಸಮುದ್ರದಲ್ಲಿ ಲೀನವಾಗಿ ಹೋಗುವಂತೆ – ರಾವಣನನ್ನು ಎದುರಿಸಿದ ಮಹಾಬಲಿಷ್ಠವಾದ ತನ್ನ ಸೈನ್ಯವು ವಿನಾಶಹೊಂದುತ್ತಿರುವುದನ್ನು ಅನರಣ್ಯನು ನೋಡಿ ಪರಮಕ್ರುದ್ಧನಾಗಿ ಇಂದ್ರನ ಧನುಸ್ಸಿಗೆ ಸಮಾನವಾಗಿದ್ದ ಮಹಾಧನುಸ್ಸನ್ನು ಟೇಂಕರಿಸುತ್ತಾ ರಾವಣನನ್ನು ಎದುರಿಸಿ ನಿಂತನು. ಅರಣ್ಯದಲ್ಲಿರುವ ಸಿಂಹಕ್ಕೆ ಹೆದರಿ ಮೃಗಗಳು ಓಡಿಹೋಗುವಂತೆ – ರಾವಣನ ಅಮಾತ್ಯರಾದ ಮಾರೀಚ – ಶುಕ –ಸಾರಣ – ಪ್ರಹಸ್ತರು ಅನರಣ್ಯನಿಂದ ಪರಾಜಿತರಾಗಿ ಪಲಾಯನಮಾಡಿದರು. ಅನಂತರ ಇಕ್ಷ್ವಾಕುಕುಲನಂದನನಾದ ಅನರಣ್ಯನು ಎಂಟು ನೂರು ಬಾಣಗಳನ್ನು ರಾವಣನ ತಲೆಗೆ ಗುರಿಯಿಟ್ಟು ಪ್ರಯೋಗಿಸಿದನು. ಪರ್ವತದ ಮೇಲೆ ಬೀಳುವ ಜಲಧಾರೆಗಳು ಪರ್ವತಕ್ಕೆ ಸ್ವಲ್ಪವಾದರೂ ಹಾನಿಯನ್ನುಂಟುಮಾಡದಂತೆ ಅನರಣ್ಯನು ಬಿಟ್ಟ ಬಾಣಗಳು ರಾವಣನಿಗೆ ಸ್ವಲ್ಪವಾದರೂ ವೇದನೆಯನ್ನುಂಟುಮಾಡಲಿಲ್ಲ. ಬಳಿಕ ಕ್ರುದ್ಧನಾದ ರಾಕ್ಷಸರಾಜನು ಅಂಗೈಯಿಂದ ರಾಜನ ತಲೆಯ ಮೇಲೆ ಗುದ್ದಿದನು. ಮರುಕ್ಷಣದಲ್ಲಿಯೇ ಅನರಣ್ಯನು ಕೆಳಕ್ಕೆ ಬಿದ್ದುಬಿಟ್ಟನು. ಸಿಡಿಲಿನ ಬಡಿತದಿಂದ ಅರಣ್ಯದಲ್ಲಿರುವ ಸಾಲವೃಕ್ಷವು ಕೆಳಗುರುಳುವಂತೆ – ಅನರಣ್ಯರಾಜನು ಕೆಳಗುರುಳಿ ವ್ಯಾಕುಲವಾಗಿ ನಡುಗತೊಡಗಿದನು. ಆಗ ರಾವಣನು ಗಹ–ಗಹಿಸಿ ನಗುತ್ತಾ ಇಕ್ಷ್ವಾಕುವಂಶೀಯನಾದ ಅನರಣ್ಯನಿಗೆ ಹೇಳಿದನು :

ಕಿಮಿದಾನೀಂ ಫಲಂ ಪ್ರಾಪ್ತಂ ತ್ವಯಾ ಮಾಂ ಪ್ರತಿ ಯುಧ್ಯತಾ ।
ತ್ರೈಲೋಕ್ಯೇ ನಾಸ್ತಿ ಯೋ ದ್ವಂದ್ವಂ ಮಮ ದದ್ಯಾನ್ನರಾಧಿಪ ।
ಶಙ್ಕೇ ಪ್ರಸಕ್ತೋ ಭೋಗೇಷು ನ ಶೃಣೋಷಿ ಬಲಂ ಮಮ ॥

'' ರಾಜೇಂದ್ರನೇ! ನನ್ನೊಡನೆ ಯುದ್ಧಮಾಡಲು ಬಂದ ನಿನಗೆ ಎಂತಹ ಫಲವು ಪ್ರಾಪ್ತವಾಯಿತು ? ಈಗಲಾದರೂ ತಿಳಿಯಿತೇ ? ಮೂರು ಲೋಕಗಳಲ್ಲಿ ನನ್ನೊಡನೆ ದ್ವಂದ್ವಯುದ್ಧ ಮಾಡುವ ಸಾಮರ್ಥ್ಯವಿರುವವನು ಯಾವನೂ ಇಲ್ಲ. ನೀನು ಯಾವಾಗಲೂ ಸುಖೋಪಭೋಗಗಳಲ್ಲಿಯೇ ಆಸಕ್ತನಾಗಿದ್ದುದರಿಂದ ನನ್ನ ಪರಾಕ್ರಮದ ವಿಷಯವನ್ನು ಕೇಳಿಲ್ಲವೆಂದೇ ನಾನು ಸಂದೇಹಿಸುತ್ತೇನೆ.''

ರಾವಣನು ಹೀಗೆ ಹೇಳುವ ವೇಳೆಗಾಗಲೇ ಅನರಣ್ಯನ ಪ್ರಾಣ ಶಕ್ತಿಯು ಕುಂದಿದ್ದಿತು. ಆದರೂ ಮೆಲುದನಿಯಲ್ಲಿಯೇ ರಾಜನು ಹೇಳಿದನು :

ಕಿಂ ಶಕ್ಯಮಿಹ ಕರ್ತುಂ ವೈ ಕಾಲೋ ಹಿ ದುರತಿಕ್ರಮಃ ॥26॥

''ರಾಕ್ಷಸರಾಜನೇ ! ಕಾಲವನ್ನು ಮೀರಿ ನಡೆಯಲು ಸಾಧ್ಯವಿಲ್ಲದೇ ಇರುವಾಗ ಏನು ತಾನೇ ಮಾಡಲು ಶಕ್ಯವಿದೆ ?

ನ ಹ್ಯಹಂ ನಿರ್ಜಿತೋ ರಕ್ಷಸ್ತ್ವಯಾ ಚಾತ್ಮಪ್ರಶಂಸಿನಾ ।
ಕಾಲೇನೈವ ವಿಪನ್ನೋಽಹಂ ಹೇತುಭೂತಸ್ತು ಮೇ ಭವಾನ್ ॥27॥

ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿರುವ ನಿನ್ನಿಂದ ನಾನು ನಿಶ್ಚಯವಾಗಿಯೂ ಪರಾಜಿತನಾಗಲಿಲ್ಲ. ಕಾಲನಿಂದ ಜಯಿಸಲ್ಪಟ್ಟಿದ್ದೇನೆ. ನನ್ನ ಇಂದಿನ ಪರಾಜಯಕ್ಕೆ ಅಥವಾ ಮರಣಕ್ಕೆ ಕಾಲನೇ ಕಾರಣನು. ನೀನು ನೆಪಮಾತ್ರನಾಗಿರುವೆ.

ಪ್ರಾಣವೇ ನನ್ನನ್ನು ಬಿಟ್ಟುಹೋಗುತ್ತಿರುವಾಗ ಈಗ ನಾನೇನು ತಾನೇ ಮಾಡಲು ಶಕ್ಯವಿದೆ ? ನಾನು ಪರಾಜಿತನಾಗಿ ಓಡಿಹೋಗಲಿಲ್ಲ. ಹಾಗೆ ಓಡಿಹೋಗುವಾಗ ನೀನು ನನ್ನನ್ನು ಸಂಹರಿಸಿಲ್ಲ. ನಿನ್ನೊಡನೆ ಯುದ್ಧ ಮಾಡುತ್ತಲೇ ನಾನು ಅಸುನೀಗಿದ್ದೇನೆ. ಹಂಗಿಸುವ ಮಾತಿನಿಂದ ನೀನು ಇಕ್ಷ್ವಾಕುಕುಲವನ್ನು ಅವಮಾನಿಸಿರುವೆ. ಆದುದರಿಂದ ನಿನಗೆ ನಾನು ಈ ಶಾಪವನ್ನು ಕೊಡುತ್ತಿದ್ದೇನೆ.

ಯದಿ ದತ್ತಂ ಯದಿ ಹುತಂ ಯದಿ ಮೇ ಸುಕೃತಂ ತಪಃ ।

ಯದಿ ಗುಪ್ತಾಃ ಪ್ರಜಾಃ ಸಮ್ಯಕ್ತದಾ ಸತ್ಯಂ ವಚೋಽಸ್ತು ಮೇ ॥29॥

ಉತ್ಪತ್ಸ್ಯತೇ ಕುಲೇ ಹ್ಯಸ್ಮಿನ್ನಿಕ್ಷ್ವಾಕೂಣಾಂ ಮಹಾತ್ಮನಾಮ್ ।

ರಾಮೋ ದಾಶರಥಿರ್ನಾಮ ಸ ತೇ ಪ್ರಾಣಾನ್ಹರಿಷ್ಯತಿ ॥30॥

ನಾನು ದಾನಮಾಡಿದ್ದರೆ, ಯಜ್ಞ ಮಾಡಿದ್ದರೆ, ಪುಣ್ಯಕಾರ್ಯಗಳನ್ನು ಮಾಡಿದ್ದರೆ, ತಪಸ್ಸನ್ನು ಮಾಡಿದ್ದರೆ, ಪ್ರಜೆಗಳನ್ನು ಚೆನ್ನಾಗಿ ರಕ್ಷಣೆ ಮಾಡಿದ್ದರೆ – ನಾನು ಈಗ ಹೇಳಲಿರುವ ಮಾತು ಸತ್ಯವಾಗಿ ಪರಿಣಮಿಸಲಿ.

ಮಹಾತ್ಮರಾದ ಇಕ್ಷ್ವಾಕುವಂಶೀಯರ ರಾಜರಲ್ಲಿ ರಾಮನೆಂಬುವನು

ದಶರಥನ ಮಗನಾಗಿ ಜನ್ಮತಾಳುವನು. ಅವನು ನಿಶ್ಚಯವಾಗಿಯೂ ನಿನ್ನ ಪ್ರಾಣಗಳನ್ನು ಅಪಹರಿಸುತ್ತಾನೆ.''

ಅನರಣ್ಯನು ಹೀಗೆ ರಾವಣನಿಗೆ ಶಾಪಕೊಡುತ್ತಿದ್ದಂತೆಯೇ ಮೇಘದ ಗಂಭೀರವಾದ ಧ್ವನಿಯಂತೆ ದೇವದುಂದುಭಿಗಳು ಮೊಳಗಿದುವು. ಆಕಾಶ ದಿಂದ ಪುಷ್ಪವೃಷ್ಟಿಯಾಯಿತು.

ರಾಘವ! ಅನರಣ್ಯನು ರಾವಣನಿಗೆ ಹೀಗೆ ಶಾಪವನ್ನಿತ್ತು ಸ್ವರ್ಗಸ್ಥ ನಾದನು. ರಾವಣನಾದರೋ ದಿಗ್ವಿಜಯಕ್ಕಾಗಿ ಬೇರೆಡೆಗೆ ಹೋದನು.

19ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **20ನೆಯ ಸರ್ಗ**

ರಾವಣನಿಗೆ ನಾರದರಿಂದ ಸಮಾಧಾನದ ಮಾತು: ನಾರದರ ಸಲಹೆಯಂತೆ ಯಮನೊಡನೆ ಯುದ್ಧಮಾಡಲು ಯಮಲೋಕಕ್ಕೆ ರಾವಣನ ಪ್ರಯಾಣ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ತತೋ ವಿತ್ರಾಸಯನ್ಮರ್ತ್ಯಾನ್ ಪೃಥಿವ್ಯಾಂ ರಾಕ್ಷಸಾಧಿಪಃ ।
ಆಸಸಾದ ಘನೇ ತಸ್ಮಿನ್ನಾರದಂ ಮುನಿಪುಂಗವಮ್ ॥1॥

ಭೂಮಂಡಲದಲ್ಲಿದ್ದ ಸಮಸ್ತರಾಜರನ್ನೂ ಭಯಪಡಿಸುತ್ತಾ ಪುಷ್ಪಕ ವಿಮಾನದಲ್ಲಿ ಸಂಚರಿಸುತ್ತಿದ್ದ ರಾವಣನೊಮ್ಮೆ ಮೋಡಗಳ ಮಧ್ಯಭಾಗದಲ್ಲಿ ಮುನಿಶ್ರೇಷ್ಠರಾದ ನಾರದರನ್ನು ನೋಡಿದನು.

ಒಡನೆಯೇ ರಾವಣನು ನಾರದರಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಕುಶಲಪ್ರಶ್ನೆಗಳನ್ನು ಕೇಳಿ ತಿಳಿದು ಅಲ್ಲಿಗೆ ಆಗಮಿಸಿದುದರ ಕಾರಣ ವನ್ನು ಪ್ರಶ್ನಿಸಿದನು. ಮಹಾತೇಜಸ್ವಿಗಳಾದ, ಮಹಾಪ್ರಭೆಯಿಂದ ಬೆಳಗುತ್ತಿದ್ದ, ಮೇಘಗಳ ಮೇಲೆ ನಿಂತಿದ್ದ ನಾರದರು ಪುಷ್ಪಕವಿಮಾನದಲ್ಲಿ ಕುಳಿತಿದ್ದ ರಾವಣನಿಗೆ ಹೇಳಿದರು :

''ಸೌಮ್ಯನೇ! ವಿಶ್ರವಸನ ಪುತ್ರನೇ! ರಾಕ್ಷಸಾಧಿಪತಿಯೇ! ಶ್ರೇಷ್ಠ ವಾದ ಕುಲದಲ್ಲಿ ಜನ್ಮತಾಳಿರುವವನೇ! ರಾವಣೇಶ್ವರ! ದಿನ-ದಿನಕ್ಕೂ ವೃದ್ಧಿ

ಹೊಂದುತ್ತಿರುವ ನಿನ್ನ ಪರಾಕ್ರಮವನ್ನು ನೋಡಿ ನಾನು ಪ್ರಸನ್ನನಾಗಿ ರುವೆನು. ವಿಷ್ಣುವಿನಿಂದ ಮಾಡಲ್ಪಟ್ಟ ದೈತ್ಯರ ಮರ್ದನದಿಂದಲೂ ನಾನು ಪರಿತುಷ್ಟನಾಗಿದ್ದೇನೆ. ನಿನ್ನಿಂದ ಮಾಡಲ್ಪಡುತ್ತಿರುವ ಗಂಧರ್ವೋರಗರ ಮರ್ದನದಿಂದಲೂ ಸಂತುಷ್ಟನಾಗಿದ್ದೇನೆ. ನೀವಿಬ್ಬರೂ ಮಾಡುತ್ತಿರುವ ಈ ಮರ್ದನಕಾರ್ಯದಲ್ಲಿ ನನಗೆ ಸಮಾನವಾದ ಸಂತೋಷವಿದೆ. ಈ ಸಮಯದಲ್ಲಿ ನೀನೇನಾದರೂ ನನ್ನ ಮಾತನ್ನು ಕೇಳುವ ಇಚ್ಛೆಯುಳ್ಳವನಾಗಿದ್ದರೆ - ನೀನು ಕೇಳಲು ಯೋಗ್ಯವಾದ ಕೆಲವು ಮಾತುಗಳನ್ನು ಹೇಳುತ್ತೇನೆ. ನಾನು ಹೇಳಲಿರುವ ಮಾತನ್ನು ಏಕಾಗ್ರತೆಯಿಂದ ಆಲಿಸು.

ಕಿಮಯಂ ವಧ್ಯತೇ ತಾತ ತ್ವಯಾವಧ್ಯೇನ ದೈವತೈಃ ।
ಹತ ಏವ ಹ್ಯಯಂ ಲೋಕೋ ಯದಾ ಮೃತ್ಯುವಶಂ ಗತಃ ॥ 7॥

ದೇವತೆಗಳಿಂದಲೂ ವಧಿಸಲ್ಪಡದವನಾದ ನೀನು ಈ ಭೂಲೋಕದ ನಿವಾಸಿಗಳನ್ನೇಕೆ ವೃಥಾ ಸಂಹರಿಸುತ್ತಿರುವೆ ? ಮೃತ್ಯುವಿನ ವಶದಲ್ಲಿರುವ ಈ ಲೋಕವು ನೀನು ವಧಿಸುವ ಮೊದಲೇ ಮೃತ್ಯುವಿನಿಂದ ವಧಿಸಲ್ಪಟ್ಟಿದೆ.

ದೇವ-ದಾನವ-ದೈತ್ಯ-ಯಕ್ಷ-ಗಂಧರ್ವರಿಂದಲೂ ಅವಧ್ಯನಾಗಿರುವ ನೀನು ಮನುಷ್ಯಲೋಕವನ್ನು ಬಾಧೆಪಡಿಸುತ್ತಿರುವುದು ಖಂಡಿತವಾಗಿಯೂ ಯೋಗ್ಯವಾಗಿ ಕಾಣುವುದಿಲ್ಲ.

ನಿತ್ಯಂ ಶ್ರೇಯಸಿ ಸಮ್ಮೂಢಂ ಮಹದ್ಭಿರ್ವ್ಯಸನೈರ್ವೃತಮ್ ।
ಹನ್ಯಾತ್ಕಸ್ತಾದೃಶಂ ಲೋಕಂ ಜರಾವ್ಯಾಧಿಶತೈರ್ಯುತಮ್ ॥9॥

ತನ್ನ ಶ್ರೇಯಸ್ಸಿನ ಸಾಧನೆಯಲ್ಲಿ ಮೂಢನಾಗಿರುವ, ನಾನಾವಿಧವಾದ ಮಹಾವ್ಯಸನಗಳಿಂದ ಸಮಾವೃತನಾಗಿರುವ, ಮುಪ್ಪಿನಿಂದಲೂ ನೂರಾರು ರೋಗಗಳಿಂದಲೂ ನರಳುತ್ತಿರುವ, ಮೃತಪ್ರಾಯನೇ ಆಗಿರುವ ಹುಲುಮಾನವ ನನ್ನು ನಿನ್ನಂತಹ ಯಾವ ವೀರಪುರುಷನು ತಾನೇ ಸಂಹಾರಮಾಡುವನು ?

ಹಲವಾರು ವಿಧವಾದ ಅನಿಷ್ಟಗಳಿಂದ ಎಲ್ಲೆಂದರಲ್ಲೇ ಪೀಡಿಸಲ್ಪಡು ತ್ತಿರುವ ಈ ಮನುಷ್ಯಲೋಕದಲ್ಲಿ ಬುದ್ಧಿವಂತನಾದ ಮತ್ತು ವೀರನಾದ ಯಾವ ಪುರುಷನು ತಾನೇ ಯುದ್ಧದಲ್ಲಿ ಆಸಕ್ತನಾಗುತ್ತಾನೆ.

ಕ್ಷೀಯಮಾಣಂ ದೈವಹತಂ ಕ್ಷುತ್ಪಿಪಾಸಾಜರಾದಿಭಿಃ ।
ವಿಷಾದಶೋಕಸಮ್ಮೂಢಂ ಲೋಕಂ ತ್ವಂ ಕ್ಷಪಯಸ್ವ ಮಾ ॥11॥

ಈ ಮನುಷ್ಯಲೋಕವಾದರೋ ಹಸಿವು – ಬಾಯಾರಿಕೆಗಳಿಂದಲೂ ಮುಪ್ಪಿನಿಂದಲೂ ದಿನ –ದಿನಕ್ಕೂ ಕ್ಷೀಣಿಸುತ್ತಲೇ ಇದೆ. ದಿನನಿತ್ಯದ ವಿಷಾದ –ಶೋಕಗಳಿಂದ ವಿಮೋಹಗೊಂಡಿದೆ. ದೈವದಿಂದ ಈ ಲೋಕವಾಗಲೇ ಹತವಾಗಿ ಹೋಗಿದೆ. ತಾನಾಗಿಯೇ ಕ್ಷಯಿಸಿಹೋಗಲಿರುವ ಈ ಮನುಷ್ಯಲೋಕವನ್ನು ನೀನೂ ವಿನಾಶಗೊಳಿಸಲು ಯತ್ನಿಸಬೇಡ.

ರಾಕ್ಷಸರಾಜನೇ! ಯಾವುದಕ್ಕೆ ತನ್ನ ಮುಂದಿನ ಗತಿಯೇನೆಂಬುದೇ ತಿಳಿದಿಲ್ಲವೋ, ಬದುಕಿರುವುದು ಅಲ್ಪಕಾಲವಾದರೂ ವಿಚಿತ್ರವಾದ ಪ್ರಯೋಜನಗಳನ್ನು ಹೊಂದಲು ಅಪೇಕ್ಷಿಸುತ್ತಿರುವುದೋ – ಅಂತಹ ಮೂರ್ಖಮನುಷ್ಯ ಲೋಕವನ್ನು ನೀನೇ ನೋಡು. ಕೆಲವು ಜನರು ಆನಂದಮಗ್ನರಾಗಿ ವೀಣಾ–ಮೃದಂಗಾದಿ ವಾದ್ಯಗಳ ಸುಶ್ರಾವ್ಯವಾದ ಧ್ವನಿಗಳನ್ನು ಕೇಳುತ್ತಿರುತ್ತಾರೆ. ಮನೋಮೋಹಕವಾದ ನೃತ್ಯಗಳನ್ನು ನೋಡುತ್ತಿರುತ್ತಾರೆ. ಪೀಡಿತರಾದ ಕೆಲವು ಜನರು ಧಾರಾಕಾರವಾಗಿ ಕಣ್ಣೀರುಸುರಿಸುತ್ತಾ ಗೋಳಾಡುತ್ತಿರುತ್ತಾರೆ.

ಮಾತಾಪಿತೃಸುತಸ್ನೇಹಭಾರ್ಯಾಬನ್ಧುಮನೋರಮೈಃ ।
ಮೋಹಿತೋಽಯಂ ಜನೋ ಧ್ವಸ್ತಃ ಕ್ಲೇಶಂ ಸ್ವಂ ನಾವಬುಧ್ಯತೇ ॥

ಮನಸ್ಸಿಗೆ ತಾತ್ಕಾಲಿಕವಾದ ಆಹ್ಲಾದವನ್ನುಂಟುಮಾಡುವ ತಾಯಿ –ತಂದೆ, ಮಕ್ಕಳು , ಭಾರ್ಯೆ, ಬಂಧುಗಳು , ಸ್ನೇಹಿತ – ಇವರೇ ಮುಂತಾದವರ ಪರಸ್ಪರ ಸ್ನೇಹಸಂಬಂಧದಿಂದಾಗಿ ಈ ಲೋಕವು ಸಂಪೂರ್ಣವಾಗಿ ವಿಮೋಹ ಗೊಂಡಿದೆ. ಆದುದರಿಂದಲೇ ಇದು ಪರಮಾರ್ಥದಿಂದ ಭ್ರಷ್ಟವಾಗಿದೆ. ಆದರೂ ಕೂಡ ಈ ಲೋಕದಲ್ಲಿರುವ ಜನವು ತಾನು ಈ ಸಂಸಾರಬಂಧನದಿಂದ ಸತತವಾಗಿ ಕ್ಲೇಶವನ್ನು ಅನುಭವಿಸುತ್ತಿರುವುದನ್ನು ತಿಳಿಯುತ್ತಲೇ ಇಲ್ಲ.

ಹೀಗೆ ಅಜ್ಞಾನದ ಕಾರಣದಿಂದ ಪರಮಪುರುಷಾರ್ಥದಿಂದ ವಂಚಿತ ವಾಗಿರುವ ಈ ಮನುಷ್ಯಲೋಕಕ್ಕೆ ಮತ್ತಷ್ಟು ಕ್ಲೇಶವನ್ನುಂಟುಮಾಡು ತ್ತಿದ್ದರೆ ನಿನಗೆ ಲಭಿಸುವ ಪ್ರಯೋಜನವಾದರೂ ಏನಿದೆ? ನೀನೀಗಾಗಲೇ

ಮನುಷ್ಯಲೋಕವನ್ನು ಪೂರ್ಣವಾಗಿ ಜಯಿಸಿಬಿಟ್ಟಿರುವೆ. ಇದರಲ್ಲಿ ಸಂಶಯವೇ ಇಲ್ಲ.

ಅವಶ್ಯಮೇಭಿಃ ಸರ್ವೈಶ್ಚ ಗನ್ತವ್ಯಂ ಯಮಸಾದನಮ್ ।
ತನ್ನಿಗೃಹ್ಣೀಷ್ವ ಪೌಲಸ್ತ್ಯ ಯಮಂ ಪರಪುರಂಜಯ ।
ತಸ್ಮಿಞ್ಜಿತೇ ಜಿತಂ ಸರ್ವಂ ಭವತ್ಯೇವ ನ ಸಂಶಯಃ ॥16॥

ನೀನು ಈ ಮನುಷ್ಯರನ್ನು ಸಂಹರಿಸಿದರೂ ಸರಿಯೇ; ಸಂಹರಿಸದೇ ಇದ್ದರೂ ಸರಿಯೇ. ಮೃತ್ಯುವಶರಾಗಿರುವ ಇವರೆಲ್ಲರೂ ಅವಶ್ಯವಾಗಿ ಯಮನ ಮನೆಗೆ ಹೋಗಿಯೇ ತೀರುತ್ತಾರೆ. ನಿನಗೇನಾದರೂ ಪರಾಕ್ರಮವೇ ಇದ್ದುದಾದರೆ ಯಮನನ್ನು ನಿಗ್ರಹಿಸು. ಅವನನ್ನು ಜಯಿಸಿದೆಯಾದರೆ ನೀನು ಸಮಸ್ತರನ್ನೂ ಜಯಿಸಿದಂತಾಗುವುದು. ಇದರಲ್ಲಿ ಸಂಶಯವೇ ಇಲ್ಲ.''

ನಾರದರು ಹೀಗೆ ಹೇಳಲು ರಾವಣನು ಗಹ–ಗಹಿಸಿ ನಗುತ್ತಾ ತಮ್ಮ ತೇಜಸ್ಸಿನಿಂದ ದೇದೀಪ್ಯಮಾನರಾಗಿ ಬೆಳಗುತ್ತಿದ್ದ ನಾರದರಿಗೆ ಅಭಿವಾದನ ಮಾಡಿ ಹೇಳಿದನು :

''ಮಹರ್ಷಿಗಳೇ ! ದೇವ –ಗಂಧರ್ವಲೋಕಗಳಲ್ಲಿ ಅನವರತವಾಗಿ ವಿಹರಿಸುವವರೇ ! ಸಮರಪ್ರಿಯರೇ ! ಎರಡು ಬಣಗಳಿಗೂ ಯುದ್ಧವನ್ನು ತಂದೊಡ್ಡಿ ಅದರಿಂದಲೇ ಆನಂದವನ್ನು ಅನುಭವಿಸುವವರೇ ! ನಾನೀಗ ದಿಗ್ವಿಜಯಕ್ಕಾಗಿ ರಸಾತಲಕ್ಕೆ ಹೋಗುತ್ತಿದ್ದೇನೆ. ಮೂರು ಲೋಕಗಳನ್ನೂ ಜಯಿಸಿ ದೇವತೆಗಳನ್ನೂ ನಾಗಗಳನ್ನೂ ವಶಪಡಿಸಿಕೊಂಡು ಅಮೃತದ ಪ್ರಾಪ್ತಿಗಾಗಿ ರಸಗಳ ನಿಧಿಯಾದ ಸಮುದ್ರವನ್ನು ಮಥನಮಾಡುತ್ತೇನೆ. ''

ರಾವಣನ ಮಾತುಗಳನ್ನು ಕೇಳಿ ನಾರದರು ಹೇಳಿದರು :

''ಶತ್ರುಸೂದನನೇ ! ನಿನಗೆ ರಸಾತಲಕ್ಕೆ ಹೋಗುವ ಇಚ್ಛೆಯಿದ್ದರೆ ಈ ಸಮಯದಲ್ಲಿ ನೀನು ಆ ಮಾರ್ಗವನ್ನು ಬಿಟ್ಟು ಬೇರೆಯ ಮಾರ್ಗದಲ್ಲೇಕೆ ಹೋಗುತ್ತಿರುವೆ ? ದುರ್ಧರ್ಷನೇ ! ರಸಾತಲಕ್ಕೆ ನೀನು ಹೋಗುತ್ತಿರುವ ಮಾರ್ಗವು ಅತಿದುರ್ಗಮವಾಗಿದೆ. ಅಲ್ಲಿಗೆ ಹೋಗಲು ಇದು ನೇರವಾದ

ಮಾರ್ಗವಲ್ಲ. ನೀನೀಗ ಹೋಗುತ್ತಿರುವ ಮಾರ್ಗವು ಅತ್ಯಂತದುರ್ಗಮವಾದ ಪ್ರೇತರಾಜನಾದ ಯಮನ ಪಟ್ಟಣಕ್ಕೆ ಹೋಗುವ ಮಾರ್ಗವಾಗಿದೆ.''

ನಾರದರು ಹೀಗೆ ಹೇಳಲು ದಶಮುಖನು ಶರತ್ಕಾಲದ ಮೇಘದಂತೆ ಉಜ್ವಲವಾದ ಮಂದಹಾಸವನ್ನು ಬೀರುತ್ತಾ ಹೇಳಿದನು :

'' ಮಹರ್ಷಿಗಳೇ ! ನಾನು ನಿಮ್ಮ ಮಾತಿನಂತೆಯೇ ನಡೆದುಕೊಳ್ಳುವೆನು. ನಿಮ್ಮ ಸಲಹೆಯಂತೆ ಯಮರಾಜನ ವಧೆಯಲ್ಲಿಯೇ ಉದ್ಯುಕ್ತನಾಗಿ ಸೂರ್ಯನ ಮಗನಿರುವ ಆ ದಕ್ಷಿಣದಿಕ್ಕಿಗೇ ಪ್ರಯಾಣಮಾಡುತ್ತೇನೆ. ಎಲ್ಲರೊಡನೆಯೂ ಯುದ್ಧಮಾಡುವ ಇಚ್ಛೆಯಿಂದ ಕೂಡಿರುವ ನಾನು ಲೋಕಪಾಲರನ್ನೂ ಜಯಿಸುವೆನೆಂದು ಕ್ರೋಧಪೂರ್ವಕವಾಗಿ ಪ್ರತಿಜ್ಞೆಮಾಡಿದ್ದೇನೆ. ಇದೋ ನಾನೀಗ ಪಿತೃರಾಜನಾದ ಯಮಧರ್ಮನ ಪಟ್ಟಣಕ್ಕೆ ಹೋಗುತ್ತಿದ್ದೇನೆ. ಪ್ರಾಣಿಗಳಿಗೆ ಸರ್ವದಾ ಕ್ಲೇಶವನ್ನುಂಟುಮಾಡುತ್ತಿರುವ ಅವನನ್ನು ಮೃತ್ಯುವಶನನ್ನಾಗಿ ಮಾಡುತ್ತೇನೆ.''

ದಶಗ್ರೀವನು ನಾರದರಿಗೆ ಹೀಗೆ ಹೇಳಿ ಪುನಃ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಮಂತ್ರಿಗಳೊಡನೆ ದಕ್ಷಿಣದಿಕ್ಕಿಗೆ ಪ್ರಯಾಣಮಾಡಿದನು.

ಧೂಮರಹಿತನಾದ ಯಜ್ಞೇಶ್ವರನಂತಿದ್ದ, ಮಹಾತೇಜಸ್ವಿಗಳಾದ, ವಿಪ್ರಶ್ರೇಷ್ಠರಾದ ನಾರದರು ಮುಹೂರ್ತಕಾಲದವರೆಗೆ ಧ್ಯಾನಾಸಕ್ತರಾಗಿದ್ದು ಚಿಂತಿಸತೊಡಗಿದರು.

ಯೇನ ಲೋಕಾಸ್ತ್ರಯಃ ಸೇನ್ದ್ರಾಃ ಕ್ಲಿಶ್ಯನ್ತೇ ಸಚರಾಚರಾಃ ।
ಕ್ಷೀಣೇ ಚಾಯುಷಿ ಧರ್ಮೇಣ ಸ ಕಾಲೋ ಜೇಷ್ಯತೇ ಕಥಮ್ ॥

'' ಆಯುಷ್ಯವು ಕ್ಷೀಣಿಸಿದೊಡನೆಯೇ ಯಾವನು ವ್ಯವಸ್ಥಿತವಾದ ಧರ್ಮಕ್ಕೆ ಒಳಪಟ್ಟು ಇಂದ್ರಾದಿ ಚರಾಚರಪ್ರಾಣಿಗಳಿಂದ ಸಹಿತವಾದ ಮೂರು ಲೋಕಗಳನ್ನೂ ಕ್ಲೇಶಗೊಳಿಸುವನೋ – ಅಂತಹ ಕಾಲಪುರುಷನನ್ನು ಈ ರಾವಣನು ಹೇಗೆ ಜಯಿಸುತ್ತಾನೆ ?

ಸ್ವದತ್ತಕೃತಸಾಕ್ಷೀ ಯೋ ದ್ವಿತೀಯ ಇವ ಪಾವಕಃ ।
ಲಬ್ಧಸಂಜ್ಞಾ ವಿಚೇಷ್ಟನ್ತೇ ಲೋಕಾ ಯಸ್ಯ ಮಹಾತ್ಮನಃ ॥29॥

ಯಸ್ಯ ನಿತ್ಯಂ ತ್ರಯೋ ಲೋಕಾ ವಿದ್ರವನ್ತಿ ಭಯಾರ್ದಿತಾಃ।
ತಂ ಕಥಂ ರಾಕ್ಷಸೇನ್ದ್ರೋಽಸೌ ಸ್ವಯಮೇವ ಗಮಿಷ್ಯತಿ ॥30॥

ಯಾವನು ಜೀವರುಗಳ ದಾನ ಮತ್ತು ಕರ್ಮಗಳಿಗೆ ಸಾಕ್ಷಿಯಾಗಿರುವನೋ, ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿರುವನೋ, ಮಹಾತ್ಮನಾದ ಯಾವನಿಂದ ಚೇತನವನ್ನು ಪಡೆದು ಸಮಸ್ತ ಪ್ರಾಣಿಗಳೂ ಲೋಕದಲ್ಲಿ ವ್ಯವಹರಿಸುವುವೋ, ಯಾವನ ಭಯದಿಂದ ಪೀಡಿತವಾಗಿ ಸಮಸ್ತಪ್ರಾಣಿಗಳೂ ಓಡಿಹೋಗಲು ಪ್ರಯತ್ನಿಸುವುವೋ - ಅಂತಹ ಯಮಧರ್ಮನ ಸಮೀಪಕ್ಕಾದರೂ ಈ ರಾವಣನು ಹೇಗೆ ತಾನೇ ಹೋಗುವನು ?

ಯೋ ವಿಧಾತಾ ಚ ಧಾತಾ ಚ ಸುಕೃತಂ ದುಷ್ಕೃತಂ ತಥಾ।
ತ್ರೈಲೋಕ್ಯಂ ವಿಜಿತಂ ಯೇನ ತಂ ಕಥಂ ವಿಜಯಿಷ್ಯತೇ।
ಅಪರಂ ಕಿಂ ತು ಕೃತ್ವೈವಂ ವಿಧಾನಂ ಸಂವಿಧಾಸ್ಯತಿ ॥32॥

ಯಾವನು ಮೂರು ಲೋಕಗಳ ಧಾರಣೆ–ಪೋಷಣೆಗಳನ್ನು ಮಾಡುತ್ತಿರುವನೋ, ಪುಣ್ಯ–ಪಾಪಕರ್ಮಗಳಿಗೆ ಉಚಿತವಾದ ಫಲದಾಯಕನಾಗಿರುವನೋ ಮತ್ತು ಮೂರು ಲೋಕಗಳನ್ನೂ ಯಾವನು ಜಯಿಸಿಬಿಟ್ಟಿರುವನೋ ಅಂತಹ ಕಾಲಪುರುಷನನ್ನು ಈ ರಾವಣನು ಹೇಗೆ ಜಯಿಸಬಲ್ಲನು ?

ಕಾಲಕ್ಕೆ ಅತಿರಿಕ್ತವಾದ ಬೇರೆ ಯಾವ ಸಾಧನವನ್ನು ಸಂಪಾದಿಸಿ ಈ ರಾವಣನು ಕಾಲನ ಮೇಲೆ ಯುದ್ಧಮಾಡಿ ಜಯಗಳಿಸುವನೆಂಬುದನ್ನು ನೋಡಲೇಬೇಕು.

ನನಗಂತೂ ಈ ವಿಷಯವು ಅತ್ಯಂತ ಕುತೂಹಲವನ್ನುಂಟುಮಾಡಿದೆ. ಯಮನ ಪಟ್ಟಣಕ್ಕೆ ನಾನೂ ಈಗಲೇ ಹೋಗುವೆನು. ಯಮ –ರಾಕ್ಷಸರ ನಡುವೆ ನಡೆಯುವ ಯುದ್ಧವನ್ನು ನೋಡಲೇಬೇಕಾಗಿದೆ.''

20ನೆಯ ಸರ್ಗವು ಮುಗಿಯಿತು.

ರಾವಣನಿಂದ ಯಮಲೋಕದ ಆಕ್ರಮಣ : ಯಮಭಟರ ಸಂಹಾರ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ಏವಂ ಸಂಚಿನ್ತ್ಯ ವಿಪ್ರೇನ್ದ್ರೋ ಜಗಾಮ ಲಘುವಿಕ್ರಮಃ ।
ಆಖ್ಯಾತುಂ ತದ್ಯಥಾವೃತ್ತಂ ಯಮಸ್ಯ ಸದನಂ ಪ್ರತಿ ॥1॥

ರಾಘವ ! ಹೀಗೆ ಯೋಚಿಸಿ ವೇಗವಾಗಿ ಪ್ರಯಾಣಮಾಡುವ ಸಾಮರ್ಥ್ಯವನ್ನು ಹೊಂದಿದ್ದ ನಾರದರು - ರಾವಣನು ಮಾಡಲಿರುವ ಆಕ್ರಮಣದ ವಾರ್ತೆಯನ್ನು ಯಮಧರ್ಮನಿಗೆ ತಿಳಿಸುವ ಸಲುವಾಗಿ - ಯಮಲೋಕಕ್ಕೆ ಧಾವಿಸಿದರು.

ಅಲ್ಲಿಗೆ ಹೋಗುತ್ತಲೇ ನಾರದರು ಯಮಧರ್ಮನನ್ನು ನೋಡಿದರು. ಆ ಸಮಯದಲ್ಲಿ ಯಮಧರ್ಮನು ಅಗ್ನಿಯನ್ನು ಸಾಕ್ಷಿಯನ್ನಾಗಿಟ್ಟುಕೊಂಡು ಯಾವ ಪ್ರಾಣಿಯು ಎಂತಹ ಕರ್ಮಗಳನ್ನು ಮಾಡಿದೆಯೋ - ಅದಕ್ಕೆ ಅನುಗುಣವಾದ ಫಲಗಳನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದನು.

ಮಹರ್ಷಿಗಳಾದ ನಾರದರು ತನ್ನ ಬಳಿಗೆ ಬಂದುದನ್ನು ಕಂಡು ಯಮಧರ್ಮನು ಧರ್ಮಾನುಸಾರವಾಗಿ ಮಹರ್ಷಿಗಳಿಗೆ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಸತ್ಕರಿಸಿ ಸುಖಾಸನದಲ್ಲಿ ಕುಳ್ಳಿರಿಸಿ ಪ್ರಶ್ನಿಸಿದನು :

''ದೇವ-ಗಂಧರ್ವರಿಂದ ಸೇವಿಸಲ್ಪಡುವ ದೇವರ್ಷಿಗಳೇ! ಸಮಸ್ತರೂ ಕುಶಲದಿಂದಿರುವರಲ್ಲವೇ ? ಧರ್ಮದ ವಿನಾಶವಾಗುತ್ತಿಲ್ಲ ತಾನೇ ? ತಾವು ಇಲ್ಲಿಗೆ ಆಗಮಿಸಿದ ಕಾರಣವನ್ನು ಕೇಳಬಹುದೇ ?''

ಯಮಧರ್ಮನ ಆ ಮಾತನ್ನು ಕೇಳಿ ಪೂಜ್ಯರಾದ ನಾರದರು ಹೇಳಿದರು:

'' ಯಮಧರ್ಮನೇ! ನಾನೀಗ ಒಂದು ಮುಖ್ಯವಾದ ವಿಷಯವನ್ನು ನಿನಗೆ ಹೇಳಲಿದ್ದೇನೆ. ಅದನ್ನು ಕೇಳಿದನಂತರ ನೀನು ತಕ್ಕುದಾದ ಉಪಾಯವನ್ನು ಸಿದ್ಧಗೊಳಿಸು. ದಶಗ್ರೀವನೆಂಬ ಹೆಸರಿನ ರಾಕ್ಷಸನು ಸುದುರ್ಜಯ

ನಾದ ನಿನ್ನನ್ನು ಸ್ವಬಲ – ಪರಾಕ್ರಮಗಳಿಂದ ಗೆಲ್ಲಲು ಬರುತ್ತಿದ್ದಾನೆ. ಈ ಕಾರಣದಿಂದಲೇ ನಾನು ಆತುರವಾಗಿ ನಿನ್ನ ಬಳಿಗೆ ಬಂದಿದ್ದೇನೆ. ನೀನಾದರೋ ಕಾಲದಂಡವನ್ನೇ ಆಯುಧವನ್ನಾಗಿ ಹೊಂದಿರುವೆ. ಅಂತಹ ನಿನಗೆ ರಾಕ್ಷಸನ ಆಕ್ರಮಣದಿಂದ ಯಾವ ಹಾನಿಯಾದೀತು ?''

ನಾರದ–ಯಮಧರ್ಮರು ಹೀಗೆ ಮಾತುಕತೆಗಳಲ್ಲಿ ತೊಡಗಿದ್ದಾಗ ಉದಯಿಸುವ ಸೂರ್ಯನಂತೆಯೇ ತೇಜಃಪುಂಜವಾಗಿದ್ದ ರಾಕ್ಷಸನ ಪುಷ್ಪಕವಿಮಾನವು ಬಹಳ ದೂರದಲ್ಲಿ ತಮ್ಮ ಪಟ್ಟಣದ ಕಡೆಗೆ ಬರುತ್ತಿರುವುದನ್ನು ನೋಡಿದರು. ಮಹಾಬಲಿಷ್ಠನಾದ ರಾಕ್ಷಸನು ಪುಷ್ಪಕವಿಮಾನದ ಆ ದಿವ್ಯಪ್ರಭೆಯಿಂದ ಆ ಪ್ರದೇಶದ ಕತ್ತಲನ್ನಡಗಿಸಿ ಬೆಳಗಿಸುತ್ತಾ ಯಮನ ಪಟ್ಟಣದ ಬಳಿಗೆ ಬಂದನು. ಅಲ್ಲಿ ಸಮಸ್ತಪ್ರಾಣಿಗಳೂ ತಮ್ಮ ಪುಣ್ಯ–ಪಾಪ ಕರ್ಮಗಳಿಗೆ ಅನುಗುಣವಾದ ಸುಖ–ದುಃಖಗಳನ್ನು ಅನುಭವಿಸುತ್ತಿರುವುದನ್ನು ರಾವಣನು ನೋಡಿದನು. ಯಮನ ಸೇವಕರೊಡನೆ ಅವನ ಸೈನಿಕರೂ ಇದ್ದುದನ್ನು ಅವನು ನೋಡಿದನು. ಯಮಯಾತನೆ ಏನೆಂಬುದನ್ನು ರಾವಣನು ಪ್ರತ್ಯಕ್ಷವಾಗಿ ಅಲ್ಲಿ ನೋಡಿದನು. ಘೋರರೂಪಿಗಳಾದ, ಉಗ್ರರಾದ, ಕರ್ಕಶರಾದ, ಕಠೋರವಾದ ಸ್ವಭಾವವುಳ್ಳ, ಭಯಂಕರರಾದ ಯಮದೂತರು ಹಲವಾರು ಪ್ರಾಣಿಗಳನ್ನು ನಾನಾಪ್ರಕಾರವಾಗಿ ಪ್ರಹರಿಸುತ್ತಿದ್ದರು. ಕ್ಲೇಶಗೊಳಿಸುತ್ತಿದ್ದರು. ಆ ಶಿಕ್ಷೆಯನ್ನು ತಡೆದುಕೊಳ್ಳಲಾಗದೇ ಆ ಪ್ರಾಣಿಗಳು ಗಟ್ಟಿಯಾಗಿ ಕಿರುಚಿಕೊಳ್ಳುತ್ತಿದ್ದುವು. ಚೀತ್ಕಾರಮಾಡುತ್ತಿದ್ದುವು. ಕೆಲವು ಪ್ರಾಣಿಗಳನ್ನು ಕೃಮಿಗಳು ತಿಂದುಹಾಕುತ್ತಿದ್ದುವು. ಭಯಂಕರವಾದ ನಾಯಿಗಳು ಕಚ್ಚಿಹಾಕುತ್ತಿದ್ದುವು. ಇಂತಹ ಯಮಶಿಕ್ಷೆಯನ್ನು ಸಹಿಸಲಾರದೇ ಆ ಎಲ್ಲ ಪ್ರಾಣಿಗಳೂ ಕಿವಿಗಳು ಒಡೆದುಹೋಗುವ ರೀತಿಯಲ್ಲಿ ಚೀತ್ಕಾರಮಾಡುತ್ತಿದ್ದುವು. ಕೆಲವು ಯಮಭಟರು ಜೀವಿಗಳನ್ನು ರಕ್ತತುಂಬಿ ಹರಿಯುತ್ತಿದ್ದ ವೈತರಣೀನದಿಯಲ್ಲಿ ನೂಕುತ್ತಿದ್ದರು. ಕೆಲವರನ್ನು ಕೆಂಪಗೆ ಕಾದಿರುವ ಮರಳಿನ ರಾಶಿಯಲ್ಲಿ ಸುಡುತ್ತಿದ್ದರು. ಕೆಲವು ಪಾಪಿಷ್ಠ ಪ್ರಾಣಿಗಳನ್ನು ಯಮಭಟರು ಕತ್ತಿಯಂತೆಯೇ ಅಲುಗಿನಿಂದ ಕೂಡಿದ್ದ ಎಲೆಗಳಿಂದ ಸಂಪನ್ನವಾಗಿದ್ದ ಅಸಿಪತ್ರವನವೆಂಬ ಅನ್ವರ್ಥನಾಮದಿಂದಲೇ ಪ್ರಸಿದ್ಧವಾದ ವನಕ್ಕೆ ಕರೆದೊಯ್ದು ಅಲ್ಲವರನ್ನು ತುಂಡು–ತುಂಡು

ಗಳಾಗಿ ಕತ್ತರಿಸುತ್ತಿದ್ದರು. ಯಮಭಟರು ಕೆಲವರನ್ನು ರೌರವವೆಂಬ ನರಕದಲ್ಲಿ ಹಾಕುತ್ತಿದ್ದರು. ಉಪ್ಪುನೀರಿನ ನದಿಯಲ್ಲಿ ಬಹಳ ಕಾಲದವರೆಗೆ ಮುಳುಗಿಸುತ್ತಿದ್ದರು. ಕತ್ತಿಗಳ ಅಲುಗಿನ ಮೇಲೆ ಮಲಗಿಸುತ್ತಿದ್ದರು. ಕೆಲವು ಪ್ರಾಣಿಗಳು ನೀರಿಗಾಗಿ ಪರದಾಡುತ್ತಿದ್ದುವು. ಹಸಿವಿನಿಂದ ನರಳುತ್ತಿದ್ದುವು. ಕೆಲವು ಶವಗಳಂತೆಯೇ ಇದ್ದುವು. ಕೆಲವು ಅತ್ಯಂತ ಕೃಶವಾಗಿದ್ದುವು. ದುಃಖಪಡುತ್ತಿದ್ದುವು. ವಿಕಾರವಾಗಿ ಕಾಣುತ್ತಿದ್ದುವು. ತಲೆಗೆದರಿಕೊಂಡಿದ್ದುವು. ಮಲದಿಂದಲೂ ಕೆಸರಿನಿಂದಲೂ ಆವೃತವಾಗಿ ದುಃಖಪಡುತ್ತಿದ್ದುವು. ಒರಟಾದ ಶರೀರವನ್ನು ಹೊಂದಿ ಎಲ್ಲ ಕಡೆಗಳಲ್ಲಿಯೂ ಓಡಾಡುತ್ತಿದ್ದುವು. ಇಂತಹ ಯಮಯಾತನೆಗೊಳಗಾಗಿ ಚೀತ್ಕಾರಮಾಡುತ್ತಿದ್ದ ನೂರಾರು ಸಾವಿರಾರು ಪ್ರಾಣಿಗಳನ್ನು ದಶಗ್ರೀವನು ಮಾರ್ಗದಲ್ಲಿ ನೋಡಿದನು.

ಮತ್ತೊಂದು ವಿಭಾಗದಲ್ಲಿ ಪುಣ್ಯಾತ್ಮರಾದ ಜೀವಿಗಳು ತಾವು ಮಾಡಿದ ಸತ್ಕರ್ಮಗಳ ಪ್ರಭಾವದಿಂದ ಸುಂದರವಾದ ಸೌಧಗಳಲ್ಲಿ ವಾಸಮಾಡುತ್ತಾ ಸಂಗೀತವನ್ನೂ ಮನೋಹರವಾದ ವಾದ್ಯಘೋಷಗಳನ್ನೂ ಕೇಳುತ್ತಾ ಆನಂದಿಸುತ್ತಿರುವುದನ್ನೂ ರಾವಣನು ನೋಡಿದನು.

ಗೋದಾನವನ್ನು ಮಾಡಿದವರು ಆ ಸತ್ಕರ್ಮದ ಫಲವಾಗಿ ಯಥೇಷ್ಟವಾಗಿ ಹಾಲನ್ನು ಕುಡಿಯುತ್ತಿದ್ದರು. ಅನ್ನದಾನವನ್ನು ಮಾಡಿದವರು ಮೃಷ್ಟಾನ್ನವನ್ನು ಭುಂಜಿಸುತ್ತಿದ್ದರು. ಗೃಹದಾನವನ್ನು ಮಾಡಿದವರು ಸುಂದರವಾದ ಸೌಧಗಳಲ್ಲಿ ವಾಸಮಾಡುತ್ತಿದ್ದರು. ಪುಣ್ಯಕಾರ್ಯಗಳನ್ನು ಮಾಡಿ ಯಮಲೋಕಕ್ಕೆ ಬಂದಿದ್ದ ಹಲವಾರು ಜೀವಿಗಳು ಸುವರ್ಣ–ಮಣಿ– ಮುತ್ತುಗಳಿಂದ ಸಮಲಂಕೃತರಾದ, ಯೌವನದ ಮದದಿಂದ ಪ್ರಮತ್ತ ರಾಗಿದ್ದ ಪ್ರಮದೆಯರೊಡನೆ ವಿಹರಿಸುತ್ತಾ ತಮ್ಮ ಶರೀರಕಾಂತಿಯಿಂದ ದೇದೀಪ್ಯಮಾನರಾಗಿ ಬೆಳಗುತ್ತಿದ್ದರು.

ಮಹಾಬಲಿಷ್ಠನಾದ ರಾವಣನು ಹೀಗೆ ಸತ್ಕರ್ಮಗಳನ್ನು ಮಾಡಿ ಸುಖವನ್ನು ಅನುಭವಿಸುತ್ತಿದ್ದವರನ್ನೂ, ದುಷ್ಕರ್ಮಗಳನ್ನು ಮಾಡಿ ಯಮ ಯಾತನೆಯನ್ನು ಅನುಭವಿಸುತ್ತಿದ್ದವರನ್ನೂ ಯಮಪುರಿಯಲ್ಲಿ ನೋಡಿದನು. ಪಾಪಿಷ್ಠರನ್ನು ಶಿಕ್ಷಿಸುತ್ತಿದ್ದ ಯಮಭಟರೊಡನೆಯೂ ಮತ್ತು ಅವನ ಸೈನಿಕರೊಡನೆಯೂ

ರಾವಣನು ಹೋರಾಡಿ ಪಾಪಕರ್ಮಗಳನ್ನು ಮಾಡಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಜೀವಗಳನ್ನು ಮುಕ್ತಗೊಳಿಸಿದನು. ಅದರಿಂದಾಗಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಆ ಜೀವಿಗಳು ಊಹೆಗೂ ಮೀರಿದ ಯೋಚಿಸಲು ಕೂಡ ಅಸಾಧ್ಯವಾಗಿದ್ದ ಸುಖವನ್ನು ಸ್ವಲ್ಪಹೊತ್ತಿನವರೆಗೆ ಪಡೆದುಕೊಂಡರು.

ಮಹಾರಾಕ್ಷಸನಾದ ರಾವಣನು ಹೀಗೆ ಶಿಕ್ಷೆಯನ್ನನುಭವಿಸುತ್ತಿದ್ದ ಪ್ರೇತಗಳನ್ನು ಬಿಡುಗಡೆಮಾಡಿದುದನ್ನು ನೋಡಿ ಪ್ರೇತಗಳನ್ನು ರಕ್ಷಿಸುತ್ತಿದ್ದ ಯಮಕಿಂಕರರು ಅತ್ಯಂತ ಕ್ರುದ್ಧರಾಗಿ ರಾವಣನನ್ನು ಆಕ್ರಮಿಸಿದರು. ಎಲ್ಲ ಕಡೆಗಳಿಂದಲೂ ರಾವಣನನ್ನು ಆಕ್ರಮಿಸಿ ದಾಳಿಮಾಡುತ್ತಿದ್ದ ಶೂರರಾದ ಧರ್ಮರಾಜನ ಸೈನಿಕರ ಕೋಲಾಹಲಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ದುಂಬಿಗಳು ಪುಷ್ಪಗಳನ್ನು ಮುತ್ತಿಕೊಳ್ಳುವಂತೆ - ನೂರಾರು ಸಾವಿರಾರು ಸಂಖ್ಯೆಯಲ್ಲಿ ಯಮಭಟರು ಪುಷ್ಪಕವಿಮಾನವನ್ನು ಆಕ್ರಮಿಸಿ ಪರಿಘಗಳಿಂದಲೂ, ಶೂಲಗಳಿಂದಲೂ , ಶಕ್ತಿ –ತೋಮರಗಳಿಂದಲೂ ಧ್ವಂಸ ಮಾಡತೊಡಗಿದರು. ಪುಷ್ಪಕವಿಮಾನದಲ್ಲಿದ್ದ ಆಸನಗಳನ್ನೂ, ಸೌಧಗಳನ್ನೂ, ಜಗುಲಿಗಳನ್ನೂ, ಮಹಾದ್ವಾರಗಳನ್ನೂ ಯಮಕಿಂಕರರು ಧ್ವಂಸ ಮಾಡಿದರು.

ದೇವತೆಗಳ ಅಧಿಷ್ಠಾನಭೂತವಾಗಿದ್ದ ಆ ವಿಮಾನವು ಆ ಯುದ್ಧದಲ್ಲಿ ಯಮಭಟರಿಂದ ಧ್ವಂಸಮಾಡಲ್ಪಟ್ಟರೂ ಬ್ರಹ್ಮನ ತೇಜಃಪ್ರಭಾವದಿಂದ ಸ್ವಲ್ಪ ಹೊತ್ತಿನಲ್ಲಿಯೇ ಹಿಂದೆ ಹೇಗಿದ್ದಿತ್ತೋ ಹಾಗೆಯೇ ಆಯಿತು. ಅದರ ಯಾವ ಭಾಗವೂ ಭಿನ್ನವಾದಂತೆಯೇ ಕಾಣುತ್ತಿರಲಿಲ್ಲ.

ಮಹಾತ್ಮನಾದ ಯಮರಾಜನ ಸೈನ್ಯವು ವಿಶಾಲವಾಗಿದ್ದಿತು. ಅದರಲ್ಲಿ ಶೂರರಾದ ಮತ್ತು ಮುನ್ನುಗ್ಗಿ ಯುದ್ಧಮಾಡುವ ಸ್ವಭಾವದಿಂದ ಕೂಡಿದ್ದ ವೀರಸೈನಿಕರು ನೂರಾರು–ಸಾವಿರಾರು ಸಂಖ್ಯೆಯಲ್ಲಿದ್ದರು.

ಹೀಗೆ ಯಮಭಟರು ರಾವಣನನ್ನು ಆಕ್ರಮಿಸಲು ರಾವಣನ ಮಂತ್ರಿಗಳು, ಸೈನಿಕರು ರಾವಣನೊಡನೆ ಕೂಡಿಕೊಂಡು ಅಲ್ಲಿದ್ದ ವೃಕ್ಷಗಳನ್ನೂ, ಪರ್ವತಗಳನ್ನೂ , ನೂರಾರು ಪ್ರಾಸಾದಗಳನ್ನೂ ಕಿತ್ತು ಅವುಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ಇಚ್ಛಾನುಸಾರವಾಗಿ ಯಮಭಟರೊಡನೆ ಯುದ್ಧ

ಮಾಡತೊಡಗಿದರು. ಯಮಭಟರ ಶಸ್ತ್ರಾಸ್ತ್ರಗಳಿಂದ ಪ್ರಹರಿಸಲ್ಪಡು ತ್ತಿದ್ದ ರಾಕ್ಷಸನ ಮಂತ್ರಿಗಳ ಮತ್ತು ಸೈನಿಕರ ಶರೀರಗಳು ರಕ್ತದಿಂದ ತೋಯ್ದು ಹೋಗಿದ್ದುವು. ಆದರೂ ಅವರು ಘೋರಯುದ್ಧವನ್ನು ಮುಂದುವರಿಸಿದರು. ಯಮರಾಜನ ಮತ್ತು ರಾಕ್ಷಸರಾಜನ ಮಂತ್ರಿ – ಸೈನಿಕರು ಪರಸ್ಪರವಾಗಿ ಅಸ್ತ್ರ–ಶಸ್ತ್ರಗಳಿಂದ ಬಡಿದಾಡುತ್ತಿದ್ದರು. ಅನಂತರ ಮಹಾ ಬಲರಾದ ಯಮಭಟರು ರಾವಣನ ಮಂತ್ರಿಗಳನ್ನು ಬಿಟ್ಟು ದಶಾನನನನ್ನೇ ಆಕ್ರಮಿಸಿ ಅವನ ಮೇಲೆ ಶೂಲಗಳ ಮಳೆಗರೆದರು. ಯಮಭಟರ ಪ್ರಹಾರಗಳಿಂದ ಜರ್ಜರೀಕೃತವಾರ ರಾವಣನ ಅಂಗಗಳೆಲ್ಲವೂ ರಕ್ತದಿಂದ ತೋಯ್ದುಹೋದುವು. ಆ ಸಮಯದಲ್ಲಿ ರಾವಣನು ಪುಷ್ಪಕವಿಮಾನದ ಮೇಲಿದ್ದ ವಿಕಸಿತವಾದ ಪುಷ್ಪಗಳಿಂದ ಕೂಡಿದ್ದ ಅಶೋಕವೃಕ್ಷದಂತೆಯೇ ಕಾಣುತ್ತಿದ್ದನು. ಬಳಿಕ ಕ್ರುದ್ಧನಾದ ರಾವಣನು ತನ್ನ ಅಸ್ತ್ರಬಲದಿಂದ ಯಮಭಟರ ಮೇಲೆ ನೂರಾರು ಶೂಲಗಳನ್ನೂ, ಗದೆಗಳನ್ನೂ, ಪ್ರಾಸ ಗಳನ್ನೂ, ಶಕ್ತಿ –ತೋಮರಗಳನ್ನೂ, ಬಾಣಗಳನ್ನೂ, ಮುಸಲಗಳನ್ನೂ, ಬಂಡೆಗಳನ್ನೂ, ವೃಕ್ಷಗಳನ್ನೂ ಏಕಕಾಲದಲ್ಲಿ ಸುರಿಸಿದನು. ವೃಕ್ಷ–ಶಿಲೆಗಳ ಮತ್ತು ಶಸ್ತ್ರಗಳ ಅತಿಭಯಂಕರವಾದ ಆ ವೃಷ್ಟಿಯು ಭೂಮಿಯಲ್ಲಿ ನಿಂತಿದ್ದ ಯಮಭಟರ ಮೇಲೆ ಸತತವಾಗಿ ಬೀಳತೊಡಗಿತು. ನೂರಾರು –ಸಾವಿರಾರು ಸಂಖ್ಯೆಯಲ್ಲಿ ಯಮಭಟರು ಒಂದೆಡೆಯಲ್ಲಿ ಸೇರಿ ರಾವಣನು ಪ್ರಯೋಗಿಸಿದ ಸಮಸ್ತವಾದ ಆಯುಧಗಳನ್ನೂ ಮಹಾಸ್ತ್ರಗಳನ್ನೂ ಧ್ವಂಸಮಾಡಿ ಮಹಾ ಭಯಂಕರನೂ ಏಕಾಕಿಯೂ ಆಗಿದ್ದ ರಾವಣನನ್ನೇ ಪುನಃ ಪ್ರಹರಿಸ ತೊಡಗಿದರು. ಮೇಘಗಳ ಸಮೂಹಗಳು ಎಲ್ಲ ಕಡೆಗಳಿಂದಲೂ ಘೇರಾಯಿಸಿ ಪರ್ವತದ ಮೇಲೆ ಮಳೆಗರೆಯುವಂತೆ – ಎಲ್ಲ ಯಮಭಟರೂ ರಾವಣನನ್ನು ಸುತ್ತುವರಿದು ನಿಂತು ಭಿಂದಿಪಾಲಗಳಿಂದಲೂ ಮತ್ತು ಶೂಲಗಳಿಂದಲೂ ಉಸಿರಾಟಕ್ಕೂ ಅವಕಾಶವಾಗದಂತೆ ಪ್ರಹರಿಸತೊಡಗಿದರು. ಸತತವಾದ ಯಮಭಟರ ಪ್ರಹಾರಗಳಿಂದ ರಾವಣನು ಕವಚವನ್ನೂ ಕಳೆದು ಕೊಂಡನು. ಅವನ ಅಂಗಾಂಗಗಳಿಂದ ರಕ್ತದ ನದಿಯೇ ಪ್ರವಹಿಸತೊಡಗಿತು. ರಕ್ತದಿಗ್ಧನಾಗಿದ್ದ ರಾವಣನು ಅತಿಕ್ರುದ್ಧನಾಗಿ ಪುಷ್ಪಕವಿಮಾನವನ್ನು ಪರಿತ್ಯಜಿಸಿ ಭೂಮಿಯಲ್ಲಿ ನಿಂತನು. ಮುಹೂರ್ತಮಾತ್ರದಲ್ಲಿ ಸುಧಾರಿಸಿ ಕೊಂಡು ಧನುಸ್ಸನ್ನೂ ಖಡ್ಗವನ್ನೂ ಹಿಡಿದು ಪರಮಕ್ರುದ್ಧನಾಗಿ

ಅಂತಕನೋಪಾದಿಯಲ್ಲಿ ಯುದ್ಧಸನ್ನದ್ಧನಾಗಿ ನಿಂತನು. ಅನಂತರ ರಾವಣನು ಧನುಸ್ಸಿನಲ್ಲಿ ಪಾಶುಪತಾಸ್ತ್ರವನ್ನು ಯೋಜಿಸಿ 'ನಿಲ್ಲಿರಿ ; ನಿಲ್ಲಿರಿ' ಎಂದೆನ್ನುತ್ತಾ ಶಿಂಜಿನಿಯನ್ನು ದೀರ್ಘವಾಗಿ ಸೆಳೆದನು. ಇಂದ್ರನ ಶತ್ರುವಾದ ರಾವಣನು ಶಿಂಜಿನಿಯನ್ನು ಕಿವಿಯವರೆಗೂ ಸೆಳೆದು ತ್ರಿಪುರಾಸುರ ಸಂಹಾರಕಾಲದಲ್ಲಿ ಶಿವನು ತ್ರಿಪುರಾಸುರರ ಮೇಲೆ ಬಾಣಪ್ರಯೋಗಮಾಡಿ ದಂತೆ – ಯಮಭಟರ ಮೇಲೆ ಮಹಾಪಾಶುಪತಾಸ್ತ್ರವನ್ನು ಪ್ರಯೋಗಿಸಿದನು. ಆ ಸಮಯದಲ್ಲಿ ಆ ಬಾಣದ ಸ್ವರೂಪವು ಧೂಮಯುಕ್ತವಾದ ಜ್ವಾಲಾ ಮಂಡಲದಂತೆಯೇ ಕಾಣುತ್ತಿದ್ದಿತು. ಗ್ರೀಷ್ಮರ್ತುವಿನಲ್ಲಿ ಅರಣ್ಯವನ್ನು ಸುಡಲು ಸರ್ವತ್ರ ಹರಡಿರುವ ದಾವಾಗ್ನಿಯಂತೆಯೇ ಆ ಬಾಣವು ಕಾಣುತ್ತಿ ದ್ದಿತು. ಜ್ವಾಲೆಯನ್ನೇ ಮಾಲೆಯನ್ನಾಗಿ ಧರಿಸಿದ್ದ ಆ ಬಾಣವು ಧನುಸ್ಸಿ ನಿಂದ ಹೊರಬಂದೊಡನೆಯೇ ಪೊದೆಗಳನ್ನೂ ವೃಕ್ಷಗಳನ್ನೂ ಭಸ್ಮಮಾಡುತ್ತಾ ಮುಂದೆ ಹೋಗುತ್ತಿದ್ದಿತು. ಆ ಬಾಣವನ್ನನುಸರಿಸಿ ಮಾಂಸಾಶಿಗಳಾದ ಪ್ರಾಣಿಗಳೂ ಓಡುತ್ತಿದ್ದುವು. ಯುದ್ಧದಲ್ಲಿ ತೊಡಗಿದ್ದ ಸಮಸ್ತಯಮ ಭಟರೂ ಪಾಶುಪತಾಸ್ತ್ರದ ತೇಜಸ್ಸಿನಿಂದ ಬೆಂದುಹೋಗಿ ಕೆಳಕ್ಕೆ ಬೀಳುವ ಇಂದ್ರನ ಧ್ವಜದಂತೆ ತೊಪ–ತೊಪನೆ ಕೆಳಗೆ ಬಿದ್ದರು. ಬಳಿಕ ಭಯಂಕರ ಪರಾಕ್ರಮಿಯಾದ ರಾವಣನು ಭೂಮಿಯನ್ನೇ ನಡುಗಿಸುವನೋ ಎಂಬಂತೆ ವಿಜಯದ ಆನಂದದಿಂದ ಮಂತ್ರಿಗಳೊಡನೆ ಗಟ್ಟಿಯಾಗಿ ಗರ್ಜಿಸಿದನು.

21ನೆಯ ಸರ್ಗವು ಮುಗಿಯಿತು.

ಯಮ–ರಾವಣರ ಯುದ್ಧ : ರಾವಣನ ವಧೆಗಾಗಿ ಯಮನು ಕಾಲದಂಡವನ್ನೆತ್ತಿದುದು : ಬ್ರಹ್ಮನ ಸಲಹೆಯಂತೆ ಕಾಲದಂಡವನ್ನು ಹಿಂದಕ್ಕೆ ತೆಗೆದುಕೊಂಡುದು : ವಿಜಯಿಯಾದ ರಾವಣನು ಯಮಲೋಕದಿಂದ ಹೊರಟುದು

ಅಗಸ್ತ್ಯರು ಹೇಳುತ್ತಾರೆ :

ಸ ತಸ್ಯ ತು ಮಹಾನಾದಂ ಶ್ರುತ್ವಾ ವೈವಸ್ವತಃ ಪ್ರಭುಃ ।
ಶತ್ರುಂ ವಿಜಯಿನಂ ಮೇನೇ ಸ್ವಬಲಸ್ಯ ಚ ಸಂಕ್ಷಯಮ್ ॥ 1॥

''ರಾಘವ! ರಾವಣನ ಆ ಮಹಾಗರ್ಜನೆಯನ್ನು ಕೇಳಿ ಪ್ರಭುವಾದ ಯಮಧರ್ಮನು ಶತ್ರುವು ವಿಜಯಗಳಿಸಿರುವನೆಂದೂ ತನ್ನ ಸೈನಿಕರು ವಿನಾಶಹೊಂದಿರುವರೆಂದೂ ಭಾವಿಸಿದನು.

ತನ್ನ ಯೋಧರೆಲ್ಲರೂ ಹತರಾಗಿರುವರೆಂದು ಭಾವಿಸಿ ಕೋಪದಿಂದ ಕೆಂಗಣ್ಣನಾದ ಯಮನು ಶೀಘ್ರವಾಗಿ ರಥವನ್ನು ತರುವಂತೆ ಸಾರಥಿಗೆ ಆಜ್ಞಾಪಿಸಿದನು. ಒಡನೆಯೇ ಸೂತನು ದಿವ್ಯವಾದ ಮಹಾರಥವನ್ನು ಸಜ್ಜುಗೊಳಿಸಿಕೊಂಡು ಯಮಧರ್ಮನ ಬಳಿಗೆ ಬಂದನು. ಒಡನೆಯೇ ಯಮಧರ್ಮನು ಆ ರಥವನ್ನೇರಿದನು. ಆ ಸಮಯದಲ್ಲಿ ಯಮಧರ್ಮನು ಪ್ರಾಸ–ಮುದ್ಗರಗಳೆಂಬ ಆಯುಧಗಳನ್ನು ಹಿಡಿದಿದ್ದನು. ಅವನ ಮುಂಭಾಗದಲ್ಲಿ ಮೂರು ಲೋಕಗಳಲ್ಲಿರುವ ಸಮಸ್ತವನ್ನೂ ನಾಶಗೊಳಿಸುವ, ನಾಶರಹಿತವಾದ ಮೃತ್ಯುದೇವತೆಯಿದ್ದಿತು. ಯಮಧರ್ಮನ ಪಕ್ಕದಲ್ಲಿ ಕಾಲದಂಡವು ಮೂರ್ತಿಮತ್ತಾಗಿ ನಿಂತಿದ್ದಿತು. ತೇಜಸ್ಸಿನಿಂದ ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಆ ಕಾಲದಂಡವು ಯಮನ ಮುಖ್ಯವಾದ ಆಯುಧವಾಗಿದ್ದಿತು. ಅದರ ಎರಡು ಪಾರ್ಶ್ವಗಳಲ್ಲಿಯೂ ಅಗ್ನಿಯಂತೆ ಮುಟ್ಟಿದೊಡನೆಯೇ ಸುಟ್ಟುಹಾಕುವ ಛಿದ್ರರಹಿತವಾದ ಕಾಲಪಾಶಗಳಿದ್ದುವು. ಯಮಧರ್ಮನ ಮುದ್ಗರಾಯುಧವೂ ಮೂರ್ತಿಮತ್ತಾಗಿ ನಿಂತಿದ್ದಿತು. ಲೋಕಭಯಂಕರನಾದ ಕಾಲನು ಕುಪಿತನಾಗಿರುವುದನ್ನು ಕಂಡು ಮೂರು ಲೋಕಗಳೂ ಕಳವಳಗೊಂಡುವು. ದೇವತೆಗಳು ಅಂತಹ ಕಾಲಪುರುಷನನ್ನು ನೋಡಿ ನಡುಗಿದರು. ಬಳಿಕ ಸೂತನು ಸುಂದರವಾದ ಕಾಂತಿಯಿಂದ ಕೂಡಿದ್ದ ಕುದುರೆಗಳನ್ನು ಮುನ್ನಡೆಯುವಂತೆ

ಪ್ರಚೋದಿಸಿದನು. ಆ ಮಹಾರಥವು ಭಯಂಕರವಾಗಿ ಶಬ್ದಮಾಡುತ್ತಾ ರಾಕ್ಷಸರಾಜನಿದ್ದಲ್ಲಿಗೆ ಧಾವಿಸಿತು. ಇಂದ್ರನ ಕುದುರೆಗಳಿಗೆ ಸಮಾನವಾಗಿದ್ದ ಮನೋವೇಗದಿಂದ ಕೂಡಿದ್ದ ಯಮಧರ್ಮನ ಆ ದಿವ್ಯಾಶ್ವಗಳು ಮುಹೂರ್ತ ಮಾತ್ರದಲ್ಲಿ ಯುದ್ಧಭೂಮಿಗೆ ಯಮಧರ್ಮನನ್ನು ಒಯ್ದುವು. ಮೃತ್ಯು ದೇವತೆಯೊಡನೆ ಕರಾಳರೂಪದ ಆ ರಥವು ಬಂದುದನ್ನು ನೋಡಿ ರಾವಣನ ಸಚಿವರು ಭಯಗೊಂಡು ಒಡನೆಯೇ ಪಲಾಯನಮಾಡಿದರು. ಯಮ ಧರ್ಮನ ಮುಂದೆ ಅವರ ಶಕ್ತಿಯು ಅತ್ಯಲ್ಪವಾಗಿದ್ದಿತು. ಭಯಪೀಡಿತರಾಗಿದ್ದ ಅವರೆಲ್ಲರೂ ಬುದ್ಧಿಗೆಟ್ಟವರಾಗಿ -'ನಾವು ಯಮಧರ್ಮನೊಡನೆ ಯುದ್ಧ ಮಾಡಲು ಸಮರ್ಥರಲ್ಲ' -ಎಂದು ಹೇಳುತ್ತಾ ದಿಕ್ಕಾಪಾಲಾಗಿ ಓಡಿಹೋದರು. ಲೋಕಕ್ಕೇ ಭಯವನ್ನುಂಟುಮಾಡುವ ಆ ರಥವನ್ನು ನೋಡಿಯೂ ರಾವಣನು ವಿಚಲಿತನಾಗಲಿಲ್ಲ; ಭಯಗೊಳ್ಳಲೂ ಇಲ್ಲ. ಕ್ರುದ್ಧನಾಗಿದ್ದ ಯಮಧರ್ಮನು ರಾವಣನ ಬಳಿಗೆ ಬಂದು ಅವನ ಮೇಲೆ ಶಕ್ತಿ-ತೋಮರಗಳನ್ನು ಪ್ರಯೋಗಿಸಿ ರಾವಣನ ಮರ್ಮಸ್ಥಾನಗಳನ್ನು ಗಾಯಗೊಳಿಸಿದನು. ರಾವಣನು ಆ ಪೆಟ್ಟನ್ನು ಸುಧಾರಿಸಿಕೊಂಡು ಮೇಘವು ಮಳೆಗರೆಯುವಂತೆ ವೈವಸ್ವತನ ರಥದ ಮೇಲೆ ಬಾಣಗಳ ಮಳೆಯನ್ನೇ ಸುರಿಸತೊಡಗಿದನು. ಅದಕ್ಕೆ ಪ್ರತಿಯಾಗಿ ಯಮಧರ್ಮನೂ ರಾವಣನ ಎದೆಗೆ ಗುರಿಯಿಟ್ಟು ನೂರಾರು ಶಕ್ತ್ಯಾಯುಧಗಳನ್ನು ಪ್ರಯೋಗಿಸಿದನು. ಶಕ್ತ್ಯಾಯುಧಗಳಿಂದ ಪೀಡಿತನಾದ ರಾವಣನು ಯಮನನ್ನು ಪ್ರತಿಯಾಗಿ ಪ್ರಹರಿಸಲು ಸಮರ್ಥನಾಗಲಿಲ್ಲ. ಹೀಗೆ ಶತ್ರುಸಂಹಾರಕನಾದ ಯಮಧರ್ಮನು ನಾನಾವಿಧವಾದ ಅಸ್ತ್ರ-ಶಸ್ತ್ರಗಳನ್ನು ರಾವಣನ ಮೇಲೆ ಸತತವಾಗಿ ಸುರಿಸುತ್ತಾ ಏಳು ದಿನಗಳವರೆಗೆ ಯುದ್ಧಮಾಡಿದನು. ಅದರಿಂದ ರಾವಣನು ಮೂರ್ಛಿತನಾಗಿ ಪರಾಙ್ಮುಖನಾಗಬೇಕಾಯಿತು. ಎಚ್ಚರಗೊಂಡೊಡನೆಯೇ ರಾವಣನು ಮರಳಿ ಯುದ್ಧಕ್ಕೆ ಬಂದನು. ವಿಜಯಾಕಾಂಕ್ಷಿಗಳಾಗಿದ್ದ ಮತ್ತು ಯುದ್ಧದಿಂದ ಯಾವಾಗಲೂ ಹಿಮ್ಮೆಟ್ಟದಿದ್ದ ಯಮ-ರಾವಣರ ನಡುವೆ ಪುನಃ ಅತ್ಯಂತಭಯಂಕರವಾದ ಯುದ್ಧವು ಪ್ರಾರಂಭವಾಯಿತು.

ಆ ಸಮಯದಲ್ಲಿ ಚತುರ್ಮುಖನನ್ನು ಮುಂದೆ ಮಾಡಿಕೊಂಡು ಗಂಧರ್ವ-ಸಿದ್ಧರ್ಷಿಗಳಿಂದ ಕೂಡಿದ ದೇವತೆಗಳು ಯುದ್ಧಭೂಮಿಗೆ ಬಂದರು.

ರಾಕ್ಷಸಮುಖ್ಯನಾದ ರಾವಣನಿಗೂ ಪ್ರೇತಗಳಿಗೆ ಈಶ್ವರನಾದ ಯಮನಿಗೂ ಯುದ್ಧವು ನಡೆಯುತ್ತಿದ್ದಾಗ ಲೋಕಗಳಲ್ಲಿ ಪ್ರಳಯಕಾಲವೇ ಸನ್ನಿಹಿತವಾಗಿರುವಂತೆ ಕಾಣುತ್ತಿದ್ದಿತು. ರಾಕ್ಷಸರಾಜನಾದ ರಾವಣನು ಇಂದ್ರನ ವಜ್ರಾಯುಧದಂತೆಯೇ ಕಂಗೊಳಿಸುತ್ತಿದ್ದ ತನ್ನ ಧನುಸ್ಸನ್ನು ಟೇಂಕರಿಸುತ್ತಾ ಬಾಣಗಳನ್ನು ಯಮನ ಮೇಲೆ ಸುರಿಸುತ್ತಿದ್ದನು. ಆಕಾಶದಲ್ಲಿ ಅವಕಾಶವೇ ಇಲ್ಲದಂತೆ ರಾವಣನ ಬಾಣಗಳು ಆಕಾಶವೆಲ್ಲವನ್ನೂ ಮುಚ್ಚಿಬಿಟ್ಟಿದ್ದುವು. ರಾವಣನು ಮೃತ್ಯುವನ್ನು ನಾಲ್ಕು ಬಾಣಗಳಿಂದಲೂ - ಸೂತನನ್ನು ಏಳು ಬಾಣಗಳಿಂದಲೂ ಪ್ರಹರಿಸಿದನು. ಅನಂತರ ಯಮಧರ್ಮನನ್ನು ಲಕ್ಷ ಬಾಣಗಳಿಂದ ಪ್ರಹರಿಸಿ ಅವನ ಮರ್ಮಸ್ಥಾನಗಳಲ್ಲಿ ಗಾಯಗಳನ್ನುಂಟು ಮಾಡಿದನು. ಸಹಿಸಲಾಗದ ಅಂತಹ ಬಾಣಗಳ ಪ್ರಹಾರಗಳಿಂದ ಯಮಧರ್ಮನ ಕೋಪದ ಎಲ್ಲೆಯು ಮೀರಿತು. ಅವನ ಮುಖದಲ್ಲಿ ಆ ಮಹಾಕೋಪವು ಅಗ್ನಿಯ ರೂಪದಲ್ಲಿ ಪ್ರಕಟವಾಯಿತು. ಆ ಕೋಪಾಗ್ನಿಯು ಜ್ವಾಲೆಗಳ ಮಾಲೆಗಳಿಂದ ಸಮಲಂಕೃತವಾಗಿ ನಿಃಶ್ವಾಸದೊಡನೆ ಧೂಮದಿಂದ ಆಚ್ಛಾದಿತವಾಗಿರುವಂತೆ ಕಾಣುತ್ತಿದ್ದಿತು. (ಯಮಧರ್ಮನ ಮೂಗು–ಬಾಯಿಗಳಿಂದ ಧೂಮವು ಹೊರಬರುತ್ತಿದ್ದಿತು.) ದೇವ–ದಾನವರ ಎದುರಿನಲ್ಲಿ ಅಂತಹ ಆಶ್ಚರ್ಯಜನಕವಾದ ದೃಶ್ಯವನ್ನು ನೋಡಿ ರೋಷಾವೇಶಯುಕ್ತರಾಗಿದ್ದ ಮೃತ್ಯು ಮತ್ತು ಕಾಲರಿಗೆ ಪರಮಾನಂದವಾಯಿತು. ಬಳಿಕ ಅತ್ಯಂತಕ್ರುದ್ಧನಾಗಿದ್ದ ಮೃತ್ಯುದೇವನು ಯಮನಿಗೆ ಹೇಳಿದನು :

ಮುಞ್ಚ ಮಾಂ ಸಮರೇ ಯಾವದ್ಧನ್ಮೀಮಂ ಪಾಪರಾಕ್ಷಸಮ್ ॥

''ಪ್ರಭುವೇ ! ನನ್ನನ್ನೀಗಲೇ ಪಾಪಿಷ್ಠನಾದ ಈ ರಾಕ್ಷಸನ ಮೇಲೆ ಪ್ರಯೋಗಿಸು. ಈಗಲೇ ನಾನಿವನನ್ನು ಸಂಹರಿಸುತ್ತೇನೆ. ಮಹಾರಾಜ ! ಇದು ನನ್ನ ಸ್ವಭಾವಸಿದ್ಧವಾದ ಮರ್ಯಾದೆಯಾಗಿದೆ. ನನ್ನನ್ನು ಪ್ರಯೋಗಿಸಿದೆಯಾದರೆ ಈ ರಾಕ್ಷಸನು ಜೀವಂತವಾಗಿ ಉಳಿಯುವ ಸಾಧ್ಯತೆಯೇ ಇಲ್ಲ. ಹಿರಣ್ಯಕಶಿಪು, ನಮುಚಿ, ಶಂಬರ, ನಿಸಂದಿ, ಧೂಮಕೇತು, ವಿರೋಚನನ ಮಗನಾದ ಬಲಿ, ಶಂಭುವೆಂಬ ದೈತ್ಯ, ವೃತ್ರ, ಬಾಣಾಸುರ, ಶಾಸ್ತ್ರವಿದರಾದ ಹಲವಾರು ರಾಜರ್ಷಿಗಳು, ಗಂಧರ್ವರು , ಮಹಾನಾಗರು, ಋಷಿಗಳು, ಸರ್ಪಗಳು, ದೈತ್ಯರು, ಯಕ್ಷರು , ಅಪ್ಸರೆಯರು, ಸಮುದ್ರಗಳು,

ಪರ್ವತಗಳು, ನದಿಗಳಿಂದಲೂ - ವೃಕ್ಷಗಳಿಂದಲೂ ಯುಕ್ತಳಾದ ಭೂದೇವಿ –ಇವರೆಲ್ಲರೂ ನನ್ನ ಆಕ್ರಮಣದಿಂದ ವಿನಾಶಹೊಂದಿರುವರು. ಇವರೇ ಅಲ್ಲದೇ ಇತರ ಅನೇಕ ಮಹಾಬಲಿಷ್ಠರಾದ ಎದುರಿಸಲು ಅಸಾಧ್ಯರಾದ ವೀರರು ಕೇವಲ ನನ್ನ ದೃಷ್ಟಿಪಾತದಿಂದ ವಿನಾಶಹೊಂದಿದ್ದಾರೆ. ಹೀಗಿರುವಾಗ ಈ ನಿಶಾಚರನ ವಿಷಯವಾಗಿ ಹೇಳುವುದೇನಿದೆ ?

ಮುಞ್ಚ ಮಾಂ ಸಾಧು ಧರ್ಮಜ್ಞ ಯಾವದೇನಂ ನಿಹನ್ಮ್ಯಹಮ್ ।
ನ ಹಿ ಕಶ್ಚಿನ್ಮಯಾ ದೃಷ್ಟೋ ಬಲವಾನಪಿ ಜೀವತಿ ॥30॥

ಧರ್ಮಜ್ಞನೇ ! ನನ್ನನ್ನು ಇವನ ಮೇಲೆ ಪ್ರಯೋಗಿಸು. ನೀನು ಪ್ರಯೋಗಿಸಿದ ಕ್ಷಣದಲ್ಲಿಯೇ ನಾನು ಇವನನ್ನು ಸಂಹರಿಸುತ್ತೇನೆ. ಎಷ್ಟೇ ಬಲಿಷ್ಠನಾದರೂ ನನ್ನ ದೃಷ್ಟಿಗೆ ಬಿದ್ದವನು ಎಂದಿಗೂ ಕ್ಷಣಮಾತ್ರವೂ ಜೀವಿಸಿರಲಾರನು.

ಬಲಂ ಮಮ ನ ಖಲ್ವೇತನ್ಮರ್ಯಾದೈಷಾ ನಿಸರ್ಗತಃ ।
ಸ ದೃಷ್ಟೋ ನ ಮಯಾ ಕಾಲ ಮುಹೂರ್ತಮಪಿ ಜೀವತಿ ॥31॥

ಕಾಲಪುರುಷನೇ! ಇದು ನನ್ನ ಬಲದ ಪ್ರಶಂಸೆಯಲ್ಲ. ಸ್ವಭಾವಸಿದ್ಧವಾದ ನನ್ನ ಮರ್ಯಾದೆಯೂ ಆಗಿದೆ. ನಾನು ಇವನನ್ನು ನೋಡಿದೆನೆಂದರೆ ಮುಹೂರ್ತಕಾಲವೂ ಈ ರಾಕ್ಷಸನು ಬದುಕಿರಲಾರನು.''

ಮೃತ್ಯುದೇವತೆಯ ಮಾತನ್ನು ಕೇಳಿ ಪ್ರತಾಪವಂತನಾದ ಧರ್ಮ ರಾಜನು ಹೇಳಿದನು :

''ಮೃತ್ಯುವೇ ! ನೀನಿರುವಲ್ಲಿಯೇ ಇರು. ನಾನೇ ಇವನನ್ನು ಸಂಹರಿಸುವೆನು. ''

ಹೀಗೆ ಹೇಳುತ್ತಿದ್ದಂತೆ ಯಮನ ಕಣ್ಣುಗಳು ಕೆಂಪಾದುವು. ಕ್ರುದ್ಧನಾಗಿದ್ದ ವೈವಸ್ವತನು ಅಮೋಘವಾದ ಕಾಲದಂಡವನ್ನು ಕೈಯಲ್ಲಿ ಹಿಡಿದು ತಿರುಗಿಸತೊಡಗಿದನು. ಕಾಲದಂಡದ ಎರಡು ಕಡೆಗಳಲ್ಲಿಯೂ ಕಾಲಪಾಶಗಳಿದ್ದುವು. ವಜ್ರಾಯುಧಾಗ್ನಿಗಳಿಗೆ ಸಮಾನವಾಗಿದ್ದ ಮುದ್ಗರಾಯುಧವು ಮೂರ್ತಿಮತ್ತಾಗಿ ನಿಂತಿದ್ದಿತು. ದರ್ಶನಮಾತ್ರದಿಂದಲೇ ಆ ಕಾಲದಂಡವು ಪ್ರಾಣಿಗಳ ಪ್ರಾಣಗಳನ್ನು ಅಪಹರಿಸುವುದಾಗಿದ್ದಿತು. ಹೀಗಿರುವಾಗ ಅದನ್ನು

ಪ್ರಯೋಗಿಸಿ ಅದರಿಂದ ಪ್ರಹರಿಸಲ್ಪಡುವ ರಾವಣನ ವಿಷಯದಲ್ಲಿ ಹೇಳುವುದೇನಿದೆ ? ಅವನು ಭಸ್ಮವಾಗಿ ಹೋಗುವುದಂತೂ ನಿಶ್ಚಯ. ಜ್ವಾಲಾರೂಪವಾದ ಪರಿವಾರದಿಂದ ಸಮಾವೃತವಾಗಿದ್ದ ಆ ಕಾಲದಂಡವು ರಾವಣನನ್ನು ದಹಿಸಿಬಿಡುವುದೋ ಎಂಬಂತೆ ಕಾಣುತ್ತಿದ್ದಿತು. ಬಲಿಷ್ಠನಾದ ಯಮಧರ್ಮನಿಂದ ಎತ್ತಿ ಹಿಡಿಯಲ್ಪಟ್ಟಿದ್ದ ಆ ಮಹಾಕಾಲದಂಡವು ತನ್ನ ತೇಜಸ್ಸಿನಿಂದ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದ್ದಿತು. ಯಮನು ಕಾಲದಂಡವನ್ನು ಎತ್ತಿ ಹಿಡಿದೊಡನೆಯೇ ಸಮರಾಂಗಣದಲ್ಲಿದ್ದ ಸಮಸ್ತ ಸೈನಿಕರೂ ಭಯಭೀತರಾಗಿ ಓಡತೊಡಗಿದರು. ಕಾಲದಂಡವನ್ನು ಹಿಡಿದು ನಿಂತಿದ್ದ ಯಮ ಧರ್ಮನನ್ನು ನೋಡಿ ಸಮಸ್ತದೇವತೆಗಳೂ ಕಳವಳಗೊಂಡರು.

ಯಮಧರ್ಮನು ಕಾಲದಂಡದಿಂದ ರಾವಣನನ್ನು ಪ್ರಹರಿಸಬೇಕೆನ್ನುವುದರಲ್ಲಿದ್ದಾಗ ಸಾಕ್ಷಾತ್ ಪಿತಾಮಹನೇ ಯಮಧರ್ಮನ ಬಳಿಗೆ ಬಂದು ಹೇಳಿದನು:

'' ಮಹಾಪರಾಕ್ರಮಿಯೇ !ಸೂರ್ಯಪುತ್ರನೇ ! ಮಹಾಬಾಹುವೇ! ನೀನು ಈ ಕಾಲದಂಡದಿಂದ ರಾವಣನ ಸಂಹಾರವನ್ನು ಮಾಡಕೂಡದು. ದೇವಶ್ರೇಷ್ಠನೇ ! ನಾನು ಇವನಿಗೆ ದೇವತೆಗಳಿಂದ ಮರಣವಿಲ್ಲವೆಂಬ ವರವನ್ನು ಕೊಟ್ಟಿರುವೆನು. ನನ್ನ ಮಾತು ಸುಳ್ಳಾಗಬಾರದು.

ಯೋ ಹಿ ಮಾಮನೃತಂ ಕುರ್ಯಾದ್ದೇವೋ ವಾ
ಮಾನುಷೋಽಪಿ ವಾ ।
ತ್ರೈಲೋಕ್ಯಮನೃತಂ ತೇನ ಕೃತಂ ಸ್ಯಾನ್ನಾತ್ರ ಸಂಶಯಃ ॥ 41॥

ದೇವತೆಯೇ ಆಗಲೀ, ಮನುಷ್ಯನೇ ಆಗಲೀ – ಯಾವನು ನನ್ನ ಮಾತನ್ನು ಸುಳ್ಳನ್ನಾಗಿ ಮಾಡುವನೋ – ಅಂತಹವನು ಮೂರು ಲೋಕ ಗಳನ್ನೂ ಸುಳ್ಳುಗಾರರನ್ನಾಗಿ ಮಾಡಿದ ಪಾಪಕ್ಕೆ ಗುರಿಯಾಗುವನು. ಇದರಲ್ಲಿ ಸಂಶಯವೇ ಇಲ್ಲ.

ಮೂರು ಲೋಕಗಳಿಗೂ ಭಯವನ್ನುಂಟುಮಾಡುವ ಈ ಕಾಲ ದಂಡವು ಕ್ರುದ್ಧನಾಗಿರುವ ನಿನ್ನಿಂದ ಪ್ರಯೋಗಿಸಲ್ಪಟ್ಟುದೇ ಆದರೆ – ಪ್ರಿಯರಾದವರನ್ನೂ ಅಪ್ರಿಯರಾದವರನ್ನೂ ಯಾವ ವಿಧವಾದ ತಾರತಮ್ಯವೂ ಇಲ್ಲದೇ

ಭಸ್ಮಮಾಡಿಬಿಡುತ್ತದೆ. ವಿಶ್ವದಲ್ಲಿರುವ ಪ್ರಜೆಗಳೆಲ್ಲರನ್ನೂ ನಿಶ್ಶೇಷವಾಗಿ ಸಂಹರಿಸುತ್ತದೆ.

ಯಮಧರ್ಮನೇ ! ಅಪಾರವಾದ ಪ್ರಭೆಯಿಂದ ಕೂಡಿರುವ ಈ ಕಾಲದಂಡವು ಅಮೋಘವಾದುದು. ಇದೆಂದಿಗೂ ವ್ಯರ್ಥವಾಗಿ ಹೋಗುವುದಿಲ್ಲ. ಸಮಸ್ತರ ಮರಣಕ್ಕೂ ಕಾರಣಭೂತವಾದ ಈ ಕಾಲದಂಡವನ್ನು ಹಿಂದೆ ನಾನೇ ಸೃಷ್ಟಿಸಿದೆನು. ಸೌಮ್ಯನೇ ! ಆದುದರಿಂದ ಈ ಕಾಲದಂಡವನ್ನು ರಾವಣನ ತಲೆಯ ಮೇಲೆ ಪ್ರಯೋಗಿಸಬೇಡ. ಇದರಿಂದ ಪ್ರಹರಿಸಲ್ಪಟ್ಟವನು ಯಾವನೇ ಆದರೂ ಮುಹೂರ್ತಕಾಲವೂ ಜೀವಿಸಿರಲಾರನು.

ಯದಿ ಹ್ಯಸ್ಮಿನ್ನಿಪತಿತೇ ನ ಮ್ರಿಯೇತೈಷ ರಾಕ್ಷಸಃ।
ಮ್ರಿಯತೇ ವಾ ದಶಗ್ರೀವಸ್ತದಾಪ್ಯುಭಯತೋಽನೃತಮ್ ॥45॥

ಈ ಕಾಲದಂಡವನ್ನು ರಾವಣನ ಮೇಲೆ ಪ್ರಯೋಗಿಸಿದನಂತರ ಇವನು ಬದುಕಿದರೂ ನನ್ನ ಮಾತು ಸುಳ್ಳಾಗುತ್ತದೆ. ಇವನು ಸತ್ತರೂ ನನ್ನ ಮಾತು ಸುಳ್ಳಾಗುತ್ತದೆ. ಕಾಲದಂಡವು ಅಪ್ರತಿಹತವಾದುದೆಂದೂ ಅಮೋಘವಾದುದೆಂದೂ ನಾನೇ ಹೇಳಿರುವೆನು. ರಾವಣನು ಇದರ ಪ್ರಹಾರ ದಿಂದ ಹತನಾಗದಿದ್ದರೆ ಕಾಲದಂಡದ ಅಮೋಘತ್ವವು ಹೋಗಿ ನಾನು ಸುಳ್ಳುಗಾರನಾಗುತ್ತೇನೆ. ರಾವಣನನ್ನು ಸಂಹರಿಸಿಬಿಟ್ಟರೆ ದೇವತೆಗಳಿಂದ ಮರಣವಿಲ್ಲವೆಂದು ನಾನು ಅವನಿಗೆ ಕೊಟ್ಟಿರುವ ವರವು ವ್ಯರ್ಥವಾಗಿ ಆಗಲೂ ನಾನು ಸುಳ್ಳುಗಾರನಾಗುತ್ತೇನೆ. ಆದುದರಿಂದ ಈ ಎರಡೂ ಸಂಭವಿಸದಂತೆ ನೀನು ನೋಡಿಕೊಳ್ಳಬೇಕಾಗಿದೆ. ಲಂಕೇಶನನ್ನು ಪ್ರಹರಿಸಲು ಎತ್ತಿಹಿಡಿದಿರುವ ಈ ಕಾಲದಂಡವನ್ನು ನೀನೀಗಲೇ ಕೆಳಗಿಳಿಸು. ಸಮಸ್ತಲೋಕಗಳ ಯೋಗ–ಕ್ಷೇಮಗಳೂ ನಿನ್ನ ದೃಷ್ಟಿಯಲ್ಲಿರುವುದಾದರೆ ಈಗ ನೀನು ರಾವಣನನ್ನು ಸಂಹರಿಸದೇ ನನ್ನನ್ನು ಸತ್ಯವಾದಿಯನ್ನಾಗಿ ಮಾಡು.''

ಬ್ರಹ್ಮನು ಹೀಗೆ ಹೇಳಲು ಧರ್ಮಾತ್ಮನಾದ ಯಮನು ಪ್ರತ್ಯುತ್ತರಿ ಸಿದನು :

ಏಷ ವ್ಯಾವರ್ತಿತೋ ದಣ್ಡಃ ಪ್ರಭವಿಷ್ಣುರ್ಹಿ ನೋ ಭವಾನ್ ॥47॥

''ಬ್ರಹ್ಮದೇವನೇ ! ಇದೋ ಈಗಲೇ ಈ ದಂಡವನ್ನು ಹಿಂತೆಗೆದು

ಕೊಂಡಿದ್ದೇನೆ. ನೀನು ನಮ್ಮೆಲ್ಲರಿಗೂ ಪ್ರಭುವಾಗಿರುವೆ. ಆದುದರಿಂದ ನಿನ್ನ ಆಜ್ಞೆಯನ್ನು ಪರಿಪಾಲಿಸುವುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ. ವರದಾನದಿಂದ ಸಂಪನ್ನನಾಗಿರುವುದರಿಂದ ಇವನು ನನ್ನಿಂದ ಅವಧ್ಯನೆಂದಾದರೆ ಇವನೊಡನೆ ಯುದ್ಧವನ್ನಾದರೂ ನಾನೇಕೆ ಮಾಡಲಿ ? ಆದುದರಿಂದ ನಾನೀಗಲೇ ಇವನ ಕಣ್ಣುಗಳಿಗೆ ಕಾಣದಂತೆ ಅದೃಶ್ಯನಾಗಿಬಿಡುತ್ತೇನೆ.''

ಹೀಗೆ ಹೇಳಿ ಯಮಧರ್ಮನು ರಥ-ಸಾರಥಿಗಳೊಡನೆ ಅಂತರ್ಹಿತನಾದನು.

ರಾಘವ ! ಹೀಗೆ ದಶಗ್ರೀವನು ಯಮಧರ್ಮನನ್ನು ಗೆದ್ದು ತನ್ನ ಹೆಸರನ್ನು ಘೋಷಿಸುತ್ತಾ ಪುಷ್ಪಕವಿಮಾನವನ್ನೇರಿ ಯಮಪುರಿಯಿಂದ ಹೊರಬಿದ್ದನು.

ಅನಂತರ ಸೂರ್ಯಪುತ್ರನಾದ ಪರಮಸಂತುಷ್ಟನಾದ ಯಮ ಧರ್ಮನೂ ಮತ್ತು ನಾರದರೂ ಬ್ರಹ್ಮಪ್ರಮುಖರಾದ ದೇವತೆಗಳೊಡನೆ ಸ್ವರ್ಗಕ್ಕೆ ತೆರಳಿದರು.''

22ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **23ನೆಯ ಸರ್ಗ**

ನಿವಾತಕವಚರೊಡನೆ ರಾವಣನ ಸ್ನೇಹ : ಕಾಲಕೇಯರ ವಧೆ : ವರುಣನ ಮಕ್ಕಳ ಪರಾಜಯ

ಅಗಸ್ತ್ಯರು ಮುಂದುವರಿದು ಶ್ರೀರಾಮನಿಗೆ ಹೇಳುತ್ತಾರೆ :

ತತೋ ಜಿತ್ವಾ ದಶಗ್ರೀವೋ ಯಮಂ ತ್ರಿದಶಪುಙ್ಗವಮ್ ।
ರಾವಣಸ್ತು ರಣಶ್ಲಾಘೀ ಸ್ವಸಹಾಯಾನ್ದದರ್ಶ ಹ ॥1॥

''ರಾಘವ ! ಯುದ್ಧವನ್ನೇ ಶ್ಲಾಘಿಸುವ ಮತ್ತು ಯಾವಾಗಲೂ ಯುದ್ಧದಲ್ಲಿಯೇ ಆಸಕ್ತನಾದ ರಾವಣನು ಹೀಗೆ ದೇವಶ್ರೇಷ್ಠನಾದ ಯಮನನ್ನು ಪರಾಜಯಗೊಳಿಸಿ ತನ್ನ ಸಹಾಯಕರಾದ ರಾಕ್ಷಸರೊಡನೆ ಸೇರಿಕೊಂಡನು.

ಯಮನ ಪ್ರಹಾರಗಳಿಂದ ಜರ್ಜರಿತವಾದ ಅಂಗಗಳುಳ್ಳವನಾಗಿದ್ದ, ರಕ್ತದಿಂದ ತೋಯ್ದುಹೋಗಿದ್ದ, ತಮ್ಮ ರಾಜನಾದ ರಾವಣನನ್ನು ನೋಡಿ

ಅವನ ಸಹಾಯಕರು ವಿಸ್ಮಿತರಾದರು. ಮಾರೀಚನೇ ಮೊದಲಾದ ರಾವಣನ ಅನುಯಾಯಿಗಳು -' ರಾವಣನಿಗೆ ಜಯವಾಗಲಿ '- ಎಂದು ಹೇಳುತ್ತಾ ಅವನ ಅಭ್ಯುದಯವನ್ನು ಆಶಿಸುತ್ತಾ ರಾವಣನಿಂದ ಸಂತೈಸಲ್ಪಟ್ಟವರಾಗಿ ರಾವಣನೊಡನೆ ಪುಷ್ಪಕವಿಮಾನವನ್ನೇರಿದರು.

ಬಳಿಕ ಅವರೆಲ್ಲರೂ ರಸಾತಲಕ್ಕೆ ಹೋಗುವ ಇಚ್ಛೆಯಿಂದ ದೈತ್ಯರಿಂದಲೂ ಸರ್ಪಗಳಿಂದಲೂ ಸೇವಿಸಲ್ಪಡುತ್ತಿದ್ದ, ವರುಣನಿಂದ ರಕ್ಷಿಸಲ್ಪಡುತ್ತಿದ್ದ ಸಮುದ್ರವನ್ನು ಪ್ರವೇಶಿಸಿದರು. ಅಲ್ಲಿಂದ ಅವರು ವಾಸುಕಿಯಿಂದ ಪಾಲಿಸಲ್ಪಡುತ್ತಿದ್ದ ಭೋಗವತೀ ಪಟ್ಟಣಕ್ಕೆ ಹೋಗಿ ಅಲ್ಲಿದ್ದ ನಾಗರಾಜರನ್ನು ಅಧೀನರನ್ನಾಗಿ ಮಾಡಿಕೊಂಡು ಅತ್ಯಂತಹರ್ಷದಿಂದ ಮಣಿಮಯೀ ಪುರಿಗೆ ಪ್ರಯಾಣಮಾಡಿದರು. ಆ ಪುರಿಯಲ್ಲಿ ನಿವಾತಕವಚರೆಂಬ ದೈತ್ಯರು ವಾಸಮಾಡುತ್ತಿದ್ದರು. ಅವರೆಲ್ಲರೂ ಬ್ರಹ್ಮನಿಂದ ಅಮೋಘವಾದ ವರಗಳನ್ನು ಪಡೆದುಕೊಂಡಿದ್ದರು. ರಾವಣರಾಕ್ಷಸನು ಅವರ ಬಳಿಗೂ ಹೋಗಿ ಅವರೆಲ್ಲರನ್ನೂ ಯುದ್ಧಕ್ಕೆ ಆಹ್ವಾನಿಸಿದನು. ನಿವಾತಕವಚರು ಮಹಾಪರಾಕ್ರಮಿಗಳಾಗಿದ್ದರು. ಅತ್ಯಂತಬಲಿಷ್ಠರಾಗಿದ್ದರು. ನಾನಾವಿಧವಾದ ಅಸ್ತ್ರ-ಶಸ್ತ್ರಗಳನ್ನು ಹೊಂದಿದ್ದರು. ರಾವಣನಂತೆ ನಿವಾತಕವಚರು ಕೂಡ ಯುದ್ಧೋತ್ಸಾಹಿಗಳಾಗಿಯೂ ಯುದ್ಧೋನ್ಮತ್ತರಾಗಿಯೂ ಇದ್ದರು. ಇಬ್ಬರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ರಾಕ್ಷಸ - ದೈತ್ಯಸೈನಿಕರು ಕುಪಿತರಾಗಿ ಶೂಲ-ತ್ರಿಶೂಲ-ವಜ್ರಾಯುಧ-ಪಟ್ಟಿಶ- ಖಡ್ಗ- ಗಂಡುಗೊಡಲಿ - ಇವೇ ಮುಂತಾದ ಆಯುಧಗಳಿಂದ ಪರಸ್ಪರವಾಗಿ ಕಾದಾಡಲು ಪ್ರಾರಂಭಿಸಿದರು. ಒಂದು ವರ್ಷಕ್ಕೂ ಹೆಚ್ಚುಕಾಲ ಭಯಂಕರವಾದ ಯುದ್ಧವು ರಾವಣನಿಗೂ ನಿವಾತಕವಚರಿಗೂ ನಡೆಯುತ್ತಲೇ ಇದ್ದಿತು. ಆದರೆ ಯಾವ ಪಕ್ಷಕ್ಕೂ ಜಯವಾಗಲೀ ಅಪಜಯವಾಗಲೀ ಸಂಭವಿಸಲೇ ಇಲ್ಲ. ಆ ಸಮಯದಲ್ಲಿ ಮೂರು ಲೋಕಗಳಿಗೂ ಆಶ್ರಯಭೂತನಾದ, ಅವಿನಾಶಿಯಾದ ಪಿತಾಮಹನು ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ಯುದ್ಧರಂಗಕ್ಕೆ ಶೀಘ್ರವಾಗಿ ಆಗಮಿಸಿದನು. ವೃದ್ಧನಾಗಿದ್ದ ಪಿತಾಮಹನು ನಿವಾತಕವಚರಿಗೆ ಯುದ್ಧವನ್ನು ಒಡನೆಯೇ ನಿಲ್ಲಿಸುವಂತೆ ಹೇಳಿದನು :

ನ ಹ್ಯಯಂ ರಾವಣೋ ಯುದ್ಧೇ ಶಕ್ಯೋ ಜೇತುಂ ಸುರಾಸುರೈಃ ।
ನ ಭವನ್ತಃ ಕ್ಷಯಂ ನೇತುಮಪಿ ಸಾಮರದಾನವೈಃ ॥12॥

''ಸುರಾಸುರರಿಂದಲೂ ರಾವಣನನ್ನು ಯುದ್ಧದಲ್ಲಿ ಜಯಿಸಲು ಶಕ್ಯವಿಲ್ಲ. ಅಂತೆಯೇ ಸಮಸ್ತದೇವತೆಗಳೂ ಮತ್ತು ದಾನವರೂ ಬಂದರೂ ನಿಮ್ಮನ್ನು ವಿನಾಶಗೊಳಿಸುವ ಸಾಧ್ಯತೆಯಿಲ್ಲ.

ನೀವಿಬ್ಬರೂ ವರದಾನದಶಕ್ತಿಯಿಂದ ಪ್ರಭಾವಿತರಾಗಿರುವಿರಿ. ಆದುದರಿಂದ ರಾವಣರಾಕ್ಷಸನೊಡನೆ ಮೈತ್ರಿಯನ್ನು ಬೆಳೆಸುವುದೇ ಈ ಸಮಯದಲ್ಲಿ ಸಮೀಚೀನವಾಗಿ ಕಾಣುತ್ತದೆ. ಏಕೆಂದರೆ; ಸುಹೃದರ ಸಮಸ್ತವಾದ ಭೋಗಸಾಮಗ್ರಿಗಳೂ ಪರಸ್ಪರವಾಗಿ ಸಮಾನರೀತಿಯಲ್ಲಿ ಉಪಭೋಜ್ಯವಾಗುತ್ತವೆ. ಪರಸ್ಪರವೈತ್ರಿಯಿಂದಾಗಿ ಸಮಸ್ತಭೋಗವಸ್ತುಗಳನ್ನೂ ಸಮಾನವಾಗಿ ಹಂಚಿಕೊಂಡು ಉಪಭೋಗಿಸಬಹುದು. ಇದರಲ್ಲಿ ಸಂಶಯವೇ ಇಲ್ಲ.''

ಪಿತಾಮಹನ ಮಾತನ್ನು ಕೇಳಿ ರಾವಣನು ನಿವಾತಕವಚರೊಡನೆ ಅಗ್ನಿಸಾಕ್ಷಿಯಾಗಿ ಸಖ್ಯವನ್ನು ಮಾಡಿಕೊಂಡು ಪರಮಸಂತುಷ್ಟನಾದನು. ನಿವಾತಕವಚರಿಂದ ಯಥೋಚಿತವಾದ ಸತ್ಕಾರಗಳನ್ನು ಪಡೆದ ರಾವಣನು ಒಂದು ವರ್ಷಕಾಲ ಅವರೊಡನೆಯೇ ವಾಸವಾಗಿದ್ದನು. ತನ್ನ ಪಟ್ಟಣವಾದ ಲಂಕೆಯಲ್ಲಿ ಲಭಿಸುತ್ತಿದ್ದ ಸುಖೋಪಭೋಗಗಳಿಗೆ ಅನುರೂಪವಾದ ಸುಖೋಪಭೋಗಗಳನ್ನೇ ರಾವಣನು ನಿವಾತಕವಚರ ಸ್ಥಾನವಾದ ಮಣಿಮಯಪುರದಲ್ಲಿಯೂ ಪಡೆದುಕೊಂಡನು. ಅಷ್ಟೇ ಅಲ್ಲದೇ ನಿವಾತಕವಚರಿಂದ ನೂರಾರು ವಿಧವಾದ ಮಾಯಾವಿದ್ಯೆಗಳನ್ನೂ ಕಲಿತುಕೊಂಡನು. ಅನಂತರ ದಶಗ್ರೀವನು ವರುಣನ ಪಟ್ಟಣವನ್ನು ಹುಡುಕುವ ಸಲುವಾಗಿ ರಸಾತಲದಲ್ಲಿ ಸಂಚರಿಸತೊಡಗಿದನು. ಹಾಗೆಯೇ ಸಂಚರಿಸುತ್ತಿದ್ದಾಗ ಕಾಲಕೇಯರ ಪಟ್ಟಣವಾದ ಅಶ್ಮ ಎಂಬ ಹೆಸರಿನ ನಗರಕ್ಕೆ ಹೋದನು. ಕಾಲಕೇಯರು ಬಲೋತ್ಕಟರಾಗಿದ್ದರು. ರಾವಣನು ಅವರೆಲ್ಲರನ್ನೂ ಸಂಹರಿಸಿ ನಾಲಿಗೆಯಿಂದ ಕಟವಾಯಿಗಳನ್ನು ನೆಕ್ಕುತ್ತಿದ್ದ, ಯುದ್ಧಸನ್ನದ್ಧನಾಗಿ ಬಂದಿದ್ದ, ಮಹಾಬಲಿಷ್ಠನಾಗಿದ್ದ, ತನ್ನ ತಂಗಿ ಶೂರ್ಪಣಖೆಯ ಗಂಡನಾಗಿದ್ದ ವಿದ್ಯುಜ್ಜಿಹ್ವನೆಂಬ ರಾಕ್ಷಸನನ್ನೂ ಕತ್ತಿಯಿಂದ ಕತ್ತರಿಸಿದನು.

ಬಳಿಕ ಮುಹೂರ್ತಕಾಲದಲ್ಲಿ ಅವನ ಅನುಯಾಯಿಗಳಾಗಿದ್ದ ನಾಲ್ಕು

ನೂರು ದೈತ್ಯರನ್ನೂ ಸಂಹರಿಸಿದನು. ಅನಂತರ ದಶಮುಖನು ಬಿಳಿಯ ಮೋಡದಂತೆ ಬಿಳುಪಾಗಿದ್ದ, ಕೈಲಾಸಪರ್ವತದಂತೆ ಪ್ರಕಾಶಮಾನವಾಗಿದ್ದ, ದಿವ್ಯವಾಗಿದ್ದ ವರುಣನ ಅರಮನೆಯನ್ನು ನೋಡಿದನು. ಅಲ್ಲಿಯೇ ಸುರಭೀ ಎಂಬ ಹೆಸರಿನ ಕಾಮಧೇನುವಿದ್ದಿತು. ಅದು ಯಾವಾಗಲೂ ತನ್ನ ಕೆಚ್ಚಲಿನಿಂದ ಹಾಲನ್ನು ಸುರಿಸುತ್ತಲೇ ಇದ್ದಿತು. ಅದು ಸುರಿಸಿದ ಹಾಲಿನ ಪ್ರವಾಹದಿಂದ ಕ್ಷೀರೋದವೆಂಬ ಸಮುದ್ರವೇ ನಿರ್ಮಿತವಾಯಿತು. ರಾವಣನು ಮಹಾದೇವನ ವಾಹನವಾಗಿದ್ದ ಮಹಾವೃಷಭದ ತಾಯಿಯಾದ ಆ ಸುರಭೀ ದೇವಿಯನ್ನು ಸಂದರ್ಶಿಸಿದನು. ಸುರಭಿಯ ಹಾಲಿನಿಂದ ಕ್ಷೀರಸಾಗರವು ನಿರ್ಮಿಸಲ್ಪಟ್ಟು ಆ ಕ್ಷೀರಸಾಗರದಿಂದಲೇ ಶೀತರಶ್ಮಿಯಾದ ಚಂದ್ರನೂ ಪ್ರಾದುರ್ಭವಿಸಿದ್ದನು. ಚಂದ್ರನ ಉತ್ಪತ್ತಿಸ್ಥಾನವಾದ ಆ ಕ್ಷೀರಸಮುದ್ರದ ನೊರೆಯನ್ನೇ ಆಹಾರವನ್ನಾಗಿ ಮಾಡಿಕೊಂಡು ಜೀವಿಸುತ್ತಿದ್ದ ಫೇನಪರೆಂಬ ಮಹರ್ಷಿಗಳೂ ಅಲ್ಲಿಯೇ ಇದ್ದರು. ಆ ಕ್ಷೀರಸಾಗರದಿಂದಲೇ ದೇವತೆಗಳಿಗೆ ಬೇಕಾಗಿದ್ದ ಅಮೃತವೂ ಸ್ವಧಾಭೋಜಿಗಳಾದ ಪಿತೃಗಳಿಗೆ ಬೇಕಾಗಿದ್ದ ಸ್ವಧೆಯೂ (ಕವ್ಯವೂ) ಹುಟ್ಟಿತು. ಲೋಕದಲ್ಲಿ ಸುರಭೀ ಎಂದು ಕರೆಯಲ್ಪಡುವ ಆ ಪರಮಾದ್ಭುತವಾದ ಕಾಮಧೇನುವಿಗೆ ರಾವಣನು ಪ್ರದಕ್ಷಿಣ – ನಮಸ್ಕಾರಗಳನ್ನು ಮಾಡಿ ನಾನಾಪ್ರಕಾರವಾದ ಸೈನಿಕರಿಂದ ರಕ್ಷಿಸಲ್ಪಡುತ್ತಿದ್ದ ಮಹಾಭಯಂಕರವಾಗಿದ್ದವರುಣನ ಆಲಯವನ್ನು ಪ್ರವೇಶಿಸಿದನು. ನೂರಾರು ಜಲಧಾರೆಗಳಿಂದ ವ್ಯಾಪ್ತವಾಗಿದ್ದ, ಶರತ್ಕಾಲದ ಮೇಘದಂತೆ ಶುಭ್ರವಾಗಿದ್ದ, ಸರ್ವಕಾಲದಲ್ಲಿಯೂ ಆನಂದೋತ್ಸವಗಳಿಂದ ಸಂಪನ್ನವಾಗಿದ್ದ ವರುಣನ ಶ್ರೇಷ್ಠವಾದ ಆಲಯವನ್ನು ರಾವಣನು ನೋಡಿದನು. ಬಳಿಕ ಯುದ್ಧದಲ್ಲಿ ಬಲಾಧ್ಯಕ್ಷರನ್ನು ಸಂಹರಿಸಿ ಅವರಿಂದಲೂ ಪೀಡಿತನಾಗಿ ತಾನು ಯುದ್ಧ ಮಾಡುವ ಸಲುವಾಗಿ ಬಂದಿರುವ ವಾರ್ತೆಯನ್ನು ತಮ್ಮ ರಾಜನಿಗೆ ತಿಳಿಸುವಂತೆ ವರುಣನ ಕಡೆಯ ಯೋಧರಿಗೆ ಹೇಳಿದನು :

ಯುದ್ಧಾರ್ಥೀ ರಾವಣಃ ಪ್ರಾಪ್ತಸ್ತಸ್ಯ ಯುದ್ಧಂ ಪ್ರದೀಯತಾಮ್ ।
ವದ ವಾ ನ ಭಯಂ ತೇಽಸ್ತಿ ನಿರ್ಜಿತೋಽಸ್ಮೀತಿ ಸಾಞ್ಜಲಿಃ ॥27॥

''ಯುದ್ಧದ ಸಲುವಾಗಿ ರಾವಣನು ಬಂದಿರುವನೆಂದೂ ಅವನಿಗೆ ಯುದ್ಧದ ಆತಿಥ್ಯವನ್ನು ನೀಡಬೇಕೆಂದೂ ಹೇಳಿರಿ. ಅಥವಾ ನಿಮ್ಮ ರಾಜನು

ಕೈಮುಗಿದುಕೊಂಡು ಪರಾಜಿತನಾದನೆಂದು ಹೇಳಿಕೊಳ್ಳಲಿ. ಹಾಗೆ ಹೇಳಿದರೆ ಅವನಿಗೆ ಮರಣದ ಭಯವಿಲ್ಲ.''

ರಾವಣನು ಹೀಗೆ ಹೇಳಿಕಳುಹಿಸುತ್ತಿದ್ದಂತೆಯೇ ಕ್ರುದ್ಧರಾದ ವರುಣನ ಮಕ್ಕಳು –ಮೊಮ್ಮಕ್ಕಳು ' ಗೌ ' ಮತ್ತು ' ಪುಷ್ಕರ' ಎಂಬ ಸೇನಾಧ್ಯಕ್ಷರೊಡನೆ ರಾವಣನೊಡನೆ ಯುದ್ಧಮಾಡುವ ಸಲುವಾಗಿ ವರುಣನ ಆಲಯದಿಂದ ಹೊರಹೊರಟರು.

ವರುಣನ ಪುತ್ರ –ಪೌತ್ರರು ಸಕಲಗುಣಸಂಪನ್ನರಾಗಿದ್ದರಲ್ಲದೇ – ಉದಯಿಸಿದ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದಲೂ ಕೂಡಿದ್ದರು. ಅವರೆಲ್ಲರೂ ಇಚ್ಛಾನುಸಾರವಾಗಿ ಹೋಗುವ ರಥಗಳಲ್ಲಿ ಕುಳಿತು ಸೈನಿಕರಿಂದ ಪರಿವೃತರಾಗಿ ರಣರಂಗಕ್ಕೆ ಧಾವಿಸಿದರು. ಬಳಿಕ ವರುಣನ ಪುತ್ರರಿಗೂ ಮತ್ತು ಧೀಮಂತನಾದ ರಾವಣನಿಗೂ ರೋಮಾಂಚಕಾರಕವಾದ ಭೀಕರವಾದ ಯುದ್ಧವು ಪ್ರಾರಂಭವಾಯಿತು. ಮಹಾವೀರ್ಯರಾದ ದಶಗ್ರೀವರಾಕ್ಷಸನ ಅಮಾತ್ಯರು ಕ್ಷಣಮಾತ್ರದಲ್ಲಿ ಸಮಸ್ತವಾದ ಆ ವಾರುಣ ಸೈನ್ಯವನ್ನೂ ಧ್ವಂಸಮಾಡಿಬಿಟ್ಟರು. ರಾವಣನ ಅಮಾತ್ಯರ ಬಾಣಗಳ ಸಮೂಹಗಳಿಂದ ಪೀಡಿಸಲ್ಪಡುತ್ತಿದ್ದ ವರುಣನ ಮಕ್ಕಳು ಯುದ್ಧದಲ್ಲಿ ತಮ್ಮ ಸೈನಿಕರೆಲ್ಲರೂ ಹತರಾದುದನ್ನು ಕಂಡು ತಾತ್ಕಾಲಿಕವಾಗಿ ಯುದ್ಧದಿಂದ ಹಿಮ್ಮೆಟ್ಟಿದರು. ಸ್ವಲ್ಪ ಹೊತ್ತು ಕಳೆದನಂತರ ಭೂಮಿಯ ಮೇಲಿದ್ದ ವರುಣ ಪುತ್ರರು ರಾವಣನು ಆಕಾಶದಲ್ಲಿ ಪುಷ್ಪಕವಿಮಾನದಲ್ಲಿ ಕುಳಿತಿರುವುದನ್ನು ನೋಡಿದೊಡನೆಯೇ ಶೀಘ್ರವಾಗಿ ಹೋಗುವ ರಥದಲ್ಲಿ ಕುಳಿತು ಆಕಾಶವನ್ನು ಪ್ರವೇಶಿಸಿದರು. ವರುಣನ ಮಕ್ಕಳೂ ಮತ್ತು ರಾವಣನೂ ಸಮಾನವಾದ ಸ್ಥಾನಗಳಲ್ಲಿ ಉಪಸ್ಥಿತರಾದನಂತರ ದೇವ–ದಾನವರ ಯುದ್ಧದಂತೆ ರಾವಣನಿಗೂ ವರುಣನ ಮಕ್ಕಳಿಗೂ ಘೋರವಾದ ಆಕಾಶಯುದ್ಧವು ಪ್ರಾರಂಭವಾಯಿತು. ಬಳಿಕ ವಾರುಣಿಗಳು ಆ ಭೀಕರವಾದ ಯುದ್ಧದಲ್ಲಿ ಅಗ್ನಿಸದೃಶವಾದ ಬಾಣಗಳ ಪ್ರಹಾರಗಳಿಂದ ರಾವಣನನ್ನು ಹಿಮ್ಮೆಟ್ಟಿಸಿ ಆನಂದ ತುಂದಿಲರಾಗಿ ನಾನಾಪ್ರಕಾರವಾಗಿ ಹರ್ಷಧ್ವನಿಗಳನ್ನು ಮಾಡಿದರು. ತಮ್ಮ ರಾಜನಾದ ರಾವಣನು ಅವಮಾನಿತನಾದುದನ್ನು ಕಂಡು ಕ್ರುದ್ಧನಾದ ಮಹೋದರನು ಮರಣಭಯವನ್ನೂ ತೊರೆದು ಯುದ್ಧಮಾಡುವ ಅಪೇಕ್ಷೆ

ಯಿಂದ ವರುಣನ ಮಕ್ಕಳ ಕಡೆಗೆ ನೋಡಿದನು. ವರುಣನ ಮಕ್ಕಳ ಕುದುರೆಗಳು ವೇಗದಲ್ಲಿ ವಾಯುವಿಗೆ ಸಮಾನವಾಗಿದ್ದುವು. ಇಚ್ಛೆಬಂದಲ್ಲಿಗೆ ಹೋಗುವ ಸಾಮರ್ಥ್ಯವನ್ನು ಹೊಂದಿದ್ದುವು. ಮಹೋದರನು ಗದೆಯಿಂದ ಆ ಕುದುರೆಗಳನ್ನು ಪ್ರಹರಿಸಲು ಅವೆಲ್ಲವೂ ಭೂಮಿಯಲ್ಲಿ ಬಿದ್ದುಹೋದುವು.

ಹೀಗೆ ಮಹೋದರನು ವರುಣನ ಮಕ್ಕಳ ಸೈನ್ಯವನ್ನೂ ಮತ್ತು ಕುದುರೆಗಳನ್ನೂ ಸಂಹರಿಸಿ ರಥಹೀನರಾಗಿದ್ದ ವರುಣಪುತ್ರರನ್ನು ನೋಡಿ ಗಟ್ಟಿಯಾಗಿ ಗರ್ಜಿಸಿದನು. ಮಹೋದರನ ಗದಾಪ್ರಹಾರದಿಂದ ವರುಣನ ಮಕ್ಕಳ ರಥಾಶ್ವಗಳು ಶ್ರೇಷ್ಠರಾದ ಸಾರಥಿಗಳೊಡನೆ ಅಸುಗಳನ್ನು ತೊರೆದು ಭೂಮಿಯಲ್ಲಿ ಬಿದ್ದುವು. ಶೂರರಾದ, ಮಹಾತ್ಮರಾದ ವರುಣನ ಮಕ್ಕಳು ರಥಗಳಿಲ್ಲದಿದ್ದರೂ ತಮ್ಮ ಪ್ರಭಾವದಿಂದಲೇ ಆಕಾಶದಲ್ಲಿ ನಿಂತಿದ್ದರು. ಕ್ರುದ್ಧರಾಗಿದ್ದ ವರುಣಪುತ್ರರು ಧನುಸ್ಸುಗಳನ್ನು ಸಜ್ಜುಗೊಳಿಸಿ ಬಾಣಗಳ ಪ್ರಯೋಗದಿಂದ ಮಹೋದರನನ್ನು ಕ್ಷತ-ವಿಕ್ಷತನನ್ನಾಗಿ ಮಾಡಿ ಏಕಕಾಲ ದಲ್ಲಿ ರಾವಣನನ್ನೂ ಆಕ್ರಮಿಸಿದರು. ಮೇಘಗಳು ಪರ್ವತಗಳ ಮೇಲೆ ಮಳೆ ಸುರಿಸುವಂತೆ ಧನುಸ್ಸುಗಳಿಂದ ಹೊರಬರುತ್ತಿದ್ದ ವಜ್ರಾಯುಧಕ್ಕೆ ಸಮಾನ ವಾಗಿದ್ದ ಮತ್ತು ಸುದಾರುಣವಾಗಿದ್ದ ಬಾಣಗಳಿಂದ ರಾವಣನನ್ನು ಭೇದಿಸು ತ್ತಿದ್ದರು. ಗಾಯಗೊಂಡ ದಶಗ್ರೀವನು ಕಾಲಾಗ್ನಿಯಂತೆ ಕ್ರೋಧಾಭಿ ಭೂತನಾಗಿ ವರುಣಪುತ್ರರ ಮರ್ಮಸ್ಥಾನಗಳಲ್ಲಿ ಮಹಾಘೋರವಾದ ಬಾಣ ಗಳನ್ನು ಸುರಿಸಿದನು. ಪುಷ್ಪಕವಿಮಾನದಲ್ಲಿ ಕುಳಿತಿದ್ದ ದುರ್ಧರ್ಷನಾದ ರಾವಣನು ವರುಣನ ಎಲ್ಲ ಮಕ್ಕಳನ್ನೂ ವಿಚಿತ್ರವಾದ ಮುಸಲಾಯುಧ ಗಳಿಂದಲೂ, ಭಲ್ಲಾಯುಧಗಳಿಂದಲೂ, ಪಟ್ಟಿಶಗಳಿಂದಲೂ, ಶಕ್ತ್ಯಾಯುಧ ಗಳಿಂದಲೂ, ದೊಡ್ಡ-ದೊಡ್ಡ ಶತಘ್ನಿಗಳಿಂದಲೂ ಪ್ರಹರಿಸಿದನು. ಪದಾತಿ ಗಳಾಗಿದ್ದ ವರುಣನ ಮಕ್ಕಳು ರಾವಣನಿಂದ ಗಾಯಗೊಳಿಸಲ್ಪಡುತ್ತಿದ್ದರೂ ಮುನ್ನುಗ್ಗಿ ಹೋಗುತ್ತಿದ್ದರು. ಆದರೆ ರಾವಣನು ಪುಷ್ಪಕವಿಮಾನದಲ್ಲಿ ಕುಳಿತು ಯುದ್ಧ ಮಾಡುತ್ತಿದ್ದುದರಿಂದ ಪದಾತಿಗಳಾಗಿದ್ದ ವರುಣನ ಮಕ್ಕಳು ಅರುವತ್ತು ವರ್ಷದ ಮುದಿ ಆನೆಗಳು ಆಳವಾದ ಕೆಸರಿನಲ್ಲಿ ಸಿಕ್ಕಿಕೊಂಡು ಸಂಕಟಪಡುವಂತೆ ಸತತವಾದ ಆಯುಧಗಳ ಪ್ರಹಾರಗಳಿಂದ ಸಂಕಟಪಡು ತ್ತಿದ್ದರು. ವಿನಾಶಹೊಂದುವುದರಲ್ಲಿದ್ದ ಮತ್ತು ವ್ಯಾಕುಲರಾಗಿದ್ದ ವರುಣನ

ಮಕ್ಕಳನ್ನು ನೋಡಿ ರಾವಣನು ಆನಂದತುಂದಿಲನಾಗಿ ಮೇಘದಂತೆ ಹರ್ಷ ಧ್ವನಿಮಾಡಿದನು. ಗಟ್ಟಿಯಾಗಿ ಸಿಂಹನಾದಮಾಡುತ್ತಾ ನಾನಾಪ್ರಕಾರವಾದ ಆಯುಧಪ್ರಹಾರಗಳಿಂದ ಜಲಧಾರೆಯಿಂದ ಮೇಘವು ವೃಕ್ಷಗಳನ್ನು ಬುಡ ಮೇಲಾಗಿ ಮಾಡುವಂತೆ ವರುಣಪುತ್ರರನ್ನು ಧ್ವಂಸಮಾಡುತ್ತಿದ್ದನು. ಬಳಿಕ ವರುಣನ ಮಕ್ಕಳೆಲ್ಲರೂ ವಿಮುಖರಾಗಿ ಭೂಮಿಯ ಮೇಲೆ ಬಿದ್ದರು. ವರುಣನ ಕಡೆಯ ಯೋಧರು ಗಾಯಗೊಂಡಿದ್ದ ವರುಣನ ಎಲ್ಲ ಮಕ್ಕಳನ್ನೂ ಅವರವರ ಮನೆಗೆ ಶುಶ್ರೂಷೆಗಾಗಿ ಒಯ್ದರು.

''ವರುಣದೇವನೇ! ನಿನ್ನ ಕಡೆಯವರೆಲ್ಲರೂ ಪರಾಜಿತರಾಗಿಹೋದರು. ಈಗಲಾದರೂ ನೀನು ನನ್ನೊಡನೆ ಯುದ್ಧಮಾಡಲು ಬರಲೇಬೇಕು''- ಈ ಮಾತನ್ನು ವರುಣನಿಗೆ ಹೇಳುವಂತೆ ರಾವಣನು ವರುಣ ಸೇವಕರಿಗೆ ಹೇಳಿದನು. ಅದನ್ನು ಕೇಳಿದ ವರುಣನ ಮಂತ್ರಿಯಾದ ಪ್ರಹಾಸನೆಂಬುವನು ರಾವಣನಿಗೆ ಹೇಳಿದನು :

ಗತಃ ಖಲು ಮಹಾರಾಜೋ ಬ್ರಹ್ಮಲೋಕಂ ಜಲೇಶ್ವರಃ ।
ಗಾನ್ಧರ್ವಂ ವರುಣಃ ಶ್ರೋತುಂ ಯಂ ತ್ವಮಾಹ್ವಯಸೇ ಯುಧಿ ॥

''ರಾವಣೇಶ್ವರನೇ ! ನೀನೀಗ ಯುದ್ಧಕ್ಕೆ ಆಹ್ವಾನಿಸುತ್ತಿರುವ ಜಲ ಗಳಿಗೆ ಸ್ವಾಮಿಯಾದ ವರುಣನು ಗಂಧರ್ವಗಾನವನ್ನು ಕೇಳಲು ಬ್ರಹ್ಮ ಲೋಕಕ್ಕೆ ಹೋಗಿರುವನು. ನಮ್ಮ ರಾಜನಾದ ವರುಣದೇವನೇ ಇಲ್ಲದಿರು ವಾಗ ನಿನ್ನ ಈ ಶ್ರಮವೆಲ್ಲವೂ ವ್ಯರ್ಥವೇ ಅಲ್ಲವೇ ? ನಿನ್ನನ್ನೆದುರಿಸಲು ಒಟ್ಟುಗೂಡಿ ಬಂದ ವರುಣನ ಮಕ್ಕಳೆಲ್ಲರೂ ಪರಾಜಿತರಾಗಿ ಹೋದರು. ನೀನೀಗ ವರುಣನನ್ನು ಜಯಿಸಿದಂತೆಯೇ ಆಗಿದೆ.''

ವರುಣನ ಮಂತ್ರಿಯ ಮಾತನ್ನು ಕೇಳಿ ರಾಕ್ಷಸರಾಜನಾದ ರಾವಣನು ತನ್ನ ನಾಮಧೇಯವನ್ನು ಘೋಷಿಸುತ್ತಾ ಹರ್ಷಧ್ವನಿಮಾಡುತ್ತಾ ವರುಣ ಲೋಕದಿಂದ ಹೊರಹೊರಟನು. ರಾವಣನು ಯಾವ ಮಾರ್ಗದಿಂದ ರಸಾ ತಲಕ್ಕೆ ಹೋಗಿದ್ದನೋ ಅದೇ ಮಾರ್ಗದಿಂದಲೇ ಹೊರಬಂದು ಆಕಾಶ ಮಾರ್ಗದ ಮೂಲಕವಾಗಿ ಪ್ರಯಾಣಮಾಡಿ ಲಂಕೆಯನ್ನು ಸೇರಿದನು.

23ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 24ನೆಯ ಸರ್ಗ

ರಾವಣನಿಂದ ಅಪಹೃತರಾದ ದೇವ –ದಾನವ –ನಾಗ – ಯಕ್ಷಕನ್ಯೆಯರ ಗೋಳಾಟ ಮತ್ತು ಶಾಪ : ಪತಿಯನ್ನು ಕಳೆದುಕೊಂಡು ಗೋಳಾಡುತ್ತಿದ್ದ ಶೂರ್ಪಣಖೆಗೆ ರಾವಣನ ಆಶ್ವಾಸನೆ : ಖರನ ಜೊತೆಯಲ್ಲಿ ದಂಡಕಾರಣ್ಯಕ್ಕೆ ಅವಳ ಪ್ರಯಾಣ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ನಿವರ್ತಮಾನಃ ಸಂಹೃಷ್ಟೋ ರಾವಣಃ ಸ ದುರಾತ್ಮವಾನ್ ।
ಜಹ್ರೇ ಪಥಿ ನರೇನ್ದ್ರರ್ಷಿದೇವದಾನವಕನ್ಯಕಾಃ ॥1॥

''ಎಲ್ಲೆಡೆಗಳಲ್ಲಿಯೂ ಜಯಗಳಿಸಿ ಹಿಂದಿರುಗುವಾಗ ದುರಾತ್ಮನಾದ ರಾವಣನು ಆನಂದತುಂದಿಲನಾಗಿದ್ದನು. ಆನಂದಾಧಿಕ್ಯದಿಂದ ಮತಿಗೆಟ್ಟಿದ್ದ ರಾವಣನು ಮಾರ್ಗದಲ್ಲಿ ಅನೇಕಾನೇಕ ರಾಜಕನ್ಯೆಯರನ್ನೂ, ಋಷಿಕನ್ಯೆಯರನ್ನೂ, ದೇವ –ದಾನವಕನ್ಯೆಯರನ್ನೂ ಅಪಹರಿಸಿ ತಂದನು.

ಕ್ರೂರಿಯಾದ ರಾವಣನು ದರ್ಶನೀಯಳಾದ ರೂಪವತಿಯಾದ ಯಾವ ಕನ್ಯೆಯನ್ನು ಅಥವಾ ಯುವತಿಯನ್ನು ನೋಡುತ್ತಿದ್ದನೋ - ಅವರೆಲ್ಲರ ಬಂಧುಗಳನ್ನೂ ಸಂಹರಿಸಿ ಕನ್ಯೆಯರನ್ನು ಬಂಧಿಸಿ ವಿಮಾನದಲ್ಲಿ ಕರೆತರುತ್ತಿದ್ದನು. ಅದೇ ರೀತಿಯಲ್ಲಿ ನಾಗ–ರಾಕ್ಷಸಕನ್ಯೆಯರನ್ನೂ, ಅಸುರ – ಮಾನುಷ ಕನ್ಯೆಯರನ್ನೂ, ಯಕ್ಷ–ದಾನವ ಕನ್ಯೆಯರನ್ನೂ ಅಪಹರಿಸಿ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಲಂಕೆಗೆ ಬಂದನು. ದುಃಖದ ಕಾರಣದಿಂದಾಗಿ ಆ ಎಲ್ಲ ಕನ್ಯೆಯರ ಕಣ್ಣುಗಳಿಂದಲೂ ಏಕಕಾಲದಲ್ಲಿ ಕಂಬನಿಯು ಪ್ರವಹಿಸತೊಡಗಿತು. ಶೋಕಾಗ್ನಿಯಿಂದಲೂ ಭಯದಿಂದಲೂ ಹೊರಹೊಮ್ಮುತ್ತಿದ್ದ ಅವರ ಅಶ್ರುಬಿಂದುಗಳು ಅಗ್ನಿಯ ಕಿಡಿಗಳಂತೆಯೇ ಕಾಣುತ್ತಿದ್ದುವು. ನದಿಗಳು ಸಮುದ್ರವನ್ನು ತುಂಬುವಂತೆ ಸಮಸ್ತಕನ್ಯೆಯರ ಭಯ –ಶೋಕಗಳಿಂದ ಹೊರಸೂಸುತ್ತಿದ್ದ ಅಮಂಗಲಸೂಚಕವಾದ ಕಣ್ಣೀರಿನಿಂದ ಆ ವಿಮಾನವೇ ತುಂಬಿಹೋಯಿತು. ಆ ವಿಮಾನದಲ್ಲಿ ನೂರಾರು ಸಂಖ್ಯೆಯಲ್ಲಿದ್ದ ನಾಗ–ಗಂಧರ್ವಕನ್ಯೆಯರೂ ಮಹರ್ಷಿಕನ್ಯೆಯರೂ, ದೈತ್ಯ–ದಾನವಕನ್ಯೆಯರೂ

ಗೋಳಾಡುತ್ತಿದ್ದರು. ಅವರೆಲ್ಲರಿಗೂ ನೀಳವಾದ ತಲೆಗೂದಲಿದ್ದಿತು. ಎಲ್ಲರ ಅಂಗಾಂಗಗಳೂ ಸುಂದರವಾಗಿದ್ದುವು. ಚಂದ್ರಮುಖಿಯರಾಗಿದ್ದರು. ಅವರಿಗೆ ಉಬ್ಬಿದ ಸ್ತನಗಳಿದ್ದುವು. ಶರೀರದ ಮಧ್ಯಭಾಗವು ವಜ್ರದ ವೇದಿಕೆಯಂತೆ ಪ್ರಭೆಯಿಂದ ಕೂಡಿದ್ದಿತು. ರಥದ ಮೂಕಿಯಂತೆ ವಿಶಾಲವಾದ ಶ್ರೋಣಿ ಪ್ರದೇಶಗಳಿಂದಲೂ ಶೋಭಿಸುತ್ತಿದ್ದರು. ಆ ಎಲ್ಲ ಕನ್ಯೆಯರೂ ದೇವಕನ್ಯೆಯ ರಂತೆಯೇ ಪುಟಕ್ಕೆ ಹಾಕಿದ ಚಿನ್ನದ ಕಾಂತಿಯಂತೆ ಅನುಪಮವಾದ ಶರೀರ ಕಾಂತಿಯನ್ನು ಹೊಂದಿದ್ದರು. ಸುಂದರವಾದ ನಡುಪ್ರದೇಶವನ್ನು ಹೊಂದಿದ್ದ ಆ ಸುಂದರಿಯರು ಶೋಕ –ದುಃಖ–ಭಯಗಳಿಂದ ವ್ಯಾಕುಲಗೊಂಡು ಬಿಡುತ್ತಿದ್ದ ಬಿಸಿ –ಬಿಸಿಯಾದ ನಿಟ್ಟುಸಿರಿನ ವಾಯುವಿನಿಂದ ಆ ವಿಮಾನವು ಸರ್ವತ್ರ ಪ್ರಜ್ವಲಿಸುವಂತೆ ಕಾಣುತ್ತಿದ್ದಿತು. ನಿಃಶ್ವಾಸಾಗ್ನಿಯಿಂದ ಕೂಡಿದ್ದ ಆ ಪುಷ್ಪಕವಿಮಾನವು ಅಗ್ನಿಹೋತ್ರದ ಗೃಹದಂತೆಯೇ ಕಾಣುತ್ತಿದ್ದಿತು. ದಶಗ್ರೀವನ ಅಧೀನರಾಗಿದ್ದ ಅಬಲೆಯರಾಗಿದ್ದ ಆ ಯುವತಿಯರು ಸಿಂಹಕ್ಕೆ ವಶವಾದ ಹೆಣ್ಣುಜಿಂಕೆಗಳಂತೆ ದೀನವಾದ ಮುಖಗಳಿಂದಲೂ ಕಣ್ಣುಗಳಿಂದಲೂ ಕೂಡಿದ್ದರು. ಅವರಲ್ಲಿ ಕೆಲವರು 'ನನ್ನನ್ನೇನು ಈ ರಾಕ್ಷಸನು ತಿಂದುಬಿಡುವನೇ ?'– ಎಂದು ಯೋಚಿಸುತ್ತಿದ್ದರು. ಮತ್ತೆ ಕೆಲವರು 'ನನ್ನನ್ನಿವನು ಸಾಯಿಸಿಯೇ ಬಿಡಬಹುದು' –ಎಂದು ದುಃಖಿಸುತ್ತಿದ್ದರು. ಹೀಗೆಲ್ಲಾ ಚಿಂತಿಸುತ್ತಾ ತಮ್ಮ ತಂದೆ–ತಾಯಿಗಳನ್ನೂ, ಗಂಡಂದಿರನ್ನೂ, ಸಹೋದರರನ್ನೂ ಸ್ಮರಿಸಿಕೊಂಡು ದುಃಖ–ಶೋಕಗಳಿಂದ ಕೂಡಿದವರಾಗಿ ಎಲ್ಲರೂ ಜೊತೆಗೂಡಿ ರೋದನಮಾಡುತ್ತಿದ್ದರು.

ಕಥಂ ನು ಖಲು ಮೇ ಪುತ್ರೋ ಭವಿಷ್ಯತಿ ಮಯಾ ವಿನಾ ।
ಕಥಂ ಮಾತಾ ಕಥಂ ಭ್ರಾತಾ ನಿಮಗ್ನಾಃ ಶೋಕಸಾಗರೇ ॥13॥

''ನನ್ನನ್ನು ಬಿಟ್ಟು ತಬ್ಬಲಿಯಾಗುವ ನನ್ನ ಮಗನು ಹೇಗೆ ತಾನೇ ಜೀವಿಸಿರುವನು ? ಶೋಕಸಾಗರದಲ್ಲಿ ಮುಳುಗಲಿರುವ ನಮ್ಮ ಅಣ್ಣ, ನನ್ನ ತಾಯಿ ಹೇಗೆ ತಾನೇ ಜೀವಿಸಿರುವರು ?

ಹಾ ಕಥಂ ನು ಕರಿಷ್ಯಾಮಿ ಭರ್ತುಸ್ತಸ್ಮಾದಹಂ ವಿನಾ ।
ಮೃತ್ಯೋ ಪ್ರಸಾದಯಾಮಿ ತ್ವಾಂ ನಯ ಮಾಂ ದುಃಖಭಾಗಿನೀಮ್ ॥14॥
ಕಿಂ ನು ತದ್ದುಷ್ಕೃತಂ ಕರ್ಮ ಪುರಾ ದೇಹಾನ್ತರೇ ಕೃತಮ್ ।

ನನ್ನ ಆ ಪತಿದೇವನನ್ನು ಬಿಟ್ಟು ನಾನು ಈ ಜೀವವನ್ನು ಹೇಗೆ ತಾನೇ ಧರಿಸಿರಲಿ ? ಓ ಮೃತ್ಯುದೇವನೇ ! ನಿನ್ನನ್ನು ಅಂಗಲಾಚಿ ಬೇಡಿಕೊಳ್ಳುತ್ತೇನೆ. ನನ್ನನ್ನು ಶೀಘ್ರವಾಗಿ ಒಯ್ದುಬಿಡು. ಇಂತಹ ದುಷ್ಟನ ವಶವಾಗಲು ನಾನು ಹಿಂದಿನ ಜನ್ಮದಲ್ಲಿ ಯಾವ ಮಾಡಬಾರದ ಕಾರ್ಯವನ್ನು ಮಾಡಿದ್ದೆನು?''

ಇದೇ ಮುಂತಾಗಿ ಹೇಳಿಕೊಂಡು ಶೋಕಸಾಗರದಲ್ಲಿ ಮುಳುಗಿ ಹೋಗಿದ್ದ ಆ ನಾರೀಮಣಿಯರೆಲ್ಲರೂ ಗೋಳಾಡುತ್ತಿದ್ದರು.

ನ ಖಲ್ವಿದಾನೀಂ ಪಶ್ಯಾಮೋ ದುಃಖಸ್ಯಾಸ್ಯಾನ್ತಮಾತ್ಮನಃ ॥16॥

'' ನಿಶ್ಚಯವಾಗಿಯೂ ಈಗ ನಮಗೆ ಈ ಅಪಾರವಾದ ದುಃಖಕ್ಕೆ ಪಾರವೇ ಕಾಣುತ್ತಿಲ್ಲ.

ಅಹೋ ಧಿಙ್ಮಾನುಷಂ ಲೋಕಂ ನಾಸ್ತಿ ಖಲ್ವಧಮಃ ಪರಃ ।
ಯದ್ದುರ್ಬಲಾ ಬಲವತಾ ಭರ್ತಾರೋ ರಾವಣೇನ ನಃ ।
ಸೂರ್ಯೇಣೋದಯತಾ ಕಾಲೇ ನಕ್ಷತ್ರಾಣೀವ ನಾಶಿತಾಃ ॥17॥

ಅಯ್ಯೋ ! ಈ ಮನುಷ್ಯಲೋಕಕ್ಕೆ ಧಿಕ್ಕಾರವಿರಲಿ ! ಈ ಲೋಕ ದಲ್ಲಿರುವ ಮಾನವನಿಗಿಂತಲೂ ಅಧಮನಾದವನು ಬೇರೊಬ್ಬನಿಲ್ಲ. ದುರ್ಬಲ ರಾದ ನಮ್ಮ ಗಂಡಂದಿರು ಬಲಿಷ್ಠನಾದ ಈ ರಾವಣನಿಂದ -ಸೂರ್ಯೋದಯ ವಾದೊಡನೆಯೇ ನಕ್ಷತ್ರಗಳು ಕಣ್ಮರೆಯಾಗುವಂತೆ – ವಿನಾಶಹೊಂದಿದರಲ್ಲವೇ!

ಬಲಿಷ್ಠನಾಗಿರುವ ಈ ರಾಕ್ಷಸನಾದರೋ ಇತರರನ್ನು ಸಂಹರಿಸುವುದ ರಿಂದಲೇ ಆನಂದಪಡುತ್ತಾನೆ. ಈ ಪಾಪಿಷ್ಠನು ದುರಾಚಾರದಲ್ಲಿ ತೊಡ ಗಿದ್ದರೂ ನಾಚಿಕೆಪಡುತ್ತಿಲ್ಲ. ಮಾಡುತ್ತಿರುವ ದುಷ್ಕಾರ್ಯಕ್ಕಾಗಿ ತನ್ನನ್ನು ಧಿಕ್ಕರಿಸಿಕೊಳ್ಳುತ್ತಿಲ್ಲ. ದುರಾತ್ಮನಾದ ಇವನ ಪರಾಕ್ರಮವು ಇವನು ಮಾಡಿರುವ ಕಠೋರತಪಸ್ಸಿಗೆ ಅನುರೂಪವಾಗಿಯೇ ಇದೆ. ಆದರೆ ಪರಸ್ತ್ರೀ ಯರನ್ನು ಬಲಾತ್ಕಾರವಾಗಿ ಕರೆದೊಯ್ಯುತ್ತಿರುವ ಇಂತಹ ದುಷ್ಕರ್ಮವು ಮಾತ್ರ ಇವನ ಪರಾಕ್ರಮಕ್ಕಾಗಲೀ ತಪಸ್ಸಿಗಾಗಲೀ ಅನುಗುಣವಾಗಿಲ್ಲ.

ಯಸ್ಮಾದೇಷ ಪರಕ್ಯಾಸು ರಮತೇ ರಾಕ್ಷಸಾಧಮಃ ।
ತಸ್ಮಾದ್ವೈ ಸ್ತ್ರೀಕೃತೇನೈವ ವಧಂ ಪ್ರಾಪ್ಸ್ಯತಿ ದುರ್ಮತಿಃ ॥20॥

ಈ ರಾಕ್ಷಸಾಧಮನು ಪರಸ್ತ್ರೀಯರೊಡನೆ ವಿಹರಿಸಲು ಆಸಕ್ತನಾಗಿರುವುದರಿಂದ ಪರಸ್ತ್ರೀಯೊಬ್ಬಳ ಕಾರಣದಿಂದಲೇ ಇವನು ವಧಿಸಲ್ಪಡುತ್ತಾನೆ.''

ಸಾಧ್ವಿಯರಾದ ಆ ಶ್ರೇಷ್ಠನಾರಿಯರು ಹೀಗೆ ಹೇಳಿದೊಡನೆಯೇ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದುವು. ಎಲ್ಲೆಡೆ ಹೂಮಳೆ ಸುರಿಯಿತು.

ಪತಿವ್ರತೆಯರಾದ ಸ್ತ್ರೀಯರು ಹೀಗೆ ಶಪಿಸಿದೊಡನೆಯೇ ಇದ್ದಕ್ಕಿದ್ದಂತೆಯೇ ರಾವಣನ ಶಕ್ತಿಯು ಕುಂದಿತು. ಅವನು ಕಳೆಗುಂದಿದನು. ಮನಸ್ಸಿನಲ್ಲಿ ಉದ್ವೇಗವುಂಟಾಯಿತು.

ಹೀಗೆ ವಿಲಪಿಸುತ್ತಿದ್ದ ಸಾಧ್ವೀಮಣಿಯರ ಗೋಳನ್ನು ಆಲಿಸುತ್ತಲೇ ರಾಕ್ಷಸಶ್ರೇಷ್ಠನಾದ ರಾವಣನು ರಾಕ್ಷಸರಿಂದ ಪೂಜಿಸಲ್ಪಟ್ಟವನಾಗಿ ಲಂಕೆಯನ್ನು ಪ್ರವೇಶಿಸಿದನು.

ಈ ಮಧ್ಯದಲ್ಲಿ ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಸಾಮರ್ಥ್ಯವನ್ನು ಹೊಂದಿದ್ದ, ಘೋರರೂಪಿಣಿಯಾದ, ರಾವಣನ ತಂಗಿಯಾದ ಶೂರ್ಪಣಖೆಯು ಹಠಾತ್ತಾಗಿ ಬಂದು ಭೂಮಿಯ ಮೇಲೆ ಬಿದ್ದಳು. ಒಡನೆಯೇ ರಾವಣನು ಅವಳನ್ನು ಮೇಲೆಬ್ಬಿಸಿ ಉಪಚರಿಸುತ್ತಾ ಹೇಳಿದನು:

''ಮಂಗಳಾಂಗಿಯೇ! ಇದೇನಿದು ? ಏನು ಹೇಳಬೇಕೆಂದಿರುವೆ ? ಬೇಗನೇ ಹೇಳು.''

ಶೂರ್ಪಣಖೆಯ ಕಣ್ಣುಗಳಲ್ಲಿ ನೀರು ತುಂಬಿದ್ದಿತು. ಅತ್ತು–ಅತ್ತು ಅವಳ ಕಣ್ಣುಗಳು ಕೆಂಪಾಗಿದ್ದುವು. ಕ್ರುದ್ಧಳಾಗಿ ಹೇಳಿದಳು :

''ಬಲಿಷ್ಠನಾದ ನೀನು ನನ್ನನ್ನು ಬಲಪೂರ್ವಕವಾಗಿ ವಿಧವೆಯನ್ನಾಗಿ ಮಾಡಿಬಿಟ್ಟೆ. ನೀನು ರಣರಂಗದಲ್ಲಿ ನಿನ್ನ ಬಲ–ಪರಾಕ್ರಮಗಳಿಂದ ಸುವಿಖ್ಯಾತರಾದ ಹದಿನಾಲ್ಕು ಸಾವಿರ ಕಾಲಕೇಯರನ್ನು ಸಂಹರಿಸಿದೆ. ಅವರಲ್ಲಿ ನನ್ನ ಪ್ರಾಣಗಳಿಗಿಂತಲೂ ಹೆಚ್ಚಿನವನಾದ ಬಲಿಷ್ಠನಾದ ನನ್ನ ಪತಿಯೂ ಸೇರಿದ್ದನು. ಅವನನ್ನು ಕೂಡ ನೀನು ಸಂಹರಿಸಿದೆ. ನೀನು ಹೆಸರಿಗೆ ಮಾತ್ರ ಅಣ್ಣನಾಗಿರುವೆ. ನಿಶ್ಚಯವಾಗಿಯೂ ನೀನು ನನಗೆ ಶತ್ರುವೇ ಸರಿ. ನೀನು ನನಗೆ ಒಡಹುಟ್ಟಿದ ಅಣ್ಣನಾಗಿದ್ದರೂ ನಿನ್ನ ಕೈಯಿಂದಲೇ

ನನ್ನ ಪತಿಯ ಕೊಲೆಮಾಡಿದೆ. ನಿನ್ನ ಕಾರಣದಿಂದಲೇ ನಾನು ವೈಧವ್ಯದ ಅವಸ್ಥೆಯನ್ನು ಅನುಭವಿಸುವಂತಾಗಿದೆ. ನಾನೀಗ ವಿಧವೆಯಾಗಿದ್ದೇನೆ. ನೀನು ನನ್ನ ಅಣ್ಣನಾದುದರಿಂದ ತಂದೆಗೆ ಸಮಾನನು. ನನ್ನ ಪತಿಯು ನಿನಗೆ ಅಳಿಯನಿದ್ದಂತೆ. ಯುದ್ಧದಲ್ಲಿ ಅಳಿಯನನ್ನು ರಕ್ಷಿಸುವುದು ನಿನ್ನ ಕರ್ತವ್ಯ ವಾಗಿತ್ತಲ್ಲವೇ ? ರಕ್ಷಿಸಲು ಯೋಗ್ಯನಾಗಿದ್ದ ನನ್ನ ಪತಿಯು ನಿನ್ನಿಂದ ಕೊಲ್ಲಲ್ಪಟ್ಟನು. ಇಂತಹ ದುಷ್ಕಾರ್ಯಕ್ಕಾಗಿ ಮತ್ತು ನಿರ್ದಯತೆಗಾಗಿ ನೀನೀಗ ನಾಚಿಕೆಪಡುತ್ತಲೂ ಇಲ್ಲ.''

ಗೋಳಾಡುತ್ತಿದ್ದ ಶೂರ್ಪಣಖೆಯು ಹೀಗೆ ಹೇಳಲು ರಾವಣನು ಅವಳನ್ನು ಸಮಾಧಾನಗೊಳಿಸುತ್ತಾ ಸೌಮ್ಯವಾದ ಮಾತುಗಳನ್ನು ಹೇಳಿದನು:

'' ಮಗಳೇ ! ನಿನ್ನ ಅಳುವನ್ನು ಸಾಕುಮಾಡು. ನಿನ್ನ ಪತಿಯು ಹೋದುದಕ್ಕಾಗಿ ನೀನು ಭಯಪಡುವ ಕಾರಣವಿಲ್ಲ. ದಾನ–ಮಾನ ಮತ್ತು ಅನುಗ್ರಹಗಳ ಮೂಲಕವಾಗಿ ನಿನ್ನನ್ನು ಪ್ರಯತ್ನಪೂರ್ವಕವಾಗಿ ಸಂತೋಷ ಗೊಳಿಸುತ್ತೇನೆ. ಆ ಸಮಯದಲ್ಲಿ ನಾನು ಯುದ್ಧೋನ್ಮತ್ತನಾಗಿದ್ದೆನು. ನನ್ನ ಬುದ್ಧಿಯೂ ನನ್ನ ಹತೋಟಿಯಲ್ಲಿರಲಿಲ್ಲ. ಜಯಗಳಿಸುವುದೇ ನನ್ನ ಮುಖ್ಯವಾದ ಗುರಿಯಾಗಿದ್ದಿತು. ಈ ಕಾರಣದಿಂದ ನನ್ನೆದುರಾಗಿ ಬಂದವರ ಮೇಲೆ ನಾನು ಬಾಣಗಳ ಮಳೆಗರೆಯುತ್ತಿದ್ದೆನು. ಹಾಗೆ ಯುದ್ಧಮಾಡು ವಾಗ ನನಗೆ ನನ್ನವರಾರು ? ನನ್ನ ಶತ್ರುಗಳಾರು ?- ಎಂಬ ಅರಿವೇ ಇರುತ್ತಿರ ಲಿಲ್ಲ. ಈ ಕಾರಣದಿಂದ ಯುದ್ಧೋನ್ಮತ್ತನಾಗಿ ಶತ್ರುಗಳನ್ನು ಪ್ರಹರಿಸು ತ್ತಿದ್ದ ನನಗೆ ನನ್ನೆದುರಾಗಿ ನನ್ನ ಅಳಿಯನು ಬಂದುದರ ಮತ್ತು ಅವನನ್ನು ನಾನು ಸಂಹರಿಸಿದ ಅರಿವೇ ನನಗಿಲ್ಲ. ಆದುದರಿಂದ ತಂಗಿ ! ಈ ಕಾರಣದಿಂದ ಯುದ್ಧದಲ್ಲಿ ನಾನು ನಿನ್ನ ಪತಿಯನ್ನು ಕೊಂದುಬಿಟ್ಟಿರಬಹುದು. ಆದರೆ ಈ ಸಮಯದಲ್ಲಿ ನಿನ್ನ ಹಿತಕ್ಕಾಗಿ ಯಾವ ಕರ್ತವ್ಯವನ್ನು ಮಾಡಬೇಕಾ ಗಿರುವುದೋ - ಅದನ್ನು ನಾನು ಖಂಡಿತವಾಗಿಯೂ ಮಾಡುವೆನು. ಈಗ ನೀನು ಐಶ್ವರ್ಯವಂತನಾಗಿರುವ ಸಹೋದರನಾದ ಖರನ ಬಳಿಗೆ ಹೋಗಿ ಅಲ್ಲಿ ವಾಸಮಾಡಿಕೊಂಡಿರು. ನಿನ್ನ ತಮ್ಮನಾದ ಅವನು ಹದಿನಾಲ್ಕು ಸಾವಿರ ರಾಕ್ಷಸರಿಗೆ ಅಧಿಪತಿಯಾಗುತ್ತಾನೆ. ಮಹಾಬಲಿಷ್ಠನಾದ ಅವನು ರಾಕ್ಷಸರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಳುಹಿಸುವುದರಲ್ಲಿ,

ಅವರ ಅನ್ನ-ಪಾನಾದಿಗಳಿಗೆ ವ್ಯವಸ್ಥೆಮಾಡುವುದರಲ್ಲಿ ಸಮರ್ಥನಾಗಿದ್ದಾನೆ. ತಾಯಿಯ ಸೋದರಿಯ ಮಗನಾದ ಅವನು ಯಾವುದನ್ನಾದರೂ ಮಾಡಲು ಸಮರ್ಥನಾಗಿದ್ದಾನೆ. ಅವನು ಯಾವಾಗಲೂ ನಿನ್ನ ಆದೇಶವನ್ನು ಪಾಲಿಸುತ್ತಾನೆ. ಅವನು ಬಹಳ ಶೀಘ್ರದಲ್ಲಿಯೇ ನನ್ನ ಆಜ್ಞಾನುಸಾರವಾಗಿ ದಂಡಕಾರಣ್ಯವನ್ನು ರಕ್ಷಿಸುವ ಸಲುವಾಗಿ ಅಲ್ಲಿಗೆ ಹೋಗುತ್ತಾನೆ. ಮಹಾಬಲನಾದ ದೂಷಣನು ಅವನಿಗೆ ಸೇನಾಪತಿಯಾಗುತ್ತಾನೆ. ಅಲ್ಲಿ ಶೂರನಾದ ಖರನು ಸದಾ ನಿನ್ನ ಆಜ್ಞಾಪಾಲಕನಾಗಿರುತ್ತಾನೆ. ಕಾಮರೂಪಿಗಳಾದ ರಾಕ್ಷಸರಿಗೆ ಅವನು ಅಲ್ಲಿ ಪ್ರಭುವಾಗಿರುತ್ತಾನೆ.''

ರಾಘವ! ದಶಗ್ರೀವನು ಶೂರ್ಪಣಖೆಗೆ ಹೀಗೆ ಹೇಳಿ, ಹದಿನಾಲ್ಕು ಸಾವಿರ ರಾಕ್ಷಸಸೈನಿಕರೂ ಖರನೊಡನೆ ದಂಡಕಾರಣ್ಯಕ್ಕೆ ಹೋಗುವಂತೆ ಆಜ್ಞಾಪಿಸಿದನು. ಭಯಂಕರರಾದ ರಾಕ್ಷಸರಿಂದ ಪರಿವೃತನಾದ ಖರನು ರಾವಣನ ಆಜ್ಞೆಯಂತೆ ದಂಡಕಾರಣ್ಯಕ್ಕೆ ಹೋಗಿ ಅಲ್ಲಿ ಯಾವ ವಿಧವಾದ ಕಂಟಕಗಳೂ ಇಲ್ಲದಿದ್ದ ರಾಜ್ಯವನ್ನು ಕಟ್ಟಿದನು. ಆ ದಂಡಕಾವನದಲ್ಲಿಯೇ ರಾವಣನ ಹಿತೋಪದೇಶದಂತೆ ಶೂರ್ಪಣಖೆಯೂ ಖರನೊಡನೆ ವಾಸಿಸ ತೊಡಗಿದಳು.''

24ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **25ನೆಯ ಸರ್ಗ**

ಮೇಘನಾದನಿಗೆ ಯಜ್ಞಗಳ ಮೂಲಕ ಫಲಪ್ರಾಪ್ತಿ : ವಿಭೀಷಣನಿಂದ ರಾವಣನಿಗೆ ಪರಸ್ತ್ರೀಸಂಪರ್ಕದಿಂದ ಉಂಟಾಗುವ ದೋಷಗಳ ವಿವರಣೆ : ಕುಂಭೀನಸಿಗೆ ಆಶ್ವಾಸನೆಯನ್ನಿತ್ತು ಮಧುವಿನೊಡನೆ ರಾವಣನ ದೇವಲೋಕದ ಆಕ್ರಮಣ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಸ ತು ದತ್ತ್ವಾ ದಶಗ್ರೀವೋ ಬಲಂ ಘೋರಂ ಖರಸ್ಯ ತತ್ ।
ಭಗಿನೀಂ ಸ ಸಮಾಶ್ವಾಸ್ಯ ಹೃಷ್ಟಃ ಸ್ವಸ್ಥತರೋಽಭವತ್ ॥1॥

''ರಾಘವ ! ರಾವಣನು ಭಯಂಕರಸೈನ್ಯವನ್ನು ಖರನ ವಶಕ್ಕೆ

ಕೊಟ್ಟು, ತಂಗಿಯಾದ ಶೂರ್ಪಣಖೆಗೂ ಸಮಾಧಾನ ಹೇಳಿ ಅವರೆಲ್ಲರನ್ನೂ ದಂಡಕಾರಣ್ಯಕ್ಕೆ ಕಳುಹಿಸಿ ಪರಮಸಂತುಷ್ಟನೂ ಸ್ವಸ್ಥಚಿತ್ತನೂ ಆದನು.

ಅನಂತರ ಬಲಿಷ್ಠನಾದ ರಾಕ್ಷಸರಾಜನಾದ ರಾವಣನು ತನ್ನ ಅನುಯಾಯಿಗಳೊಡನೆ ಲಂಕಾಪಟ್ಟಣದ ಪಶ್ಚಿಮದ್ವಾರದಲ್ಲಿದ್ದ 'ನಿಕುಂಭಿಲಾ' ಎಂಬ ಹೆಸರಿನ ಉಪವನವನ್ನು ಪ್ರವೇಶಿಸಿದನು.

ರಾವಣನು ತನ್ನ ಕಾಂತಿಯಿಂದ ಸಾಕ್ಷಾತ್ ಯಜ್ಞೇಶ್ವರನಂತೆಯೇ ಜಾಜ್ವಲ್ಯಮಾನನಾಗಿ ಬೆಳಗುತ್ತಿದ್ದನು. ನಿಕುಂಭಿಲಾವನಕ್ಕೆ ಹೋದೊಡನೆಯೇ ಅಲ್ಲಿ ರಾವಣನು ಯಜ್ಞವೊಂದು ನಡೆಯುತ್ತಿರುವುದನ್ನು ನೋಡಿದನು. ಆ ಉಪವನವು ನೂರಾರು ಯೂಪಸ್ತಂಭಗಳಿಂದಲೂ ಮತ್ತು ಸುಂದರವಾದ ದೇವಾಲಯಗಳಿಂದಲೂ ಸುಶೋಭಿತವಾಗಿದ್ದಿತು. ಅಲ್ಲಿಯೇ ರಾವಣನು ಜಟಾಧಾರಿಯಾಗಿ, ಕೃಷ್ಣಾಜಿನವನ್ನು ಧರಿಸಿ, ಕಮಂಡಲುವನ್ನೂ ಧ್ವಜವನ್ನೂ ಹಿಡಿದು ಕುಳಿತು ಭಯಂಕರನಾಗಿ ಕಾಣುತ್ತಿದ್ದ ಪುತ್ರನಾದ ಮೇಘನಾದನನ್ನು ನೋಡಿದನು. ಒಡನೆಯೇ ಲಂಕೇಶನು ಮಗನ ಬಳಿಗೆ ಹೋಗಿ ಅವನನ್ನು ತನ್ನ ತೋಳುಗಳಿಂದ ಗಾಢವಾಗಿ ತಬ್ಬಿಕೊಂಡು ಪ್ರಶ್ನಿಸಿದನು :

'' ವತ್ಸ ! ನೀನಿಲ್ಲಿ ಮಾಡುತ್ತಿರುವುದೇನು ? ಎಲ್ಲವನ್ನೂ ನನಗೆ ಯಥಾವತ್ತಾಗಿ ಹೇಳು.''

ಆ ಸಮಯದಲ್ಲಿ ಯಜ್ಞದ ನಿಯಮಾನುಸಾರವಾಗಿ ಮೇಘನಾದನು ಮೌನವ್ರತದಿಂದಿದ್ದನು. ಅವನು ತಂದೆಯ ಪ್ರಶ್ನೆಗೆ ಉತ್ತರಿಸಲಿಲ್ಲ, ಆಗ ರಾಕ್ಷಸಪುರೋಹಿತರಾದ, ಮಹಾತಪಸ್ವಿಗಳಾದ, ದ್ವಿಜಶ್ರೇಷ್ಠರಾದ, ಯಜ್ಞಸಂಪತ್ತಿನ ಸಮೃದ್ಧಿಗಾಗಿಯೇ ಅಲ್ಲಿಗೆ ಆಗಮಿಸಿದ್ದ ಶುಕ್ರಾಚಾರ್ಯರು ರಾವಣನಿಗೆ ಹೇಳಿದರು :

''ರಾವಣೇಶ್ವರ ! ನಾನೇ ನಿನಗೆ ಎಲ್ಲವನ್ನೂ ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು. ನಿನ್ನ ಮಗನು ಬಹುವಿಸ್ತಾರವಾದ ಏಳು ಮಹಾಯಜ್ಞಗಳನ್ನು ಮಾಡುತ್ತಿದ್ದಾನೆ. ಅಗ್ನಿಷ್ಟೋಮ, ಅಶ್ವಮೇಧ, ಬಹುಸುವರ್ಣಕ, ರಾಜಸೂಯ, ಗೋಮೇಧ ಮತ್ತು ವೈಷ್ಣವ ಎಂಬ ಆರು ಯಜ್ಞಗಳನ್ನು

ಮುಗಿಸಿ ಏಳನೆಯದಾಗಿ ಮಾಹೇಶ್ವರಯಜ್ಞವನ್ನು ಮಾಡುತ್ತಿದ್ದಾನೆ. ಈ ಯಜ್ಞವನ್ನು ಬೇರೆಯವರು ಮಾಡಲಾರರು. ಅತಿಕಷ್ಟಸಾಧ್ಯವಾದ ಯಜ್ಞ ವಿದು. ಈ ಯಜ್ಞವನ್ನು ಮಾಡುತ್ತಿರುವಾಗಲೇ ನಿನ್ನ ಮಗನು ಸಾಕ್ಷಾತ್ ಪಶುಪತಿಯಿಂದ ಹಲವಾರು ವರಗಳನ್ನು ಪಡೆದಿರುವನು. ಆ ವರಗಳೊಡನೆ ಇಚ್ಛಾನುಸಾರವಾಗಿ ಆಕಾಶದಲ್ಲಿ ಸಂಚರಿಸುವ ದಿವ್ಯವಾದ ಒಂದು ರಥವನ್ನೂ ಪಡೆದುಕೊಂಡಿರುವನು. 'ತಾಮಸೀ' ಎಂಬ ಮಾಯಾವಿದ್ಯೆಯನ್ನೂ ಪಡೆದುಕೊಂಡಿರುವನು. ಈ ಮಾಯೆಯಿಂದ ಅಂಧಕಾರವನ್ನೇ ಸೃಷ್ಟಿಸ ಬಹುದಾಗಿದೆ.

ರಾಕ್ಷಸೇಶ್ವರನೇ ! ಯುದ್ಧಸಮಯದಲ್ಲಿ ಈ ಮಾಯಾವಿದ್ಯೆಯನ್ನು ಪ್ರಯೋಗಿಸಿದ್ದೇ ಆದರೆ – ದೇವಾಸುರರಿಗೇ ಆದರೂ – ಮಾಯಾವಿದ್ಯೆಯನ್ನು ಪ್ರಯೋಗಿಸಿದವನು ಎಲ್ಲಿದ್ದಾನೆ ? ಎಲ್ಲಿ ಸಂಚರಿಸುತ್ತಿದ್ದಾನೆ ? ಎಲ್ಲಿಂದ ಬಾಣಗಳನ್ನು ಪ್ರಯೋಗಿಸುತ್ತಿದ್ದಾನೆ ? – ಎಂಬುದನ್ನು ತಿಳಿಯಲು ಸಾಧ್ಯ ವಾಗುವುದಿಲ್ಲ.

ಇಷ್ಟೇ ಅಲ್ಲದೇ ನಿನ್ನ ಮಗನು ಬಾಣಗಳಿಂದ ತುಂಬಿದ ಅಕ್ಷಯವಾದ ಎರಡು ಬತ್ತಳಿಕೆಗಳನ್ನೂ, ಸುದುರ್ಜಯವಾದ ಧನುಸ್ಸನ್ನೂ, ಶತ್ರುಗಳನ್ನು ಧ್ವಂಸ ಮಾಡಲು ಸಮರ್ಥವಾದ ಅಸ್ತ್ರವನ್ನೂ ಪಡೆದುಕೊಂಡಿದ್ದಾನೆ. ನಿನ್ನ ಮಗನು ಇಂತಹ ಮನೋವಾಂಛಿತವಾದ ವರಗಳೆಲ್ಲವನ್ನೂ ಪಡೆದುಕೊಂಡು ಯಜ್ಞ ಸಮಾಪ್ತಿಯ ದಿವಸವಾದ ಇಂದು ನಿನ್ನನ್ನು ಸಂದರ್ಶಿಸಲು ಕಾಯುತ್ತಿರುವನು.''

ಶುಕ್ರಾಚಾರ್ಯರ ಆ ಮಾತನ್ನು ಕೇಳಿದೊಡನೆಯೇ ರಾವಣನು ಖಿನ್ನನಾಗಿ ಹೇಳಿದನು :

'' ವತ್ಸ! ನೀನು ಹೀಗೆ ಮಾಡಿದುದು ಸರಿಯಲ್ಲ. ಏಕೆಂದರೆ ; ನೀನು ಯಜ್ಞಸಂಬಂಧವಾದ ಹೋಮದ್ರವ್ಯಗಳಿಂದ ನನಗೆ ಶತ್ರುಭೂತರಾದ ಇಂದ್ರನೇ ಮೊದಲಾದ ದೇವತೆಗಳನ್ನು ಆರಾಧಿಸಿರುವೆ. ಆದರೂ ಮಾಡಿ ದ್ದಾಯಿತು. ಒಂದು ದೃಷ್ಟಿಯಿಂದ ಒಳ್ಳೆಯದನ್ನೇ ಮಾಡಿರುವೆ. ಇದರಲ್ಲಿ ಸಂಶಯವೇ ಇಲ್ಲ. ಇನ್ನಾದರೂ ಹೊರಡು. ನಾವೆಲ್ಲರೂ ನಮ್ಮ ನಮ್ಮ ಭವನಗಳಿಗೆ ಹೋಗೋಣ.''

ಹೀಗೆ ಹೇಳಿ ರಾವಣನು ಮಗನಾದ ಮೇಘನಾದನನ್ನೂ, ತಮ್ಮನಾದ ವಿಭೀಷಣನನ್ನೂ ಕರೆದುಕೊಂಡು ಪುಷ್ಪಕವಿಮಾನದ ಬಳಿಗೆ ಹೋಗಿ ಅಪಹರಿಸಿ ತಂದಿದ್ದ ಸ್ತ್ರೀಯರೆಲ್ಲರನ್ನೂ ಕೆಳಗಿಳಿಸಿದನು. ಅವರೆಲ್ಲರೂ ಬಿಕ್ಕಿ -ಬಿಕ್ಕಿ ಅಳುತ್ತಿದ್ದರು. ವಿಮಾನದಿಂದ ಕೆಳಗಿಳಿದ ಆ ಸ್ತ್ರೀಯರೆಲ್ಲರೂ ಸರ್ವಲಕ್ಷಣ ಸಂಪನ್ನೆಯರಾಗಿದ್ದರು. ದೇವ -ದಾನವ -ರಾಕ್ಷಸರಲ್ಲಿ ರತ್ನಪ್ರಾಯರಾಗಿದ್ದರು. ಅವರಲ್ಲಿ ರಾವಣನು ಆಸಕ್ತನಾಗಿರುವನೆಂಬುದನ್ನು ತಿಳಿದು ವಿಭೀಷಣನು ಹೇಳಿದನು :

''ರಾಕ್ಷಸೇಶ್ವರನೇ ! ಈ ನಿನ್ನ ಆಚರಣೆಗಳು ಯಶಸ್ಸು-ಧನ ಮತ್ತು ಕುಲವನ್ನು ನಾಶಮಾಡತಕ್ಕುವುಗಳಾಗಿವೆ. ನಿನ್ನ ಈ ಕಾಮಾಸಕ್ತಿಯಿಂದ ನೀನು ಇವರಿಗೆ ಸಂಬಂಧಿಸಿದವರೆಲ್ಲರನ್ನೂ ಹಿಂಸಿಸಿರುವೆ. ಸಂಹರಿಸಿರುವೆ. ಇದು ಅತ್ಯಂತಪಾಪಕರವಾದುದು. ಈ ವಿಷಯವನ್ನು ನೀನು ತಿಳಿದವನಾಗಿದ್ದರೂ ಸದಾಚಾರವನ್ನು ಉಲ್ಲಂಘಿಸುತ್ತಾ ಸ್ವೇಚ್ಛಾಚಾರ ಪ್ರವೃತ್ತನಾಗಿರುವೆ. ಶ್ರೇಷ್ಠರಾದ ಈ ನಾರೀಮಣಿಯರ ಬಂಧು-ಬಾಂಧವರೆಲ್ಲರನ್ನೂ ಸಂಹರಿಸಿ ಇವರೆಲ್ಲರನ್ನೂ ಅಪಹರಿಸಿ ತಂದಿರುವೆಯಲ್ಲವೇ ? ಇಲ್ಲಿ ಆಗಿರುವುದಾದರೂ ಏನು ಗೊತ್ತೇ ? ನಿನ್ನ ಈ ದುಷ್ಟಕ್ರಿಯೆಗೆ ಪ್ರತೀಕಾರವೋ ಎಂಬಂತೆ ನಿನ್ನನ್ನು ಅತಿಕ್ರಮಿಸಿ ಮಧುವು ಕುಂಭೀನಸಿಯನ್ನು ಅಪಹರಿಸಿಕೊಂಡು ಹೋಗಿದ್ದಾನೆ. ''

''ವಿಭೀಷಣ ! ನೀನು ಏನು ಹೇಳುತ್ತಿರುವೆಯೆಂಬುದೇ ನನಗೆ ತಿಳಿಯದಾಗಿದೆ. ನೀನು 'ಮಧು' ಎಂದು ಹೇಳುತ್ತಿರುವೆಯಲ್ಲವೇ? ಅವನಾರು ?''

ರಾವಣನ ಮಾತನ್ನು ಕೇಳಿ ವಿಭೀಷಣನು ಕ್ರುದ್ಧನಾಗಿ ಹೇಳಿದನು :

'' ಅಣ್ಣ ! ಆಲಿಸಿ ಕೇಳು ! ಎಲ್ಲವನ್ನೂ ವಿಸ್ತಾರವಾಗಿ ಹೇಳುವೆನು. ನೀನು ಮಾಡಿದ ಪಾಪಕರ್ಮಗಳಿಗೆ ಫಲವು ಈಗಾಗಲೇ ಸಿಕ್ಕಿದಂತೆಯೇ ಆಗಿದೆ. ಸುಮಾಲಿಯು ನಮ್ಮ ಮಾತಾಮಹನೆಂಬ ವಿಷಯವು ನಿನಗೂ ತಿಳಿದೇ ಇದೆ. ನಮ್ಮ ಅಜ್ಜನ ದೊಡ್ಡಣ್ಣ ಮಾಲ್ಯವಂತನೆಂಬ ಹೆಸರಿನಿಂದ ವಿಖ್ಯಾತನಾಗಿದ್ದನು. ಅವನು ಮಹಾಪ್ರಾಜ್ಞನಾಗಿದ್ದನು. ಅವನು ನಮ್ಮ ತಾಯಿಯಾದ ಕೈಕಸೆಗೆ ದೊಡ್ಡಪ್ಪನೂ ಹಾಗೂ ನಮಗೆ ದೊಡ್ಡಜ್ಜನೂ ಹೌದು.

ಕುಂಭೀನಸೀ ಎಂಬುವಳು ನಮ್ಮ ದೊಡ್ಡಜ್ಜನಾದ ಮಾಲ್ಯವಂತನ ಮಗಳಾದ ಅನಲೆಯ ಮಗಳು – ಅನಲೆಯು ವರಸೆಯಲ್ಲಿ ನಮ್ಮ ತಾಯಿಯ ತಂಗಿಯಾದುದರಿಂದ ನಮಗೆ ಚಿಕ್ಕಮ್ಮನಾಗಬೇಕು. ಕುಂಭೀನಸಿಯು ನಮ್ಮ ಚಿಕ್ಕಮ್ಮನ ಮಗಳಾದುದರಿಂದ ನಮ್ಮೆಲ್ಲರಿಗೂ ಧರ್ಮರೀತಿಯಿಂದ ತಂಗಿಯಾಗಬೇಕು.

ನಿನ್ನ ಮಗನು ಯಜ್ಞದಲ್ಲಿ ತೊಡಗಿದ್ದಾಗ, ನಾನು ನೀರಿನ ಮಧ್ಯದಲ್ಲಿ ಕುಳಿತು ತಪಸ್ಸನ್ನು ಮಾಡುತ್ತಿದ್ದೆನು. ಕುಂಭಕರ್ಣನು ನಿದ್ರಾಸುಖವನ್ನು ಅನುಭವಿಸುತ್ತಿದ್ದನು. ಅದೇ ಸಮಯದಲ್ಲಿ ಬಲಿಷ್ಠನಾಗಿದ್ದ ಮಧು ಎಂಬ ರಾಕ್ಷಸನು ಸನ್ಮಾನ್ಯರಾದ ರಾಕ್ಷಸಶ್ರೇಷ್ಠರನ್ನೂ ಅಮಾತ್ಯರನ್ನೂ ಸಂಹರಿಸಿ ಕುಂಭೀನಸಿಯನ್ನು ಅಪಹರಿಸಿಕೊಂಡು ಹೋದನು. ಆ ಸಮಯದಲ್ಲಿ ಕುಂಭೀನಸಿಯು ಅಂತಃಪುರದಲ್ಲಿ ಸುರಕ್ಷಿತಳಾಗಿಯೇ ಇದ್ದಳು. ಹಾಗಿದ್ದರೂ ಮಧುವು ಬಲಾತ್ಕಾರದಿಂದ ಅವಳನ್ನು ಸೆಳೆದುಕೊಂಡು ಹೋದನು. ಅನಂತರ ನಾವು ಈ ಸಮಾಚಾರವನ್ನು ಕೇಳಿದರೂ ಮಧುವನ್ನು ವಧಿಸಹೋಗಲಿಲ್ಲ, ಕ್ಷಮಿಸಿಬಿಟ್ಟೆವು. ಏಕೆಂದರೆ ; ವಿವಾಹಕ್ಕೆ ಯೋಗ್ಯಳಾದ ಕನ್ಯೆಯನ್ನು ಯೋಗ್ಯನಾದ ವರನಿಗೆ ಕೊಟ್ಟು ಮದುವೆಮಾಡುವುದು ಸಹೋದರರಾದ ನಮ್ಮ ಕರ್ತವ್ಯವೇ ಅಲ್ಲವೇ ? ಆದುದರಿಂದ ನಾವು ಮಧುವಿನ ಮೇಲೆ ಯುದ್ಧಮಾಡಲು ಹೋಗಲಿಲ್ಲ. ನಮ್ಮ ಮನೆಯಲ್ಲಿಯೇ ಆಗಿರುವ ಈ ಕನ್ಯಾಪಹರಣವು ದುಷ್ಟವಾದ ಬುದ್ಧಿಯಿಂದ ನೀನು ಮಾಡಿದ ದುಷ್ಕರ್ಮದ ಫಲವೇ ಆಗಿದೆ. ಆ ಪಾಪದ ಫಲವು ಈ ಲೋಕದಲ್ಲಿಯೇ ಮತ್ತು ಈಗಲೇ ನಮಗೆ ಲಭಿಸಿದೆ. ಈ ವಿಷಯವು ನಿನಗೆ ತಿಳಿದಿರಲಿ.''

ವಿಭೀಷಣನ ಆ ಮಾತನ್ನು ಕೇಳಿ ರಾಕ್ಷಸರಾಜನಾದ ರಾವಣನು ಕುದಿಯುತ್ತಿರುವ ಸಮುದ್ರದಂತೆ ತನ್ನ ದುಷ್ಟಭಾವದಿಂದಲೇ ಪರಿತಪಿಸ ತೊಡಗಿದನು. ಕೋಪದಿಂದ ಕೆಂಗಣ್ಣನಾಗಿದ್ದ ರಾವಣನು ಗರ್ಜನೆ ಮಾಡುತ್ತಾ ಹೇಳಿದನು :

'' ನನ್ನ ರಥವನ್ನೀಗಲೇ ಸಿದ್ಧಗೊಳಿಸಿರಿ. ಶೂರರಾದ ರಾಕ್ಷಸರೆಲ್ಲರೂ ಯುದ್ಧಸನ್ನದ್ಧರಾಗಲಿ. ನನ್ನ ತಮ್ಮ ಕುಂಭಕರ್ಣನೂ ರಾಕ್ಷಸಮುಖ್ಯರೂ ಹಲವಾರು ಬಗೆಯ ಆಯುಧಗಳನ್ನು ಹಿಡಿದು ವಾಹನಗಳನ್ನು ಹತ್ತಲಿ.

ರಾವಣನ ವಿಷಯದಲ್ಲಿಯೂ ಭಯಪಡದಿರುವ ಆ ಮಧುರಾಕ್ಷಸನನ್ನು ಈಗಲೇ ನಾನು ಸಂಹರಿಸಿ ಸುಹೃದರಿಂದ ಸಮಾವೃತನಾಗಿ ಪುನಃ ಯುದ್ಧ ಮಾಡುವ ಅಪೇಕ್ಷೆಯಿಂದ ದೇವಲೋಕಕ್ಕೆ ಹೋಗುತ್ತೇನೆ.''

ರಾವಣನ ಆಜ್ಞೆಯಂತೆ ಯುದ್ಧಾಕಾಂಕ್ಷಿಗಳಾದ ಶ್ರೇಷ್ಠರಾದ ನಾಲ್ಕು ಸಾವಿರ ಅಕ್ಷೌಹಿಣೀಸೈನಿಕರು ಹಲವಾರು ಬಗೆಯ ಆಯುಧಗಳನ್ನೆತ್ತಿ ಕೊಂಡು ಲಂಕೆಯಿಂದ ನಿರ್ಗಮಿಸಿದರು. ಮೇಘನಾದನು ಸಮಸ್ತಸೈನಿಕ ರೊಡನೆ ಸೈನ್ಯದ ಮುಂಭಾಗದಲ್ಲಿ ಹೋಗುತ್ತಿದ್ದನು. ರಾವಣನು ಸೈನಿಕರ ಮಧ್ಯದಲ್ಲಿಯೂ ಕುಂಭಕರ್ಣನು ಹಿಂಭಾಗದಲ್ಲಿಯೂ ಹೋಗುತ್ತಿದ್ದರು. ವಿಭೀಷಣನು ಮಾತ್ರ ರಾವಣನ ಜೊತೆಯಲ್ಲಿ ಹೋಗದೇ ಲಂಕೆಯಲ್ಲೇ ಇದ್ದು ಧರ್ಮಕಾರ್ಯಗಳನ್ನು ಮಾಡುತ್ತಿದ್ದನು. ಅವನನ್ನು ಬಿಟ್ಟು ಮಹಾ ಭಾಗರಾದ ರಾಕ್ಷಸರೆಲ್ಲರೂ ಮಧುಪುರಕ್ಕೆ ಪ್ರಯಾಣಮಾಡಿದರು. ಕತ್ತೆ, ಒಂಟೆ, ಕುದುರೆ, ನೀರುಬೆಕ್ಕು , ಮಹಾಸರ್ಪ -ಇವುಗಳನ್ನೇ ವಾಹನಗಳ ನ್ನಾಗಿ ಮಾಡಿಕೊಂಡು ಆಕಾಶದಲ್ಲಿ ಅವಕಾಶವೇ ಇಲ್ಲದ ರೀತಿಯಲ್ಲಿ ರಾವಣನ ಸೈನಿಕರು ಪ್ರಯಾಣ ಮಾಡುತ್ತಿದ್ದರು. ರಾವಣನು ದೇವಲೋಕವನ್ನು ಆಕ್ರಮಿಸಲು ಹೋಗುತ್ತಿರುವುದನ್ನು ನೋಡಿ ದೇವತೆಗಳ ಬದ್ಧವೈರಿ ಗಳಾಗಿದ್ದ ನೂರಾರು– ಸಾವಿರಾರು ದೈತ್ಯರು ದೇವತೆಗಳ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ ರಾವಣನನ್ನು ಹಿಂಬಾಲಿಸಿದರು.

ರಾವಣನು ಅಪಾರಸೈನಿಕರೊಡನೆ ಮಧುಪುರಕ್ಕೆ ಹೋದನು. ಆದರೆ ಅಲ್ಲಿ ಅವನು ಮಧುವನ್ನು ಕಾಣಲಾಗಲಿಲ್ಲ, ತಂಗಿಯಾದ ಕುಂಭೀನಸಿಯನ್ನು ಕಂಡನು. ಅಪಾರವಾದ ಸೈನ್ಯದೊಡನೆ ಬಂದಿದ್ದ ರಾವಣನನ್ನು ನೋಡಿ ಕುಂಭೀನಸಿಯು ಭಯಗೊಂಡಳು. ಕೈಗಳನ್ನು ಜೋಡಿಸಿಕೊಂಡು ರಾವಣನ ಕಾಲುಗಳಿಗೆ ಬಿದ್ದಳು. ಅವಳನ್ನು ಹಿಡಿದು ಮೇಲೆತ್ತುತ್ತಾ ರಾವಣನು ಹೇಳಿದನು :

'' ಭಯಪಡಬೇಡ ತಂಗಿ ! ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ ?''

'' ಮಹಾಭುಜನೇ ! ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿರುವೆಯಾದರೆ – ನನ್ನ ಪತಿಯನ್ನು ಸಂಹರಿಸಬೇಡ. ಏಕೆಂದರೆ : ಕುಲಸ್ತ್ರೀಯರಿಗೆ ವೈಧವ್ಯಕ್ಕಿಂತಲೂ ಭಯಂಕರವಾದ ಭಯವು ಬೇರೊಂದಿಲ್ಲವೆಂದು ಹೇಳುತ್ತಾರೆ.

ಭಯಾನಾಮಪಿ ಸರ್ವೇಷಾಂ ವೈಧವ್ಯಂ ವ್ಯಸನಂ ಮಹತ್ ॥42॥

ಎಲ್ಲವಿಧವಾದ ಭಯಗಳಿಗಿಂತಲೂ ಕುಲಸ್ತ್ರೀಯರಿಗೆ ವೈಧವ್ಯವೆಂಬುದು ಅತ್ಯಂತಭಯಂಕರವಾದುದು ಮತ್ತು ವ್ಯಸನವನ್ನುಂಟುಮಾಡ ತಕ್ಕುದು.

ಮಹಾರಾಜ ! ಸತ್ಯವಾದಿಯಾಗು. ನಿನ್ನನ್ನು ಅಂಗಲಾಚಿ ಬೇಡಿಕೊಳ್ಳುತ್ತಿರುವ ನನ್ನನ್ನು ಕೃಪಾದೃಷ್ಟಿಯಿಂದ ನೋಡು. **'ನ ಭೇತವ್ಯಂ** – ಭಯ ಪಡುವ ಕಾರಣವಿಲ್ಲ' –ಎಂದು ಈಗತಾನೇ ನೀನೇ ಹೇಳಿರುವೆ. ನಿನ್ನ ಆ ಮಾತನ್ನು ಉಳಿಸಿಕೋ.''

ತಂಗಿಯ ಮಾತನ್ನು ಕೇಳಿ ರಾವಣನು ಪ್ರಸನ್ನನಾಗಿ ಹೇಳಿದನು :

'' ತಂಗಿ ! ಈಗ ನಿನ್ನ ಪತಿಯು ಎಲ್ಲಿದ್ದಾನೆ ? ಅವನನ್ನು ಕೂಡಲೇ ನನ್ನಲ್ಲಿಗೆ ಕಳುಹಿಸು. ದೇವಲೋಕವನ್ನು ಜಯಿಸುವ ಸಲುವಾಗಿ ಅವನನ್ನು ನನ್ನ ಜೊತೆಯಲ್ಲೇ ಕರೆದುಕೊಂಡು ಹೋಗುತ್ತೇನೆ. ನಿನ್ನ ಮೇಲಿನ ಕರುಣೆಯಿಂದಲೂ ಸೌಹಾರ್ದದ ಕಾರಣದಿಂದಲೂ ನಾನು ಮಧುವನ್ನು ಸಂಹರಿಸಬೇಕೆನ್ನುವ ನಿರ್ಧಾರದಿಂದ ಹಿಂದಕ್ಕೆ ಸರಿದಿದ್ದೇನೆ. ಅವನನ್ನು ನಾನು ಸಂಹರಿಸುವುದಿಲ್ಲ.''

ರಾವಣನು ಹೀಗೆ ಹೇಳಲು ರಾಕ್ಷಸಕನ್ಯೆಯಾದ ಕುಂಭೀನಸಿಯು ಅತ್ಯಂತಪ್ರಸನ್ನಳಾಗಿ ಮಲಗಿ ನಿದ್ರಿಸುತ್ತಿದ್ದ ಪತಿಯ ಬಳಿಗೆ ಹೋಗಿ ಅವನನ್ನು ಎಚ್ಚರಗೊಳಿಸಿ ಹೇಳಿದಳು :

'' ರಾಕ್ಷಸಶ್ರೇಷ್ಠನೇ ! ನನ್ನ ಅಣ್ಣನಾದ ಮಹಾಬಲಿಷ್ಠನಾದ ದಶಗ್ರೀವನು ನಮ್ಮಲ್ಲಿಗೆ ಬಂದಿದ್ದಾನೆ. ದೇವಲೋಕವನ್ನು ಜಯಿಸುವ ಸಲುವಾಗಿ ಅವನೀಗ ಹೊರಟು ಅದಕ್ಕಾಗಿ ನಿನ್ನ ಸಹಾಯವನ್ನು ಅಪೇಕ್ಷಿಸುತ್ತಿದ್ದಾನೆ. ಅವನ ಸಹಾಯಾರ್ಥವಾಗಿ ಬಂಧು – ಬಾಂಧವರೊಡನೆ ನೀನೂ

ಪ್ರಯಾಣಮಾಡು. ನಿನ್ನ ಭಾವಮೈದುನನಾದ ರಾವಣನು ಈಗ ನಿನ್ನ ವಿಷಯದಲ್ಲಿ ವಿಶ್ವಾಸದಿಂದಿದ್ದಾನೆ. ನಿನ್ನನ್ನು ಅಳಿಯನೆಂದು ಭಾವಿಸಿ ನಿನ್ನಲ್ಲಿ ಪ್ರೀತಿಯನ್ನಿಟ್ಟಿದ್ದಾನೆ. ಆದುದರಿಂದ ಅವನ ಈ ಕಾರ್ಯದ ಸಿದ್ಧಿಗಾಗಿ ಅವನಿಗೆ ಸಹಾಯಮಾಡುವುದು ಉಚಿತವಾಗಿದೆ. ''

ಪತ್ನಿಯ ಮಾತನ್ನು ಕೇಳಿ ಮಧುವು ' ಹಾಗೆಯೇ ಆಗಲಿ' – ಎಂದನು.

ಬಳಿಕ ಮಧುವು ನ್ಯಾಯೋಚಿತವಾದ ರೀತಿಯಲ್ಲಿ ರಾವಣನ ಬಳಿಗೆ ಹೋಗಿ ಧರ್ಮವಿಹಿತವಾದ ರೀತಿಯಲ್ಲಿ ರಾಕ್ಷಸಶ್ರೇಷ್ಠನನ್ನು ಸತ್ಕರಿಸಿದನು.

ದಶಗ್ರೀವನು ಹೀಗೆ ಮಧುವಿನ ಅರಮನೆಯಲ್ಲಿ ಸತ್ಕೃತನಾಗಿ ಅಲ್ಲಿ ಒಂದು ರಾತ್ರಿಯನ್ನು ಕಳೆದು ಬೆಳಗಾಗುತ್ತಲೇ ಪ್ರಯಾಣಕ್ಕೆ ಸಿದ್ಧನಾದನು. ಅನಂತರ ಮಹೇಂದ್ರಸದೃಶಪರಾಕ್ರಮಿಯಾದ ರಾವಣೇಶ್ವರನು ಸೈನ್ಯ ದೊಡನೆ ಪ್ರಯಾಣಹೊರಟು ಸಾಯಂಕಾಲದ ವೇಳೆಗೆ ಕುಬೇರನ ನಿವಾಸ ಸ್ಥಾನವಾದ ಕೈಲಾಸಪರ್ವತಕ್ಕೆ ಹೋದನು. ಅಲ್ಲಿಯೇ ಅವನು ಸೈನ್ಯಕ್ಕೆ ಬೀಡುಬಿಡಲು ನಿಶ್ಚಯಿಸಿದನು.''

25ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **26ನೆಯ ಸರ್ಗ**

ರಾವಣನು ರಂಭೆಯನ್ನು ರತಿಕ್ರೀಡೆಗಾಗಿ ಬಲಾತ್ಕರಿಸಿದುದು : ನಲಕೂಬರನ ಶಾಪ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಸ ತು ತತ್ರ ದಶಗ್ರೀವಃ ಸಹ ಸೈನ್ಯೇನ ವೀರ್ಯವಾನ್ ।
ಅಸ್ತಂ ಪ್ರಾಪ್ತೇ ದಿನಕರೇ ನಿವಾಸಂ ಸಮರೋಚಯತ್ ॥1॥

''ಸೂರ್ಯನು ಅಸ್ತಂಗತನಾಗಲು ವೀರ್ಯವಂತನಾದ ದಶಗ್ರೀವನು ಸೈನ್ಯದೊಡನೆ ಕೈಲಾಸಪರ್ವತದಲ್ಲಿಯೇ ಬಿಡಾರಮಾಡುವುದು ಉಚಿತವೆಂದು ಭಾವಿಸಿದನು.

ರಾವಣನ ಆಜ್ಞೆಯಂತೆ ಸೈನಿಕರು ಅಲ್ಲಿಯೇ ಬೀಡುಬಿಟ್ಟರು. ಕೈಲಾಸಪರ್ವತ ಶಿಖರದಂತೆಯೇ ಬಿಳಿಯ ಬಣ್ಣದಿಂದ ಬೆಳಗುತ್ತಿದ್ದ ಚಂದ್ರನ

ಉದಯವಾಯಿತು. ನಾನಾವಿಧವಾದ ಆಯುಧಗಳಿಂದ ಸುಸಜ್ಜಿತವಾಗಿದ್ದ ನಿಶಾಚರಸೈನ್ಯವು ಗಾಢವಾದ ನಿದ್ರೆಯಲ್ಲಿ ಮುಳುಗಿದ್ದಿತು. ಮಹಾಪರಾಕ್ರಮಿಯಾದ ರಾವಣನು ಆ ಪರ್ವತದ ಶಿಖರದಲ್ಲಿ ಏಕಾಕಿಯಾಗಿ ಕುಳಿತು ಚಂದ್ರನ ಬೆಳದಿಂಗಳಿನಿಂದ ಶೋಭಿಸುತ್ತಿದ್ದ ಆ ಪರ್ವತದ ವಿಭಿನ್ನಸ್ಥಾನಗಳನ್ನೂ ನಿಸರ್ಗದ ಸೌಂದರ್ಯವನ್ನೂ ನೋಡುತ್ತಿದ್ದನು. ಕೆಲವೆಡೆಗಳಲ್ಲಿ ಪುಷ್ಪಭರಿತವಾದ ಕಣಿಗಿಲೇ ಗಿಡಗಳ ಅರಣ್ಯಗಳಿಂದ ಆ ಪ್ರದೇಶವು ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಕೆಲವು ಕಡೆಗಳಲ್ಲಿ ಕದಂಬ–ವಕುಲವೃಕ್ಷಗಳಿಂದ ತುಂಬಿದ ಅರಣ್ಯಗಳಿದ್ದುವು. ಕೆಲವೆಡೆಗಳಲ್ಲಿ ಮಂದಾಕಿನೀನದಿಯ ನೀರಿನಿಂದ ಪೂರ್ಣವಾದ ಮತ್ತು ವಿಕಸಿತವಾದ ಕಮಲಗಳಿಂದ ಕೂಡಿದ ಸರೋವರಗಳಿದ್ದುವು. ಕೆಲವೆಡೆಗಳಲ್ಲಿ ಸಂಪಿಗೆ, ಅಶೋಕ, ನಾಗಕೇಸರ, ಮಂದಾರ, ಮಾವು, ಪಾಟಲ, ಲೋಧ್ರ, ಪ್ರಿಯಂಗು, ಅರ್ಜುನ, ಕೇದಿಗೆ, ತಗರ, ತೆಂಗು – ಇವೇ ಮೊದಲಾದ ವೃಕ್ಷಗಳಿಂದ ಕೂಡಿದ ಅರಣ್ಯಪ್ರದೇಶಗಳಿದ್ದು ಪರ್ವತಶಿಖರಪ್ರದೇಶದ ಕಾಂತಿಯನ್ನು ಹೆಚ್ಚಿಸುತ್ತಿದ್ದುವು.

ಮಂಜುಳವಾದ ಕಂಠಧ್ವನಿಯುಳ್ಳ ಕಿನ್ನರರು – ಕಾಮಪೀಡಿತರಾಗಿ ಕಿನ್ನರಿಯರೊಡನೆ ಮನಸ್ಸಿಗೆ ಆನಂದವನ್ನೂ–ಹರ್ಷವನ್ನೂ ಉಂಟುಮಾಡುವುದಾಗಿದ್ದ ರಾಗಯುಕ್ತವಾದ ಗೀತಗಳನ್ನು ಜೊತೆಗೂಡಿ ಹಾಡುತ್ತಿದ್ದರು. ಮದದಿಂದ ಕೆಂಪಾದ ಕಡೆಗಣ್ಣುಗಳನ್ನು ಹೊಂದಿದ್ದ ಮದಮತ್ತರಾಗಿದ್ದ ವಿದ್ಯಾಧರರು ಯುವತಿಯರೊಡನೆ ಕ್ರೀಡೆಯಾಡುತ್ತಾ ಆನಂದ ತುಂದಿಲರಾಗಿದ್ದರು. ಕುಬೇರನ ಅರಮನೆಯಲ್ಲಿ ಅಪ್ಸರೆಯರು ಹಾಡುತ್ತಿದ್ದ ಗಾಯನದ ಮಧುರನಿನಾದವು ಗೆಜ್ಜೆಗಳ ಇಂಚರದಂತೆ ಕೇಳಿಬರುತ್ತಿದ್ದಿತು. ವಸಂತರ್ತುವಿನ ಸಮಸ್ತ ಪುಷ್ಪಗಳ ವಾಸನೆಯನ್ನೂ ಹೊಂದಿದ್ದ ವೃಕ್ಷಗಳು ತಂಗಾಳಿಯ ಬೀಸುವಿಕೆಯಿಂದ ಪುಷ್ಪವೃಷ್ಟಿಯನ್ನು ಸುರಿಸುತ್ತಾ ಆ ಪರ್ವತವನ್ನೇ ಸುಗಂಧಮಯವನ್ನಾಗಿ ಮಾಡುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ವಿಧ–ವಿಧವಾದ ಕುಸುಮಗಳ ಮಧುರಮಕರಂದದಿಂದಲೂ ಮತ್ತು ಪರಾಗದಿಂದಲೂ ಮಿಶ್ರಿತವಾದ ಸುಗಂಧವನ್ನು ಹೊತ್ತು ವಾಯುವು ಮೆಲ್ಲ–ಮೆಲ್ಲನೆ ಬೀಸುತ್ತಾ ಕಾಮವನ್ನು ಹೊಡೆದೆಬ್ಬಿಸುತ್ತಿದ್ದನು. ಸುಮಧುರವಾದ ಸಂಗೀತದ ಶ್ರವಣದಿಂದಲೂ, ನಾನಾಪ್ರಕಾರವಾದ ಪುಷ್ಪಗಳ ದರ್ಶನ

ದಿಂದಲೂ, ಶೀತಲವಾದ ವಾಯುವಿನ ಸ್ಪರ್ಶದಿಂದಲೂ, ಪರ್ವತದ ಆಕರ್ಷಣೀಯವಾದ ವಿಧ –ವಿಧವಾದ ದೃಶ್ಯಗಳಿಂದಲೂ, ರಾತ್ರಿಯ ವೇಳೆ ಯಾಗಿದ್ದುದರಿಂದಲೂ ಮತ್ತು ಚಂದ್ರೋದಯವಾಗಿದ್ದುದರಿಂದಲೂ - ಮಹಾವೀರ್ಯನಾದ ರಾವಣನು ಕಾಮವಶನಾಗಿ ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಚಂದ್ರನನ್ನು ಎವೆಯಿಕ್ಕದೇ ನೋಡುತ್ತಿದ್ದನು.

ಆ ಮಧ್ಯದಲ್ಲಿ ಅಪ್ಸರೆಯರಲ್ಲಿ ಶ್ರೇಷ್ಠಳಾದ, ಸರ್ವಾಂಗಸುಂದರಿ ಯಾದ, ದಿವ್ಯವಾದ ಆಭರಣಗಳಿಂದ ಭೂಷಿತೆಯಾಗಿದ್ದ, ಪೂರ್ಣಚಂದ್ರನಿಗೆ ಸಮಾನವಾದ ಮುಖಮಂಡಲದಿಂದ ಕಂಗೊಳಿಸುತ್ತಿದ್ದ ರಂಭೆಯು ಅದೇ ಮಾರ್ಗವಾಗಿ ಬಂದಳು. ಆ ಅಪ್ಸರೆಯು ದಿವ್ಯವಾದ ಗಂಧವನ್ನು ಪೂಸಿ ಕೊಂಡಿದ್ದು ಮಂದಾರಪುಷ್ಪವನ್ನು ತಲೆಯಲ್ಲಿ ಮುಡಿದಿದ್ದಳು. ದಿವ್ಯವಾದ ಪುಷ್ಪಗಳಿಂದ ಶರೀರವನ್ನು ಸಿಂಗರಿಸಿಕೊಂಡು ಪ್ರಿಯಕರನ ಸಮಾಗಮ ರೂಪವಾದ ಉತ್ಸವಕ್ಕೆ ಹೋಗುತ್ತಿದ್ದಳು. ಸ್ಥೂಲವಾಗಿಯೂ ಸುವರ್ಣ ಮಯವಾದ ಸೊಂಟಪಟ್ಟಿಯಿಂದ ಸಮಲಂಕೃತವಾಗಿಯೂ ಇದ್ದ ರಂಭೆಯ ಕಟಿಪ್ರದೇಶವು ರತಿಗೆ ಸಮರ್ಪಿಸುವ ಉಪಹಾರವೋ ಎಂಬಂತೆ ನೇತ್ರಾನಂದ ಕರವಾಗಿ ಕಾಣುತ್ತಿದ್ದಿತು. ರಂಭೆಯು ಕಪೋಲಗಳು, ಹಣೆ, ಮುಂಗೈ, ಮುಂಗಾಲು ಮುಂತಾದ ಅವಯವಗಳನ್ನು ಹರಿಚಂದನದ ಚಿತ್ತಾರಗಳಿಂದ ಸಿಂಗರಿಸಿಕೊಂಡಿದ್ದಳು. ಆರು ಋತುಗಳಲ್ಲಿ ಸಿಕ್ಕುವ ನೂತನವಾದ ಪುಷ್ಪ ಹಾರಗಳಿಂದ ವಿಭೂಷಿತಳಾಗಿದ್ದ ರಂಭೆಯು ತನ್ನ ಅಲೌಕಿಕವಾದ ಕಾಂತಿ, ಸೌಂದರ್ಯ, ಲಾವಣ್ಯ ಮತ್ತು ಕೀರ್ತಿಗಳಿಂದ ಮಹಾಲಕ್ಷ್ಮಿಗೆ ಸಮಾನ ಳಾಗಿಯೇ ಕಾಣುತ್ತಿದ್ದಳು. ಅವಳ ಮುಖವು ಚಂದ್ರನಂತೆ ಮನೋಹರ ವಾಗಿದ್ದಿತು. ಹುಬ್ಬುಗಳು ಎರಡು ಧನುಸ್ಸುಗಳಂತೆಯೇ ಇದ್ದು ಶುಭಕರ ವಾಗಿದ್ದುವು. ಅವಳು ನೀರಿನಿಂದ ಕೂಡಿದ ಕಾರ್ಮುಗಿಲಿನಂತಹ ನೀಲ ವರ್ಣದ ಸೀರೆಯನ್ನು ಉಟ್ಟಿದ್ದಳು. ಅವಳ ತೊಡೆಗಳು ಆನೆಯ ಸೊಂಡಿಲಿ ನಂತಿದ್ದುವು. ಕೈಗಳು ದೇಹರೂಪವಾದ ವೃಕ್ಷದ ಚಿಗುರಿನಂತೆ ಸುಕೋಮಲ ವಾಗಿದ್ದುವು. ಸೈನ್ಯದ ಮಧ್ಯದಲ್ಲಿ ಹೋಗುತ್ತಿದ್ದ ರಂಭೆಯನ್ನು ರಾವಣನು ನೋಡಿದನು. ರಂಭೆಯನ್ನು ನೋಡುತ್ತಲೇ ಕಾಮನ ಬಾಣಗಳಿಗೆ ಅಧೀನ ನಾದ ರಾವಣನು ಮೇಲೆದ್ದು ಅವಳ ಕೈಗಳನ್ನು ಹಿಡಿದುಕೊಂಡನು.

ಲಜ್ಜಿತಳಾಗಿ ಹಿಂದಕ್ಕೆ ಸರಿಯುತ್ತಿದ್ದ ರಂಭೆಯನ್ನು ಕುರಿತು ನಸುನಗುತ್ತಾ ಹೇಳಿದನು :

''ಸುಂದರಿಯೇ! ನೀನೆಲ್ಲಿಗೆ ಹೋಗುತ್ತಿರುವೆ? ಯಾರ ಕಾರ್ಯಸಿದ್ಧಿಗಾಗಿ ನೀನಾಗಿಯೇ ಎಲ್ಲಿಗೆ ಹೋಗುತ್ತಿರುವೆ? ನಿನ್ನನ್ನು ಉಪಭೋಗಿಸುವ ಭಾಗ್ಯವು ಯಾವನಿಗೆ ಪ್ರಾಪ್ತವಾಗಿದೆ? ಈ ಸಮಯದಲ್ಲಿ ನಿನ್ನನ್ನು ಉಪಭೋಗಿಸಲಿರುವ ಭಾಗ್ಯಶಾಲಿಯು ಯಾರು? ಕಮಲ ಮತ್ತು ಕನ್ನೈದಿಲೆಗಳ ಸುಗಂಧದಿಂದ ಕೂಡಿರುವ ನಿನ್ನ ಮನೋಹರವಾದ ಮುಖಾರವಿಂದದ ಅಧರಾಮೃತವು ಅಮೃತಕ್ಕಿಂತಲೂ ಮಿಗಿಲಾದುದು. ಸುಧಾಮೃತರಸದಂತೆಯೇ ಇರುವ ನಿನ್ನ ಅಧರಾಮೃತವನ್ನು ಪಾನಮಾಡಿ ಯಾವನೀಗ ತೃಪ್ತಿಹೊಂದಲಿದ್ದಾನೆ? ಸುವರ್ಣಕುಂಭಸದೃಶವಾಗಿರುವ, ಒಂದಕ್ಕೊಂದು ಸೇರಿಕೊಂಡಂತೆ ಇರುವ, ಸ್ಥೂಲವಾಗಿಯೂ ಶುಭಕರವಾಗಿಯೂ ಇರುವ ಈ ನಿನ್ನ ಕುಚದ್ವಯಗಳು ಯಾವ ಭಾಗ್ಯವಂತನ ವಕ್ಷಃಸ್ಥಳಕ್ಕೆ ಸ್ಪರ್ಶಸುಖವನ್ನು ನೀಡಲಿವೆ? ಚಿನ್ನದ ಸೊಂಟಪಟ್ಟಿಯಿಂದ ಸಮಲಂಕೃತವಾಗಿರುವ, ಸುವರ್ಣ ಚಕ್ರದಂತೆ ದುಂಡಾಗಿಯೂ ವಿಶಾಲವಾಗಿಯೂ ಇರುವ, ಸ್ವರ್ಗಸುಖಕ್ಕೆ ಸಮಾನವಾದ ಸುಖವನ್ನೀಯುವ ನಿನ್ನ ಜಘನವನ್ನೇರಿ ಸುಖಪಡುವ ಭಾಗ್ಯಶಾಲಿಯು ಯಾರು?

ಇಂದ್ರ, ಉಪೇಂದ್ರ, ಅಶ್ವಿನೀಕುಮಾರರು ಇವರಲ್ಲಿ ಯಾರು ನನ್ನಿಂದ ವಿಶಿಷ್ಟರಾಗಿದ್ದಾರೆ? ಅವರಲ್ಲಿ ಯಾರೂ ನನಗೆ ಸಮಾನರಲ್ಲ. ಹೀಗಿರುವಾಗ ನೀನು ನನ್ನನ್ನು ಬಿಟ್ಟು ಬೇರೆಯವನ ಬಳಿಗೆ ಹೋಗುವುದು ಉಚಿತವಲ್ಲ.

ಸ್ಥೂಲವಾದ ನಿತಂಬಗಳನ್ನು ಹೊಂದಿರುವ ಸುಂದರಿಯೇ! ಈ ಶಿಲೆಯು ಅತಿಸುಂದರವಾಗಿದೆ. ಇಲ್ಲಿ ಕುಳಿತು ವಿಶ್ರಮಿಸಿಕೋ. ಈ ಮೂರು ಲೋಕಗಳಲ್ಲಿ ನನ್ನನ್ನುಳಿದು ಬೇರೆ ಪ್ರಭುವೇ ಇಲ್ಲ. ಮೂರು ಲೋಕಗಳ ನಾಯಕರಿಗೂ ಸ್ವಾಮಿಯೂ ವಿಧಾತನೂ ಆಗಿರುವ ದಶಾನನನು ಕೈ ಮುಗಿದುಕೊಂಡು ವಿನೀತನಾಗಿ ಸೇವಿಸುವಂತೆ ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತಿದ್ದಾನೆ.''

ರಾವಣನು ಹೀಗೆ ಹೇಳಲಾಗಿ ಗಡಗಡನೆ ನಡುಗುತ್ತಿದ್ದ ರಂಭೆಯು ಕೈಮುಗಿದುಕೊಂಡು ಹೇಳಿದಳು :

ಪ್ರಸೀದ ನಾರ್ಹಸೇ ವಕ್ತುಮೀದೃಶಂ ತ್ವಂ ಹಿ ಮೇ ಗುರುಃ ॥28॥

''ರಾವಣೇಶ್ವರನೇ! ಪ್ರಸನ್ನನಾಗು. ಹೀಗೆ ಹೇಳುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ನೀನು ನನಗೆ ಮಾವನಾಗಿ ಗುರುವಿನ ಸ್ಥಾನ ದಲ್ಲಿರುವೆ. ಬೇರೆ ಯಾರಾದರೂ ನನ್ನನ್ನು ಬಲಾತ್ಕರಿಸಲು ಬಂದಾಗ ಅವರಿಂದಲೂ ನನ್ನನ್ನು ರಕ್ಷಿಸಬೇಕಾದುದು ನಿನ್ನ ಕರ್ತವ್ಯವಾಗಿದೆ. ಧರ್ಮ ದೃಷ್ಟಿಯಿಂದ ನಾನು ನಿನ್ನ ಸೊಸೆಯಾಗುತ್ತೇನೆ. ಈ ವಿಷಯವನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ.''

ಆ ಸಮಯದಲ್ಲಿ ರಂಭೆಯು ತನ್ನ ಕಾಲುಗಳನ್ನೇ ನೋಡಿಕೊಳ್ಳುತ್ತಾ ಅಧೋಮುಖಿಯಾಗಿ ನಿಂತಿದ್ದಳು. ರಾವಣನ ದೃಷ್ಟಿಯು ಬಿದ್ದೊಡನೆಯೇ ಭಯದಿಂದ ರೋಮಾಂಚಿತಳಾಗಿದ್ದಳು. ಕಾತರಳಾಗಿದ್ದ ರಂಭೆಗೆ ರಾವಣನು ಪುನಃ ಹೇಳಿದನು :

ಸುತಸ್ಯ ಯದಿ ಮೇ ಭಾರ್ಯಾ ತತಸ್ತ್ವಂ ಹಿ ಸ್ನುಷಾ ಭವೇಃ ।

''ಸುಂದರಿ ! ನೀನೇನಾದರೂ ನನ್ನ ಮಗನಿಗೆ ಮಡದಿಯಾಗಿದ್ದರೆ ಆಗ ನೀನು ನನ್ನ ಸೊಸೆಯಾಗುತ್ತಿದ್ದೆ. ಹಾಗಿಲ್ಲದಿರುವಾಗ ನೀನು ನನ್ನ ಸೊಸೆಯು ಹೇಗಾಗುವೆ ?''

ರಂಭೆಯು ಹೇಳುತ್ತಾಳೆ :

'' ಆಗಲಿ; ರಾವಣೇಶ್ವರ! ನಾನು ನಿನಗೆ ಸೊಸೆಯು ಹೇಗಾಗಿರುವೆ ನೆಂಬುದನ್ನು ನಿರೂಪಿಸುತ್ತೇನೆ. ಧರ್ಮಾನುಸಾರವಾಗಿ ಈಗಲೇ ನಾನು ನಿನ್ನ ಮಗನ ಭಾರ್ಯೆಯಾಗಿದ್ದೇನೆ. ನಿನ್ನ ಅಣ್ಣನಾದ ಕುಬೇರನ ಮಗನು ನನಗೆ ಪ್ರಾಣಗಳಿಗಿಂತಲೂ ಪ್ರಿಯನಾಗಿದ್ದಾನೆ. ಅವನು ಮೂರು ಲೋಕ ಗಳಲ್ಲಿಯೂ ನಲಕೂಬರನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಅವನು ಧರ್ಮಾನುಷ್ಠಾನದ ದೃಷ್ಟಿಯಿಂದ ಬ್ರಾಹ್ಮಣನೂ ಪರಾಕ್ರಮದ ದೃಷ್ಟಿ ಯಿಂದ ಕ್ಷತ್ರಿಯನೂ ಆಗಿದ್ದಾನೆ. ಅವನು ಕ್ರೋಧದಲ್ಲಿ ಅಗ್ನಿಗೆ ಸಮಾನನು. ಕ್ಷಮೆಯಲ್ಲಿ ಭೂದೇವಿಗೆ ಸಮಾನನು. ಲೋಕಪಾಲನ ಮಗನಾದ ಅವನೊಡನೆ ಸೇರಲು ನಾನು ಸಂಕೇತಮಾಡಿಕೊಂಡಿದ್ದೇನೆ. ಅವನ ಸಲುವಾಗಿಯೇ ನಾನು ಈ ಪರಿಯಲ್ಲಿ ಸಿಂಗರಿಸಿಕೊಂಡಿದ್ದೇನೆ. ನನ್ನ ಮೇಲೆ

ಅವನಿಗೆ ಅನುರಾಗವಿರುವಂತೆಯೇ ನನಗೂ ಅವನ ಮೇಲೆ ಗಾಢವಾದ ಪ್ರೇಮವಿದೆ. ಬೇರೆ ಯಾವನಲ್ಲಿಯೂ ನನಗೆ ಈ ವಿಧವಾದ ಅನುರಾಗವಿಲ್ಲ. ಅರಿಂದಮನೇ ! ಈ ಸತ್ಯಸಂಗತಿಯ ಕಾರಣದಿಂದ ನೀನು ನನ್ನನ್ನು ಬಿಟ್ಟುಬಿಡು. ಧರ್ಮಾತ್ಮನಾದ ಆ ನನ್ನ ಪ್ರಿಯತಮನು ಔತ್ಸುಕ್ಯದಿಂದ ನನ್ನನ್ನು ಪ್ರತೀಕ್ಷಿಸುತ್ತಿರುತ್ತಾನೆ. ಅವನನ್ನು ಸೇರಲು ಹೊರಟಿರುವ ನನಗೆ ವಿಘ್ನವನ್ನುಂಟುಮಾಡುವುದು ನಿನಗೆ ಉಚಿತವಲ್ಲ. ನನ್ನನ್ನು ಬಿಟ್ಟುಬಿಡು. ರಾಕ್ಷಸಶ್ರೇಷ್ಠನೇ ! ಸತ್ಪುರುಷರಿಂದ ಆಚರಿಸಲ್ಪಟ್ಟಿರುವ ಮಾರ್ಗದಲ್ಲಿ ಹೋಗು. ನೀನು ನನಗೆ ಮಾನನೀಯನಾದ ಮಾವನಾಗಿರುವೆ. ಆದುದರಿಂದ ನಿನಗೆ ನಾನು ಪಾಲನೀಯಳೂ ಆಗಿರುವೆನು.''

ರಂಭೆಯು ಹೀಗೆ ಹೇಳಲು ದಶಗ್ರೀವನು ವಿನೀತನಂತೆ ತೋರ್ಪಡಿಸಿಕೊಳ್ಳುತ್ತಾ ಹೇಳಿದನು :

''ರಂಭೆ ! ನೀನು ನಲಕೂಬರನನ್ನು ಪ್ರೀತಿಸಿರುವೆಯಾದ ಕಾರಣ ನನ್ನ ಸೊಸೆಯಾಗಿರುವೆನೆಂದು ಹೇಳುವುದು ಯುಕ್ತವಾಗಿ ಕಾಣುವುದಿಲ್ಲ. ಏಕೆಂದರೆ ; ಒಬ್ಬ ಪುರುಷನಿಗೆ ಒಬ್ಬಳೇ ಕೊನೆಯವರೆಗೂ ಪತ್ನಿಯಾಗಿರುವುದಾಗಿದ್ದರೆ ಸೊಸೆ - ಮಾವ ಈ ಕ್ರಮಗಳು ಹೊಂದಿಕೊಳ್ಳುತ್ತವೆ. ಆದರೆ ನಿಮ್ಮ ದೇವಲೋಕದ ಸ್ಥಿತಿಯೇ ಬೇರೆಯದಾಗಿದೆ. ಅಪ್ಸರೆಯರಿಗೆ ಒಬ್ಬ ಪತಿ ಎಂಬುದೇ ಇಲ್ಲ. ದೇವಲೋಕದ ಪ್ರಜೆಗಳು ಒಬ್ಬಳನ್ನೇ ಪರಿಗ್ರಹಿಸಿ ಅವಳೊಬ್ಬಳಲ್ಲಿಯೇ ಅನುರಕ್ತರಾಗಿರುವುದಿಲ್ಲ. ಯಾರು ಯಾರನ್ನಾದರೂ ಅನುಭವಿಸಬಹುದು.''

ಕಾಮಭೋಗದಲ್ಲಿಯೇ ಆಸಕ್ತನಾಗಿದ್ದ ರಾವಣನು ಹೀಗೆ ಹೇಳುತ್ತಾ ರಂಭೆಯನ್ನು ಬಲಾತ್ಕಾರವಾಗಿ ಭೋಗಿಸಿದನು. ಸಮಾಗಮದ ಅನಂತರ ರಾವಣನಿಂದ ಮುಕ್ತಳಾದ ರಂಭೆಯು ಮದಿಸಿದ ಸಲಗದಿಂದ ವಿನೋದಾರ್ಥವಾಗಿ ಕಲಕಲ್ಪಟ್ಟ ನದಿಯಂತೆ ವ್ಯಾಕುಲಗೊಂಡಳು. ಅವಳು ತೊಟ್ಟಿದ್ದ ಪುಷ್ಪಹಾರಗಳೂ ಒಡವೆಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ತಲೆಗೂದಲು ಬಿಚ್ಚಿಹೋಗಿದ್ದು ಗಾಳಿಯ ಬಡಿತದಿಂದ ಹಾರಾಡುತ್ತಿದ್ದಿತು. ಚಿಗುರಿನಂತೆ ಸುಕೋಮಲವಾಗಿದ್ದ ಅವಳ ಕೈಗಳು ನಡುಗುತ್ತಿದ್ದುವು. ಆ ಸಮಯದಲ್ಲಿ

ರಂಭೆಯು – ಬಿರುಗಾಳಿಯ ಆರ್ಭಟಕ್ಕೆ ಸಿಲುಕಿದ ಹೂವರಳಿದ ಸುಮನೋಹರ ವಾಗಿದ್ದ ಬಳ್ಳಿಯಂತೆಯೇ ಕಾಣುತ್ತಿದ್ದಳು.

ಅನಂತರ ಅವಳು ಭಯಭೀತಳಾಗಿ ನಾಚಿಕೆಗೊಳ್ಳುತ್ತಾ ನಲಕೂಬರನ ಬಳಿಗೆ ಹೋಗಿ ಕೈಜೋಡಿಸಿಕೊಂಡು ಅವನ ಕಾಲುಗಳಲ್ಲಿ ಬಿದ್ದಳು. ಅಂತಹ ದಾರುಣವಾದ ಅವಸ್ಥೆಯಲ್ಲಿದ್ದ ರಂಭೆಯನ್ನು ನೋಡಿ ಮಹಾತ್ಮನಾದ ನಲ ಕೂಬರನು ಪ್ರಶ್ನಿಸಿದನು :

'' ಮಂಗಳಾಂಗಿಯೇ ! ಇದೇನಿದು ? ನನ್ನ ಕಾಲುಗಳಲ್ಲೇಕೆ ಬೀಳು ತ್ತಿರುವೆ ?''

ಆ ಸಮಯದಲ್ಲಿ ರಂಭೆಯು ನಡುಗುತ್ತಿದ್ದಳು. ನಿಟ್ಟುಸಿರು ಬಿಡುತ್ತಿದ್ದಳು. ಕೈಮುಗಿದುಕೊಂಡು ನಲಕೂಬರನಿಗೆ ನಡೆದುದೆಲ್ಲವನ್ನೂ ಯಥಾವತ್ತಾಗಿ ಹೇಳತೊಡಗಿದಳು :

' ನಲಕೂಬರದೇವನೇ ! ಆ ದಶಮುಖ ರಾವಣನು ಸ್ವರ್ಗಲೋಕದ ಮೇಲೆ ಆಕ್ರಮಣಮಾಡಲು ಹೋಗುತ್ತಿದ್ದಾನೆ. ಅವನೊಡನೆ ಅಪಾರವಾದ ಸೈನ್ಯವಿದೆ. ಇಂದು ರಾತ್ರಿ ಅವನಿಲ್ಲಿ ತನ್ನ ಸೈನಿಕರೊಡನೆ ಬೀಡುಬಿಟ್ಟಿದ್ದಾನೆ. ನಾನು ನಿನ್ನ ಬಳಿಗೆ ಅದೇ ಮಾರ್ಗದಲ್ಲಿ ಬರುತ್ತಿದ್ದೆನು. ಆಗ ಆ ರಾಕ್ಷಸನು ನನ್ನನ್ನು ನೋಡಿ ನನ್ನ ಕೈಹಿಡಿದು ನೀನು ಯಾರ ಪ್ರೇಯಸಿಯೆಂದು ಕೇಳಿದನು. ನಾನವನಿಗೆ ಎಲ್ಲ ವಿಷಯಗಳನ್ನೂ ಯಥಾ ವತ್ತಾಗಿ ಹೇಳಿದೆನು. ಆದರೆ ಅವನ ಮನಸ್ಸು ಕಾಮಾಭಿಭೂತವಾಗಿದ್ದಿತು. ಅದರಿಂದಾಗಿ ಅವನು ನನ್ನ ಮಾತನ್ನು ಕೇಳಲಿಲ್ಲ. ನಾನು ನಿನ್ನ ಸೊಸೆಯೆಂದೂ ನನ್ನನ್ನು ಬಿಟ್ಟುಬಿಡಬೇಕೆಂದೂ ಹಲವಾರು ಬಾರಿ ನಾನು ರಾವಣನನ್ನು ಪ್ರಾರ್ಥಿಸಿದೆನು. ನನ್ನ ಆ ಎಲ್ಲ ಮಾತುಗಳನ್ನೂ ತೃಣೀ ಕರಿಸಿ ಅವನು ನನ್ನ ಮೇಲೆ ಅತ್ಯಾಚಾರವನ್ನೆಸಗಿದನು. ಸುವ್ರತನೇ ! ಅಬಲೆಯಾದ ನಾನು ಮಾಡಿದ ಅಪರಾಧವನ್ನು ಕ್ಷಮಿಸಿಬಿಡು.

ನ ಹಿ ತುಲ್ಯಂ ಬಲಂ ಸೌಮ್ಯ ಸ್ತ್ರಿಯಾಶ್ಚ ಪುರುಷಸ್ಯ ಹಿ ॥50॥

ಹೆಂಗಸಿಗೆ ಪುರುಷನಿಗಿರುವ ಬಲಕ್ಕೆ ಸಮಾನವಾದ ಬಲವು ಇರುವುದಿಲ್ಲ. ಆದುದರಿಂದ ಆ ದುಷ್ಟನಿಂದ ನಾನು ನನ್ನ ರಕ್ಷಣೆಯನ್ನು ಮಾಡಿಕೊಳ್ಳಲಾರದೇ ಹೋದೆನು. ''

ರಂಭೆಯ ಮಾತನ್ನು ಕೇಳಿ ಕುಬೇರನ ಮಗನಾದ ನಲಕೂಬರನು ಪರಮಕ್ರುದ್ಧನಾಗಿ ರಂಭೆಯ ಮೇಲೆ ದೊಡ್ಡದಾದ ಅತ್ಯಾಚಾರವು ನಡೆಯಿತೆಂಬುದನ್ನು ತಿಳಿದು ಸ್ವಲ್ಪ ಹೊತ್ತು ಧ್ಯಾನಾಸಕ್ತನಾದನು. ರಂಭೆಯು ಹೇಳುತ್ತಿರುವುದು ನಿಜವೆಂದೂ – ರಾವಣನು ಅಂತಹ ಘೋರವಾದ ಅತ್ಯಾಚಾರವನ್ನೆಸಗಿದುದು ಸತ್ಯವೆಂದೂ – ನಲಕೂಬರನಿಗೆ ಧ್ಯಾನಯೋಗದ ಮೂಲಕವಾಗಿ ತಿಳಿಯಿತು. ಕೋಪದಿಂದ ಕೆಂಗಣ್ಣನಾದ ನಲಕೂಬರನು ಅಂಗೈಗೆ ನೀರನ್ನು ಸುರಿದುಕೊಂಡನು. ಮೊದಲು ವಿಧಿಪೂರ್ವಕವಾಗಿ ಶುದ್ಧಾಚಮನಮಾಡಿ ಕಮಂಡಲುವಿನಿಂದ ಕೈಗೆ ನೀರುಬಿಟ್ಟುಕೊಂಡು ರಾಕ್ಷಸೇಂದ್ರನಿಗೆ ದಾರುಣವಾದ ಶಾಪವನ್ನಿತ್ತನು.

ಅಕಾಮಾ ತೇನ ಯಸ್ಮಾತ್ತ್ವಂ ಬಲಾದ್ಭದ್ರೇ ಪ್ರಧರ್ಷಿತಾ ।
ತಸ್ಮಾತ್ಸ ಯುವತೀಮನ್ಯಾಂ ನಾಕಾಮಾಮುಪಯಾಸ್ಯತಿ ॥ 54॥
ಯದಾ ಹ್ಯಕಾಮಾಂ ಕಾಮಾರ್ತೋ ಧರ್ಷಯಿಷ್ಯತಿ ಯೋಷಿತಮ್ ।
ಮೂರ್ಧಾ ತು ಸಪ್ತಧಾ ತಸ್ಯ ಶಕಲೀಭವಿತಾ ತದಾ ॥ 55॥

''ಮಂಗಳಾಂಗಿಯೇ ! ನಿನಗೆ ಇಷ್ಟವಿಲ್ಲದಿದ್ದರೂ ರಾವಣನು ನಿನ್ನ ಮೇಲೆ ಬಲಾತ್ಕಾರವಾಗಿ ಅತ್ಯಾಚಾರವನ್ನೆಸಗಿದ್ದಾನೆ. ಆದುದರಿಂದ ಇನ್ನು ಮುಂದೆ ಅವನೊಡನೆ ಸಮಾಗಮಮಾಡಲು ಇಚ್ಛೆಯಿಲ್ಲದ ಮತ್ತು ಅವನನ್ನು ಅಪೇಕ್ಷಿಸದ ಯುವತಿಯೊಡನೆ ಸಮಾಗಮವನ್ನು ಮಾಡಲಾಗದಂತೆ ನಾನು ಅವನಿಗೆ ಶಾಪವನ್ನು ಕೊಡುತ್ತೇನೆ.

ಸಮಾಗಮಕ್ಕೆ ಇಚ್ಛೆಯಿಲ್ಲದ ಹೆಂಗಸಿನ ಮೇಲೆ ರಾವಣನು ಅತ್ಯಾಚಾರಕ್ಕೆ ಪ್ರಯತ್ನಿಸಿದ್ದೇ ಆದರೆ – ಅವನ ತಲೆಯು ಏಳು ಚೂರಾಗಿ ಒಡೆದು ಹೋಗಲಿ.''

ಪ್ರಜ್ವಲಿಸುವ ಅಗ್ನಿಗೆ ಸಮಾನವಾಗಿ ಸುಟ್ಟುಹಾಕುವಷ್ಟು ಪ್ರಭಾವದಿಂದ ಕೂಡಿದ್ದ ಪ್ರಖರವಾದ ಮಹಾಶಾಪವನ್ನು ನಲಕೂಬರನು ರಾವಣನಿಗೆ ಕೊಟ್ಟ ಸಮಯದಲ್ಲಿ ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ಹೂ ಮಳೆಗರೆಯಿತು. ರಾವಣನು ಶಪ್ತನಾದನೆಂದು ತಿಳಿದು ಬ್ರಹ್ಮನೇ ಮೊದಲಾದ ದೇವತೆಗಳಿಗೂ ಪರಮಹರ್ಷವಾಯಿತು. ಲೋಕದಲ್ಲಿ ರಾವಣನಿಂದ

ಉಂಟಾಗುತ್ತಿದ್ದ ಉಪಟಳವನ್ನೂ ಮತ್ತು ರಾವಣನ ಮರಣವು ಹೇಗೆ ಸಂಭವಿಸುವುದೆಂಬುದನ್ನೂ ತಿಳಿದ ಪಿತೃದೇವತೆಗಳೂ ಮತ್ತು ಮಹರ್ಷಿಗಳೂ ಬಹಳವಾಗಿ ಸಂತೋಷಿಸಿದರು. ನಲಕೂಬರನು ತನಗೆ ಘೋರವಾದ ಶಾಪ ವಿತ್ತನೆಂಬ ರೋಮಾಂಚಕರವಾದ ಸುದ್ದಿಯನ್ನು ಕೇಳಿ ರಾವಣನು ಮುಂದೆ ತನ್ನನ್ನಪೇಕ್ಷಿಸದ ನಾರಿಯರೊಡನೆ ಸಮಾಗಮಮಾಡಲು ಮುಂದಾಗುತ್ತಿ ರಲಿಲ್ಲ. ನಲಕೂಬರನು ರಾವಣನಿಗೆ ಕೊಟ್ಟ ಮನಸ್ಸಿಗೆ ಆಪ್ಯಾಯಮಾನವಾಗು ವಂತಹ ಆ ಶಾಪವನ್ನು ಕೇಳಿ ಅವನಿಂದ ಸೆಳೆದೊಯ್ಯಲ್ಪಟ್ಟಿದ್ದ ಪತಿವ್ರತೆಯ ರಾಗಿದ್ದ ಸಮಸ್ತಸ್ತ್ರೀಯರೂ ಆನಂದತುಂದಿಲರಾದರು.''

26ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 27ನೆಯ ಸರ್ಗ

ಸ್ವರ್ಗದ ಮೇಲೆ ಸೇನಾಸಹಿತನಾದ ರಾವಣನ ಆಕ್ರಮಣ: ಇಂದ್ರನು ರಾವಣನ ಸಂಹಾರಕ್ಕಾಗಿ ಮಹಾವಿಷ್ಣುವನ್ನು ಪ್ರಾರ್ಥಿಸಿದುದು : ಮುಂದೆ ರಾವಣನ ವಧೆಮಾಡುವುದಾಗಿ ಹೇಳಿ ಮಹಾವಿಷ್ಣುವು ಇಂದ್ರನನ್ನು ಹಿಂದಕ್ಕೆ ಕಳುಹಿಸಿಕೊಟ್ಟುದು : ದೇವ -ದಾನವರ ಯುದ್ಧ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಕೈಲಾಸಂ ಲಙ್ಘಯಿತ್ವಾ ತು ಸಸೈನ್ಯಬಲವಾಹನಃ ।
ಆಸಸಾದ ಮಹಾತೇಜಾ ಇನ್ದ್ರಲೋಕಂ ದಶಾನನಃ ॥1॥

''ರಾಘವ ! ಮಹಾತೇಜಸ್ವಿಯಾದ ದಶಾನನನು ಸೈನ್ಯ-ಬಲ-ವಾಹನ ಗಳೊಡನೆ ಕೈಲಾಸಪರ್ವತವನ್ನು ದಾಟಿ ಇಂದ್ರಲೋಕಕ್ಕೆ ಹೋದನು.

ದೇವಲೋಕದಲ್ಲಿ ಎಲ್ಲ ಕಡೆಗಳಲ್ಲಿ ಕೇಳಿಬರುತ್ತಿದ್ದ ರಾವಣನ ಸೈನಿಕರ ಕೋಲಾಹಲಶಬ್ದವು ಸಮುದ್ರವನ್ನು ಕಡೆಯುವ ಶಬ್ದದಂತೆಯೇ ಕೇಳಿಬರು ತ್ತಿದ್ದಿತು.

ರಾವಣನು ದೇವಲೋಕವನ್ನಾಕ್ರಮಿಸಲು ಬಂದಿರುವುದನ್ನು ಕೇಳಿ ಇಂದ್ರನು ಸಿಂಹಾಸನದಿಂದೆದ್ದು ಅಲ್ಲಿಗೆ ಆಗಮಿಸಿದ್ದ ಆದಿತ್ಯರು -ವಸು

ಗಳು –ರುದ್ರರು–ಸಾಧ್ಯರು–ಮರುತ್ತುಗಳು –ಇವರೇ ಮೊದಲಾದ ಸಮಸ್ತ ದೇವತೆಗಳಿಗೂ ಹೇಳಿದನು :

ಸಜ್ಜಾ ಭವತ ಯುದ್ಧಾರ್ಥಂ ರಾವಣಸ್ಯ ದುರಾತ್ಮನಃ ॥4॥

''ದೇವತೆಗಳೇ! ದುರಾತ್ಮನಾದ ರಾವಣನೊಡನೆ ಯುದ್ಧ ಮಾಡಲು ಸಿದ್ಧರಾಗಿರಿ.''

ಇಂದ್ರನು ಹೀಗೆ ಹೇಳಲು ಇಂದ್ರನ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವನ್ನು ಹೊಂದಿದ್ದ ಮಹಾಬಲಿಷ್ಠರಾದ ದೇವತೆಗಳು ಕವಚವೇ ಮುಂತಾದುವುಗಳನ್ನು ಧರಿಸಿ ಯುದ್ಧಮಾಡುವುದರಲ್ಲಿ ಶ್ರದ್ಧೆಯುಳ್ಳವ ರಾದರು. ಆದರೂ ಇದರಿಂದ ಇಂದ್ರನಿಗೆ ಧೈರ್ಯವುಂಟಾಗಲಿಲ್ಲ. ರಾವಣನ ವಿಷಯದಲ್ಲಿ ಬಹಳವಾಗಿ ಭಯಗೊಂಡಿದ್ದ ದೇವೇಂದ್ರನು ವಿಷ್ಣುವಿನ ಬಳಿಗೆ ಹೋಗಿ ಹೇಳಿದನು :

'' ವಿಷ್ಣುದೇವನೇ ! ರಾಕ್ಷಸನಾದ ರಾವಣನ ವಿಷಯದಲ್ಲಿ ನಾನು ಈಗೇನು ಮಾಡಲಿ ? ಅತ್ಯಂತಬಲಿಷ್ಠನಾಗಿರುವ ಅವನು ನನ್ನೊಡನೆ ಯುದ್ಧಮಾಡಲು ಬಂದಿದ್ದಾನೆ. ಅವನು ಬ್ರಹ್ಮನ ವರದಾನದಿಂದ ಪ್ರಬಲನಾಗಿಬಿಟ್ಟಿದ್ದಾನೆ. ಅವನ ಈ ಉದ್ಧಟತನಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಬ್ರಹ್ಮನು ಕೊಟ್ಟಿರುವ ವರವನ್ನು ಸತ್ಯವನ್ನಾಗಿ ಮಾಡು ವುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ. ಆದುದರಿಂದ ಈ ಹಿಂದೆ ನಾನು ನಿನ್ನ ಬಲವನ್ನಾಶ್ರಯಿಸಿ ನಮುಚಿ, ವೃತ್ರಾಸುರ, ಬಲ, ನರಕ, ಶಂಬರ – ಇವರೇ ಮುಂತಾದ ರಾಕ್ಷಸರನ್ನು ವಿನಾಶಗೊಳಿಸಿದಂತೆ ಈಗಲೂ ರಾವಣನ ಅಂತ್ಯವಾಗುವಂತೆ ಯಾವುದಾದರೂ ಉಪಾಯವನ್ನು ಯೋಚಿಸು. ದೇವದೇವೇಶನೇ ! ಮಧುಸೂದನ ! ಚರಾಚರಗಳಿಂದ ಸಂಪನ್ನವಾಗಿರುವ ಈ ಮೂರು ಲೋಕಗಳಲ್ಲಿ ನಿನ್ನೊಬ್ಬನ ಹೊರತಾಗಿ ನಮ್ಮೆಲ್ಲರಿಗೂ ಆಶ್ರಯ ವನ್ನು ನೀಡಿ ಸಂರಕ್ಷಿಸುವವರು ಬೇರೆ ಯಾರೂ ಇರುವುದಿಲ್ಲ.

ನೀನೇ ಸನಾತನನಾದ ಶ್ರೀಮನ್ನಾರಾಯಣನಾಗಿರುವೆ. ನಿನ್ನ ನಾಭಿ ಕಮಲದಿಂದಲೇ ಜಗತ್ತಿನ ಉತ್ಪತ್ತಿಯಾಗಿದೆ. ಈ ಮೂರು ಲೋಕಗಳನ್ನು ಸ್ಥಾಪಿಸಿರುವವನೂ ನೀನೇ ಆಗಿರುವೆ. ನೀನೇ ನನ್ನನ್ನು ದೇವರಾಜ

ಪದವಿಯಲ್ಲಿ ನಿಯೋಜಿಸಿರುವೆ. ಚರಾಚರಗಳಿಂದ ಕೂಡಿರುವ ಈ ಮೂರು ಲೋಕಗಳೂ ನಿನ್ನಿಂದಲೇ ಹುಟ್ಟಿವೆ. ಯುಗದ ಅಂತ್ಯದಲ್ಲಿ ಈ ಮೂರು ಲೋಕಗಳೂ ನಿನ್ನಲ್ಲಿಯೇ ಲೀನವಾಗುತ್ತವೆ. ಆದುದರಿಂದ ದೇವದೇವನೇ! ನಾನು ರಾವಣನೊಡನೆ ಮಾಡುವ ಯುದ್ಧದಲ್ಲಿ ಜಯಗಳಿಸುವ ಯಾವುದಾದರೂ ಉಪಾಯವನ್ನು ಹೇಳು. ಅಥವಾ ಚಕ್ರ-ಖಡ್ಗಗಳನ್ನು ಧರಿಸಿ ನೀನಾದರೂ ಅವನೊಡನೆ ಯುದ್ಧ ಮಾಡುವೆಯಾ ?''

ಶಕ್ರನು ಹೀಗೆ ಹೇಳಲು ಪ್ರಭುವಾದ ದೇವದೇವನಾದ ನಾರಾಯಣನು ಹೇಳಿದನು :

'' ದೇವರಾಜನೇ ! ನೀನು ಭಯಪಡುವ ಕಾರಣವಿಲ್ಲ. ನನ್ನ ಈ ಮಾತನ್ನು ಕೇಳು. ದುಷ್ಟಾತ್ಮನಾದ ರಾವಣನೊಡನೆ ದೇವ-ದಾನವರು ಒಟ್ಟುಗೂಡಿ ಯುದ್ಧಮಾಡಿದರೂ ಅವನನ್ನು ಸಂಹರಿಸುವ ಸಾಧ್ಯತೆಯಿಲ್ಲ. ಜಯಿಸುವ ಸಾಧ್ಯತೆಯೂ ಇಲ್ಲ. ಬ್ರಹ್ಮನಿಂದ ವರವನ್ನು ಪಡೆದಿರುವ ಕಾರಣದಿಂದ ಅವನೀಗ ದುರ್ಜಯನಾಗಿದ್ದಾನೆ. ಮಗನೊಡನೆ ಬಂದಿರುವ ಬಲೋತ್ಕಟನಾದ ಆ ರಾವಣನು ಸ್ವರ್ಗಲೋಕದಲ್ಲಿ ಮಹತ್ತಾದ ವಿಧ್ವಂಸನಕೃತ್ಯವನ್ನೇ ಮಾಡುತ್ತಾನೆ. ನಾನು ಈ ವಿಷಯವನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಂಡಿರುವೆನು. ಚಕ್ರಧಾರಿಯಾಗಿ ನನ್ನನ್ನೇ ಯುದ್ಧಮಾಡುವಂತೆಯೂ ನೀನು ಹೇಳಿದೆಯಲ್ಲವೇ! ನಾನೀಗ ಅವನಿಗೆ ಎದುರಾಗಿ ನಿಂತು ಯುದ್ಧಮಾಡುವುದಿಲ್ಲ.

ನಾಹತ್ವಾ ಸಮರೇ ಶತ್ರುಂ ವಿಷ್ಣುಃ ಪ್ರತಿನಿವರ್ತತೇ ।
ದುರ್ಲಭಶ್ಚೈವ ಕಾಮೋಽದ್ಯ ವರಗುಪ್ತಾದ್ಧಿ ರಾವಣಾತ್ ॥18॥

ವಿಷ್ಣುವಾದ ನಾನು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸದೆ ಎಂದಿಗೂ ಹಿಂದಿರುಗತಕ್ಕವನೇ ಅಲ್ಲ. ಆದರೆ ರಾವಣನೀಗ ಬ್ರಹ್ಮನ ವರದಿಂದ ರಕ್ಷಿಸಲ್ಪಟ್ಟಿರುವುದರಿಂದ ರಾವಣನೊಡನೆ ನಾನೀಗ ಯುದ್ಧಕ್ಕೆ ಹೋದರೆ ಅವನನ್ನು ಸಂಹರಿಸಿಯೇ ಹಿಂದಿರುಗುವೆನೆಂಬ ನನ್ನ ಆಶೆಯು ಪೂರ್ಣವಾಗಲಾರದು.

ಶತಕ್ರತುವೇ ! ಆದರೆ ನಿನ್ನ ಬಳಿಯಲ್ಲಿ ನಾನು ಈ ಒಂದು ಪ್ರತಿಜ್ಞೆ

ಯನ್ನು ಮಾಡಬಲ್ಲೆನು. ಸಮಯವು ಸನ್ನಿಹಿತವಾದಾಗ ನಾನೇ ಅವನ ಮರಣಕ್ಕೆ ಕಾರಣನಾಗುತ್ತೇನೆ. ಸೈನ್ಯಸಮೇತನಾದ ರಾವಣನನ್ನು ನಾನೇ ಸಂಹರಿಸತಕ್ಕವನು. ಅವನ ಮರಣಕಾಲವು ಸನ್ನಿಹಿತವಾಗಿರುವುದನ್ನು ತಿಳಿದೊಡನೆಯೇ ಅವನನ್ನು ಸಂಹರಿಸಿ ದೇವತೆಗಳನ್ನು ಆನಂದಗೊಳಿಸುತ್ತೇನೆ.

ದೇವರಾಜನೇ ! ನಿನಗೆ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳಿರುವೆನು. ಮಹಾಬಲನೇ! ನೀನು ಭಯವನ್ನು ದೂರಮಾಡಿ ದೇವತೆಗಳೊಡನೆ ಸೇರಿಕೊಂಡು ರಾವಣನೊಡನೆ ಯುದ್ಧಮಾಡು.''

ವಿಷ್ಣುವು ಹೀಗೆ ಹೇಳಲು ಇಂದ್ರನು ಹಿಂದಿರುಗಿದನು. ಬಳಿಕ ರುದ್ರಾದಿತ್ಯವಸುಗಳೂ, ಮರುದ್ಗಣಗಳೂ ಅಶ್ವಿನೀದೇವತೆಗಳೂ ಇವರೇ ಮುಂತಾಗಿ ಸಮಸ್ತದೇವತೆಗಳೂ ಯುದ್ಧ ಸನ್ನದ್ಧರಾಗಿ ಅಮರಾವತಿಯಿಂದ ಹೊರಹೊರಟು ರಾಕ್ಷಸರನ್ನು ಎದುರಿಸಲು ಮುಂದಾದರು. ಈ ಮಧ್ಯೆ ರಾತ್ರಿಯು ಕಳೆಯುವುದರಲ್ಲಿದ್ದಾಗ ಎಲ್ಲ ಕಡೆಗಳಿಂದಲೂ ಯುದ್ಧಸನ್ನದ್ಧರಾಗಿ ನಿಂತಿದ್ದ ರಾವಣಸೈನಿಕರ ಕೋಲಾಹಲಶಬ್ದವು ಕೇಳಿಬರುತ್ತಿದ್ದಿತು. ಮಹಾಪರಾಕ್ರಮಿಗಳಾದ ರಾಕ್ಷಸಸೈನಿಕರು ಬೆಳಗಾಗುತ್ತಲೇ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ಹರ್ಷೋತ್ಸಾಹಗಳಿಂದ ದೇವತೆಗಳೊಡನೆ ಯುದ್ಧ ಮಾಡಲು ಮುನ್ನಡೆದರು. ರಣರಂಗದಲ್ಲಿ ಅಪಾರವಾಗಿದ್ದ ರಾಕ್ಷಸ ಸೈನ್ಯವನ್ನು ಕಂಡು ದೇವಸೈನ್ಯದಲ್ಲಿ ಕಳವಳವುಂಟಾಯಿತು. ಅನಂತರ ದೇವತೆಗಳಿಗೂ – ದಾನವ– ರಾಕ್ಷಸರಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಅಸ್ತ್ರ–ಶಸ್ತ್ರಗಳ ಪರಸ್ಪರ ಘರ್ಷಣೆಗಳಿಂದ ಭಯಂಕರವಾದ ಕೋಲಾಹಲಶಬ್ದವು ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದ್ದಿತು. ಭೀಕರರಾಗಿ ಕಾಣುತ್ತಿದ್ದ ರಾವಣನ ಅಮಾತ್ಯರು ರಾವಣನ ಸಲುವಾಗಿ ಯುದ್ಧ ಮಾಡಲು ಮುಂದಾದರು. ಮಾರೀಚ, ಪ್ರಹಸ್ತ, ಮಹಾಪಾರ್ಶ್ವ, ಮಹೋದರ, ಅಕಂಪನ, ನಿಕುಂಭ, ಶುಕ, ಸಾರಣ, ಸಂಹ್ರಾದ, ಧೂಮಕೇತು, ಮಹಾದಂಷ್ಟ್ರ, ಘಟೋದರ, ಜಂಬುಮಾಲೀ, ಮಹಾಹ್ರಾದ, ವಿರೂಪಾಕ್ಷ, ಸುಪ್ತಘ್ನ, ಯಜ್ಞಕೋಪ, ದುರ್ಮುಖ, ದೂಷಣ, ಖರ, ತ್ರಿಶಿರಸ, ಕರವೀರಾಕ್ಷ, ಸೂರ್ಯಶತ್ರು, ಮಹಾಕಾಯ, ಅತಿಕಾಯ, ದೇವಾಂತಕ, ನರಾಂತಕ ಇವರೇ ಮೊದಲಾದ ರಾಕ್ಷಸನಾಯಕರಿಂದ ಪರಿವೃತನಾದ ರಾವಣನ

ತಾತನಾದ ಸುಮಾಲಿಯು ದೇವತೆಗಳ ಸೈನ್ಯದಲ್ಲಿ ನುಗ್ಗಿದನು. ಸುಮಾಲಿಯು ಕುಪಿತನಾಗಿ ನಾನಾಪ್ರಕಾರವಾದ ನಿಶಿತವಾದ ಆಯುಧಗಳಿಂದ ಸಮಸ್ತದೇವತೆಗಳನ್ನೂ-ಬಿರುಗಾಳಿಯು ಮೇಘಗಳನ್ನು ಧ್ವಂಸಮಾಡುವಂತೆ ಧ್ವಂಸಮಾಡಿದನು.

ರಾಘವ! ರಾಕ್ಷಸಸೈನಿಕರಿಂದ ಸತತವಾಗಿ ಪ್ರಹರಿಸಲ್ಪಡುತ್ತಿದ್ದ ದೇವ ಸೈನಿಕರು ಸಿಂಹದಿಂದ ಓಡಿಸಲ್ಪಟ್ಟ ಮೃಗಗಳಂತೆ - ದಿಕ್ಕಾಪಾಲಾಗಿ ಓಡಿ ಹೋದರು.

ಅದೇ ಸಮಯಕ್ಕೆ ಸರಿಯಾಗಿ ವಸುಗಳಲ್ಲಿ ಎಂಟನೆಯವನಾದ ಸಾವಿತ್ರನೆಂಬ ಹೆಸರಿನಿಂದ ವಿಖ್ಯಾತನಾಗಿದ್ದ ಶೂರನಾದ ವಸುವು ಸಮರಾಂಗಣವನ್ನು ಹೊಕ್ಕನು. ಅವನು ನಾನಾವಿಧವಾದ ಆಯುಧಗಳನ್ನು ಹೊಂದಿದ್ದ ಉತ್ಸಾಹಿತರಾಗಿದ್ದ ದೇವಸೈನಿಕರಿಂದ ಪರಿವೃತನಾಗಿದ್ದನು. ರಾಕ್ಷಸಸೈನಿಕರನ್ನು ಸತತವಾದ ಬಾಣಪ್ರಹಾರಗಳಿಂದ ಭಯಗೊಳಿಸುತ್ತಾ ಸಾವಿತ್ರನು ರಣರಂಗಕ್ಕೆ ಬಂದನು. ಒಡನೆಯೇ ಆದಿತ್ಯನ ಇಬ್ಬರು ಮಕ್ಕಳಾದ, ಮಹಾಪರಾಕ್ರಮಿಗಳಾದ, ಭಯರಹಿತರಾಗಿದ್ದ ತ್ವಷ್ಟಾ ಮತ್ತು ಪೂಷಾ ಎಂಬುವರು ತಮ್ಮ ಅಪಾರವಾದ ಸೈನ್ಯಗಳೊಡನೆ ರಣರಂಗವನ್ನು ಪ್ರವೇಶಿಸಿದರು. ಯುದ್ಧದಲ್ಲಿ ಹಿಂದಿರುಗದಿದ್ದ ರಾಕ್ಷಸರ ಕೀರ್ತಿಯನ್ನು ಕೇಳಿ ಕ್ರುದ್ಧ ರಾಗಿದ್ದ ದೇವತೆಗಳಿಗೂ ರಾಕ್ಷಸರಿಗೂ ಘೋರವಾದ ಯುದ್ಧವು ಪ್ರಾರಂಭ ವಾಯಿತು. ಅನಂತರ ಸಮಸ್ತರಾಕ್ಷಸರೂ ಸಮರಭೂಮಿಯಲ್ಲಿದ್ದ ದೇವತೆ ಗಳನ್ನು ನಾನಾಪ್ರಕಾರವಾದ ಆಯುಧಗಳಿಂದ ಪ್ರಹರಿಸತೊಡಗಿದರು. ಅದೇ ರೀತಿಯಲ್ಲಿ ದೇವತೆಗಳೂ ಕೂಡ ಮಹಾಬಲಪರಾಕ್ರಮಿಗಳಾಗಿದ್ದ ಭಯಂಕರರಾಗಿದ್ದ ರಾಕ್ಷಸರನ್ನು ಫಳ-ಫಳಿಸುತ್ತಿದ್ದ ಶಸ್ತ್ರಗಳಿಂದ ಸಂಹರಿಸಿ ಯಮ ಲೋಕಕ್ಕೆ ಕಳುಹಿಸುತ್ತಿದ್ದರು. ಆ ಮಧ್ಯದಲ್ಲಿ ಸುಮಾಲೀ ಎಂಬ ರಾಕ್ಷಸನು ಕುಪಿತನಾಗಿ ಹಲವಾರು ಬಗೆಯ ಆಯುಧಗಳಿಂದ ದೇವಸೈನ್ಯವನ್ನು ಆಕ್ರಮಿಸಿದನು. ನಿಶಿತವಾದ ಆಯುಧಗಳ ಸತತಪ್ರಯೋಗದಿಂದ ಸುಮಾಲಿಯು ದೇವಸೈನ್ಯವನ್ನು ಬಿರುಗಾಳಿಯು ಮೋಡಗಳನ್ನು ಚದುರಿಸುವಂತೆ ಚದುರಿಸತೊಡಗಿದನು. ಬಾಣಗಳ ಮಹಾವರ್ಷಗಳಿಂದಲೂ ಭಯಂಕರವಾದ ಶೂಲ-ಪ್ರಾಸಗಳಿಂದಲೂ ಸತತವಾಗಿ ಪ್ರಹರಿಸಲ್ಪಡುತ್ತಿದ್ದ ದೇವತೆಗಳು ಸಂಘ

ಟಿತರಾಗಿ ಯುದ್ಧದಲ್ಲಿ ನಿಲ್ಲದೇ ಹೋದರು. ಹೀಗೆ ಸುಮಾಲಿಯು ದೇವತೆಗಳನ್ನು ಬಡಿದೋಡಿಸುತ್ತಿರಲು ವಸುಗಳಲ್ಲಿ ಎಂಟನೆಯವನಾದ ಸಾವಿತ್ರನು ಪರಮಕ್ರುದ್ಧನಾಗಿ ತನ್ನ ಕಡೆಯ ರಥಸೈನಿಕರೊಡನೆ ಸುಮಾಲಿಯನ್ನು ಎದುರಿಸಿ ನಿಂತನು. ಮಹಾತೇಜಸ್ವಿಯಾದ ಸಾವಿತ್ರನು - ದೇವತೆಗಳನ್ನು ಸದೆಬಡಿಯುತ್ತಾ ಮುಂದೆ–ಮುಂದೆ ಹೋಗುತ್ತಿದ್ದ ಸುಮಾಲಿಯನ್ನು ತನ್ನ ಬಾಹುಬಲ – ಪರಾಕ್ರಮಗಳಿಂದ ತಡೆದು ನಿಲ್ಲಿಸಿದನು. ಯುದ್ಧದಲ್ಲಿ ಹಿಂದಿರುಗದಿದ್ದ ಸುಮಾಲಿಗೂ ಮತ್ತು ಸಾವಿತ್ರನಿಗೂ ರೋಮಾಂಚಕರವಾದ ಮಹಾಯುದ್ಧವು ಪ್ರಾರಂಭವಾಯಿತು. ಬಳಿಕ ಮಹಾತ್ಮನಾದ ಸಾವಿತ್ರನು ತನ್ನಲ್ಲಿದ್ದ ಮಹಾಬಾಣಗಳಿಂದ ಸರ್ಪಗಳಿಂದ ಹೂಡಲ್ಪಟ್ಟಿದ್ದ ಸುಮಾಲಿಯ ರಥವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿದನು. ಹೀಗೆ ನೂರು ಬಾಣಗಳಿಂದ ಸುಮಾಲಿಯ ರಥವನ್ನು ಧ್ವಂಸಮಾಡಿ ರಾಕ್ಷಸನನ್ನು ವಧಿಸುವ ಸಲುವಾಗಿ ಗದೆಯನ್ನೆತ್ತಿಕೊಂಡನು. ಅಗ್ರಭಾಗದಲ್ಲಿ ಬೆಂಕಿಯಂತೆ ಪ್ರಜ್ವಲಿಸುತ್ತಿದ್ದ ಮತ್ತು ಕಾಲದಂಡದಂತೆಯೇ ಕಾಣುತ್ತಿದ್ದ ಗದೆಯಿಂದ ಸುಮಾಲಿಯ ತಲೆಯಲ್ಲಿ ಬಲವಾಗಿ ಪ್ರಹರಿಸಿದನು. ಉಲ್ಕೆಯಂತೆಯೇ ಕಾಣುತ್ತಿದ್ದ ಆ ಗದೆಯು ಸುಮಾಲಿಯ ತಲೆಯ ಮೇಲೆ ಬೀಳುತ್ತಿದ್ದಾಗ ಇಂದ್ರನು ಪ್ರಯೋಗಿಸಿದ ವಜ್ರಾಯುಧವು ಗರ್ಜನೆಮಾಡುತ್ತಾ ಪರ್ವತಶಿಖರದ ಮೇಲೆ ಬೀಳುತ್ತಿರುವಂತೆಯೇ ಕಾಣುತ್ತಿದ್ದಿತು. ಗದೆಯು ಸುಮಾಲಿಯನ್ನು ಅಪ್ಪಳಿಸಿದ ಮರುಕ್ಷಣದಲ್ಲಿಯೇ ಅವನ ಶರೀರದ ಮೂಳೆಯಾಗಲೀ, ಮಾಂಸವಾಗಲೀ, ತಲೆಯಾಗಲೀ ಕಾಣಲೇ ಇಲ್ಲ. ಗದೆಯ ಪ್ರಹಾರದಿಂದ ಎಲ್ಲವೂ ಭಸ್ಮವಾಗಿ ಬಿಟ್ಟಿದ್ದಿತು.

ನಾಯಕನಾದ ಸುಮಾಲಿಯೇ ಹತನಾದುದನ್ನು ಕಂಡು ಅವನ ಅನುಯಾಯಿಗಳಾದ ರಾಕ್ಷಸರೆಲ್ಲರೂ ಅರಚುತ್ತಾ ಗುಂಪು ಗುಂಪಾಗಿ ಪಲಾಯನ ಮಾಡಿದರು. ವಸುವಿನ ಆಯುಧಗಳ ಪ್ರಹಾರವನ್ನು ತಾಳಲಾರದೇ ಓಡಿ ಹೋಗುತ್ತಿದ್ದ ರಾಕ್ಷಸರಿಗೆ ಪುನಃ ಯುದ್ಧಮಾಡಲು ಸಾಧ್ಯವಾಗಲಿಲ್ಲ.

27ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 28ನೆಯ ಸರ್ಗ

ಮೇಘನಾದ ಮತ್ತು ಜಯಂತರ ಯುದ್ಧ : ಪುಲೋಮನು ಜಯಂತನನ್ನು ಬೇರೆಡೆಗೆ ಕರೆದೊಯ್ದುದು : ದೇವರಾಜನಾದ ಇಂದ್ರನು ಯುದ್ಧಭೂಮಿಗೆ ಬಂದುದು : ರುದ್ರರಿಂದಲೂ ಮರುದ್ಗಣಗಳಿಂದಲೂ ರಾಕ್ಷಸರ ಸಂಹಾರ : ಇಂದ್ರ -ರಾವಣರ ಯುದ್ಧ

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ಸುಮಾಲಿನಂ ಹತಂ ದೃಷ್ಟ್ವಾ ವಸುನಾ ಭಸ್ಮಸಾತ್ಕೃತಮ್ ।
ಸ್ವಸೈನ್ಯಂ ವಿದ್ರುತಂ ಚಾಪಿ ಲಕ್ಷಯಿತ್ವಾರ್ದಿತಂ ಸುರೈಃ ॥1॥
ತತಃ ಸ ಬಲವಾನ್ಕ್ರುದ್ಧೋ ರಾವಣಸ್ಯ ಸುತಸ್ತದಾ ।
ನಿವರ್ತ್ಯ ರಾಕ್ಷಸಾನ್ಸರ್ವಾನ್ಮೇಘನಾದೋ ವ್ಯವಸ್ಥಿತಃ ॥2॥

''ಸುಮಾಲಿಯು ವಸುವಿನಿಂದ ಭಸ್ಮಮಾಡಲ್ಪಟ್ಟು ಮರಣಹೊಂದಿದು ದನ್ನೂ ತಮ್ಮ ಸೈನ್ಯವು ಓಡಿಹೋಗುತ್ತಿರುವುದನ್ನೂ ನೋಡಿ ಕ್ರುದ್ಧನಾದ, ಮಹಾಬಲಶಾಲಿಯಾದ, ರಾವಣನ ಮಗನಾದ ಮೇಘನಾದನು ಎಲ್ಲ ರಾಕ್ಷಸ ಸೈನಿಕರನ್ನೂ ಹುರಿದುಂಬಿಸುತ್ತಾ ಹಿಂದಿರುಗಿಸಿ ಯುದ್ಧಸನ್ನದ್ಧನಾಗಿ ನಿಂತನು.

ಮಹಾರಥಿಯಾದ, ವೀರನಾದ ಮೇಘನಾದನು ಇಚ್ಛಾನುಸಾರವಾಗಿ ಹೋಗುವ, ಅಗ್ನಿಸದೃಶವಾದ ತೇಜಸ್ಸಿನಿಂದ ಕೂಡಿದ್ದ ರಥದಲ್ಲಿ ಕುಳಿತು ಕಾಡುಗಿಚ್ಚು ಅರಣ್ಯದಲ್ಲಿ ಎಲ್ಲೆಡೆಗೂ ಹರಡಿಕೊಂಡು ಪ್ರಜ್ವಲಿಸುವಂತೆ - ದೇವಸೇನೆಯನ್ನು ಆಕ್ರಮಿಸಿದನು. ನಾನಾವಿಧವಾದ ಆಯುಧಗಳನ್ನು ಧರಿಸಿದ್ದ ಮೇಘನಾದನು ರಣರಂಗಕ್ಕೆ ಪ್ರವೇಶಿಸಲು ಅವನನ್ನು ನೋಡು ತ್ತಿದ್ದಂತೆಯೇ ದೇವಸೈನಿಕರು ಭಯಗೊಂಡು ದಿಕ್ಕಾಪಾಲಾಗಿ ಪಲಾಯನ ಮಾಡಿದರು. ಆ ಸಮಯದಲ್ಲಿ ಯುದ್ಧಮಾಡಬೇಕೆಂಬ ಇಚ್ಛೆಯಿಂದ ರಣರಂಗಕ್ಕೆ ಬಂದಿದ್ದ ಮೇಘನಾದನ ಸಮ್ಮುಖದಲ್ಲಿ ಯಾರೂ ನಿಲ್ಲಲಾಗಲಿಲ್ಲ.

ಹಾಗೆ ಓಡಿಹೋಗುತ್ತಿದ್ದ ದೇವಸೈನಿಕರನ್ನು ಮಾತಿನಿಂದ ಹುರಿದುಂಬಿಸುತ್ತಾ ಇಂದ್ರನು ಹೇಳಿದನು :

ನ ಭೇತವ್ಯಂ ನ ಗನ್ತವ್ಯಂ ನಿವರ್ತಧ್ವಂ ರಣೇ ಸುರಾಃ।
ಏಷ ಗಚ್ಛತಿ ಪುತ್ರೋ ಮೇ ಯುದ್ಧಾರ್ಥಮಪರಾಜಿತಃ ॥6॥

''ದೇವತೆಗಳೇ ! ಭಯಪಡಬೇಡಿರಿ ; ಹೋಗಬೇಡಿರಿ. ಯುದ್ಧಕ್ಕೆ ಹಿಂದಿರುಗಿರಿ. ಅಪರಾಜಿತನಾದ ನನ್ನ ಮಗನಾದ ಜಯಂತನು ಈಗಲೇ ನಿಮಗೆ ಮುಂದಾಳಾಗಿ ರಾಕ್ಷಸರೊಡನೆ ಯುದ್ಧಮಾಡಲು ಬರುತ್ತಿದ್ದಾನೆ.''

ಅನಂತರ ಇಂದ್ರನ ಮಗನಾದ ಜಯಂತನು ಅದ್ಭುತವಾದ ರಥದಲ್ಲಿ ಕುಳಿತು ರಣಭೂಮಿಗೆ ಆಗಮಿಸಿದನು. ಬಳಿಕ ಎಲ್ಲ ದೇವಸೈನಿಕರೂ ಶಚಿಯ ಮಗನಾದ ಜಯಂತನನ್ನು ನಾಲ್ಕು ಕಡೆಗಳಿಂದಲೂ ಸುತ್ತುವರಿದು ರಣಭೂಮಿಗೆ ಬಂದು ರಾವಣನ ಮಗನಾದ ಮೇಘನಾದನ ಮೇಲೆ ಶಸ್ತ್ರಗಳ ಮಳೆಗರೆಯಲು ಪ್ರಾರಂಭಿಸಿದರು. ಮಹೇಂದ್ರನ ಮಗನಿಗೂ ರಾಕ್ಷಸೇಂದ್ರನ ಮಗನಿಗೂ ಹಿಂದೆ ದೇವ – ರಾಕ್ಷಸರ ನಡುವೆ ನಡೆದ ಮಹಾಯುದ್ಧದಂತೆಯೇ ಭಯಂಕರವಾದ ಯುದ್ಧವು ಪ್ರಾರಂಭವಾಯಿತು.

ರಾವಣಕುಮಾರನಾದ ಮೇಘನಾದನು ಜಯಂತನ ಸಾರಥಿಯಾದ ಮಾತಲಿಯ ಮಗನಾದ ಗೋಮುಖನ ಮೇಲೆ ಸುವರ್ಣಭೂಷಿತವಾದ ಬಾಣಗಳನ್ನು ಪ್ರಯೋಗಿಸಿದನು. ಅದಕ್ಕೆ ಪ್ರತಿಯಾಗಿ ಶಚೀಪುತ್ರನಾದ ಜಯಂತನೂ ಮೇಘನಾದನ ಸಾರಥಿಯನ್ನು ಬಾಣಗಳಿಂದ ಗಾಯಗೊಳಿಸಿ ದನು. ಅದರಿಂದ ಕುಪಿತನಾದ ಮೇಘನಾದನು ಎಲ್ಲ ಕಡೆಗಳಿಂದಲೂ ಬಾಣಗಳನ್ನು ಬಿಡುತ್ತಾ ಜಯಂತನನ್ನು ಕ್ಷತ–ವಿಕ್ಷತನನ್ನಾಗಿ ಮಾಡಿದನು. ಬಲಿಷ್ಠನಾದ ಮೇಘನಾದನು ಕಣ್ಣುಗಳನ್ನರಳಿಸಿಕೊಂಡು ಜಯಂತನನ್ನು ಬಾಣಗಳ ವರ್ಷದಿಂದ ಮುಚ್ಚಿಬಿಟ್ಟನು. ನಾನಾವಿಧವಾದ ನಿಶಿತವಾದ ಅಲಗುಗಳಿಂದ ಕೂಡಿದ್ದ ಸಾವಿರಾರು ಅಸ್ತ್ರ–ಶಸ್ತ್ರಗಳನ್ನು ದೇವಸೈನ್ಯದ ಮೇಲೆ ಸತತವಾಗಿ ಸುರಿಸತೊಡಗಿದನು. ಶತಘ್ನೀ, ಮುಸಲ, ಪ್ರಾಸ, ಗದೆ, ಖಡ್ಗ, ಗಂಡುಗೊಡಲಿ – ಇವೇ ಮುಂತಾದ ಆಯುಧಗಳನ್ನೂ ದೊಡ್ಡ–ದೊಡ್ಡ ಪರ್ವತ ಶಿಖರಗಳನ್ನೂ ದೇವಸೈನ್ಯದ ಮೇಲೆ ಸುರಿಸಿದನು. ದೇವತೆಗಳ ಸೈನ್ಯ ವನ್ನು

ಸತತವಾಗಿ ಸಂಹರಿಸುತ್ತಿದ್ದ ಮೇಘನಾದನು ಮಾಯೆಯಿಂದ ಸುತ್ತಲೂ ಕತ್ತಲು ಕವಿಯುವಂತೆ ಮಾಡಿದನು. ಅದರಿಂದ ಸಮಸ್ತಲೋಕಗಳೂ ವ್ಯಾಕುಲಗೊಂಡುವು. ಜಯಂತನ ಸುತ್ತಲೂ ನಿಂತಿದ್ದ ದೇವಸೇನೆಯು ಮೇಘನಾದನ ಸತತವಾದ ಬಾಣಪ್ರಹಾರಗಳಿಂದ ಪೀಡಿಸಲ್ಪಟ್ಟು ವಿಷಣ್ಣವಾಯಿತು. ಮೇಘನಾದನ ಮಾಯೆಯಿಂದ ರಣರಂಗದಲ್ಲಿ ಕತ್ತಲು ಕವಿದಿದ್ದ ಕಾರಣ ರಾಕ್ಷಸರು ಮತ್ತು ದೇವತೆಗಳು ಒಬ್ಬರನ್ನೊಬ್ಬರು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಯಾರು ಯಾರನ್ನು ಪ್ರಹರಿಸಬೇಕೆಂಬುದೇ ತಿಳಿಯದೇ ರಾಕ್ಷಸ– ದೇವಸೈನಿಕರು ಎಲ್ಲ ಕಡೆಗಳಲ್ಲಿಯೂ ಚದುರಿಹೋದರು. ಕೆಲವು ಸಮಯದಲ್ಲಿ ದೇವತೆಗಳು ದೇವತೆಗಳನ್ನೇ ಪ್ರಹರಿಸುತ್ತಿದ್ದರು. ರಾಕ್ಷಸರು ರಾಕ್ಷಸರನ್ನೇ ಸಂಹರಿಸುತ್ತಿದ್ದರು. ಮತ್ತೆ ಕೆಲವರು ಏನು ಮಾಡಬೇಕೆಂಬುದೇ ತಿಳಿಯದೇ ಓಡಿಹೋಗುತ್ತಿದ್ದರು. ಆ ಸಮಯದಲ್ಲಿ ವೀರ್ಯವಂತನಾದ ಪುಲೋಮನೆಂಬ ದೈತ್ಯಶ್ರೇಷ್ಠನು ಜಯಂತನನ್ನು ಎತ್ತಿಕೊಂಡು ಬಹಳ ದೂರಕ್ಕೆ ಹೊರಟುಹೋದನು. ಪುಲೋಮನು ಶಚೀದೇವಿಯ ತಂದೆ. ಜಯಂತನ ಮಾತಾಮಹನು. ಪುಲೋಮನು ಮೊಮ್ಮಗನನ್ನೆತ್ತಿಕೊಂಡು ಸಮುದ್ರವನ್ನು ಹೊಕ್ಕನು. ಜಯಂತನು ಅದೃಶ್ಯನಾದುದನ್ನು ಕಂಡು ವ್ಯಥಿತರಾದ ಸಮಸ್ತದೇವತೆಗಳೂ ದಿಕ್ಕಾಪಾಲಾಗಿ ಓಡಿಹೋದರು.

ಕ್ರುದ್ಧನಾಗಿದ್ದ ಮೇಘನಾದನು ಸೈನಿಕರಿಂದ ಪರಿವೃತನಾಗಿ ಗರ್ಜನೆ ಮಾಡುತ್ತಾ ಪಲಾಯನಮಾಡುತ್ತಿದ್ದ ದೇವಸೇನೆಯ ಬೆನ್ನಟ್ಟಿ ಹೋದನು.

ಪುತ್ರನು ಅದೃಶ್ಯನಾದುದನ್ನೂ - ದೇವತೆಗಳು ಓಡಿಹೋಗುತ್ತಿರುವುದನ್ನೂ ನೋಡಿ ದೇವೇಂದ್ರನು ಮಾತಲಿಗೆ ರಥವನ್ನು ಸಜ್ಜುಗೊಳಿಸಿ ನಿಲ್ಲಿಸುವಂತೆ ಹೇಳಿದನು. ಒಡನೆಯೇ ಮಾತಲಿಯು ಸಮಸ್ತಯುದ್ಧಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದ ಶತ್ರುಭಯಂಕರವಾದ ಭೀಮಾಕಾರದ ರಥವನ್ನು ಸಿದ್ಧಗೊಳಿಸಿದನು. ಮಾತಲಿಯಿಂದ ನಡೆಸಲ್ಪಡುತ್ತಿದ್ದ ಆ ಮಹಾರಥವು ಅತ್ಯಂತವೇಗವುಳ್ಳದ್ದಾಗಿದ್ದಿತು. ಮಹಾಬಲಿಷ್ಠವಾದ, ಮಿಂಚಿನಿಂದ ಕೂಡಿದ ಮತ್ತು ಗಾಳಿಯಿಂದ ಚದುರಿಸಲ್ಪಟ್ಟ ದೊಡ್ಡ-ದೊಡ್ಡ ಮೇಘಗಳು ರಥದ ಮುಂಭಾಗದಲ್ಲಿ ಭಯಂಕರವಾಗಿ ಶಬ್ದ ಮಾಡುತ್ತಿದ್ದುವು. ದೇವೇಂದ್ರನು

ಯುದ್ಧಕ್ಕೆ ಹೊರಟ ಸಮಯದಲ್ಲಿ ಗಂಧರ್ವರೆಲ್ಲರೂ ಒಟ್ಟಾಗಿ ನಾನಾವಿಧವಾದ ವಾದ್ಯಗಳನ್ನು ಬಾರಿಸುತ್ತಿದ್ದರು. ಅಪ್ಸರೆಯರು ನೃತ್ಯಮಾಡುತ್ತಿದ್ದರು. ಅನಂತರ ದೇವರಾಜನು ರುದ್ರರಿಂದಲೂ, ವಸುಗಳಿಂದಲೂ, ಆದಿತ್ಯರಿಂದಲೂ, ಅಶ್ವಿನೀಕುಮಾರರಿಂದಲೂ, ಮರುದ್ಗಣಗಳಿಂದಲೂ ಪರಿವೃತನಾಗಿ ನಾನಾವಿಧವಾದ ಆಯುಧಗಳೊಡನೆ ಅಮರಾವತಿಯಿಂದ ಹೊರಹೊರಟನು. ದೇವೇಂದ್ರನು ಯುದ್ಧಕ್ಕೆ ಹೊರಡುತ್ತಿದ್ದಾಗ ಗಾಳಿಯು ಕರ್ಕಶವಾಗಿ ಬೀಸುತ್ತಿದ್ದಿತು. ಸೂರ್ಯನು ಕಾಂತಿಹೀನನಾಗಿದ್ದನು. ಆಕಾಶದಿಂದ ದೊಡ್ಡ-ದೊಡ್ಡ ಉಲ್ಕೆಗಳು ಭೂಮಿಗೆ ಬೀಳುತ್ತಿದ್ದುವು. ಈ ಮಧ್ಯದಲ್ಲಿ ಶೂರನಾದ, ಪ್ರತಾಪವಂತನಾದ ದಶಗ್ರೀವನು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ದಿವ್ಯವಾದ ರಥವನ್ನು ಹತ್ತಿದನು. ಆ ರಥದಲ್ಲಿ ದೊಡ್ಡದಾದ ಶರೀರಗಳನ್ನು ಹೊಂದಿದ್ದ ರೋಮಾಂಚಕರವಾದ ಸರ್ಪಗಳು ತುಂಬಿಕೊಂಡಿದ್ದುವು. ಅವುಗಳ ಉಸಿರಾಟದ ಗಾಳಿಯಿಂದ ಯುದ್ಧಸ್ಥಳದಲ್ಲಿ ಆ ಮಹಾರಥವು ಪ್ರಜ್ವಲಿಸುತ್ತಿರುವಂತೆಯೇ ಕಾಣುತ್ತಿದ್ದಿತು. ದೈತ್ಯರಿಂದಲೂ ರಾಕ್ಷಸರಿಂದಲೂ ಅದು ಪರಿವೃತವಾಗಿದ್ದಿತು. ಯುದ್ಧರಂಗಕ್ಕೆ ಹೋಗುತ್ತಿದ್ದ ಆ ಮಹಾರಥವು ರಣರಂಗದಲ್ಲಿ ನಿಂತಿದ್ದ ಮಹೇಂದ್ರನ ರಥಕ್ಕೆ ಎದುರಾಗಿ ನಿಂತಿತು. ಮಗನನ್ನು ಯುದ್ಧಮಾಡದಂತೆ ತಡೆಯುತ್ತಾ ರಾವಣನು ಯುದ್ಧಸನ್ನದ್ಧನಾಗಿ ನಿಂತನು. ತಂದೆಯ ಮಾತಿನಂತೆ ಮೇಘನಾದನು ಯುದ್ಧದಿಂದ ಹಿಂದಿರುಗಿ ತನ್ನ ರಥದಲ್ಲಿ ಸ್ವಸ್ಥನಾಗಿ ಕುಳಿತನು. ಅನಂತರ ದೇವತೆಗಳಿಗೂ ರಾಕ್ಷಸರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಮೇಘಗಳು ಮಳೆಗರೆಯುವಂತೆ ದೇವತೆಗಳು ರಾಕ್ಷಸರ ಮೇಲೆ ಬಾಣಗಳ ಮಳೆಯನ್ನು ಸುರಿಸತೊಡಗಿದರು. ಆ ಸಮಯದಲ್ಲಿ ನಾನಾವಿಧವಾದ ಆಯುಧಗಳನ್ನು ಹಿಡಿದಿದ್ದ ದುಷ್ಟಾತ್ಮನಾದ ಕುಂಭಕರ್ಣನು ಯಾರೊಡನೆ ಯುದ್ಧ ಮಾಡುತ್ತಿರುವನೆಂಬುದೇ ತಿಳಿಯುತ್ತಿರಲಿಲ್ಲ. ಮದೋನ್ಮತ್ತನಾಗಿದ್ದುದರಿಂದ ದೇವ-ರಾಕ್ಷಸರೆಂಬ ತಾರತಮ್ಯವೇ ಇಲ್ಲದೆ ಕಂಡ-ಕಂಡವರ ಮೇಲೆ ಆಯುಧಗಳನ್ನು ಪ್ರಯೋಗಿಸುತ್ತಿದ್ದನು. ಅತ್ಯಂತಕ್ರುದ್ಧನಾಗಿದ್ದ ಕುಂಭಕರ್ಣನು ಶತ್ರುಸೈನಿಕರನ್ನು ಹಲ್ಲುಗಳಿಂದಲೇ ಕಚ್ಚಿ ಸಾಯಿಸುತ್ತಿದ್ದನು. ಕಾಲುಗಳಿಂದ ಮೆಟ್ಟಿ ಸಂಹರಿಸುತ್ತಿದ್ದನು. ಭುಜಗಳಿಂದಲೂ, ಕೈಗಳಿಂದಲೂ ಪ್ರಹರಿಸುತ್ತಿದ್ದನು. ಶಕ್ತಿ- ತೋಮರ -

ಮುದ್ಗರಾಯುಧಗಳಿಂದಲೂ ದೇವಸೈನ್ಯವನ್ನು ಸದೆಬಡಿಯುತ್ತಿದ್ದನು. ಆ ರಾಕ್ಷಸನು ಭಯಂಕರರಾಗಿದ್ದ ರುದ್ರರೊಡನೆ ಯುದ್ಧಮಾಡಲು ತೊಡಗಿದನು. ರುದ್ರರು ಕುಂಭಕರ್ಣನ ಅಂಗಾಂಗಗಳನ್ನು ಅಸ್ತ್ರ-ಶಸ್ತ್ರಗಳಿಂದ ಕ್ಷತ-ವಿಕ್ಷತ ಗೊಳಿಸಿದರು. ಶಸ್ತ್ರಪ್ರಹಾರಗಳಿಂದ ಉಂಟಾದ ಗಾಯಗಳು ಶರೀರಾದ್ಯಂತವಾಗಿ ತುಂಬಿಕೊಂಡಿದ್ದು ಗಾಯವಿಲ್ಲದ ಸ್ಥಳವೇ ಅವನ ಶರೀರದಲ್ಲಿ ಕಾಣುತ್ತಿರಲಿಲ್ಲ. ಗಾಯಗಳಿಂದ ರಕ್ತವು ಸೋರುತ್ತಿದ್ದು ಆ ಸಮಯದಲ್ಲಿ ಕುಂಭಕರ್ಣನು ಮಿಂಚಿನಿಂದಲೂ ಸಿಡಿಲು-ಗುಡುಗುಗಳ ಶಬ್ದದಿಂದಲೂ ಕೂಡಿ ಮಳೆಗರೆಯುವ ಕಾರ್ಮುಗಿಲಿನಂತೆಯೇ ಕಾಣುತ್ತಿದ್ದನು. ಬಳಿಕ ಮರುದ್ಗಣಗಳೂ ಮತ್ತು ರುದ್ರರೂ ಸೇರಿ ನಾನಾವಿಧವಾದ ಆಯುಧಗಳಿಂದ ರಾಕ್ಷಸರನ್ನು ಪ್ರಹರಿಸುತ್ತಾ ಅವರೆಲ್ಲರೂ ಭಯಗೊಂಡು ಪಲಾಯನಮಾಡು ವಂತೆ ಮಾಡಿದರು. ರುದ್ರ -ಮರುತ್ತರಿಂದ ಪ್ರಹರಿಸಲ್ಪಟ್ಟ ರಾಕ್ಷಸರಲ್ಲಿ ಕೆಲವರು ಅಸುನೀಗಿದರು. ಕೆಲವರು ತುಂಡರಿಸಲ್ಪಟ್ಟು ನೆಲದ ಮೇಲೆ ಬಿದ್ದು ವಿಲ -ವಿಲನೆ ಒದ್ದಾಡುತ್ತಿದ್ದರು. ಕೆಲವರು ಪ್ರಾಣಗಳನ್ನು ತೊರೆದು ತಮ್ಮ ವಾಹನಗಳಲ್ಲಿಯೇ ಜೋತುಬಿದ್ದಿದ್ದರು. ಕೆಲವರು ತಾವು ಕುಳಿತಿದ್ದ ರಥ ಗಳನ್ನೂ, ಆನೆಗಳನ್ನೂ, ಕತ್ತೆಗಳನ್ನೂ, ಒಂಟೆಗಳನ್ನೂ , ಸರ್ಪಗಳನ್ನೂ, ಕುದುರೆಗಳನ್ನೂ, ನೀರುಬೆಕ್ಕುಗಳನ್ನೂ, ಹಂದಿಗಳನ್ನೂ, ಪಿಶಾಚಮುಖ ಪ್ರಾಣಿಗಳನ್ನೂ ಎರಡು ಕೈಗಳಿಂದಲೂ ತಬ್ಬಿಕೊಂಡು ನಿಶ್ಚೇಷ್ಟರಾಗಿ ಬಿದ್ದಿದ್ದರು. ಮೂರ್ಛೆ ತಿಳಿದು ಮೇಲೆದ್ದ ಕೆಲವರು ರಾಕ್ಷಸರು ದೇವತೆಗಳ ಶಸ್ತ್ರಗಳಿಂದ ಕತ್ತರಿಸಲ್ಪಟ್ಟವರಾಗಿ ಅಸುನೀಗಿ ಪುನಃ ಕೆಳಗೆ ಬೀಳುತ್ತಿದ್ದರು. ರಣಭೂಮಿಯಲ್ಲಿ ಹತರಾಗಿ ದೀರ್ಘನಿದ್ರೆಯನ್ನಾಶ್ರಯಿಸಿ ಮಲಗಿದ್ದ ಆ ರಾಕ್ಷಸರ ರಣಸಮ್ಮರ್ದನವು - ದೇವತೆಗಳ ಇಂದ್ರಜಾಲದಿಂದ ಕೂಡಿದ ಚಿತ್ರ ಶಾಲೆಯೋ ಎಂಬಂತೆ ಸಮಸ್ತರಿಗೂ ಆಶ್ಚರ್ಯವಾಗಿ ಕಾಣುತ್ತಿದ್ದಿತು. ಆ ಭಯಂಕರವಾದ ರಣರಂಗದಲ್ಲಿ ರಕ್ತನದಿಯೇ ಹರಿಯತೊಡಗಿತು. ರಕ್ತವೇ ಅದರ ನೀರಾಗಿದ್ದಿತು. ರಣಾಂಗಣದಲ್ಲಿ ಬಿದ್ದಿದ್ದ ಅಸ್ತ್ರ-ಶಸ್ತ್ರಗಳೇ ರಕ್ತನದಿಯ ಮೊಸಳೆಗಳಾಗಿದ್ದುವು. ಆ ರಕ್ತನದಿಯ ತೀರಪ್ರದೇಶವು ಕಾಗೆಗಳಿಂದಲೂ ರಣಹದ್ದುಗಳಿಂದಲೂ ಸಮಾಕುಲವಾಗಿದ್ದಿತು.

ಈ ಮಧ್ಯದಲ್ಲಿ ಪ್ರತಾಪಶಾಲಿಯಾದ ದಶಮುಖನು ತನ್ನ ಸೈನ್ಯ

ವೆಲ್ಲವೂ ದೇವತೆಗಳಿಂದ ಹತವಾದುದನ್ನು ನೋಡಿ ಹೆಚ್ಚು ಕೋಪಗೊಂಡನು. ಸಮುದ್ರಕ್ಕೆ ಸಮಾನವಾಗಿ ಬಹಳ ದೂರದವರೆಗೂ ಪ್ರಸರಿಸಿಕೊಂಡಿದ್ದ ದೇವ ಸೈನ್ಯದೊಳಗೆ ನುಗ್ಗಿ ಎದುರಾಗಿ ಸಿಕ್ಕಿದ ದೇವತೆಗಳನ್ನು ಧ್ವಂಸಮಾಡುತ್ತಾ ದೇವೇಂದ್ರನ ಬಳಿಗೆ ಹೋದನು. ಒಡನೆಯೇ ಇಂದ್ರನು ತನ್ನ ಮಹಾಶಬ್ದದಿಂದ ಕೂಡಿದ್ದ ಮಹಾಧನುಸ್ಸನ್ನು ಟೇಂಕರಿಸಿದನು. ಆ ಟಂಕಾರಶಬ್ದವು ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ಆ ರಣಭೂಮಿಯಲ್ಲಿ ದೇವೇಂದ್ರನು ತನ್ನ ಮಹಾಧನುಸ್ಸಿನ ಶಿಂಜಿನಿಯನ್ನು ಸೆಳೆದು ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಬಾಣಗಳನ್ನು ರಾವಣನ ತಲೆಯ ಮೇಲೆ ಸುರಿಸಿದನು. ಅದೇ ರೀತಿಯಲ್ಲಿ ಮಹಾಬಾಹುವಾದ ದಶಗ್ರೀವರಾಕ್ಷಸನೂ ಧನುಸ್ಸಿನಿಂದ ಹೊರಬರುವ ಬಾಣಗಳಿಂದ ಇಂದ್ರನನ್ನು ಮುಚ್ಚಿಬಿಟ್ಟನು. ಹೀಗೆ ಅವರಿಬ್ಬರೂ ಬಾಣಗಳ ಮಳೆಯಿಂದ ಒಬ್ಬರು ಮತ್ತೊಬ್ಬರನ್ನು ಪ್ರಹರಿಸುತ್ತಿದ್ದಾಗ ಅಲ್ಲಿ ಏನೂ ಕಾಣಿಸುತ್ತಿರಲಿಲ್ಲ. ಸರ್ವತ್ರ ಬಾಣಗಳ ಆಚ್ಛಾದನೆಯಿಂದಾಗಿ ಸುತ್ತಲೂ ಕತ್ತಲು ಕವಿಯಿತು.

28ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **29ನೆಯ ಸರ್ಗ**

ರಾವಣನು ದೇವಸೈನ್ಯದಿಂದ ಹೊರಬಂದುದು : ಅವನನ್ನು ಬಂಧಿಸಲು ದೇವತೆಗಳ ಪ್ರಯತ್ನ: ಮೇಘನಾದನು ಯುದ್ಧದಲ್ಲಿ ಇಂದ್ರನನ್ನು ಬಂಧಿಸಿ ವಿಜಯಿಯಾಗಿ ಸೇನಾಸಮೇತನಾಗಿ ಲಂಕೆಗೆ ಹಿಂದಿರುಗಿದುದು.

ಅಗಸ್ತ್ಯರು ಮುಂದುವರಿದು ಹೇಳಿದರು :

ತತಸ್ತಮಸಿ ಸಂಜಾತೇ ಸರ್ವೇ ತೇ ದೇವರಾಕ್ಷಸಾಃ।
ಅಯುಧ್ಯನ್ತ ಬಲೋನ್ಮತ್ತಾಃ ಸೂದಯನ್ತಃ ಪರಸ್ಪರಮ್ ॥1॥

'' ರಾಮ ! ಶಸ್ತ್ರಾಸ್ತ್ರಗಳ ಆಚ್ಛಾದನೆಯಿಂದ ಎಲ್ಲ ಕಡೆಗಳಲ್ಲಿಯೂ ಕತ್ತಲು ಕವಿಯಲು ಬಲೋನ್ಮತ್ತರಾಗಿದ್ದ ದೇವ –ರಾಕ್ಷಸರು ಪರಸ್ಪರರಾಗಿ ಪ್ರಹರಿಸುತ್ತಲೇ ಇದ್ದರು.

ಆ ಸಮಯದಲ್ಲಿ ದೇವತೆಗಳ ಸೈನ್ಯವು ರಾಕ್ಷಸರ ವಿಶಾಲವಾಗಿದ್ದ

ಸೈನ್ಯದಲ್ಲಿ ಹತ್ತನೆಯ ಒಂಬತ್ತು ಭಾಗವನ್ನು ಯಮಲೋಕಕ್ಕೆ ಕಳುಹಿಸಿತ್ತು. ರಣರಂಗದಲ್ಲಿ ಹತ್ತನೆಯ ಒಂದಂಶ ಮಾತ್ರ ರಾಕ್ಷಸರ ಸೈನ್ಯವಿದ್ದಿತು.

ಕತ್ತಲಿನಲ್ಲಿ ನಡೆಯುತ್ತಿದ್ದ ಆ ಯುದ್ಧದಲ್ಲಿ ದೇವ –ರಾಕ್ಷಸಸೈನಿಕರು ಒಬ್ಬರು ಮತ್ತೊಬ್ಬರನ್ನು ಗುರುತಿಸಲಾಗುತ್ತಿರಲಿಲ್ಲ. ಇಂದ್ರ, ರಾವಣ ಮತ್ತು ರಾವಣನ ಮಗನಾದ ಮೇಘನಾದ – ಈ ಮೂವರು ಮಾತ್ರ ಕವಿದಿದ್ದ ಕತ್ತಲಿನಿಂದಾಗಿ ವಿಮೋಹಿತರಾಗಲಿಲ್ಲ. ತನ್ನ ಸಮಸ್ತ ಸೈನ್ಯವೂ ಕ್ಷಣಮಾತ್ರ ದಲ್ಲಿ ವಿನಾಶಹೊಂದಿದುದನ್ನು ಕಂಡು ರಾವಣನು ಅತಿಕ್ರುದ್ಧನಾಗಿ ಗಟ್ಟಿ ಯಾಗಿ ಸಿಂಹನಾದವನ್ನು ಮಾಡಿದನು. ಶತ್ರುಗಳಿಂದ ಎದುರಿಸಲು ಅಸಾಧ್ಯ ನಾಗಿದ್ದ ರಾವಣನು ಕೋಪಾವಿಷ್ಟನಾಗಿ ರಥದ ಮುಂಭಾಗದಲ್ಲಿ ಕುಳಿತಿದ್ದ ಸಾರಥಿಗೆ ಹೇಳಿದನು :

''ಸೂತನೇ ! ಈ ದೇವಸೈನ್ಯದ ಕೊನೆಯವರೆಗೂ ನನ್ನನ್ನು ಸೈನ್ಯದ ಮಧ್ಯಭಾಗದಲ್ಲಿರುವ ಹಾದಿಯಲ್ಲಿ ಕರೆದುಕೊಂಡು ಹೋಗು. ಸ್ವಭುಜಬಲ– ಪರಾಕ್ರಮಗಳಿಂದ ನಾನೇ ಈ ದೇವಸೈನ್ಯದ ಮೇಲೆ ಶರಗಳ ಮಹಾವರ್ಷ ವನ್ನೇ ಸುರಿಸುತ್ತಾ ಯಮನ ಮನೆಗೆ ಕಳುಹಿಸಿಬಿಡುತ್ತೇನೆ. ನಾನೇ ಇಂದ್ರ –ಕುಬೇರ– ವರುಣ – ಯಮರನ್ನು ಸಂಹರಿಸುವೆನು. ಸಮಸ್ತದೇವತೆ ಗಳನ್ನೂ ಶೀಘ್ರವಾಗಿ ಸಂಹರಿಸಿ ಇವರೆಲ್ಲರನ್ನೂ ಮೆಟ್ಟಿ ಸರ್ವೇಶ್ವರನಾಗಿ ನಿಲ್ಲುವೆನು. ಹಿಂದೆ ಆದುದಕ್ಕಾಗಿ ನೀನು ವಿಷಾದಪಡುವ ಕಾರಣವಿಲ್ಲ. ರಥವನ್ನು ಬೇಗ ನಡೆಸು. ಎರಡನೆಯ ಬಾರಿಗೆ ಈ ಮಾತನ್ನು ಹೇಳುತ್ತಿದ್ದೇನೆ. ದೇವತೆಗಳ ಸೈನ್ಯದ ಕೊನೆಯು ಎಲ್ಲಿಯವರೆಗಿರುವುದೋ ಅಲ್ಲಿಯ ವರೆಗೂ ಈ ರಥವನ್ನು ನಡೆಸಿಕೊಂಡು ಹೋಗು. ಈಗ ನಾವಿರುವುದು ನಂದನವನದ ಈ ಕಡೆಯ ಪ್ರದೇಶವಾಗಿದೆ. ನನ್ನನ್ನೀಗ ನೀನು ಉದಯಾಚಲದ ಆ ಕಡೆಯ ಪ್ರದೇಶಕ್ಕೆ ಕರೆದುಕೊಂಡು ಹೋಗು. ನಂದನವನದಿಂದ ಉದಯಾಚಲದವರೆಗೂ ದೇವಸೇನೆಯು ವ್ಯಾಪಿಸಿಕೊಂಡಿದೆ. ''

ರಾವಣನ ಆ ಮಾತನ್ನು ಕೇಳಿ ಸಾರಥಿಯು ಮನೋವೇಗದಿಂದ ಕೂಡಿದ್ದ ಕುದುರೆಗಳಿಗೆ ಶತ್ರುಗಳ ಮಧ್ಯಭಾಗದಿಂದಲೇ ಹೋಗುವಂತೆ ಆದೇಶವನ್ನಿತ್ತನು. ರಥದಲ್ಲಿ ಕುಳಿತಿದ್ದ ದೇವೇಶ್ವರನಾದ ಇಂದ್ರನು ರಾವಣನ ಆ ನಿಶ್ಚಯವನ್ನು ಕೇಳಿ ಯುದ್ಧದಲ್ಲಿ ತೊಡಗಿದ್ದ ದೇವತೆಗಳಿಗೆ ಹೇಳಿದನು :

''ದೇವತೆಗಳೇ ! ನನ್ನ ಮಾತನ್ನು ಕೇಳಿರಿ. ಯಾವುದು ನನಗೆ ಸಮುಚಿತವಾಗಿ ಕಂಡಿದೆಯೋ ಅದನ್ನೇ ನಿಮಗೆ ಹೇಳುತ್ತಿದ್ದೇನೆ. ಜೀವಿಸಿರುವಾಗಲೇ ಇವನನ್ನು ಬಂಧಿಸುವುದು ಸಮುಚಿತವಾಗಿ ಕಾಣುತ್ತದೆ. ನೀವೆಲ್ಲರೂ ಸೇರಿ ಇವನನ್ನು ಬಂಧಿಸಿರಿ. ಮಹಾಬಲಿಷ್ಠನಾಗಿರುವ ಈ ರಾವಣನು ವಾಯುವೇಗದಿಂದ ಕೂಡಿರುವ ರಥದಲ್ಲಿ ಕುಳಿತು ಸೈನ್ಯದ ಮಧ್ಯಭಾಗದಲ್ಲಿ ಹುಣ್ಣಿಮೆಯ ದಿನ ಎತ್ತರವಾದ ಅಲೆಗಳಿಂದ ಕೂಡಿದ ಸಮುದ್ರವು ಉಕ್ಕಿ ಬರುವಂತೆ ಮುಂದು–ಮುಂದಕ್ಕೆ ನುಗ್ಗುತ್ತಿದ್ದಾನೆ. ಬ್ರಹ್ಮನ ವರಬಲದಿಂದ ಇವನು ನಿರ್ಭಯನಾಗಿದ್ದಾನೆ. ಇವನನ್ನು ಈಗ ಸಂಹರಿಸಲು ಸಾಧ್ಯವೇ ಇಲ್ಲ. ಆದುದರಿಂದ ಈತನನ್ನು ಸೆರೆಹಿಡಿಯೋಣ. ನೀವೆಲ್ಲರೂ ಜಾಗರೂಕ ರಾಗಿ ಹೋರಾಡಿರಿ. ಬಲಿಯನ್ನು ಬಂಧಿಸಿದನಂತರವೇ ನಾನು ಮೂರು ಲೋಕಗಳ ಆಧಿಪತ್ಯವನ್ನೂ ಉಪಭೋಗಿಸಲು ಸಾಧ್ಯವಾಯಿತು. ಆದುದ ರಿಂದ ಈಗಲೂ ಇವನನ್ನು ಬಂಧಿಸುವುದೇ ಉಚಿತವೆಂದು ನನಗೆ ತೋರು ತ್ತಿದೆ.''

ಇಂದ್ರನು ದೇವತೆಗಳಿಗೆ ಹೀಗೆ ಹೇಳಿ ರಾವಣನನ್ನು ಬಿಟ್ಟು ಇತರ ರಾಕ್ಷಸರನ್ನು ಭಯಗೊಳಿಸುತ್ತಾ ಅವರೊಡನೆ ಯುದ್ಧ ಮಾಡಲು ಉಪಕ್ರಮಿ ಸಿದನು. ಯುದ್ಧದಲ್ಲಿ ಯಾವಾಗಲೂ ಹಿಂದಿರುಗದಿದ್ದ ರಾವಣನು ಉತ್ತರ ದಿಕ್ಕಿನಿಂದ ದೇವಸೇನೆಯನ್ನು ಪ್ರವೇಶಿಸಿದನು. ಇಂದ್ರನು ದಕ್ಷಿಣದ ಕಡೆ ಯಿಂದ ರಾಕ್ಷಸಸೈನ್ಯವನ್ನು ಪ್ರವೇಶಿಸಿದನು. ರಾಕ್ಷಸಾಧಿಪತಿಯಾದ ರಾವಣನು ನೂರು ಯೋಜನಗಳಷ್ಟು ದೂರ ದೇವತೆಗಳ ಸೈನ್ಯದೊಳಗೆ ನುಗ್ಗಿ ಎಲ್ಲ ದೇವಸೈನಿಕರನ್ನೂ ಬಾಣಗಳ ಮಳೆಯಿಂದ ಮುಚ್ಚುತ್ತಿದ್ದನು. ತನ್ನ ವಿಶಾಲವಾದ ಸೈನ್ಯವು ನಷ್ಟವಾಗುತ್ತಿರುವುದನ್ನು ಕಂಡು ಇಂದ್ರನು ಸ್ವಲ್ಪವೂ ಗಾಬರಿಗೊಳ್ಳದೇ ರಾವಣನನ್ನೆದುರಿಸಿ ನಾಲ್ಕು ಕಡೆಗಳಿಂದಲೂ ಆಕ್ರಮಿಸಿ ಅವನು ಹಿಮ್ಮೆಟ್ಟುವಂತೆ ಮಾಡಿದನು. ಅನಂತರ ಇಂದ್ರನು ರಾವಣನನ್ನು ಹಿಡಿಯುತ್ತಿರುವುದನ್ನು ನೋಡಿ ರಾಕ್ಷಸರ ಸಮೂಹದಲ್ಲಿಯೇ ದೊಡ್ಡದಾದ ಶಬ್ದವುಂಟಾಯಿತು. '**ಹಾ ಹತಾಃ ಸ್ಮ** – ಅಯ್ಯೋ ! ಸತ್ತೆವು' ಎಂದು ಹೇಳಿಕೊಂಡು ದಾನವ – ರಾಕ್ಷಸರೆಲ್ಲರೂ ಆರ್ತನಾದಗಳನ್ನು ಮಾಡುತ್ತಿದ್ದರು. ತಂದೆಯು ಬಂಧಿಸಲ್ಪಡುತ್ತಿರುವುದನ್ನು ನೋಡಿ ಪರಮಕ್ರುದ್ಧನಾದ ಮೇಘ

ನಾದನು ರಥದಲ್ಲಿ ಕುಳಿತು ಅತ್ಯಂತ ಭಯಂಕರವಾಗಿದ್ದ ದೇವಸೇನೆಯೊಳಗೆ ನುಗ್ಗಿದನು. ಹಿಂದೆ ಪಶುಪತಿಯಿಂದ ಪಡೆದುಕೊಂಡಿದ್ದ ಮಹಾಮಾಯಾ ವಿದ್ಯೆಯನ್ನು ಆಶ್ರಯಿಸಿ ದೇವಸೇನೆಯನ್ನು ಆಕ್ರಮಿಸಿದನು. ಅನಂತರ ದೇವತೆಗಳನ್ನು ಪರಿತ್ಯಜಿಸಿ ನೇರವಾಗಿ ಇಂದ್ರನೊಡನೆಯೇ ಯುದ್ಧಮಾಡಲು ಧಾವಿಸಿದನು. ಆದರೆ ಮಹಾತೇಜಸ್ವಿಯಾದ ಮಹೇಂದ್ರನು ಶತ್ರುವಿನ ಮಗನಾದ ಮೇಘನಾದನನ್ನು ಕಾಣಲಾಗಲಿಲ್ಲ. ಮಹಾಪರಾಕ್ರಮಿಗಳಾದ ದೇವತೆಗಳಿಂದ ಪ್ರಹರಿಸಲ್ಪಡುತ್ತಿದ್ದು ಕವಚವನ್ನು ಕಳೆದುಕೊಂಡಿದ್ದರೂ ರಾವಣಿಯು ಸ್ವಲ್ಪವಾದರೂ ಭಯಪಡಲಿಲ್ಲ. ತನಗೆ ಎದುರಾಗಿ ಬರುತ್ತಿದ್ದ ಇಂದ್ರನ ಸಾರಥಿಯಾದ ಮಾತಲಿಯನ್ನು ಗಾಯಗೊಳಿಸಿ ಮಹೇಂದ್ರನನ್ನು ನೂರಾರು ಬಾಣಗಳಿಂದ ಪುನಃ ಮುಚ್ಚಿದನು. ಬಳಿಕ ಇಂದ್ರನು ರಥವನ್ನೂ ಸಾರಥಿಯನ್ನೂ ಪರಿತ್ಯಜಿಸಿ ಐರಾವತದಲ್ಲಿ ಕುಳಿತು ರಾವಣಿಯನ್ನು ಹುಡುಕಲು ಪ್ರಾರಂಭಿಸಿದನು. ಮೇಘನಾದನು ಮಾಯೆಯನ್ನು ಆಶ್ರಯಿಸಿ ಬಹಳ ಪ್ರಬಲನಾಗಿದ್ದನು. ಅದೃಶ್ಯನಾಗಿ ಅಂತರಿಕ್ಷದಲ್ಲಿಯೇ ಸಂಚರಿಸುತ್ತಿದ್ದನು. ಇಂದ್ರನನ್ನು ತನ್ನ ಮಾಯೆಯಿಂದ ವ್ಯಾಕುಲನನ್ನಾಗಿ ಮಾಡಿ ಬಾಣಗಳ ಮೂಲಕವಾಗಿ ಅವನನ್ನು ಪುನಃ ಆಕ್ರಮಿಸಿದನು. ಇಂದ್ರನು ಬಹಳವಾಗಿ ಬಳಲಿರುವನೆಂದು ತಿಳಿದೊಡನೆಯೇ ಮೇಘನಾದನು ಇಂದ್ರನನ್ನು ಮಾಯೆಯಿಂದಲೇ ಬಂಧಿಸಿ ತನ್ನ ಸೈನ್ಯವಿದ್ದೆಡೆಗೆ ಕರೆದೊಯ್ದನು. ರಣಭೂಮಿಯಿಂದ ಇಂದ್ರನನ್ನು ಬಲಾತ್ಕಾರವಾಗಿ ಸೆಳೆದುಕೊಂಡು ಹೋಗುತ್ತಿರುವುದನ್ನು ಕಂಡು ದೇವತೆಗಳು ಮುಂದೇನಾಗುವುದೆಂದು ಯೋಚಿಸತೊಡಗಿದರು: ''ಯುದ್ಧದಲ್ಲಿ ವಿಜಯಗಳಿಸುವ ಸಾಮರ್ಥ್ಯವನ್ನು ಹೊಂದಿದ್ದ ಮಾಯಾವಿಯಾದ ಮೇಘನಾದನು ಕಣ್ಣಿಗೆ ಕಾಣಿಸದೆಯೇ ಇದ್ದರೂ ಇಂದ್ರನೊಡನೆ ಮಾಡಿದ ಯುದ್ಧದಲ್ಲಿ ವಿಜಯಗಳಿಸಿದನು. ದೇವರಾಜನಾದ ಇಂದ್ರನು ರಾಕ್ಷಸಮಾಯೆಯನ್ನು ವಿನಾಶಗೊಳಿಸುವ ವಿದ್ಯೆಯನ್ನು ತಿಳಿದಿದ್ದರೂ ಬಲಾತ್ಕಾರವಾಗಿ ಮೇಘನಾದನ ಮಾಯೆಯಿಂದ ಅಪಹೃತನಾದನು.''

ಈ ಮಧ್ಯದಲ್ಲಿ ದೇವಸೈನಿಕರೆಲ್ಲರೂ ಕ್ರುದ್ಧರಾಗಿ ರಾವಣನನ್ನು ಯುದ್ಧದಿಂದ ವಿಮುಖನನ್ನಾಗಿ ಮಾಡಿ ಅವನನ್ನು ಬಾಣಗಳಿಂದ ಮುಚ್ಚ

ತೊಡಗಿ ದರು. ರಾವಣನು ಆದಿತ್ಯರೊಡನೆಯೂ ಮತ್ತು ವಸುಗಳೊಡನೆಯೂ ಯುದ್ಧ ಮಾಡುತ್ತಿದ್ದಾಗ ಅವರೊಡನೆ ಯುದ್ಧವನ್ನು ಮುಂದುವರಿಸಲು ಸಮರ್ಥನಾಗಿರಲಿಲ್ಲ. ಏಕೆಂದರೆ: ಅವನು ಯುದ್ಧದಲ್ಲಿ ಬಹಳವಾಗಿ ಗಾಯ ಗೊಂಡಿದ್ದನು. ದೇವತೆಗಳ ಬಾಣಗಳ ಪ್ರಹಾರಗಳಿಂದ ರಾವಣನು ಶಿಥಿಲ ನಾಗಿರುವುದನ್ನೂ ಮತ್ತು ಕಳೆಗುಂದಿರುವುದನ್ನೂ ನೋಡಿ ಅದೃಶ್ಯನಾಗಿದ್ದ ಮೇಘನಾದನು ರಾವಣನಿಗೆ ಹೇಳಿದನು :

'' ತಂದೆಯೇ ! ಯುದ್ಧವನ್ನು ನಿಲ್ಲಿಸಿಬಿಡು. ನಾವಿನ್ನು ಲಂಕೆಗೆ ಹೊರಟುಹೋಗೋಣ. ನಾವು ಜಯಗಳಿಸಿದ್ದೇವೆ. ನೀನು ನಿಶ್ಚಿಂತನಾಗಿರು. ಮೂರು ಲೋಕಗಳಿಗೂ ಮತ್ತು ಈ ದೇವಸೈನ್ಯಕ್ಕೂ ಅಧಿಪತಿಯಾಗಿರುವ ದೇವೇಂದ್ರನನ್ನು ದೇವಸೈನ್ಯದ ಮಧ್ಯದಿಂದಲೇ ನಾನು ಸೆರೆಹಿಡಿದು ತಂದಿರು ವೆನು. ಹೀಗೆ ಮಾಡಿ ನಾನು ದೇವತೆಗಳ ದರ್ಪವನ್ನು ಮುರಿದಿದ್ದೇನೆ. ಈಗ ನೀನು ನಿನ್ನ ಶತ್ರುವನ್ನು ದಂಡಿಸಿ ಮೂರು ಲೋಕಗಳನ್ನೂ ಯಥೇಚ್ಛವಾಗಿ ಉಪಭುಂಜಿಸು. ಇವರೊಡನೆ ಯುದ್ಧಮಾಡಿ ವೃಥಾ ಶ್ರಮಪಡುವುದರಿಂದ ಪ್ರಯೋಜನವೇನಿದೆ ? ಈಗಂತೂ ಯುದ್ಧವನ್ನು ಮುಂದುವರಿಸುವುದರಲ್ಲಿ ಯಾವ ಪ್ರಯೋಜನವೂ ಇಲ್ಲ.''

ಮೇಘನಾದನ ಆ ಮಾತನ್ನು ಕೇಳಿ ದೇವತೆಗಳೆಲ್ಲರೂ ಯುದ್ಧದಿಂದ ವಿರಮಿಸಿದರು. ಇಂದ್ರನಿಲ್ಲದೆಯೇ ಸ್ವಸ್ಥಾನಗಳಿಗೆ ತೆರಳಿದರು. ಮಗನು ಹೇಳಿದ ಪ್ರಿಯವಾಕ್ಯವನ್ನು ಆದರಪೂರ್ವಕವಾಗಿ ಕೇಳಿ ಮಹಾಬಲಿಷ್ಠನಾದ, ದೇವಶತ್ರುವಾದ, ಸುವಿಖ್ಯಾತನಾದ ರಾಕ್ಷಸರಾಜನು ಯುದ್ಧದಿಂದ ವಿರಮಿಸಿ ಮಗನಿಗೆ ಹೇಳಿದನು :

''ಸಮರ್ಥನಾದ ಪುತ್ರನೇ ! ನೀನಿಂದು ಅಸಾಧಾರಣವಾದ ಪರಾಕ್ರಮ ವನ್ನು ಪ್ರಕಟಿಸಿ ಅನುಪಮಬಲನಾದ ಇಂದ್ರನನ್ನು ಬಂಧಿಸಿ ದೇವತೆಗಳನ್ನೂ ಪರಾಜಯಗೊಳಿಸಿರುವೆ. ಆದುದರಿಂದ ನೀನು ನಿಶ್ಚಯವಾಗಿಯೂ ನಮ್ಮ ವಂಶದ ಮತ್ತು ಕುಲದ ಯಶಸ್ಸನ್ನೂ ಮತ್ತು ಕೀರ್ತಿಯನ್ನೂ ವೃದ್ಧಿಗೊಳಿ ಸಿರುವೆ. ನೀನು ಇಂದ್ರನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಸೈನ್ಯಸಮೇತನಾಗಿ ಲಂಕಾಪುರಿಗೆ ಹೋಗು. ನಾನೂ ಅತಿಸಂತೋಷದಿಂದ ಅಮಾತ್ಯರೊಡನೆ ಕೂಡಿಕೊಂಡು ನಿನ್ನನ್ನು ಹಿಂಬಾಲಿಸುತ್ತೇನೆ. ''

ತಂದೆಯ ಆಜ್ಞೆಯಂತೆ ಪರಾಕ್ರಮಿಯಾದ ಮೇಘನಾದನು ದೇವ ರಾಜನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಚತುರಂಗಬಲಸಮೇತನಾಗಿ ತನ್ನ ನಿವಾಸಸ್ಥಾನಕ್ಕೆ ತೆರಳಿದನು. ಲಂಕೆಗೆ ಹೋದನಂತರ ಯುದ್ಧದಲ್ಲಿ ಭಾಗ ವಹಿಸಿದ್ದ ಸೈನಿಕರನ್ನು ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟನು.

29ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **30ನೆಯ ಸರ್ಗ**

ಮೇಘನಾದನಿಗೆ ಬ್ರಹ್ಮನಿಂದ ವರದಾನ : ಇಂದ್ರನ ಬಿಡುಗಡೆ : ಇಂದ್ರನು ಹಿಂದೆ ಮಾಡಿದ ಪಾಪಕರ್ಮವನ್ನು ತಿಳಿಸಿ ವೈಷ್ಣವಯಾಗವನ್ನು ಮಾಡುವಂತೆ ಬ್ರಹ್ಮನ ಆದೇಶ : ಯಾಗವನ್ನು ಪೂರೈಸಿ ಇಂದ್ರನ ಸ್ವರ್ಗಲೋಕಗಮನ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ಜಿತೇ ಮಹೇನ್ದ್ರೇಽತಿಬಲೇ ರಾವಣಸ್ಯ ಸುತೇನ ವೈ ।
ಪ್ರಜಾಪತಿಂ ಪುರಸ್ಕೃತ್ಯ ಯಯುರ್ಲಙ್ಕಾಂ ಸುರಾಸ್ತದಾ ॥1॥

ರಾಘವ! ರಾವಣನ ಮಗನಾದ ಮೇಘನಾದನು ಮಹಾಬಲಿಷ್ಠನಾದ ಇಂದ್ರನನ್ನು ಜಯಿಸಿ ಬಂದಿಯನ್ನಾಗಿ ಮಾಡಿ ಲಂಕೆಗೆ ಕರೆತಂದನಂತರ ಬ್ರಹ್ಮನನ್ನು ಮುಂದೆ ಮಾಡಿಕೊಂಡು ದೇವತೆಗಳೆಲ್ಲರೂ ಲಂಕಾಪಟ್ಟಣಕ್ಕೆ ಹೋದರು.

ಮಕ್ಕಳಿಂದಲೂ ಸಹೋದರರಿಂದಲೂ ಸಮಾವೃತನಾಗಿದ್ದ ರಾವಣನ ಬಳಿಗೆ ಹೋಗಿ ಬ್ರಹ್ಮನು ಆಕಾಶದಲ್ಲಿಯೇ ನಿಂತು ಸೌಮ್ಯವಾದ ಮಾತು ಗಳಿಂದಲೇ ಹೇಳಿದನು :

'' ವತ್ಸ ! ರಾವಣ ! ಯುದ್ಧದಲ್ಲಿ ನಿನ್ನ ಮಗನ ಪರಾಕ್ರಮವನ್ನು ನೋಡಿ ನಾನು ಸಂತುಷ್ಟನಾಗಿರುವೆನು. ಆಶ್ಚರ್ಯ ! ನಿನ್ನ ಮಗನ ಪರಾ ಕ್ರಮವು ನಿನ್ನ ಪರಾಕ್ರಮಕ್ಕೆ ಸಾಟಿಯಾಗಿದೆ ಅಥವಾ ನಿನಗಿಂತಲೂ ಮಿಗಿಲಾ ಗಿದೆ. ತೇಜಸ್ಸಿನಿಂದ ನೀನು ಮೂರು ಲೋಕಗಳನ್ನೂ ಜಯಿಸಿರುವೆ. ನೀನು ಮಾಡಿದ್ದ ಪ್ರತಿಜ್ಞೆಯೂ ಸಫಲವಾಗಿದೆ. ಆದುದರಿಂದ ಪುತ್ರಸಹಿತನಾದ ನಿನ್ನ ವಿಷಯದಲ್ಲಿ ನಾನು ಪ್ರಸನ್ನನಾಗಿರುವೆನು. ಅತಿಬಲಿಷ್ಠನಾದ ನಿನ್ನ

ಈ ಮಗನು ಇನ್ನು ಮುಂದೆ 'ಇಂದ್ರಜಿತ್ ' ಎಂಬ ಅನ್ವರ್ಥನಾಮದಿಂದಲೇ ಖ್ಯಾತನಾಗುವನು. ಮುಂದೆಯೂ ಇವನು ಮಹಾಬಲಿಷ್ಠನೂ ಶತ್ರುಗಳಿಂದ ಅಪರಾಜಿತನೂ ಆಗುವನು. ಇವನ ಆಶ್ರಯದಿಂದಲೇ ನೀನಿಂದು ಸಮಸ್ತದೇವತೆಗಳನ್ನೂ ನಿನ್ನ ಅಧೀನರನ್ನಾಗಿ ಮಾಡಿಕೊಂಡಿರುವೆ. ಮಹಾಬಾಹುವೇ! ನೀನು ದೇವೇಂದ್ರನನ್ನು ಈಗಲೇ ಸೆರೆಯಿಂದ ಬಿಡಿಸು. ಇದಕ್ಕೆ ಬದಲಾಗಿ ದೇವತೆಗಳು ನಿನಗೆ ಏನು ಕೊಡಬೇಕೆಂಬುದನ್ನು ಹೇಳು.''

ಬ್ರಹ್ಮನ ಮಾತನ್ನು ಕೇಳಿ ಶೂರಾಗ್ರೇಸರನೂ ಮಹಾತೇಜಸ್ವಿಯೂ ಆದ ಇಂದ್ರಜಿತುವು ಹೇಳಿದನು :

ಅಮರತ್ವಮಹಂ ದೇವ ವೃಣೇ ಯದ್ಯೇಷ ಮುಚ್ಯತೇ ॥8॥

''ದೇವ ! ಇಂದ್ರನನ್ನು ಬಿಡಬೇಕಾದರೆ ನಾನು ಮರಣರಹಿತನಾಗಬೇಕೆಂಬ ವರವನ್ನು ಅಪೇಕ್ಷಿಸುತ್ತೇನೆ.''

ಅದಕ್ಕೆ ಮಹಾತೇಜಸ್ವಿಯಾದ ಪ್ರಜಾಪತಿಯು ಹೇಳಿದನು:

ನಾಸ್ತಿ ಸರ್ವಾಮರತ್ವಂ ಹಿ ಕಸ್ಯಚಿತ್ಪ್ರಾಣಿನೋ ಭುವಿ ।
ಚತುಷ್ಪದಃ ಪಕ್ಷಿಣಶ್ಚ ಭೂತಾನಾಂ ವಾ ಮಹೌಜಸಾಮ್ ॥9॥

'' ವತ್ಸ! ಈ ಭೂಮಂಡಲದಲ್ಲಿ ಪಶು–ಪಕ್ಷಿಗಳಾಗಲೀ, ಮಹಾತೇಜಸ್ವಿಯಾದ ಮನುಷ್ಯನೇ ಆಗಲೀ, ಇಲ್ಲಿ ವಾಸಿಸುವ ಯಾವುದೇ ಪ್ರಾಣಿಯಾಗಲೀ ಅಮರತ್ವವನ್ನು ಹೊಂದಲು ಸಾಧ್ಯವಿಲ್ಲ.''

ಬ್ರಹ್ಮನ ಈ ಮಾತುಗಳನ್ನು ಕೇಳಿ ಇಂದ್ರಜಿತುವು ಆಕಾಶದಲ್ಲಿ ನಿಂತಿದ್ದ ಪ್ರಜಾಪತಿಗೆ ಹೇಳಿದನು :

ಶ್ರೂಯತಾಂ ಯಾ ಭವೇತ್ಸಿದ್ಧಿಃ ಶತಕ್ರತುವಿಮೋಕ್ಷಣೇ ।
ಮಮೇಷ್ಟಂ ನಿತ್ಯಶೋ ಹವ್ಯೈರ್ಮನ್ತ್ರೈಃ ಸಂಪೂಜ್ಯ ಪಾವಕಮ್ ।
ಸಂಗ್ರಾಮಮವತರ್ತುಂ ಚ ಶತ್ರುನಿರ್ಜಯಕಾಂಕ್ಷಿಣಃ ॥12॥
ಅಶ್ವಯುಕ್ತೋ ರಥೋ ಮಹ್ಯಮುತ್ತಿಷ್ಠೇತ್ತು ವಿಭಾವಸೋಃ ।
ತತ್ಸ್ಥಸ್ಯಾಮರತಾ ಸ್ಯಾನ್ಮೇ ಏಷ ಮೇ ನಿಶ್ಚಿತೋ ವರಃ ॥13॥

'' ಬ್ರಹ್ಮದೇವನೇ ! ಅಮರತ್ವವನ್ನು ಹೊಂದುವುದು ಅಸಾಧ್ಯವೇ ಆಗಿ

ದ್ದರೆ ಇಂದ್ರನನ್ನು ಬಿಡುವ ಸಂಬಂಧದಲ್ಲಿ ಮತ್ತೊಂದು ಪ್ರಾರ್ಥನೆಯಿದೆ. ಇದು ನನಗೆ ಸರ್ವದಾ ಸಿದ್ಧಿಸಬೇಕು. ನಾನು ಜಯಾಪೇಕ್ಷೆಯಿಂದ ಯುದ್ಧ ಭೂಮಿಗೆ ಹೋಗುವ ಮೊದಲು ಮಂತ್ರಯುಕ್ತವಾದ ಹವಿಸ್ಸುಗಳ ಆಹುತಿ ಗಳಿಂದ ಅಗ್ನಿದೇವನನ್ನು ಪೂಜಿಸುತ್ತೇನೆ. ಆ ಸಮಯದಲ್ಲಿ ಕುದುರೆಗಳಿಂದ ಹೂಡಲ್ಪಟ್ಟ ಒಂದು ರಥವು ಅಗ್ನಿಕುಂಡದಿಂದ ನನ್ನ ಸಲುವಾಗಿ ಹೊರಬರ ಬೇಕು. ಆ ರಥದಲ್ಲಿ ಕುಳಿತು ಯುದ್ಧಮಾಡುತ್ತಿರುವಾಗ ಯಾರಿಂದಲೂ ಮರಣವನ್ನು ಹೊಂದಬಾರದು.

ತಸ್ಮಿನ್ಯದ್ಯಸಮಾಪ್ತೇ ಚ ಜಪ್ಯಹೋಮೇ ವಿಭಾವಸೌ ।
ಯುಧ್ಯೇಯಂ ದೇವ ಸಂಗ್ರಾಮೇ ತದಾ ಮೇ ಸ್ಯಾದ್ವಿನಾಶನಮ್ ॥

ಯುದ್ಧದ ನಿಮಿತ್ತವಾಗಿ ಜಪಗಳೂ ಮತ್ತು ಅಗ್ನಿಗೆ ಅರ್ಪಿಸುವ ಹೋಮಗಳೂ ಪೂರ್ಣವಾಗುವ ಮೊದಲೇ ನಾನೇನಾದರೂ ಯುದ್ಧಕ್ಕೆ ಹೋದಲ್ಲಿ ಆಗ ನನ್ನ ವಿನಾಶವಾಗಲಿ.

ಸರ್ವೋ ಹಿ ತಪಸಾ ದೇವ ವೃಣೋತ್ಯಮರತಾಂ ಪುಮಾನ್ ।
ವಿಕ್ರಮೇಣ ಮಯಾ ತ್ವೇತದಮರತ್ವಂ ಪ್ರವರ್ತಿತಮ್ ॥15॥

ಪ್ರಜಾಪತಿಯೇ ! ಸಾಮಾನ್ಯವಾಗಿ ಲೋಕದಲ್ಲಿ ಎಲ್ಲರೂ ತಪಸ್ಸು ಮಾಡಿ ಅಮರತ್ವವನ್ನು ಹೊಂದುತ್ತಾರೆ. ಆದರೆ ನಾನು ಪರಾಕ್ರಮದ ಮೂಲಕ ಅಂತಹ ಅಮರತ್ವವನ್ನು ಪಡೆಯುತ್ತಿದ್ದೇನೆ. ''

ಇಂದ್ರಜಿತುವಿನ ಮಾತನ್ನು ಕೇಳಿ ಪ್ರಜಾಪತಿಯು ಹಾಗೆಯೇ ಆಗ ಲೆಂದನು. ಬಳಿಕ ಇಂದ್ರಜಿತುವು ಇಂದ್ರನನ್ನು ಬಂಧನದಿಂದ ಬಿಡುಗಡೆ ಮಾಡಿದನು. ಇಂದ್ರನೊಡನೆ ದೇವತೆಗಳೆಲ್ಲರೂ ಸ್ವರ್ಗಕ್ಕೆ ತೆರಳಿದರು.

ಆ ಸಮಯದಲ್ಲಿ ಇಂದ್ರನಿಗೆ ದೇವೋಚಿತವಾದ ತೇಜಸ್ಸು ನಷ್ಟವಾಗಿ ಹೋಗಿದ್ದಿತು. ಪರಮದುಃಖಿತನಾಗಿ ಚಿಂತಿಸತೊಡಗಿದನು. ತನ್ನ ಪರಾ ಜಯಕ್ಕೆ ಕಾರಣವೇನಿರಬಹುದೆಂಬುದನ್ನು ಯೋಚಿಸತೊಡಗಿದನು. ಚಿಂತಾ ಮಗ್ನನಾಗಿದ್ದ ಇಂದ್ರನನ್ನು ನೋಡಿ ದೇವದೇವನಾದ ಪಿತಾಮಹನು ಕೇಳಿ ದನು :

'' ಮಹೇಂದ್ರನೇ ! ಈಗೇನೋ ನೀನು ನಿನಗಾದ ಅವಮಾನಕ್ಕಾಗಿ ದುಃಖಪಡುತ್ತಿರುವೆ ಮತ್ತು ಅದೇ ಚಿಂತೆಯಲ್ಲಿಯೇ ಮಗ್ನನಾಗಿರುವೆ.

ಆದರೆ ಹಿಂದೆ ನೀನು ಮಾಡಬಾರದ ದುಷ್ಕೃತ್ಯಗಳನ್ನು ಮಾಡುತ್ತಿದ್ದೆಯಲ್ಲವೇ? ದೇವರಾಜನೇ ! ಹಿಂದೆ ನಾನು ನನ್ನ ಬುದ್ಧಿಯಿಂದ ಪ್ರಜೆಗಳನ್ನು ಸೃಷ್ಟಿಸಿದಾಗ ಅವರೆಲ್ಲರೂ ಒಂದೇ ಭಾಷೆ, ಒಂದೇ ರೂಪ ಮತ್ತು ಒಂದೇ ವಿಧವಾದ ಅಂಗಕಾಂತಿಗಳುಳ್ಳವರಾಗಿದ್ದರು. ಅವರ ಆಕಾರದಲ್ಲಾಗಲೀ, ಲಕ್ಷಣದಲ್ಲಾಗಲೀ – ಯಾವ ವಿಧವಾದ ವಿಶೇಷತೆಯೂ ಇರಲಿಲ್ಲ. ಆಗ ನಾನು ಏಕಾಗ್ರಚಿತ್ತನಾಗಿ ಆ ಪ್ರಜೆಗಳಲ್ಲಿ ವಿಶೇಷವಿರುವುದು ಸೂಕ್ತವೆಂದು ಚಿಂತಿಸತೊಡಗಿದೆನು. ಹಾಗೆ ವಿಚಾರಮಾಡಿದನಂತರ ಒಬ್ಬ ಸ್ತ್ರೀಯನ್ನು ಸೃಷ್ಟಿಸಿದೆನು. ಜನರ ಯಾವ ಪ್ರತಿಯೊಂದು ಅಂಗವು ಅದ್ಭುತವಾಗಿ, ವಿಶಿಷ್ಟವಾಗಿ, ಸೌಂದರ್ಯದಿಂದ ಕೂಡಿ ಇರುತ್ತಿದ್ದಿತೋ – ಅಂತಹ ವಿಶಿಷ್ಟವಾದ ಅಂಗಗಳನ್ನೇ ಒಂದೆಡೆಯಲ್ಲಿ ಸೇರಿಸಿ ವಿಶಿಷ್ಟವಾದ ರೂಪ ಮತ್ತು ಗುಣಗಳಿಂದ ಸಂಪನ್ನಳಾದ ಅಹಲ್ಯಾ ಎಂಬ ಸ್ತ್ರೀಯನ್ನು ನಾನು ಸೃಷ್ಟಿಸಿದೆನು.

ಹಲಂ ನಾಮೇಹ ವೈರೂಪ್ಯಂ ಹಲ್ಯಂ ತತ್ಪ್ರಭವಂ ಭವೇತ್ ।
ಯಸ್ಯಾ ನ ವಿದ್ಯತೇ ಹಲ್ಯಂ ತೇನಾಹಲ್ಯೇತಿ ವಿಶ್ರುತಾ ।
ಅಹಲ್ಯೇತ್ಯೇವ ಚ ಮಯಾ ತಸ್ಯಾ ನಾಮ ಪ್ರಕೀರ್ತಿತಮ್ ॥23॥

ಈ ಜಗತ್ತಿನಲ್ಲಿ ಕುರೂಪಕ್ಕೆ 'ಹಲ' ಎನ್ನುತ್ತಾರೆ. ಕುರೂಪತೆಯಿಂದ ಯಾವುದು ಪ್ರಕಟವಾಗುವುದೋ ಅದಕ್ಕೆ ಹಲ್ಯಾ ಎಂದು ಹೆಸರು. ಯಾವ ನಾರಿಗೆ ಕುತ್ಸಿತವಾದ ಆ ರೂಪವಿರುವುದಿಲ್ಲವೋ ಅವಳು ಅಹಲ್ಯಾ –ಸರ್ವಾಂಗಸುಂದರಿಯಾದವಳು. ಈ ಕಾರಣದಿಂದ ನೂತನವಾಗಿ ನನ್ನಿಂದ ನಿರ್ಮಿಸಲ್ಪಟ್ಟಿದ್ದ ಆ ನಾರಿಯು ಅಹಲ್ಯಾ ಎಂಬ ಹೆಸರಿನಿಂದಲೇ ವಿಖ್ಯಾತಳಾಗುವಂತೆ ನಾನು ಅವಳಿಗೆ ಅಹಲ್ಯಾ ಎಂದೇ ಹೆಸರಿಟ್ಟೆನು.

ಅಂತಹ ಪರಮಸುಂದರಿಯು ಸೃಷ್ಟಿಯಾದನಂತರ ಇವಳು ಯಾವನ ಪತ್ನಿಯಾಗಬಹುದೆಂದು ನಾನು ಯೋಚಿಸತೊಡಗಿದೆನು. ಆ ಸಮಯದಲ್ಲಿ ನೀನು ಸ್ಥಾನದಿಂದಲೂ ಪದವಿಯಿಂದಲೂ ಶ್ರೇಷ್ಠನಾಗಿದ್ದುದರಿಂದ ನನ್ನ ಅನುಮತಿಯನ್ನೇ ಅಪೇಕ್ಷಿಸದೇ ಮನಸ್ಸಿನಲ್ಲಿಯೇ ಇವಳು ನನ್ನ ಪತ್ನಿಯಾಗಲು ಯೋಗ್ಯಳಿರುವಳು – ಎಂದು ಚಿಂತಿಸಿದೆ. ಅನಂತರ ನಾನು ಅಹಲ್ಯೆಯನ್ನು ಮಹಾತ್ಮನಾದ ಗೌತಮನಲ್ಲಿ ಹಲವಾರು ವರ್ಷಗಳ ಕಾಲ ನ್ಯಾಸರೂಪವಾಗಿ ಇಟ್ಟಿದ್ದೆನು. ಅನಂತರ ಗೌತಮನು ಅವಳನ್ನು ನನಗೆ ಒಪ್ಪಿಸಿದನು.

ಮಹರ್ಷಿಯಾದ ಗೌತಮನ ಜಿತೇಂದ್ರಿಯತ್ವವನ್ನೂ, ತಪಸ್ಸಿನ ಸಿದ್ಧಿಯನ್ನೂ ನೋಡಿ ಸಂತುಷ್ಟನಾಗಿ ಅಹಲ್ಯೆಯನ್ನು ಅವನಿಗೇ ಮದುವೆಮಾಡಿಕೊಟ್ಟೆನು. ಧರ್ಮಾತ್ಮನಾದ ಗೌತಮನು ಅಹಲ್ಯೆಯೊಡನೆ ಹಲವಾರು ವರ್ಷಗಳವರೆಗೆ ಸುಖದಿಂದ ಕಾಲಕಳೆಯುತ್ತಿದ್ದನು. ನಾನು ಅಹಲ್ಯೆಯನ್ನು ಗೌತಮನಿಗೆ ಮದುವೆಮಾಡಿಕೊಟ್ಟುದರ ಪರಿಣಾಮವಾಗಿ ದೇವತೆಗಳಿಗೆ ನಿರಾಶೆಯುಂಟಾಯಿತು. ನೀನಂತೂ ಇದರಿಂದ ಹೆಚ್ಚು ಕುಪಿತನೇ ಆದೆ. ನಿನ್ನ ಮನಸ್ಸು ಕಾಮುವಶವಾಯಿತು. ಗೌತಮಮಹರ್ಷಿಯ ಆಶ್ರಮದ ಬಳಿಗೆ ಹೋಗಿ ಅಗ್ನಿಜ್ವಾಲೆಯಂತೆಯೇ ವಿರಾಜಿಸುತ್ತಿದ್ದ ಅಹಲ್ಯೆಯನ್ನು ನೋಡಿದೆ. ನೀನು ಕುಪಿತನೂ ಕಾಮುಕನೂ ಆಗಿದ್ದು ಆ ಸಮಯದಲ್ಲಿ ಅವಳ ಮೇಲೆ ಅತ್ಯಾಚಾರವನ್ನೆಸಗಿದೆ. ಅದೇ ಸಮಯದಲ್ಲಿ ಮಹರ್ಷಿಯಾದ ಗೌತಮನೂ ನಿನ್ನನ್ನು ಆಶ್ರಮದಲ್ಲಿ ನೋಡಿಬಿಟ್ಟನು. ಮಹಾತೇಜಸ್ವಿಯಾದ ಗೌತಮನು ಪರಮಕ್ರುದ್ಧನಾಗಿ ನಿನ್ನನ್ನು ಶಪಿಸಿದನು. ಮಹರ್ಷಿಯ ಆ ಶಾಪದ ಕಾರಣದಿಂದಲೇ ಈಗ ನಿನಗೆ ಇಂತಹ ವೈಪರೀತ್ಯದ ಅವಸ್ಥೆಯುಂಟಾಗಿದೆ.

ಮಹರ್ಷಿಯ ಶಾಪವು ಹೀಗಿದ್ದಿತು.

ಯಸ್ಮಾನ್ಮೇ ಧರ್ಷಿತಾ ಪತ್ನೀ ತ್ವಯಾ ವಾಸವ ನಿರ್ಭಯಾತ್ ।
ತಸ್ಮಾತ್ತ್ವಂ ಸಮರೇ ಶಕ್ರ ಶತ್ರುಹಸ್ತಂ ಗಮಿಷ್ಯಸಿ ॥32॥

'' ಶಕ್ರ ! ನೀನು ಯಾವ ವಿಧವಾದ ಭಯವೂ ಇಲ್ಲದೇ ನನ್ನ ಪತ್ನಿಯ ಮೇಲೆ ಅತ್ಯಾಚಾರವೆಸಗಿದ ಕಾರಣ ಯುದ್ಧದಲ್ಲಿ ಶತ್ರುವಶನಾಗುವೆ.

ಅಯಂ ತು ಭಾವೋ ದುರ್ಬುದ್ಧೇ ಯಸ್ತ್ವಯೇಹ ಪ್ರವರ್ತಿತಃ ।
ಮಾನುಷೇಷ್ವಪಿ ಲೋಕೇಷು ಭವಿಷ್ಯತಿ ನ ಸಂಶಯಃ ॥33॥

ಮೂರ್ಖನೇ ! ರಾಜನಾದ ನೀನು ಪ್ರಾರಂಭಿಸಿರುವ ಈ ಜಾರತ್ವವು ಮನುಷ್ಯಲೋಕದಲ್ಲಿ ಪ್ರಚಲಿತವಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ತತ್ರಾರ್ಧಂ ತಸ್ಯ ಯಃ ಕರ್ತಾ ತ್ವಯ್ಯರ್ಧಂ ನಿಪತಿಷ್ಯತಿ ।
ನ ಚ ತೇ ಸ್ಥಾವರಂ ಸ್ಥಾನಂ ಭವಿಷ್ಯತಿ ನ ಸಂಶಯಃ ॥34॥

ಲೋಕದಲ್ಲಿ ಮುಂದೆ ಯಾವನು ವ್ಯಭಿಚಾರವನ್ನು ನಡೆಸುವನೋ-ಅಂತಹವನಿಗೆ ಒದಗುವ ಪಾಪದಲ್ಲಿ ಅರ್ಧಭಾಗವು ನಿನಗೆ ಸೇರುತ್ತದೆ. ನೀನು

ಜಾರಭಾವಕ್ಕೆ ಪ್ರವರ್ತಕನಾಗಿರುವುದೇ ಇದಕ್ಕೆ ಕಾರಣ. ನಿನ್ನ ಈ ಇಂದ್ರ ಪದವಿಯೂ ನಿನಗೆ ಸ್ಥಿರವಾಗಿ ಉಳಿಯುವುದಿಲ್ಲ. ಇದರಲ್ಲಿ ಸಂಶಯವೇ ಇಲ್ಲ.

ಯಶ್ಚ ಯಶ್ಚ ಸುರೇನ್ದ್ರಃ ಸ್ಯಾದ್ಧ್ರುವಃ ಸ ನ ಭವಿಷ್ಯತಿ ।
ಏಷ ಶಾಪೋ ಮಯಾ ಮುಕ್ತಃ ....

ಯಾವ ಯಾವನು ಮಹೇಂದ್ರಪದವಿಯಲ್ಲಿ ಪ್ರತಿಷ್ಠಿತನಾಗುವನೋ ಅದರಲ್ಲಿ ಯಾವನೊಬ್ಬನೂ ಶಾಶ್ವತವಾಗಿ ಇಂದ್ರಪದವಿಯಲ್ಲಿ ಉಳಿದಿರುವುದಿಲ್ಲ. ಇಂದ್ರಪದವಿಯಲ್ಲಿರುವವರೆಲ್ಲರಿಗೂ ನಾನು ಈ ಶಾಪವನ್ನು ಕೊಟ್ಟಿದ್ದೇನೆ.''

ಮಹೇಂದ್ರ ! ಈ ಮಾತುಗಳನ್ನು ಗೌತಮನು ನಿನಗೆ ಹೇಳಿದನು. ಬಳಿಕ ಗೌತಮನು ಭಾರ್ಯೆಯನ್ನು ಗದರಿಸುತ್ತಾ ಹೇಳಿದನು :

ದುರ್ವಿನೀತೇ ವಿನಿಧ್ವಂಸ ಮಮಾಶ್ರಮಸಮೀಪತಃ ।
ರೂಪಯೌವನಸಂಪನ್ನಾ ಯಸ್ಮಾತ್ತ್ವಮನವಸ್ಥಿತಾ ।
ತಸ್ಮಾದ್ರೂಪವತೀ ಲೋಕೇ ನ ತ್ವಮೇಕಾ ಭವಿಷ್ಯತಿ ॥37॥

''ಅವಿಧೇಯಳೇ! ನೀನು ನನ್ನ ಆಶ್ರಮದ ಸಮೀಪದಲ್ಲಿಯೇ ಅದೃಶ್ಯಳಾಗಿರು. ರೂಪ –ಯೌವನಗಳಲ್ಲಿ ನನಗಾರೂ ಸಾಟಿಯಿಲ್ಲವೆಂಬ ಗರ್ವದಿಂದ ಮರ್ಯಾದೆಯನ್ನೂ ಮೀರಿ ನಡೆದಿರುವೆ. ಕಡುಚೆಲುವೆಯೆಂಬ ಅಹಂಕಾರವೇ ಇದಕ್ಕೆ ಕಾರಣವಿರಬಹುದು. ಆದುದರಿಂದ ಇನ್ನು ಮುಂದೆ ನಿನ್ನಂತಹ ಹಲವಾರು ರೂಪವತಿಯರು ಪ್ರಪಂಚದಲ್ಲಿ ಹುಟ್ಟುತ್ತಾರೆ.

ರೂಪಸೌಂದರ್ಯಕ್ಕೆ ಒಬ್ಬಳೇ ಖನಿಯಂತಿದ್ದ ನೀನು ಇಂದ್ರನ ಮನಸ್ಸಿನಲ್ಲಿ ಕಾಮವಿಕಾರವನ್ನು ಉಂಟುಮಾಡಿದೆ. ನಿನ್ನ ಈ ರೂಪವನ್ನು ಸಮಸ್ತ ಪ್ರಜೆಗಳೂ (ನಾರಿಯರೂ) ಹೊಂದುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ.''

ಅಲ್ಲಿಂದ ಮುಂದೆ ಲೋಕದಲ್ಲಿ ರೂಪಸಂಪನ್ನೆಯರಾದ ನಾರಿಯರು ಹೆಚ್ಚು–ಹೆಚ್ಚಾಗಿ ಜನಿಸತೊಡಗಿದರು.

ಅಹಲ್ಯೆಯು ಪತಿಯು ಕುಪಿತನಾಗಿರುವುದನ್ನು ಕಂಡು ಅವನನ್ನು ಪ್ರಸನ್ನಗೊಳಿಸುತ್ತಾ ಹೇಳಿದಳು :

ಅಜ್ಞಾನಾದ್ಧರ್ಷಿತಾ ವಿಪ್ರ ತ್ವದ್ರೂಪೇಣ ದಿವೌಕಸಾ ।
ನ ಕಾಮಕಾರಾದ್ವಿಪ್ರರ್ಷೇ ಪ್ರಸಾದಂ ಕರ್ತುಮರ್ಹಸಿ ॥40॥

''ವಿಪ್ರಶ್ರೇಷ್ಠನೇ ! ದೇವರಾಜನು ನಿನ್ನದೇ ಆದ ರೂಪವನ್ನು ಧರಿಸಿ ನನ್ನೊಡನೆ ಸಮಾಗಮಮಾಡಿದನು. ಅವನನ್ನು ನಾನು ಗುರುತಿಸಲಾಗಲಿಲ್ಲ. ಅಜ್ಞಾನದಿಂದಾಗಿ ನನ್ನಿಂದ ಈ ಅಪರಾಧವು ನಡೆದಿದೆ. ಸ್ವೇಚ್ಛಾಚಾರದಿಂದ ನಾನು ಈ ಅಪರಾಧವನ್ನು ಮಾಡಿರುವುದಿಲ್ಲ. ಆದುದರಿಂದ ಪ್ರಸನ್ನನಾಗು.''

ಅಹಲ್ಯೆಯು ಹೀಗೆ ಪ್ರಾರ್ಥಿಸಲು ಗೌತಮನು ಪ್ರತ್ಯುತ್ತರಿಸಿದನು :

ಉತ್ಪತ್ಸ್ಯತಿ ಮಹಾತೇಜಾ ಇಕ್ಷ್ವಾಕೂಣಾಂ ಮಹಾರಥಃ ॥41॥
ರಾಮೋ ನಾಮ ಶ್ರುತೋ ಲೋಕೇ ವನಂ ಚಾಪ್ಯುಪಯಾಸ್ಯತಿ ।
ಬ್ರಾಹ್ಮಣಾರ್ಥೇ ಮಹಾಬಾಹುರ್ವಿಷ್ಣುರ್ಮಾನುಷವಿಗ್ರಹಃ ॥42॥
ತಂ ದ್ರಕ್ಷ್ಯಸಿ ಯದಾ ಭದ್ರೇ ತತಃ ಪೂತಾ ಭವಿಷ್ಯಸಿ ।
ಸ ಹಿ ಪಾವಯಿತುಂ ಶಕ್ತಸ್ತ್ವಯಾ ಯದ್ದುಷ್ಕೃತಂ ಕೃತಮ್ ॥ 43॥

'' ಭದ್ರೇ ! ಇಕ್ಷ್ವಾಕುವಂಶದಲ್ಲಿ ಮಹಾತೇಜಸ್ವಿಯಾದ ಮಹಾರಥನಾದ ವೀರನು ಅವತರಿಸುತ್ತಾನೆ. ಅವನು 'ಶ್ರೀರಾಮ' - ಎಂಬ ಹೆಸರಿನಿಂದ ವಿಖ್ಯಾತನಾಗುತ್ತಾನೆ. ಮಹಾಬಾಹುವಾದ ಸಾಕ್ಷಾತ್ ಮಹಾವಿಷ್ಣುವೇ ಮನುಷ್ಯಶರೀರವನ್ನು ಧರಿಸಿ ಶ್ರೀರಾಮನಾಗಿ ಹುಟ್ಟುತ್ತಾನೆ. ಅವನು ಬ್ರಾಹ್ಮಣರ ಕಾರ್ಯನಿರ್ವಹಣೆಗಾಗಿ ವಿಶ್ವಾಮಿತ್ರರ ಜೊತೆಯಲ್ಲಿ ಈ ಅರಣ್ಯಕ್ಕೆ ಬಂದಾಗ ನೀನು ಅವನನ್ನು ಸಂದರ್ಶಿಸುವೆ. ಆಗಲೇ ನೀನು ಪರಿಶುದ್ಧಳಾಗುವೆ. ಇಂತಹ ದುಷ್ಕಾರ್ಯವನ್ನು ಮಾಡಿರುವ ನಿನ್ನನ್ನು ಅವ ನೊಬ್ಬನೇ ಪಾವನಗೊಳಿಸಬಲ್ಲನು.

ವರವರ್ಣಿನಿಯೇ! ಅವನಿಗೆ ಆತಿಥ್ಯವನ್ನು ಮಾಡಿದನಂತರ ನೀನು ನನ್ನನ್ನು ಪುನಃ ಸೇರುವೆ ಮತ್ತು ನನ್ನೊಡನೆ ವಾಸಮಾಡಿಕೊಂಡಿರುವೆ.''

ಹೀಗೆ ಹೇಳಿ ವಿಪ್ರರ್ಷಿಯು ತನ್ನಆಶ್ರಮಕ್ಕೆ ಹೊರಟುಹೋದನು. ಬ್ರಹ್ಮವಾದಿಯಾದ ಗೌತಮನ ಪತ್ನಿಯಾದ ಅಹಲ್ಯೆಯು ಅದೃಶ್ಯಳಾಗಿಯೇ

ಇರುತ್ತಾ ಅತಿಘೋರವಾದ ತಪಸ್ಸಿನಲ್ಲಿ ತೊಡಗಿದಳು. ಮಹಾಬಾಹುವೇ ! ದೇವೇಂದ್ರ ! ಗೌತಮನ ಶಾಪದ ಪ್ರಭಾವದಿಂದಲೇ ನಿನಗೆ ಇಂತಹ ದುರವಸ್ಥೆಯು ಒದಗಿಬಂದಿದೆ. ನೀನು ಆಗ ಮಾಡಿದ ದುಷ್ಕಾರ್ಯವನ್ನು ಈಗಲಾದರೂ ಸ್ಮರಿಸು. ಆ ಶಾಪದ ಕಾರಣದಿಂದಲೇ ನೀನು ಶತ್ರುವಿನ ಬಂದಿಯಾದೆ. ಇದಕ್ಕೆ ಗೌತಮನ ಶಾಪವು ಹೊರತಾಗಿ ಬೇರೆ ಯಾವ ಕಾರಣವೂ ಇಲ್ಲ. ಶಾಪದ ಪರಿಹಾರಕ್ಕಾಗಿ ನೀನೀಗಲೇ ಏಕಾಗ್ರಚಿತ್ತನಾಗಿ ವೈಷ್ಣವಯಾಗವನ್ನು ಮಾಡು. ಆ ಯಜ್ಞವನ್ನು ಮಾಡಿ ಪರಿಶುದ್ಧನಾದ ನಂತರ ನೀನು ಸ್ವರ್ಗಕ್ಕೆ ಹೋಗಬಹುದಾಗಿದೆ. ಯುದ್ಧದಲ್ಲಿ ನಿನ್ನ ಮಗನಾದ ಜಯಂತನು ವಿನಾಶಹೊಂದಿಲ್ಲ. ಅವನ ಮಾತಾಮಹನಾದ ಪುಲೋಮನು ಜಯಂತನನ್ನು ಕರೆದೊಯ್ದು ಮಹೋದಧಿಯಲ್ಲಿಟ್ಟಿದ್ದಾನೆ. ಈ ಸಮಯ ದಲ್ಲಿ ಜಯಂತನು ಪುಲೋಮನೊಡನಿದ್ದಾನೆ. ''

ಬ್ರಹ್ಮನು ಹೇಳಿದ ಮಾತನ್ನು ಕೇಳಿ ಇಂದ್ರನು ವೈಷ್ಣವಯಾಗವನ್ನು ಮಾಡಿ ಪರಿಶುದ್ಧನಾಗಿ ಸ್ವರ್ಗವನ್ನು ಸೇರಿ ಹಿಂದಿನಂತೆಯೇ ದೇವರಾಜ್ಯ ವನ್ನಾಳಲು ಉಪಕ್ರಮಿಸಿದನು.

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

'' ರಘುನಂದನ ! ಹೀಗೆ ನಾನು ನಿನಗೆ ಮೇಘನಾದನಿಗೆ ' ಇಂದ್ರಜಿತು' ಎಂಬ ಹೆಸರು ಬರಲು ಕಾರಣ, ಅವನಲ್ಲಿದ್ದ ಬಲ – ಎಲ್ಲವನ್ನೂ ವರ್ಣಿಸಿ ಹೇಳಿದ್ದೇನೆ. ಮೇಘನಾದನು ದೇವೇಂದ್ರನನ್ನೂ ಜಯಿಸಿದನೆಂದಮೇಲೆ ಅನ್ಯಪ್ರಾಣಿಗಳ ವಿಷಯದಲ್ಲಿ ಹೇಳುವುದೇನಿದೆ ?''

ಅದನ್ನು ಕೇಳಿ ರಾಮ–ಲಕ್ಷ್ಮಣರು ''**ಆಶ್ಚರ್ಯಮಾಶ್ಚರ್ಯಂ**'' ಎಂದು ಉದ್ಗರಿಸಿದರು. ಅಂತೆಯೇ ಅಲ್ಲಿ ನೆರೆದಿದ್ದ ವಾನರ – ರಾಕ್ಷಸರೂ ಅಚ್ಚರಿ ಗೊಂಡರು. ಶ್ರೀರಾಮನ ಪಕ್ಕದಲ್ಲಿಯೇ ಕುಳಿತಿದ್ದ ವಿಭೀಷಣನು ಹೇಳಿದನು:

'' ರಾಘವ ! ಹಿಂದೆ ನಾನು ಯಾವ ಆಶ್ಚರ್ಯದ ಘಟನೆಯನ್ನು ಪ್ರತ್ಯಕ್ಷವಾಗಿಯೇ ಕಂಡಿದ್ದೆನೋ ಅದನ್ನೇ ಈಗ ಅಗಸ್ತ್ಯರು ನನ್ನ ಸ್ಮರಣೆಗೆ ತಂದಿದ್ದಾರೆ.''

ಶ್ರೀರಾಮನು ಅಗಸ್ತ್ಯರಿಗೆ ಹೇಳುತ್ತಾನೆ :

''ಮಹರ್ಷಿಗಳೇ ! ತಾವು ಹೇಳಿದ ಮಾತು ಸತ್ಯವಾಗಿದೆ. ಇದನ್ನೇ ನಾನು ವಿಭೀಷಣನಿಂದಲೂ ಕೇಳಿದ್ದೆನು.''

ಪುನಃ ಅಗಸ್ತ್ಯರು ಹೇಳುತ್ತಾರೆ :

'' ರಾಘವ ! ಹೀಗೆ ಪುತ್ರಸಹಿತನಾದ ರಾವಣನು ಲೋಕಕ್ಕೆ ಕಂಟಕಪ್ರಾಯನಾಗಿದ್ದನು. ರಾವಣನ ಆ ಮಗನೇ ಸುರೇಶ್ವರನಾದ ಇಂದ್ರನನ್ನೂ ಯುದ್ಧದಲ್ಲಿ ಜಯಿಸಿದನು.''

30ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **31ನೆಯ ಸರ್ಗ**

ರಾವಣನು ಮಾಹಿಷ್ಮತೀಪಟ್ಟಣಕ್ಕೆ ಹೋಗಿ ಅಲ್ಲಿಯ ರಾಜನಾದ ಅರ್ಜುನನನ್ನು ಕಾಣಲಾಗದೇ ಮಂತ್ರಿಗಳೊಡನೆ ವಿಂಧ್ಯಪರ್ವತದ ಬಳಿಗೆ ಬಂದುದು : ನರ್ಮದಾತೀರದಲ್ಲಿ ರಾವಣನಿಂದ ಶಿವನ ಆರಾಧನೆ

ತತೋ ರಾಮೋ ಮಹಾತೇಜಾ ವಿಸ್ಮಯಾತ್ಪುನರೇವ ಹಿ ।
ಉವಾಚ ಪ್ರಣತೋ ವಾಕ್ಯಮಗಸ್ತ್ಯಮೃಷಿಸತ್ತಮಮ್ ॥1॥

ಬಳಿಕ ಮಹಾತೇಜಸ್ವಿಯಾದ ಶ್ರೀರಾಮನು ಮುನಿಶ್ರೇಷ್ಠರಾದ ಅಗಸ್ತ್ಯರಿಗೆ ನಮಸ್ಕರಿಸಿ ವಿಸ್ಮಯಪೂರ್ವಕವಾಗಿ ಪುನಃ ಪ್ರಶ್ನಿಸಿದನು :

''ಪೂಜ್ಯರೇ ! ದ್ವಿಜಶ್ರೇಷ್ಠರೇ ! ಕ್ರೂರಿಯಾದ ರಾವಣರಾಕ್ಷಸನು ವಿಜಯಿಯಾಗಿ ಭೂಮಂಡಲದಲ್ಲಿ ಸಂಚರಿಸುತ್ತಿದ್ದಾಗ ಭೂಮಂಡಲದಲ್ಲಿದ್ದ ಎಲ್ಲ ರಾಜರೂ ಶೌರ್ಯವೇ ಮೊದಲಾದ ಕ್ಷಾತ್ರಗುಣಗಳಿಂದ ಶೂನ್ಯರಾಗಿ ಬಿಟ್ಟಿದ್ದರೇ ? ಆ ದಿವಸಗಳಲ್ಲಿ ಬಲಿಷ್ಠನಾದ ರಾವಣನನ್ನು ಎದುರಿಸಬಲ್ಲ ಕ್ಷತ್ರಿಯರಾಜನಾಗಲೀ ಕ್ಷತ್ರಿಯನಲ್ಲದ ರಾಜನಾಗಲೀ ಯಾರೂ ಇರಲೇ ಇಲ್ಲವೇ ? ರಾಕ್ಷಸೇಶ್ವರನು ಭೂಮಂಡಲದ ಯಾವುದೇ ಕಡೆಯಲ್ಲಾದರೂ ಪರಾಜಿತನೇ ಆಗಲಿಲ್ಲವೇ ? ಅಥವಾ ಆ ಸಮಯದಲ್ಲಿ ಇದ್ದ ರಾಜರೆಲ್ಲರೂ ಪರಾಕ್ರಮಶೂನ್ಯರಾಗಿ ದಿವ್ಯಾಸ್ತ್ರಗಳ ಜ್ಞಾನದಿಂದ ವಂಚಿತರಾಗಿದ್ದರೇ ?

ಅದರಿಂದಲೇ ಬಹುಸಂಖ್ಯಾತರಾದ ಮತ್ತು ಶ್ರೇಷ್ಠರಾದ ಭೂಪಾಲರು ರಾವಣನಿಂದ ಪರಾಜಿತರಾದರೇ ?''

ಶ್ರೀರಾಮನ ಈ ಮಾತನ್ನು ಕೇಳಿ ಪೂಜ್ಯರಾದ ಅಗಸ್ತ್ಯಮಹರ್ಷಿಗಳು ನಸುನಗುತ್ತಾ ಬ್ರಹ್ಮನು ಮಹೇಶ್ವರನಿಗೆ ಹೇಳುವಂತೆ ಶ್ರೀರಾಮನಿಗೆ ಮುಂದಿನ ಕಥೆಯನ್ನು ಹೇಳತೊಡಗಿದರು :

'' ಪ್ರಜಾನಾಥನೇ ! ಪಾರ್ಥಿವಶ್ರೇಷ್ಠನೇ ! ರಾಘವ ! ಈ ಹಿಂದೆ ನಾನು ಹೇಳಿದಂತೆ ರಾವಣನು ಪೃಥ್ವಿಯ ಎಲ್ಲ ರಾಜರನ್ನೂ ಬಾಧೆಪಡಿಸುತ್ತಾ ಪರಾಜಯಗೊಳಿಸುತ್ತಾ ಭೂಮಂಡಲದಲ್ಲಿ ಸುತ್ತಾಡುತ್ತಲೇ ಇದ್ದನು. ಹಾಗೆಯೇ ದರ್ಪದಿಂದ ಸುತ್ತಾಡುತ್ತಿದ್ದಾಗ ಸ್ವರ್ಗದ ಪಟ್ಟಣವಾದ ಅಮರಾವತಿಯಂತೆ ಸುಶೋಭಿಸುತ್ತಿದ್ದ, ಅಗ್ನಿದೇವನ ಸಾನ್ನಿಧ್ಯದಲ್ಲಿದ್ದ ಮಾಹಿಷ್ಮತೀ ಎಂಬ ಪಟ್ಟಣಕ್ಕೆ ಹೋದನು. ಅಗ್ನಿದೇವನ ಪ್ರಭಾವದಿಂದ ಆ ಪಟ್ಟಣದಲ್ಲಿ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಅರ್ಜುನನೆಂಬ (ಕಾರ್ತವೀರ್ಯ) ಹೆಸರಿನ ರಾಜನು ರಾಜ್ಯವಾಳುತ್ತಿದ್ದನು. ಆ ರಾಜ್ಯದಲ್ಲಿ ದರ್ಭೆಯ ಆಸ್ತರಣದ ಮೇಲಿದ್ದ ಅಗ್ನಿಕುಂಡದಲ್ಲಿ ಅಗ್ನಿದೇವನು ಯಾವಾಗಲೂ ಪ್ರಜ್ವಲಿಸುತ್ತಲೇ ಇರುತ್ತಿದ್ದನು. ರಾವಣನು ಮಾಹಿಷ್ಮತೀ ಪಟ್ಟಣಕ್ಕೆ ಬಂದ ದಿನವೇ ಹೈಹಯರ ಅಧಿಪತಿಯಾದ ಮಹಾಬಲಿಷ್ಠನಾಗಿದ್ದ ಅರ್ಜುನನು ಸ್ತ್ರೀಯರೊಡನೆ ನರ್ಮದಾನದಿಯಲ್ಲಿ ಜಲಕ್ರೀಡೆಯಾಡಲು ಹೊರಟುಹೋಗಿದ್ದನು. ನಗರಕ್ಕೆ ಆಗಮಿಸಿದ್ದ ರಾಕ್ಷಸೇಶ್ವರನಾದ ರಾವಣನು ಅರ್ಜುನನ ಮಂತ್ರಿಗಳನ್ನು ಪ್ರಶ್ನಿಸಿದನು :

'' ಅಮಾತ್ಯರೇ ! ರಾಜನಾದ ಅರ್ಜುನನು ಈಗೆಲ್ಲಿದ್ದಾನೆ ? ಶೀಘ್ರವಾಗಿ ಹೋಗಿ ನಿಮ್ಮ ರಾಜನಿಗೆ ಹೇಳಿರಿ. ನಿಮ್ಮ ಮಹಾರಾಜನೊಡನೆ ಯುದ್ಧ ಮಾಡುವ ಇಚ್ಛೆಯಿಂದ ರಾಕ್ಷಸೇಶ್ವರನಾದ ರಾವಣನೆಂಬ ನಾನು ಬಂದಿರುವೆನು. ನೀವು ಮುಂದಾಗಿ ಹೋಗಿ ನನ್ನ ಆಗಮನದ ವಾರ್ತೆಯನ್ನು ನಿಮ್ಮ ರಾಜನಿಗೆ ತಿಳಿಸಿರಿ.''

ರಾವಣನು ಹೀಗೆ ಹೇಳಲು ಜಾಣಾಕ್ಷರಾಗಿದ್ದ ಅರ್ಜುನನ ಮಂತ್ರಿಗಳು ತಮ್ಮ ರಾಜನು ನಗರದಲ್ಲಿಲ್ಲವೆಂಬ ವಾರ್ತೆಯನ್ನು ರಾವಣೇಶ್ವರನಿಗೆ ಅರುಹಿದರು.

ಅರ್ಜುನನು ದೇಶದ ಹೊರಗಿರುವನೆಂಬ ವಾರ್ತೆಯನ್ನು ಕೇಳಿ ರಾವಣನು ಅಲ್ಲಿಂದ ಹೊರಟು ಹಿಮವತ್ಪರ್ವತದಂತೆ ವಿಶಾಲವಾಗಿದ್ದ ವಿಂಧ್ಯ ಪರ್ವತಕ್ಕೆ ಹೋದನು. ಆ ಪರ್ವತದ ಶಿಖರವಾದರೋ ಮೇಘದೊಡನೆ ಸೇರಿಕೊಂಡಿರುವುದೋ ಎಂಬಂತೆ ಎತ್ತರವಾಗಿದ್ದಿತು. ಭೂಮಿಯನ್ನು ಭೇದಿಸಿಕೊಂಡು ಹೊರಬಂದಿರುವಂತೆ ಕಾಣುತ್ತಿದ್ದಿತು. ಶಿಖರಗಳ ಮೂಲಕ ವಾಗಿ ಆಕಾಶದಲ್ಲಿ ಗೆರೆಯನ್ನು ಎಳೆಯುತ್ತಿರುವುದೋ ಎಂಬಂತೆ ಭಾಸವಾಗು ತ್ತಿದ್ದಿತು. ಅಂತಹ ಸಾವಿರ ಶಿಖರಗಳಿಂದ ಕೂಡಿದ್ದ, ಸಿಂಹವೇ ಮೊದಲಾದ ಪ್ರಾಣಿಗಳು ವಾಸಿಸುವ ಗುಹೆಗಳಿಂದ ವ್ಯಾಪ್ತವಾಗಿದ್ದ ವಿಂಧ್ಯಪರ್ವತವನ್ನು ರಾವಣನು ನೋಡಿದನು. ಆ ಪರ್ವತದ ಎತ್ತರವಾದ ಶಿಖರದಿಂದ ಶೀತಲ ವಾದ ನೀರಿನಿಂದ ಕೂಡಿದ ಜಲಧಾರೆಗಳು ಕೆಳಗೆ ಬೀಳುತ್ತಿದ್ದು ಅವುಗಳ ಮೂಲಕ ಪರ್ವತವು ಕೇಕೆಹಾಕಿಕೊಂಡು ಅಟ್ಟಹಾಸಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ದೇವ–ದಾನವ–ಗಂಧರ್ವರೂ ಮತ್ತು ಕಿನ್ನರರೂ ತಮ್ಮ ಪತ್ನಿಯರೊಡನೆಯೂ ಅಪ್ಸರೆಯರೊಡನೆಯೂ ವಿಂಧ್ಯಪರ್ವತದ ತಪ್ಪಲುಗಳಲ್ಲಿ ವಿಹರಿಸುತ್ತಿದ್ದರು. ಎತ್ತರವಾಗಿದ್ದ ಆ ಪರ್ವತವು ರಮ್ಯತೆ ಯಿಂದ ಕೂಡಿದ್ದು ಸ್ವರ್ಗಕ್ಕೆ ಸಮಾನವಾಗಿ ಕಾಣುತ್ತಿದ್ದಿತು. ಸ್ಫಟಿಕಕ್ಕೆ ಸಮಾನವಾದ ನಿರ್ಮಲವಾದ ನೀರಿನಿಂದ ತುಂಬಿಹರಿಯುತ್ತಿದ್ದ ನದಿಗಳಿಂದ ಕೂಡಿದ್ದ ಆ ವಿಂಧ್ಯಪರ್ವತವು ಚಂಚಲವಾದ ನಾಲಿಗೆಗಳಿಂದ ಕೂಡಿರುವ ಅನಂತನಾಗನಂತೆಯೇ ಕಾಣುತ್ತಿದ್ದಿತು. ಅತ್ಯಂತ ಎತ್ತರವಾಗಿದ್ದು ಆ ಪರ್ವತವು ಊರ್ಧ್ವಲೋಕಗಳಿಗೆ ಹೋಗುತ್ತಿರುವುದೋ ಎಂಬಂತಿದ್ದಿತು. ಹಿಮವತ್ಪರ್ವತದಂತೆ ವಿಶಾಲವಾಗಿದ್ದ ವಿಂಧ್ಯಪರ್ವತವು ಹಲವಾರು ಗುಹೆ ಗಳಿಂದ ಕೂಡಿದ್ದಿತು. ಈ ಪ್ರಕಾರವಾಗಿ ಕಂಗೊಳಿಸುತ್ತಿದ್ದ ವಿಂಧ್ಯಪರ್ವತ ವನ್ನು ನೋಡುತ್ತಾ ರಾವಣನು ನರ್ಮದಾನದಿಯ ತೀರಕ್ಕೆ ಹೋದನು. ಪುಣ್ಯವತಿಯಾದ ಆ ನದಿಯು ಬಂಡೆಗಳ ಮಧ್ಯೆ ಧುಮುಕುತ್ತಾ ಪಶ್ಚಿಮ ಸಮುದ್ರದ ಕಡೆಗೆ ಹರಿಯುತ್ತಿದ್ದಿತು. ಬಿಸಿಲಿನ ಬೇಗೆಯಿಂದ ಪರಿತಪಿಸು ತ್ತಿದ್ದ, ಬಾಯಾರಿಕೆಯಿಂದ ಬಳಲಿದ್ದ ಎಮ್ಮೆ, ಜಿಂಕೆ, ಸಿಂಹ, ವ್ಯಾಘ್ರ, ಕರಡಿ, ಆನೆ –ಇವೇ ಮೊದಲಾದ ಪ್ರಾಣಿಗಳು ನದಿಯಲ್ಲಿ ಬಿದ್ದು ನೀರನ್ನು ಅಲ್ಲೋಲ –ಕಲ್ಲೋಲಗೊಳಿಸುತ್ತಿದ್ದುವು. ಮದಿಸಿ ಕಲ –ಕಲ ಶಬ್ದ ಮಾಡು

ತ್ತಿದ್ದ ಚಕ್ರವಾಕ, ಕಾರಂಡವ, ಹಂಸ, ನೀರುಕೋಳಿ, ಸಾರಸ –ಇವೇ ಮುಂತಾದ ಪಕ್ಷಿಗಳಿಂದ ಆ ನದಿಯು ವ್ಯಾಪ್ತವಾಗಿದ್ದಿತು. ನದಿಗಳಲ್ಲಿಯೇ ಶ್ರೇಷ್ಠವಾದ ನರ್ಮದೆಯು ಸುಂದರಿಯಾದ, ಪ್ರಿಯತಮೆಯಾದ ನಾರಿಯಂತೆಯೇ ಕಾಣುತ್ತಿದ್ದಿತು. ತೀರಪ್ರದೇಶದಲ್ಲಿ ಪುಷ್ಪಭರಿತವಾಗಿದ್ದ ನಾನಾ ವಿಧವಾದ ವೃಕ್ಷಗಳೇ ನರ್ಮದಾನಾರೀಮಣಿಯ ಆಭರಣಗಳಾಗಿದ್ದುವು. ನೀರಿನಲ್ಲಾಡುತ್ತಿದ್ದ ಎರಡು ಚಕ್ರವಾಕಪಕ್ಷಿಗಳು ಸ್ತನಗಳಂತಿದ್ದುವು. ಎತ್ತರವಾಗಿದ್ದ ಮತ್ತು ವಿಶಾಲವಾಗಿದ್ದ ತೀರಪ್ರದೇಶದ ಮರಳುದಿಣ್ಣೆಗಳು ಅವಳ ನಿತಂಬಗಳಂತಿದ್ದುವು. ನದಿಯಲ್ಲಿ ಆಟವಾಡುತ್ತಿದ್ದ ಹಂಸಗಳ ಸಾಲು ನರ್ಮದಾನಾರೀಮಣಿಯ ಮುತ್ತಿನ ಸೊಂಟಪಟ್ಟಿಯಂತೆ ಕಾಣುತ್ತಿದ್ದಿತು. ಪುಷ್ಪಗಳ ಪರಾಗವೇ ಅಂಗರಾಗವಾಗಿದ್ದು ಅದನ್ನೇ ಅವಳು ತನ್ನ ಅಂಗಾಂಗಗಳಲ್ಲಿ ಪೂಸಿಕೊಂಡಿದ್ದಳು. ನೀರಿನಲ್ಲಿ ಹುಟ್ಟುತ್ತಿದ್ದ ಉಜ್ಜ್ವಲವಾದ ನೊರೆಯೇ ಸ್ವಚ್ಛವಾದ, ಶ್ವೇತವರ್ಣದ ವಸ್ತ್ರವಾಗಿದ್ದಿತು. ಪುರುಷರು ಸ್ನಾನಮಾಡುವುದೇ ನರ್ಮದಾನಾರೀಮಣಿಗೆ ಸುಖಸ್ಪರ್ಶವಾಗಿದ್ದಿತು. ಅರಳಿದ ಕಮಲಗಳೇ ನಾರೀಮಣಿಯ ಸುಂದರವಾದ ಕಣ್ಣುಗಳಾಗಿದ್ದುವು. ದಶಾನನನು ಪುಷ್ಪಕವಿಮಾನದಿಂದಿಳಿದು ತನಗೆ ಇಷ್ಟಳಾದ ನಾರಿಯ ಕಡೆಗೆ ಧಾವಿಸುವಂತೆ ನದಿಗಳಿಗೆ ಶ್ರೇಷ್ಠಳಾದ ನರ್ಮದಾನದಿಗೆ ಹೋಗಿ ಅವಳ ಶುದ್ಧಜಲದಲ್ಲಿ ಅವಗಾಹನ ಸ್ನಾನಮಾಡಿ ಮೀನುಗಳಿಂದ ಸೇವಿಸಲ್ಪಡುತ್ತಿದ್ದ ರಮ್ಯವಾಗಿದ್ದ ನದಿಯತೀರದ ಮರಳಿನಲ್ಲಿ ಮಂತ್ರಿಗಳೊಡನೆ ಕುಳಿತುಕೊಂಡನು. 'ಇದು ಸಾಕ್ಷಾತ್ ಗಂಗಾನದಿಯೇ ಆಗಿದೆ' ಎಂದು ರಾವಣನು ನರ್ಮದೆಯನ್ನು ಪ್ರಶಂಸಿಸುತ್ತಾ ನದಿಯ ದರ್ಶನದಿಂದ ಆನಂದತುಂದಿಲನಾದನು. ಶುಕ–ಸಾರಣರೇ ಮೊದಲಾದ ಮಂತ್ರಿಗಳೊಡನೆ ವಿನೋದದಿಂದ ಹೇಳಿದನು :

'' ಅಮಾತ್ಯರೇ ! ಸೂರ್ಯನು ತನ್ನ ಸಾವಿರಾರು ಕಿರಣಗಳಿಂದ ಪ್ರಪಂಚವನ್ನು ಕಾಂಚನಮಯವನ್ನಾಗಿ ಮಾಡಿದ್ದಾನೆ. ತೀಕ್ಷ್ಣವಾದ ತಾಪವನ್ನುಂಟುಮಾಡುವ ಈ ಸೂರ್ಯನೀಗ ಆಕಾಶದ ಮಧ್ಯಭಾಗಕ್ಕೆ ಬಂದಿದ್ದಾನೆ. ಆದರೆ ನಾನು ಇಲ್ಲಿ ಕುಳಿತಿರುವುದನ್ನು ಅರಿತು ಅವನೀಗ ಚಂದ್ರನಂತೆ ಶೀತಲನಾಗಿದ್ದಾನೆ. ನನ್ನ ಭಯದಿಂದಲೇ ವಾಯುವು ನರ್ಮದೆಯ ಶೀತಲಜಲದ ಮೇಲೆ ಬೀಸುತ್ತಾ ಶೀತಲನಾಗಿ ಸುಗಂಧವನ್ನು ಹೊತ್ತು

ಮೆಲ್ಲ-ಮೆಲ್ಲನೆ ಬೀಸುತ್ತಾ ನಮ್ಮೆಲ್ಲರ ಶ್ರಮಪರಿಹಾರಕನಾಗಿದ್ದಾನೆ. ನದಿಗಳಲ್ಲಿ ಶ್ರೇಷ್ಠಳಾದ ಈ ನರ್ಮದೆಯು ಕೂಡ ನಮ್ಮ ಸುಖವನ್ನು ಹೆಚ್ಚಿಸುವುದರಲ್ಲಿಯೇ ಆಸಕ್ತಳಾಗಿದ್ದಾಳೆ. ಮೊಸಳೆ, ಮೀನು , ಪಕ್ಷಿ ಮತ್ತು ಅಲೆಗಳಿಂದ ಕೂಡಿರುವ ಇವಳು ಭಯಗ್ರಸ್ತಳಾದ ನಾರಿಯಂತೆಯೇ ಕಾಣುತ್ತಿದ್ದಾಳೆ.

ನೀವೆಲ್ಲರೂ ರಣರಂಗದಲ್ಲಿ ಇಂದ್ರನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳ ರಾಜರ-ಅಸ್ತ್ರ-ಶಸ್ತ್ರಗಳಿಂದ ಗಾಯಗೊಂಡಿರುವಿರಿ. ಚಂದನರಸದಂತಿದ್ದ ರಕ್ತದಿಂದ ತೋಯ್ದು ಹೋಗಿರುವಿರಿ. ಸಾರ್ವಭೌಮವೇ ಮೊದಲಾದ ದಿಗ್ಗಜಗಳು ಗಂಗೆಯಲ್ಲಿ ಅವಗಾಹನವಮಾಡುವಂತೆ ನೀವೆಲ್ಲರೂ ಸುಖದಾಯಕವಾದ ಈ ನರ್ಮದಾನದಿಯಲ್ಲಿ ಸ್ನಾನಮಾಡಿರಿ. ಈ ನದಿಯಲ್ಲಿ ಸ್ನಾನಮಾಡಿ ಪಾಪದಿಂದಲೂ ತಾಪದಿಂದಲೂ ಮುಕ್ತರಾಗಿರಿ. ನಾನೂ ಕೂಡ ಶರತ್ಕಾಲದ ಚಂದ್ರನಂತೆ ಶುಭ್ರವಾದ ಪ್ರಭೆಯಿಂದ ಕೂಡಿರುವ ಈ ಮರಳಿನಲ್ಲಿ ಕುಳಿತು ಈಶ್ವರನಿಗೆ ಪುಷ್ಪೋಪಹಾರವನ್ನು ಸಾವಧಾನವಾಗಿ ಸಮರ್ಪಿಸುತ್ತೇನೆ.''

ರಾವಣನು ಹೀಗೆ ಆಜ್ಞಾಪಿಸಲು ಪ್ರಹಸ್ತ, ಶುಕ, ಸಾರಣ, ಮಹೋದರ, ಧೂಮ್ರಾಕ್ಷರು ನರ್ಮದಾನದಿಯಲ್ಲಿ ಸ್ನಾನಮಾಡಿದರು.

ವಾಮನ, ಅಂಜನ, ಪದ್ಮ ಇವೇ ಮೊದಲಾದ ದಿಗ್ಗಜಗಳು ಗಂಗಾ ನದಿಯ ನೀರನ್ನು ಅಲ್ಲೋಲ-ಕಲ್ಲೋಲಗೊಳಿಸುವಂತೆ ರಾಕ್ಷಸಶ್ರೇಷ್ಠರ ಆನೆ ಗಳು ನರ್ಮದಾನದಿಯ ನೀರನ್ನು ಅಲ್ಲೋಲ-ಕಲ್ಲೋಲಗೊಳಿಸಿದುವು. ಮಹಾಬಲಿಷ್ಠರಾದ ರಾಕ್ಷಸರೆಲ್ಲರೂ ನರ್ಮದಾನದಿಯಲ್ಲಿ ಸ್ನಾನಮಾಡಿದಮೇಲೆ ರಾವಣನ ಶಿವಪೂಜೆಗಾಗಿ ಪುಷ್ಪಗಳನ್ನು ಕಿತ್ತುತಂದರು. ಶುಭ್ರವಾದ ಬಿಳಿಯ ಮೋಡಗಳಂತೆ ಪ್ರಭೆಯಿಂದ ವಿಶಿಷ್ಟವಾಗಿದ್ದ ಮನಸ್ಸಿಗೆ ಆಹ್ಲಾದಕರವಾಗಿದ್ದ ನರ್ಮದಾನದಿಯ ಮರಳಿನ ಮೇಲೆ ರಾಕ್ಷಸರೆಲ್ಲರೂ ಸೇರಿ ಮುಹೂರ್ತಮಾತ್ರದಲ್ಲಿ ಬೆಟ್ಟದಷ್ಟು ಎತ್ತರವಾದ ಪುಷ್ಪಗಳ ರಾಶಿಯನ್ನೇ ಪೇರಿಸಿದರು. ಹೀಗೆ ರಾವಣನ ಅಮಾತ್ಯರೆಲ್ಲರೂ ರಾವಣನ ಪೂಜೆಯ ಸಲುವಾಗಿ ಅಪಾರವಾಗಿ ಪುಷ್ಪಗಳನ್ನು ಸಂಗ್ರಹಿಸಿ ತಂದನಂತರ ಮಹಾಗಜವು ಗಂಗೆಯೊಳಗೆ ಬೀಳುವಂತೆ ರಾವಣನು ಸ್ನಾನಕ್ಕಾಗಿ ನರ್ಮದಾನದಿಯಲ್ಲಿಳಿದನು. ನದಿಯಲ್ಲಿ ವಿಧಿವತ್ತಾಗಿ ಅವಗಾಹನಸ್ನಾನಮಾಡಿ ಜಪಿಸಬೇಕಾಗಿದ್ದ

ಮಂತ್ರಗಳನ್ನು ಯಥಾವಿಧಿಯಾಗಿ ಶ್ರದ್ಧೆಯಿಂದ ಜಪಿಸಿ ನೀರಿನಿಂದ ಮೇಲೆ ಬಂದನು. ಒದ್ದೆಬಟ್ಟೆಯನ್ನು ಬಿಚ್ಚಿ ರಾವಣನು ಬಿಳಿಯ ವಸ್ತ್ರಗಳನ್ನುಟ್ಟು ಕೊಂಡು ಮಹಾದೇವನ ಪೂಜೆಗಾಗಿ ಕೈಜೋಡಿಸಿಕೊಂಡು ಹೊರಟನು. ಆ ಸಮಯದಲ್ಲಿ ಎಲ್ಲ ರಾಕ್ಷಸರೂ ಅವನ ಗತಿಗೆ ಅಧೀನವಾಗಿ ಮೂರ್ತಿಮತ್ತಾದ ಪರ್ವತಗಳಂತೆ ರಾವಣನನ್ನು ಹಿಂಬಾಲಿಸಿದರು. ರಾವಣನು ಎಲ್ಲಿಗೇ ಹೋದರೂ ಸುವರ್ಣಮಯವಾದ ಶಿವಲಿಂಗವನ್ನು ಜೊತೆಯಲ್ಲಿಯೇ ತೆಗೆದು ಕೊಂಡು ಹೋಗುತ್ತಿದ್ದರು. ನರ್ಮದಾನದಿಯ ಮರಳಿನ ದಿಣ್ಣೆಯ ಮೇಲೆ ಸುವರ್ಣಮಯವಾದ ಆ ಶಿವಲಿಂಗವನ್ನು ಸ್ಥಾಪಿಸಿ ಅಮೃತದ ವಾಸನೆಯಂತೆ ಸುವಾಸಿತವಾದ ಪುಷ್ಪಗಳಿಂದಲೂ ನಾನಾವಿಧವಾದ ಚಂದನಗಳಿಂದಲೂ ಆ ಶಿವಲಿಂಗವನ್ನು ಪೂಜಿಸಿದನು.

ಬಳಿಕ, ಸತ್ಪುರುಷರ ಸಂಕಟವನ್ನು ಪರಿಹರಿಸುವ ಚಂದ್ರನ ಕಿರಣ ಗಳನ್ನೇ ಆಭೂಷಣವನ್ನಾಗಿ ಹೊಂದಿರುವ, ಭಕ್ತರಿಗೆ ಮನೋವಾಂಛಿತವಾದ ವರಗಳನ್ನು ನೀಡುವ, ಶ್ರೇಷ್ಠನಾದ ಮತ್ತು ಉತ್ಕೃಷ್ಟನಾದ ಪರಶಿವನನ್ನು ಮನಸ್ಸಿಗೆ ತೃಪ್ತಿಯಾಗುವಂತೆ ಚೆನ್ನಾಗಿ ಪೂಜಿಸಿ ಶಿವಲಿಂಗದ ಮುಂದೆ ಕೈಗಳನ್ನು ಚಾಚಿಕೊಂಡು ನರ್ತನಮಾಡಲು ಉಪಕ್ರಮಿಸಿದನು.

31ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **32ನೆಯ ಸರ್ಗ**

ಅರ್ಜುನನು ತೋಳುಗಳಿಂದ ನರ್ಮದೆಯ ಪ್ರವಾಹವನ್ನೇ ಅಡ್ಡಗಟ್ಟಿದುದು : ರಾವಣನು ಶಿವನಿಗೆ ಅರ್ಪಿಸಿದ್ದ ಪುಷ್ಪೋಪಹಾರವು ನೀರಿನಲ್ಲಿ ಕೊಚ್ಚಿಹೋದುದು : ಅರ್ಜುನ – ರಾಕ್ಷಸರ ಘೋರಯುದ್ಧ : ಅರ್ಜುನನು ರಾವಣನನ್ನು ಬಂಧಿಸಿ ತನ್ನ ಪಟ್ಟಣಕ್ಕೆ ಒಯ್ದುದು

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ನರ್ಮದಾಪುಲಿನೇ ಯತ್ರ ರಾಕ್ಷಸೇನ್ದ್ರಃ ಸ ದಾರುಣಃ ।
ಪುಷ್ಪೋಪಹಾರಂ ಕುರುತೇ ತಸ್ಮಾದ್ದೇಶಾದದೂರತಃ ॥1॥

ಅರ್ಜುನೋ ಜಯತಾಂ ಶ್ರೇಷ್ಠೋ ಮಾಹಿಷ್ಮತ್ಯಾಃ ಪತಿಂ ಪ್ರಭುಃ ।
ಕ್ರೀಡತೇ ಸಹ ನಾರೀಭಿರ್ನರ್ಮದಾತೋಯಮಾಶ್ರಿತಃ ॥2॥

''ರಾಘವ ! ಅತ್ಯಂತಕ್ರೂರಿಯಾದ ರಾಕ್ಷಸೇಂದ್ರನಾದ ರಾವಣನು ನರ್ಮದಾನದಿಯ ತೀರದಲ್ಲಿ ಈಶ್ವರನಿಗೆ ಪುಷ್ಪೋಪಹಾರವನ್ನು ಸಮರ್ಪಿಸುತ್ತಿದ್ದ ಸ್ಥಳಕ್ಕೆ ಸ್ವಲ್ಪದೂರದಲ್ಲಿಯೇ ವಿಜಯಿಗಳಲ್ಲಿ ಶ್ರೇಷ್ಠನಾದ ಮಾಹಿಷ್ಮತೀ ಪಟ್ಟಣಕ್ಕೆ ಅಧಿಪತಿಯಾದ ಅರ್ಜುನನು ನರ್ಮದಾನದಿಯ ನೀರಿನಲ್ಲಿ ಪತ್ನಿಯರೊಡನೆ ಜಲಕ್ರೀಡೆಯಾಡುತ್ತಿದ್ದನು.

ಸಾವಿರಾರು ಹೆಣ್ಣಾನೆಗಳ ಮಧ್ಯದಲ್ಲಿರುವ ಸಲಗದಂತೆ ಸುಂದರಿಯರ ಮಧ್ಯದಲ್ಲಿದ್ದ ರಾಜನು ರಾರಾಜಿಸುತ್ತಿದ್ದನು. ತನಗಿರುವ ಸಾವಿರ ತೋಳುಗಳ ಬಲವೆಷ್ಟೆಂಬುದನ್ನು ತಿಳಿದುಕೊಳ್ಳುವ ಸಲುವಾಗಿ ತನ್ನ ಬಹುಸಂಖ್ಯಾತವಾದ ತೋಳುಗಳ ಮೂಲಕ ನರ್ಮದಾನದಿಯ ಪ್ರವಾಹವನ್ನು ಅಡ್ಡಗಟ್ಟಿದನು. ಕಾರ್ತವೀರ್ಯನ ಭುಜಗಳಿಂದ ತಡೆಯಲ್ಪಟ್ಟ ನಿರ್ಮಲವಾದ ನರ್ಮದಾ ನದಿಯ ಆ ನೀರು ಹಿಂದು ಹಿಂದಕ್ಕೆ ಹರಿಯತೊಡಗಿತು. ಅಲ್ಲಿಯೇ ರಾವಣನು ಶಿವನಿಗೆ ಪುಷ್ಪಗಳನ್ನು ಸಮರ್ಪಿಸುತ್ತಿದ್ದನು. ಮೀನುಗಳಿಂದಲೂ, ಮೊಸಳೆಗಳಿಂದಲೂ, ಪುಷ್ಪಗಳಿಂದಲೂ, ದರ್ಭೆಯ ಆಸ್ತರಣಗಳಿಂದಲೂ ಕೂಡಿ ಹಿಮ್ಮುಖವಾಗಿ ಹರಿಯುತ್ತಿದ್ದ ಆ ನರ್ಮದೆಯ ಪ್ರವಾಹವು ವರ್ಷಾಕಾಲದ ಪ್ರವಾಹದಂತೆಯೇ ಕಾಣುತ್ತಿದ್ದಿತು. ಹಿಮ್ಮುಖವಾದ ಆ ಪ್ರವಾಹವು ಕಾರ್ತವೀರ್ಯನೇ ಕಳುಹಿಸಿರುವನೋ ಎಂಬಂತೆ ರಾವಣನು ಈಶ್ವರನಿಗೆ ಅರ್ಪಿಸಿದ್ದ ಪುಷ್ಪೋಪಹಾರವನ್ನೂ ಇತರ ಪೂಜಾವಸ್ತುಗಳನ್ನೂ ಕೊಚ್ಚಿಕೊಂಡು ಹೊರಟುಹೋಯಿತು.

ರಾವಣನು ಅರ್ಧದಷ್ಟು ಮುಗಿದಿದ್ದ ಆ ಪೂಜಾವಿಧಿಯನ್ನು ಅಲ್ಲಿಗೇ ಬಿಟ್ಟು ಪ್ರತಿಕೂಲಳಾದ ಪ್ರಿಯಪತ್ನಿಯನ್ನು ಪತಿಯು ನೋಡುವಂತೆ -ಪ್ರತಿ ಪ್ರವಾಹದಿಂದ ಹರಿಯುತ್ತಿದ್ದ ನರ್ಮದೆಯನ್ನು ನೋಡಿದನು. ಪಶ್ಚಿಮ ದಿಕ್ಕಿನಿಂದ ಪೂರ್ವದಿಕ್ಕಿಗೆ ಹಿಮ್ಮುಖವಾಗಿ ಪ್ರವಹಿಸುತ್ತಿದ್ದ ಜಲಪ್ರವಾಹವು ಸಮುದ್ರವು ಉಕ್ಕಿಬರುವಂತೆ ಕ್ಷಣ-ಕ್ಷಣಕ್ಕೂ ಭೋರ್ಗರೆಯುತ್ತಿರುವುದನ್ನೂ ನೋಡಿದನು. ಆದರೆ ನದಿಯ ತೀರಪ್ರದೇಶದಲ್ಲಿದ್ದ ವೃಕ್ಷಗಳನ್ನು ಆಶ್ರಯಿಸಿದ್ದ ಪಕ್ಷಿಗಳು ಸ್ವಲ್ಪವಾದರೂ ಗಾಬರಿಕೊಳ್ಳದೆ ಶಾಂತವಾಗಿದ್ದುವು. ನದಿಯ

ಸ್ವಭಾವದಲ್ಲಿಯೂ ಯಾವ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಹಿಂದಿನಂತೆಯೇ ಸ್ವಚ್ಛವಾಗಿಯೂ ನಿರ್ಮಲವಾಗಿಯೂ ಕಾಣುತ್ತಿದ್ದಿತು. ಮಳೆಗಾಲದಲ್ಲಿ ಉಂಟಾಗುವ ಯಾವ ವೈಪರೀತ್ಯವೂ ನದಿಯಲ್ಲಿ ಕಾಣುತ್ತಿರಲಿಲ್ಲ. ವಿಕಾರ ಶೂನ್ಯಳಾದ ಸ್ತ್ರೀಯಂತೆಯೇ ಇದ್ದ ಆ ಮಹಾನದಿಯನ್ನು ರಾವಣನು ನೋಡಿದನು. ಆಗ ಅವನು ಮೌನವ್ರತಿಯಾಗಿದ್ದನು. ಬಲಗೈ ಬೆರಳಿನ ಸೂಚನೆಯ ಮೂಲಕ ನರ್ಮದೆಯು ಹಿಮ್ಮುಖವಾಗಿ ವೇಗದಿಂದ ಹರಿಯುತ್ತಿರುವುದಕ್ಕೆ ಕಾರಣವನ್ನು ತಿಳಿದುಬರುವಂತೆ ಶುಕ– ಸಾರಣರಿಗೆ ಆಜ್ಞಾಪಿಸಿದನು. ರಾವಣನಿಂದ ಆಜ್ಞಪ್ತರಾದ ಆ ರಾಕ್ಷಸಸಹೋದರರು ಆಕಾಶಮಾರ್ಗದ ಮೂಲಕವಾಗಿ ಪಶ್ಚಿಮದಿಕ್ಕಿನ ಕಡೆಗೆ ಹೋದರು. ಅರ್ಧಯೋಜನದಷ್ಟು ದೂರ ಹೋಗುತ್ತಲೇ ಶುಕ–ಸಾರಣರು ಪತ್ನಿಯರೊಡನೆ ಜಲಕ್ರೀಡೆಯಾಡುತ್ತಿದ್ದ ಒಬ್ಬ ಪುರುಷನನ್ನು ನೋಡಿದರು. ಹೆಂಗಸರೊಡನೆ ಜಲಕ್ರೀಡೆಯಾಡುತ್ತಿದ್ದ ಆ ಪುರುಷನು ದೊಡ್ಡದಾದ ಸಾಲವೃಕ್ಷದಂತಿದ್ದನು. ಅವನ ತಲೆಗೂದಲು ನೀರಿನ ಸೆಳೆತದಿಂದ ಅತ್ತಲಿತ್ತ ಸುಳಿದಾಡುತ್ತಿದ್ದುವು. ಮದದಿಂದಾಗಿ ಕಡೆಗಣ್ಣುಗಳು ಕೆಂಪಾಗಿದ್ದುವು. ಮನಸ್ಸು ಮದದಿಂದ ವ್ಯಾಕುಲಗೊಂಡಿರುವಂತೆ ಕಾಣುತ್ತಿದ್ದಿತು. ಚಿಕ್ಕ –ಚಿಕ್ಕ ಪರ್ವತಗಳಿಂದ ಭೂಮಿಯನ್ನೇ ತಡೆಹಿಡಿದಿರುವ ಪರ್ವತರಾಜನಂತೆ ಸಾವಿರ ತೋಳುಗಳಿಂದ ನರ್ಮದೆಯ ಪ್ರವಾಹವನ್ನೇ ತಡೆದು ನಿಲ್ಲಿಸಿದ್ದ ಅರಿಮರ್ದನನಾದ ಪುರುಷನನ್ನು ಶುಕ–ಸಾರಣರು ನೋಡಿದರು.

ಮದಿಸಿದ ಸಾವಿರಾರು ಹೆಣ್ಣಾನೆಗಳ ಮಧ್ಯದಲ್ಲಿರುವ ಸಲಗದಂತೆ ಸಾವಿರಾರು ಶ್ರೇಷ್ಠರಾದ ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿದ್ದ ಆ ಮಹಾಪುರುಷನನ್ನು ಶುಕ–ಸಾರಣರು ನೋಡಿದರು. ಅಂತಹ ಪರಮಾದ್ಭುತವಾದ ದೃಶ್ಯವನ್ನು ನೋಡಿದ ಶುಕ–ಸಾರಣರು ರಾವಣನಲ್ಲಿಗೆ ಹಿಂದಿರುಗಿ ಬಂದು ಹೇಳಿದರು :

''ರಾಕ್ಷಸೇಶ್ವರನೇ! ದೊಡ್ಡದಾದ ಸಾಲವೃಕ್ಷದಂತೆ ಅದ್ಭುತಶರೀರನಾದ ಒಬ್ಬ ಪುರುಷನು ನರ್ಮದಾನದಿಯನ್ನು ಅಣೆಕಟ್ಟೆಯಂತೆಯೇ ತನ್ನ ಸಾವಿರ ತೋಳುಗಳಿಂದ ತಡೆದು ನಿಲ್ಲಿಸಿ ಪತ್ನಿಯರೊಡನೆ ಜಲಕ್ರೀಡೆಯಾಡುತ್ತಿದ್ದಾನೆ. ಅವನ ಸಾವಿರ ತೋಳುಗಳಿಂದ ತಡೆಯಲ್ಪಟ್ಟ ಜಲಭರಿತವಾದ

ನರ್ಮದೆಯು ಸಮುದ್ರವು ಉಕ್ಕಿಬರುವಂತೆಯೇ ಕ್ಷಣ–ಕ್ಷಣಕ್ಕೂ ಉಕ್ಕಿ ಹಿಮ್ಮುಖವಾಗಿ ಹರಿಯುತ್ತಿದೆ.''

ಶುಕ–ಸಾರಣರ ಮಾತನ್ನು ಕೇಳಿ –'' ಅವನೇ ಅರ್ಜುನ'' – ಎಂದೆನ್ನುತ್ತಾ ಯುದ್ಧಾಕಾಂಕ್ಷಿಯಾದ ರಾವಣನು ಅವನಿದ್ದಲ್ಲಿಗೆ ಹೊರಟು ಬಿಟ್ಟನು. ರಾಕ್ಷಸಾಧಿಪತಿಯು ಅರ್ಜುನನಿಗೆ ಎದುರಾಗಿ ನಿಲ್ಲಲು ಗಾಳಿಯು ಗಟ್ಟಿಯಾಗಿ ಶಬ್ಧಮಾಡುತ್ತಾ ಧೂಳಿನೊಡನೆ ಉಗ್ರವಾಗಿ ಬೀಸತೊಡಗಿತು. ಮೇಘಗಳು ರಕ್ತದ ತೊಟ್ಟುಗಳನ್ನು ಸುರಿಸುತ್ತಾ ಒಮ್ಮೆ ಮಾತ್ರ ಗಟ್ಟಿ ಯಾಗಿ ಗರ್ಜನೆಮಾಡಿದುವು. ರಾಕ್ಷಸರಾಜನಾದ ರಾವಣನು ಮಹೋದರ –ಮಹಾಪಾರ್ಶ್ವ –ಧೂಮ್ರಾಕ್ಷ–ಶುಕ –ಸಾರಣರೊಡನೆ ಅರ್ಜುನನಿದ್ದಲ್ಲಿಗೆ ಧಾವಿಸಿದನು. ಕಾಡಿಗೆಯಂತೆ ಶ್ಯಾಮಲವರ್ಣದಿಂದ ಪ್ರಕಾಶಿಸುತ್ತಿದ್ದ ಬಲಿಷ್ಠನಾದ ರಾವಣನು ಅತ್ಯಲ್ಪ ಸಮಯದಲ್ಲಿಯೇ ಅರ್ಜುನನು ಕ್ರೀಡಿಸುತ್ತಿದ್ದ ನರ್ಮದಾನದಿಯ ಭಯಂಕರವಾದ ಮಡುವಿನ ಬಳಿಗೆ ಆಗಮಿಸಿದನು. ಸಮಾಗಮದ ಆಸೆಯಿಂದ ಸುತ್ತುವರಿದು ನಿಂತಿರುವ ಹೆಣ್ಣಾನೆಗಳೊಡನಿರುವ ಸಲಗದಂತೆ ಸ್ತ್ರೀಯರ ಮಧ್ಯದಲ್ಲಿದ್ದ ಅರ್ಜುನನನ್ನು ಕಂಡನು. ಅವನನ್ನು ನೋಡುತ್ತಿದ್ದಂತೆಯೇ ರಾವಣನು ಪರಮಕ್ರುದ್ಧನಾದನು. ಅವನ ಕಣ್ಣುಗಳು ಕೆಂಪಾದುವು. ಬಲೋದ್ಧತನಾಗಿದ್ದ ರಾವಣನು ಅರ್ಜುನನ ಮಂತ್ರಿಗಳಿಗೆ ಗಂಭೀರವಾದ ಅಧಿಕಾರವಾಣಿಯಿಂದ ಹೇಳಿದನು :

'' ಅಮಾತ್ಯರೇ ! ರಾವಣನೆಂಬ ಹೆಸರಿನ ರಾಕ್ಷಸರಾಜನು ಯುದ್ಧ ಮಾಡುವ ಸಲುವಾಗಿ ಬಂದಿರುವನೆಂದು ನಿಮ್ಮ ಹೈಹಯರಾಜನಿಗೆ ಶೀಘ್ರವಾಗಿ ಹೇಳಿರಿ.''

ದಶಗ್ರೀವನ ಆ ಮಾತನ್ನು ಕೇಳಿ ಅರ್ಜುನನ ಮಂತ್ರಿಗಳು ಆಯುಧಗಳನ್ನು ಹಿಡಿದು ನಿಂತು ರಾವಣನಿಗೆ ಹೇಳಿದರು :

'' ಸಾಧು ! ರಾವಣ ! ಸಾಧು ! ಯುದ್ಧ ಮಾಡಬೇಕಾದ ಕಾಲವು ಯಾವುದೆಂಬುದನ್ನು ನೀನು ಚೆನ್ನಾಗಿ ತಿಳಿದಿರುವಂತಿದೆ. ನಮ್ಮ ಮಹಾರಾಜನು ಮಧುಪಾನದಿಂದ ಮತ್ತನಾಗಿ ಸ್ತ್ರೀಯರ ಮಧ್ಯದಲ್ಲಿ ಕ್ರೀಡಿಸುತ್ತಿರು

ವಾಗ ನೀನು ಅವನೊಡನೆ ಯುದ್ಧಮಾಡಲು ಉತ್ಸುಕನಾಗಿರುವೆ. ಭಲೇ! ರಾವಣ! ಸಮಾಗಮವನ್ನು ಬಯಸಿದ ಹೆಣ್ಣಾನೆಗಳಿಂದ ಸುತ್ತುವರಿಯಲ್ಪಟ್ಟಿರುವ ಸಲಗದೊಡನೆ ಕಾಳಗವಾಡಲಿಚ್ಛಿಸಿರುವ ಸಿಂಹದಂತೆ ನೀನು ಸ್ತ್ರೀಯರ ಮಧ್ಯದಲ್ಲಿರುವ ನಮ್ಮ ರಾಜನೊಡನೆ ಯುದ್ಧ ಮಾಡಲು ಅಪೇಕ್ಷಿಸಿರುವೆ. ದಶಗ್ರೀವ! ನಿನ್ನ ಮನಸ್ಸಿನಲ್ಲಿ ಯುದ್ಧ ಮಾಡುವ ಉತ್ಸಾಹವಿರುವುದಾದರೆ ಈ ರಾತ್ರಿಯು ಕಳೆಯುವವರೆಗೂ ಸೌಮ್ಯಭಾವದಿಂದಿರು. ಈ ರಾತ್ರಿಯಲ್ಲಿ ನೀನೂ ಇಲ್ಲಿಯೇ ತಂಗಿರು. ನಿನಗೆ ಯುದ್ಧದಲ್ಲಿ ಶ್ರದ್ಧೆಯಿರುವುದಾದರೆ ಬೆಳಗಾಗುತ್ತಲೇ ನಮ್ಮ ಅರ್ಜುನರಾಜನು ಯುದ್ದ ಸನ್ನದ್ಧನಾಗಿ ನಿಂತಿರುವುದನ್ನು ಸಮರಾಂಗಣದಲ್ಲಿ ನೀನೇ ಕಾಣುವೆ. ಯುದ್ಧದ ತೃಷ್ಣೆಯಿಂದ ಸಮಾವೃತನಾಗಿರುವ ರಾಕ್ಷಸರಾಜನೇ! ನೀನು ಯುದ್ಧಮಾಡಲು ಅವಸರಿಸುತ್ತಿರುವುದಾದರೆ ನಮ್ಮೊಡನೆ ಯುದ್ಧಮಾಡಬಹುದು. ನಮ್ಮನ್ನು ಯುದ್ಧದಲ್ಲಿ ಸಂಹರಿಸಿ ಅನಂತರ ನೀನು ಬೆಳಗಾಗುತ್ತಲೇ ನಮ್ಮ ರಾಜನಾದ ಅರ್ಜುನನೊಡನೆ ಯುದ್ಧ ಮಾಡಬಹುದು.''

ಹೀಗೆ ಹೇಳಿದೊಡನೆಯೇ ರಾವಣನ ಮಂತ್ರಿಗಳು ಅರ್ಜುನನ ಮಂತ್ರಿಗಳನ್ನು ಯುದ್ಧದಲ್ಲಿ ಸಂಹರಿಸಿದ್ದು ಮಾತ್ರವಲ್ಲದೇ ಹಸಿವಿನಿಂದ ಬಳಲಿದ್ದ ಅವರೆಲ್ಲರೂ ಅರ್ಜುನನ ಮಂತ್ರಿಗಳನ್ನು ತಿಂದೂ ಹಾಕಿದರು. ಬಳಿಕ ಆ ನರ್ಮದಾನದಿಯ ತೀರದಲ್ಲಿಯೇ ಅರ್ಜುನನ ಅನುಯಾಯಿಗಳ ಮತ್ತು ರಾವಣನ ಅಮಾತ್ಯರ ನಡುವೆ ದೊಡ್ಡದಾದ ಕೋಲಾಹಲವೆದ್ದಿತು. ಅರ್ಜುನನ ಕಡೆಯ ಯೋಧರು ಎಲ್ಲ ಕಡೆಗಳಿಂದಲೂ ರಾವಣನನ್ನೂ ಅವನ ಅನು ಯಾಯಿಗಳನ್ನೂ ಆಕ್ರಮಿಸಿ ಬಾಣ - ತೋಮರಗಳಿಂದಲೂ, ಪ್ರಾಸ-ತ್ರಿಶೂಲ ಗಳಿಂದಲೂ, ವಜ್ರಕರ್ಷಣವೆಂಬ ಅಸ್ತ್ರಗಳಿಂದಲೂ ರಾವಣನನ್ನೂ ಮತ್ತು ಅವನ ಅನುಯಾಯಿಗಳನ್ನೂ ಸಮ್ಮರ್ದಿಸಿದರು. ಮೀನು-ಮೊಸಳೆಗಳಿಂದ ಕೂಡಿರುವ ಸಮುದ್ರದ ಭೋರ್ಗರೆಯುವ ಶಬ್ದದಂತೆ ಹೈಹಯಯೋಧರ ವೇಗವು ಅತ್ಯಂತ ಭಯಂಕರವಾಗಿದ್ದಿತು. ರಾವಣನ ಅಮಾತ್ಯರಾದ ಪ್ರಹಸ್ತ-ಶುಕ -ಸಾರಣರೇ ಮೊದಲಾದವರು ಅತ್ಯಂತಕ್ರುದ್ಧರಾಗಿ ತಮ್ಮ ತೇಜೋಬಲದಿಂದ ಕಾರ್ತವೀರ್ಯಾರ್ಜುನನ ಸೈನ್ಯವನ್ನು ಧ್ವಂಸಮಾಡುತ್ತಿದ್ದರು. ಅಳಿದುಳಿದ ಅರ್ಜುನನ ಯೋಧರು ಭಯಭೀತರಾಗಿ ಜಲಕ್ರೀಡೆ

ಯಾಡುತ್ತಿದ್ದ ರಾಜನ ಬಳಿಗೆ ಬಂದು ರಾವಣನ ಮತ್ತು ಅವನ ಮಂತ್ರಿಗಳ ಕ್ರೂರಕರ್ಮವನ್ನು ವಿವರಿಸಿ ಹೇಳಿದರು. ಯೋಧರಿಂದ ಸಮಾಚಾರವನ್ನು ಕೇಳಿದೊಡನೆಯೇ -'**ನ ಭೇತವ್ಯಂ** ಭಯಪಡಬೇಕಾದ ಕಾರಣವಿಲ್ಲ'- ಎಂದು ತನ್ನ ಮಡದಿಯರಿಗೆ ಹೇಳುತ್ತಾ ದಿಗ್ಗಜವೊಂದು ಹೆಣ್ಣಾನೆಗಳೊಡನೆ ಗಂಗಾನದಿಯ ನೀರಿನಿಂದ ಮೇಲೆ ಬರುವಂತೆ ನರ್ಮದಾನದಿಯ ಮಡುವಿನಿಂದ ಅರ್ಜುನನು ಮಡದಿಯರೊಡನೆ ಮೇಲೆದ್ದು ಬಂದನು. ಕ್ರೋಧದಿಂದ ಅವನ ಕಣ್ಣುಗಳು ಕೆಂಪಾದುವು. ಮಹಾಘೋರವಾದ ಪ್ರಳಯಕಾಲದ ಅಗ್ನಿಯಂತೆ ಅರ್ಜುನರೂಪನಾದ ಪಾವಕನು ಪ್ರಜ್ವಲಿಸುತ್ತಿದ್ದನು. ಸುಂದರವಾದ ಮತ್ತು ಸುವರ್ಣಮಯವಾದ ತೋಳ್ಬಳೆಗಳನ್ನು ಧರಿಸಿದ್ದ ಅರ್ಜುನನು ಗದೆಯನ್ನೆತ್ತಿಕೊಂಡು ಸೂರ್ಯನು ಅಂಧಕಾರವನ್ನು ಅಟ್ಟುವಂತೆ ರಾವಣನನ್ನೂ ಅವನ ಕಡೆಯ ರಾಕ್ಷಸರನ್ನೂ ಆಕ್ರಮಿಸಿದನು. ಆ ಮಹಾಗದೆಯನ್ನೆತ್ತಿಕೊಂಡ ಅರ್ಜುನನು ಬಾಹುಗಳಿಂದ ಅದನ್ನು ತಿರುಗಿಸುತ್ತಾ ಗರುಡನ ವೇಗವನ್ನಾಶ್ರಯಿಸಿ ಕ್ಷಣಮಾತ್ರದಲ್ಲಿ ಮುನ್ನುಗ್ಗಿ ಹೋಗಿ ರಾಕ್ಷಸರ ಮೇಲೆರಗಿದನು. ಹಿಂದೆ ವಿಂಧ್ಯಪರ್ವತವು ಸೂರ್ಯನನ್ನು ತಡೆದು ನಿಲ್ಲಿಸಿದ್ದಂತೆ - ಮುಸಲಾಯುಧವನ್ನು ಹಿಡಿದಿದ್ದ ಪ್ರಹಸ್ತನು ಗದಾಧರನಾಗಿದ್ದ ಅರ್ಜುನನನ್ನು ತಡೆದು ನಿಲ್ಲಿಸಿದನು. ಮದೋದ್ಧತನಾಗಿದ್ದ ಪ್ರಹಸ್ತನು ಕಬ್ಬಿಣದ ಬಳೆಗಳಿಂದ ಸುತ್ತುವರಿಯಲ್ಪಟ್ಟಿದ್ದ ಭಯಂಕರವಾದ ಮುಸಲಾಯುಧವನ್ನು ಅರ್ಜುನನ ಮೇಲೆ ಪ್ರಯೋಗಿಸಿ ಅಂತಕನಂತೆ ಭೀಕರವಾಗಿ ಗರ್ಜಿಸಿದನು. ಪ್ರಹಸ್ತನ ಕೈಯಿಂದ ಪ್ರಹರಿಸ'ಲ್ಪಟ್ಟ ಆ ಮುಸಲಾಯುಧದ ತುದಿಯಲ್ಲಿ ಅಶೋಕಪುಷ್ಪದಂತೆ ಹೊಂಬಣ್ಣದ ಅಗ್ನಿಯು ಕಾಣಿಸಿಕೊಂಡು ಅರ್ಜುನನನ್ನು ಭಸ್ಮಮಾಡಿಬಿಡುವುದೋ ಎಂಬಂತೆ ಕಾಣುತ್ತಿದ್ದಿತು. ಅರ್ಜುನನು ಸ್ವಲ್ಪವಾದರೂ ಭಯಗೊಳ್ಳದೇ ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಮುಸಲಾಯುಧವನ್ನು ನೈಪುಣ್ಯದಿಂದ ಗದೆಯನ್ನು ತಿರುಗಿಸುತ್ತಾ ವಿಫಲಗೊಳಿಸಿದನು. ಬಳಿಕ ಗದಾಧರನಾದ ಹೈಹಯರಾಜನು ಐದು ನೂರು ತೋಳುಗಳಿಂದ ಎತ್ತಿ ಹಿಡಿದಿದ್ದ ಮಹಾಗದೆಯನ್ನು ಸುತ್ತಲೂ ತಿರುಗಿಸುತ್ತಾ ಪ್ರಹಸ್ತನ ಕಡೆಗೆ ಧಾವಿಸಿದನು. ಗದೆಯಿಂದ ವೇಗಪೂರ್ವಕವಾಗಿ ಪ್ರಹರಿಸಲ್ಪಟ್ಟ ಪ್ರಹಸ್ತನು ಇಂದ್ರನ

ವಜ್ರಾಯುಧದಿಂದ ಪ್ರಹರಿಸಲ್ಪಟ್ಟ ಪರ್ವತವು ಕೆಳಗುರುಳುವಂತೆ - ಭೂಮಿಯ ಮೇಲೆ ಬಿದ್ದನು. ಅದನ್ನು ನೋಡಿ ಮಾರೀಚ –ಶುಕ – ಸಾರಣ - ಮಹೋದರ -ಧೂಮ್ರಾಕ್ಷರು ರಣರಂಗದಿಂದ ಪಲಾಯನ ಮಾಡಿದರು. ತನ್ನ ಕಡೆಯವರೆಲ್ಲರೂ ಪಲಾಯನಮಾಡುತ್ತಿರುವುದನ್ನು ಕಂಡ ರಾವಣನೇ ನೃಪಶ್ರೇಷ್ಠನಾದ ಅರ್ಜುನನನ್ನು ಆಕ್ರಮಿಸಿದನು. ಸಾವಿರ ತೋಳುಗಳನ್ನು ಹೊಂದಿದ್ದ ಕಾರ್ತವೀರ್ಯಾರ್ಜುನನಿಗೂ ಇಪ್ಪತ್ತು ತೋಳುಗಳನ್ನು ಹೊಂದಿದ್ದ ರಾವಣೇಶ್ವರನಿಗೂ ರೋಮಾಂಚಕರವಾದ ಮತ್ತು ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಆ ಸಮಯದಲ್ಲಿ ನೃಪ–ರಾಕ್ಷಸರು ಕ್ಷೋಭೆಗೊಂಡ ಎರಡು ಸಮುದ್ರಗಳಂತೆಯೂ, ಚಲಿಸುವ ಎರಡು ಪರ್ವತ ಗಳಂತೆಯೂ, ತೇಜಸ್ಸಿನಿಂದ ಪ್ರಜ್ವಲಿಸುವ ಇಬ್ಬರು ಸೂರ್ಯರಂತೆಯೂ, ಧಗ–ಧಗಿಸುತ್ತಿರುವ ಎರಡು ಅಗ್ನಿಗಳಂತೆಯೂ, ಬಲೋನ್ಮತ್ತವಾದ ಎರಡು ಆನೆಗಳಂತೆಯೂ, ಅಲೆ ಬಂದ ಹಸುವಿನೊಡನೆ ಸಮಾಗಮಕ್ಕಾಗಿ ಸೆಣೆಸಾಡಲು ನಿಂತಿರುವ ಎರಡು ಗೂಳಿಗಳಂತೆಯೂ, ಗರ್ಜನೆಮಾಡುತ್ತಿರುವ ಎರಡು ಕಾಳ ಮೇಘಗಳಂತೆಯೂ, ಉತ್ಕಟವಾದ ಬಲದಿಂದ ಕೂಡಿರುವ ಎರಡು ಸಿಂಹಗಳಂತೆಯೂ, ಕ್ರುದ್ಧರಾದ ರುದ್ರ ಮತ್ತು ಕಾಲರಂತೆಯೂ ಕಾಣು ತ್ತಿದ್ದರು. ಇಬ್ಬರೂ ಗದೆಗಳನ್ನು ಹಿಡಿದು ಪರಸ್ಪರವಾಗಿ ಪ್ರಹರಿಸುತ್ತಿದ್ದರು. ಹಿಂದೆ ಪರ್ವತಗಳು ಇಂದ್ರನ ವಜ್ರಾಯುಧದ ಪ್ರಹಾರವನ್ನು ಸಹಿಸು ತ್ತಿದ್ದಂತೆ ನರ–ರಾಕ್ಷಸರಿಬ್ಬರೂ ಗದಾಪ್ರಹಾರಗಳನ್ನು ಸಹಿಸಿಕೊಳ್ಳುತ್ತಿದ್ದರು. ಸಿಡಿಲಿನ ಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುವಂತೆ ಇಬ್ಬರೂ ಪರಸ್ಪರವಾಗಿ ಮಾಡುತ್ತಿದ್ದ ಗದಾಪ್ರಹಾರಗಳ ಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಿದ್ದಿತು.

ಆಕಾಶದಲ್ಲಿ ಮಿಂಚು ಚಿನ್ನದ ಬಣ್ಣದಿಂದ ಪ್ರಕಾಶಿಸುವಂತೆ – ಅರ್ಜುನನು ರಾವಣನ ವಕ್ಷಃಸ್ಥಳದಲ್ಲಿ ಪ್ರಹರಿಸುತ್ತಿದ್ದ ಗದಾಪ್ರಹಾರದಿಂದ ಸುವರ್ಣ ಮಯವಾದ ಬೆಳಕೊಂದು ಹೊರಚಿಮ್ಮಿ ಆಕಾಶವನ್ನೇ ಸುವರ್ಣ ಮಯವನ್ನಾಗಿ ಮಾಡುತ್ತಿದ್ದಿತು. ಅದೇ ರೀತಿಯಲ್ಲಿ ರಾವಣನು ಅರ್ಜುನನ ವಕ್ಷಃಸ್ಥಳದಲ್ಲಿ ಪ್ರಹರಿಸುತ್ತಿದ್ದ ಗದಾಪ್ರಹಾರದಿಂದ ಬೆಂಕಿಯು ಹೊರಬಂದು ಎತ್ತರವಾದ ಪರ್ವತದಲ್ಲಿ ಬಿದ್ದ ಉಲ್ಕೆಯಂತೆ ಪ್ರಕಾಶಿಸುತ್ತಿದ್ದಿತು.

ಪರಸ್ಪರ ಗದಾಪ್ರಹಾರಗಳಿಂದ ಅರ್ಜುನನಾಗಲೀ ರಾಕ್ಷಸೇಶ್ವರನಾಗಲೀ ಆಯಾಸ ಗೊಳ್ಳಲಿಲ್ಲ. ಹಿಂದೆ ಬಲಿಚಕ್ರವರ್ತಿಗೂ ಮತ್ತು ಇಂದ್ರನಿಗೂ ನಡೆದ ಯುದ್ಧದಂತೆಯೇ ನರ-ರಾಕ್ಷಸರ ಆ ಕಾಳಗವೂ ನಡೆಯುತ್ತಿದ್ದಿತು. ಗೂಳಿ ಗಳು ಕೋಡುಗಳ ಮೂಲಕ ಕಾಳಗವಾಡುವಂತೆಯೂ - ಮದಿಸಿದ ಆನೆಗಳು ದಂತಗಳ ಮೂಲಕ ಸೆಣೆಸಾಡುವಂತೆಯೂ ಆ ನರಶ್ರೇಷ್ಠ-ರಾಕ್ಷಸಶ್ರೇಷ್ಠರು ಗದೆಗಳಿಂದ ಒಬ್ಬರನ್ನೊಬ್ಬರು ಬಡಿದಾಡುತ್ತಿದ್ದರು.

ಬಳಿಕ ಅರ್ಜುನನು ಅತಿಕ್ರುದ್ಧನಾಗಿ ತನ್ನ ಶಕ್ತಿಯೆಲ್ಲವನ್ನೂ ಒಟ್ಟು ಗೂಡಿಸಿ ಉಸಿರುಗಟ್ಟಿ ರಾವಣನ ಸ್ತನಗಳ ನಡುವೆ ವಿಶಾಲವಾದ ವಕ್ಷಃಸ್ಥಳ ದಲ್ಲಿ ಗದೆಯಿಂದ ಪ್ರಹರಿಸಿದನು. ಆದರೆ ವರದಾನದಿಂದ ಸುರಕ್ಷಿತನಾಗಿದ್ದ ರಾವಣನ ವಕ್ಷಃಸ್ಥಳದಲ್ಲಿ ಬಿದ್ದ ಆ ಮಹಾಗದೆಯು ದುರ್ಬಲವಾದೊಂದು ಗದೆಯಂತೆ ಎರಡು ಹೋಳಾಗಿ ಒಡೆದು ನೆಲದಲ್ಲಿ ಬಿದ್ದಿತು. ಗದೆಯು ಒಡೆದುಹೋದರೂ ಪ್ರಹಾರದ ಪರಿಣಾಮವು ಭೀಕರವಾಗಿದ್ದಿತು. ಅರ್ಜುನನ ಗದೆಯ ಆ ಪ್ರಹಾರದಿಂದ ಧನುಸ್ಸಿನ ಪ್ರಮಾಣದಷ್ಟು ದೂರ ರಾವಣನು ಹಿಂದಕ್ಕೆ ಸರಿಯಬೇಕಾಯಿತು. ನೋವನ್ನು ತಾಳಲಾರದೇ ರಾವಣನು ಆರ್ತನಾದಮಾಡುತ್ತಾ ಕುಳಿತುಬಿಟ್ಟನು. ಎದುರಾಳಿಯು ವ್ಯಾಕುಲಗೊಂಡಿರು ವುದನ್ನು ಕಂಡು ಅರ್ಜುನನು ಥಟನೆ ಹಾರಿ - ಗರುಡಪಕ್ಷಿಯು ಸರ್ಪವನ್ನು ಹಿಡಿಯುವಂತೆ - ರಾವಣನನ್ನು ಹಿಡಿದುಕೊಂಡನು. ನಾರಾಯಣನು ಬಲಿ ಚಕ್ರವರ್ತಿಯನ್ನು ಬಂಧಿಸಿದಂತೆ ಬಲಿಷ್ಠನಾದ ಅರ್ಜುನನು ಸಾವಿರ ಕೈಗಳಿಂದಲೂ ರಾವಣನನ್ನು ಬಲಪೂರ್ವಕವಾಗಿ ಬಂಧಿಸಿದನು.

ಹೀಗೆ ಅರ್ಜುನನಿಂದ ರಾವಣನು ಬಂಧಿಸಲ್ಪಡಲು ಸಿದ್ಧ-ಚಾರಣ-ದೇವತೆಗಳು -'ಭಲೇ ಅರ್ಜುನ! ಭಲೆ' -ಎಂದು ಪ್ರಶಂಸಿಸುತ್ತಾ ಅರ್ಜುನನ ಮೇಲೆ ಹೂವಿನ ಮಳೆಗರೆದರು. ವ್ಯಾಘ್ರವು ಜಿಂಕೆಯನ್ನು ಹಿಡಿಯುವಂತೆ, ಸಿಂಹವು ಆನೆಯನ್ನು ಹಿಡಿಯುವಂತೆ ಅರ್ಜುನನು ರಾವಣ ನನ್ನು ಹಿಡಿದು ಹರ್ಷಾತಿರೇಕದಿಂದ ಗುಡುಗಿನಂತೆ ಪುನಃ-ಪುನಃ ಗರ್ಜನೆ ಮಾಡುತ್ತಿದ್ದನು. ಆ ವೇಳೆಗೆ ಎಚ್ಚರಗೊಂಡಿದ್ದ ಪ್ರಹಸ್ತನು, ರಾವಣನು ಅರ್ಜುನನಿಗೆ ಸೆರೆಯಾಗಿರುವುದನ್ನು ಕಂಡು ಪರಮಕ್ರುದ್ಧನಾಗಿ ಹೈಹಯನ ಕಡೆಗೆ ಧಾವಿಸಿದನು. ಮಳೆಗಾಲವು ಬಂದೊಡನೆಯೇ ಸಮುದ್ರದ ಮೇಲೆ

ಮೇಘಗಳು ದಟ್ಟವಾಗಿ ಕವಿಯುವಂತೆ - ಅರ್ಜುನನ ಮೇಲೆ ಆಕ್ರಮಣ ಮಾಡಲು ಹೊರಟಿದ್ದ ರಾಕ್ಷಸರ ವೇಗವು ಅಧಿಕವಾಗಿರುವಂತೆ ಕಾಣುತ್ತಿದ್ದಿತು. 'ಬಿಟ್ಟುಬಿಡು ! ನಿಲ್ಲು; ನಿಲ್ಲು' -ಎಂದು ಕೂಗುತ್ತಾ ನಿಶಾಚರರು ಅರ್ಜುನನನ್ನು ಹಿಂಬಾಲಿಸುತ್ತಿದ್ದರು. ಆ ಸಮಯದಲ್ಲಿ ಪ್ರಹಸ್ತನು ಮುಸಲಗಳನ್ನೂ ಶೂಲಗಳನ್ನೂ ಅರ್ಜುನನ ಮೇಲೆ ಪ್ರಯೋಗಿಸಿದನು. ಆದರೆ ರಾಕ್ಷಸರ ಆರ್ಭಟಗಳಿಂದ ಅರ್ಜುನನು ಗಾಬರಿಗೊಳ್ಳಲಿಲ್ಲ. ಶತ್ರುಸೂದನನಾದ ಅರ್ಜುನನು ಪ್ರಹಸ್ತನೇ ಮೊದಲಾದವರು ಪ್ರಯೋಗಿಸುತ್ತಿದ್ದ ಅಸ್ತ್ರಗಳು ತನ್ನ ಸಮೀಪಕ್ಕೆ ಬರುವ ಮೊದಲೇ ಅವುಗಳನ್ನು ಹಿಡಿದುಬಿಡುತ್ತಿದ್ದನು. ದುರ್ಧರ ವಾದ ಮತ್ತು ಶ್ರೇಷ್ಠವಾದ ಆ ಆಯುಧಗಳನ್ನೇ ಅರ್ಜುನನು ಪುನಃ ರಾಕ್ಷಸರ ಮೇಲೆ ಪ್ರಯೋಗಿಸುತ್ತಾ ಬಿರುಗಾಳಿಯು ಮೋಡಗಳನ್ನು ಚದುರಿಸುವಂತೆ- ರಾಕ್ಷಸರನ್ನು ದಿಕ್ಕಾಪಾಲಾಗಿ ಓಡಿಸುತ್ತಿದ್ದನು. ಹೀಗೆ ಅರ್ಜುನನು ಸಮಸ್ತರಾಕ್ಷಸರನ್ನೂ ಭಯಗೊಳಿಸುತ್ತಾ ರಾವಣನನ್ನು ಸೆರೆ ಹಿಡಿದು ಸ್ನೇಹಿತರೊಡನೆ ನಗರವನ್ನು ಪ್ರವೇಶಿಸಿದನು. ರಾಜಧಾನಿಯ ಬಳಿಗೆ ಬಂದೊಡನೆಯೇ ಬ್ರಾಹ್ಮಣಪ್ರಮುಖರಾದ ಪಟ್ಟಣಿಗರು ಇಂದ್ರಸದೃಶ ನಾದ ಅರ್ಜುನನ ಮೇಲೆ ಪುಷ್ಪಾಕ್ಷತೆಗಳನ್ನು ಸುರಿಸಿದರು. ಸಾವಿರಗಣ್ಣ ನಾದ ಇಂದ್ರನು ಬಲಿಚಕ್ರವರ್ತಿಯನ್ನು ಬಂಧಿಸಿದಂತೆ - ಅರ್ಜುನನು ರಾವಣನನ್ನು ಬಂದಿಯನ್ನಾಗಿ ಮಾಡಿಕೊಂಡು ಅಟ್ಟಹಾಸದಿಂದ ಪಟ್ಟಣವನ್ನು ಪ್ರವೇಶಿಸಿದನು.

32ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **33ನೆಯ ಸರ್ಗ**

ಪುಲಸ್ತ್ಯನು ರಾವಣನನ್ನು ಬಂಧನದಿಂದ ಬಿಡುಗಡೆ ಮಾಡಿಸಿದುದು

ಅಗಸ್ತ್ಯರು ಶ್ರೀರಾಮನಿಗೆ ಹೇಳುತ್ತಾರೆ :

ರಾವಣಗ್ರಹಣಂ ತತ್ತು ವಾಯುಗ್ರಹಣಸಂನಿಭಮ್ ।
ತತಃ ಪುಲಸ್ತ್ಯಃ ಶುಶ್ರಾವ ಕಥಿತಂ ದಿವಿ ದೈವತೈಃ ॥1॥

ರಾಘವ ! ಗಾಳಿಯನ್ನು ಸೆರೆಹಿಡಿದಂತೆ ಕಷ್ಟಸಾಧ್ಯವಾದ

ರಾವಣನ ಕೈಸೆರೆಯ ವಾರ್ತೆಯು ದೇವತೆಗಳಿಂದ ಪುಲಸ್ತ್ಯಮುನಿಗೂ ತಿಳಿಯಿತು. ★

ಪುಲಸ್ತ್ಯನು ಮಹಾಧೈರ್ಯಶಾಲಿಯಾಗಿದ್ದರೂ ವಂಶಜನಾದ ರಾವಣನ ಬಂಧನವನ್ನು ಕೇಳಿ ಅನುಕಂಪೆಯಿಂದ ಅವನ ಹೃದಯವು ನಡುಗಿತು. ಪೌತ್ರವ್ಯಾಮೋಹದ ಕಾರಣದಿಂದಾಗಿ ಮಾಹಿಷ್ಮತೀಪಟ್ಟಣದ ರಾಜನನ್ನು ಕಾಣುವ ಸಲುವಾಗಿ ಭೂಲೋಕಕ್ಕೆ ಬಂದನು. ಪುಲಸ್ತ್ಯನ ವೇಗವು ವಾಯುವಿನ ವೇಗಕ್ಕೆ ಸಮಾನವಾಗಿಯೂ ಗತಿಯು ಮನೋಗತಿಗೆ ಅನುಸಾರ ವಾಗಿಯೂ ಇದ್ದುದರಿಂದ ಪುಲಸ್ತ್ಯನು ವಾಯುಮಾರ್ಗದ ಮೂಲಕ ಅತ್ಯಂತ ಶೀಘ್ರವಾಗಿ ಮಾಹಿಷ್ಮತೀನಗರಕ್ಕೆ ಬಂದನು. ಆ ಪಟ್ಟಣವು ಹೃಷ್ಟರೂ-ಪುಷ್ಟರೂ ಆದ ಜನರಿಂದ ಭರಿತವಾಗಿದ್ದಿತು. ಇಂದ್ರನ ಅಮರಾವತಿಯಂತೆಯೇ ಇದ್ದಿತು. ಬ್ರಹ್ಮನು ಇಂದ್ರನ ಅಮರಾವತಿಯನ್ನು ಪ್ರವೇಶಿಸುವಂತೆ ಪುಲಸ್ತ್ಯನು ಮಾಹಿಷ್ಮತೀ ಪಟ್ಟಣವನ್ನು ಪ್ರವೇಶಿಸಿದನು. ಮುನಿಯು ಆಕಾಶದಿಂದ ಇಳಿದು ಬರುತ್ತಿದ್ದಾಗ ಕಾಲ್ನಡಿಗೆಯಲ್ಲಿ ಧರೆಗಿಳಿಯುತ್ತಿರುವ ಸೂರ್ಯನೋ ಎಂಬಂತೆ ಕಾಣುತ್ತಿದ್ದನು. ಸೂರ್ಯನಂತೆಯೇ ಮಹಾತೇಜಸ್ವಿಯಾಗಿದ್ದುದರಿಂದ ಅವನನ್ನು ನೋಡುವುದು ಕಷ್ಟವೇ ಆಗಿದ್ದಿತು. ಮುನಿಯನ್ನು ಗುರುತಿಸಿದ ಅರ್ಜುನನ ಸೇವಕರು ಋಷಿಯ ಆಗಮನದ ವಾರ್ತೆಯನ್ನು ಅರ್ಜುನನಿಗೆ ಹೇಳಿದರು. ಸೇವಕರ ಮಾತಿನಂತೆ ರಾಜಧಾನಿಗೆ ಬಂದಿರುವವನು ಪುಲಸ್ತ್ಯನೇ -ಎಂಬುದನ್ನು ತಿಳಿದು ಅರ್ಜುನನು ತಲೆಯ ಮೇಲೆ ಕೈಜೋಡಿಸಿಕೊಂಡು ಪುಲಸ್ತ್ಯನ ಬಳಿಗೆ ಧಾವಿಸಿದನು. ಅರ್ಜುನನ ಪುರೋಹಿತನು ಅರ್ಘ್ಯ-ಪಾದ್ಯಾದಿಗಳನ್ನೂ ಮಧುಪರ್ಕವನ್ನೂ ತೆಗೆದುಕೊಂಡು ಇಂದ್ರನ ಮುಂದೆ ಬೃಹಸ್ಪತಿಯು ಹೋಗುವಂತೆ ಅರ್ಜುನನ ಮುಂಭಾಗದಲ್ಲಿ ಹೋಗುತ್ತಿದ್ದನು. ಆಗ ತಾನೇ

★ ಗಾಳಿಯ ಸ್ವಭಾವ ಸದಾ ಬೀಸುತ್ತಿರುವುದು. ಅದಕ್ಕೆ ರೂಪವಿಲ್ಲ. ಅದನ್ನು ಹಿಡಿದು ಕಟ್ಟಿಹಾಕುವುದು ಕಷ್ಟಸಾಧ್ಯ. ಹಾಗೆಯೇ ನಮ್ಮೊಳಗೆ ಸಂಚರಿಸುತ್ತಿರುವ ಪ್ರಾಣವಾಯುವಿನ ವ್ಯಾಪಾರವನ್ನು ಸ್ತಂಭಿಸುವುದೂ ಅತಿಕಷ್ಟ- ಅಂತೆಯೇ ರಾವಣನ ಬಂಧನವೂ ಕಷ್ಟಸಾಧ್ಯವೆಂಬ ಅಭಿಪ್ರಾಯ.

ಹುಟ್ಟಿದ ಸೂರ್ಯನಂತೆಯೇ ಪ್ರಕಾಶಿಸುತ್ತಾ ಮುಂದೆ-ಮುಂದೆ ಬರುತ್ತಿದ್ದ ಮಹರ್ಷಿಯನ್ನು ನೋಡಿ ಚಕಿತನಾದ ಅರ್ಜುನನು ಇಂದ್ರನು ಬ್ರಹ್ಮನಿಗೆ ನಮಸ್ಕರಿಸುವಂತೆ ಪುಲಸ್ತ್ಯನಿಗೆ ನಮಸ್ಕರಿಸಿದನು. ಬಳಿಕ ವಿಧಿಪೂರ್ವಕವಾಗಿ ಅರ್ಘ್ಯ-ಪಾದ್ಯಾದಿಗಳನ್ನೂ ಮಧುಪರ್ಕವನ್ನೂ ಅದರ ಅಂಗವಾಗಿ ಗೋವನ್ನೂ ಸಮರ್ಪಿಸಿ ಹರ್ಷದಿಂದ ಗದ್ಗದಿತವಾದ ಧ್ವನಿಯಲ್ಲಿ ಮಹರ್ಷಿಗೆಹೇಳಿದನು:

'' ದ್ವಿಜೇಂದ್ರನೇ ! ನಿನ್ನ ದರ್ಶನವು ಅತ್ಯಂತದುರ್ಲಭವಾದುದು. ಆದರೂ ನಾನಿಂದು ನಿನ್ನ ದರ್ಶನದ ಲಾಭವನ್ನು ಪಡೆದಿರುತ್ತೇನೆ. ನೀನಿಲ್ಲಿಗೆ ಆಗಮಿಸಿ ಈ ನನ್ನ ಮಾಹಿಷ್ಮತೀಪಟ್ಟಣವನ್ನು ಅಮರಾವತಿಗೆ ಸಮಾನವನ್ನಾಗಿ ಮಾಡಿರುವೆ. ನಿನ್ನ ಆಗಮನದಿಂದಾಗಿ ಅಮರಾವತಿಗೆ ಇರುವಷ್ಟು ಗೌರವವೇ ಈ ನನ್ನ ರಾಜಧಾನಿಗೂ ಲಭಿಸಿದೆ.

ಅದ್ಯ ಮೇ ಕುಶಲಂ ದೇವ ಅದ್ಯ ಮೇ ಕುಶಲಂ ವ್ರತಮ್ ।
ಅದ್ಯ ಮೇ ಸಫಲಂ ಜನ್ಮ ಅದ್ಯ ಮೇ ಸಫಲಂ ತಪಃ ॥11॥
ಯತ್ತೇ ದೇವಗಣೈರ್ವನ್ದ್ಯೌ ವನ್ದೇಽಹಂ ಚರಣೌ ತವ ।
ಇದಂ ರಾಜ್ಯಮಿಮೇ ಪುತ್ರಾ ಇಮೇ ದಾರಾ ಇಮೇ ವಯಮ್ ।
ಬ್ರಹ್ಮನ್ ಕಿಂ ಕುರ್ಮಃ ಕಿಂ ಕಾರ್ಯಮಾಜ್ಞಾಪಯತು
ನೋ ಭವಾನ್ ॥12॥

ಬ್ರಾಹ್ಮಣದೇವನೇ! ದೇವತೆಗಳಿಂದ ವಂದಿಸಲ್ಪಡುವ ನಿನ್ನ ಚರಣಾರವಿಂದಗಳಿಗೆ ನಮಸ್ಕರಿಸುತ್ತೇನೆ. ನಿಶ್ಚಯವಾಗಿ ಹೇಳುವುದಾದರೆ ಇಂದೇ ನಾನು ಕುಶಲನು. ಇಂದು ನನ್ನ ವ್ರತವು ನಿರ್ವಿಘ್ನವಾಗಿ ಪೂರ್ಣವಾದಂತಾಯಿತು. ನನ್ನ ಜನ್ಮವು ಸಾಫಲ್ಯವನ್ನು ಹೊಂದಿದೆ. ಇಂದೇ ನನ್ನ ತಪಸ್ಸು ಸಫಲವಾಯಿತು. ಈ ರಾಜ್ಯ, ಈ ನನ್ನ ಪತ್ನೀ-ಪುತ್ರರು, ಮಂತ್ರಿ-ಸೇನಾಪತಿಗಳಿಂದ ಕೂಡಿರುವ ನಾನು-ಎಲ್ಲವೂ ನಿನಗೇ ಅರ್ಪಿತವಾಗಿದೆ. ನಾವು ನಿನಗಾಗಿ ಏನು ಮಾಡೋಣ ? ನಮ್ಮ ಕರ್ತವ್ಯವೇನು ? -ಎಂಬುದನ್ನು ಆಜ್ಞಾಪಿಸು.''

ಅರ್ಜುನನು ವಿನೀತನಾಗಿ ಹೀಗೆ ಹೇಳಿದನಂತರ ಪುಲಸ್ತ್ಯನು ಅವನ ಧರ್ಮ, ಅಗ್ನಿ, ಮತ್ತು ಪತ್ನೀ-ಪುತ್ರರ ಕುಶಲಸಮಾಚಾರವನ್ನು ಪ್ರಶ್ನಿಸಿ ಮುಂದುವರಿದು ಹೇಳಿದನು :

''ನರೇಂದ್ರನೇ ! ಕಮಲಾಕ್ಷನೇ ! ಪೂರ್ಣಚಂದ್ರನಿಗೆ ಸದೃಶವಾದ ಮುಖಮಂಡಲದಿಂದ ಪ್ರಕಾಶಿಸುತ್ತಿರುವವನೇ ! ಅರ್ಜುನ ! ದಶಗ್ರೀವನನ್ನು ಜಯಿಸಿರುವ ನಿನ್ನ ಬಲವು ನಿಶ್ಚಯವಾಗಿಯೂ ಅತುಲವಾದುದು. ಯಾವನ ಭಯದಿಂದ ಸಮುದ್ರ ಮತ್ತು ವಾಯುಗಳು ಸ್ವಾಭಾವಿಕವಾದ ಚಾಂಚಲ್ಯ ವನ್ನು ಪರಿತ್ಯಜಿಸಿ ಅಳ್ಳಾಡದೇ ಅವನ ಸೇವೆಯಲ್ಲಿ ನಿರತರಾಗಿರುವರೋ – ಅಂತಹ ರಣದುರ್ಜಯನಾದ ನನ್ನ ಮೊಮ್ಮಗನನ್ನು ನೀನು ಯುದ್ಧದಲ್ಲಿ ಬಂಧಿಸಿರುವೆ.

ಅತುಲ ಪರಾಕ್ರಮಿಯಾಗಿರುವ ನನ್ನ ಮೊಮ್ಮಗನನ್ನು ಸೆರೆಹಿಡಿದು ನೀನು ಅವನ ಯಶಸ್ಸನ್ನೇ ಹೀರಿಬಿಟ್ಟಿರುವೆ ಹಾಗೂ ನಿನ್ನ ಶುಭನಾಮವನ್ನು ಸರ್ವತ್ರ ಪ್ರಸಿದ್ಧಪಡಿಸಿರುವೆ. ನಾನೀಗ ಅವನ ಬಿಡುಗಡೆಯನ್ನು ಯಾಚಿಸಲು ಬಂದಿದ್ದೇನೆ. ನನ್ನ ಮಾತಿನಂತೆ ಅವನನ್ನು ನೀನು ಬಿಟ್ಟುಬಿಡು.''

ಪುಲಸ್ತ್ಯನ ಆಜ್ಞೆಯನ್ನು ಅರ್ಜುನನು ಶಿರಸಾವಹಿಸಿ ಯಾವ ಮಾತನ್ನೂ ಆಡದೇ ಅತ್ಯಂತಪ್ರಸನ್ನಭಾವದಿಂದಲೇ ರಾವಣನನ್ನು ಬಂಧನದಿಂದ ಬಿಡುಗಡೆ ಮಾಡಿದನು. ಹೀಗೆ ಅರ್ಜುನನು ದೇವಶತ್ರುವಾದ ರಾವಣ ರಾಕ್ಷಸನನ್ನು ಬಂಧನದಿಂದ ಬಿಡುಗಡೆಮಾಡಿ ದಿವ್ಯಾಭರಣಗಳಿಂದಲೂ, ಮಾಲೆಗಳಿಂದಲೂ, ವಸ್ತ್ರಗಳಿಂದಲೂ ಅವನನ್ನು ಸಮ್ಮಾನಿಸಿದನು. ಅನಂತರ ಅವರಿಬ್ಬರೂ ಇನ್ನುಮುಂದೆ ಒಬ್ಬರನ್ನೊಬ್ಬರು ಹಿಂಸಿಸಬಾರದೆಂದು ಅಗ್ನಿಸಾಕ್ಷಿಯಾಗಿ ಸ್ನೇಹವನ್ನು ಮಾಡಿಕೊಂಡರು. ಅನಂತರ ಅರ್ಜುನನು ಬ್ರಹ್ಮನ ಮಗನಾದ ಪುಲಸ್ತ್ಯನಿಗೆ ನಮಸ್ಕರಿಸಿ ತನ್ನ ಅರಮನೆಗೆ ಹಿಂದಿರುಗಿದನು.

ಹೀಗೆ ಅರ್ಜುನನಿಂದ ಸತ್ಕಾರವನ್ನು ಪಡೆದ ರಾವಣನನ್ನು ಪುಲಸ್ತ್ಯನು ಆಲಿಂಗಿಸಿಕೊಂಡು ಬೀಳ್ಕೊಟ್ಟನು. ಬಂಧನದಿಂದ ಬಿಡುಗಡೆಯಾದರೂ ರಾವಣನಿಗೆ ಸಂತೋಷವಾಗಲಿಲ್ಲ, ಪರಾಜಯದಿಂದ ಲಜ್ಜಿತನಾಗಿದ್ದನು. ಮುನಿಶ್ರೇಷ್ಠನಾದ ಬ್ರಹ್ಮನ ಮಗನಾದ ಪುಲಸ್ತ್ಯನು ಮೊಮ್ಮಗನಾದ ರಾವಣನನ್ನು ಬಂಧನದಿಂದ ವಿಮೋಚಿಸಿ, ಬ್ರಹ್ಮಲೋಕಕ್ಕೆ ತೆರಳಿದನು.

ರಾಘವ ! ಹೀಗೆ ಅಜೇಯನೆನಿಸಿದ್ದ ಮಹಾಬಲನಾದ ರಾವಣನು ಅರ್ಜುನನಿಂದ ಪರಾಜಯವನ್ನು ಹೊಂದಿ ಬಂಧಿಸಲ್ಪಟ್ಟವನಾಗಿ ಪುಲಸ್ತ್ಯನ ಮಾತಿನಂತೆ ಬಿಡುಗಡೆಯನ್ನು ಹೊಂದಿದನು.

ಏವಂ ಬಲಿಭ್ಯೋ ಬಲಿನಃ ಸನ್ತಿ ರಾಘವನನ್ದನ ।
ನಾವಜ್ಞಾ ಹಿ ಪರೇ ಕಾರ್ಯಾ ಯ ಇಚ್ಛೇಚ್ಛ್ರೇಯ ಆತ್ಮನಃ ॥

ರಾಘವ! ಹೀಗೆ ಪ್ರಪಂಚದಲ್ಲಿ ಬಲಿಷ್ಠರಿಗಿಂತಲೂ ಹೆಚ್ಚು ಬಲಿಷ್ಠರಿರುತ್ತಾರೆ. ಆದುದರಿಂದ ಶ್ರೇಯಸ್ಸನ್ನು ಬಯಸುವವನು ಎಂದಿಗೂ ಇತರರನ್ನು ಅವಹೇಳನ ಮಾಡಬಾರದು.

ಹೀಗೆ ರಾಕ್ಷಸರಾಜನಾದ ರಾವಣನು ಸಾವಿರ ತೋಳಿನ ಅರ್ಜುನನೊಡನೆ ಅಗ್ನಿಸಾಕ್ಷಿಕವಾಗಿ ಗೆಳೆತನವನ್ನು ಮಾಡಿಕೊಂಡು ದರ್ಪಿಷ್ಠನಾಗಿ ಭೂಮಂಡಲದಲ್ಲಿ ಸಂಚರಿಸುತ್ತಾ ಪುನಃ ದೇಶೀಯರಾಜರನ್ನು ಸಂಹರಿಸತೊಡಗಿದನು.

33ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **34ನೆಯ ಸರ್ಗ**

ವಾಲಿಯಿಂದ ರಾವಣನ ಪರಾಭವ : ವಾಲಿ –ರಾವಣರ ಮೈತ್ರಿ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ಅರ್ಜುನೇನ ವಿಮುಕ್ತಸ್ತು ರಾವಣೋ ರಾಕ್ಷಸಾಧಿಪಃ ।
ಚಚಾರ ಪೃಥಿವೀಂ ಸರ್ವಾಮನಿರ್ವಿಣ್ಣಸ್ತಥಾ ಕೃತಃ ॥1॥

''ರಾಘವ ! ರಾವಣನು ಅರ್ಜುನನಿಂದ ಬಿಡುಗಡೆ ಹೊಂದಿದ ನಂತರ ಸ್ವಲ್ಪವಾದರೂ ಖೇದವಿಲ್ಲದವನಾಗಿ ತನಗೆ ಉಂಟಾದ ಪರಾಭವವನ್ನೂ ಮರೆತು ಪುನಃ ಭೂಮಂಡಲದಲ್ಲಿ ಸಂಚರಿಸತೊಡಗಿದನು.

ಭೂಮಂಡಲದಲ್ಲಿ ಅಧಿಕಬಲವಿರುವವನು ರಾಕ್ಷಸನಾಗಿರಲಿ; ಮನುಷ್ಯನಾಗಿರಲಿ – ದರ್ಪಿಷ್ಠನಾದ ರಾವಣನು ಅವನ ಬಳಿಗೆ ಹೋಗಿ ಅವನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದನು. ಹೀಗೆಯೇ ರಾವಣನು ಸಂಚರಿಸುತ್ತಿದ್ದಾಗ ಒಮ್ಮೆ ವಾಲಿಯಿಂದ ಪಾಲಿಸಲ್ಪಡುತ್ತಿದ್ದ ಕಿಷ್ಕಿಂಧೆಗೆ ಹೋಗಿ ಹೇಮಮಾಲಿಯಾದ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸಿದನು. ಯುದ್ಧ ಮಾಡುವ ಇಚ್ಛೆಯಿಂದ ಆಗಮಿಸಿದ್ದ ರಾವಣನಿಗೆ ತಾರ, ತಾರೆಯ ತಂದೆಯಾದ ಸುಷೇಣ, ಅಂಗದ ಮತ್ತು ಸುಗ್ರೀವರು ಹೇಳಿದರು :

''ರಾವಣೇಶ್ವರನೇ ! ನಿನ್ನನ್ನು ಪ್ರತಿಸ್ಪರ್ಧಿಸಲು ಸಮರ್ಥನಾದ ವಾಲಿಯು ನಗರದಿಂದ ಹೊರಗೆ ಹೋಗಿದ್ದಾನೆ. ಅವನನ್ನು ಬಿಟ್ಟು ಬೇರೆ

ಯಾವ ವಾನರನು ತಾನೇ ನಿನ್ನನ್ನು ಎದುರಿಸುವನು ? ವಾಲಿಯು ನಾಲ್ಕು ಸಮುದ್ರಗಳಲ್ಲಿಯೂ ಸಂಧ್ಯಾವಂದನೆಯನ್ನು ಮಾಡಿ ಮುಹೂರ್ತಮಾತ್ರದಲ್ಲಿ ಬಂದುಬಿಡುವನು. ನೀನು ಮುಹೂರ್ತಕಾಲ ಇಲ್ಲಿಯೇ ಇರು. ಅವನೊಡನೆ ಯುದ್ಧ ಮಾಡುವ ಮೊದಲು ನೀನು ಸ್ವಲ್ಪ ಯೋಚಿಸಬೇಕಾಗಿದೆ. ಇದೋ ನೋಡು, ಶಂಖದಂತೆ ಬಿಳುಪಾಗಿರುವ ಈ ಮೂಳೆಗಳ ರಾಶಿಯನ್ನು. ವಾಲಿಯೊಡನೆ ಯುದ್ಧವನ್ನು ಬಯಸಿ ಬಂದ ಮಹಾವೀರರ ಮೂಳೆಗಳ ರಾಶಿಯಿದು. ವಾನರರಿಗೆ ಅಧಿಪತಿಯಾದ ವಾಲಿಯ ತೇಜಸ್ಸಿನಿಂದ ಅವರೆಲ್ಲರಿಗೂ ಇಂತಹ ಅವಸ್ಥೆಯುಂಟಾಗಿದೆ. ನೀನು ಅಮೃತರಸವನ್ನೇ ಕುಡಿದಿರುವೆಯಾ ? ಹಾಗೆ ಕುಡಿದಿದ್ದರೂ ವಾಲಿಯೊಡನೆ ಯುದ್ಧಮಾಡುವವರೆಗೆ ಮಾತ್ರವೇ ನೀನು ಬದುಕಿರಬಲ್ಲೆ! ವಿಶ್ರವಸನ ಪುತ್ರನೇ ! ಈಗಲೇ ನೀನು ಜಗತ್ತಿಗೇ ಆಶ್ಚರ್ಯಭೂತನಾಗಿರುವ ವಾಲಿಯನ್ನು ಕಾಣುವೆ. ಒಂದು ಮುಹೂರ್ತಕಾಲ ಅವನಿಗಾಗಿ ಕಾದಿರು. ಅವನು ಬಂದೊಡನೆಯೇ ನಿನಗೆ ಜೀವಿತವು ದುರ್ಲಭವಾಗುತ್ತದೆ. ಒಂದು ವೇಳೆ ನೀನು ಸಾಯಲೇಬೇಕೆಂದು ಅವಸರಪಡುತ್ತಿದ್ದರೆ ಈಗಲೇ ದಕ್ಷಿಣಸಮುದ್ರಕ್ಕೆ ಹೋಗು. ಭೂಮಿಯಲ್ಲಿರುವ ಯಜ್ಞೇಶ್ವರನಂತೆಯೇ ಪ್ರಜ್ವಲಿಸುವ ವಾಲಿಯನ್ನು ಅಲ್ಲಿ ನೀನು ಕಾಣುವೆ.''

ತಾರನೇ ಮೊದಲಾದ ಕಪಿಮುಖ್ಯರು ಹೀಗೆ ಹೇಳಿದೊಡನೆಯೇ ರಾವಣನು ತಾರನನ್ನು ಗದರಿಸುತ್ತಾ ಪುಷ್ಪಕವಿಮಾನದಲ್ಲಿ ಕುಳಿತು ದಕ್ಷಿಣ ಸಮುದ್ರದ ತೀರಕ್ಕೆ ತೆರಳಿದನು. ಅಲ್ಲಿ ಸುವರ್ಣಪರ್ವತದಂತೆ ಎತ್ತರವಾಗಿದ್ದ, ಬಾಲಸೂರ್ಯನಿಗೆ ಸದೃಶವಾದ ಮುಖದಿಂದ ಕಂಗೊಳಿಸುತ್ತಿದ್ದ, ಸಂಧ್ಯೋಪಾಸನೆಯಲ್ಲಿ ನಿರತನಾಗಿದ್ದ ವಾಲಿಯನ್ನು ನೋಡಿದನು. ಕಾಡಿಗೆಯ ಪರ್ವತದಂತೆ ಶ್ಯಾಮಲವರ್ಣದವನಾಗಿದ್ದ ರಾವಣನು ಪುಷ್ಪಕ ವಿಮಾನದಿಂದಿಳಿದು ವಾಲಿಯನ್ನು ಹಿಡಿಯಬೇಕೆಂಬ ಆಶಯದಿಂದ ಸ್ವಲ್ಪವಾದರೂ ಶಬ್ದವಾಗದಂತೆ ಹೆಜ್ಜೆಗಳನ್ನಿಡುತ್ತಾ ವಾಲಿಯ ಬಳಿಗೆ ಹೋಗುತ್ತಿದ್ದನು. ಆದರೆ ದೈವಯೋಗದಿಂದ ವಾಲಿಯೂ ರಾವಣನನ್ನು ನೋಡಿದನು. ರಾವಣನ ಪಾಪಪೂರ್ಣವಾದ ಅಭಿಪ್ರಾಯವನ್ನು ತಿಳಿದೂ ವಾಲಿಯು ಗಾಬರಿಗೊಳ್ಳಲಿಲ್ಲ. ಮೊಲವನ್ನು ಕಂಡು ಸಿಂಹವು ಭ್ರಾಂತವಾಗದಂತೆ ಅಥವಾ

ಸರ್ಪವನ್ನು ಕಂಡು ಗರುಡನು ಗಾಬರಿಗೊಳ್ಳದಂತೆ - ಪಾಪನಿಶ್ಚಯನಾದ ರಾವಣನನ್ನು ನೋಡಿ ವಾಲಿಯು ಸ್ವಲ್ಪವಾದರೂ ಚಿಂತಿಸಹೋಗಲಿಲ್ಲ. ತನ್ನನ್ನು ಹಿಡಿಯಲು ಬರುತ್ತಿದ್ದ ಪಾಪಾತ್ಮನಾದ ರಾವಣನನ್ನು ನೋಡಿ ಹೀಗೆ ಯೋಚಿಸಿದನು :

''ಈ ಪಾಪಚಿತ್ತನಾದ ರಾವಣನನ್ನು ಬಗಲಿಗೆ ಹಾಕಿಕೊಂಡು ಉಳಿದಿರುವ ಮೂರು ಸಮುದ್ರಗಳಿಗೂ ಹೋಗುತ್ತೇನೆ. ಗರುಡನಿಂದ ಹಿಡಿಯಲ್ಪಟ್ಟ ಸರ್ಪದಂತೆ ಶತ್ರುವಾದ ಇವನು ನನ್ನ ಕಂಕುಳಿನಲ್ಲಿರುವುದನ್ನೂ, ನೇತಾಡುತ್ತಿರುವ ತೊಡೆಗಳಿಂದಲೂ ವಸ್ತ್ರಗಳಿಂದಲೂ ಕೂಡಿ ಜೋತುಬಿದ್ದಿರುವುದನ್ನೂ ಲೋಕದ ಜನರು ನೋಡುವಂತಾಗಲಿ.''

ಹೀಗೆ ಯೋಚಿಸಿದ ವಾಲಿಯು ಮೌನಿಯಾಗಿ ವೇದಮಂತ್ರಗಳನ್ನು ಜಪಿಸುತ್ತಾ ಪರ್ವತರಾಜನಂತೆ ನಿಶ್ಚಲನಾಗಿ ಕುಳಿತಿದ್ದನು.

ಬಲದಿಂದ ಕೊಬ್ಬಿದ್ದ ವಾಲಿ - ರಾವಣರು ಹೀಗೆ ಒಬ್ಬರು ಮತ್ತೊಬ್ಬರನ್ನು ಹಿಡಿಯಬೇಕೆಂದು ನಿಶ್ಚಯಿಸಿ ಅದನ್ನು ಸಾಧಿಸಲು ಇಬ್ಬರೂ ಪ್ರಯತ್ನಶೀಲರಾಗಿದ್ದರು. ಕಾಲಿನ ಸಪ್ಪಳದಿಂದ ರಾವಣನು ತನ್ನ ಸಮೀಪಕ್ಕೆ ಬಂದಿರುವುದನ್ನೂ ಮುಂದಿನ ಕ್ಷಣದಲ್ಲಿ ತನ್ನನ್ನು ಹಿಡಿಯಲಿರುವನೆಂಬುದನ್ನೂ ಊಹಿಸಿದ ವಾಲಿಯು ಹಿಂಬದಿಯಿಂದಲೇ ಗರುಡನು ಸರ್ಪವನ್ನು ಹಿಡಿಯುವಂತೆ - ರಾವಣನನ್ನು ಹಿಡಿದುಕೊಂಡನು. ತನ್ನನ್ನು ಹಿಡಿಯಲು ಬಂದಿದ್ದ ರಾಕ್ಷಸರಾಜನಾದ ರಾವಣನನ್ನೇ ವಾಲಿಯು ಹಿಡಿದು ಕಂಕುಳಿನಲ್ಲಿಟ್ಟುಕೊಂಡು ವೇಗವಾಗಿ ಆಕಾಶಕ್ಕೆ ಹಾರಿದನು. ಕಂಕುಳಿನಲ್ಲಿದ್ದ ರಾವಣನು ಉಗುರುಗಳಿಂದ ವಾಲಿಯನ್ನು ಪರಚುತ್ತಾ ಪೀಡಿಸುತ್ತಿದ್ದಾಗ ಬಲಿಷ್ಠನಾದ ವಾಲಿಯು ಮೇಘಗಳನ್ನು ಹಾರಿಸಿಕೊಂಡು ಹೋಗುವ ರೀತಿಯಲ್ಲಿ ರಾವಣನನ್ನು ಕಂಕುಳಿನಲ್ಲೆತ್ತಿಕೊಂಡೇ ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದನು. ಹೀಗೆ ವಾಲಿಯು ರಾವಣನನ್ನು ಎತ್ತಿಕೊಂಡು ಹೋಗುತ್ತಿದ್ದಾಗ ರಾವಣನ ಅಮಾತ್ಯರು ರಾಜನನ್ನು ವಾಲಿಯಿಂದ ಬಿಡಿಸಿಕೊಳ್ಳುವ ಸಲುವಾಗಿ ಕೂಗಿಕೊಳ್ಳುತ್ತಾ ವಾಲಿಯನ್ನು ಬೆನ್ನಟ್ಟಿ ಹೋಗುತ್ತಿದ್ದರು. ಮೇಘಮಂಡಲದಿಂದ ಅನುಸರಿಸಲ್ಪಡುವ ಆಕಾಶದಲ್ಲಿರುವ ಸೂರ್ಯನಂತೆ ರಾವಣನ ಅಮಾತ್ಯರಿಂದ ಹಿಂಬಾಲಿಸಲ್ಪಡುತ್ತಿದ್ದ ವಾಲಿಯು

ಆಕಾಶದ ಮಧ್ಯದಲ್ಲಿ ಬಹಳವಾಗಿ ಪ್ರಕಾಶಿಸಿದನು. ವಾಲಿಯ ತೋಳುಗಳ ಮತ್ತು ತೊಡೆಗಳ ವೇಗದಿಂದ ಹುಟ್ಟಿದ ಗಾಳಿಯ ವೇಗಕ್ಕೆ ಸಿಕ್ಕಿ ಆಯಾಸ ಗೊಂಡ ರಾವಣನ ಅಮಾತ್ಯರು ವಾಲಿಯನ್ನು ಹಿಡಿಯಲು ಅಸಮರ್ಥ ರಾದರು. ವಾಲಿಯು ಹಾರಿಕೊಂಡು ಹೋಗುತ್ತಿದ್ದಾಗ ಮಧ್ಯದಲ್ಲಿದ್ದ ಪರ್ವತಗಳೂ ವಾಲಿಗೆ ಮಾರ್ಗವನ್ನು ಮಾಡಿಕೊಡುತ್ತಾ ಪಕ್ಕಕ್ಕೆ ಸರಿದು ನಿಲ್ಲುತ್ತಿದ್ದುವು. ಹೀಗಿರುವಾಗ ಮಾಂಸ-ರಕ್ತಗಳನ್ನು ಹೊಂದಿರುವ ಮತ್ತು ಜೀವನದಲ್ಲಿ ಆಸೆಯನ್ನು ಇಟ್ಟುಕೊಂಡಿರುವ ಪ್ರಾಣಿಗಳ ವಿಷಯದಲ್ಲಿ ಹೇಳು ವುದೇನಿದೆ ? ಮಹಾವೇಗನಾದ ವಾಲಿಯು ಎಷ್ಟು ಬೇಗ ಒಂದೊಂದು ಸಮುದ್ರದ ತೀರಪ್ರದೇಶಕ್ಕೂ ಹೋಗುತ್ತಿದ್ದನೋ ಅಷ್ಟು ಬೇಗ ಪಕ್ಷಿಗಳಿಗೂ ಅಲ್ಲಿಗೆ ಹೋಗಲಾಗುತ್ತಿರಲಿಲ್ಲ. ವಾಲಿಯು ಅನುಕ್ರಮವಾಗಿ ಉಳಿದ ಮೂರು ಸಮುದ್ರಗಳ ತೀರಪ್ರದೇಶಗಳಿಗೂ ಹೋಗಿ ಸಂಧ್ಯಾವಂದನೆಯನ್ನು ಮುಗಿಸಿದನು. ಹೀಗೆ ಪ್ರಯಾಣಮಾಡುತ್ತಿದ್ದಾಗ ಆಕಾಶವಾಸಿಗಳು ವಾಲಿ ಯನ್ನು ಪೂಜಿಸಿ ಗೌರವಿಸುತ್ತಿದ್ದರು. ರಾವಣನೊಡನೆ ವಾಲಿಯು ಪಶ್ಚಿಮ ಸಮುದ್ರದ ತೀರಪ್ರದೇಶಕ್ಕೂ ಬಂದನು. ಪಶ್ಚಿಮಸಮುದ್ರದಲ್ಲಿ ವಾಲಿಯು ಸ್ನಾನ-ಸಂಧ್ಯಾವಂದನೆಗಳನ್ನು ಮಾಡಿ ಮಹಾಮಂತ್ರಗಳನ್ನು ಜಪಿಸಿ ರಾವಣ ನನ್ನು ಹೊತ್ತುಕೊಂಡೇ ಉತ್ತರಸಮುದ್ರದ ತೀರಪ್ರದೇಶಕ್ಕೂ ಹೋದನು. ಹೀಗೆ ವಾಲಿಯು ಅನೇಕಸಾವಿರ ಯೋಜನಗಳವರೆಗೆ ಶತ್ರುವಾದ ರಾವಣ ನನ್ನು ಹೊತ್ತುಕೊಂಡೇ ವಾಯುವೇಗ-ಮನೋವೇಗ ಗತಿಯಲ್ಲಿ ಪ್ರಯಾಣ ಮಾಡುತ್ತಿದ್ದನು. ಪಶ್ಚಿಮಸಾಗರದಲ್ಲಿ ಮಾಡಿದಂತೆಯೇ ಉತ್ತರಸಾಗರ ದಲ್ಲಿಯೂ ವಾಲಿಯು ಸ್ನಾನ-ಸಂಧ್ಯಾವಂದನೆಗಳನ್ನೂ ಮಂತ್ರಜಪಗಳನ್ನೂ ಮಾಡಿ ರಾವಣನನ್ನು ಹೊತ್ತುಕೊಂಡು ಪೂರ್ವದಿಕ್ಕಿನಲ್ಲಿದ್ದ ಮಹೋದಧಿ ಎಂಬ ಹೆಸರಿನ ಸಮುದ್ರದ ಬಳಿಗೆ ಬಂದನು. ಅಲ್ಲಿಯೂ ಇಂದ್ರನ ಮಗ ನಾದ ವಾಲಿಯು ಸ್ನಾನ -ಸಂಧ್ಯಾವಂದನೆಗಳನ್ನೂ ಜಪವನ್ನೂ ಮುಗಿಸಿ ರಾವಣನನ್ನು ಹೊತ್ತುಕೊಂಡು ಕಿಷ್ಕಿಂಧಾಪಟ್ಟಣದ ಬಳಿಗೆ ಬಂದನು.

ನಾಲ್ಕು ಸಮುದ್ರಗಳಲ್ಲಿಯೂ ಸಂಧ್ಯಾವಂದನೆಯನ್ನು ನಿರ್ವಹಿಸಿದ ವಾಲಿಯು ರಾವಣನನ್ನು ಹೊತ್ತ ಆಯಾಸದಿಂದ ಶ್ರಾಂತನಾಗಿ ಕಿಷ್ಕಿಂಧಾ

ಪಟ್ಟಣದ ಉಪವನದಲ್ಲಿ ಇಳಿದನು. ಅನಂತರ ರಾವಣನನ್ನು ಕಂಕುಳಿನಿಂದ ಕೆಳಗಿಳಿಸಿ ಗಹಗಹಿಸಿ ನಗುತ್ತಾ ಪ್ರಶ್ನಿಸಿದನು : **'ಕುತಸ್ತ್ವಮಸಿ '** 'ನೀನೆಲ್ಲಿಂದ ಬಂದೆ ?'

ರಾವಣನ ಕಣ್ಣುಗಳು ಹೆಚ್ಚಿನ ಆಯಾಸದಿಂದ ಚಂಚಲವಾಗಿದ್ದುವು. ಅವನು ಅತ್ಯಂತ ವಿಸ್ಮಿತನಾಗಿ ವಾನರರಾಜನೊಡನೆ ಹೇಳಿದನು :

''ವಾನರೇಂದ್ರನೇ ! ಮಹೇಂದ್ರಸದೃಶನೇ ! ವಾಲಿಯೇ ! ನಾನು ರಾಕ್ಷಸೇಂದ್ರನಾದ ರಾವಣನು. ನಿನ್ನೊಡನೆ ಯುದ್ಧಮಾಡುವ ಅಭಿಲಾಷೆಯಿಂದ ನಾನಿಲ್ಲಿಗೆ ಬಂದೆನು. ಆ ಯುದ್ಧವನ್ನು ನೀನೀಗಲೇ ಮಾಡಿಮುಗಿಸಿ ಬಿಟ್ಟಿರುವೆ.

ಅಹೋ ಬಲಮಹೋ ವೀರ್ಯಮಹೋ ಗಾಮ್ಭೀರ್ಯಮೇವ ಚ ।
ಯೇನಾಹಂ ಪಶುವದ್ಗೃಹ್ಯ ಭ್ರಾಮಿತಶ್ಚತುರೋಽರ್ಣವಾನ್ ॥37॥

ಅಬ್ಬ ! ನಿನ್ನ ಬಲವೇನು ! ನಿನ್ನ ಶೌರ್ಯವೇನು ! ನಿನ್ನ ಗಾಂಭೀರ್ಯ ವೇನು ! ಪಶುವಿನಂತೆ ನನ್ನನ್ನು ಬಗಲಿನಲ್ಲಿಟ್ಟುಕೊಂಡು ನಾಲ್ಕು ಸಮುದ್ರ ಗಳನ್ನೂ ಅಲೆಸಿಬಿಟ್ಟೆಯಲ್ಲವೇ ? ವಾನರವೀರನೇ ! ಸ್ವಲ್ಪವಾದರೂ ಆಯಾಸ ವಿಲ್ಲದೇ ನನ್ನಂತಹವನನ್ನು ಎತ್ತಿಕೊಂಡು ನೀನಲ್ಲದೇ ಬೇರೆ ಯಾವನು ತಾನೇ ಇಷ್ಟು ಶೀಘ್ರವಾಗಿ ಸಂಚರಿಸಬಲ್ಲನು ?

ತ್ರಯಾಣಾಮೇವ ಭೂತಾನಾಂ ಗತಿರೇಷಾ ಪ್ಲವಙ್ಗಮ ।
ಮನೋಽನಿಲಸುಪರ್ಣಾನಾಂ ತವ ಚಾತ್ರ ನ ಸಂಶಯಃ ॥39॥

ಇಂತಹ ಶೀಘ್ರಗತಿಯು ಮನಸ್ಸು – ವಾಯು ಮತ್ತು ಗರುಡ –ಈ ಮೂವರಿಗೆ ಮಾತ್ರವೇ ಇರುವುದೆಂದು ನಾನು ಕೇಳಿದ್ದೇನೆ. ಆದರೆ ನನ್ನ ಅನುಭವದಲ್ಲಿ ಈ ಶೀಘ್ರಗತಿಯು ನಿನಗೂ ಇದೆ. ಇದರಲ್ಲಿ ಸಂಶಯವೇ ಇಲ್ಲ.

ಕಪಿಶ್ರೇಷ್ಠನೇ ! ನಾನು ನಿನಗೆಷ್ಟು ಬಲವಿರುವುದೆಂಬುದನ್ನು ಕಂಡು ಕೊಂಡೆನು. ಈಗ ನಾನು ಅಗ್ನಿಸಾಕ್ಷಿಕವಾಗಿ ನಿನ್ನೊಡನೆ ಸ್ನೇಹಪೂರ್ಣವಾದ ಮತ್ತು ಶಾಶ್ವತವಾದ ಗೆಳೆತನವನ್ನು ಬಯಸಿದ್ದೇನೆ.

ದಾರಾಃ ಪುತ್ರಾಃ ಪುರಂ ರಾಷ್ಟ್ರಂ ಭೋಗಾಚ್ಛಾದನಭೋಜನಮ್ ।
ಸರ್ವಮೇವಾವಿಭಕ್ತಂ ನೌ ಭವಿಷ್ಯತಿ ಹರೀಶ್ವರ ॥41॥

ಹರೀಶ್ವರನೇ ! ಮಡದಿ –ಮಕ್ಕಳು, ನಗರ, ರಾಜ್ಯ, ಭೋಗ, ವಸ್ತ್ರ ಭೋಜನ – ಈ ಎಲ್ಲವೂ ವಿಭಾಗವಿಲ್ಲದೇ ನಮ್ಮಿಬ್ಬರಿಗೂ ಸಮಾನ'ವಾಗಿರಲಿ.''

ರಾವಣನು ಹೀಗೆ ಹೇಳಿದನಂತರ ಅಗ್ನಿಯನ್ನು ಪ್ರತಿಷ್ಠಾಪಿಸಿ ವಾಲಿ–ರಾವಣರು ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಮಾಡಿಕೊಂಡು ಅಣ್ಣ–ತಮ್ಮಂದಿರಂತೆಯೇ ಆಗಿ ಪರಸ್ಪರವಾಗಿ ಗಾಢಾಲಿಂಗನ ಮಾಡಿಕೊಂಡರು. ಅನಂತರ ವಾನರ –ರಾಕ್ಷಸರಾಜರು ಒಬ್ಬರು ಮತ್ತೊಬ್ಬರ ಕೈಹಿಡಿದು ಎರಡು ಸಿಂಹಗಳು ಗಿರಿಗುಹೆಯನ್ನು ಪ್ರವೇಶಿಸುವಂತೆ ಪರಮಹೃಷ್ಟರಾಗಿ ಕಿಷ್ಕಿಂಧೆಯನ್ನು ಪ್ರವೇಶಿಸಿದರು. ಕಿಷ್ಕಿಂಧೆಯಲ್ಲಿ ರಾವಣನು ವಾಲಿಯ ತಮ್ಮನಾದ ಸುಗ್ರೀವನಂತೆಯೇ ಸಮ್ಮಾನಿತನಾಗಿ ಒಂದು ತಿಂಗಳ ಕಾಲ ವಾಸವಾಗಿದ್ದನು. ಬಳಿಕ ಮೂರು ಲೋಕಗಳನ್ನೂ ಧ್ವಂಸಮಾಡಬೇಕೆನ್ನುವ ಆಶಯವನ್ನು ಹೊಂದಿದ್ದ ರಾವಣನ ಮಂತ್ರಿಗಳು ರಾಕ್ಷಸನನ್ನು ಪುನಃ ಭೂಮಂಡಲದ ಸಂಚಾರಕ್ಕಾಗಿ ಕರೆದೊಯ್ದರು.

ಪ್ರಭುವೇ ! ಶ್ರೀರಾಮ ! ವಾಲಿಯು ರಾವಣನನ್ನು ಪರಾಜಯಗೊಳಿಸಿದ ಮತ್ತು ವಾಲಿಯು ರಾವಣನೊಡನೆ ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಮಾಡಿಕೊಂಡು ರಾವಣನನ್ನು ತನ್ನ ತಮ್ಮನನ್ನಾಗಿ ಮಾಡಿಕೊಂಡ ಘಟನೆಯು ಹಿಂದೆ ನಡೆಯಿತು. ವಾಲಿಗೆ ಅನುಪಮವಾದ ಮತ್ತು ಅತ್ಯಧಿಕವಾದ ಬಲವಿದ್ದಿತು. ಅಂತಹವನನ್ನು ಕೂಡ ನೀನು ಅಗ್ನಿಯು ಪತಂಗದ ಹುಳುವನ್ನು ಭಸ್ಮಮಾಡುವಂತೆ – ನಿನ್ನ ಬಾಣಾಗ್ನಿಯಿಂದ ಸುಟ್ಟುಹಾಕಿದೆ.''

34ನೆಯ ಸರ್ಗವು ಮುಗಿಯಿತು.

ಹನುಮಂತನ ಜನ್ಮವೃತ್ತಾಂತ : ಹುಟ್ಟಿದೊಡನೆಯೇ ಅವನು ಸೂರ್ಯ– ರಾಹು – ಐರಾವತಗಳನ್ನು ಆಕ್ರಮಿಸಿದುದು : ಇಂದ್ರನಿಂದ ವಜ್ರಾಯುಧಪ್ರಹಾರ : ಹನುಮಂತನ ಮೂರ್ಛೆ : ವಾಯುವಿನ ಕೋಪ : ವಾಯುವನ್ನು ಪ್ರಸನ್ನಗೊಳಿಸಲು ದೇವತೆಗಳೊಡನೆ ಬ್ರಹ್ಮನ ಆಗಮನ

ಅಪೃಚ್ಛತ ತದಾ ರಾಮೋ ದಕ್ಷಿಣಾಶಾಶ್ರಯಂ ಮುನಿಮ್ ।
ಪ್ರಾಞ್ಜಲಿರ್ವಿನಯೋಪೇತ ಇದಮಾಹ ವಚೋಽರ್ಥವತ್ ॥1॥

ಬಳಿಕ ಪೂಜ್ಯನಾದ ಶ್ರೀರಾಮನು ಕೈಗಳನ್ನು ಜೋಡಿಸಿಕೊಂಡು ದಕ್ಷಿಣದಿಕ್ಕಿನಲ್ಲಿ ವಾಸಮಾಡುವ ಅಗಸ್ತ್ಯರಿಗೆ ವಿನಯಪೂರ್ವಕವಾಗಿ ಅರ್ಥವತ್ತಾದ ಈ ಮಾತನ್ನು ಹೇಳಿದನು :

''ಮಹರ್ಷಿಗಳೇ! ನೀವು ಹೇಳಿದಂತೆ ವಾಲಿಗೂ ಮತ್ತು ರಾವಣನಿಗೂ ಅತುಲವಾದ ಬಲವಿದ್ದುದೇನೋ ನಿಜ ; ಆದರೆ ಆ ಇಬ್ಬರ ಬಲವೂ ಹನುಮಂತನ ಬಲಕ್ಕೆ ಸಮಾನವಲ್ಲವೆಂದು ನನ್ನ ಅಭಿಪ್ರಾಯವಾಗಿದೆ.

ಶೌರ್ಯಂ ದಾಕ್ಷ್ಯಂ ಬಲಂ ಧೈರ್ಯಂ ಪ್ರಾಜ್ಞತಾ ನಯಸಾಧನಮ್ ।
ವಿಕ್ರಮಶ್ಚ ಪ್ರಭಾವಶ್ಚ ಹನೂಮತಿ ಕೃತಾಲಯಾಃ ॥3॥

ಶೌರ್ಯ, ದಕ್ಷತೆ, ಬಲ, ಧೈರ್ಯ, ಬುದ್ಧಿಮತ್ತೆ, ಕಾರ್ಯನೀತಿ, ಪರಾಕ್ರಮ ಮತ್ತು ಪ್ರಭಾವ – ಇವೆಲ್ಲವೂ ಹನುಮಂತನಲ್ಲಿಯೇ ಮನೆ ಮಾಡಿಕೊಂಡಿದ್ದುವು.

ಸಮುದ್ರವನ್ನು ನೋಡುತ್ತಲೇ ಕಪಿಸೈನ್ಯವು ಗಾಬರಿಗೊಂಡಿತು. ಅದನ್ನು ನೋಡಿ ಮಹಾಬಾಹುವಾದ ಹನುಮಂತನು ಕಪಿಗಳನ್ನು ಸಮಾಧಾನಗೊಳಿಸಿ ನೂರು ಯೋಜನಗಳಷ್ಟು ವಿಸ್ತಾರವಾಗಿದ್ದ ಸಮುದ್ರವನ್ನು ದಾಟಿದನು. ಲಂಕೆಯ ಅಧಿದೇವತೆಯಾಗಿದ್ದ ಲಂಕಿಣಿಯನ್ನು ಪರಾಜಯ ಗೊಳಿಸಿ ರಾವಣನ ಅಂತಃಪುರವನ್ನು ಪ್ರವೇಶಿಸಿ ಸೀತೆಯನ್ನು ಸಂದರ್ಶಿಸಿ

ಅವಳೊಡನೆ ಮಾತನಾಡಿ ಅವಳನ್ನು ಸಮಾಧಾನಪಡಿಸಿ ಬಂದ ವೀರನಿವನು. ಅಶೋಕವನದಲ್ಲಿ ಏಕಾಕಿಯಾಗಿ ನಿಂತು ರಾವಣನ ಸೇನಾಪತಿಗಳನ್ನೂ, ಮಂತ್ರಿಗಳ ಮಕ್ಕಳನ್ನೂ, ಕಿಂಕರರೆಂಬ ರಾಕ್ಷಸರನ್ನೂ, ರಾವಣನ ಮಗನಾದ ಅಕ್ಷಕುಮಾರನನ್ನೂ ಎದುರಿಸಿ ಧ್ವಂಸಮಾಡಿದನು. ಪುನಃ ಇವನು ಇಂದ್ರ ಜಿತುವು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಮುಕ್ತನಾಗಿ ರಾವಣನೊಡನೆ ಮಾತನಾಡಿ ಪ್ರಳಯಕಾಲದ ಅಗ್ನಿಯು ಭೂಮಂಡಲವನ್ನು ಸುಟ್ಟುಹಾಕು ವಂತೆ ಲಂಕೆಯನ್ನೇ ಸುಟ್ಟು ಭಸ್ಮ ಮಾಡಿದನು.

ನ ಕಾಲಸ್ಯ ನ ಶಕ್ರಸ್ಯ ನ ವಿಷ್ಣೋರ್ವಿತ್ತಪಸ್ಯ ಚ ।
ಕರ್ಮಾಣಿ ತಾನಿ ಶ್ರೂಯನ್ತೇ ಯಾನಿ ಯುದ್ಧೇ ಹನೂಮತಃ ॥8॥

ಹನುಮಂತನು ಯುದ್ಧದಲ್ಲಿ ಎಂತಹ ಪರಾಕ್ರಮವನ್ನು ತೋರಬಲ್ಲ ನೆಂದು ನಾವು ಕೇಳಿರುವೆವೋ ಅಂತಹ ಪರಾಕ್ರಮವನ್ನು ಕಾಲ –ಶಕ್ರ–ವಿಷ್ಣು –ಕುಬೇರ ಇವರೂ ಯುದ್ಧದಲ್ಲಿ ತೋರಿರುವರೆಂಬ ಸಂಗತಿಯನ್ನು ನಾವು ಕೇಳಿಲ್ಲ.

ನಾನಾದರೋ ಹನುಮಂತನ ಬಾಹುಬಲ – ಪರಾಕ್ರಮಗಳಿಂದಲೇ ಲಂಕೆ ಯನ್ನೂ, ಸೀತಾ–ಲಕ್ಷ್ಮಣರನ್ನೂ, ವಿಜಯವನ್ನೂ, ರಾಜ್ಯವನ್ನೂ, ಮಿತ್ರ ರನ್ನೂ, ಬಂಧುಗಳನ್ನೂ ಪಡೆದುಕೊಂಡೆನು. ಒಂದು ವೇಳೆ ವಾನರರಾಜನಾದ ಸುಗ್ರೀವನ ಸಖನಾದ ಹನುಮಂತನು ಸಿಕ್ಕದಿದ್ದಿದ್ದರೆ ಜಾನಕಿಯು ಎಲ್ಲಿರುವ ಳೆಂದು ತಿಳಿಯಲು ಯಾರಿಗೆ ಸಾಮರ್ಥ್ಯವಿರುತ್ತಿತ್ತು ? ವಾಲಿ –ಸುಗ್ರೀವರಿಗೆ ವಿರೋಧವುಂಟಾದಾಗ ಸುಗ್ರೀವನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಹನುಮಂತನು ದಾವಾನಲವು ವೃಕ್ಷವನ್ನು ಭಸ್ಮಮಾಡಿದಂತೆ – ವಾಲಿಯನ್ನೇಕೆ ಭಸ್ಮಮಾಡಲಿಲ್ಲ? ಆ ಸಮಯದಲ್ಲಿ ಹನುಮಂತನಿಗೆ ತನ್ನಲ್ಲಿರುವ ಬಲವು ತಿಳಿದಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದುದರಿಂದಲೇ ಹನುಮಂತನು ತನಗೆ ಇಷ್ಟನಾದ ಸುಗ್ರೀವನು ಕ್ಲೇಶವನ್ನನುಭವಿಸುತ್ತಿದ್ದರೂ ನೋಡಿ ಕೊಂಡೇ ಸುಮ್ಮನಿದ್ದು ಬಿಟ್ಟನು.

ದೇವವಂದ್ಯರೇ! ಮುನಿಶ್ರೇಷ್ಠರೇ! ನೀವು ಹನುಮಂತನ ವಿಷಯವಾಗಿ ಎಲ್ಲವನ್ನೂ ನನಗೆ ಯಥಾವತ್ತಾಗಿ ಹೇಳಿರಿ. ''

ರಾಘವನ ಯುಕ್ತಿಯುಕ್ತವಾದ ಮಾತನ್ನು ಕೇಳಿ ಮಹರ್ಷಿಗಳಾದ ಅಗಸ್ತ್ಯರು ಹನುಮಂತನ ಸಮಕ್ಷದಲ್ಲಿಯೇ ರಾಮನಿಗೆ ಹೇಳಿದರು :

''ರಘುಕುಲತಿಲಕನೇ! ರಾಘವ! ಹನುಮಂತನ ವಿಷಯದಲ್ಲಿ ನೀನು ಹೇಳಿದುದೆಲ್ಲವೂ ಸತ್ಯ. ಬಲದಲ್ಲಿ, ಗಮನದಲ್ಲಿ ಮತ್ತು ಬುದ್ಧಿಯಲ್ಲಿ ಇವನಿಗೆ ಸಮಾನರಾದವರು ಯಾರೂ ಇಲ್ಲ. ಯಾರ ಶಾಪವು ಯಾವಾಗಲೂ ವ್ಯರ್ಥವಾಗುವುದಿಲ್ಲವೋ– ಅಂತಹ ಮುನಿಶ್ರೇಷ್ಠರು ಕೊಟ್ಟ ಶಾಪದ ಫಲವಾಗಿ ಹನುಮಂತನು ಮಹಾಬಲಿಷ್ಠನೇ ಆಗಿದ್ದರೂ ಇವನಿಗೆ ತನ್ನಲ್ಲಿರುವ ಬಲದ ಅರಿವಿರಲಿಲ್ಲ.

ಮಹಾಬಲನೇ! ಬಾಲ್ಯದಲ್ಲಿಯೇ ಈ ಹನುಮಂತನು ಅದ್ಭುತವಾದ ಸಾಹಸಕಾರ್ಯಗಳನ್ನು ಮಾಡಿದ್ದನು. ಆ ಕಾರ್ಯಗಳನ್ನು ವರ್ಣಿಸಲೂ ಶಕ್ಯವಿಲ್ಲ. ಆ ದಿನಗಳಲ್ಲಿ ಇವನು ಬಾಲ್ಯಭಾವದಿಂದ ಏನೂ ತಿಳಿಯದವನಂತೆ ಇದ್ದು ಬಿಟ್ಟನು.

ರಾಘವ ! ನಿನಗೆ ಹನುಮಂತನ ಸಮಗ್ರವಾದ ಚರಿತ್ರೆಯನ್ನೂ ಕೇಳಬೇಕೆನ್ನುವ ಅಭಿಪ್ರಾಯವಿರುವುದಾದರೆ ಏಕಾಗ್ರಚಿತ್ತನಾಗಿ ನಾನು ಹೇಳುವುದನ್ನು ಕೇಳು :

ಸೂರ್ಯನು ಕೊಟ್ಟ ವರದಿಂದಾಗಿ ಯಾವ ಪರ್ವತವು ಸುವರ್ಣಮಯವಾಯಿತೋ – ಆ ಪರ್ವತವು 'ಸುಮೇರು' – ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿತು. ಆ ಪರ್ವತದಲ್ಲಿ ಇವನ ತಂದೆಯಾದ ಕೇಸರಿಯು ರಾಜ್ಯವನ್ನಾಳುತ್ತಿದ್ದನು. ಕೇಸರಿಗೆ ಇಷ್ಟಳಾದ ಮತ್ತು ವಿಖ್ಯಾತಳಾದ ಅಂಜನಾ ಎಂಬ ಪತ್ನಿಯಿದ್ದಳು. ಅವಳಲ್ಲಿ ವಾಯುದೇವನು ಶ್ರೇಷ್ಠನಾದ ಮಗನನ್ನು ಪಡೆದುಕೊಂಡನು. ಭತ್ತದ ಅಗ್ರಭಾಗದಂತೆ ಪಿಂಗಳ ವರ್ಣದಿಂದ ಪ್ರಕಾಶಿಸುತ್ತಿದ್ದ ಆ ಪುತ್ರನನ್ನು ಅಂಜನೆಯು ವಾಯುವಿನಿಂದ ಪಡೆದುಕೊಂಡಳು. ಹೀಗೆಯೇ ಇರುತ್ತಿರುವಾಗ ಅವಳೊಂದು ದಿನ ಹಣ್ಣುಗಳನ್ನು ತರಲು ಆಶ್ರಮದಿಂದ ಹೊರಟು ಗಹನವಾದ ಕಾಡಿಗೆ ಹೋಗಿದ್ದಳು. ತಾಯಿಯ ಅಗಲುವಿಕೆಯಿಂದಲೂ ಹಸಿವಿನಿಂದಲೂ ಅತ್ಯಂತ ಪೀಡಿತವಾಗಿದ್ದ ಶಿಶುವು ಜಂಬುಹುಲ್ಲಿನ ಮಧ್ಯದಲ್ಲಿದ್ದ ಕುಮಾರ ಕಾರ್ತಿ

ಕೇಯನಂತೆಯೇ ಗಟ್ಟಿಯಾಗಿ ಅಳತೊಡಗಿತು. ಆ ಸಮಯಕ್ಕೆ ಸರಿಯಾಗಿ ದಾಸವಾಳದ ಹೂವಿಗೆ ಸದೃಶನಾಗಿದ್ದ ಸೂರ್ಯದೇವನು ಉದಯಿಸುತ್ತಿದ್ದನು. ಹನುಮಂತನು ಸೂರ್ಯನನ್ನೇ ಹಣ್ಣೆಂದು ಭಾವಿಸಿ ಅದನ್ನು ಪಡೆಯುವ ಆಶೆಯಿಂದ ಸೂರ್ಯನ ಕಡೆಗೆ ಹಾರಿದನು.

ಬಾಲಾರ್ಕಾಭಿಮುಖೋ ಬಾಲೋ ಬಾಲಾರ್ಕ ಇವ ಮೂರ್ತಿಮಾನ್ ।
ಗ್ರಹೀತುಕಾಮೋ ಬಾಲಾರ್ಕಂ ಪ್ಲವತೇಽಮ್ಬರಮಧ್ಯಗಃ ॥24॥

ಮೂರ್ತಿಮಂತನಾದ ಬಾಲಸೂರ್ಯನಂತೆಯೇ ಇದ್ದ ಹನುಮಂತನು ಬಾಲಸೂರ್ಯನಿಗೆ ಅಭಿಮುಖವಾಗಿ ಬಾಲಸೂರ್ಯನನ್ನು ಹಿಡಿಯುವ ಆಶೆಯಿಂದ ಆಕಾಶದ ಮಧ್ಯದಲ್ಲಿ ಹಾರುತ್ತಾ ಹೋಗುತ್ತಿದ್ದನು. ಶೈಶವಾವಸ್ಥೆಯಲ್ಲಿಯೇ ಹನುಮಂತನು ಹೀಗೆ ಹಾರಿಹೋಗುತ್ತಿದ್ದುದನ್ನು ನೋಡಿ ದೇವ –ದಾನವ –ಯಕ್ಷರಿಗೆ ಪರಮಾಶ್ಚರ್ಯವಾಯಿತು.

'' ಯಾವ ವೇಗದಲ್ಲಿ ವಾಯುಪುತ್ರನು ಹಾರಿಹೋಗುತ್ತಿರುವನೋ ಅಂತಹ ವೇಗವು ವಾಯುವಿಗೂ ಇಲ್ಲ; ಗರುಡನಿಗೂ ಇಲ್ಲ. ಮನಸ್ಸಿಗೂ ಇಲ್ಲ. ವಾಯುವೇಗ–ಪಕ್ಷಿವೇಗ–ಮನೋವೇಗಗಳನ್ನೂ ಮೀರಿಸಿದ ವೇಗದಲ್ಲಿ ಇವನು ಆಕಾಶದಲ್ಲಿ ಹೋಗುತ್ತಿದ್ದಾನೆ. ಬಾಲ್ಯಾವಸ್ಥೆಯಲ್ಲಿಯೇ ಈ ಶಿಶುವಿಗೆ ಇಂತಹ ವೇಗವಿರುವುದಾದರೆ ಯುವಕನಾದನಂತರ ಇವನ ವೇಗವು ಎಷ್ಟಾಗಬಹುದು ?'' ಹೀಗೆ ದೇವತೆಗಳು ಯೋಚಿಸುತ್ತಿದ್ದರು.

ತನ್ನ ಮಗನು ಸೂರ್ಯನ ಕಡೆಗೆ ಹಾರಿಹೋಗುತ್ತಿರುವುದನ್ನು ಕಂಡು ವಾಯುದೇವನು ಸೂರ್ಯನ ತಾಪಕ್ಕೆ ಸಿಕ್ಕಿ ಮಗನು ಬೆಂದು ಹೋಗುವನೋ ಎಂಬ ಭಯದಿಂದ ಮಗನನ್ನು ರಕ್ಷಿಸಲು ಹಿಮಗೆಡ್ಡೆಯಂತೆ ಶೀತಲನಾಗಿ ಮಗನನ್ನನುಸರಿಸಿ ಹೋಗುತ್ತಿದ್ದನು. ಹೀಗೆ ಬಾಲಕನಾದ ಹನುಮನು ತನ್ನ ಮತ್ತು ತನ್ನ ತಂದೆಯ ಬಲದಿಂದ ಹಲವಾರು ಸಾವಿರ ಯೋಜನಗಳಷ್ಟು ದೂರ ಆಕಾಶದಲ್ಲಿ ಕ್ರಮಿಸಿ ಸೂರ್ಯದೇವನ ಸಮೀಪಕ್ಕೆ ಹೋದನು. '' ಇವನು ಇನ್ನೂ ಶಿಶು. ಗುಣ –ದೋಷಗಳನ್ನೂ ತಿಳಿದವನಲ್ಲ. ಮೇಲಾಗಿ ಇವನಲ್ಲಿ ದೇವತೆಗಳಿಗೆ ಆಗಬೇಕಾಗಿರುವ ಕಾರ್ಯಗಳೂ ಅಡಗಿವೆ.''

ಸೂರ್ಯನು ಹೀಗೆ ಯೋಚಿಸಿ ಬಾಲಕನನ್ನು ಸುಡಲಿಲ್ಲ. ಹನುಮಂತನು ಸೂರ್ಯನನ್ನು ಹಿಡಿಯಲು ಆಕಾಶಕ್ಕೆ ಹಾರಿದ ದಿನವೇ ರಾಹುವು ಸೂರ್ಯ ದೇವನನ್ನು ಕಬಳಿಸಲು ಅಪೇಕ್ಷಿಸಿದ್ದನು. ಸೂರ್ಯನ ರಥದ ಮೇಲಿದ್ದ ರಾಹುವನ್ನು ಹನುಮಂತನು ಮುಟ್ಟಿದೊಡನೆಯೇ ಚಂದ್ರಾರ್ಕಮರ್ದನನಾದ ರಾಹುವು ಭಯಗೊಂಡು ಅಲ್ಲಿಂದ ಪಲಾಯನಮಾಡಿದನು. ಒಡನೆಯೇ ರಾಹುವು ಇಂದ್ರನ ಭವನಕ್ಕೆ ಹೋಗಿ ಕೋಪದಿಂದ ಹುಬ್ಬುಗಳನ್ನು ಗಂಟಿಕ್ಕಿ ದೇವಗಣಗಳಿಂದ ಪರಿವೃತನಾಗಿದ್ದ ಇಂದ್ರನಿಗೆ ಹೇಳಿದನು :

"ಬಲ–ವೃತ್ರಾಸುರಹಂತಕನೇ! ನೀನು ಹಸಿವನ್ನು ಇಂಗಿಸಿಕೊಳ್ಳಲು ಸೂರ್ಯ –ಚಂದ್ರರಿಬ್ಬರನ್ನೂ ನನಗೆ ಒಪ್ಪಿಸಿದ್ದೆ. ಈಗ ನೀನು ಆ ಸೂರ್ಯ–ಚಂದ್ರರನ್ನೇ ಬೇರೆಯವನಿಗೆ ಒಪ್ಪಿಸಿರುವೆ. ಇದೇನಿದು ? ಹೀಗೇಕಾಯಿತು ? ನಾನು ಈ ಪರ್ವಕಾಲದಲ್ಲಿ ಸೂರ್ಯದೇವನನ್ನು ನುಂಗುವ ಅಭಿಲಾಷೆಯಿಂದ ಹೋಗಿದ್ದೆನು. ಅಷ್ಟರಲ್ಲಿಯೇ ಮತ್ತೊಬ್ಬ ರಾಹುವು ಬಂದು ಸೂರ್ಯನನ್ನು ಹಿಡಿದುಬಿಟ್ಟಿರುವನು."

ರಾಹುವಿನ ಈ ಮಾತನ್ನು ಕೇಳಿ ಇಂದ್ರನಿಗೆ ಗಾಬರಿಯಾಯಿತು. ಸುವರ್ಣಮಯವಾದ ಮಾಲೆಯನ್ನು ಧರಿಸಿ ಸಿಂಹಾಸನವನ್ನು ಬಿಟ್ಟು ಮೇಲೆದ್ದನು. ಕೈಲಾಸಪರ್ವತದಂತೆ ಉಜ್ಜ್ವಲವಾಗಿದ್ದ, ನಾಲ್ಕು ದಂತ ಗಳಿಂದ ವಿಭೂಷಿತವಾಗಿದ್ದ, ಮದೋದಕವನ್ನು ಸುರಿಸುತ್ತಿದ್ದ, ಬಗೆ–ಬಗೆಯ ಶೃಂಗಾರವಸ್ತುಗಳಿಂದ ಸಮಲಂಕೃತವಾಗಿದ್ದ, ಬಹಳ ಎತ್ತರವಾಗಿದ್ದ, ಚಿನ್ನದ ಘಂಟೆಯ ನಾದರೂಪದಲ್ಲಿ ಅಟ್ಟಹಾಸವನ್ನು ಮಾಡುತ್ತಿದ್ದ, ಗಜೇಂದ್ರನಾದ ಐರಾವತದಲ್ಲಿ ಕುಳಿತು ದೇವರಾಜನಾದ ಇಂದ್ರನು ರಾಹು ವನ್ನು ಮುಂದೆಮಾಡಿಕೊಂಡು ಹನುಮಂತನೊಡನಿದ್ದ ಸೂರ್ಯನ ಸಮೀಪಕ್ಕೆ ಹೋದನು. ಆದರೆ ರಾಹುವು ಇಂದ್ರನನ್ನು ಮಧ್ಯದಲ್ಲೇ ಬಿಟ್ಟು ವೇಗ ವಾಗಿ ಮುನ್ನಡೆದನು. ಪರ್ವತಶಿಖರಸದೃಶನಾಗಿದ್ದ ರಾಹುವು ಓಡಿಬರು ತ್ತಿರುವುದನ್ನು ಹನುಮಂತನು ನೋಡಿ ಅವನೂ ಒಂದು ಹಣ್ಣೆಂದು ಭಾವಿಸಿ ಸೂರ್ಯನನ್ನು ಬಿಟ್ಟು ಸಿಂಹಿಕಾಪುತ್ರನನ್ನು ಹಿಡಿಯಲು ಪುನಃ ಆಕಾಶಕ್ಕೆ ಹಾರಿದನು. ರಾಘವ! ತನ್ನ ಕಡೆಗೇ ಹಾರಿಕೊಂಡು ಬರುತ್ತಿದ್ದ ಹನುಮಂತ ನನ್ನು ನೋಡಿದೊಡನೆಯೇ ಮುಖಮಾತ್ರವೇ ಉಳ್ಳ ರಾಹುವು ಹಿಮ್ಮುಖ

ನಾಗಿ ಓಡಲಾರಂಭಿಸಿದನು. ಆ ಸಮಯದಲ್ಲಿ ರಾಹುವು ತನ್ನ ರಕ್ಷಕನು ಇಂದ್ರನೇ ಎಂದು ಭಾವಿಸಿ **' ಭೋ ಇನ್ದ್ರ ರಕ್ಷಸ್ವ ಮಾಂ ಭೋ ಇನ್ದ್ರ ರಕ್ಷಸ್ವ**– ಇಂದ್ರನೇ ! ರಕ್ಷಿಸು ! ಮಹೇಂದ್ರನೇ ರಕ್ಷಿಸು' ಎಂದು ಭಯದಿಂದ ಪುನಃ ಪುನಃ ಹೇಳತೊಡಗಿದನು. ರಾಹುವಿನ ಸ್ವರವನ್ನು ಆ ಮೊದಲೇ ಅರಿತಿದ್ದ ಇಂದ್ರನು **' ಮಾ ಭೈಷೀಃ ! ಅಹಮೇನಂ ನಿಷೂದಯೇ** ಹೆದರಬೇಡ, ಆ ಆಕ್ರಮಣಕಾರನನ್ನು ನಾನು ಸಂಹರಿಸುತ್ತೇನೆ '– ಎಂದು ಅಭಯದಾನಮಾಡಿದನು. ಬಳಿಕ ಹನುಮಂತನು ಐರಾವತವನ್ನು ನೋಡಿ ಅದನ್ನೂ ದೊಡ್ಡದಾದೊಂದು ಹಣ್ಣೆಂದೇ ಭಾವಿಸಿ ಅದರ ಕಡೆಗೆ ಓಡಿದನು. ಐರಾವತವನ್ನು ಹಿಡಿದುಕೊಳ್ಳುವ ಸಲುವಾಗಿ ಓಡಿಹೋಗುತ್ತಿದ್ದ ಮಾರುತಿಯ ರೂಪವು ಒಂದು ಮುಹೂರ್ತಕಾಲ ಇಂದ್ರಾಗ್ನಿಗಳಂತೆ ಪ್ರಕಾಶ ಮಾನವಾಗಿಯೂ ಮತ್ತು ಭಯಂಕರವಾಗಿಯೂ ಕಾಣುತ್ತಿದ್ದಿತು. ಬಾಲಕ ನಾದ ಹನುಮಂತನನ್ನು ನೋಡಿ ಶಚೀಪತಿಯು ಹೆಚ್ಚು ಕೋಪಗೊಳ್ಳದೇ ತನ್ನ ಕೈಯಲ್ಲಿದ್ದ ವಜ್ರಾಯುಧದಿಂದ ಹನುಮಂತನನ್ನು ಪ್ರಹರಿಸಿದನು. ಇಂದ್ರನ ವಜ್ರಾಯುಧದಿಂದ ಪ್ರಹರಿಸಲ್ಪಟ್ಟ ಹನುಮಂತನು ಒಂದು ಪರ್ವತದ ಮೇಲೆ ಬಿದ್ದುಬಿಟ್ಟನು. ಹಾಗೆ ಬಿದ್ದಾಗ ಅವನ ಎಡಭಾಗದ ಕೆನ್ನೆಯ ತಳಭಾಗವು (ದವಡೆಯು) ಮುರಿದುಹೋಯಿತು. ವಜ್ರದ ಪ್ರಹಾರದಿಂದ ವ್ಯಾಕುಲನಾಗಿ ಹನುಮಂತನು ಕೆಳಗೆ ಬೀಳಲು ತಂದೆಯಾದ ವಾಯುದೇವ ನಿಗೆ ಇಂದ್ರನ ಮೇಲೆ ಕೋಪವುಂಟಾಯಿತು. ಅದರಿಂದ ಪ್ರಜೆಗಳಿಗೆ ಹಿಂಸೆ ಯುಂಟಾಯಿತು. ಸಮರ್ಥನಾದ ಮಾರುತನು ಸಮಸ್ತ ಪ್ರಾಣಿಗಳ ಹೃದಯ ಗಳಲ್ಲಿದ್ದರೂ ಎಲ್ಲದರಿಂದಲೂ ತನ್ನ ಸ್ವರೂಪಗಳನ್ನು ಹಿಂತೆಗೆದುಕೊಂಡು ಮಗನಾದ ಹನುಮಂತನನ್ನೆತ್ತಿಕೊಂಡು ಪರ್ವತದ ಗುಹೆಯೊಂದರಲ್ಲಿ ಅಡಗಿ ಕೊಂಡನು. ಇಂದ್ರನು ಮಳೆಯನ್ನು ತಡೆದುಬಿಡುವಂತೆ ವಾಯುವು ಪ್ರಾಣಿ ಗಳ ಮಲ–ಮೂತ್ರವಿಸರ್ಜನೆಗಳನ್ನು ತಡೆದುಬಿಟ್ಟನು. ಎಲ್ಲ ಪ್ರಾಣಿಗಳ ಶ್ವಾಸ–ನಿಃಶ್ವಾಸಗಳನ್ನೂ ಅನುರೋಧಿಸಿ ಪ್ರಾಣಿಗಳಿಗೆ ಬಹಳವಾದ ಪೀಡೆ ಯನ್ನುಂಟುಮಾಡಿದನು. ವಾಯುವಿನ ಪ್ರಕೋಪದಿಂದ ಸಮಸ್ತ ಪ್ರಾಣಿಗಳ ಉಸಿರಾಟವೇ ನಿಂತುಹೋಯಿತು. ಸಂಧಿಬಂಧಗಳೆಲ್ಲವೂ ಸಡಿಲಗೊಳ್ಳತೊಡ ಗಿದುವು. ಪ್ರಾಣಿಗಳ ಶರೀರಗಳೆಲ್ಲವೂ ವಾಯುಸಂಚಾರವಿಲ್ಲದೆ ಕಟ್ಟಿಗೆ

ಗಳಂತಾದುವು. ಮೂರು ಲೋಕಗಳಲ್ಲಿ ಎಲ್ಲಿಯೂ ವೇದಗಳ ಅಧ್ಯಯನ –ಅಧ್ಯಾಪನಗಳೇ ನಡೆಯದಂತಾಯಿತು. ಯಜ್ಞಗಳೂ ನಡೆಯುತ್ತಿರಲಿಲ್ಲ. ಸಮಸ್ತವಾದ ಧರ್ಮಕರ್ಮಗಳೂ ನಿಂತುಹೋದುವು. ವಾಯುವಿನ ಪ್ರಕೋಪದಿಂದಾಗಿ ಮೂರು ಲೋಕಗಳೂ ನರಕದಲ್ಲಿರುವಂತೆ ಭಾಸ ವಾಯಿತು. ಬಳಿಕ ಗಂಧರ್ವ – ದೇವಾಸುರ – ಮನುಷ್ಯರೇ ಮೊದಲಾದವರು ವ್ಯಥಿತರಾಗಿ ಸುಖವನ್ನು ಪಡೆಯುವ ಸಲುವಾಗಿ ಪ್ರಜಾಪತಿಯ ಬಳಿಗೆ ಹೋದರು. ಆ ಸಮಯದಲ್ಲಿ ದೇವತೆಗಳ ಹೊಟ್ಟೆಗಳು ಮಹೋದರ ರೋಗದಿಂದ ಉಬ್ಬಿರುವ ಹೊಟ್ಟೆಗಳಂತೆ ಕಾಣುತ್ತಿದ್ದುವು. ಅವರೆಲ್ಲರೂ ಕೈಮುಗಿದು ಕೊಂಡು ಬ್ರಹ್ಮನಿಗೆ ಹೇಳಿದರು :

''ಪೂಜ್ಯನೇ ! ಪ್ರಭುವೇ ! ನೀನು ನಾಲ್ಕು ಪ್ರಕಾರವಾದ ಪ್ರಾಣಿ ಗಳನ್ನು ಸೃಷ್ಟಿಸಿರುವೆ. ನೀನು ನಮ್ಮೆಲ್ಲರ ಆಯುಸ್ಸಿಗೆ ಅಧಿಪತಿಯಾಗಿ ವಾಯುದೇವನನ್ನು ದಯಪಾಲಿಸಿರುವೆ. ವಾಯುದೇವನು ನಮ್ಮೆಲ್ಲರ ಪ್ರಾಣಗಳಿಗೂ ಈಶ್ವರನಾಗಿದ್ದರೂ ಅಂತಃಪುರದ ಸ್ತ್ರೀಯರನ್ನು ನಿರ್ಬಂಧಿ ಸುವಂತೆ ನಮ್ಮ ಶರೀರದೊಳಗಿರುವ ತನ್ನ ಸಂಚಾರವನ್ನು ಸ್ತಬ್ಧಗೊಳಿಸಿಬಿಟ್ಟಿದ್ದಾನೆ. ಈ ಕಾರಣದಿಂದ ಅವನೀಗ ನಮ್ಮೆಲ್ಲರಿಗೂ ದುಃಖವನ್ನುಂಟುಮಾಡುತ್ತಿ ದ್ದಾನೆ. ವಾಯುವಿನಿಂದ ಪೀಡಿಸಲ್ಪಡುತ್ತಿರುವ ನಾವೀಗ ನಿನಗೆ ಶರಣಾಗತ ರಾಗಿದ್ದೇವೆ. ದುಃಖಹರನಾದ ಪ್ರಜಾಪತಿಯೇ ! ವಾಯುವಿನ ನಿರೋಧ ದಿಂದ ಒದಗಿರುವ ನಮ್ಮ ದುಃಖವನ್ನು ಹೋಗಲಾಡಿಸುವ ಕೃಪೆಮಾಡು.''

ಪ್ರಜೆಗಳ ಪ್ರಾರ್ಥನೆಯನ್ನು ಕೇಳಿ ಪ್ರಜಾನಾಥನಾದ ಪ್ರಜಾಪತಿಯು 'ಹೀಗಾಗಲು ಕಾರಣವಿದೆ' – ಎಂದೆನ್ನುತ್ತಾ –'' ಯಾವ ಕಾರಣದಿಂದ ವಾಯು ದೇವನು ಕೋಪಗೊಂಡಿದ್ದಾನೆ ಮತ್ತು ಪ್ರಾಣಿಗಳು ಉಸಿರಾಡುವುದನ್ನೇ ನಿರೋಧಿಸಿಬಿಟ್ಟಿದ್ದಾನೆ – ಎಂಬುದನ್ನು ನೀವೆಲ್ಲರೂ ಕೇಳಿರಿ. ಇದನ್ನು ಕೇಳುವುದು ಯೋಗ್ಯವೂ ಉಚಿತವೂ ಆಗಿದೆ.

ದೇವರಾಜನಾದ ಇಂದ್ರನು ರಾಹುವಿನ ಮಾತನ್ನು ಕೇಳಿ ವಾಯು ಪುತ್ರನನ್ನು ವಜ್ರಾಯುಧದಿಂದ ಪ್ರಹರಿಸಿದ್ದಾನೆ. ಅದರಿಂದ ವಾಯುವು ಕುಪಿತನಾಗಿದ್ದಾನೆ.

ಅಶರೀರಃ ಶರೀರೇಷು ವಾಯುಶ್ಚರತಿ ಪಾಲಯನ್ ।
ಶರೀರಂ ಹಿ ವಿನಾ ವಾಯುಂ ಸಮತಾಂ ಯಾತಿ ದಾರುಭಿಃ ॥ 60॥

ಅಶರೀರವಾದ ವಾಯುದೇವನು ಸಮಸ್ತಪ್ರಾಣಿಗಳ ಶರೀರಗಳಲ್ಲಿಯೂ ಆ ಶರೀರಗಳನ್ನು ರಕ್ಷಣೆಮಾಡುತ್ತಾ ಸಂಚರಿಸುತ್ತಿರುತ್ತಾನೆ. ವಾಯುವಿನ ಸಂಚಾರವಿಲ್ಲದಿದ್ದರೆ ಪ್ರಾಣಿಗಳ ಶರೀರಗಳು ಕಟ್ಟಿಗೆಗಳಿಗೆ ಸಮಾನವಾಗುತ್ತವೆ.

ವಾಯುಃ ಪ್ರಾಣಃ ಸುಖಂ ವಾಯುರ್ವಾಯುಃ
ಸರ್ವಮಿದಂ ಜಗತ್ ।
ವಾಯುನಾ ಸಂಪರಿತ್ಯಕ್ತಂ ನ ಸುಖಂ ವಿನ್ದತೇ ಜಗತ್ ॥61॥

ವಾಯುವೇ ಸಮಸ್ತರಿಗೂ ಪ್ರಾಣಸ್ವರೂಪನು. ವಾಯುವೇ ಸುಖಸ್ವರೂಪನು. ವಾಯುವೇ ಈ ಸಂಪೂರ್ಣ ಜಗತ್ತೂ ಆಗಿದೆ. ಜಗತ್ತು ವಾಯುಮಯವಾಗಿದೆ. ವಾಯುವಿನಿಂದ ತೊರೆಯಲ್ಪಟ್ಟರೆ ಈ ಜಗತ್ತು ಸುಖವನ್ನು ಹೊಂದುವುದಿಲ್ಲ.

ಅದ್ಯೈವ ಚ ಪರಿತ್ಯಕ್ತಂ ವಾಯುನಾ ಜಗದಾಯುಷಾ ।
ಅದ್ಯೈವ ತೇ ನಿರುಚ್ಛ್ವಾಸಾಃ ಕಾಷ್ಠಕುಡ್ಯೋಪಮಾಃ ಸ್ಥಿತಾಃ ॥62॥

ವಾಯುವೇ ಜಗತ್ತಿಗೆ ಆಯುಃಸ್ವರೂಪನಾಗಿದ್ದಾನೆ. ಇಂದು ತಾನೇ ಅವನು ಪ್ರಪಂಚದ ಪ್ರಾಣಿಗಳನ್ನು ಪರಿತ್ಯಜಿಸಿದ್ದಾನೆ. ಇದರ ಪರಿಣಾಮ ವಾಗಿ ಎಲ್ಲರೂ ಪ್ರಾಣಶೂನ್ಯರಾಗಿ ಕಟ್ಟಿಗೆ ಅಥವಾ ಗೋಡೆಗಳಂತೆ ಆಗಿ ಬಿಟ್ಟಿದ್ದಾರೆ.

ಅದಿತಿಯ ಮಕ್ಕಳೇ ! ನಮ್ಮೆಲ್ಲರಿಗೂ ಪೀಡೆಯನ್ನುಂಟುಮಾಡಿರುವ ವಾಯುದೇವನು ಇರುವಲ್ಲಿಗೆ ಈಗಲೇ ಹೋಗೋಣ. ಅವನನ್ನು ಪ್ರಸನ್ನಗೊಳಿಸದೆ ನಾವೆಲ್ಲರೂ ವಿನಾಶದ ಹಾದಿಯನ್ನು ಹಿಡಿಯುವುದು ಬೇಡ. ಅವನನ್ನು ಪ್ರಸನ್ನಗೊಳಿಸಿ ವಿನಾಶದಿಂದ ಪಾರಾಗೋಣ. ''

ಪ್ರಜಾಪತಿಯು ಹೀಗೆ ಹೇಳಿ ದೇವ–ಗಂಧರ್ವ–ನಾಗ–ಗುಹ್ಯಕರೊಡ

ನೆಯೂ ಪ್ರಜೆಗಳೊಡನೆಯೂ ಕೂಡಿಕೊಂಡು, ವಾಯುದೇವನು ಇಂದ್ರನಿಂದ ಪ್ರಹರಿಸಲ್ಪಟ್ಟ ತನ್ನ ಪುತ್ರನೊಡನಿರುವ ಗುಹೆಗೆ ಪ್ರಯಾಣಮಾಡಿದನು.

ಬಳಿಕ ಚತುರ್ಮುಖನು ದೇವ–ಗಂಧರ್ವ – ಯಕ್ಷ–ಮಹರ್ಷಿಗಳೊಡನೆ ವಾಯುದೇವನಿದ್ದ ಗುಹೆಗೆ ಹೋಗಿ ವಾಯುದೇವನ ತೊಡೆಯ ಮೇಲೆ ಮಲಗಿದ್ದ ಶಿಶುವನ್ನು ನೋಡಿದನು. ಆ ಶಿಶುವಿನ ಶರೀರಕಾಂತಿಯು ಸೂರ್ಯಾಗ್ನಿ – ಸುವರ್ಣಗಳ ಪ್ರಕಾಶಕ್ಕೆ ಸಮಾನವಾಗಿ ಪ್ರಕಾಶಿಸುತ್ತಿದ್ದಿತು. ಆ ಶಿಶುವಿಗಾದ ಅವಸ್ಥೆಯನ್ನು ಕಂಡು ಬ್ರಹ್ಮನಿಗೆ ಅಪಾರವಾದ ಕರುಣೆಯುಂಟಾಯಿತು.

35ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **36ನೆಯ ಸರ್ಗ**

ಬ್ರಹ್ಮದೇವನಿಂದ ಜೀವಿತಗೊಳಿಸಲ್ಪಟ್ಟ ಹನುಮಂತನಿಗೆ ದೇವತೆಗಳು ನಾನಾವಿಧವಾದ ವರಗಳನ್ನು ಅನುಗ್ರಹಿಸಿಕೊಟ್ಟುದು: ವಾಯುದೇವನು ಪುತ್ರನನ್ನು ಕರೆದುಕೊಂಡು ಅಂಜನಾದೇವಿಯ ಬಳಿಗೆ ಹೋದುದು : ಋಷಿಗಳ ಶಾಪದಂತೆ ಹನುಮಂತನಿಗೆ ತನ್ನ ಬಲದ ವಿಸ್ಮೃತಿ : ಶ್ರೀರಾಮನು ಅಗಸ್ತ್ಯರೇ ಮೊದಲಾದ ಮಹರ್ಷಿಗಳಿಗೆ ತಾನು ಮಾಡಲಿರುವ ಯಜ್ಞಕ್ಕೆ ಬರಲು ಆಹ್ವಾನಿಸಿದುದು : ಅಗಸ್ತ್ಯಾದಿ ಮುನಿಗಳ ಪ್ರಯಾಣ

ಅಗಸ್ತ್ಯರು ಮುಂದುವರಿದು ಹೇಳುತ್ತಾರೆ :

ತತಃ ಪಿತಾಮಹಂ ದೃಷ್ಟ್ವಾ ವಾಯುಃ ಪುತ್ರವಧಾರ್ದಿತಃ ।
ಶಿಶುಕಂ ತಂ ಸಮಾದಾಯ ಉತ್ತಸ್ಥೌ ಧಾತುರಗ್ರತಃ ॥1॥

''ರಾಘವ! ಪುತ್ರನು ವಜ್ರಾಯುಧ ಪ್ರಹಾರದಿಂದ ಮರಣಹೊಂದಿರಲು ವಾಯುದೇವನಿಗೆ ಬಹಳ ದುಃಖವಾಗಿದ್ದಿತು. ಅವನು ಮಗುವನ್ನೆತ್ತಿಕೊಂಡು ಬ್ರಹ್ಮನ ಮುಂದೆ ನಿಂತನು.

ಕಿವಿಗಳಲ್ಲಿ ಅಳ್ಳಾಡುವ ಕುಂಡಲಗಳಿಂದಲೂ, ತಲೆಯ ಮೇಲಿನ ಕಿರೀಟದಿಂದಲೂ, ಕತ್ತಿನಲ್ಲಿದ್ದ ಚಿನ್ನದ ಹಾರದಿಂದಲೂ, ಸ್ವರ್ಣಾಭರಣಗಳಿಂದಲೂ

ವಿಭೂಷಿತನಾಗಿ ವಾಯುದೇವನು ಬ್ರಹ್ಮನಿಗೆ ಮೂರು ಬಾರಿ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು. ವೇದವಿದನಾದ ಬ್ರಹ್ಮನು ಜೋತಾಡುತ್ತಿದ್ದ ಆಭರಣ ಗಳಿಂದ ಸುಶೋಭಿತವಾಗಿದ್ದ ಕೈಗಳಿಂದ ವಾಯುದೇವನನ್ನು ಹಿಡಿದೆಬ್ಬಿಸಿ ಶಿಶುವನ್ನು ಕೈಯಿಂದ ಮುಟ್ಟಿದನು. ಬ್ರಹ್ಮನು ಲೀಲೆಯಿಂದ ಮುಟ್ಟಿದೊಡ ನೆಯೇ ನೀರಿನಿಂದ ಸಿಂಪಡಿಸಲ್ಪಟ್ಟ ಸಸ್ಯವು ಚಿಗುರುವಂತೆ ವಾಯುದೇವನ ಆ ಶಿಶುವು ಜೀವಂತವಾಯಿತು. ಶಿಶುವು ಜೀವಂತವಾದುದನ್ನು ನೋಡಿ ಸಮಸ್ತ ಪ್ರಾಣಿಗಳ ಪ್ರಾಣಸ್ವರೂಪನಾದ, ಗಂಧವಹನಾದ ವಾಯುವು ಪರಮ ಸಂತುಷ್ಟನಾಗಿ ಹಿಂದಿನಂತೆಯೇ ಸಮಸ್ತಪ್ರಾಣಿಗಳಲ್ಲಿಯೂ ಸಂಚರಿಸತೊಡಗಿದನು. ಹಿಮಗಾಳಿಯ ಹೊಡೆತದಿಂದ ಮುಕ್ತವಾದ ಅರಳಿದ ತಾವರೆಗಳಿರುವ ಸರೋವರದಂತೆ ವಾಯುವಿನ ಅವರೋಧದಿಂದ ಮುಕ್ತವಾದ ಪ್ರಾಣಿಗಳು ಸಂತಸಗೊಂಡುವು.

ಅನಂತರ ಮೂರು ಜೋಡಿಗಳಿಂದ ★ ಸಂಪನ್ನನಾದ, ತ್ರಿಮೂರ್ತಿ ಸ್ವರೂಪನಾದ, ತ್ರಿಲೋಕವಾಸಿಯಾದ, ಮೂರು ದಶೆಗಳಿಂದ ದೇವತೆಗಳಿಂದ ಅರ್ಚಿಸಲ್ಪಡುವ ಬ್ರಹ್ಮನು ವಾಯುವಿಗೆ ಪ್ರಿಯವನ್ನುಂಟುಮಾಡುವ ಸಲು ವಾಗಿ ದೇವತೆಗಳಿಗೆ ಹೇಳಿದನು :

'' ಇಂದ್ರಾಗ್ನಿ –ವರುಣ– ಮಹಾದೇವ –ಕುಬೇರಾದಿದೇವತೆಗಳೇ ! ನಿಮಗೆ ಎಲ್ಲ ವಿಷಯಗಳೂ ತಿಳಿದಿದ್ದರೂ ನಿಮ್ಮೆಲ್ಲರ ಹಿತಕ್ಕಾಗಿ ಕೆಲವು ಮಾತು ಗಳನ್ನಾಡುತ್ತೇನೆ. ಎಲ್ಲರೂ ಏಕಾಗ್ರತೆಯಿಂದ ಕೇಳಿರಿ :

ಈ ಬಾಲಕನಿಂದ ಮುಂದೆ ನಿಮಗೆ ಆಗಬೇಕಾಗಿರುವ ಕಾರ್ಯವು ಬಹಳವಾಗಿದೆ. ಆದುದರಿಂದ ವಾಯುದೇವನ ಪ್ರಸನ್ನತೆಗಾಗಿ ಈ ಶಿಶುವಿಗೆ ನೀವೆಲ್ಲರೂ ವರಗಳನ್ನು ನೀಡಿರಿ.''

ಬ್ರಹ್ಮನ ಆ ಮಾತನ್ನು ಕೇಳಿ ಸುಂದರವಾದ ಮುಖದಿಂದ ಕೂಡಿದ್ದ

★ ತ್ರಿಯುಗ್ಮಗಳು (ಮೂರು ಜೋಡಿಗಳು) –ಆರು ಪ್ರಕಾರವಾದ ಐಶ್ವರ್ಯಗಳು : ಐಶ್ವರ್ಯ–ಧರ್ಮ, ಯಶಸ್ಸು- ಶ್ರೀ, ಜ್ಞಾನ ಮತ್ತು ವೈರಾಗ್ಯ, ತ್ರಿಕಕುತ್ –ತ್ರಿಮೂರ್ತಿಗಳು: ಬ್ರಹ್ಮಾ-ವಿಷ್ಣು- ಮಹೇಶ್ವರರು, ತ್ರಿಧಾಮಾ –ಸ್ವರ್ಗ– ಮರ್ತ್ಯ- ಪಾತಾಳಲೋಕಗಳು. ತ್ರಿದಶಃ – ಮೂರು ದಶೆಯುಳ್ಳವರು. ಬಾಲ್ಯ –ಪೌಗಂಡ ಮತ್ತು ಕೈಶೋರಗಳೆಂಬ ಮೂರು ಅವಸ್ಥೆಯುಳ್ಳವರು.

ಸಹಸ್ರನೇತ್ರನಾದ ಇಂದ್ರನು ಪ್ರೀತಿಯುಕ್ತನಾಗಿ ಹನುಮಂತನ ಕೊರಳಿಗೆ ತನ್ನ ಕತ್ತಿನಲ್ಲಿದ್ದ ಕಮಲದ ಮಾಲೆಯನ್ನು ಹಾಕುತ್ತಾ ಹೇಳಿದನು :

ಮತ್ಕರೋತ್ಸೃಷ್ಟವಜ್ರೇಣ ಹನುರಸ್ಯ ಯಥಾ ಹತಃ ।
ನಾಮ್ನಾ ವೈ ಕಪಿಶಾರ್ದೂಲೋ ಭವಿತಾ ಹನುಮಾನಿತಿ ॥11॥

'' ನಾನು ಪ್ರಯೋಗಿಸಿದ ವಜ್ರಾಯುಧದಿಂದ ಇವನ ದವಡೆಯು (ಹನುವು) ಮುರಿದ ಕಾರಣ ಕಪಿಶ್ರೇಷ್ಠನಾದ ಈ ಬಾಲಕನ ಹೆಸರು 'ಹನುಮಾನ್' ಎಂದೇ ಆಗುತ್ತದೆ. ಇವನಿಗೆ ನಾನು ಅದ್ಭುತವಾದ ಮತ್ತು ಶ್ರೇಷ್ಠವಾದ ಮತ್ತೊಂದು ವರವನ್ನೂ ಕೊಡುವೆನು.

ಇತಃ ಪ್ರಭೃತಿ ವಜ್ರಸ್ಯ ಮಮಾವಧ್ಯೋ ಭವಿಷ್ಯತಿ ॥12॥

ಇನ್ನು ಮುಂದೆ ನನ್ನ ವಜ್ರಾಯುಧಕ್ಕೂ ಇವನನ್ನು ವಧಿಸಲು ಸಾಧ್ಯವಿಲ್ಲ.''

ಇಂದ್ರನು ಹೀಗೆ ಹೇಳಿದ ಬಳಿಕ ಅಂಧಕಾರನಾಶಕನಾದ ಸೂರ್ಯನು ಹೇಳಿದನು :

ತೇಜಸೋಽಸ್ಯ ಮದೀಯಸ್ಯ ದದಾಮಿ ಶತಿಕಾಂ ಕಲಾಮ್ ॥13॥

'' ನನ್ನ ತೇಜಸ್ಸಿನ ನೂರನೆಯ ಒಂದು ಭಾಗವನ್ನು ನಾನಿವನಿಗೆ ಕೊಡುವೆನು.

ಯದಾ ಚ ಶಾಸ್ತ್ರಾಣ್ಯಧ್ಯೇತುಂ ಶಕ್ತಿರಸ್ಯ ಭವಿಷ್ಯತಿ ।
ತದಾಸ್ಯ ಶಾಸ್ತ್ರಂ ದಾಸ್ಯಾಮಿ ಯೇನ ವಾಗ್ಮೀ ಭವಿಷ್ಯತಿ ।
ನ ಚಾಸ್ಯ ಭವಿತಾ ಕಶ್ಚಿತ್ಸದೃಶಃ ಶಾಸ್ತ್ರದರ್ಶನೇ ॥14॥

ಇಷ್ಟಲ್ಲದೇ ಶಾಸ್ತ್ರಗಳನ್ನು ಅಧ್ಯಯನ ಮಾಡುವ ಸಾಮರ್ಥ್ಯವು ಬಂದಾಗ ಇವನಿಗೆ ಶಾಸ್ತ್ರಜ್ಞಾನವನ್ನೂ ಕೊಡುತ್ತೇನೆ. ಅದರಿಂದ ಅವನು ಮಹಾ ವಾಗ್ಮಿಯಾಗುತ್ತಾನೆ. ಶಾಸ್ತ್ರಜ್ಞಾನದಲ್ಲಿ ಇವನಿಗೆ ಸಾಟಿಯಾಗುವವನು ಯಾವನೂ ಇರುವುದಿಲ್ಲ.''

ಅನಂತರ ವರುಣನೂ ಹನುಮಂತನಿಗೆ ವರವನ್ನಿತ್ತನು.

........ನಾಸ್ಯ ಮೃತ್ಯುರ್ಭವಿಷ್ಯತಿ ।
ವರ್ಷಾಯುತಶತೇನಾಪಿ ಮತ್ಪಾಶಾದುದಕಾದಪಿ ॥15॥

'' ಹತ್ತು ಲಕ್ಷ ವರ್ಷಗಳ ಆಯುಷ್ಯವು ಕಳೆದರೂ ಇವನಿಗೆ ನನ್ನ ಪಾಶದಿಂದಾಗಲೀ ಮತ್ತು ನೀರಿನಿಂದಾಗಲೀ ಮೃತ್ಯುಭಯವಿರುವುದಿಲ್ಲ.''

ಅನಂತರ ಯಮನೂ ಹನುಮಂತನಿಗೆ ಯಮದಂಡದಿಂದ ಅವಧ್ಯತ್ವವನ್ನೂ ಮತ್ತು ನೀರೋಗದೃಢಕಾಯತ್ವವನ್ನೂ ದಯಪಾಲಿಸಿದನು. ಬಳಿಕ ಪಿಂಗಲವರ್ಣದ ಒಂದು ಕಣ್ಣನ್ನು ಹೊಂದಿದ್ದ ಕುಬೇರನು ಹೇಳಿದನು:

ವರಂ ದದಾಮಿ ಸಂತುಷ್ಟ ಅವಿಷಾದಂ ಚ ಸಂಯುಗೇ।
ಗದೇಯಂ ಮಾಮಿಕಾ ನೈನಂ ಸಂಯುಗೇಷು ವಧಿಷ್ಯತಿ ॥16॥

''ಸಂತುಷ್ಟನಾದ ನಾನು ಇವನಿಗೆ ಯುದ್ಧದಲ್ಲಿ ವಿಷಣ್ಣನಾಗದಿರುವಂತೆ ವರವನ್ನು ಕೊಡುತ್ತೇನೆ. ಯುದ್ಧಗಳಲ್ಲಿ ನನ್ನ ಈ ಗದೆಯೂ ವಾಯುಪುತ್ರನನ್ನು ಸಂಹರಿಸಲಾರದು.''

ಬಳಿಕ ಶಂಕರನು ಅಮೋಘವಾದ ಮತ್ತು ಶ್ರೇಷ್ಠವಾದ ವರವನ್ನು ಮಾರುತಿಗೆ ಅನುಗ್ರಹಿಸುತ್ತಾ ಹೇಳಿದನು :

ಮತ್ತೋ ಮದಾಯುಧಾನಾಂ ಚ ಅವಧ್ಯೋಽಯಂ ಭವಿಷ್ಯತಿ ॥

''ನನ್ನಿಂದಾಗಲೀ ನನ್ನ ಆಯುಧಗಳಿಂದಾಗಲೀ ಇವನನ್ನು ವಧಿಸಲು ಶಕ್ಯವಾಗುವುದಿಲ್ಲ.''

ಶಂಕರನೂ ಇಂತಹ ಅಮೋಘವಾದ ವರವನ್ನು ದಯಪಾಲಿಸಿದನಂತರ ಮಹಾಮತಿಯಾದ ಶಿಲ್ಪಿಶ್ರೇಷ್ಠನಾದ ವಿಶ್ವಕರ್ಮನು ಬಾಲಸೂರ್ಯನಂತಿದ್ದ ಶಿಶುವನ್ನು ನೋಡಿ ವರವನ್ನು ದಯಪಾಲಿಸುತ್ತಾ ಹೇಳಿದನು :

ಮತ್ಕೃತಾನಿ ಚ ಶಸ್ತ್ರಾಣಿ ಯಾನಿ ದಿವ್ಯಾನಿ ತಾನಿ ಚ।
ತೈರವಧ್ಯತ್ವಮಾಪನ್ನಶ್ಚಿರಜೀವೀ ಭವಿಷ್ಯತಿ ॥20॥

'' ನಾನು ನಿರ್ಮಿಸಿರುವ ದಿವ್ಯಾಸ್ತ್ರಗಳಿಂದ ಇವನು ಅವಧ್ಯನಾಗಿ ಚಿರಂಜೀವಿಯಾಗಿರುತ್ತಾನೆ.''

ಕಡೆಯಲ್ಲಿ ಬ್ರಹ್ಮನೂ ಬಾಲಕನನ್ನು ನೋಡಿ ಹೇಳಿದನು :

'' ಈ ಬಾಲಕನು ದೀರ್ಘಾಯುಷ್ಮಂತನೂ ಮಹಾತ್ಮನೂ ಆಗುವನು. ಸಮಸ್ತವಾದ ಬ್ರಹ್ಮದಂಡಗಳಿಂದಲೂ ಇವನು ಅವಧ್ಯನಾಗುತ್ತಾನೆ.''

ಹೀಗೆ ಎಲ್ಲ ದೇವತೆಗಳ ವರದಿಂದಲೂ ಸಮಲಂಕೃತನಾದ ವಾಯುಪುತ್ರನನ್ನು ನೋಡಿ ಜಗತ್ತಿಗೇ ಗುರುವಾದ ಬ್ರಹ್ಮನು ಅತ್ಯಂತಪ್ರಸನ್ನನಾಗಿ ವಾಯುದೇವನಿಗೆ ಹೇಳಿದನು :

ಅಮಿತ್ರಾಣಾಂ ಭಯಕರೋ ಮಿತ್ರಾಣಾಮಭಯಂಕರಃ ।
ಅಜೇಯೋ ಭವಿತಾ ಪುತ್ರಸ್ತವ ಮಾರುತ ಮಾರುತಿಃ ॥23॥

''ವಾಯುದೇವನೇ! ನಿನ್ನ ಮಗನು ಶತ್ರುಗಳಿಗೆ ಭಯಂಕರನೂ ಮಿತ್ರರಿಗೆ ಅಭಯಂಕರನೂ ಆಗುತ್ತಾನೆ. ಯುದ್ಧದಲ್ಲಿ ಇವನು ಅಜೇಯನಾಗುತ್ತಾನೆ. ಯಾರೂ ಇವನನ್ನು ಜಯಿಸಲಾರರು.

ಕಾಮರೂಪಃ ಕಾಮಚಾರೀ ಕಾಮಗಃ ಪ್ಲವತಾಂ ವರಃ ।
ಭವತ್ಯವ್ಯಾಹತಗತಿಃ ಕೀರ್ತಿಮಾಂಶ್ಚ ಭವಿಷ್ಯತಿ ॥24॥

ಇವನು ಬೇಕು–ಬೇಕಾದ ರೂಪಗಳನ್ನು ಧರಿಸಬಲ್ಲವನೂ, ಮನ ಬಂದಲ್ಲಿಗೆ ಯಾವ ವಿಧವಾದ ತಡೆಯೂ ಇಲ್ಲದೆ ಹೋಗಲು ಸಮರ್ಥನೂ ಆಗುವನು. ಕಪಿಗಳಿಗೆಲ್ಲಾ ಶ್ರೇಷ್ಠನಾಗುತ್ತಾನೆ. ಇವನ ಗಮನವನ್ನು ತಡೆಯಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಇವನು ಕೀರ್ತಿವಂತನೂ ಆಗುತ್ತಾನೆ.

ರಾವಣನ ವಿನಾಶಕ್ಕೆ ಅನುಕೂಲವಾಗುವಂತಹ, ರಾಮನಿಗೆ ಪ್ರೀತಿಯಾಗುವಂತಹ ಹಲವಾರು ರೋಮಾಂಚನವನ್ನುಂಟುಮಾಡುವ ಕಾರ್ಯಗಳನ್ನು ಯುದ್ಧದಲ್ಲಿವನು ಮಾಡುತ್ತಾನೆ.''

ಹೀಗೆ ಹನುಮಂತನಿಗೆ ಎಲ್ಲ ದೇವತೆಗಳೂ ವರಗಳನ್ನಿತ್ತು ವಾಯುದೇವನ ಅನುಮತಿಯನ್ನು ಪಡೆದು ತಾವು ಎಲ್ಲಿಂದ ಬಂದಿದ್ದರೋ ಆಯಾ ಸ್ಥಳಗಳಿಗೆ ಬ್ರಹ್ಮನನ್ನು ಮುಂದುಮಾಡಿಕೊಂಡು ಹೊರಟುಹೋದರು. ಬಳಿಕ ಗಂಧವಹನಾದ ವಾಯುವೂ ಮಗನನ್ನು ಕರೆದುಕೊಂಡು ಅಂಜನಾದೇವಿಯ ಮನೆಗೆ ಬಂದು ದೇವತೆಗಳು ಶಿಶುವಿಗಿತ್ತ ವರದ ವಿಷಯವನ್ನು ಅವಳಿಗೆ ತಿಳಿಸಿ ಹೊರಟುಹೋದನು.

ರಾಘವ! ಹೀಗೆ ಹನುಮಂತನು ಹಲವಾರು ವರಗಳನ್ನು ದೇವತೆಗಳಿಂದ ಪಡೆದು ಅವುಗಳ ಶಕ್ತಿಯಿಂದ ಸಂಪನ್ನನಾಗಿ ತನ್ನ ಆತ್ಮ

ನಲ್ಲಿದ್ದ ಶಕ್ತಿಯ ವೇಗದಿಂದ ಪೂರ್ಣವಾಗಿ ತುಂಬಿರುವ ಮಹಾಸಾಗರ ದಂತೆಯೇ ಪ್ರಕಾಶಿಸಿದನು.

ಹೀಗೆ ಅನುಪಮವಾದ ಶಕ್ತಿಯಿಂದ ಪೂರ್ಣನಾಗಿದ್ದ ಇವನು ಯಾವ ವಿಧವಾದ ಭಯವೂ ಇಲ್ಲದೆ ಆಶ್ರಮದಲ್ಲಿರುತ್ತಿದ್ದ ಮಹರ್ಷಿಗಳಿಗೆ ಉಪದ್ರವ ಕೊಡುತ್ತಿದ್ದನು. ಶಾಂತಚಿತ್ತರಾದ ಮಹಾತ್ಮರಾದ ಮಹರ್ಷಿಗಳು ಯಜ್ಞಕಾರ್ಯಕ್ಕೆ ಉಪಯೋಗಿಸುತ್ತಿದ್ದ ಭಾಂಡಗಳನ್ನು ಒಡೆದುಹಾಕು ತ್ತಿದ್ದನು. ಅಗ್ನಿಹೋತ್ರಕ್ಕೆ ಸಾಧನಭೂತವಾದ ಸ್ರುಕ್ –ಸ್ರುವಗಳನ್ನು ಬಿಸುಡುತ್ತಿದ್ದನು. ಆಶ್ರಮಗಳಲ್ಲಿ ರಾಶಿ–ರಾಶಿಯಾಗಿರುತ್ತಿದ್ದ ನಾರುಮಡಿ ಗಳನ್ನು ಹರಿದುಹಾಕುತ್ತಿದ್ದನು. ಹೀಗೆ ಮಹಾಬಲಿಷ್ಠನಾಗಿದ್ದ ಪವನ ಕುಮಾರನು ಶಾಂತಚಿತ್ತರಾಗಿದ್ದ ಮಹರ್ಷಿಗಳಿಗೆ ನಾನಾಪ್ರಕಾರವಾಗಿ ಉಪ ದ್ರವಗಳನ್ನು ಕೊಡುತ್ತಿದ್ದನು. ಆದರೆ ಕಲ್ಯಾಣಕರನಾದ ಬ್ರಹ್ಮನು ಎಲ್ಲ ವಿಧವಾದ ಬ್ರಹ್ಮದಂಡಗಳಿಂದಲೂ ಇವನು ಅವಧ್ಯನೆಂಬ ವರವನ್ನು ಕೊಟ್ಟಿ ರುವನಲ್ಲವೇ? ಈ ವಿಷಯವನ್ನು ತಿಳಿದಿದ್ದ ಋಷಿಗಳು ಅವನ ಅಪಾರವಾದ ಶಕ್ತಿಯಿಂದ ವಿವಶರಾಗಿ ಬಹಳ ಕಷ್ಟದಿಂದ ಅವನ ಉಪಟಳವನ್ನು ಸಹಿಸಿ ಕೊಳ್ಳುತ್ತಿದ್ದರು. ಕೇಸರಿಯೂ ವಾಯುದೇವನೂ ಹಾಗೆ ಮಾಡಬಾರದೆಂದು ಪದೇ–ಪದೇ ಹೇಳುತ್ತಿದ್ದರೂ ಇವನು ಅವರ ಮಾತನ್ನು ಕೇಳುತ್ತಲೇ ಇರಲಿಲ್ಲ. ಲೋಕಮರ್ಯಾದೆಯನ್ನೂ ಮೀರಿ ನಡೆಯುತ್ತಿದ್ದನು. ಇವನ ವಿಧ್ವಂಸನ ಕಾರ್ಯದಿಂದ ಭೃಗುವಂಶೀಯರಾದ ಮಹರ್ಷಿಗಳೂ ಬೃಹಸ್ಪತಿವಂಶೀಯ ರಾದ ಮಹರ್ಷಿಗಳೂ ಕೋಪಗೊಂಡು ಇವನಿಗೆ ಶಾಪವಿತ್ತರು. ಅವರಿಗೆ ಇವನು ಮಾಡುತ್ತಿದ್ದ ಕಾರ್ಯದ ವಿಷಯದಲ್ಲಿ ಬಹಳ ಖೇದವಿತ್ತಾದರೂ ಹೆಚ್ಚು ಕೋಪಗೊಳ್ಳದೆ ಹೇಳಿದರು :

ಬಾಧಸೇ ಯತ್ಸಮಾಶ್ರಿತ್ಯ ಬಲಮಸ್ಮಾನ್ ಪ್ಲವಙ್ಗಮ ।
ತದ್ದೀರ್ಘಕಾಲಂ ವೇತ್ತಾಸಿ ನಾಸ್ಮಾಕಂ ಶಾಪಮೋಹಿತಃ ॥34॥
ಯದಾ ತೇ ಸ್ಮಾರ್ಯತೇ ಕೀರ್ತಿಸ್ತದಾ ತೇ ವರ್ಧತೇ ಬಲಮ್ ॥35॥

'' ವಾನರವೀರನೇ ! ನೀನು ಯಾವ ಬಲವನ್ನು ಆಶ್ರಯಿಸಿ ನಮ್ಮೆಲ್ಲ ರನ್ನೂ ಪೀಡಿಸುತ್ತಿರುವೆಯೋ – ಆ ಬಲವು ಇರುವ ವಿಷಯವು ನಿನಗೆ ಮರೆತು ಹೋಗಲಿ. ನಮ್ಮ ಶಾಪದಿಂದಾಗಿ ನಿನಗೆ ಮೋಹವು ಕವಿದು ನಿನ್ನಲ್ಲಿರುವ

ಬಲದ ಅರಿವೇ ನಿನಗುಂಟಾಗದಿರಲಿ. ಆದರೆ ಯಾರಾದರೂ ನಿನ್ನಲ್ಲಿರುವ ಬಲದ ವಿಷಯವಾಗಿ ನೆನಪುಮಾಡಿಕೊಟ್ಟಾಗ ನಿನ್ನಲ್ಲಿರುವ ಅಪಾರಬಲದ ಅರಿವು ನಿನಗುಂಟಾಗುತ್ತದೆ. ಹಾಗೂ ಆ ಬಲದ ವೃದ್ಧಿಯೂ ಆಗುತ್ತದೆ.''

ರಾಘವ! ಮಹರ್ಷಿಗಳ ಆ ಮಾತಿನ ಪ್ರಭಾವದಿಂದಾಗಿ ಇವನಲ್ಲಿದ್ದ ತೇಜಸ್ಸು ಮತ್ತು ವೀರ್ಯಗಳು ಮಸುಕಿಹೋದುವು. ಅನಂತರ ಇವನು ಆ ಆಶ್ರಮಗಳಲ್ಲಿ ಮೃದುಸ್ವಭಾವದಿಂದಲೇ ಸಂಚರಿಸುತ್ತಿದ್ದನು.

ವಾಲಿ –ಸುಗ್ರೀವರ ತಂದೆಯ ಹೆಸರು ಋಕ್ಷರಜಸ. ತೇಜಸ್ಸಿನಲ್ಲಿ ಸೂರ್ಯನಂತೆಯೇ ಇದ್ದ ಅವನು ಸಮಸ್ತವಾನರರಿಗೂ ರಾಜನಾಗಿದ್ದನು. ಅವನು ಬಹಳ ಕಾಲದವರೆಗೂ ರಾಜ್ಯಭಾರಮಾಡುತ್ತಿದ್ದು ಅವಸಾನ ಹೊಂದಿದ ಬಳಿಕ ಮಂತ್ರಕೋವಿದರಾದ ಅಮಾತ್ಯರು ವಾಲಿಯನ್ನು ರಾಜ ನನ್ನಾಗಿಯೂ ಸುಗ್ರೀವನನ್ನು ಯುವರಾಜನನ್ನಾಗಿಯೂ ಪಟ್ಟಾಭಿಷೇಕ ಮಾಡಿದರು. ಅಗ್ನಿಯೊಡನೆ ವಾಯುವಿಗೆ ಸ್ವಾಭಾವಿಕವಾದ ಮೈತ್ರಿಯಿರುವಂತೆ – ಸುಗ್ರೀವನಿಗೂ ಮತ್ತು ಹನುಮಂತನಿಗೂ ಬಾಲ್ಯದಿಂದಲೂ ಬೇರ್ಪಡಿಸಲಾಗದ ಯಾವ ವಿಧವಾದ ನ್ಯೂನತೆಯೂ ಇಲ್ಲದ, ಸ್ವಾಭಾವಿಕವಾದ ಸಖ್ಯವಿದ್ದಿತು. ವಾಲಿ–ಸುಗ್ರೀವರಿಗೆ ವಿರಸವುಂಟಾದಾಗ ಇವನಿಗೆ ಶಾಪದ ಕಾರಣದಿಂದಾಗಿ ತನ್ನ ಅಪಾರಶಕ್ತಿಯ ಅರಿವಿರಲಿಲ್ಲ. ವಾಲಿಯ ಭಯದಿಂದ ಸುಗ್ರೀವನು ಭೂಮಂಡಲದಲ್ಲಿ ಅಲೆದಾಡುತ್ತಿದ್ದರೂ ಅವನ ಸಖನಾದ ಹನುಮಂತನಿಗೆ ತನಗೆ ವಾಲಿಯನ್ನು ಮೆಟ್ಟುವಷ್ಟು ಬಲವಿರುವುದೆಂಬ ಅರಿವಾಗಲೇ ಇಲ್ಲ. ಸುಗ್ರೀವನಿಗೆ ವಿಪತ್ತುಂಟಾದ ಕಾಲದಲ್ಲಿಯೂ ಹನುಮಂತನಿಗೆ ತನ್ನ ಬಲದ ಅರಿವು ಆಗಲೇ ಇಲ್ಲ. ವಾಲಿ –ಸುಗ್ರೀವರಿಗೆ ಯುದ್ಧವು ನಡೆಯುತ್ತಿದ್ದಾಗ ಬೋನಿನಲ್ಲಿ ಬಂಧಿಸಲ್ಪಟ್ಟ ಸಿಂಹದಂತೆ – ಹನುಮಂತನು ಅದನ್ನು ನೋಡಿಕೊಂಡು ಸುಮ್ಮನಿದ್ದು ಬಿಡುತ್ತಿದ್ದನು. ತನ್ನ ಮಿತ್ರನಾದ ಸುಗ್ರೀವನ ಸಹಾಯಕ್ಕೆ ಹೋಗಬೇಕೆಂದಾಗಲೀ ತನ್ನಲ್ಲಿ ವಾಲಿಯನ್ನು ಎದುರಿಸುವ ಬಲವಿರುವುದೆಂದಾಗಲೀ ಅವನಿಗೆ ತೋಚುತ್ತಲೇ ಇರಲಿಲ್ಲ. ಇದಕ್ಕೆ ಋಷಿಗಳ ಶಾಪವೇ ಕಾರಣವಾಗಿದ್ದಿತು. ಪರಾಕ್ರಮ, ಉತ್ಸಾಹ, ಬುದ್ಧಿ, ಪ್ರತಾಪ, ಸೌಶೀಲ್ಯ, ಮಾಧುರ್ಯ, ನೀತಿ –ಅನೀತಿಗಳ ವಿವೇಕ, ಗಾಂಭೀರ್ಯ,

ಚಾತುರ್ಯ, ಶ್ರೇಷ್ಠವಾದ ಬಲ ಮತ್ತು ಧೈರ್ಯಗಳಲ್ಲಿ ಹನುಮಂತನನ್ನು ಮೀರಿಸುವವರು ಈ ಪ್ರಪಂಚದಲ್ಲಿ ಯಾರಿದ್ದಾರೆ ?

ಅಸೌ ಪುನರ್ವ್ಯಾಕರಣಂ ಗ್ರಹಿಷ್ಯ –
ನ್ಸೂರ್ಯೋನ್ಮುಖಃ ಪ್ರಷ್ಟುಮನಾಃ ಕಪೀನ್ದ್ರಃ ।
ಉದ್ಯದ್ಗಿರೇರಸ್ತಗಿರಿಂ ಜಗಾಮ
ಗ್ರನ್ಥಂ ಮಹದ್ಧಾರಯನಪ್ರಮೇಯಃ ॥45॥

ಮಹಾಶಕ್ತಿಶಾಲಿಯಾದ ಕಪಿಶ್ರೇಷ್ಠನಾದ ಹನುಮಂತನು ವ್ಯಾಕರಣ ಶಾಸ್ತ್ರವನ್ನು ಸೂರ್ಯನಿಂದ ಕಲಿಯುತ್ತಾ ಸಂಶಯಗಳನ್ನು ಪರಿಹರಿಸಿ ಕೊಳ್ಳುವ ಸಲುವಾಗಿ ಸೂರ್ಯನ ಕಡೆಗೆ ಮುಖಮಾಡಿಕೊಂಡು ಉದಯಾಚಲದಿಂದ ಅಸ್ತಾಚಲದವರೆಗೂ ಸೂರ್ಯನ ಜೊತೆಯಲ್ಲಿಯೇ ಹೋಗುತ್ತಿದ್ದನು.

ಸಸೂತ್ರವೃತ್ತ್ಯರ್ಥಪದಂ ಮಹಾರ್ಥಂ
ಸಸಂಗ್ರಹಂ ಸಿದ್ಧ್ಯತಿ ವೈ ಕಪೀನ್ದ್ರಃ ।
ನ ಹ್ಯಸ್ಯ ಕಶ್ಚಿತ್ಸದೃಶೋಽಸ್ತಿ ಶಾಸ್ತ್ರೇ
ವೈಶಾರದೇ ಛನ್ದಗತೌ ತಥೈವ ॥46॥

ಹನುಮಂತನು ಸೂತ್ರ, ವೃತ್ತಿ, ವಾರ್ತಿಕ, ಮಹಾರ್ಥವುಳ್ಳ ಮಹಾಭಾಷ್ಯ, ಸಂಗ್ರಹಗ್ರಂಥ - ಇವೆಲ್ಲವನ್ನೂ ಚೆನ್ನಾಗಿ ಅಧ್ಯಯನಮಾಡಿದ್ದಾನೆ. ಇತರ ಶಾಸ್ತ್ರಗಳಲ್ಲಿಯೂ ಛಂದಃಶಾಸ್ತ್ರದಲ್ಲಿಯೂ ಇವನಿಗೆ ಸಮಾನರಾದವರು ಯಾರೂ ಇಲ್ಲ.

ಸರ್ವಾಸು ವಿದ್ಯಾಸು ತಪೋವಿಧಾನೇ
ಪ್ರಸ್ಪರ್ಧತೇಽಯಂ ಹಿ ಗುರುಂ ಸುರಾಣಾಮ್ ।
ಸೋಽಯಂ ನವವ್ಯಾಕರಣಾರ್ಥವೇತ್ತಾ
ಬ್ರಹ್ಮಾ ಭವಿಷ್ಯತ್ಯಪಿ ತೇ ಪ್ರಸಾದಾತ್ ॥47॥

ಸಮಸ್ತವಿದ್ಯೆಗಳಲ್ಲಿಯೂ ತಪಸ್ಸಿನ ಅನುಷ್ಠಾನದಲ್ಲಿಯೂ ಇವನು ದೇವಗುರುವಾದ ಬೃಹಸ್ಪತಿಯನ್ನೂ ಸ್ಪರ್ಧಿಸಬಲ್ಲನು. ಒಂಬತ್ತು ವ್ಯಾಕರಣಗಳ ಸಿದ್ಧಾಂತವನ್ನೂ ತಿಳಿದಿರುವ ಈ ಮಾರುತಿಯು ನಿನ್ನ ಕೃಪೆಯಿಂದ ಬ್ರಹ್ಮನೇ ಆಗುವನು.

ಪ್ರವೀವಿ ವಿಕ್ಷೋರಿವ ಸಾಗರಸ್ಯ
ಲೋಕಾನ್ದಿಧಕ್ಷೋರಿವ ಪಾವಕಸ್ಯ ।
ಲೋಕಕ್ಷಯೇಷ್ವೇವ ಯಥಾನ್ತಕಸ್ಯ
ಹನೂಮತಃ ಸ್ಥಾಸ್ಯತಿ ಕಃ ಪುರಸ್ತಾತ್ ॥48॥

ಪ್ರಳಯಕಾಲದಲ್ಲಿ ಭೂಮಿಯನ್ನೇ ಮುಳುಗಿಸಲು ಮೇಲೇರಿ ಬರುವ ಸಮುದ್ರದಂತೆಯೂ, ಸಮಸ್ತಲೋಕಗಳನ್ನೂ ದಹಿಸಲು ಉದ್ಯುಕ್ತವಾದ ಸಂವರ್ತಕಾಗ್ನಿಯಂತೆಯೂ, ಲೋಕಗಳ ಸಂಹಾರಕ್ಕಾಗಿಯೇ ಹೊರಟಿರುವ ಕಾಲನಂತೆಯೂ ಇರುವ ಹನುಮಂತನನ್ನು ಎದುರಿಸಿ ನಿಲ್ಲಲು ಯಾರು ತಾನೇ ಸಮರ್ಥರು ?

ರಾಘವ! ಇವನನ್ನೂ ಮತ್ತು ಇವನಿಗೆ ಸಮಾನಬಲರಾದ ಸುಗ್ರೀವ, ಮೈಂದ, ದ್ವಿವಿದ, ನೀಲ, ತಾರ, ಅಂಗದ, ನಲ, ರಂಭ – ಇವರೇ ಮೊದಲಾದ ಕಪೀಶ್ವರರನ್ನೂ ದೇವತೆಗಳು ನಿನ್ನ ಸಲುವಾಗಿಯೇ ಭೂಮಿಯಲ್ಲಿ ಸೃಷ್ಟಿಸಿ ರುವರು. ಗಜ, ಗವಾಕ್ಷ, ಗವಯ, ಸುದಂಷ್ಟ್ರ, ಮೈಂದ , ಪ್ರಭ, ಜ್ಯೋತಿಮುಖ, ನಲರೆಂಬ ವಾನರಶ್ರೇಷ್ಠರನ್ನೂ ಜಾಂಬವಂತನೇ ಮೊದಲಾದ ಕರಡಿಗಳನ್ನೂ ದೇವತೆಗಳು ನಿನ್ನ ಸಹಾಯಾರ್ಥವಾಗಿಯೇ ಸೃಷ್ಟಿಸಿರುವರು. ರಾಮಭದ್ರ ! ನೀನು ಕೇಳಿದ ಪ್ರಶ್ನೆಗೆ ನಾನು ಉತ್ತರಿಸಿದ್ದೇನೆ. ಹನುಮಂತನು ಬಾಲಕನಾಗಿದ್ದಾಗ ಮಾಡಿದ ಅದ್ಭುತ ಕರ್ಮಗಳೆಲ್ಲವನ್ನೂ ವಿವರಿಸಿ ಹೇಳಿದ್ದೇನೆ. ಮುಂದೇನು ಹೇಳಲಿ ?''

ಅಗಸ್ತ್ಯರ ಮಾತುಗಳನ್ನು ಕೇಳಿ ರಾಮ –ಲಕ್ಷ್ಮಣರು ಅತ್ಯಂತವಿಸ್ಮಿತ ರಾದರು. ವಾನರ –ರಾಕ್ಷಸರೂ ತಮ್ಮ ವಿಸ್ಮಯವನ್ನು ವ್ಯಕ್ತಪಡಿಸಿದರು.

ಅನಂತರ ಅಗಸ್ತ್ಯರು ಶ್ರೀರಾಮನಿಗೆ ಹೇಳಿದರು :

'' ರಾಮಚಂದ್ರ ! ನೀನು ಈ ಎಲ್ಲ ವಿಷಯಗಳನ್ನೂ ನಮ್ಮಿಂದ ಕೇಳಿ ರುವೆ. ಕೇಳಿ ಸಂತುಷ್ಟನೂ ಆಗಿರುವೆ. ನಿನ್ನನ್ನು ಸಂದರ್ಶಿಸಿ ಮಾತನಾಡಿ ದ್ದಾಯಿತು. ನಾವಿನ್ನು ಹೋಗಿಬರುವೆವು.''

ಮಹಾತೇಜಸ್ವಿಗಳಾದ ಅಗಸ್ತ್ಯರ ಮಾತನ್ನು ಕೇಳಿ ಶ್ರೀರಾಮನು ಕೈಮುಗಿದು ನಮಸ್ಕರಿಸಿ ಹೇಳಿದನು :

''ಮುನೀಶ್ವರರೇ! ತಮ್ಮ ಸಂದರ್ಶನಮಾತ್ರದಿಂದಲೇ ನನ್ನ ವಿಷಯದಲ್ಲಿ ದೇವತೆಗಳು ತುಷ್ಟರಾದರು. ಪಿತೃ – ಪಿತಾಮಹರು ಸಂತುಷ್ಟರಾದರು. ಬಂಧುಗಳಿಂದ ಕೂಡಿರುವ ನಾವೆಲ್ಲರೂ ಪರಮತುಷ್ಟರಾದೆವು. ನಿಮ್ಮ ಆಗಮನದಿಂದಾಗಿ ನನ್ನ ಮನಸ್ಸಿನಲ್ಲಿ ಒಂದು ಆಶಯವು ಮೂಡಿಬಂದಿದೆ.



ಅದನ್ನೇ ನಾನು ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಅನುಕಂಪದಿಂದ ತಾವು ನನ್ನ ಸಲುವಾಗಿ ಆ ಕರ್ತವ್ಯವನ್ನೂ ನಿರ್ವಹಿಸಬೇಕಾಗಿದೆ. ಪುರವಾಸಿಗಳನ್ನೂ ದೇಶವಾಸಿಗಳನ್ನೂ ಅವರವರ ಕಾರ್ಯಗಳಲ್ಲಿ ನಿರತರಾಗಿರುವಂತೆ ನಿಯಮಿಸಿ ತಮ್ಮಂತಹ ಸತ್ಪುರುಷರ ಪ್ರಭಾವದಿಂದ ಯಜ್ಞಾನುಷ್ಠಾನಗಳನ್ನು ಮಾಡಲು ನಿಶ್ಚಯಿಸಿದ್ದೇನೆ. ನನ್ನನ್ನು ಅನುಗ್ರಹಿಸಲು ಬಯಸುವ ಮಹಾವೀರ್ಯರಾದ ನೀವೆಲ್ಲರೂ ನಾನು ಮಾಡಲಿರುವ ಯಜ್ಞಗಳಲ್ಲಿ ನಿತ್ಯ ಸದಸ್ಯರಾಗಿರುವ ಕೃಪೆಮಾಡಿರಿ. ತಪಸ್ಸಿನಿಂದ ಪಾಪಗಳೆಲ್ಲವನ್ನೂ ಕಳೆದುಕೊಂಡ ಶುದ್ಧಾತ್ಮರಾದ ನಿಮ್ಮ ಅನುಗ್ರಹದಿಂದ ನಾನು ಸುಖವಾಗಿದ್ದೇನೆ.

ಇದರಿಂದ ಪಿತೃದೇವತೆಗಳೂ ಪ್ರೀತರಾಗಿ ನನ್ನನ್ನು ಅನುಗ್ರಹಿಸುತ್ತಾರೆ. ಇಲ್ಲಿ ಸೇರಿರುವ ನೀವೆಲ್ಲರೂ ಪದೇ–ಪದೇ ಇಲ್ಲಿಗೆ ದಯಮಾಡಿಸುತ್ತಿರಬೇಕು.''

ಶ್ರೀರಾಮನ ಮಾತುಗಳನ್ನು ಕೇಳಿ ಕಠೋರವ್ರತನಿಷ್ಠರಾದ ಅಗಸ್ತ್ಯರೇ ಮೊದಲಾದ ಮಹರ್ಷಿಗಳು **' ಏವಮಸ್ತು** – ಹಾಗೆಯೆ ಆಗಲಿ ' ಎಂದೆನ್ನುತ್ತಾ ಹೊರಡಲು ಉದ್ಯುಕ್ತರಾದರು.

ಹೀಗೆ ಅಗಸ್ತ್ಯರೇ ಮೊದಲಾದ ಮಹರ್ಷಿಗಳು ಶ್ರೀರಾಮನೊಡನೆ ಯಥೋಚಿತವಾಗಿ ಮಾತನಾಡಿ ತಾವು ಬಂದಿದ್ದಲ್ಲಿಗೆ ಪ್ರಯಾಣಮಾಡಿದರು. ರಾಘವನು ಕೂಡ ಋಷಿಗಳ ಮಾತನ್ನು ಕೇಳಿ ವಿಸ್ಮಯಗೊಂಡು ಅದನ್ನೇ ಚಿಂತಿಸತೊಡಗಿದನು.

ಸೂರ್ಯನು ಅಸ್ತನಾಗಲು ಪುರುಷೋತ್ತಮನು ಸಭೆಯಲ್ಲಿದ್ದ ರಾಜರನ್ನೂ ವಾನರಶ್ರೇಷ್ಠರನ್ನೂ ಅವರವರ ಅರಮನೆಗಳಿಗೆ ಕಳುಹಿಸಿಕೊಟ್ಟು ವಿಧಿವತ್ತಾಗಿ ಸಂಧ್ಯಾವಂದನೆಯನ್ನು ಮಾಡಿ ರಾತ್ರಿಯಾದನಂತರ ಅಂತಃಪುರವನ್ನು ಪ್ರವೇಶಿಸಿದನು.

36ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **37ನೆಯ ಸರ್ಗ**

ರಾಜಸಭೆಯಲ್ಲಿ ಸಭಾಸದರೊಡನೆ ಶ್ರೀರಾಮನ ಸಮಾಲೋಚನೆ

ಅಭಿಷಿಕ್ತೇ ತು ಕಾಕುತ್ಸ್ಥೇ ಧರ್ಮೇಣ ವಿದಿತಾತ್ಮನಿ ।
ವ್ಯತೀತಾ ಯಾ ನಿಶಾ ಪೂರ್ವಾ ಪೌರಾಣಾಂ ಹರ್ಷವರ್ಧಿನೀ ॥1॥

ಕಕುತ್ಸ್ಥಕುಲಶಿರೋಮಣಿಯಾದ ಆತ್ಮಜ್ಞಾನಿಯಾದ ಶ್ರೀರಾಮನು ವಿಧಿವತ್ತಾಗಿ ಪಟ್ಟಾಭಿಷಿಕ್ತನಾದನಂತರ ಪೌರರ ಹರ್ಷವನ್ನು ಹೆಚ್ಚಿಸಿದ ಮೊದಲನೆಯ ರಾತ್ರಿಯು ಕಳೆಯಿತು.

ರಾತ್ರಿಯು ಕಳೆದು ಬೆಳಗಾದನಂತರ ಮಹಾರಾಜನನ್ನು ಎಚ್ಚರಗೊಳಿಸಲು ಸೌಮ್ಯರಾದ ವಂದಿ–ಮಾಗಧರು ಅರಮನೆಗೆ ಬಂದರು. ಅವರ ಕಂಠಸ್ವರಗಳು ಮಧುರವಾಗಿದ್ದುವು. ಸಂಗೀತದ ಕಲೆಯಲ್ಲಿ ಅವರೆಲ್ಲರೂ

ಕಿನ್ನರರಂತೆ ಸುಶಿಕ್ಷಿತರಾಗಿದ್ದರು. ಎಲ್ಲರೂ ಮಹಾರಾಜನಾದ ಶ್ರೀರಾಮನನ್ನು ಸಂತೋಷಗೊಳಿಸುತ್ತಾ ಯಥಾವತ್ತಾಗಿ ಸ್ತೋತ್ರಮಾಡತೊಡಗಿದರು.

ವೀರ ಸೌಮ್ಯ ಪ್ರಬುಧ್ಯಸ್ವ ಕೌಸಲ್ಯಾಪ್ರೀತಿವರ್ಧನ ।
ಜಗದ್ಧಿ ಸರ್ವಂ ಸ್ವಪಿತಿ ತ್ವಯಿ ಸುಪ್ತೇ ನರಾಧಿಪ ॥4॥

''ವೀರನೇ !ಸೌಮ್ಯನೇ ! ಕೌಸಲ್ಯಾದೇವಿಗೆ ಆನಂದವನ್ನುಂಟು ಮಾಡುವವನೇ ! ನರಾಧಿಪನೇ ! ಏಳು ! ಎದ್ದೇಳು. ನೀನು ಮಲಗಿದ್ದರೆ ಜಗತ್ತೆಲ್ಲವೂ ಮಲಗಿಯೇ ಇರುತ್ತದೆ.

ವಿಕ್ರಮಸ್ತೇ ಯಥಾ ವಿಷ್ಣೋ ರೂಪಂ ಚೈವಾಶ್ವಿನೋರಿವ ।
ಬುದ್ಧ್ಯಾ ಬೃಹಸ್ಪತೇಸ್ತುಲ್ಯಃ ಪ್ರಜಾಪತಿಸಮೋ ಹ್ಯಸಿ ॥5॥

ನಿನ್ನಪರಾಕ್ರಮವು ಮಹಾವಿಷ್ಣುವಿನ ಪರಾಕ್ರಮಕ್ಕೆ ಸಮಾನ ವಾಗಿದೆ. ರೂಪವು ಅಶ್ವಿನೀದೇವತೆಗಳ ರೂಪದಂತಿದೆ. ಬುದ್ಧಿಯಲ್ಲಿ ನೀನು ದೇವಗುರುವಾದ ಬೃಹಸ್ಪತಿಗೆ ಸಮಾನನು. ಪ್ರಜೆಗಳ ಪೋಷಣೆ–ಪಾಲನೆ ಗಳಲ್ಲಿ ಸಾಕ್ಷಾತ್ ಪ್ರಜಾಪತಿಗೆ ಸಮಾನನಾಗಿರುವೆ.

ಕ್ಷಮಾ ತೇ ಪೃಥಿವೀತುಲ್ಯಾ ತೇಜಸಾ ಭಾಸ್ಕರೋಪಮಃ ।
ವೇಗಸ್ತೇ ವಾಯುನಾ ತುಲ್ಯೋ ಗಾಮ್ಭೀರ್ಯಮುದಧೇರಿವ ॥6॥

ನಿನ್ನ ಕ್ಷಮಾಗುಣವು ಭೂದೇವಿಯ ಕ್ಷಮಾಗುಣಕ್ಕೆ ಅನುರೂಪ ವಾಗಿದೆ. ತೇಜಸ್ಸಿನಲ್ಲಿ ನೀನು ಸೂರ್ಯನಿಗೆ ಸಮಾನನು. ವೇಗದಲ್ಲಿ ವಾಯುವಿಗೂ - ಗಾಂಭೀರ್ಯದಲ್ಲಿ ಸಮುದ್ರಕ್ಕೂ ಸಮಾನನಾಗಿರುವೆ.

ಅಪ್ರಕಮ್ಪ್ಯೋ ಯಥಾ ಸ್ಥಾಣುಶ್ಚನ್ದ್ರೇ ಸೌಮ್ಯತ್ವಮೀದೃಶಮ್ ।
ನೇದೃಶಾಃ ಪಾರ್ಥಿವಾಃ ಪೂರ್ವಂ ಭವಿತಾರೋ ನರಾಧಿಪ ॥7॥

ಭಗವಾನ್ ಶಂಕರನಂತೆ ನೀನು ಅವಿಚಲನು. ಚಂದ್ರನೊಬ್ಬನಲ್ಲಿ ಮಾತ್ರವೇ ನಿನ್ನಲ್ಲಿರುವ ಸೌಮ್ಯತೆಯಿದೆ. ನಿನ್ನಂತಹ ಸಕಲಗುಣಸಂಪನ್ನ ರಾದ ರಾಜರು ಹಿಂದೆಯೂ ಇರಲಿಲ್ಲ, ಮುಂದೆಯೂ ಹುಟ್ಟುವುದಿಲ್ಲ.

ನೀನು ಎದುರಿಸಲು ಅಸಾಧ್ಯನಾಗಿರುವುದರಿಂದ ನಿನ್ನನ್ನು ಪರಾಜಯ ಗೊಳಿಸುವ ಸಾಧ್ಯತೆಯೇ ಇಲ್ಲ. ನೀನು ಧರ್ಮನಿಷ್ಠನೂ - ಪ್ರಜೆಗಳ ಹಿತ

ದಲ್ಲಿಯೇ ಆಸಕ್ತನೂ ಆಗಿರುವುದರಿಂದ ಕೀರ್ತಿಯಾಗಲೀ ಲಕ್ಷ್ಮಿಯಾಗಲೀ ನಿನ್ನನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ. ಐಶ್ವರ್ಯವೂ ಮತ್ತು ಧರ್ಮವೂ ನಿನ್ನಲ್ಲಿ ಸ್ಥಿರವಾಗಿ ನೆಲೆಸಿವೆ.

ಇವೇ ಮುಂತಾಗಿ ವಂದಿ –ಮಾಗಧರು ಶ್ರೀರಾಮನ ಗುಣಗಳನ್ನು ಕೀರ್ತನಮಾಡುತ್ತಿರುವಾಗ ಸೂತರು ದಿವ್ಯವಾದ ಸ್ತುತಿಗಳಿಂದ ಶ್ರೀರಾಮನನ್ನು ಎಚ್ಚರಗೊಳಿಸುತ್ತಿದ್ದರು. ವಂದಿ –ಮಾಗಧರ ಮತ್ತು ಹೊಗಳುಭಟರ ಸ್ತುತಿಗಳನ್ನು ಕೇಳಿ ಶ್ರೀರಾಮನು ಎಚ್ಚರಗೊಂಡನು. ಪಾಪಹರನಾದ ನಾರಾಯಣನು ಸರ್ಪದ ಹಾಸಿಗೆಯಿಂದ ಎದ್ದೇಳುವಂತೆ - ಶ್ರೀರಾಮನು ಬಿಳಿಯದಾದ ಹಚ್ಚಡದಿಂದ ಹೊದಿಸಲ್ಪಟ್ಟಿದ್ದ ಹಾಸಿಗೆಯಿಂದ ಎದ್ದೊಡನೆಯೇ ಸಾವಿರಾರು ಸೇವಕರು ವಿನಯಪೂರ್ವಕವಾಗಿ ಕೈಗಳನ್ನು ಜೋಡಿಸಿಕೊಂಡು ಶುಭ್ರವಾದ ಪಾತ್ರೆಗಳಲ್ಲಿ ನೀರುತುಂಬಿಕೊಂಡು ಅವನ ಸೇವೆ ಮಾಡಲು ನಿಂತರು. ಶ್ರೀರಾಮನು ಸ್ನಾನಾದಿಗಳನ್ನು ಮಾಡಿ ಪರಿಶುದ್ಧನಾಗಿ ಅಗ್ನಿಗೆ ಪ್ರಾತರಾಹುತಿಗಳನ್ನು ಸಮರ್ಪಿಸಿ ಇಕ್ಷ್ವಾಕುವಂಶೀಯರಿಂದ ಸೇವಿಸಲ್ಪಡುತ್ತಿದ್ದ ಪುಣ್ಯತಮವಾದ ದೇವಮಂದಿರಕ್ಕೆ ಹೋದನು. ಅಲ್ಲಿ ದೇವತೆಗಳನ್ನೂ, ಪಿತೃಗಳನ್ನೂ ಮತ್ತು ಬ್ರಾಹ್ಮಣರನ್ನೂ ಯಥಾವಿಧಿಯಾಗಿ ಸಂಪೂಜಿಸಿ ಪರಿವಾರದಿಂದ ಸಮಾವೃತನಾಗಿ ಹೊರಭಾಗದ ಸಭಾಂಗಣಕ್ಕೆ ಬಂದನು. ಅಲ್ಲಿ ಪ್ರಜ್ವಲಿಸುವ ಅಗ್ನಿಗೆ ಸಮಾನರಾಗಿದ್ದ ವಸಿಷ್ಠಪ್ರಮುಖರಾದ ಪುರೋಹಿತರೂ ಮತ್ತು ಮಂತ್ರಿಗಳೂ ಕುಳಿತಿದ್ದರು. ಅನಂತರ ಮಹಾತ್ಮರಾದ ಹಲವಾರು ದೇಶಗಳ ಕ್ಷತ್ರಿಯರಾಜರು ಇಂದ್ರನ ಬಳಿಯಲ್ಲಿ ದೇವತೆಗಳು ಕುಳಿತುಕೊಳ್ಳುವಂತೆ ಶ್ರೀರಾಮನ ಸಮೀಪದಲ್ಲಿ ಕುಳಿತುಕೊಂಡರು. ಮಹಾಯಶೋವಂತರಾದ ಭರತ –ಲಕ್ಷ್ಮಣ– ಶತ್ರುಘ್ನರು - ಮೂರು ವೇದಗಳು ಯಜ್ಞದ ಸೇವೆಯಲ್ಲಿ ನಿರತವಾಗಿರುವಂತೆ - ಶ್ರೀರಾಮನ ಸೇವೆಯಲ್ಲಿ ನಿರತರಾದರು. ಆ ಸಮಯದಲ್ಲಿ 'ಮುದಿತರು' ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ, ಪ್ರಸನ್ನವಾದ ಮುಖಭಾವವನ್ನು ಹೊಂದಿದ್ದ ಕಿಂಕರರು ಕೈಮುಗಿದುಕೊಂಡು ಸಭಾಭವನಕ್ಕೆ ಬಂದು ಶ್ರೀರಾಮನ ಸಮೀಪದಲ್ಲಿ ಕುಳಿತುಕೊಂಡರು. ಮಹಾವೀರ್ಯರಾದ, ಕಾಮರೂಪಿಗಳಾದ, ಸುಗ್ರೀವ ಪ್ರಮುಖ

ರಾದ ಇಪ್ಪತ್ತು ಮಂದಿ ವಾನರಪ್ರಮುಖರೂ ★ ಶ್ರೀರಾಮನ ಸಮೀಪದಲ್ಲಿ ಕುಳಿತುಕೊಂಡರು. ಗುಹ್ಯಕರು ಕುಬೇರನನ್ನು ಸೇವಿಸುವಂತೆ ವಿಭೀಷಣನು ತನ್ನ ನಾಲ್ವರು ಮಂತ್ರಿಗಳಿಂದ ಸಮಾವೃತನಾಗಿ ಮಹಾತ್ಮನಾದ ಶ್ರೀರಾಮನ ಸೇವೆಯಲ್ಲಿ ನಿರತನಾಗಿದ್ದನು. ಶಾಸ್ತ್ರಜ್ಞಾನದಲ್ಲಿ ಪರಿಣತರಾದ, ಕುಲೀನ ರಾದ, ಚತುರರಾದ ಮನುಷ್ಯರು ಶ್ರೀರಾಮನಿಗೆ ತಲೆಬಾಗಿ ನಮಸ್ಕರಿಸಿ ಅವನ ಸುತ್ತಲೂ ಕುಳಿತರು. ಹೀಗೆ ಶ್ರೀರಾಮನು ಶ್ರೇಷ್ಠರಾದ ಮತ್ತು ತೇಜಸ್ವಿಗಳಾದ ಋಷಿಜನರಿಂದಲೂ, ರಾಜರಿಂದಲೂ, ಮಹಾವೀರ್ಯರಾದ ವಾನರರಿಂದಲೂ ಮತ್ತು ರಾಕ್ಷಸರಿಂದಲೂ ಪರಿವೃತನಾಗಿ ಸಭಾಭವನದಲ್ಲಿ ಕುಳಿತು ರಾರಾಜಿಸುತ್ತಿದ್ದನು. ದೇವರಾಜನಾದ ಇಂದ್ರನು ಋಷಿ –ಮುನಿ ಗಳಿಂದ ಸತತವಾಗಿ ಉಪಾಸಿಸಲ್ಪಡುವಂತೆ– ಶ್ರೀರಾಮನು ಋಷಿ–ಮುನಿಗಳಿಂದ ಉಪಾಸಿಸಲ್ಪಡುತ್ತಾ ಇಂದ್ರನಿಗಿಂತಲೂ ಅಧಿಕವಾದ ಶೋಭೆಯಿಂದ ಕಂಗೊಳಿಸುತ್ತಿದ್ದನು. ಎಲ್ಲರೂ ಕುಳಿತನಂತರ ಹಿಂದಿನ ಇತಿಹಾಸಗಳನ್ನು ತಿಳಿದಿದ್ದ ಮಹಾತ್ಮರು ಧರ್ಮಯುಕ್ತವಾದ ಸುಮಧುರವಾದ ಕಥೆಗಳನ್ನು ಹೇಳಲು ಉಪಕ್ರಮಿಸಿದರು.''

37ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **38ನೆಯ ಸರ್ಗ**

ಶ್ರೀರಾಮನು -ಜನಕರಾಜ, ಯುಧಾಜಿತ್, ಪ್ರತರ್ದನರೇ ಮೊದಲಾದ ರಾಜರನ್ನು ಕಳುಹಿಸಿಕೊಟ್ಟುದು

ಏವಮಾಸ್ತೇ ಮಹಾಬಾಹುರಹನ್ಯಹನಿ ರಾಘವಃ ।
ಪ್ರಶಾಸತ್ಸರ್ವಕಾರ್ಯಾಣಿ ಪೌರಜಾನಪದೇಷು ಚ ॥ 1॥

ಮಹಾಬಾಹುವಾದ ಶ್ರೀರಾಮನು ಹೀಗೆಯೇ ಪ್ರತಿದಿನವೂ ರಾಜಸಭೆ ಯಲ್ಲಿ ಪುರಜನರ ಮತ್ತು ದೇಶೀಯಜನರ ಸಮಸ್ತಕಾರ್ಯಗಳನ್ನೂ

★ ಇಪ್ಪತ್ತು ಮಂದಿ ವಾನರರು : ಸುಗ್ರೀವ, ಅಂಗದ, ಹನುಮಂತ, ಜಾಂಬವಂತ, ಸುಷೇಣ, ತಾರ, ನೀಲ, ನಲ, ಮೈಂದ, ದ್ವಿವಿದ, ಕುಮುದ, ಶರಭ, ಶತಬಲಿ, ಗಂಧ , ಮಾದನ, ಗಜ, ಗವಾಕ್ಷ, ಗವಯ, ಧೂಮ್ರ, ರಂಭ ಮತ್ತು ಜ್ಯೋತಿಮುಖ – ಇವರೇ ಇಪ್ಪತ್ತು ಮಂದಿ ವಾನರಪ್ರಮುಖರು.

ಪರಾಮರ್ಶಿಸುತ್ತಾ ರಾಜ್ಯಶಾಸನ ಮಾಡುತ್ತಿದ್ದನು. ಕೆಲವು ದಿವಸಗಳು ಕಳೆದನಂತರ ಶ್ರೀರಾಮನು ಮಿಥಿಲೆಯ ಒಡೆಯನಾದ ಜನಕನಿಗೆ ಕೈ ಜೋಡಿಸಿ ನಮಸ್ಕರಿಸುತ್ತಾ ಹೇಳಿದನು :

ಭವಾನ್ಹಿ ಗತಿರವ್ಯಗ್ರಾ ಭವತಾ ಪಾಲಿತಾ ವಯಮ್ ।
ಭವತಸ್ತೇಜಸೋಗ್ರೇಣ ರಾವಣೋ ನಿಹತೋ ಮಯಾ ॥3॥

'' ಮಹಾರಾಜ ! ನೀನೇ ನಮಗೆ ಏಕಮಾತ್ರ ಆಶ್ರಯನಾಗಿರುವೆ. ನೀನೇ ನಮ್ಮೆಲ್ಲರ ಪೋಷಣೆಗಳನ್ನು ಮಾಡಿರುವೆ. ನಿನ್ನ ಉಗ್ರವಾದ ತೇಜಸ್ಸಿನ ಪ್ರಭಾವದಿಂದಲೇ ರಾವಣನನ್ನು ಸಂಹರಿಸಲು ನನಗೆ ಸಾಧ್ಯವಾಯಿತು.

ಇಕ್ಷ್ವಾಕು ಕುಲದ ಸಮಸ್ತರಾಜರಿಗೂ ಮತ್ತು ಮೈಥಿಲನರೇಶರಿಗೂ ಪರಸ್ಪರವಾದ ಬಾಂಧವ್ಯದಿಂದ ಪ್ರೀತಿಯು ಅತುಲವಾಗಿದೆ.

ಪಾರ್ಥಿವನೇ! ಈಗ ನಾವು ಬಹುಮಾನಗಳ ರೂಪದಲ್ಲಿ ಅರ್ಪಿಸುವ ಮಣಿ–ರತ್ನಾದಿಗಳನ್ನು ಸ್ವೀಕರಿಸಿ ನಿನ್ನ ರಾಜಧಾನಿಗೆ ಪ್ರಯಾಣ ಮಾಡಬಹುದಾಗಿದೆ. ಭರತನು ಸಹಾಯಾರ್ಥವಾಗಿ ನಿಮ್ಮ ಜೊತೆಯಲ್ಲೇ ಬರುವನು.''

ಶ್ರೀರಾಮನ ಮಾತಿಗೆ ಜನಕನು ಹಾಗೆಯೇ ಆಗಲೆಂದು ಹೇಳಿ ಮಾತನ್ನು ಮುಂದುವರಿಸುತ್ತಾ ಹೇಳಿದನು :

ಪ್ರೀತೋಽಸ್ಮಿ ಭವತಾ ರಾಜನ್ದರ್ಶನೇನ ನಯೇನ ಚ ॥6॥
ಯಾನ್ಯೇತಾನಿ ತು ರತ್ನಾನಿ ಮದರ್ಥಂ ಸಂಚಿತಾನಿ ವೈ ।
ದುಹಿತ್ರೇ ತಾನ್ಯಹಂ ರಾಜನ್ಸರ್ವಾಣ್ಯೇವ ದದಾಮಿ ವೈ ॥7॥

'' ಮಹಾರಾಜ ! ನಿನ್ನ ದರ್ಶನದಿಂದಲೂ ನ್ಯಾಯಸಮ್ಮತವಾದ ವ್ಯವಹಾರದಿಂದಲೂ ನಾನು ಸುಪ್ರೀತನಾಗಿರುವೆನು. ನನಗೆ ಬಳುವಳಿ ಕೊಡಲು ನೀನು ಯಾವ ರತ್ನಗಳನ್ನು ಸಂಗ್ರಹಿಸಿಟ್ಟಿರುವೆಯೋ – ಅವೆಲ್ಲವನ್ನೂ ನಾನು ನನ್ನ ಮಗಳಿಗೆ ಕೊಡುತ್ತೇನೆ.''

ಅಳಿಯನ ಸದ್ವ್ಯವಹಾರಗಳಿಂದ ಪರಮಸಂತುಷ್ಟನಾಗಿದ್ದ ಜನಕ ರಾಜನು

ಹೀಗೆ ಹೇಳಿ ರಾಘವನ ಅನುಮತಿಯನ್ನು ಪಡೆದು ಮಿಥಿಲೆಗೆ ಪ್ರಯಾಣಮಾಡಿದನು.

ಜನಕನು ಪ್ರಯಾಣಮಾಡಿದನಂತರ ಶ್ರೀರಾಮನು ಸೋದರಮಾವನಾದ ಸಮರ್ಥನಾದ ಯುಧಾಜಿತರಾಜನಿಗೆ ಕೈಜೋಡಿಸಿಕೊಂಡು ನಮಸ್ಕರಿಸುತ್ತಾ ವಿನಯಪೂರ್ವಕವಾಗಿ ಹೇಳಿದನು :

ಇದಂ ರಾಜ್ಯಮಹಂ ಚೈವ ಭರತಶ್ಚ ಸಲಕ್ಷ್ಮಣಃ ।
ಆಯತ್ತಸ್ತ್ವಂ ಹಿ ನೋ ರಾಜನ್ಗತಿಶ್ಚ ಪುರುಷರ್ಷಭ ॥10॥

'' ಪುರುಷಶ್ರೇಷ್ಠನೇ! ಈ ರಾಜ್ಯ, ನಾನು, ಭರತ , ಲಕ್ಷ್ಮಣ, ಶತ್ರುಘ್ನ ಈ ಎಲ್ಲರೂ ನಿನ್ನ ಅಧೀನರಾಗಿದ್ದೇವೆ. ನೀನೇ ನಮಗೆ ಪರಮಾಶ್ರಯನಾಗಿರುವೆ. ಕೇಕಯರಾಜನು ಬಹಳ ವೃದ್ಧನಾಗಿರುವನು. ನಿನಗಾಗಿ ಅವನು ಸದಾ ಚಿಂತಿಸುತ್ತಿರಬಹುದು. ಆದುದರಿಂದ ನೀನೀಗಲೇ ಪ್ರಯಾಣ ಮಾಡುವುದು ಉಚಿತವಾಗಿ ಕಾಣುತ್ತದೆ. ಬಹುಮಾನದ ರೂಪವಾಗಿ ಅಪಾರಧನವನ್ನೂ ನಾನಾವಿಧವಾದ ರತ್ನಗಳನ್ನೂ ತೆಗೆದುಕೊಂಡು ಲಕ್ಷ್ಮಣನು ನಿನ್ನ ಜೊತೆಯಲ್ಲಿ ಬರುತ್ತಾನೆ.''

ಶ್ರೀರಾಮನು ಹೀಗೆ ಹೇಳಲು ಯುಧಾಜಿತನು ಪ್ರಯಾಣಹೊರಡಲು ತನ್ನ ಒಪ್ಪಿಗೆಯನ್ನು ಸೂಚಿಸಿದನು. ಧನ-ರತ್ನಗಳೆಲ್ಲವೂ ನಿನ್ನಲ್ಲಿಯೇ ಇರಲಿ ; ಅಕ್ಷಯವಾಗಲಿ - ಎಂದು ಪ್ರತ್ಯುತ್ತರಿಸಿದನು.

ಮೊದಲು ಶ್ರೀರಾಮನು ಸೋದರಮಾವನಿಗೆ ಪ್ರದಕ್ಷಿಣ-ನಮಸ್ಕಾರವನ್ನು ಮಾಡಿದನು. ಬಳಿಕ ಕೇಕಯಕುಲವರ್ಧನನಾದ ಯುಧಾಜಿತುವು ಶ್ರೀರಾಮನಿಗೆ ಪ್ರದಕ್ಷಿಣ -ನಮಸ್ಕಾರವನ್ನು ಮಾಡಿದನು. ವೃತ್ರಾಸುರನು ಹತನಾದನಂತರ ವಿಷ್ಣುವಿನ ಜೊತೆಯಲ್ಲಿ ವಾಸವನು ಅಮರಾವತಿಗೆ ಹೋದಂತೆ- ಕೇಕಯರಾಜನು ಲಕ್ಷ್ಮಣನೊಡನೆ ತನ್ನ ದೇಶಕ್ಕೆ ಪ್ರಯಾಣ ಮಾಡಿದನು. ಸೋದರಮಾವನನ್ನು ಕಳುಹಿಸಿಕೊಟ್ಟನಂತರ ರಾಘವನು ಭಯರಹಿತನೂ, ಮಿತ್ರನೂ ಆದ, ಕಾಶಿರಾಜ ಪ್ರತರ್ದನನನ್ನು ಗಾಢವಾಗಿ ಆಲಿಂಗಿಸಿಕೊಂಡು ಹೇಳಿದನು :

''ಗೆಳೆಯನೇ! ರಾಜ್ಯಾಭಿಷೇಕದ ಕಾರ್ಯದಲ್ಲಿ ನೀನು ಭರತನೊಡನೆ ಸಂಪೂರ್ಣವಾಗಿ ಸಹಕರಿಸಿದೆ. ಹಾಗೆ ಸಹಕರಿಸಿ ನಿನಗೆ ನನ್ನ ಮೇಲಿರುವ ಪ್ರೀತಿಯನ್ನೂ ಸೌಹಾರ್ದವನ್ನೂ ಪ್ರದರ್ಶಿಸಿರುವೆ. ಈಗ ನೀನು ಸುಂದರವಾದ ಪ್ರಾಕಾರಗಳಿಂದ ಕೂಡಿರುವ, ಸುಂದರವಾದ ಮಹಾದ್ವಾರವನ್ನು ಹೊಂದಿರುವ, ನೀನು ಆಳುತ್ತಿರುವ, ರಮಣೀಯವಾದ ವಾರಾಣಸಿಗೆ ಪ್ರಯಾಣಮಾಡು.''

ಧರ್ಮಾತ್ಮನಾದ ಶ್ರೀರಾಮನು ಹೀಗೆ ಹೇಳಿ ಸಿಂಹಾಸನದಿಂದ ಮೇಲೆದ್ದು ಪ್ರತರ್ದನನನ್ನು ಎದೆಗಪ್ಪಿಕೊಂಡು ಗಾಢವಾಗಿ ಆಲಿಂಗಿಸಿ ಕೊಂಡನು. ಅನಂತರ ಕೌಸಲ್ಯೆಯ ಆನಂದವರ್ಧಕನಾದ ಶ್ರೀರಾಮನು ಪ್ರತರ್ದನನನ್ನು ವಿಶ್ವಾಸಪೂರ್ವಕವಾಗಿ ಕಳುಹಿಸಿಕೊಟ್ಟನು. ಭಯರಹಿತ ನಾದ ಕಾಶಿದೇಶದರಸನು ಶ್ರೀರಾಮನ ಅನುಜ್ಞೆಯನ್ನು ಪಡೆದು ಅಲ್ಲಿಂದ ಶೀಘ್ರವಾಗಿ ವಾರಾಣಸಿಗೆ ಪ್ರಯಾಣಮಾಡಿದನು. ಕಾಶಿರಾಜನನ್ನು ಕಳುಹಿಸಿಕೊಟ್ಟನಂತರ ರಾಘವನು ಅಲ್ಲಿದ್ದ ಮೂರು ನೂರು ಭೂಪಾಲಕರೊಡನೆ ಮುಗುಳ್ನಗೆ ಬೀರುತ್ತಾ ಮಾಧುರ್ಯದಿಂದ ಕೂಡಿದ ಈ ಮಾತನ್ನು ಹೇಳಿದನು :

ಭವತಾಂ ಪ್ರೀತಿರವ್ಯಗ್ರಾ ತೇಜಸಾ ಪರಿರಕ್ಷಿತಾ ।
ಧರ್ಮಶ್ಚ ನಿಯತೋ ನಿತ್ಯಂ ಸತ್ಯಂ ಚ ಭವತಾಂ ಸದಾ ॥ 22॥

''ಭೂಪಾಲರೇ! ನನ್ನ ಮೇಲೆ ನಿಮ್ಮ ಪ್ರೀತಿಯು ಅವಿಚಲವಾದುದು. ನಿಮ್ಮ ತೇಜಸ್ಸಿನಿಂದಲೇ ಆ ಪ್ರೀತಿಯು ರಕ್ಷಿಸಲ್ಪಟ್ಟಿದೆ. ಧರ್ಮ ಮತ್ತು ಸತ್ಯಗಳು ನಿಮ್ಮಲ್ಲಿ ನಿತ್ಯನಿರಂತರವಾಗಿ ವಾಸಮಾಡಿಕೊಂಡಿದೆ.

ನಿಮ್ಮಂತಹ ಮಹಾಪುರುಷರ ಪ್ರಭಾವ ಮತ್ತು ತೇಜಸ್ಸುಗಳಿಂದಲೇ ಮೂರ್ಖನಾದ ರಾಕ್ಷಸಾಧಮನಾದ ರಾವಣನು ಹತನಾದನು. ಅಲ್ಲಿ ನಾನು ನೆಪಮಾತ್ರಕ್ಕೆ ರಾವಣನ ಮುಂದೆ ನಿಂತಿದ್ದೆನು. ಅವನು ಹತನಾದುದು ನಿಮ್ಮೆಲ್ಲರ ತೇಜಃಪ್ರಭಾವದಿಂದಲೇ. ರಾವಣನು ಯುದ್ಧದಲ್ಲಿ ಪುತ್ರಾಮಾತ್ಯ – ಬಂಧುಗಳ ಸಮೇತನಾಗಿ ವಿನಾಶಹೊಂದಿದನು. ಅರಣ್ಯದಲ್ಲಿ ಜನಕರಾಜನ ಮಗಳಾದ ಸೀತೆಯು ಅಪಹೃತಳಾದಳೆಂಬ ಸುದ್ದಿಯನ್ನು ಕೇಳಿದೊಡನೆಯೇ ಭರತನು ನಿಮ್ಮೆಲ್ಲರನ್ನೂ ಇಲ್ಲಿಗೆ ಕರೆಸಿದನು. ಮಹಾತ್ಮರಾದ

ನೀವೆಲ್ಲರೂ ರಾಕ್ಷಸರ ಮೇಲೆ ಆಕ್ರಮಣನಡೆಸಲು ಸಿದ್ಧರಾಗಿಯೇ ಇದ್ದಿರಿ. ಯುದ್ಧಸನ್ನದ್ಧರಾಗಿ ಬಂದ ನೀವು ಇಲ್ಲಿಯೇ ಬಹಳ ಕಾಲವನ್ನು ಕಳೆದಿರು ವಿರಿ. ಆದುದರಿಂದ ನೀವೆಲ್ಲರೂ ನಿಮ್ಮ ನಿಮ್ಮ ದೇಶಗಳಿಗೆ ಪ್ರಯಾಣ ಮಾಡುವುದು ಉಚಿತವೆಂದು ನಾನು ಭಾವಿಸುತ್ತೇನೆ.''

ಶ್ರೀರಾಮನ ಮಾತುಗಳನ್ನು ಕೇಳಿ ಹರ್ಷಪುಳಕಿತರಾದ ರಾಜರು ಪ್ರತ್ಯುತ್ತರಿಸಿದರು :

'' ರಾಘವ ! ಸೌಭಾಗ್ಯವಶದಿಂದ ನೀನು ವಿಜಯಿಯಾದೆ. ಸ್ವರಾಜ್ಯ ದಲ್ಲೂ ಪ್ರತಿಷ್ಠಿತನಾದೆ. ಸೌಭಾಗ್ಯವಶದಿಂದ ಶತ್ರುವು ಪರಾಜಿತನಾದನು. ಸೀತೆಯನ್ನೂ ಕರೆತಂದೆ. ಇದೇ ನಮ್ಮ ದೊಡ್ಡ ಆಸೆಯಾಗಿದ್ದಿತು. ಇದೇ ನಮ್ಮ ಸಂತೋಷವೂ ಆಗಿದ್ದಿತು. ಶತ್ರುನಾಶಕನಾದ ಮತ್ತು ವಿಜಯಿ ಯಾದ ನಿನ್ನನ್ನು ನಾವು ಪುನಃ ನೋಡಿದೆವಲ್ಲವೇ ! ಪ್ರಶಂಸೆಗೆ ಅರ್ಹ ನಾದವನೇ! ನಮ್ಮನ್ನು ಪ್ರಶಂಸೆಮಾಡಿದ್ದು ನಿನಗೆ ಯೋಗ್ಯವಾಗಿಯೇ ಇದೆ. ನಾವಂತೂ ಪ್ರಶಂಸೆಮಾಡುವ ಕಲೆಯನ್ನೇ ತಿಳಿದವರಾಗಿಲ್ಲ. ಈಗ ನಾವು ಪ್ರಯಾಣಮಾಡಲು ನಿನ್ನ ಅನುಜ್ಞೆಯನ್ನು ಬೇಡುತ್ತಿದ್ದೇವೆ. ನೀನು ನಮ್ಮ ಹೃದಯಗಳಲ್ಲಿ ಮನೆಮಾಡಿಕೊಂಡಿರುವೆ. ನಿನ್ನ ವಿಷಯದಲ್ಲಿ ಅತ್ಯಂತ ಪ್ರೀತಿಯಿಂದ ಕೂಡಿದವರಾಗಿ ಕಾಲವನ್ನು ಲೆಕ್ಕಿಸದೇ ಇಲ್ಲಿಯೇ ಇದ್ದು ಬಿಟ್ಟೆವು. ನಮ್ಮಲ್ಲಿ ನಿನಗೆ ಶಾಶ್ವತವಾದ ಪ್ರೀತಿಯು ನಿತ್ಯವಾಗಿರಲಿ.''

ರಾಜರ ಮಾತನ್ನು ಕೇಳಿ ಶ್ರೀರಾಮನು '**ಬಾಢಂ** – ಹಾಗೆಯೇ ಆಗಲಿ '– ಎಂದನು. ಅದರಿಂದ ರಾಜರಿಗೆ ಹೆಚ್ಚು ಸಂತೋಷವಾಯಿತು. ಪ್ರಯಾಣ ಮಾಡಲು ಉತ್ಸುಕರಾಗಿದ್ದ ರಾಜರೆಲ್ಲರೂ ಕೈ ಮುಗಿದುಕೊಂಡು ಶ್ರೀರಾಮನಿಗೆ ಹೇಳಿದರು : '' ಮಹಾರಾಜ ! ನಾವೀಗಲೇ ಪ್ರಯಾಣಹೊರಟಿದ್ದೇವೆ.''

ಹೀಗೆ ಶ್ರೀರಾಮನಿಂದ ಸಮ್ಮಾನಿತರಾದ ರಾಜರು ತಮ್ಮ –ತಮ್ಮ ದೇಶಗಳಿಗೆ ಪ್ರಯಾಣಮಾಡಿದರು.

38ನೆಯ ಸರ್ಗವು ಮುಗಿಯಿತು.

ರಾಜರೆಲ್ಲರೂ ಶ್ರೀರಾಮನಿಗೆ ಕಪ್ಪ-ಕಾಣಿಕೆಗಳನ್ನು ಅರ್ಪಿಸಿದುದು: ಶ್ರೀರಾಮನು ಅವೆಲ್ಲವನ್ನೂ ಮಿತ್ರರಿಗೂ, ವಾನರರಿಗೂ, ಕರಡಿಗಳಿಗೂ, ರಾಕ್ಷಸರಿಗೂ ಹಂಚಿಕೊಟ್ಟದು

ತೇ ಪ್ರಯಾತಾ ಮಹಾತ್ಮಾನಃ ಪಾರ್ಥಿವಾಸ್ತೇ ಪ್ರಹೃಷ್ಟವತ್ ।
ಗಜವಾಜಿಸಹಸ್ರೌಘೈಃ ಕಮ್ಪಯನ್ತೋ ವಸುನ್ಧರಾಮ್ ॥1॥

ಮಹಾತ್ಮರಾದ ಆ ರಾಜರೆಲ್ಲರೂ ಸಾವಿರಾರು ಆನೆ -ಕುದುರೆ -ಕಾಲಾಳುಗಳಿಂದ ಸಮಾವೃತರಾಗಿ ಪರಮಹೃಷ್ಟರಾಗಿ ಭೂಮಿಯನ್ನೇ ನಡುಗಿಸುತ್ತಾ ಅಯೋಧ್ಯೆಯಿಂದ ಹೊರಟರು.

ಭರತನ ಆಜ್ಞಾನುಸಾರವಾಗಿ ಶ್ರೀರಾಮನಿಗೆ ಯುದ್ಧದಲ್ಲಿ ಸಹಾಯ ಮಾಡಬೇಕೆನ್ನುವ ಆಶಯದಿಂದ ಪ್ರಹೃಷ್ಟರಾದ ಸೈನಿಕರಿಂದಲೂ, ವಾಹನಗಳಿಂದಲೂ ಕೂಡಿದ ಹಲವಾರು ಅಕ್ಷೌಹಿಣೀಸೈನ್ಯಗಳು ಯುದ್ಧಸನ್ನದ್ಧವಾಗಿ ಅಲ್ಲಿಗೆ ಆಗಮಿಸಿದ್ದುವು. ಬಲದಿಂದಲೂ ದರ್ಪದಿಂದಲೂ ಕೂಡಿದ್ದ ಆ ಮಹೀಪಾಲರು ನಿರಾಶರಾಗಿ ಹೇಳಿದರು :

ನ ರಾಮ ರಾವಣಂ ಯುದ್ಧೇ ಪಶ್ಯಾಮಃ ಪುರತಃ ಸ್ಥಿತಮ್ ॥3॥

'' ರಾಘವ! ನೀನೂ ಮತ್ತು ರಾವಣನೂ ಎದುರು-ಬದುರಾಗಿ ನಿಂತು ಯುದ್ಧ ಮಾಡುವುದನ್ನು ನಾವು ನೋಡಲಾಗಲಿಲ್ಲ.

ಭರತೇನ ವಯಂ ಪಶ್ಚಾತ್ಸಮಾನೀತಾ ನಿರರ್ಥಕಮ್ ।
ಹತಾ ಹಿ ರಾಕ್ಷಸಾಃ ಕ್ಷಿಪ್ರಂ ಪಾರ್ಥಿವೈಃ ಸ್ಯುರ್ನ ಸಂಶಯಃ ॥4॥

ಭರತನು ಮೊದಲೇ ನಮಗೆ ಸೂಚನೆಯನ್ನು ಕೊಡಲಿಲ್ಲ. ಯುದ್ಧವೆಲ್ಲವೂ ಮುಗಿದ ಬಳಿಕ ಹೇಳಿಕಳುಹಿಸಿದ್ದು ನಿರರ್ಥಕ. ರಾಜರಾದ ನಾವೆಲ್ಲರೂ ನಮ್ಮ ಅಕ್ಷೌಹಿಣೀಸೈನ್ಯಗಳೊಡನೆ ಮೊದಲೇ ಅಲ್ಲಿಗೆ ಹೋಗಿಬಿಟ್ಟಿದ್ದಿದ್ದರೆ ರಾಕ್ಷಸರು ಬಹಳ ಬೇಗ ವಿನಾಶಹೊಂದುತ್ತಿದ್ದರು. ರಾಮ-ಲಕ್ಷ್ಮಣರ ಬಾಹುಬಲದಿಂದ ಸುರಕ್ಷಿತರಾದ ನಾವು ನಿಶ್ಚಿಂತರಾಗಿ ಸಮುದ್ರದ ಆಚೆಯ ದಡದಲ್ಲಿ ಸುಖವಾಗಿ ಯುದ್ಧಮಾಡಬಹುದಾಗಿದ್ದಿತು.''

ಇವೇ ಮುಂತಾಗಿ ಹೇಳಿಕೊಂಡು ಸಾವಿರಾರು ರಾಜರು ಸಂತೋಷ ದಿಂದ ತಮ್ಮ-ತಮ್ಮ ರಾಜ್ಯಗಳಿಗೆ ತೆರಳಿದರು.

ಎಲ್ಲ ಪ್ರಕಾರಗಳಿಂದಲೂ ಅಭಿವೃದ್ಧಿಯನ್ನು ಹೊಂದಿದ್ದ, ಆನಂದ ದಿಂದಲೂ ಸುಖದಿಂದಲೂ ಸಂಪನ್ನವಾಗಿದ್ದ, ಧನ-ಧಾನ್ಯಗಳಿಂದ ಸಮೃದ್ಧ ವಾಗಿದ್ದ, ಐಶ್ವರ್ಯದಿಂದ ಸಂಪನ್ನವಾಗಿದ್ದ ತಮ್ಮ ದೇಶಗಳಿಗೆ ಹೋದ ನಂತರ ಆ ಸಾಮಂತರಾಜರು ಶ್ರೀರಾಮನಿಗೆ ಪ್ರಿಯವನ್ನುಂಟುಮಾಡುವ ಇಚ್ಛೆಯಿಂದ ವಿಧ-ವಿಧವಾದ ರತ್ನಗಳನ್ನೂ, ಕುದುರೆಗಳನ್ನೂ, ಪಲ್ಲಕ್ಕಿ ಗಳನ್ನೂ, ಮದಿಸಿದ ಆನೆಗಳನ್ನೂ, ದಿವ್ಯಾಭರಣಗಳನ್ನೂ, ಮಣಿ-ಮುತ್ತು-ಹವಳಗಳನ್ನೂ, ರೂಪವತಿಯರಾದ ದಾಸಿಯರನ್ನೂ, ಆಡು-ಕುರಿಗಳನ್ನೂ, ವಿಧ-ವಿಧವಾದ ರಥಗಳನ್ನೂ, ಕಪ್ಪ-ಕಾಣಿಕೆಗಳ ರೂಪದಲ್ಲಿ ಕಳುಹಿಸಿಕೊಟ್ಟರು. ಭರತ-ಲಕ್ಷ್ಮಣ-ಶತ್ರುಘ್ನರು ಆ ಅಪಾರವಾದ ಐಶ್ವರ್ಯ ವನ್ನು ತೆಗೆದುಕೊಂಡು ಅಯೋಧ್ಯೆಗೆ ಆಗಮಿಸಿದರು. ಅಯೋಧ್ಯೆಗೆ ಬಂದ ನಂತರ ಪುರುಷಶ್ರೇಷ್ಠರಾದ ಭರತ-ಲಕ್ಷ್ಮಣ-ಶತ್ರುಘ್ನರು ವಿಚಿತ್ರತರವಾಗಿದ್ದ ಆ ಎಲ್ಲ ರತ್ನಗಳನ್ನೂ ಶ್ರೀರಾಮನಿಗೆ ಸಮರ್ಪಿಸಿದರು.

ಶ್ರೀರಾಮನು ಆ ಎಲ್ಲ ಐಶ್ವರ್ಯವನ್ನೂ ಸ್ವೀಕರಿಸಿ ಉಪಕಾರವೆಸಗಿದ್ದ ವಾನರರಾಜನಾದ ಸುಗ್ರೀವನಿಗೂ, ರಾಕ್ಷಸರಾಜನಾದ ವಿಭೀಷಣನಿಗೂ, ಇತರ ರಾಕ್ಷಸರಿಗೂ ಮತ್ತು ವಾನರರಿಗೂ ಆ ಐಶ್ವರ್ಯವನ್ನು ಅತ್ಯಂತ ಪ್ರಸನ್ನತೆಯಿಂದ ಹಂಚಿಕೊಟ್ಟನು. ಅವರೆಲ್ಲರ ಸಹಾಯವನ್ನು ಪಡೆದು ಯುದ್ಧದಲ್ಲಿ ಜಯಗಳಿಸಿದ್ದನಲ್ಲವೇ ? ಶ್ರೀರಾಮನಿಂದ ಕೊಡಲ್ಪಟ್ಟ ಆ ಐಶ್ವರ್ಯವನ್ನು ಕಪಿ-ರಾಕ್ಷಸರಲ್ಲಿ ಕೆಲವರು ತಲೆಯ ಮೇಲೆ ಹೊತ್ತುಕೊಂಡರು. ಕೆಲವರು ಭುಜಗಳ ಮೇಲಿರಿಸಿಕೊಂಡರು.

ಅನಂತರ ಇಕ್ಷ್ವಾಕು ವಂಶದ ರಾಜನಾದ, ಮಹಾರಥನಾದ, ವೀರನಾದ, ಮಹಾಬಾಹುವಾದ, ಕಮಲಾಕ್ಷನಾದ ಶ್ರೀರಾಮನು ಅಂಗದನನ್ನೂ ಮತ್ತು ಹನುಮಂತನನ್ನೂ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸುಗ್ರೀವನಿಗೆ ಹೇಳಿದನು:

'' ಸುಗ್ರೀವ ! ಈ ಅಂಗದನು ನಿನ್ನ ಸುಪುತ್ರನಾಗಿದ್ದಾನೆ. ಈ ಪವನ ಕುಮಾರನು ನಿನ್ನ ಮಂತ್ರಿಯಾಗಿದ್ದಾನೆ. ಇವರಿಬ್ಬರೂ ಮಂತ್ರಾಲೋಚನೆ

ಗಳಲ್ಲಿಯೂ ಭಾಗವಹಿಸಿ ನನಗೆ ಉತ್ತಮವಾದ ಸಲಹೆಗಳನ್ನು ನೀಡುತ್ತಿದ್ದರು ಮತ್ತು ನನ್ನ ಹಿತದಲ್ಲಿಯೇ ಸದಾ ನಿರತರಾಗಿರುತ್ತಿದ್ದರು. ನಿನ್ನ ಸಲುವಾಗಿ ಈ ಎಲ್ಲ ಕಾರ್ಯಗಳನ್ನೂ ಮಾಡಿರುವ ಇವರು ವಿಧ-ವಿಧವಾದ ಸತ್ಕಾರಕ್ಕೆ ಯೋಗ್ಯರಾಗಿದ್ದಾರೆ.''

ಮಹಾಯಶೋವಂತನಾದ ಶ್ರೀರಾಮನು ಹೀಗೆ ಹೇಳಿ ತನ್ನ ಶರೀರದಲ್ಲಿದ್ದ ಆಭರಣಗಳೆಲ್ಲವನ್ನೂ ತೆಗೆದು ಅಂಗದನಿಗೂ ಹನುಮಂತನಿಗೂ ತೊಡಿಸಿದನು.

ಅನಂತರ ಶ್ರೀರಾಮನು ಮಹಾವೀರ್ಯರಾದ ಸುಗ್ರೀವನ ಸೇನಾನಾಯಕರಾದ ನೀಲ, ನಲ, ಕೇಸರೀ, ಕುಮುದ, ಗಂಧಮಾದನ, ಸುಷೇಣ, ಪನಸ, ಮೈಂದ, ದ್ವಿವಿದ, ಜಾಂಬವಂತ, ಗವಾಕ್ಷ, ವಿನತ, ಧೂಮ್ರ, ವಲೀಮುಖ, ಪ್ರಜಂಘ, ಮಹಾಬಲನಾದ ಸನ್ನಾದ, ದರೀಮುಖ, ದಧಿಮುಖ, ಇಂದ್ರಜಾನು ಇವರೇ ಮುಂತಾದವರನ್ನು ದಿಟ್ಟಿಸಿನೋಡುತ್ತಾ ಮಧುರವಾದ ಮತ್ತು ಮೃದುವಾದ ಈ ಮಾತುಗಳನ್ನು ಹೇಳಿದನು :

'' ವಾನರವೀರರೇ! ನೀವೆಲ್ಲರೂ ನನ್ನ ಸುಹೃದರೂ ಸಹೋದರರೂ ಆಗಿರುವಿರಿ. ನನ್ನ ಶರೀರವೇ ಆಗಿರುವಿರಿ. ವನವಾಸಿಗಳೇ! ನೀವು ನನ್ನನ್ನು ವ್ಯಸನದಿಂದ ಉದ್ಧರಿಸಿರುವಿರಿ. ಸುಹೃದಶ್ರೇಷ್ಠರಾದ ನಿಮ್ಮನ್ನು ಹೊಂದಿರುವ ಸುಗ್ರೀವನು ನಿಶ್ಚಯವಾಗಿಯೂ ಧನ್ಯನೇ ಸರಿ.''

ಹೀಗೆ ಹೇಳುತ್ತಾ ಶ್ರೀರಾಮನು ಅವರೆಲ್ಲರಿಗೂ ಯಥಾಯೋಗ್ಯವಾಗಿ ಆಭರಣಗಳನ್ನೂ ಬಹುಮೂಲ್ಯವಾದ ವಜ್ರ-ವೈಡೂರ್ಯಗಳನ್ನೂ ಕೊಟ್ಟು ಒಬ್ಬೊಬ್ಬರನ್ನಾಗಿ ಆಲಿಂಗಿಸಿಕೊಂಡನು.

ಜೇನುತುಪ್ಪದಂತೆ ಪಿಂಗಲವರ್ಣದವರಾಗಿದ್ದ ಆ ವಾನರರು ಶ್ರೀರಾಮನ ಅರಮನೆಯಲ್ಲಿ ಸುಗಂಧಯುಕ್ತವಾಗಿದ್ದ ಮಧುವನ್ನು ಪಾನ ಮಾಡುತ್ತಾ, ರಾಜಭೋಗಯೋಗ್ಯವಾದ ವಸ್ತುಗಳನ್ನು ಉಪಭೋಗಿಸುತ್ತಾ, ಮೂಲ-ಫಲಗಳನ್ನು ಭಕ್ಷಿಸುತ್ತಾ ಆನಂದದಿಂದ ಕಾಲಕಳೆಯುತ್ತಿದ್ದರು. ಹೀಗೆ ಆನಂದ ತುಂದಿಲರಾಗಿ ಅಯೋಧ್ಯೆಯಲ್ಲಿ ವಾನರರು ವಾಸಮಾಡುತ್ತಿದ್ದಂತೆ ಒಂದು ತಿಂಗಳಿಗೂ ಹೆಚ್ಚು ದಿವಸಗಳು ಕಳೆದುಹೋದುವು. ಶ್ರೀರಾಮನ ಮೇಲಿದ್ದ

ಭಕ್ತಿಯ ಕಾರಣದಿಂದಾಗಿ ಆ ವಾನರರಿಗೆ ಮುಹೂರ್ತಕಾಲವು ಮಾತ್ರ ಕಳೆದಿರುವಂತೆ ಭಾಸವಾಯಿತು. ತಿಂಗಳನ್ನು ಅವರು ಒಂದು ಮುಹೂರ್ತದಂತೆ ಕಳೆದುಬಿಟ್ಟರು. ದಿವಸಗಳು ಕಳೆದ ಅರಿವೇ ಅವರಿಗಿರಲಿಲ್ಲ. ಶ್ರೀರಾಮನು ಕೂಡ ಕಾಮರೂಪಿಗಳಾದ ವಾನರರೊಡನೆಯೂ, ಮಹಾವೀರ್ಯರಾದ ರಾಕ್ಷಸರೊಡನೆಯೂ, ಮಹಾಬಲರಾದ ಋಕ್ಷರಾಜರೊಡನೆಯೂ ಆನಂದದಿಂದ ಕಾಲಕಳೆದನು. ಹೀಗೆ ಶ್ರೀರಾಮನ ಆತಿಥ್ಯದಲ್ಲಿದ್ದ ವಾನರ -ರಾಕ್ಷಸರಿಗೆ ಶಿಶಿರರ್ತುವಿನ ಎರಡನೆಯ ತಿಂಗಳೂ ಸುಖವಾಗಿ ಕಳೆದುಹೋಯಿತು. ಇಕ್ಷ್ವಾಕುನರೇಶನ ರಮ್ಯವಾದ ಆ ರಾಜಧಾನಿಯಲ್ಲಿ ವಾನರ -ರಾಕ್ಷಸರು ಪ್ರೀತಿಯಿಂದಲೂ ಸ್ನೇಹದಿಂದಲೂ ಕೂಡಿದವರಾಗಿ ಕಾಲಕಳೆಯುತ್ತಿದ್ದರು. ಶ್ರೀರಾಮನ ಪ್ರೇಮಪೂರ್ವಕವಾದ ಸತ್ಕಾರದಿಂದ ಅವರೆಲ್ಲರೂ ಅತ್ಯಂತ ಸುಖದಿಂದ ಆ ದಿವಸಗಳನ್ನು ಕಳೆದರು.

39ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 40ನೆಯ ಸರ್ಗ

ವಾನರ -ಋಕ್ಷ-ರಾಕ್ಷಸರನ್ನು ಶ್ರೀರಾಮನು ಕಳುಹಿಸಿಕೊಟ್ಟುದು

ತಥಾ ಸ್ಮ ತೇಷಾಂ ವಸತಾಮೃಕ್ಷವಾನರರಕ್ಷಸಾಮ್ ।
ರಾಘವಸ್ತು ಮಹಾತೇಜಾಃ ಸುಗ್ರೀವಮಿದಮಬ್ರವೀತ್ ॥1॥

ಹೀಗೆ ಋಕ್ಷ-ವಾನರ -ರಾಕ್ಷಸರು ಅಯೋಧ್ಯೆಯಲ್ಲಿ ಸುಖದಿಂದ ಕಾಲಕಳೆಯುತ್ತಿರುವಾಗ ಮಹಾತೇಜಸ್ವಿಯಾದ ಶ್ರೀರಾಮನು ಸುಗ್ರೀವನಿಗೆ ಹೇಳಿದನು :

'' ಸುಗ್ರೀವ ! ದೇವತೆಗಳಿಂದಲೂ ಮತ್ತು ಅಸುರರಿಂದಲೂ ಆಕ್ರಮಿಸಲು ಅಸಾಧ್ಯವಾದ ಕಿಷ್ಕಿಂಧಾಪಟ್ಟಣಕ್ಕೆ ಪ್ರಯಾಣಮಾಡು. ನಿಷ್ಕಂಟಕವಾಗಿರುವ ಆ ನಿನ್ನ ರಾಜ್ಯವನ್ನು ಅಮಾತ್ಯರೊಡನೆ ಪರಿಪಾಲಿಸು. ಅಂಗದ-ಹನುಮಂತರನ್ನು ನೀನು ಪ್ರೀತಿಪೂರ್ವಕವಾಗಿ ನೋಡಿಕೊಳ್ಳಬೇಕು. ಅಂತೆಯೇ ಮಹಾಬಲನಾದ ನಲ, ನಿನ್ನ ಮಾವನಾದ ವೀರಸುಷೇಣ, ಬಲಿಷ್ಠರಲ್ಲಿ ಶ್ರೇಷ್ಠನಾದ ತಾರ, ಎದುರಿಸಲು ಅಸಾಧ್ಯನಾದ ಕುಮುದ, ಮಹಾಬಲನಾದ ನೀಲ, ವೀರನಾದ ಶತಬಲಿ, ಮೈಂದ, ದ್ವಿವಿದ, ಗಜ,

ಗವಾಕ್ಷ, ಗವಯ, ಮಹಾಬಲನಾದ ಶರಭ, ಎದುರಿಸಲು ಅಸಾಧ್ಯನಾದ ಋಕ್ಷರಾಜ ನಾದ ಜಾಂಬವಂತ, ಗಂಧಮಾದನ – ಇವರೆಲ್ಲರನ್ನೂ ನೀನು ಪ್ರೇಮಪೂರ್ವಕ ವಾಗಿ ನೋಡಿಕೊಳ್ಳಬೇಕು. ಮಹಾಪರಾಕ್ರಮಿಯಾದ ಋಷಭ, ವಾನರಶ್ರೇಷ್ಠರಾದ ಸುಪಾಟಲ, ಕೇಸರೀ, ಶರಭ, ಶುಂಭ, ಮಹಾಬಲನಾದ ಶಂಖಚೂಡ – ಇವರೆಲ್ಲರನ್ನೂ ಪ್ರೀತಿಯಿಂದ ಕಾಣಬೇಕು. ಇವರೇ ಅಲ್ಲದೆ ಯಾವ ಯಾವ ವಾನರ ಮಹಾತ್ಮರು ತಮ್ಮ ಜೀವವನ್ನೇ ಒತ್ತೆಯಿಟ್ಟು ನನ್ನ ಸಲುವಾಗಿ ಯುದ್ಧ ಮಾಡಿದರೋ – ಅವರೆಲ್ಲರನ್ನೂ ನೀನು ಪ್ರೀತಿಯಿಂದ ನೋಡಿಕೊಳ್ಳಬೇಕು. ಯಾವುದೇ ಕಾರಣದಿಂದಲೂ ಅವರಿಗೆ ಅಪ್ರಿಯವನ್ನುಂಟು ಮಾಡಬಾರದು.''

ಶ್ರೀರಾಮನು ಸುಗ್ರೀವನಿಗೆ ಹೀಗೆ ಹೇಳಿ ಅವನನ್ನು ಪುನಃ –ಪುನಃ ಗಾಢವಾಗಿ ಆಲಿಂಗಿಸಿಕೊಂಡನು. ಬಳಿಕ ವಿಭೀಷಣನಿಗೆ ಸುಮಧುರವಾದ ಈ ಮಾತನ್ನು ಹೇಳಿದನು :

''ವಿಭೀಷಣ ! ಲಂಕಾಪಟ್ಟಣವನ್ನು ಧರ್ಮದಿಂದ ಶಾಸನಮಾಡು. ನೀನು ಧರ್ಮವನ್ನು ತಿಳಿದಿರುವೆಯೆಂಬುದು ನನ್ನ ಅಭಿಪ್ರಾಯವಾಗಿದೆ. ನಿನ್ನ ಪಟ್ಟಣದಲ್ಲಿರುವ ರಾಕ್ಷಸರಿಗೂ ಮತ್ತು ನಿನ್ನ ಅಣ್ಣ ಕುಬೇರನಿಗೂ ನಿನ್ನ ವಿಷಯದಲ್ಲಿ ಇದೇ ಅಭಿಪ್ರಾಯವಿದೆ.

ಮಾ ಚ ಬುದ್ಧಿಮಧರ್ಮೇ ತ್ವಂ ಕುರ್ಯಾ ರಾಜನ್ಕಥಂಚನ ।
ಬುದ್ಧಿಮನ್ತೋ ಹಿ ರಾಜಾನೋ ಧ್ರುವಮಶ್ನನ್ತಿ ಮೇದಿನೀಮ್ ॥

ಯಾವುದೇ ಕಾರಣದಿಂದಲೂ ನಿನ್ನ ಬುದ್ಧಿಯು ಅಧರ್ಮದ ಕಡೆಗೆ ತಿರುಗದಿರಲಿ. ಬುದ್ಧಿವಂತರಾದ ರಾಜರು ನಿಶ್ಚಯವಾಗಿಯೂ ಬಹಳ ಕಾಲದವರೆಗೂ ರಾಜ್ಯಭೋಗವನ್ನು ಉಪಭೋಗಿಸುತ್ತಾರೆ.

ಸುಗ್ರೀವಸಹಿತನಾದ ನನ್ನನ್ನು ನೀನು ಯಾವಾಗಲೂ ಸ್ಮರಿಸುತ್ತಿರು. ನೀನೀಗ ಯಾವ ವಿಧವಾದ ಚಿಂತೆಯೂ ಇಲ್ಲದೇ ಪ್ರಯಾಣ ಮಾಡು.''

ಶ್ರೀರಾಮನ ಮಾತನ್ನು ಕೇಳಿ ಋಕ್ಷ–ವಾನರ– ರಾಕ್ಷಸರು 'ಸಾಧು ರಾಘವ ! ಸಾಧು' ಎಂದೆನ್ನುತ್ತಾ ಶ್ರೀರಾಮನನ್ನು ಪುನಃ ಪುನಃ ಪ್ರಶಂಸಿಸಿದರು.

ತವ ಬುದ್ಧಿರ್ಮಹಾಬಾಹೋ ವೀರ್ಯಮದ್ಭುತಮೇವ ಚ ।
ಮಾಧುರ್ಯಂ ಪರಮಂ ರಾಮ ಸ್ವಯಂಭೋರಿವ ನಿತ್ಯದಾ ॥14॥

''ಮಹಾಬಾಹುವೇ ! ರಾಘವ ! ಸ್ವಯಂಭೂಬ್ರಹ್ಮನಂತೆ ನಿನ್ನ ಸ್ವಭಾವದಲ್ಲಿ ಅಲೌಕಿಕವಾದ ಮಾಧುರ್ಯವಿದೆ. ನಿನ್ನ ಬುದ್ಧಿಮತ್ತೆ ಮತ್ತು ಪರಾಕ್ರಮಗಳು ಅದ್ಭುತವಾದುವುಗಳು.''

ಋಕ್ಷ–ವಾನರ –ರಾಕ್ಷಸರು ಶ್ರೀರಾಮನನ್ನು ಹೀಗೆ ಪ್ರಶಂಸಿಸುತ್ತಿರಲು ಹನುಮಂತನು ವಿನಮ್ರನಾಗಿ ಶ್ರೀರಾಮನಿಗೆ ಹೇಳಿದನು :

ಸ್ನೇಹೋ ಮೇ ಪರಮೋ ರಾಜಂಸ್ತ್ವಯಿ ತಿಷ್ಠತು ನಿತ್ಯದಾ ।
ಭಕ್ತಿಶ್ಚ ನಿಯತಾ ವೀರ ಭಾವೋ ನಾನ್ಯತ್ರ ಗಚ್ಛತು ॥16॥

'' ವೀರನೇ! ನನ್ನ ಪ್ರೀತಿಯು ನಿನ್ನಲ್ಲಿಯೇ ಶಾಶ್ವತವಾಗಿ ಉಳಿಯಲಿ. ನನ್ನ ಭಕ್ತಿಯೂ ನಿನ್ನಲ್ಲಿ ನಿಶ್ಚಲವಾಗಿರಲಿ. ನನ್ನ ಆಂತರಿಕವಾದ ಅನು ರಾಗವು ನಿನ್ನ ಹೊರತು ಬೇರೆಲ್ಲಿಗೂ ಹೋಗದಿರಲಿ.

ಯಾವದ್ರಾಮಕಥಾ ವೀರ ಚರಿಷ್ಯತಿ ಮಹೀತಲೇ ।
ತಾವಚ್ಛರೀರೇ ವತ್ಸ್ಯಂತು ಪ್ರಾಣಾ ಮಮ ನ ಸಂಶಯಃ ॥17॥

ಈ ಭೂಮಂಡಲದಲ್ಲಿ ಎಂದಿನವರೆಗೆ ರಾಮಕಥೆಯು ಪ್ರಚಲಿತ ವಾಗಿರುವುದೋ - ಅಂದಿನವರೆಗೂ ಯಾವ ಶಂಕೆಯೂ ಇಲ್ಲದೇ ನನ್ನ ಪ್ರಾಣಗಳು ಈ ಶರೀರದಲ್ಲಿಯೇ ಉಳಿದಿರಲಿ.

ಯಚ್ಚೈತಚ್ಚರಿತಂ ದಿವ್ಯಂ ಕಥಾ ತೇ ರಘುನನ್ದನ ।
ತನ್ಮಮಾಪ್ಸರಸೋ ರಾಮ ಶ್ರಾವಯೇಯುರ್ನರರ್ಷಭ ॥18॥

ರಘುಕುಲನಂದನನೇ! ನರಶ್ರೇಷ್ಠನೇ! ರಾಘವ! ನಿನ್ನ ದಿವ್ಯವಾದ ಈ ಚರಿತ್ರೆಯನ್ನು ಅಪ್ಸರೆಯರು ನನ್ನ ಕಿವಿಗಳಿಗೆ ಬೀಳುವಂತೆ ಯಾವಾಗಲೂ ಹಾಡಿಹೊಗಳುತ್ತಿರಲಿ.

ತಚ್ಛ್ರುತ್ವಾಹಂ ತತೋ ವೀರ ತವ ಚರ್ಯಾಮೃತಂ ಪ್ರಭೋ ।
ಉತ್ಕಣ್ಠಾಂ ತಾಂ ಹರಿಷ್ಯಾಮಿ ಮೇಘಲೇಖಾಮಿವಾನಿಲಃ ॥ 19॥

ಪ್ರಭುವೇ! ನಿನ್ನ ಚರಿತಾಮೃತವನ್ನು ಕೇಳುತ್ತಾ ನಿನ್ನನ್ನು ಯಾವಾಗಲೂ

ನೋಡುತ್ತಿರಬೇಕೆಂಬ ನನ್ನ ಔತ್ಸುಕ್ಯವನ್ನು ವಾಯುವು ಮೇಘಗಳ ಸಾಲನ್ನು ದೂರಕ್ಕೆ ಹಾರಿಸಿಕೊಂಡು ಹೋಗುವಂತೆ - ಹೋಗಲಾಡಿಸಿ ಕೊಳ್ಳುವೆನು.''

ಹೀಗೆ ಹೇಳುತ್ತಿದ್ದ ಹನುಮಂತನನ್ನು ಶ್ರೀರಾಮನು ಸಿಂಹಾಸನದಿಂದ ಮೇಲೆದ್ದು ಸ್ನೇಹಪೂರ್ವಕವಾಗಿ ತಬ್ಬಿಕೊಂಡು ಹೇಳಿದನು :

'' ಕಪಿಶ್ರೇಷ್ಠನೇ ! ಎಲ್ಲವೂ ನೀನು ಹೇಳಿದಂತೆಯೇ ನಡೆಯುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಈ ಪ್ರಪಂಚದಲ್ಲಿ ನನ್ನ ಕಥೆಯು ಪ್ರಚಲಿತ ವಾಗಿರುವವರೆಗೆ ನಿನ್ನ ಕೀರ್ತಿಯೂ ಉಳಿದಿರುತ್ತದೆ. ನಿನ್ನ ಪ್ರಾಣಗಳೂ ನಿನ್ನ ಶರೀರದಲ್ಲಿ ಉಳಿದಿರುತ್ತವೆ.

ಲೋಕಾ ಹಿ ಯಾವತ್ಸ್ಥಾಸ್ಯನ್ತಿ ತಾವತ್ಸ್ಥಾಸ್ಯನ್ತಿ ಮೇ ಕಥಾಃ ॥

ಜಗತ್ತು ಇರುವವರೆಗೂ ನನ್ನ ಕಥೆಯೂ ಎಲ್ಲ ಲೋಕಗಳಲ್ಲಿಯೂ ಪ್ರಚಲಿತವಾಗಿರುತ್ತದೆ.

ಏಕೈಕಸ್ಯೋಪಕಾರಸ್ಯ ಪ್ರಾಣಾನ್ದಾಸ್ಯಾಮಿ ತೇ ಕಪೇ ।
ಶೇಷಸ್ಯೇಹೋಪಕಾರಾಣಾಂ ಭವಾಮ ಋಣಿನೋ ವಯಮ್ ॥

ನೀನು ಮಾಡಿರುವ ಒಂದೊಂದು ಉಪಕಾರವನ್ನೂ ಪ್ರಾಣದ ಹಂಗನ್ನೂ ತೊರೆದು ತೀರಿಸಬೇಕಾಗಿದೆ. ಎಲ್ಲ ಉಪಕಾರಗಳನ್ನೂ ತೀರಿಸುವುದೆಂತು? ಉಳಿದ ನಿನ್ನ ಉಪಕಾರಗಳಿಗೆ ಋಣಿಗಳಾಗಿಯೇ ಇರುತ್ತೇವೆ.

ಮದಙ್ಗೇ ಜೀರ್ಣತಾಂ ಯಾತು ಯತ್ತ್ವಯೋಪಕೃತಂ ಕಪೇ ।
ನರಃ ಪ್ರತ್ಯುಪಕಾರಾಣಾಮಾಪತ್ಸ್ವಾಯಾತಿ ಪಾತ್ರತಾಮ್ ॥24॥
ನರಃ ಪ್ರತ್ಯುಪಕಾರಾರ್ಥೀ ವಿಪತ್ತಿಮಭಿಕಾಂಕ್ಷತಿ ।

ಹನುಮಂತ ! ನೀನು ಮಾಡಿರುವ ಉಪಕಾರಗಳೆಲ್ಲವೂ ನನ್ನ ಶರೀರ ದಲ್ಲಿಯೇ ಜೀರ್ಣವಾಗಿ ಹೋಗಲಿ. ನಿನಗೆ ಪ್ರತ್ಯುಪಕಾರ ಮಾಡಬೇಕೆಂಬ ಭಾವನೆಯೇ ನನಗೆ ಬರುವುದು ಬೇಡ. ಪ್ರತ್ಯುಪಕಾರವನ್ನು ಮಾಡಲು ಇಚ್ಛಿಸುವ ಮನುಷ್ಯನು ತನಗೆ ಉಪಕಾರಮಾಡಿದ ಮನುಷ್ಯನಿಗೆ ಆಪತ್ತನ್ನು ನಿರೀಕ್ಷಿಸುತ್ತಿರಬೇಕಾಗುತ್ತದೆ. ಆದುದರಿಂದ ನಿನಗೆ ಆಪತ್ತು ಉಂಟಾಗ ಲೆಂದಾಗಲೀ ನೀನು ಮಾಡಿರುವ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡ

ಬೇಕೆಂದಾಗಲೀ ನಾನು ಆಶಿಸುವುದೇ ಇಲ್ಲ. ನೀನು ಮಾಡಿರುವ ಉಪಕಾರವು ನನ್ನಲ್ಲಿಯೇ ಜೀರ್ಣವಾಗಿ ಹೋಗಲಿ.''

ಶ್ರೀರಾಮನು ಹೀಗೆ ಹೇಳಿ ಚಂದ್ರನಂತೆಯೇ ಪರಮೋಜ್ಜ್ವಲವಾಗಿದ್ದ ವೈಡೂರ್ಯಮಣಿಯಿಂದ ಕೂಡಿ ಫಳ-ಫಳಿಸುತ್ತಿದ್ದ ಚಂದ್ರಹಾರವನ್ನು ಕುತ್ತಿಗೆಯಿಂದ ತೆಗೆದು ಹನುಮಂತನ ಕುತ್ತಿಗೆಗೆ ಹಾಕಿದನು. ವಕ್ಷಃಸ್ಥಳದಲ್ಲಿ ಶೋಭಾಯಮಾನವಾಗಿ ಕಾಣುತ್ತಿದ್ದ ಆ ಹಾರದಿಂದ ಸಮಲಂಕೃತನಾಗಿದ್ದ ಹನುಮಂತನು ಚಂದ್ರನಿಂದ ಆಕ್ರಾಂತವಾದ ಸುವರ್ಣಮಯವಾದ ಮೇರುಪರ್ವತದ ಶಿಖರದಂತೆಯೇ ಪ್ರಕಾಶಿಸಿದನು. ಎಲ್ಲರೂ ತಮ್ಮ ದೇಶಗಳಿಗೆ ಪ್ರಯಾಣಮಾಡಬಹುದೆಂಬ ಶ್ರೀರಾಮನ ಮಾತನ್ನು ಕೇಳುತ್ತಲೇ ಋಕ್ಷ-ವಾನರ-ರಾಕ್ಷಸರೆಲ್ಲರೂ ಒಬ್ಬೊಬ್ಬರಾಗಿ ಮೇಲೆದ್ದು ಶ್ರೀರಾಮನ ಪಾದಗಳಿಗೆ ನಮಸ್ಕರಿಸಿ ಸಭಾಭವನದಿಂದ ಹೊರಹೊರಟರು. ಸುಗ್ರೀವನೂ ಮತ್ತು ಧರ್ಮಾತ್ಮನಾದ ವಿಭೀಷಣನೂ ಬಹಳ ಹೊತ್ತಿನವರೆಗೆ ಶ್ರೀರಾಮನನ್ನು ಆಲಿಂಗಿಸಿಕೊಂಡಿದ್ದು ಅವನ ಅನುಮತಿಯನ್ನು ಪಡೆದು ಹೊರಹೊರಟರು. ಆದರೆ ಶ್ರೀರಾಮನನ್ನು ಬಿಟ್ಟುಹೋಗಬೇಕೆಂಬ ವ್ಯಥೆಯಿಂದಾಗಿ ಎಲ್ಲರ ಕಣ್ಣುಗಳಲ್ಲಿಯೂ ನೀರುತುಂಬಿಕೊಂಡಿತು. ಶ್ರೀರಾಮನನ್ನು ಬಿಟ್ಟು ಹೋಗುವ ಸಮಯದಲ್ಲಿ ಎಲ್ಲರೂ ದುಃಖಿಗಳಾಗಿದ್ದರು. ಮುಂದೇನು ಮಾಡ ಬೇಕೆಂಬುದೇ ಅವರಿಗೆ ತಿಳಿಯುತ್ತಿರಲಿಲ್ಲ. ಬುದ್ಧಿಗೆಟ್ಟಿದ್ದರು. ಒಬ್ಬರ ಬಾಯಿಂದಲೂ ಮಾತೇ ಹೊರಡುತ್ತಿರಲಿಲ್ಲ. ಎಲ್ಲರ ಕಣ್ಣುಗಳಿಂದಲೂ ಕಂಬನಿಯು ಮಾತ್ರ ಉಕ್ಕುಕ್ಕಿ ಹರಿಯುತ್ತಿದ್ದಿತು. ಮಹಾತ್ಮನಾದ ರಾಘವನು ಪ್ರಸನ್ನತೆಯಿಂದ ಅವರೆಲ್ಲರನ್ನೂ ಕಳುಹಿಸಿಕೊಟ್ಟನಂತರ ಜೀವಾತ್ಮನು ತನಗೆ ಇಚ್ಛೆಯಿಲ್ಲದಿದ್ದರೂ ಕಾಲವು ಸನ್ನಿಹಿತವಾದೊಡನೆಯೇ ದೇಹವನ್ನು ತ್ಯಜಿಸಿ ಹೊರಟುಹೋಗುವಂತೆ - ತಮಗೆ ಇಷ್ಟವಿಲ್ಲದಿದ್ದರೂ ಋಕ್ಷ-ವಾನರ-ರಾಕ್ಷಸರು - ತಮ್ಮ ತಮ್ಮ ಮನೆಗಳನ್ನು ಸೇರಿದರು.

ಋಕ್ಷ-ವಾನರ-ರಾಕ್ಷಸರು ರಘುವಂಶವರ್ಧನನಾದ ಶ್ರೀರಾಮನಿಗೆ ನಮಸ್ಕರಿಸಿ ಅವನನ್ನು ಬಿಟ್ಟುಹೋಗಬೇಕೆಂಬ ದುಗುಡದಿಂದ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವರಾಗಿ ತಮ್ಮ-ತಮ್ಮ ನಿವಾಸಗಳಿಗೆ ಹಿಂದಿರುಗಿದರು.

40ನೆಯ ಸರ್ಗವು ಮುಗಿಯಿತು.

ಕುಬೇರನ ಆಜ್ಞೆಯಂತೆ ಪುಷ್ಪಕವಿಮಾನದ ಆಗಮನ : ಶ್ರೀರಾಮನಿಂದ ಪೂಜಿಸಲ್ಪಟ್ಟ ವಿಮಾನದ ನಿರ್ಗಮನ : ಭರತನಿಂದ ಶ್ರೀರಾಮರಾಜ್ಯದ ವರ್ಣನೆ

ವಿಸೃಜ್ಯ ಚ ಮಹಾಬಾಹುರ್ಋಕ್ಷವಾನರರಾಕ್ಷಸಾನ್ ।
ಭ್ರಾತೃಭಿಃ ಸಹಿತೋ ರಾಮಃ ಪ್ರಮುಮೋದ ಸುಖಂ ಸುಖೀ ॥1॥

ಸುಖಸ್ವರೂಪನಾದ ಮಹಾಬಾಹುವಾದ ಶ್ರೀರಾಮನು ಋಕ್ಷ–ವಾನರ–ರಾಕ್ಷಸರೆಲ್ಲರನ್ನೂ ಕಳುಹಿಸಿಕೊಟ್ಟು ತಮ್ಮಂದಿರೊಡನೆ ಸುಖದಿಂದಲೂ, ಆನಂದದಿಂದಲೂ ಇದ್ದನು.

ಹೀಗಿರಲು ಒಂದು ದಿವಸ ಅಪರಾಹ್ಣಸಮಯದಲ್ಲಿ ತಮ್ಮಂದಿರೊಡನೆ ಕುಳಿತಿರುವಾಗ ಮಹಾಪ್ರಭುವಾದ ಶ್ರೀರಾಮನು ಅಂತರಿಕ್ಷದ ಕಡೆಯಿಂದ ಸುಮಧುರವಾದ ಶಬ್ದವು ಬರುತ್ತಿರುವುದನ್ನು ಆಲಿಸಿದನು.

ಸೌಮ್ಯ ರಾಮ ನಿರೀಕ್ಷಸ್ವ ಸೌಮ್ಯೇನ ವದನೇನ ಮಾಮ್ ।
ಕುಬೇರಭವನಾತ್ಪ್ರಾಪ್ತಂ ವಿದ್ಧಿ ಮಾಂ ಪುಷ್ಪಕಂ ಪ್ರಭೋ ॥3॥

''ಸೌಮ್ಯನೇ! ರಾಘವ! ಸೌಮ್ಯವಾದ ಮುಖದಿಂದ ನನ್ನನ್ನು ನಿರೀಕ್ಷಿಸು. ನನ್ನನ್ನು ಕುಬೇರನ ಭವನದಿಂದ ಬಂದಿರುವ ಪುಷ್ಪಕವಿಮಾನ ವೆಂದು ತಿಳಿ.

ನರಶ್ರೇಷ್ಠನೇ! ನಿನ್ನ ಆಜ್ಞೆಯಂತೆ ಕುಬೇರನನ್ನು ಸೇವಿಸಲು ನಾನು ಅವನ ಭವನಕ್ಕೆ ಹೋದೆನು. ಆದರೆ ಅವನು ನನ್ನೊಡನೆ ಹೀಗೆ ಹೇಳಿದನು :

ನಿರ್ಜಿತಸ್ತ್ವಂ ನರೇನ್ದ್ರೇಣ ರಾಘವೇಣ ಮಹಾತ್ಮನಾ ।
ನಿಹತ್ಯ ಯುಧಿ ದುರ್ಧರ್ಷಂ ರಾವಣಂ ರಾಕ್ಷಸೇಶ್ವರಮ್ ॥5॥

''ಪುಷ್ಪಕವೇ! ಮಹಾತ್ಮನಾದ ಶ್ರೀರಾಮನು ಯುದ್ಧದಲ್ಲಿ ದುರ್ಧರ್ಷನಾದ, ರಾಕ್ಷಸೇಶ್ವರನಾದ ರಾವಣನನ್ನು ಸಂಹರಿಸಿ ನಿನ್ನನ್ನು ಗೆದ್ದುಕೊಂಡಿದ್ದಾನೆ.

ಪುತ್ರರಿಂದಲೂ, ಬಂಧುಗಳಿಂದಲೂ , ಸೇವಕರಿಂದಲೂ ಕೂಡಿದ

ದುರಾತ್ಮನಾದ ರಾವಣನು ಹತನಾದುದಕ್ಕಾಗಿ ನನಗೂ ಹೆಚ್ಚು ಸಂತೋಷವೇ ಆಗಿದೆ.

ಸ ತ್ವಂ ರಾಮೇಣ ಲಙ್ಕಾಯಾಂ ನಿರ್ಜಿತಃ ಪರಮಾತ್ಮನಾ ।
ವಹ ಸೌಮ್ಯ ತಮೇವ ತ್ವಮಹಮಾಜ್ಞಾಪಯಾಮಿ ತೇ ॥7॥

ರಾವಣನನ್ನು ಜಯಿಸಿದ ಪರಮಾತ್ಮನಾದ ಶ್ರೀರಾಮನು ಲಂಕೆಯಲ್ಲಿ ನಿನ್ನನ್ನೂ ಜಯಿಸಿದ್ದಾನೆ. ಆದುದರಿಂದ ನೀನು ಅವನಿಗೆ ಸೇರಿರುವೆ. ನಾನೂ ಆಜ್ಞೆ ಮಾಡುತ್ತಿದ್ದೇನೆ. ಇನ್ನು ಮುಂದೆ ನೀನು ಅವನ ವಾಹನವಾಗಿ ಅವನನ್ನೇ ಸೇವಿಸುತ್ತಿರು.

ರಘುಕುಲದವರಿಗೆ ಆನಂದವನ್ನು ಉಂಟುಮಾಡುವ ಶ್ರೀರಾಮನು ಸಂಪೂರ್ಣಜಗತ್ತಿಗೂ ಆಶ್ರಯನಾಗಿದ್ದಾನೆ. ಆದುದರಿಂದ ಇನ್ನು ಮುಂದೆ ಅವನಿಗೇ ನೀನು ವಾಹನವಾಗು. ನೀನು ಹೀಗೆ ಮಾಡುವುದು ನನ್ನ ತೀವ್ರವಾದ ಆಶೆಯೂ ಆಗಿದೆ. ಆದುದರಿಂದ ನೀನು ನಿಶ್ಚಿಂತನಾಗಿ ಶ್ರೀರಾಮನ ಬಳಿಗೆ ಹೋಗು.''

ರಾಘವ ! ಮಹಾತ್ಮನಾದ ಕುಬೇರನ ಆಜ್ಞೆಯಂತೆ ನಾನು ನಿನ್ನ ಬಳಿಗೆ ಬಂದಿರುವೆನು. ಯಾವ ವಿಧವಾದ ಶಂಕೆಯೂ ಇಲ್ಲದೆ ನನ್ನನ್ನು ನೀನು ಪ್ರತಿಗ್ರಹಿಸು.

ಅಧೃಷ್ಯಃ ಸರ್ವಭೂತಾನಾಂ ಸರ್ವೇಷಾಂ ಧನದಾಜ್ಞಯಾ ।
ಚರಾಮ್ಯಹಂ ಪ್ರಭಾವೇಣ ತವಾಜ್ಞಾಂ ಪರಿಪಾಲಯನ್ ॥10॥

ರಾಘವ ! ನಾನು ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳಿಂದಲೂ ಎದುರಿಸಲು ಅಸಾಧ್ಯನಾಗಿದ್ದೇನೆ. ಕುಬೇರನ ಆಜ್ಞೆಯಂತೆ ನಾನು ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತಾ ನನ್ನ ಪ್ರಭಾವದಿಂದ ಮೂರು ಲೋಕಗಳಲ್ಲಿಯೂ ಸಂಚರಿಸುತ್ತೇನೆ.''

ಮಹಾಬಲನಾದ ಶ್ರೀರಾಮನಿಗೆ ಪುಷ್ಪಕವಿಮಾನದ ಅಧಿದೇವತೆಯು ಹೀಗೆ ಹೇಳಲು ಹಿಂದಿರುಗಿ ಬಂದ ವಿಮಾನವನ್ನು ಕುರಿತು ಹೇಳಿದನು :

'' ವಿಮಾನರಾಜನೇ ! ಪುಷ್ಪಕ ! ವಿಷಯವು ಹೀಗಿರುವುದಾದರೆ ನಿನಗೆ ಇಲ್ಲಿ ಸ್ವಾಗತವಿದೆ. ಕುಬೇರನಿಗೆ ನಿನ್ನನ್ನು ಕಳುಹಿಸಿಕೊಡುವ ಅನುಕೂಲ

ವಿರುವುದಾದರೆ ಸದ್ವ್ಯವಹಾರವನ್ನು ಉಲ್ಲಂಘಿಸಿದ ದೋಷವು ನಮಗೆ ಬರದಿದ್ದರೆ ಸರಿ.''

ಹೀಗೆ ಹೇಳಿ ಮಹಾಬಾಹುವಾದ ಶ್ರೀರಾಮನು ಪುಷ್ಪಕವಿಮಾನವನ್ನು ಭತ್ತದ ಅರಳಿನಿಂದಲೂ, ಸುಗಂಧಯುಕ್ತವಾದ ಪುಷ್ಪಗಳಿಂದಲೂ, ಧೂಪಗಳಿಂದಲೂ, ಚಂದನದಿಂದಲೂ ಸಂಪೂಜಿಸಿ ಹೇಳಿದನು :

''ಪುಷ್ಪಕ ! ನೀನೀಗ ಹೋಗಬಹುದು. ನಾನು ಸ್ಮರಿಸಿದಾಗ ಪುನಃ ಬರುವೆಯಂತೆ. ನೀನು ಆಕಾಶದಲ್ಲಿ ಹಾರಿಹೋಗುತ್ತಿರುವಾಗ ಆಕಾಶಚಾರಿಗಳಾದ ಸಿದ್ಧರಿಗೆ ತೊಂದರೆಯಾಗುವಂತೆ ವ್ಯವಹರಿಸಬೇಡ. ಸ್ವೇಚ್ಛೆಯಿಂದ ಎಲ್ಲ ದಿಕ್ಕುಗಳಿಗೂ ಪ್ರಯಾಣಮಾಡುವ ನಿನಗೆ ಎಲ್ಲಿಯೂ ಅಪಘಾತವೂ ಆಗದಿರಲಿ.''

ಶ್ರೀರಾಮನ ಆ ಮಾತಿಗೆ ಪುಷ್ಪಕವಿಮಾನದ ಅಧಿದೇವತೆಯು '**ಏವಮಸ್ತು**' 'ಹಾಗೆಯೆ ಆಗಲಿ' –ಎಂದು ಹೇಳಿ ಶ್ರೀರಾಮನ ಆಜ್ಞೆಯನ್ನು ಶಿರಸಾವಹಿಸಿತು. ಶ್ರೀರಾಮನು ಪುನಃ ವಿಮಾನಕ್ಕೆ ಪೂಜೆಯನ್ನು ಮಾಡಿ ಹೋಗಲು ಆಜ್ಞೆಮಾಡಿದೊಡನೆಯೇ ಆ ಪುಷ್ಪಕವಿಮಾನವು ತನಗೆ ಇಷ್ಟವಾದ ಸ್ಥಳಕ್ಕೆ ಹೊರಟುಹೋಯಿತು.

ಹೀಗೆ ಪುಣ್ಯತಮವಾದ ಪುಷ್ಪಕವಿಮಾನವು ಆಕಾಶದಲ್ಲಿ ಅಂತರ್ಹಿತವಾಗಲು ಭರತನು ಕೈಜೋಡಿಸಿಕೊಂಡು ಶ್ರೀರಾಮನಿಗೆ ಹೇಳಿದನು :

ವಿಬುಧಾತ್ಮನಿ ದೃಶ್ಯನ್ತೇ ತ್ವಯಿ ವೀರ ಪ್ರಶಾಸತಿ ।
ಅಮಾನುಷಾಣಿ ಸತ್ತ್ವಾನಿ ವ್ಯಾಹೃತಾನಿ ಮುಹುರ್ಮುಹುಃ ॥ 17॥

''ವೀರಶ್ರೇಷ್ಠನೇ ! ದೇವಸ್ವರೂಪನಾಗಿರುವ ನೀನು ರಾಜ್ಯಭಾರ ಮಾಡುತ್ತಿರುವಾಗ ಮನುಷ್ಯೇತರ ಪ್ರಾಣಿಗಳೂ ಮನುಷ್ಯರಂತೆಯೇ ಸಂಭಾಷಣೆ ಮಾಡುತ್ತಿರುವುದು ಕಂಡುಬರುತ್ತಿದೆ.

ಅನಾಮಯಶ್ಚ ಮರ್ತ್ಯಾನಾಂ ಸಾಗ್ರೋ ಮಾಸೋ ಗತೋ ಹ್ಯಯಮ್ ।
ಜೀರ್ಣಾನಾಮಪಿ ಸತ್ತ್ವಾನಾಂ ಮೃತ್ಯುರ್ನಾಯಾತಿ ರಾಘವ ।
ಅರೋಗಪ್ರಸವಾ ನಾರ್ಯೋ ವಪುಷ್ಮನ್ತೋ ಹಿ ಮಾನವಾಃ ॥ 19॥

ನೀನು ಪಟ್ಟಾಭಿಷಿಕ್ತನಾಗಿ ಒಂದು ತಿಂಗಳ ಮೇಲಾಯಿತು. ಅಂದಿನಿಂದಲೇ ಪ್ರಜೆಗಳೆಲ್ಲರೂ ನೀರೋಗದೃಢಕಾಯರಾಗುತ್ತಿದ್ದಾರೆ. ಮುಪ್ಪಿನಿಂದ ಜೀರ್ಣವಾಗಿದ್ದರೂ ಯಾರಿಗೂ ಸಾವು ಬರುತ್ತಿಲ್ಲ. ಸ್ತ್ರೀಯರು ಯಾವ ವಿಧವಾದ ಸಂಕಟವೂ ಇಲ್ಲದೆ ಮಕ್ಕಳನ್ನು ಹಡೆಯುತ್ತಿದ್ದಾರೆ. ಮನುಷ್ಯರೆಲ್ಲರೂ ಹೃಷ್ಟ–ಪುಷ್ಟವಾದ ಶರೀರಗಳಿಂದ ಕೂಡಿರುತ್ತಾರೆ.

ಹರ್ಷಶ್ಚಾಭ್ಯಧಿಕೋ ರಾಜನ್ ಜನಸ್ಯ ಪುರವಾಸಿನಃ ।
ಕಾಲೇ ವರ್ಷತಿ ಪರ್ಜನ್ಯಃ ಪಾತಯನ್ನಮೃತಂ ಪಯಃ ॥20॥

ಅಯೋಧ್ಯಾಪುರವಾಸಿಗಳಿಗೆ ಹೆಚ್ಚಿನ ಸಂತೋಷವುಂಟಾಗಿದೆ. ಯೋಗ್ಯ ಕಾಲಗಳಲ್ಲಿ ಮೇಘವು ಅಮೃತಕ್ಕೆ ಸಮಾನವಾದ ನೀರನ್ನು ಸುರಿಸುತ್ತಿದೆ.

ವಾತಾಶ್ಚಾಪಿ ಪ್ರವಾನ್ತ್ಯೇತೇ ಸ್ಪರ್ಶಯುಕ್ತಾಃ ಸುಖಾಃ ಶಿವಾಃ ॥

ಶೀತಲವೂ ಸುಖಕರವೂ ಆದ ಮಾರುತವು ಎಲ್ಲೆಡೆಗಳಲ್ಲಿಯೂ ಬೀಸುತ್ತಿದೆ.

ಇಂತಹ ಪ್ರಭಾವಶಾಲಿಯಾದ ರಾಜನು ನಮಗಾಗಿ ಚಿರಕಾಲದವರೆಗೆ ಬಾಳಲಿ – ಎಂದು ಪಟ್ಟಣಿಗರೂ ಮತ್ತು ಪ್ರಾಂತೀಯ ಜನರೂ ಮಾತನಾಡಿಕೊಳ್ಳುತ್ತಿದ್ದಾರೆ.''

ಹೀಗೆ ಭರತನು ಹೇಳಿದ ಸುಮಧುರವಾದ ಮಾತನ್ನು ಕೇಳಿದ ನೃಪಶ್ರೇಷ್ಠನಾದ ಶ್ರೀರಾಮನು ಆನಂದತುಂದಿಲನಾದನು.

41ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 42ನೆಯ ಸರ್ಗ

ಅಶೋಕವನದಲ್ಲಿ ಶ್ರೀರಾಮ ಮತ್ತು ಸೀತಾದೇವಿಯರ ವಿಹಾರ : ಗರ್ಭಿಣಿಯಾಗಿದ್ದ ಸೀತಾದೇವಿಯು ತಪೋವನಗಳನ್ನು ಸಂದರ್ಶಿಸಲು ಬಯಸಿದುದು : ಶ್ರೀರಾಮನ ಒಪ್ಪಿಗೆ

ಸ ವಿಸೃಜ್ಯ ತತೋ ರಾಮಃ ಪುಷ್ಪಕಂ ಹೇಮಭೂಷಿತಮ್ ।
ಪ್ರವಿವೇಶ ಮಹಾಬಾಹುರಶೋಕವನಿಕಾಂ ತದಾ ॥1॥

ಮಹಾಬಾಹುವಾದ ಶ್ರೀರಾಮನು ಸುವರ್ಣಭೂಷಿತವಾದ ಪುಷ್ಪಕ ವಿಮಾನವನ್ನು ಕಳುಹಿಸಿಕೊಟ್ಟು ಅಶೋಕವನಕ್ಕೆ (ಅಂತಃಪುರದ ಸಮೀಪದಲ್ಲಿದ್ದ ವಿಹಾರಯೋಗ್ಯವಾದ ಉಪವನ) ತೆರಳಿದನು.

ಆ ಅಶೋಕವನವು ಚಂದನ, ಅಗುರು, ಮಾವು, ಎತ್ತರವಾದ ರಕ್ತ ಚಂದನ ಮತ್ತು ದೇವದಾರು - ಇವೇ ಮುಂತಾದ ವೃಕ್ಷಗಳಿಂದ ಕೂಡಿದ್ದು ಸುತ್ತಲೂ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಚಂಪಕ, ಅಶೋಕ, ಪುನ್ನಾಗ, ಹಿಪ್ಪೆ, ಹಲಸು, ಹೊನ್ನೆ, ಧೂಮರಹಿತವಾದ ಅಗ್ನಿಯಂತೆಯೇ ಕಾಣುತ್ತಿದ್ದ ಪಾರಿಜಾತ - ಇವೇ ಮುಂತಾದ ಮರ–ಬಳ್ಳಿಗಳಿಂದ ಆ ಉಪ ವನವು ಶೋಭಿಸುತ್ತಿದ್ದಿತು. ಲೋಧ್ರ, ನೀಪ, ಮತ್ತಿ, ನಾಗಕೇಸರ, ಏಳೆಲೆಬಾಳೆ, ತಾಳೆ, ಮಂದಾರ, ಕದಲೀ ಇವೇ ಮುಂತಾದ ಮರ –ಗಿಡ ಗಳಿಂದಲೂ, ಪೊದರುಗಳಿಂದಲೂ, ಲತೆಗಳ ಸಮೂಹಗಳಿಂದಲೂ ಆ ಉಪ ವನವು ಅತ್ಯಂತಶೋಭಾಯಮಾನವಾಗಿ ಕಾಣುತ್ತಿದ್ದಿತು. ಪ್ರಿಯಂಗು, ಕದಂಬ, ವಕುಲ, ನೇರಳೆ, ದಾಳಿಂಬೆ, ಕೋವಿದಾರ ಇವೇ ಮುಂತಾದ ಫಲ ಭರಿತವಾದ ವೃಕ್ಷಗಳಿಂದಲೂ ಆ ಅಶೋಕವನವು ಶೋಭಿಸುತ್ತಿದ್ದಿತು. ಸರ್ವದಾ ಪುಷ್ಪ –ಫಲಗಳಿಂದ ಭರಿತವಾದ, ರಮ್ಯವಾದ ಚಿಗುರುಗಳಿಂದ ಕೂಡಿದ, ನಯನಮನೋಹರವಾದ ಮತ್ತು ದಿವ್ಯವಾದ ಗಂಧರಸದಿಂದ ಕೂಡಿರುವ, ನೂತನವಾದ ಚಿಗುರುಗಳಿಂದ ಅಲಂಕೃತವಾದ ನೂರಾರು ವೃಕ್ಷಗಳು ಆ ಉಪವನದ ಕಾಂತಿಯನ್ನು ಹೆಚ್ಚಿಸುತ್ತಿದ್ದುವು. ವೃಕ್ಷಗಳನ್ನು ನೆಡುವುದರಲ್ಲಿ ಮತ್ತು ಸರಿಯಾಗಿ ಕತ್ತರಿಸಿ ಪರಿಷ್ಕರಿಸುವುದರಲ್ಲಿ ನಿಪುಣರಾಗಿದ್ದ ಮಾಲಿ ಗಳಿಂದ ಬೆಳೆಸಲ್ಪಟ್ಟಿದ್ದ, ಪುಷ್ಪಪಲ್ಲವಗಳಿಂದಲೂ ಮತ್ತು ಮದಿಸಿದ ದುಂಬಿ ಗಳಿಂದಲೂ ಸಮಲಂಕೃತವಾಗಿದ್ದ ದಿವ್ಯವೃಕ್ಷಗಳು ಉಪವನದ ಶೋಭೆಯನ್ನು ಹೆಚ್ಚಿಸುತ್ತಿದ್ದುವು. ಮಾವಿನ ಮರಕ್ಕೆ ಶಿರೋಭೂಷಣಗಳೋ ಎಂಬಂತೆ ಕಾಣುತ್ತಿದ್ದ ಕೋಗಿಲೆಗಳಿಂದಲೂ, ಭೃಂಗರಾಜಗಳಿಂದಲೂ, ಹಲವಾರು ಬಣ್ಣಗಳ ಇತರ ಪಕ್ಷಿಗಳಿಂದಲೂ ಕೂಡಿದ ಆ ಉಪವನವು ಶೋಭಾಯಮಾನ ವಾಗಿಯೂ ಚಿತ್ರ –ವಿಚಿತ್ರವಾಗಿಯೂ ಕಾಣುತ್ತಿದ್ದಿತು. ಅಲ್ಲಿದ್ದ ಕೆಲವು ವೃಕ್ಷಗಳು ಚಿನ್ನದ ಬಣ್ಣದಿಂದ ಕಂಗೊಳಿಸುತ್ತಿದ್ದುವು. ಕೆಲವು ಅಗ್ನಿಯ ಜ್ವಾಲೆಗಳಂತೆಯೇ ಕಾಣುತ್ತಿದ್ದುವು. ಮತ್ತೆ ಕೆಲವು ವೃಕ್ಷಗಳು ನೀಲವಾದ ಕಾಡಿಗೆಯಂತೆ ಶ್ಯಾಮಲವರ್ಣದಿಂದ ಪ್ರಕಾಶಿಸುತ್ತಿದ್ದುವು. ಅಲ್ಲಿ ಅನೇಕ ವಿಧವಾದ ಸುಗಂಧಿತವಾದ ಪುಷ್ಪಗಳೂ ಪುಷ್ಪಗುಚ್ಛಗಳೂ ಇದ್ದುವು. ಸ್ವಚ್ಛ

ವಾದ ನೀರಿನಿಂದ ಪೂರ್ಣವಾಗಿದ್ದ, ವಿಧ–ವಿಧವಾದ ಆಕಾರಗಳಿಂದ ಕೂಡಿದ್ದ ಕೊಳಗಳಿದ್ದುವು. ಅವುಗಳ ಸುತ್ತಲೂ ಮಾಣಿಕ್ಯದಿಂದ ಮಾಡಿದ ಸೋಪಾನ ಗಳಿದ್ದುವು. ಸರೋವರಗಳ ತಳಭಾಗದ ಭೂಮಿಯನ್ನು ಸ್ಫಟಿಕದ ಮಣಿ ಗಳಿಂದ ಅಲಂಕರಿಸಲಾಗಿತ್ತು. ಆ ಸರೋವರಗಳು ಅರಳಿದ ತಾವರೆ ಗಳಿಂದಲೂ ಮತ್ತು ನೈದಿಲೆಗಳಿಂದಲೂ ಶೋಭಾಯಮಾನವಾಗಿ ಕಾಣು ತ್ತಿದ್ದುವು. ಚಕ್ರವಾಕಪಕ್ಷಿಗಳು ಆ ಸರೋವರದ ಸುತ್ತಲೂ ಹಾರಾಡು ತ್ತಿದ್ದುವು. ಕೋಗಿಲೆಗಳೂ, ಗಿಣಿಗಳೂ, ಹಂಸಸಾರಸಪಕ್ಷಿಗಳೂ ಧ್ವನಿ ಮಾಡುತ್ತಿದ್ದುವು. ತೀರಪ್ರದೇಶಗಳಲ್ಲಿ, ಅರಳಿದ ಹೂಗಳಿಂದಲೂ ಚಿಗುರು ಗಳಿಂದಲೂ ಕಂಗೊಳಿಸುತ್ತಿದ್ದ ವೃಕ್ಷಗಳಿಂದ ಆ ಸರೋವರಗಳು ಶೋಭಿಸು ತ್ತಿದ್ದುವು.

ಆ ಅಶೋಕವನವು ನಾನಾವಿಧವಾದ ಆಕಾರಗಳುಳ್ಳ ಪ್ರಾಕಾರ ಗಳಿಂದಲೂ, ಕಲ್ಲುಬಂಡೆಗಳಿಂದಲೂ ಶೋಭಿತವಾಗಿದ್ದಿತು. ಅಲ್ಲಿಯ ಅರಣ್ಯ ಪ್ರದೇಶಗಳು ವೈಡೂರ್ಯಮಣಿಗಳಂತಿರುವ ಹಸಿರುಹುಲ್ಲಿನಿಂದ ಸುಶೋಭಿತ ವಾಗಿದ್ದುವು. ವೃಕ್ಷಗಳ ಸಮೂಹಗಳು ಪುಷ್ಪಭರಿತವಾಗಿದ್ದು ಆಗಿಂದಾಗ್ಗೆ ಗಾಳಿಯ ಬಡಿತದಿಂದ ಸಂಘರ್ಷಿಸುತ್ತಿದ್ದು ಕೆಳಕ್ಕೆ ಬೀಳುತ್ತಿದ್ದ ಪುಷ್ಪಗಳಿಂದ ಮುಚ್ಚಲ್ಪಟ್ಟ ಕಲ್ಲುಬಂಡೆಗಳು ನಕ್ಷತ್ರಗಳಿಂದ ನಿಬಿಡವಾದ ಆಕಾಶ ದಂತೆಯೇ ಕಾಣುತ್ತಿದ್ದುವು. ಶ್ರೀರಾಮನ ಆ ಅಶೋಕವನವು ಇಂದ್ರನ ನಂದನವನದಂತೆಯೂ – ಬ್ರಹ್ಮನಿರ್ಮಿತವಾದ ಕುಬೇರನ ಚೈತ್ರರಥದಂತೆಯೂ ಪರಿಶೋಭಿಸುತ್ತಿದ್ದಿತು. ಹಲವಾರು ಸುಖಾಸನಗಳಿಂದ ಸಜ್ಜಾಗಿದ್ದ ಅನೇಕ ಭವನಗಳಿಂದಲೂ, ಲತಾಗೃಹಗಳಿಂದಲೂ ಸಮಾವೃತವಾಗಿದ್ದ ಸಮೃದ್ಧಶಾಲಿ ಯಾದ ಅಶೋಕವನಕ್ಕೆ ಶ್ರೀರಾಮನು ತೆರಳಿ ಪುಷ್ಪರಾಶಿಯಿಂದ ವಿಭೂಷಿತ ವಾಗಿದ್ದ ರತ್ನಗಂಬಳಿಯ ಮೇಲುಹೊದ್ದಿಕೆಯಿದ್ದ ಸುಂದರವಾದ ಶುಭಾಸನ ದಲ್ಲಿ ಕುಳಿತನು. ಶಚೀದೇವಿಗೆ ಇಂದ್ರನು ಸುಧಾಪಾನ ಮಾಡಿಸು ವಂತೆ ಶ್ರೀರಾಮನು ಸೀತಾದೇವಿಗೆ ತನ್ನ ಕೈಯಿಂದಲೇ ಮೈರೇಯವೆಂಬ ಮಧುವನ್ನು ಕುಡಿಸಿದನು. ಸೇವಕರು ಶ್ರೀರಾಮ – ಸೀತೆಯರ ಭೋಜ

ನಾರ್ಥವಾಗಿ ರಾಜಯೋಗ್ಯವಾದ ಭೋಜ್ಯಪದಾರ್ಥಗಳನ್ನೂ, ಪಕ್ವವಾದ ಮಾಂಸವನ್ನೂ, ವಿಧ–ವಿಧವಾದ ಫಲಗಳನ್ನೂ ತಂದಿರಿಸಿದರು. ನೃತ್ಯ–ಗೀತ ಗಳಲ್ಲಿ ಕುಶಲೆಯರಾದ ಅಪ್ಸರೆಯರೂ, ನಾಗಕನ್ಯೆಯರೂ ಮತ್ತು ಕಿನ್ನರಿ ಯರೂ ಒಟ್ಟಾಗಿ ಸೇರಿ ಶ್ರೀರಾಮನ ಸಮೀಪದಲ್ಲಿ ನೃತ್ಯಮಾಡತೊಡಗಿದರು. ನೃತ್ಯ – ಗಾಯನ ಕುಶಲೆಯರಾದ ಮತ್ತು ಚತುರೆಯರಾದ ಸ್ತ್ರೀಯರು ಮಧು ಪಾನಮಾಡಿ ಮದಕ್ಕೆ ವಶೀಭೂತರಾಗಿ ಶ್ರೀರಾಮನ ಸಮೀಪದಲ್ಲಿ ನೃತ್ಯಕಲೆ ಯನ್ನು ಪ್ರದರ್ಶಿಸುತ್ತಿದ್ದರು. ಇತರರ ಮನಸ್ಸನ್ನು ಆನಂದಪಡಿಸುವ, ಪುರುಷರಲ್ಲಿ ಶ್ರೇಷ್ಠನಾದ, ಧರ್ಮಾತ್ಮನಾದ ಶ್ರೀರಾಮನು ಉತ್ತಮವಾದ ವಸ್ತ್ರಾಭರಣಗಳಿಂದ ಭೂಷಿತೆಯರಾಗಿದ್ದ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತಿದ್ದ ಆ ರಮಣಿಯರಿಗೆ ಬಹುಮಾನಗಳನ್ನು ಕೊಟ್ಟು ಸಂತೋಷ ಗೊಳಿಸುತ್ತಿದ್ದನು. ಆ ಸಮಯದಲ್ಲಿ ಸೀತಾದೇವಿಯೊಡನೆ ಕುಳಿತಿದ್ದ ಶ್ರೀರಾಮನು ಅರುಂಧತಿಯೊಡನೆ ಕುಳಿತಿರುವ ವಸಿಷ್ಠರಂತೆಯೇ ಉಜ್ವಲ ವಾದ ತೇಜಸ್ಸಿನಿಂದ ಬೆಳಗುತ್ತಿದ್ದನು. ಹೀಗೆ ಶ್ರೀರಾಮಚಂದ್ರನು ಆನಂದ ತುಂದಿಲನಾಗಿರುತ್ತಾ ದೇವಕನ್ಯಾಸದೃಶಳಾಗಿದ್ದ ಸೀತಾದೇವಿಯೊಡನೆ ದೇವತೆಯೋಪಾದಿಯಲ್ಲಿ ಅನುದಿನವೂ ರಮಿಸುತ್ತಿದ್ದನು. ಹೀಗೆ ಸೀತಾ–ರಾಮರು ಬಹಳ ಕಾಲದವರೆಗೆ ಅಶೋಕವನದಲ್ಲಿ ವಿಹರಿಸುತ್ತಾ ಶಿಶಿರರ್ತುವಿಗೆ ಸಂಬಂಧಿಸಿದಂತೆ ಹಲವಾರು ವಿಧವಾದ ಭೋಗಗಳನ್ನು ಉಪಭೋಗಿಸು ತ್ತಿದ್ದಂತೆಯೇ ಆನಂದದಾಯಕವಾಗಿದ್ದ ಶಿಶಿರರ್ತುವು ಕಳೆದುಹೋಯಿತು. ಧರ್ಮಜ್ಞನಾದ ಶ್ರೀರಾಮನು ದಿವಸದ ಮೊದಲಭಾಗದಲ್ಲಿ ಧರ್ಮಾನುಸಾರ ವಾಗಿ ಧಾರ್ಮಿಕ ಕ್ರಿಯೆಗಳನ್ನು ನಡೆಸಿ ಉಳಿದ ಅರ್ಧದಿವಸ ಅಂತಃಪುರದಲ್ಲಿ ವಿಹರಿಸುತ್ತಿದ್ದನು. ಸೀತಾದೇವಿಯು ಕೂಡ ದಿವಸದ ಮೊದಲಭಾಗದಲ್ಲಿ ದೇವಪೂಜಾದಿಗಳನ್ನು ಮಾಡಿ ಯಾವ ವಿಧವಾದ ಭೇದಭಾವವೂ ಇಲ್ಲದೇ ತನ್ನ ಮೂವರು ಅತ್ತೆಯರ ಶುಶ್ರೂಷೆಯನ್ನು ಮಾಡುತ್ತಿದ್ದಳು. ಹೀಗಿರಲು ಒಂದು ದಿನ ಅವಳು ವಿಚಿತ್ರವಾದ ವಸ್ತ್ರಗಳನ್ನೂ ಆಭರಣಗಳನ್ನೂ ಧರಿಸಿ ಸಿಂಗರಿಸಿಕೊಂಡು – ಸ್ವರ್ಗದಲ್ಲಿ ಸಿಂಹಾಸನಾರೂಢನಾಗಿರುವ ಇಂದ್ರನ ಬಳಿಗೆ ಶಚೀದೇವಿಯು ಹೋಗುವಂತೆ ಶ್ರೀರಾಮನ ಬಳಿಗೆ ಹೋದಳು. ಆ ಸಮಯದಲ್ಲಿ ತನ್ನ ಪತ್ನಿಯು ಗರ್ಭವತಿಯಾಗಿರುವುದನ್ನು ಗಮನಿಸಿದ

ಶ್ರೀರಾಮನು –'ಸಾಧು ಸೀತೆ ಸಾಧು !' ಎಂದೆನ್ನುತ್ತಾ ಸಂತೋಷದಲ್ಲಿ ಮುಳುಗಿಹೋದನು. ದೇವಕನ್ಯೆಯಂತೆಯೇ ಕಾಣುತ್ತಿದ್ದ ಕಡುಚೆಲುವೆ ಯಾದ ಸೀತಾದೇವಿಗೆ – ''ದೇವಿ ! ನಿನ್ನ ಗರ್ಭದಿಂದ ಪುತ್ರನನ್ನು ಪಡೆಯುವ ಸಮಯವು ಸನ್ನಿಹಿತವಾಗುತ್ತಿದೆ. ಸುಂದರಾಂಗಿಯೇ ! ನಿನಗೆ ಯಾವ ಬಯಕೆಯಿದೆ ? ನಿನ್ನ ಯಾವ ಕಾಮನೆಯನ್ನು ನಾನು ಪೂರೈಸಿಕೊಡಲಿ?'' ಎಂದು ಕೇಳಿದನು.

ಶ್ರೀರಾಮನು ಹೀಗೆ ಹೇಳಲು ಸೀತೆಯು ಕಿರುನಗೆಯನ್ನು ಬೀರುತ್ತಾ ಹೇಳಿದಳು :

ತಪೋವನಾನಿ ಪುಣ್ಯಾನಿ ದ್ರಷ್ಟುಮಿಚ್ಛಾಮಿ ರಾಘವ ।
ಗಙ್ಗಾತೀರೋಪವಿಷ್ಟಾನಾಮೃಷೀಣಾಮುಗ್ರತೇಜಸಾಮ್ ।
ಫಲಮೂಲಾಶಿನಾಂ ದೇವ ಪಾದಮೂಲೇಷು ವರ್ತಿತುಮ್ ॥33॥
ಏಷ ಮೇ ಪರಮಃ ಕಾಮೋ ಯನ್ಮೂಲಫಲಭೋಜಿನಾಮ್ ।
ಅಪ್ಯೇಕರಾತ್ರಿಂ ಕಾಕುತ್ಸ್ಥ ನಿವಸೇಯಂ ತಪೋವನೇ ॥34॥

''ಪ್ರಾಣನಾಥನೇ! ರಾಘವ! ದಿವ್ಯವಾದ ತಪೋವನಗಳನ್ನು ನೋಡಲು ನನಗೆ ಬಯಕೆಯಾಗಿದೆ. ಗಂಗಾನದಿಯ ತೀರದಲ್ಲಿ ಫಲ–ಮೂಲಾದಿಗಳನ್ನು ತಿಂದು ಜೀವಿಸುವ ಉಗ್ರತೇಜಸ್ವಿಗಳಾದ ಮಹರ್ಷಿಗಳ ಪಾದದಡಿ ಯಲ್ಲಿ ಕೆಲವು ದಿವಸಗಳಾದರೂ ವಾಸಮಾಡಿಕೊಂಡಿರಬೇಕೆಂಬುದು ನನ್ನ ಹೆಬ್ಬಯಕೆಯಾಗಿದೆ. ಮಹಾತ್ಮರಾದ ಅಂತಹ ತಪಸ್ವಿಗಳ ತಪೋವನದಲ್ಲಿ ಒಂದು ರಾತ್ರಿಯಾದರೂ ನಾನು ಇರಲು ಸಾಧ್ಯವಾಗುವುದೇ ?''

ಸೀತೆಯು ಹೀಗೆ ತನ್ನ ಬಯಕೆಯನ್ನು ಬಹಿರಂಗಪಡಿಸಲು – ಕಷ್ಟವಾದ ಕಾರ್ಯಗಳನ್ನೂ ಸುಲಭವಾಗಿ ಮಾಡಲು ಸಮರ್ಥನಾದ ಶ್ರೀರಾಮನು ಸೀತಾದೇವಿಯ ಮಾತನ್ನು ನಡೆಸಿಕೊಡಲು ಪ್ರತಿಜ್ಞೆ ಮಾಡುತ್ತಾ ಹೇಳಿದನು:

ವಿಸ್ರಬ್ಧಾ ಭವ ವೈದೇಹಿ ಶ್ವೋ ಗಮಿಷ್ಯಸ್ಯಸಂಶಯಮ್ ॥35॥

''ವೈದೇಹಿ ! ನಿಶ್ಚಿಂತಳಾಗಿರು. ನಾಳೆಯೇ ನೀನು ತಪಸ್ವಿಗಳಿರುವ ತಪೋಭೂಮಿಗೆ ಹೋಗುವಿಯಂತೆ. ಈ ವಿಷಯದಲ್ಲಿ ಸಂಶಯಪಡುವ ಕಾರಣವಿಲ್ಲ.''

ಶ್ರೀರಾಮನು ಜಾನಕಿಗೆ ಹೀಗೆ ಹೇಳಿ ಸ್ನೇಹಿತರೊಡನೆ ಅರಮನೆಯ ಮಧ್ಯಭಾಗದಲ್ಲಿದ್ದ ಸಭಾಂಗಣಕ್ಕೆ ಹೋದನು.

42ನೆಯ ಸರ್ಗವು ಮುಗಿಯಿತು.

ಭದ್ರನ ಮುಖದಿಂದ ಸೀತೆಯ ಜನಾಪವಾದದ ಶ್ರವಣ

ತತ್ರೋಪವಿಷ್ಟಂ ರಾಜಾನಮುಪಾಸನ್ತೇ ವಿಚಕ್ಷಣಾಃ।
ಕಥಾನಾಂ ಬಹುರೂಪಾಣಾಂ ಹಾಸ್ಯಕಾರಾಃ ಸಮನ್ತತಃ ॥1॥

ಅರಮನೆಯ ಮಧ್ಯಕಕ್ಷೆಯಲ್ಲಿ ಕುಳಿತಿದ್ದ ಶ್ರೀರಾಮನ ಸಮೀಪದಲ್ಲಿ ಅನೇಕವಿಧವಾದ ಕಥೆಗಳನ್ನು ಹೇಳುವುದರಲ್ಲಿ ವಿಚಕ್ಷಣರಾದ ಹಾಸ್ಯ–ವಿನೋದಗಳನ್ನು ಮಾಡುವ ಸ್ನೇಹಿತರು ಕುಳಿತುಕೊಂಡರು.

ವಿಜಯ, ಮಧುಮತ್ತ, ಕಾಶ್ಯಪ, ಮಂಗಲ, ಕುಲ, ಸುರಾಜಿ, ಕಾಲಿಯ, ಭದ್ರ, ದಂತವಕ್ತ್ರ ಮತ್ತು ಸುಮಾಗಧ - ಇವರೇ ಮುಂತಾದ ಸ್ನೇಹಿತರು ಶ್ರೀರಾಮನನ್ನು ಸುತ್ತುವರಿದು ಕುಳಿತಿದ್ದರು.

ಅವರೆಲ್ಲರೂ ಪರಮಸಂತುಷ್ಟರಾಗಿ ರಾಘವನಿಗೆ ಪರಿಹಾಸದಿಂದ ಕೂಡಿರುವ ಬಗೆ–ಬಗೆಯ ಕಥೆಗಳನ್ನು ಹೇಳುತ್ತಿದ್ದರು. ಹೀಗೆ ಕಥೆಯನ್ನು ಹೇಳು ತ್ತಿದ್ದ ಆ ಸಂದರ್ಭದಲ್ಲಿ ಶ್ರೀರಾಮನು ಭದ್ರನೆಂಬುವವನನ್ನು ಪ್ರಶ್ನಿಸಿದನು :

'' ಭದ್ರ ! ಅಯೋಧ್ಯೆಯಲ್ಲಿ ಮತ್ತು ನಮ್ಮ ರಾಷ್ಟ್ರದ ಇತರೆಡೆಗಳಲ್ಲಿ ಯಾವ ವಿಶೇಷವಾದ ಕಥೆಯನ್ನು ಜನರು ಪರಸ್ಪರವಾಗಿ ಆಡಿಕೊಳ್ಳುತ್ತಿದ್ದಾರೆ?

ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ನನ್ನ ವಿಷಯವಾಗಿ, ಸೀತೆಯ ವಿಷಯವಾಗಿ, ಭರತ –ಲಕ್ಷ್ಮಣ –ಶತ್ರುಘ್ನರ ವಿಷಯವಾಗಿ ಮತ್ತು ತಾಯಿಯಾದ ಕೈಕೇಯಿಯ ವಿಷಯವಾಗಿ ಏನೆಂದು ಮಾತನಾಡಿಕೊಳ್ಳುತ್ತಿದ್ದಾರೆ ?

ವಕ್ತವ್ಯತಾಂ ಚ ರಾಜಾನೋ ವನೇ ರಾಜ್ಯೇ ವ್ರಜನ್ತಿ ಚ ॥6॥

ಒಂದು ವೇಳೆ ರಾಜನು ಆಚಾರ–ವಿಚಾರಗಳಿಂದ ಹೀನನಾಗಿ ಬಿಟ್ಟರೆ ಅವನು ತನ್ನ ರಾಜ್ಯದಲ್ಲಿಯೂ ಮತ್ತು ಋಷಿ–ಮುನಿಗಳು ವಾಸಮಾಡುವ

ಆಶ್ರಮಗಳಲ್ಲಿಯೂ ನಿಂದೆಯ ಮಾತುಗಳಿಗೆ ಗುರಿಯಾಗುತ್ತಾನೆ. ಅವನು ಮಾಡಿರಬಹುದಾದ ಕೆಟ್ಟ ಕೆಲಸಗಳನ್ನೇ ಜನರು ಯಾವಾಗಲೂ ಚರ್ಚಿಸು ತ್ತಿರುತ್ತಾರೆ.''

ಶ್ರೀರಾಮನು ಹೀಗೆ ಕೇಳಲು ಭದ್ರನು ಕೈಮುಗಿದುಕೊಂಡು ಹೇಳಿದನು:

'' ಮಹಾರಾಜ! ನಿನ್ನ ವಿಷಯದಲ್ಲಿ ನಾಗರಿಕರು ಒಳ್ಳೆಯ ಮಾತನ್ನೇ ಆಡಿಕೊಳ್ಳುತ್ತಿದ್ದಾರೆ. ದಶಗ್ರೀವನ ವಧೆಯ ಸಂಬಂಧದಲ್ಲಿ ನೀನು ಸಾಧಿಸಿದ ವಿಜಯದ ವಿಷಯದಲ್ಲಂತೂ ಪುರಜನರು ವಿಶೇಷವಾದ ರೀತಿಯಲ್ಲಿ ಪ್ರಶಂಸೆ ಮಾಡುತ್ತಿದ್ದಾರೆ.''

ಭದ್ರನ ಮಾತನ್ನು ಕೇಳಿ ಶ್ರೀರಾಮನು ಪುನಃ ಹೇಳಿದನು :

'' ಭದ್ರ ! ಜನರು ಆಡಿಕೊಳ್ಳುತ್ತಿರುವ ಮಾತುಗಳಲ್ಲಿ ಅವು ಕೇಳುವು ದಕ್ಕೆ ಹಿತಕರವಾದ ಮಾತಾಗಿರಲೀ, ಅಹಿತಕರವಾದ ಮಾತಾಗಿರಲೀ, ಶುಭ ವಾಗಿರಲೀ, ಅಶುಭವಾಗಿರಲೀ - ಒಂದನ್ನೂ ಬಿಡದೇ ಯಥಾವತ್ತಾಗಿ ಎಲ್ಲ ವನ್ನೂ ಹೇಳು. ಶುಭವಾದುದನ್ನು ಅವರು ಹೇಳಿದ್ದರೆ ಅದನ್ನೇ ನಾನು ಮುಂದುವರಿಸುತ್ತೇನೆ. ಅಶುಭವಾದುದನ್ನು ಹೇಳಿದ್ದರೆ ಅವರ ಅಭಿಪ್ರಾಯ ದಂತೆ ಅಂತಹ ಕಾರ್ಯವನ್ನು ಪರಿತ್ಯಜಿಸುತ್ತೇನೆ. ನಿಶ್ಚಿಂತನಾಗಿ ನಿರ್ಭಯನಾಗಿ ಯಾವ ವಿಧವಾದ ಆತಂಕವೂ ಇಲ್ಲದೇ ಎಲ್ಲ ವಿಷಯಗಳನ್ನೂ ಹೇಳು. ಪಟ್ಟಣದಲ್ಲಿರುವ ಪೌರರು ಗ್ರಾಮದಲ್ಲಿರುವ ಪ್ರಜೆಗಳು ನನ್ನ ವಿಷಯದಲ್ಲಿ ನಿಂದ್ಯವಾದ ಯಾವ ಮಾತುಗಳನ್ನು ಆಡಿಕೊಳ್ಳುತ್ತಿರುವರೆಂಬುದನ್ನೂ ಸ್ಪಷ್ಟವಾಗಿ ಹೇಳು.''

ಶ್ರೀರಾಘವನು ಹೀಗೆ ಎಲ್ಲ ವಿಷಯಗಳನ್ನೂ ತಿಳಿಸುವಂತೆ ಒತ್ತಾಯ ಪಡಿಸಲು - ಭದ್ರನು ಕೈಗಳೆರಡನ್ನೂ ಮುಗಿದುಕೊಂಡು ಏಕಾಗ್ರಚಿತ್ತನಾಗಿ ಸುರುಚಿರವಾದ ಈ ಮಾತುಗಳನ್ನು ಶ್ರೀರಾಮನಿಗೆ ಹೇಳತೊಡಗಿದನು :

'' ಮಹಾರಾಜ ! ಚೌಕಗಳಲ್ಲಿಯೂ, ಬೀದಿ –ಬೀದಿಗಳಲ್ಲಿಯೂ, ಅಂಗಡಿಗಳಲ್ಲಿಯೂ, ಉದ್ಯಾನ–ಉಪವನಗಳಲ್ಲಿಯೂ ಜನರು ನಿನ್ನ ವಿಷಯ ದಲ್ಲಿ ಶುಭವಾದ ಮತ್ತು ಅಶುಭವಾದ ಯಾವ ಮಾತುಗಳನ್ನು ಆಡುತ್ತಿರುವರೆಂಬುದನ್ನು ಹೇಳುವೆನು ; ಕೇಳು :

ದುಷ್ಕರಂ ಕೃತವಾನ್ರಾಮಃ ಸಮುದ್ರೇ ಸೇತುಬನ್ಧನಮ್ ।
ಅಶ್ರುತಂ ಪೂರ್ವಕೈಃ ಕೈಶ್ಚಿದ್ದೇವೈರಪಿ ಸದಾನವೈಃ ॥14॥

‘‘ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸಿ ಅದ್ಭುತವಾದ ಮತ್ತು ಅತಿದುಷ್ಕರವಾದ ಕಾರ್ಯವನ್ನೇ ಮಾಡಿದ್ದಾನೆ. ಹಿಂದಿನ ಯಾವ ರಾಜರೂ ದೇವ–ದಾನವರೂ ಇಂತಹ ಅದ್ಭುತವಾದ ಕಾರ್ಯವನ್ನು ಮಾಡಿರುವುದನ್ನು ನಾವು ಕೇಳಿಲ್ಲ.

ರಾವಣಶ್ಚ ದುರಾಧರ್ಷೋ ಹತಃ ಸಬಲವಾಹನಃ ।
ವಾನರಾಶ್ಚ ವಶಂ ನೀತಾ ಋಕ್ಷಾಶ್ಚ ಸಹ ರಾಕ್ಷಸೈಃ ॥15॥

ದೇವ–ದಾನವ– ಯಕ್ಷ–ಗಂಧರ್ವರಿಂದಲೂ ಎದುರಿಸಲು ಅಸಾಧ್ಯನಾಗಿದ್ದ ರಾವಣನು ಸೈನ್ಯದೊಡನೆಯೂ ವಾಹನಗಳೊಡನೆಯೂ ಶ್ರೀರಾಮನಿಂದ ಹತನಾದನು. ಋಕ್ಷ–ವಾನರ–ರಾಕ್ಷಸರೂ ಶ್ರೀರಾಮನಿಗೆ ಅಧೀನರಾದರು.

ಹತ್ವಾ ಚ ರಾವಣಂ ಸಂಖ್ಯೇ ಸೀತಾಮಾಹೃತ್ಯ ರಾಘವಃ ।
ಅಮರ್ಷಂ ಪೃಷ್ಠತಃ ಕೃತ್ವಾ ಸ್ವವೇಶ್ಮ ಪುನರಾನಯತ್ ॥16॥

ಆದರೆ ಇಲ್ಲೊಂದು ದೋಷವಿದೆ. ಯುದ್ಧದಲ್ಲಿ ಶ್ರೀರಾಮನು ರಾವಣನನ್ನು ಸಂಹರಿಸಿ ಸೀತೆಯನ್ನೇನೋ ಅರಮನೆಗೆ ಕರೆತಂದನು. ಆದರೆ ಶ್ರೀರಾಮನ ಮನಸ್ಸಿನಲ್ಲಿ ಸೀತೆಯ ಚಾರಿತ್ರ್ಯದ ವಿಷಯವಾಗಿ ಕೋಪವಾಗಲೀ ಸಂದೇಹವಾಗಲೀ ಉಂಟಾಗಲೇ ಇಲ್ಲ.

ಕೀದೃಶಂ ಹೃದಯೇ ತಸ್ಯ ಸೀತಾಸಮ್ಭೋಗಜಂ ಸುಖಮ್ ।
ಅಙ್ಕಮಾರೋಪ್ಯ ತು ಪುರಾ ರಾವಣೇನ ಬಲಾದ್ಧೃತಾಮ್ ॥17॥
ಲಙ್ಕಾಮಪಿ ಪುರಾ ನೀತಾಮಶೋಕವನಿಕಾಂ ಗತಾಮ್ ।
ರಕ್ಷಸಾಂ ವಶಮಾಪನ್ನಾಂ ಕಥಂ ರಾಮೋ ನ ಕುತ್ಸ್ಯತಿ ॥18॥
ಅಸ್ಮಾಕಮಪಿ ದಾರೇಷು ಸಹನೀಯಂ ಭವಿಷ್ಯತಿ ।
ಯಥಾ ಹಿ ಕುರುತೇ ರಾಜಾ ಪ್ರಜಾಸ್ತಮನುವರ್ತತೇ ॥19॥

ಸೀತಾಸಮಾಗಮದಿಂದ ಅವನಿಗೆ ಎಂತಹ ಸುಖವು ತಾನೇ ಪ್ರಾಪ್ತ

ವಾದೀತು? ರಾವಣನಾದರೋ ಸೀತೆಯನ್ನು ಬಲಾತ್ಕಾರದಿಂದ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅಪಹರಿಸಿಕೊಂಡು ಲಂಕೆಗೆ ಹೋದನು. ಅಲ್ಲಿ ತನ್ನ ಅಂತಃಪುರದ ಕ್ರೀಡಾವನವಾಗಿದ್ದ ಅಶೋಕವನದಲ್ಲಿ ಅವಳನ್ನು ಇಟ್ಟಿದ್ದನು. ಹೀಗೆ ಅವಳು ಬಹಳ ದಿವಸಗಳವರೆಗೆ ರಾಕ್ಷಸರ ವಶದಲ್ಲಿಯೇ ಇದ್ದಳು. ಅಂತಹವಳನ್ನೇಕೆ ಶ್ರೀರಾಮನು ನಿಂದೆಗೆ ಗುರಿಪಡಿಸಲಿಲ್ಲ? ನಮ್ಮ ಹೆಂಡತಿಯರ ವಿಷಯದಲ್ಲೂ ಅಂಥಾದ್ದನ್ನು ಸಹಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ: ರಾಜನು ಹೇಗೆ ಮಾಡಿದರೆ ಪ್ರಜೆಗಳೂ ಹಾಗೆಯೇ ಮಾಡುತ್ತಾರೆ.

ಮಹಾರಾಜ! ಹೀಗೆ ನಗರದಲ್ಲಿರುವ ಮತ್ತು ಹಳ್ಳಿಗಳಲ್ಲಿರುವ ಜನರು ಅನೇಕ ಪ್ರಕಾರವಾಗಿ ಮಾತನಾಡಿಕೊಳ್ಳುತ್ತಿದ್ದಾರೆ.''

ಭದ್ರನು ಹೇಳಿದ ಮಾತನ್ನು ಕೇಳಿ ಶ್ರೀರಾಮನು ಪರಮದುಃಖಿತನಾಗಿ ಉಳಿದೆಲ್ಲ ಸುಹೃದರೊಡನೆ ಹೇಳಿದನು : ''ಸುಹೃದರೇ ! ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ? ಈ ಮಾತು ಎಷ್ಟು ಸತ್ಯವಾಗಿದೆ ?- ಎಂಬುದನ್ನು ಹೇಳಿರಿ.''

ಶ್ರೀರಾಮನ ಮಾತಿಗೆ ಎಲ್ಲ ಸುಹೃದರೂ ದೀರ್ಘದಂಡನಮಸ್ಕಾರ ಮಾಡಿ ಕೈಜೋಡಿಸಿಕೊಂಡು ದೀನರಾಗಿ ಹೇಳಿದನು: **'ಏವಮೇತತ್ ನ ಸಂಶಯಃ'** - ಭದ್ರನು ಹೇಳಿದುದು ವಾಸ್ತವವಾಗಿದೆ. ಇದರಲ್ಲಾವ ಸಂಶಯವೂ ಇಲ್ಲ. ಪ್ರಜೆಗಳೆಲ್ಲರೂ ಹೀಗೆ ಆಡಿಕೊಳ್ಳುತ್ತಿರುವುದಂತೂ ನಿಜ.''

ಶತ್ರುಸೂದನನಾದ ಶ್ರೀರಾಮನು ಎಲ್ಲರಿಂದಲೂ ಇದೇ ಮಾತನ್ನು ಕೇಳಿ ವಯಸ್ಯರೆಲ್ಲರನ್ನೂ ಅವರವರ ಮನೆಗಳಿಗೆ ಕಳುಹಿಸಿಕೊಟ್ಟನು.

43ನೆಯ ಸರ್ಗವು ಮುಗಿಯಿತು.

ಸೋದರರೊಡನೆ ಶ್ರೀರಾಮನ ಸಂಭಾಷಣೆ

ವಿಸೃಜ್ಯ ತು ಸುಹೃದ್ವರ್ಗಂ ಬುದ್ಧ್ಯಾ ನಿಶ್ಚಿತ್ಯ ರಾಘವಃ।
ಸಮೀಪೇ ದ್ವಾಃಸ್ಥಮಾಸೀನಮಿದಂ ವಚನಮಬ್ರವೀತ್ ॥1॥

ಸುಹೃದರನ್ನು ಕಳುಹಿಸಿಕೊಟ್ಟನಂತರ ಶ್ರೀರಾಮನು ಮುಂದೆ ತಾನು ಮಾಡಬೇಕಾಗಿರುವ ಕಾರ್ಯವನ್ನು ನಿಶ್ಚಯಿಸಿ ಹತ್ತಿರದಲ್ಲಿದ್ದ ದ್ವಾರ ಪಾಲಕನಿಗೆ ಹೇಳಿದನು :

''ದ್ವಾರಪಾಲಕನೇ! ಸುಮಿತ್ರೆಯ ಮಗನಾದ ಶುಭಲಕ್ಷಣ ಸಂಪನ್ನನಾದ ಲಕ್ಷ್ಮಣನನ್ನೂ, ಮಹಾಭಾಗ್ಯಶಾಲಿಯಾದ ಭರತನನ್ನೂ, ಅಪರಾಜಿತನಾದ ಶತ್ರುಘ್ನನನ್ನೂ ಶೀಘ್ರವಾಗಿ ಕರೆದುಕೊಂಡು ಬಾ.''

ಶ್ರೀರಾಮನ ಮಾತನ್ನು ಕೇಳಿ ಪ್ರತೀಹಾರಿಯು ತಲೆಯ ಮೇಲೆ ಕೈಜೋಡಿಸಿಕೊಂಡು ಶ್ರೀರಾಮನಿಗೆ ನಮಸ್ಕರಿಸಿ ಲಕ್ಷ್ಮಣನ ಮನೆಗೆ ಹೋಗಿ ಯಾವ ತಡೆಯೂ ಇಲ್ಲದೆ ಒಳಗೆ ಪ್ರವೇಶಿಸಿದನು. ಬಳಿಕ ಲಕ್ಷ್ಮಣನಿಗೆ ಕೈ ಜೋಡಿಸಿ ನಮಸ್ಕರಿಸಿ ಜಯಕಾರ ಮಾಡುತ್ತಾ ಹೇಳಿದನು :

ದ್ರಷ್ಟುಮಿಚ್ಛತಿ ರಾಜಾ ತ್ವಾಂ ಗಮ್ಯತಾಂ ತತ್ರ ಮಾ ಚಿರಮ್ ॥4॥

''ರಾಜಕುಮಾರನೇ! ಮಹಾರಾಜನು ನಿನ್ನನ್ನು ನೋಡಲು ಅಪೇಕ್ಷಿಸಿದ್ದಾನೆ. ಸಾವಕಾಶಮಾಡದೆ ಶೀಘ್ರವಾಗಿ ರಾಜನ ಬಳಿಗೆ ಹೋಗು.''

ಲಕ್ಷ್ಮಣನು **'ಬಾಢಂ'** ಹಾಗೆಯೇ ಆಗಲಿ – ಎಂದು ಹೇಳುತ್ತಾ ಶ್ರೀರಾಘವನ ಆಜ್ಞೆಯನ್ನು ಶಿರಸಾವಹಿಸಿ ರಥದಲ್ಲಿ ಕುಳಿತು ಶ್ರೀರಾಮನ ಅರಮನೆಗೆ ಧಾವಿಸಿದನು. ಲಕ್ಷ್ಮಣನು ಶ್ರೀರಾಮನ ನಿವಾಸಕ್ಕೆ ಹೊರಟುದನ್ನು ನೋಡಿ ದ್ವಾರಪಾಲಕನು ಭರತನ ಅರಮನೆಗೆ ಹೋಗಿ ಕೈಮುಗಿದು ಜಯಕಾರಮಾಡುತ್ತಾ ವಿನಯಭಾವದಿಂದ ತಲೆತಗ್ಗಿಸಿಕೊಂಡು ಭರತನಿಗೆ **''ರಾಜಾ ತ್ವಾಂ ದ್ರಷ್ಟುಮಿಚ್ಛತಿ** ರಾಜನು ನಿನ್ನನ್ನು ನೋಡಲು ಬಯಸಿದ್ದಾನೆ''– ಎಂದು ಹೇಳಿದನು.

ಭರತನು ದ್ವಾರಪಾಲಕನಿಂದ ಶ್ರೀರಾಮನ ಆಜ್ಞೆಯನ್ನು ಕೇಳಿ ಒಡನೆಯೇ ಆಸನದಿಂದ ಮೇಲೆದ್ದು ಕಾಲ್ನಡಿಗೆಯಲ್ಲಿಯೇ ಶ್ರೀರಾಮನ ಅರಮನೆಗೆ ತೆರಳಿದನು. ದ್ವಾರಪಾಲಕನು ಭರತನು ಹೊರಟುದನ್ನು ನೋಡಿ ಶತ್ರುಘ್ನನ ಅರಮನೆಗೆ ಅವಸರದಿಂದ ಬಂದು ಕೈಜೋಡಿಸಿಕೊಂಡು ಹೇಳಿದನು :

ಏಹ್ಯಾಗಚ್ಛ ರಘುಶ್ರೇಷ್ಠ ರಾಜಾ ತ್ವಾಂ ದ್ರಷ್ಟುಮಿಚ್ಛತಿ ।
ಗತೋ ಹಿ ಲಕ್ಷ್ಮಣಃ ಪೂರ್ವಂ ಭರತಶ್ಚ ಮಹಾಯಶಾಃ ॥9॥

'' ಭರತಶ್ರೇಷ್ಠನೇ ! ಶತ್ರುಘ್ನ ! ಆಗಮಿಸು ! ಬೇಗ ಹೊರಡು. ಮಹಾರಾಜನಾದ ಶ್ರೀರಾಮನು ನಿನ್ನನ್ನು ನೋಡಲು ಬಯಸಿದ್ದಾನೆ. ಲಕ್ಷ್ಮಣನೂ ಮಹಾಯಶೋವಂತನಾದ ಭರತನೂ ಈಗಾಗಲೇ ಹೋಗಿದ್ದಾರೆ. ಆದುದರಿಂದ ನೀನೂ ಶೀಘ್ರವಾಗಿ ಹೊರಟುಬಿಡು.''

ದ್ವಾರಪಾಲಕನ ಮಾತನ್ನುಕೇಳಿ ಶತ್ರುಘ್ನನು ಆಸನದಿಂದೆದ್ದು ನಮಸ್ಕಾರ ಮಾಡಿ (ಶ್ರೀರಾಮನನ್ನು ಮನಸ್ಸಿನಿಂದಲೇ ನಮಿಸಿ) ರಾಘವನಿದ್ದೆಡೆಗೆ ಧಾವಿಸಿದನು. ಆ ವೇಳೆಗೆ ದ್ವಾರಪಾಲಕನು ಪುನಃ ಶ್ರೀರಾಮನ ಬಳಿಗೆ ಬಂದು ಎಲ್ಲ ಸಹೋದರರೂ ಆಗಮಿಸಿರುವ ವಾರ್ತೆಯನ್ನು ಶ್ರೀರಾಮನಿಗೆ ಅರುಹಿದನು. ರಾಜಕುಮಾರರೆಲ್ಲರೂ ಆಗಮಿಸಿರುವುದನ್ನು ಕೇಳಿ ಚಿಂತೆಯಿಂದ ವ್ಯಾಕುಲಿತ ವಾದ ಇಂದ್ರಿಯಗಳಿಂದ ಕೂಡಿದ್ದ, ಅಧೋಮುಖನಾಗಿದ್ದ, ದೀನಚಿತ್ತನಾಗಿದ್ದ ಶ್ರೀರಾಮನು ದ್ವಾರಪಾಲಕನಿಗೆ ಹೇಳಿದನು:

'' ದ್ವಾರಪಾಲಕನೇ ! ನೀನು ಬಹಳ ಶೀಘ್ರವಾಗಿ ನನ್ನ ಸಹೋದರರನ್ನು ಒಳಕ್ಕೆ ಕರೆದುಕೊಂಡು ಬಾ.

ಏತೇಷು ಜೀವಿತಂ ಮಹ್ಯಮೇತೇ ಪ್ರಾಣಾಃ ಪ್ರಿಯಾ ಮಮ ॥13॥

ನನ್ನ ಜೀವಿತವೇ ಇವರನ್ನು ಅವಲಂಬಿಸಿದೆ. ಇವರೆಲ್ಲರೂ ನನಗೆ ಪ್ರಾಣಸ್ವರೂಪರಾಗಿ ಅತ್ಯಂತಪ್ರಿಯರಾಗಿದ್ದಾರೆ.''

ಬಿಳಿಯ ಬಟ್ಟೆಗಳನ್ನುಟ್ಟಿದ್ದ ರಾಜಕುಮಾರರು ಅತ್ಯಂತ ವಿನೀತರಾಗಿ ಕೈಗಳನ್ನು ಜೋಡಿಸಿಕೊಂಡು ಏಕಾಗ್ರಚಿತ್ತರಾಗಿ ರಾಜನ ಆಜ್ಞೆಯಂತೆ ಶ್ರೀರಾಮನ ಭವನವನ್ನು ಪ್ರವೇಶಿಸಿದರು. ಆ ಸಮಯದಲ್ಲಿ ಶ್ರೀರಾಮನು ರಾಹುಗ್ರಸ್ತನಾದ ಚಂದ್ರನಂತೆಯೂ ಸಂಧ್ಯಾಕಾಲದ ಸೂರ್ಯನಂತೆಯೂ

ಪ್ರಭಾಶೂನ್ಯನಾಗಿದ್ದನು. ಧೀಮಂತನಾದ ಶ್ರೀರಾಮನ ಎರಡು ಕಣ್ಣುಗಳೂ ಕಂಬನಿಯಿಂದ ತುಂಬಿಕೊಂಡಿದ್ದುವು. ಕಾಂತಿಹೀನವಾದ ಪದ್ಮದಂತೆ ನಿಸ್ತೇಜವಾಗಿದ್ದ ಶ್ರೀರಾಮನ ಮುಖವನ್ನು ಎಲ್ಲರೂ ನೋಡಿದರು. ಒಡನೆಯೇ ಅವರೆಲ್ಲರೂ ತ್ವರೆಯಿಂದ ಶ್ರೀರಾಮನ ಪಾದಗಳನ್ನು ತಲೆಗಳಿಂದ ಮುಟ್ಟಿ ಏಕಾಗ್ರಚಿತ್ತರಾಗಿ ಶ್ರೀರಾಮನ ಆಜ್ಞೆಯನ್ನು ನಿರೀಕ್ಷಿಸುತ್ತಾ ನಿಂತರು. ಮಹಾಬಲನಾದ ಶ್ರೀರಾಮನು ಕಣ್ಣೀರುಸುರಿಸುತ್ತಲೇ ಸಿಂಹಾಸನದಿಂದ ಮೇಲೆದ್ದು ಎರಡು ತೋಳುಗಳಿಂದಲೂ ಒಬ್ಬೊಬ್ಬರನ್ನಾಗಿ ತಬ್ಬಿಕೊಂಡು ಎಲ್ಲರಿಗೂ ಆಸನಗಳಲ್ಲಿ ಕುಳಿತುಕೊಳ್ಳುವಂತೆ ಹೇಳಿ ಮೂವರೂ ಆಸನಾರೂಢರಾದ ನಂತರ ಹೇಳತೊಡಗಿದನು :

ಭವನ್ತೋ ಮಮ ಸರ್ವಸ್ವಂ ಭವನ್ತೋ ಜೀವಿತಂ ಮಮ ।
ಭವದ್ಭಿಶ್ಚ ಕೃತಂ ರಾಜ್ಯಂ ಪಾಲಯಾಮಿ ನರೇಶ್ವರಾಃ ॥19॥

''ಸಹೋದರರೇ ! ನೀವೇ ನನ್ನ ಸರ್ವಸ್ವವೂ ಆಗಿರುವಿರಿ. ನೀವೇ ನನ್ನ ಜೀವಿತವೂ ಆಗಿರುವಿರಿ. ನೀವು ಸಂಪಾದಿಸಿರುವ ಈ ರಾಜ್ಯವನ್ನು ನಾನು ಪರಿಪಾಲನೆ ಮಾಡುತ್ತಿದ್ದೇನೆ.

ಭವನ್ತಃ ಕೃತಶಾಸ್ತ್ರಾರ್ಥಾ ಬುದ್ಧ್ಯಾ ಚ ಪರಿನಿಷ್ಠಿತಾಃ ।
ಸಮ್ಭೂಯ ಚ ಮದರ್ಥೋಽಯಮನ್ವೇಷ್ಟವ್ಯೋ ನರೇಶ್ವರಾಃ ॥20॥

ನೀವೆಲ್ಲರೂ ಎಲ್ಲ ಶಾಸ್ತ್ರಾರ್ಥಗಳನ್ನೂ ಬಲ್ಲವರು. ಪರಿಷ್ಕೃತವಾದ ಬುದ್ಧಿಯುಳ್ಳವರು. ಶಾಸ್ತ್ರಗಳಲ್ಲಿ ಹೇಳಿರುವಂತೆ ನಡೆದುಕೊಳ್ಳುವವರು. ಈಗ ನಾನು ನನಗೆ ಸಂಬಂಧಿಸಿದಂತೆ ಸಮಸ್ಯೆಯೊಂದನ್ನು ನಿಮ್ಮ ಮುಂದಿಡುತ್ತಿದ್ದೇನೆ. ನೀವೆಲ್ಲರೂ ಸೇರಿ ನನ್ನ ಸಮಸ್ಯೆಗೆ ಒಂದು ಮಾರ್ಗವನ್ನು ಹುಡುಕಬೇಕಾಗಿದೆ.''

ಶ್ರೀರಾಮನು ಹೀಗೆ ಹೇಳಲು ಅವನು ಹೇಳುತ್ತಿರುವುದನ್ನೇ ಏಕಾಗ್ರತೆಯಿಂದ ಕೇಳಿಸಿಕೊಳ್ಳುತ್ತಿದ್ದ ಮೂವರು ತಮ್ಮಂದಿರೂ ಉದ್ವಿಗ್ನಚಿತ್ತರಾಗಿ ರಾಜನೇನು ಹೇಳಲಿರುವನೆಂಬುದನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು.

44ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 45ನೆಯ ಸರ್ಗ

ಶ್ರೀರಾಮನು ಅನುಜರಲ್ಲಿ ಲೋಕಾಪವಾದದ ವಿಷಯವನ್ನು ಪ್ರಸ್ತಾಪಿಸಿದುದು : ಸೀತೆಯನ್ನು ಕಾಡಿನಲ್ಲಿ ಬಿಟ್ಟುಬರಲು ಲಕ್ಷ್ಮಣನಿಗೆ ಆಜ್ಞೆಮಾಡಿದುದು

ತೇಷಾಂ ಸಮುಪವಿಷ್ಟಾನಾಂ ಸರ್ವೇಷಾಂ ದೀನಚೇತಸಾಮ್ ।
ಉವಾಚ ವಾಕ್ಯಂ ಕಾಕುತ್ಸ್ಥೋ ಮುಖೇನ ಪರಿಶುಷ್ಯತಾ ॥1॥

ದೀನಮನಸ್ಕರಾಗಿ ಕುಳಿತಿದ್ದ ಅವರೆಲ್ಲರ ಮಧ್ಯದಲ್ಲಿ ಬಾಡಿಹೋದ ಮುಖದಿಂದ ಕೂಡಿದ್ದ ಶ್ರೀರಾಮನು ಹೇಳಿದನು :

ಸರ್ವೇ ಶೃಣುತ ಭದ್ರಂ ವೋ ಮಾ ಕುರುಧ್ವಂ ಮನೋಽನ್ಯಥಾ ।
ಪೌರಾಣಾಂ ಮಮ ಸೀತಾಯಾಂ ಯಾದೃಶೀ ವರ್ತತೇ ಕಥಾ ॥2॥

''ಸಹೋದರರೇ ! ನಿಮಗೆ ಮಂಗಳವಾಗಲಿ, ಮನಸ್ಸನ್ನು ಯಾವ ಕಡೆಗೂ ಹರಿಬಿಡದೆ ಏಕಾಗ್ರಚಿತ್ತರಾಗಿ ನಮ್ಮ ಪ್ರಜೆಗಳ ಮನೆಗಳಲ್ಲಿ ನನ್ನ ವಿಷಯವಾಗಿ ಮತ್ತು ಸೀತೆಯ ವಿಷಯವಾಗಿ ಯಾವ ವಿಧವಾದ ಚರ್ಚೆಗಳು ನಡೆಯುತ್ತಿವೆಯೆಂಬುದನ್ನು ಕೇಳಿರಿ.

ಪೌರಾಪವಾದಃ ಸುಮಹಾಂಸ್ತಥಾ ಜನಪದಸ್ಯ ಚ ।
ವರ್ತತೇ ಮಯಿ ಬೀಭತ್ಸಾ ಸಾ ಮೇ ಮರ್ಮಾಣಿ ಕೃನ್ತತಿ ॥3॥

ಪಟ್ಟಣಿಗರೂ ಮತ್ತು ಪ್ರಾಂತೀಯಜನರೂ ನನ್ನವಿಷಯದಲ್ಲಿ ಕುತ್ಸಿತವಾದ ಭಾವನೆಯನ್ನೇ ಹೊಂದಿದ್ದಾರೆ. ಇದು ನನ್ನ ಮರ್ಮಸ್ಥಳಗಳನ್ನು ಕತ್ತರಿಸಿಹಾಕುತ್ತಿದೆ.

ಅಹಂ ಕಿಲ ಕುಲೇ ಜಾತ ಇಕ್ಷ್ವಾಕೂಣಾಂ ಮಹಾತ್ಮನಾಮ್ ।
ಸೀತಾಪಿ ಸತ್ಕುಲೇ ಜಾತಾ ಜನಕಾನಾಂ ಮಹಾತ್ಮನಾಮ್ ॥4॥

ನಾನಾದರೋ ಮಹಾತ್ಮರಾದ ಇಕ್ಷ್ವಾಕುಗಳ ಶ್ರೇಷ್ಠರಾದ ಕುಲದಲ್ಲಿ ಜನಿಸಿದವನು. ಅಂತೆಯೇ ಸೀತೆಯೂ ಮಹಾತ್ಮರಾದ ಜನಕನ ಉತ್ತಮ ಕುಲದಲ್ಲಿ ಹುಟ್ಟಿದವಳು.

ಸೌಮ್ಯನೇ ! ಲಕ್ಷ್ಮಣ ! ನಿರ್ಜನವಾಗಿದ್ದ ದಂಡಕಾರಣ್ಯದಲ್ಲಿ ಸೀತೆ

ಯನ್ನು ರಾವಣನು ಅಪಹರಿಸಿದ ವಿಷಯವೂ - ನಾನು ರಾವಣನನ್ನು ಸಂಹರಿಸಿ ಪತಿವ್ರತೆಯಾದ ಸೀತೆಯನ್ನು ಕರೆತಂದ ವಿಷಯವೂ ನಿನಗೆ ತಿಳಿದಿದೆ.

ರಾವಣನ ಅರಮನೆಯಲ್ಲಿಯೇ ಬಹಳ ದಿವಸಗಳವರೆಗೆ ವಾಸವಾಗಿದ್ದ ಸೀತೆಯನ್ನು ಹೇಗೆ ಕರೆದೊಯ್ಯಲೆಂಬ ಬುದ್ಧಿಯು ನನಗೆ ಅಲ್ಲಿಯೇ ಹುಟ್ಟಿದ್ದಿತು. ತಾನು ಪರಿಶುದ್ಧಳೆಂಬ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ ಸೀತೆಯು ನಿನ್ನೆದುರಿನಲ್ಲಿಯೇ ಅಗ್ನಿಪ್ರವೇಶ ಮಾಡಿದಳು. ನಿನ್ನೆದುರಿನಲ್ಲಿ ಮತ್ತು ಎಲ್ಲ ದೇವತೆಗಳ ಸಮಕ್ಷದಲ್ಲಿ ಅಗ್ನಿದೇವನು ಪ್ರತ್ಯಕ್ಷನಾಗಿ ಮೈಥಿಲಿಯು ನಿಷ್ಪಾಪಳೆಂದು ಹೇಳಿದನು. ಆಕಾಶದಲ್ಲಿ ಸಂಚರಿಸುವ ವಾಯುವೂ ಮತ್ತು ಚಂದ್ರಾದಿತ್ಯರು ಕೂಡ ದೇವತೆಗಳ ಮತ್ತು ಋಷಿಗಳ ಸನ್ನಿಧಿಯಲ್ಲಿ ಸೀತೆಯು ನಿಷ್ಪಾಪಳೆಂದು ಸಾರಿ ಹೇಳಿದರು. ಹೀಗೆ ಎಲ್ಲರೂ ನಿಶ್ಚಯಮಾಡಿ ಸೀತಾದೇವಿಯು ಪವಿತ್ರಳೆಂದು ಹೇಳಿದನಂತರ ಶುದ್ಧ ಚಾರಿತ್ರಳಾದ ಸೀತಾದೇವಿಯನ್ನು ಲಂಕೆಯಲ್ಲಿ ದೇವ-ಗಂಧರ್ವರ ಸಮ್ಮುಖದಲ್ಲಿ ಇಂದ್ರನೇ ನನ್ನ ವಶಕ್ಕೊಪ್ಪಿಸಿದನು.

ಅನ್ತರಾತ್ಮಾ ಚ ಮೇ ವೇತ್ತಿ ಸೀತಾಂ ಶುದ್ಧಾಂ ಯಶಸ್ವಿನೀಮ್ ।

ನನ್ನ ಅಂತರಾತ್ಮಕ್ಕೂ ಯಶಸ್ವಿನಿಯಾದ ಸೀತೆಯು ಪರಿಶುದ್ಧಳೆಂಬ ವಿಷಯವು ತಿಳಿದಿತ್ತು. ಈ ಕಾರಣದಿಂದಲೇ ನಾನು ಸೀತೆಯನ್ನು ಅಯೋಧ್ಯೆಗೆ ಕರೆತಂದೆನು. ಆದರೆ ಸೀತೆಯ ವಿಷಯವಾಗಿ ಅಪವಾದವು ಸರ್ವತ್ರ ಹರಡಿಬಿಟ್ಟಿದೆ. ಪುರವಾಸಿಗಳೂ ಮತ್ತು ದೇಶವಾಸಿಗಳೂ ನನ್ನ ಮೇಲೆ ಮಹತ್ತರವಾದ ಆಪಾದನೆಯನ್ನೂ ಹೊರೆಸುತ್ತಿದ್ದಾರೆ. ಇದು ನನ್ನ ಮನಸ್ಸಿನಲ್ಲಿ ಮಹತ್ತರವಾದ ವ್ಯಥೆಯನ್ನುಂಟುಮಾಡಿದೆ.

ಅಕೀರ್ತಿರ್ಯಸ್ಯ ಗೀಯೇತ ಲೋಕೇ ಭೂತಸ್ಯ ಕಸ್ಯಚಿತ್ ।
ಪತತ್ಯೇವಾಧಮಾನ್ ಲೋಕಾನ್ ಯಾವಚ್ಛಬ್ದಃ ಪ್ರಕೀರ್ತ್ಯತೇ ॥

ಯಾವ ಪ್ರಾಣಿಯ ಅಪಕೀರ್ತಿಯು ಲೋಕದಲ್ಲಿ ಚರ್ಚೆಗೆ ವಿಷಯವಾಗುವುದೋ - ಅಂತಹವನು ತನ್ನ ಅಪಕೀರ್ತಿಯ ಚರ್ಚೆಯು ಲೋಕದಲ್ಲಿ ನಡೆಯುತ್ತಿರುವವರೆಗೂ ನರಕದಲ್ಲಿ ಬಿದ್ದಿರಬೇಕಾಗುತ್ತದೆ.

ಅಕೀರ್ತಿರ್ನಿನ್ದ್ಯತೇ ದೇವೈಃ ಕೀರ್ತಿರ್ಲೋಕೇಷು ಪೂಜ್ಯತೇ ।
ಕೀರ್ತ್ಯರ್ಥಂ ತು ಸಮಾರಮ್ಭಃ ಸರ್ವೇಷಾಂ ಸುಮಹಾತ್ಮನಾಮ್ ॥

ದೇವತೆಗಳು ಲೋಕದಲ್ಲಿ ಅಪಕೀರ್ತಿಯನ್ನು ನಿಂದಿಸುತ್ತಾರೆ. ಕೀರ್ತಿಯನ್ನು ಶ್ಲಾಘಿಸುತ್ತಾರೆ. ಶ್ರೇಷ್ಠರಾದ ಮಹಾತ್ಮರ ಸಮಸ್ತಕಾರ್ಯಗಳೂ ಉತ್ತಮಕೀರ್ತಿಯನ್ನು ಪಡೆಯುವ ಸಲುವಾಗಿಯೇ ಆರಂಭಿಸಲ್ಪಡುತ್ತವೆ.

ಅಪ್ಯಹಂ ಜೀವಿತಂ ಜಹ್ಯಾಂ ಯುಷ್ಮಾನ್ವಾ ಪುರುಷರ್ಷಭಾಃ ।
ಅಪವಾದಭಯಾದ್ಭೀತಃ ಕಿಂ ಪುನರ್ಜನಕಾತ್ಮಜಾಮ್ ॥14॥

ಪುರುಷಶ್ರೇಷ್ಠರೇ ! ನಾನು ಲೋಕಾಪವಾದದ ಭಯಕ್ಕಾಗಿ ನನ್ನ ಪ್ರಾಣಗಳನ್ನಾದರೂ ತೊರೆದೇನು. ನಿಮ್ಮನ್ನಾದರೂ ಪರಿತ್ಯಜಿಸಿಯೇನು. ಹೀಗಿರುವಾಗ ಸೀತೆಯ ತ್ಯಾಗದಲ್ಲಿ ಹೇಳುವುದೇನಿದೆ ?

ನಾನೀಗ ಶೋಕಸಾಗರದಲ್ಲಿ ಮುಳುಗಿಹೋಗಿರುವುದನ್ನು ನೀವೆಲ್ಲರೂ ನೋಡಿರಿ. ಇದಕ್ಕಿಂತಲೂ ಅಧಿಕತರವಾದ ದುಃಖವನ್ನು ನಾನು ಹಿಂದೆಂದೂ ಅನುಭವಿಸಿದ ಸ್ಮರಣೆಯು ನನಗಿಲ್ಲ. ಲಕ್ಷ್ಮಣ! ನೀನು ನಾಳೆ ಬೆಳಗಾಗುತ್ತಲೇ ಸುಮಂತ್ರನೇ ಸಾರಥಿಯಾಗಿರುವ ರಥದಲ್ಲಿ ಸೀತೆಯನ್ನು ಕುಳ್ಳಿರಿಸಿಕೊಂಡು ನಮ್ಮ ರಾಜ್ಯದ ಗಡಿಯಿಂದಾಚೆಗೆ ಬಿಟ್ಟು ಬಾ.

ಗಂಗಾನದಿಯ ಆಚೆಯ ದಡದಲ್ಲಿ ಮಹಾತ್ಮರಾದ ವಾಲ್ಮೀಕಿಗಳ ದಿವ್ಯಾಶ್ರಮವಿದೆ. ತಮಸಾನದೀತೀರದಲ್ಲಿರುವ ಆ ದಿವ್ಯಾಶ್ರಮದಲ್ಲಿ ನೀನು ಅವಳನ್ನು ನಿರ್ಜನವಾದ ಪ್ರದೇಶದಲ್ಲಿ ಬಿಟ್ಟು ಶೀಘ್ರವಾಗಿ ಬಂದುಬಿಡು. ನನ್ನ ಮಾತಿನಂತೆ ನೀನು ನಡೆದುಕೊಳ್ಳಲೇಬೇಕು. ಸೀತೆಯ ವಿಷಯವಾಗಿ ನೀನು ನನ್ನೊಡನೆ ಯಾವ ಮಾತನ್ನೂ ಹೇಳಬಾರದು. ಯಾವುದೊಂದನ್ನೂ ವಿಚಾರಮಾಡದೆಯೇ ನೀನು ಈ ಕಾರ್ಯವನ್ನು ಮಾಡಬೇಕು. ನೀನು ಈ ಕಾರ್ಯವನ್ನು ಮಾಡಲು ಪ್ರತಿರೋಧಿಸಿದ್ದೇ ಆದರೆ ನನಗೆ ಇದರಿಂದ ಹೆಚ್ಚಿನ ಅಸಮಾಧಾನವೇ ಆಗುತ್ತದೆ. ನನ್ನ ಪಾದಗಳ ಮೇಲೂ ಮತ್ತು ನನ್ನ ಜೀವಿತದ ಮೇಲೂ ಆಣೆಯಿಟ್ಟು ನಿಮಗೆ ಹೇಳುತ್ತಿದ್ದೇನೆ. ನಿಮ್ಮಲ್ಲಿ ಯಾರಾದರೂ ಮಾತಿನ ಮಧ್ಯದಲ್ಲಿ ನನ್ನನ್ನು ಸಮಾಧಾನಗೊಳಿಸಲು ಯಾವುದಾದರೂ ಮಾತುಗಳನ್ನು ಆಡಿದ್ದೇ ಆದರೆ – ಅಂತಹವರು ನನಗೆ ಅಭೀಷ್ಟವಾದ

ಕಾರ್ಯಕ್ಕೆ ತಡೆಯನ್ನುಂಟುಮಾಡುವುದರಿಂದ ನನಗೆ ಶತ್ರುಗಳೇ ಆಗು ವಿರಿ. ನೀವೆಲ್ಲರೂ ನನ್ನ ಮಾತನ್ನು ಮಾನ್ಯಮಾಡುವಿರಾದರೆ - ನನ್ನ ಆಜ್ಞಾ ಪಾಲಕರಾಗಿರುವುದಾದರೆ - ಈಗಲೇ ಇಲ್ಲಿಂದ ಸೀತೆಯನ್ನು ಅರಣ್ಯಕ್ಕೆ ಕರೆದು ಕೊಂಡು ಹೋಗಿರಿ. ಲಕ್ಷ್ಮಣ ! ಈ ನನ್ನ ಮಾತನ್ನು ನಡೆಸು.

ಈ ಹಿಂದೆಯೇ ಸೀತೆಯು ಗಂಗಾತೀರವಾಸಿಗಳಾದ ಋಷಿಗಳ ಆಶ್ರಮವನ್ನು ನೋಡಬಯಸಿದ್ದಳು. ಅವಳ ಆ ಬಯಕೆಯನ್ನೂ ಪೂರ್ಣಗೊಳಿಸಿ ದಂತಾಗುತ್ತದೆ.''

ಶ್ರೀರಾಮನು ಹೀಗೆ ಹೇಳುತ್ತಿದ್ದಾಗ ಅವನ ಕಣ್ಣುಗಳಲ್ಲಿ ಕಂಬನಿಯು ತುಂಬಿದ್ದಿತು. ಸಹೋದರರಿಂದ ಪರಿವೃತನಾಗಿದ್ದ ಶ್ರೀರಾಮನು ಅರಮನೆ ಯೊಳಕ್ಕೆ ಹೊರಟುಹೋದನು. ಶೋಕದಿಂದ ವ್ಯಾಕುಲಿತವಾದ ಮನಸ್ಸಿ ನಿಂದ ಕೂಡಿದ್ದ ರಾಘವನು ಬಂಧನದಲ್ಲಿರುವ ಆನೆಯಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದನು.

45ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **46ನೆಯ ಸರ್ಗ**

ಲಕ್ಷ್ಮಣನು ಸೀತೆಯನ್ನು ಗಂಗಾತೀರಕ್ಕೆ ಕರೆದೊಯ್ದುದು

ತತೋ ರಜನ್ಯಾಂ ವ್ಯುಷ್ಟಾಯಾಂ ಲಕ್ಷ್ಮಣೋ ದೀನಚೇತನಃ ।
ಸುಮನ್ತ್ರಮಬ್ರವೀದ್ವಾಕ್ಯಂ ಮುಖೇನ ಪರಿಶುಷ್ಯತಾ ॥1॥

ರಾತ್ರಿಯು ಕಳೆಯಿತು. ದೀನಮನಸ್ಕನಾಗಿದ್ದ ಲಕ್ಷ್ಮಣನು ಬಾಡಿದ ಮುಖಭಾವದಿಂದ ಕೂಡಿದವನಾಗಿ ಸುಮಂತ್ರನಿಗೆ ಹೇಳಿದನು :

''ಸಾರಥಿಯೇ ! ಸುಮಂತ್ರ ! ಶ್ರೇಷ್ಠವಾದ ರಥಕ್ಕೆ ಶೀಘ್ರವಾಗಿ ಹೋಗುವ ಕುದುರೆಗಳನ್ನು ಹೂಡು. ಆ ರಥದಲ್ಲಿ ಸೀತಾದೇವಿಯ ಸಲು ವಾಗಿ ಸುಂದರವಾಗಿರುವ ಆಸನವನ್ನಿರಿಸು. ರಾಜನ ಆಜ್ಞೆಯಂತೆ ನಾನು ಪುಣ್ಯಕರ್ಮಿಗಳಾದ ಮಹರ್ಷಿಗಳ ಆಶ್ರಮಕ್ಕೆ ಸೀತೆಯನ್ನು ಕರೆದೊಯ್ಯ ಬೇಕಾಗಿದೆ. ಆದುದರಿಂದ ರಥವನ್ನು ಶೀಘ್ರವಾಗಿ ತೆಗೆದುಕೊಂಡು ಬಾ.''

ಸುಮಂತ್ರನು ಹಾಗೆಯೇ ಆಗಲೆಂದು ಹೇಳಿ ಶ್ರೇಷ್ಠವಾದ ಕುದುರೆ ಗಳಿಂದ ಹೂಡಲ್ಪಟ್ಟಿದ್ದ ಸುಂದರವಾದ ರಥವನ್ನು ತಂದನು. ಅದರಲ್ಲಿ

ಸುಂದರವಾದ ಹಚ್ಚಡದಿಂದ ಹೊದಿಸಲ್ಪಟ್ಟಿದ್ದ ಸುಖಕರವಾದ ಹಾಸಿಗೆಯೂ ಇಡಲ್ಪಟ್ಟಿದ್ದಿತು. ರಥವನ್ನು ತಂದು ಸುಮಂತ್ರನು ಮಿತ್ರರ ಮರ್ಯಾದೆಯನ್ನು ಹೆಚ್ಚಿಸುವ ಲಕ್ಷ್ಮಣನಿಗೆ ಹೇಳಿದನು :

''ಸುಮಿತ್ರಾನಂದನನೇ! ನೀನು ಹೇಳಿದಂತೆ ರಥವನ್ನು ಸಿದ್ಧಗೊಳಿಸಿ ತಂದಿರುವೆನು. ಮುಂದಿನ ಕಾರ್ಯವನ್ನು ಮಾಡು.''

ಸುಮಂತ್ರನು ಹೀಗೆ ಹೇಳಲು ಲಕ್ಷ್ಮಣನು ರಾಜಭವನವನ್ನು ಹೊಕ್ಕು ಸೀತಾದೇವಿಯ ಬಳಿಗೆ ಹೋಗಿ ಹೇಳಿದನು :

'' ದೇವಿ ! ನೀನು ಮಹಾರಾಜನಿಂದ ವರವನ್ನು ಬೇಡಿದ್ದೆಯಲ್ಲವೇ! ರಾಜನು ನಿನ್ನನ್ನು ಋಷಿಗಳ ಆಶ್ರಮಕ್ಕೆ ಕಳುಹಿಸಿಕೊಡಲು ಒಪ್ಪಿಗೆಯನ್ನೂ ನೀಡಿದ್ದನು. ಅಂತೆಯೇ ನಾನೀಗ ನಿನ್ನನ್ನು ಆಶ್ರಮಕ್ಕೆ ಕಳುಹಿಸಿಕೊಡಲು ಆಜ್ಞಪ್ತನಾಗಿದ್ದೇನೆ.

ವಿದೇಹನಂದಿನಿ ! ನಾನು ನಮ್ಮ ರಾಜನ ಆಜ್ಞೆಯಂತೆ ಗಂಗಾತೀರದಲ್ಲಿರುವ ಮುನಿಗಳ ಮಂಗಳಕರವಾದ ಆಶ್ರಮಗಳ ಬಳಿಗೆ ಹೋಗಿ ಅಲ್ಲಿ ಮುನಿಗಳಿಂದ ಸೇವಿಸಲ್ಪಡುತ್ತಿರುವ ಅರಣ್ಯದಲ್ಲಿ ನಿನ್ನನ್ನು ಬಿಟ್ಟು ಬರಬೇಕಾಗಿದೆ.''

ಮಹಾತ್ಮನಾದ ಲಕ್ಷ್ಮಣನ ಆ ಮಾತನ್ನು ಕೇಳಿ ವೈದೇಹಿಗೆ ಪರಮಾನಂದವಾಯಿತು. ಆಕೆಯು ಹೊರಡಲು ಹೆಚ್ಚಿನ ಆಸಕ್ತಿಯನ್ನು ತೋರಿದಳು. ಬಹುಮೂಲ್ಯವಾದ ವಸ್ತ್ರಗಳನ್ನೂ ವಿಧ -ವಿಧವಾದ ರತ್ನಗಳನ್ನೂ ತೆಗೆದುಕೊಂಡು ಸೀತಾದೇವಿಯು ಹೊರಡಲನುವಾಗಿ ಲಕ್ಷ್ಮಣನೊಡನೆ ಹೇಳಿದಳು : '' ಲಕ್ಷ್ಮಣ ! ಈ ಎಲ್ಲ ಆಭರಣಗಳನ್ನೂ, ಬಹುಮೂಲ್ಯವಾದ ವಸ್ತ್ರಗಳನ್ನೂ, ಧನವನ್ನೂ, ರತ್ನಗಳನ್ನೂ ಮುನಿಗಳ ಪತ್ನಿಯರಿಗೆ ಕೊಡುವೆನು.''

ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಸೀತಾದೇವಿಯು ಶೀಘ್ರವಾಗಿ ಹೋಗುವ ಕುದುರೆಗಳಿರುವ ರಥದಲ್ಲಿ ಕುಳಿತನಂತರ ತಾನೂ ರಥವನ್ನೇರಿ ಶ್ರೀರಾಮನ ಆಜ್ಞೆಯನ್ನು ಸ್ಮರಿಸಿಕೊಳ್ಳುತ್ತಾ ಅರಣ್ಯದ ಕಡೆಗೆ ಪ್ರಯಾಣಮಾಡಿದನು.

ಹಾಗೆ ಪ್ರಯಾಣಮಾಡುತ್ತಿದ್ದಾಗ ಲಕ್ಷ್ಮಿವರ್ಧನನಾದ ಲಕ್ಷ್ಮಣನಿಗೆ ಸೀತೆಯು ಹೇಳಿದಳು :

ಅಶುಭಾನಿ ಬಹೂನ್ಯೇವ ಪಶ್ಯಾಮಿ ರಘುನನ್ದನ।
ನಯನಂ ಮೇ ಸ್ಫುರತ್ಯದ್ಯ ಗಾತ್ರೋತ್ಕಮ್ಪಶ್ಚ ಜಾಯತೇ ॥14॥
ಹೃದಯಂ ಚೈವ ಸೌಮಿತ್ರೇ ಅಸ್ವಸ್ಥಮಿವ ಲಕ್ಷಯೇ।
ಔತ್ಸುಕ್ಯಂ ಪರಮಂ ಚಾಪಿ ಅಧೃತಿಶ್ಚ ಪರಾ ಮಮ ॥15॥

''ರಘುನಂದನನೇ! ನಾವು ಹೊರಟಾಗಿನಿಂದ ಅಶುಭವಾದ ಶಕುನ ಗಳನ್ನೇ ಕಾಣುತ್ತಿದ್ದೇನೆ. ನನ್ನ ಬಲಗಣ್ಣು ಅದುರುತ್ತಿದೆ. ಮೈ ನಡುಗು ತ್ತಿದೆ. ಹೃದಯವು ಅಸ್ವಸ್ಥವಾಗಿರುವಂತೆ ಭಾಸವಾಗುತ್ತಿದೆ. ಆಶ್ರಮ ಗಳಿಗೆ ಹೋಗಬೇಕೆಂಬ ಉತ್ಸಾಹವು ಅಧಿಕವಾಗಿದ್ದರೂ ಅದರ ಜೊತೆ ಯಲ್ಲಿಯೇ ಕಳವಳವೂ ಹೆಚ್ಚಾಗುತ್ತಿದೆ.

ಶೂನ್ಯಾಮೇವ ಚ ಪಶ್ಯಾಮಿ ಪೃಥಿವೀಂ ಪೃಥುಲೋಚನ।
ಅಪಿ ಸ್ವಸ್ತಿ ಭವೇತ್ತಸ್ಯ ಭ್ರಾತುಸ್ತೇ ಭ್ರಾತೃವತ್ಸಲ ॥16॥
ಶ್ವಶ್ರೂಣಾಂ ಚೈವ ಮೇ ವೀರ ಸರ್ವಾಸಾಮವಿಶೇಷತಃ।
ಪುರೇ ಜನಪದೇ ಚೈವ ಕುಶಲಂ ಪ್ರಾಣಿನಾಮಪಿ ॥17॥

ವಿಶಾಲಾಕ್ಷನೇ ! ಲಕ್ಷ್ಮಣ ! ಇಂದು ನನಗೆ ಈ ಪೃಥ್ವಿಯೇ ಶೂನ್ಯ ವಾಗಿರುವಂತೆ ಕಾಣುತ್ತಿದೆ. ಭ್ರಾತೃವತ್ಸಲನೇ ! ನಿನ್ನ ಅಣ್ಣನು ಕುಶಲ ನಾಗಿರುವನಲ್ಲವೇ! ನನ್ನ ಮೂವರು ಅತ್ತೆಯರೂ ಕುಶಲವಾಗಿರುವರಲ್ಲವೇ! ನಮ್ಮ ಪಟ್ಟಣದಲ್ಲಿ ಮತ್ತು ಪ್ರಾಂತಗಳಲ್ಲಿ ಪ್ರಾಣಿಗಳೂ ಪ್ರಜೆಗಳೂ ಕುಶಲಿ ಗಳಾಗಿರುವರಲ್ಲವೇ !''

ಹೀಗೆ ಹೇಳಿದ ಸೀತಾದೇವಿಯು ಕೈಜೋಡಿಸಿಕೊಂಡು ಸರ್ವರ ಕುಶಲಕ್ಕಾಗಿ ದೇವತೆಗಳನ್ನು ಪ್ರಾರ್ಥಿಸಿದಳು. ಸೀತೆಯ ಮಾತುಗಳನ್ನು ಕೇಳಿ ಲಕ್ಷ್ಮಣನು ಅವಳಿಗೆ ತಲೆಬಾಗಿ ನಮಸ್ಕರಿಸಿ ಬಹಿರಂಗದಲ್ಲಿ ಸಂತೋಷದಿಂದಿರು ವವನಂತೆ ನಟಿಸುತ್ತಾ **'ದೇವಿ ! ಶಿವಂ** – ಎಲ್ಲವೂ ಮಂಗಳಕರವಾಗಿದೆ ' ಎಂದು ಹೇಳಿದನು. ಆದರೆ ಅವನ ಹೃದಯವು ಮಾತ್ರ ಸೊರಗಿ ಒಣಗಿ ಹೋಗಿದ್ದಿತು.

ಗೋಮತೀತೀರದ ಆಶ್ರಮವೊಂದರಲ್ಲಿ ಸೀತಾ–ಲಕ್ಷ್ಮಣ – ಸುಮಂತ್ರರು ರಾತ್ರಿಯನ್ನು ಕಳೆದರು. ಪ್ರಾತಃಕಾಲವಾಗುತ್ತಲೇ ಎದ್ದು ಲಕ್ಷ್ಮಣನು ಸುಮಂತ್ರನಿಗೆ ಹೇಳಿದನು :

''ಸುಮಂತ್ರ ! ಶೀಘ್ರವಾಗಿ ರಥಕ್ಕೆ ಕುದುರೆಗಳನ್ನು ಹೂಡು. ಪರಶಿವನು ತನ್ನ ಅಪಾರವಾದ ತೇಜಸ್ಸಿನಿಂದ ಆಕಾಶದಿಂದ ಹರಿದುಬರುತ್ತಿದ್ದ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿದಂತೆ – ನಾನಿಂದು ಭಾಗೀರಥಿಯ ಶುಭಜಲ ವನ್ನು ಶಿರಸ್ಸಿನಲ್ಲಿ ಧರಿಸುವೆನು. (ಭಾಗೀರಥಿಯಲ್ಲಿ ಸ್ನಾನಮಾಡುವೆನು.)''

ಲಕ್ಷ್ಮಣನ ಆಜ್ಞೆಯಂತೆ ಸುಮಂತ್ರನು ಮನೋವೇಗಯುಕ್ತವಾಗಿದ್ದ ನಾಲ್ಕು ಕುದುರೆಗಳನ್ನು ರಥಕ್ಕೆ ಹೂಡಿ ಕೈಮುಗಿದುಕೊಂಡು ರಥವನ್ನು ಹತ್ತುವಂತೆ ವೈದೇಹಿಯನ್ನು ಪ್ರಾರ್ಥಿಸಿದನು. ಸೂತನ ಮಾತಿನಂತೆ ವೈದೇಹಿಯು ರಥದಲ್ಲಿ ಕುಳಿತಳು. ಸ್ವಲ್ಪ ಹೊತ್ತಿನಲ್ಲಿಯೇ ವಿಶಾಲಾಕ್ಷಿಯಾದ ಸೀತಾದೇವಿಯು ಸುಮಂತ್ರ –ಸೌಮಿತ್ರಿಯರೊಡನೆ ಪಾಪನಾಶಿನಿಯಾದ ಗಂಗಾನದಿಯ ತೀರಕ್ಕೆ ಬಂದಳು. ಲಕ್ಷ್ಮಣನು ಮಧ್ಯಾಹ್ನದ ಸಮಯಕ್ಕೆ ಸರಿಯಾಗಿ ಭಾಗೀರಥಿಯ ಜಲಾಶಯಕ್ಕೆ ಹೋಗಿ ನದಿಯ ಕಡೆಗೆ ನೋಡುತ್ತಾ ಗಟ್ಟಿಯಾಗಿ ಬಿಕ್ಕಿ–ಬಿಕ್ಕಿ ಅಳತೊಡಗಿದನು. ಲಕ್ಷ್ಮಣನು ಶೋಕಾತುರ ನಾಗಿರುವುದನ್ನು ಕಂಡು ಧರ್ಮಜ್ಞೆಯಾದ ಸೀತಾದೇವಿಯು ಉದ್ವಿಗ್ನಳಾಗಿ ಲಕ್ಷ್ಮಣನನ್ನು ಪ್ರಶ್ನಿಸಿದಳು ; ''ಸೌಮ್ಯನೇ ! ಇದೇನಿದು ? ನೀನೇಕೆ ಹೀಗೆ ಅಳುತ್ತಿರುವೆ ? ಗಂಗಾತೀರಕ್ಕೆ ಬಂದಿರುವ ನನಗೆ ಬಹಳ ಕಾಲದಿಂದಲೂ ಇದ್ದ ಆಸೆಯು ಪೂರೈಸಿದೆ. ಸಂತೋಷಪಡಬೇಕಾದ ಈ ಸಮಯದಲ್ಲಿ ನೀನೇಕೆ ವಿಷಾದಿಸುತ್ತಿರುವೆ ? ಪುರುಷಶ್ರೇಷ್ಠನೇ ! ನೀನು ಅನುದಿನವೂ ಶ್ರೀ ರಾಮನ ಪಕ್ಕದಲ್ಲಿಯೇ ಇರುತ್ತಿದ್ದೆ. ಈ ಎರಡು ರಾತ್ರಿಗಳು ಅವನ ಜೊತೆಯಲ್ಲಿ ಇಲ್ಲದೇ ಇರುವುದಕ್ಕಾಗಿ ಹೀಗೆ ಶೋಕಿಸುತ್ತಿರುವೆಯಾ ?

ಮಮಾಪಿ ದಯಿತೋ ರಾಮೋ ಜೀವಿತಾದಪಿ ಲಕ್ಷ್ಮಣ ।
ನ ಚಾಹಮೇವಂ ಶೋಚಾಮಿ ಮೈವಂ ತ್ವಂ ಬಾಲಿಶೋ ಭವ ॥

ಲಕ್ಷ್ಮಣ ! ನನಗೂ ಶ್ರೀರಾಮನು ಅತ್ಯಂತಪ್ರಿಯನಾದವನು. ಪ್ರಾಣ

ಗಳಿಗಿಂತಲೂ ಪ್ರಿಯನಾದವನು. ಆದರೆ ನಾನು ನಿನ್ನಂತೆ ಶೋಕಪಡುತ್ತಿಲ್ಲ. ನೀನು ಹೀಗೆ ಬಾಲಕನಂತೆ ವರ್ತಿಸಬೇಡ. ನೀನೀಗ ಗಂಗೆಯನ್ನು ದಾಟಿಸು. ತಪಸ್ವಿಗಳನ್ನು ನನಗೆ ತೋರಿಸು. ಅನಂತರ ಋಷಿ–ಮುನಿಗಳಿಗೆ ನಾನು ತಂದಿರುವ ವಸ್ತ್ರಗಳನ್ನೂ ಆಭರಣಗಳನ್ನೂ ಕೊಡುವೆನು. ಬಳಿಕ ನಾವು ಆ ಋಷಿ–ಮುನಿಗಳೆಲ್ಲರಿಗೂ ಯಥಾನುಕ್ರಮವಾಗಿ ಅಭಿವಾದನಮಾಡಿ ಅವರ ಆಶ್ರಮದಲ್ಲಿ ಒಂದು ರಾತ್ರಿ ತಂಗಿದ್ದು ಅನಂತರ ಅಯೋಧ್ಯಾಪಟ್ಟಣಕ್ಕೆ ಹಿಂದಿರುಗೋಣ. ಕಮಲದಳಾಯತಾಕ್ಷನಾದ, ಸಿಂಹದಂತೆ ವಿಶಾಲವಾದ ವಕ್ಷಃಸ್ಥಳವನ್ನು ಹೊಂದಿರುವ, ಕೃಶೋದರನಾದ, ಆನಂದದಾಯಕನಾದ ಶ್ರೀರಾಮನನ್ನು ನೋಡಲು ನನ್ನ ಮನಸ್ಸೂ ತವಕಪಡುತ್ತಿದೆ.''

ಲಕ್ಷ್ಮಣನು ಸೀತಾದೇವಿಯ ಮಾತನ್ನು ಕೇಳಿ ಕಂಬನಿದುಂಬಿದ ಕಣ್ಣುಗಳನ್ನು ಒರೆಸಿಕೊಂಡು ನಾವಿಕರನ್ನು ಆಹ್ವಾನಿಸಿದನು. ಮರುಕ್ಷಣದಲ್ಲಿಯೇ ನಾವಿಕರು ಲಕ್ಷ್ಮಣನ ಬಳಿಗೆ ಬಂದು ಕೈಮುಗಿದುಕೊಂಡು 'ಈ ನೌಕೆಯು ಪ್ರಯಾಣಕ್ಕೆ ಸಿದ್ಧವಾಗಿದೆ ' –ಎಂದು ಹೇಳಿದರು. ಲಕ್ಷ್ಮಣನು ಗಂಗಾನದಿಯನ್ನು ದಾಟಲು ಸೀತೆಯೊಡನೆ ಸುಂದರವಾಗಿದ್ದ ಆ ನೌಕೆಯನ್ನೇರಿದನು. ಏಕಾಗ್ರಚಿತ್ತನಾಗಿ ಲಕ್ಷ್ಮಣನು ಸೀತೆಯನ್ನು ಗಂಗಾನದಿಯ ಮತ್ತೊಂದು ತೀರಕ್ಕೆ ಆ ನೌಕೆಯ ಮೂಲಕವಾಗಿ ಕರೆದೊಯ್ದನು.

46ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **47ನೆಯ ಸರ್ಗ**

ಲಕ್ಷ್ಮಣನು ಸೀತಾದೇವಿಯನ್ನು ನಾವೆಯ ಮೂಲಕ ಗಂಗಾನದಿಯನ್ನು ದಾಟಿಸಿ ಶ್ರೀರಾಮನ ಆಜ್ಞೆಯನ್ನು ಮೈಥಿಲಿಗೆ ತಿಳಿಸಿದುದು

ಅಥ ನಾವಂ ಸುವಿಸ್ತೀರ್ಣಾಂ ನೈಷಾದೀಂ ರಾಘವಾನುಜಃ।

ಆರುರೋಹ ಸಮಾಯುಕ್ತಾಂ ಪೂರ್ವಮಾರೋಪ್ಯ ಮೈಥಿಲೀಮ್ ॥

ಬೆಸ್ತರ ಆ ದೋಣಿಯು ವಿಸ್ತಾರವಾಗಿಯೂ ಸುಸಜ್ಜಿತವಾಗಿಯೂ ಇದ್ದಿತು. ಲಕ್ಷ್ಮಣನು ಮೊದಲು ಸೀತಾದೇವಿಯನ್ನು ದೋಣಿಗೆ ಹತ್ತಿಸಿ ಅನಂತರ ತಾನೂ ಹತ್ತಿದನು.

ಶೋಕಸಂತಪ್ತನಾಗಿದ್ದ ಲಕ್ಷ್ಮಣನು ರಥದಲ್ಲಿದ್ದ ಸುಮಂತ್ರನನ್ನು ಅಲ್ಲಿಯೇ ಇರಲು ಹೇಳಿ ನಾವಿಕನಿಗೆ ಮುಂದೆ ಹೋಗುವಂತೆ ಆದೇಶ ವನ್ನಿತ್ತನು. ಭಾಗೀರಥಿಯ ಆಚೆಯ ದಡಕ್ಕೆ ದೋಣಿಯು ಹೋದನಂತರ ಲಕ್ಷ್ಮಣನು ಕಣ್ಣೀರು ಸುರಿಸುತ್ತಾ ಕೈಮುಗಿದುಕೊಂಡು ವೈದೇಹಿಗೆ ಹೇಳಿದನು :

ಹೃದ್ಗತಂ ಮೇ ಮಹಚ್ಛಲ್ಯಂ ಯಸ್ಮಾದಾರ್ಯೇಣ ಧೀಮತಾ ।
ಅಸ್ಮಿನ್ನಿಮಿತ್ತೇ ವೈದೇಹಿ ಲೋಕಸ್ಯ ವಚನೀಕೃತಃ ॥4॥

"ವಿದೇಹನಂದಿನಿ! ನನ್ನಹೃದಯದಲ್ಲಿ ಶೂಲವೊಂದು ನಾಟಿಕೊಂಡಿದೆ. ಪ್ರಾಜ್ಞನಾದ ನನ್ನ ಅಣ್ಣನು ಲೋಕನಿಂದೆಗೆ ಗುರಿಯಾಗಬೇಕಾದ ಈ ಕಾರ್ಯಕ್ಕೆ ನನ್ನನ್ನು ಕಳುಹಿಸಿಕೊಟ್ಟಿದ್ದಾನೆ.

ಶ್ರೇಯೋ ಹಿ ಮರಣಂ ಮೇಽದ್ಯ ಮೃತ್ಯುರ್ವಾ ಯತ್ಪರಂ ಭವೇತ್ ।
ನ ಚಾಸ್ಮಿನ್ನೀದೃಶೇ ಕಾರ್ಯೇ ನಿಯೋಜ್ಯೋ ಲೋಕನಿನ್ದಿತೇ ॥5॥

ನನಗೆ ಈ ಸಮಯದಲ್ಲಿ ಮರಣವೇ ಶ್ರೇಯಸ್ಕರವಾಗಿದ್ದಿತು. ಮೃತ್ಯು ವಿಗಿಂತಲೂ ಹೆಚ್ಚಿನದು ಬೇರೆ ಯಾವುದಾದರೂ ಇದ್ದರೆ ಅದಾದರೂ ನನಗೆ ಶ್ರೇಯಸ್ಕರವಾಗಿದ್ದಿತು. ಆದರೆ ಖಂಡಿತವಾಗಿಯೂ ಲೋಕನಿಂದಿತವಾದ ಈ ಕಾರ್ಯದಲ್ಲಿ ನಮ್ಮಣ್ಣನು ನನ್ನನ್ನು ನೇಮಿಸಬಾರದಾಗಿತ್ತು.

ಪ್ರಸೀದ ಚ ನ ಮೇ ಪಾಪಂ ಕರ್ತುಮರ್ಹಸಿ ಶೋಭನೇ ॥6॥

ಪ್ರಸನ್ನಳಾಗು ದೇವಿ ! ನನ್ನಲ್ಲಿ ಯಾವ ದೋಷವನ್ನೂ ಎಣಿಸಬೇಡ. ನಿನ್ನನ್ನು ಕಾಡಿಗೆ ಕರೆತಂದಿರುವ ವಿಷಯದಲ್ಲಿ ನನ್ನದೇನೂ ದೋಷವಿಲ್ಲ."

ಹೀಗೆ ಕೈಮುಗಿದುಕೊಂಡು ಹೇಳುತ್ತಾ ನೆಲದಲ್ಲಿ ಬಿದ್ದುಬಿಟ್ಟನು. ಲಕ್ಷ್ಮಣನು ಕೈಮುಗಿದುಕೊಂಡು ಅಳುತ್ತಿದ್ದನು. ಮರಣವನ್ನೂ ಬಯಸು ತ್ತಿದ್ದನು. ಇದನ್ನು ನೋಡಿ ಉದ್ವಿಗ್ನಳಾದ ಸೀತೆಯು ಹೇಳಿದಳು :

ಕಿಮಿದಂ ನಾವಗಚ್ಛಾಮಿ ಬ್ರೂಹಿ ತತ್ತ್ವೇನ ಲಕ್ಷ್ಮಣ ।
ಪಶ್ಯಾಮಿ ತ್ವಾಂ ನ ಚ ಸ್ವಸ್ಥಮಪಿ ಕ್ಷೇಮಂ ಮಹೀಪತೇಃ ॥8॥

''ಲಕ್ಷ್ಮಣ! ನೀನು ಹೇಳುತ್ತಿರುವುದೊಂದೂ ನನಗೆ ಅರ್ಥವಾಗುತ್ತಿಲ್ಲ. ಯಾವುದಿದ್ದರೂ ಯಥಾವತ್ತಾಗಿ ಹೇಳು. ನಿನ್ನನ್ನು ನೋಡಿದರೆ ನೀನು ನೆಮ್ಮದಿಯಿಂದಿರುವಂತೆ ಕಾಣುತ್ತಿಲ್ಲ. ಮಹಾರಾಜನಾದರೂ ಕುಶಲಿಯಾಗಿರುವನೇ ?

ಶಾಪಿತೋಽಸಿ ನರೇನ್ದ್ರೇಣ ಯತ್ತ್ವಂ ಸಂತಾಪಮಾಗತಃ ।
ತದ್ಬ್ರೂಯಾಃ ಸಂನಿಧೌ ಮಹ್ಯಮಹಮಾಜ್ಞಾಪಯಾಮಿ ತೇ ॥9॥

ನಾನು ಮಹಾರಾಜನ ಮೇಲೆ ಆಣೆಯಿಟ್ಟು ಪ್ರಶ್ನಿಸುತ್ತಿದ್ದೇನೆ. ಏತಕ್ಕಾಗಿ ನೀನು ಹೀಗೆ ಸಂತಾಪಪಡುತ್ತಿರುವೆ ? ಅಯೋಧ್ಯೆಯ ಮಹಾ ರಾಣಿಯಾದ ನಾನು ಆಜ್ಞಾಪಿಸುತ್ತಿದ್ದೇನೆ. ನೀನು ಸಂತಾಪಪಡುತ್ತಿರುವು ದಕ್ಕೆ ಕಾರಣವನ್ನು ಹೇಳಲೇಬೇಕು. ''

ವೈದೇಹಿಯಿಂದ ಪ್ರೇರಿತನಾದ ದೀನಮನಸ್ಕನಾದ ಲಕ್ಷ್ಮಣನು ತಲೆ ತಗ್ಗಿಸಿಕೊಂಡು ಕಣ್ಣೀರಿನಿಂದ ಗಲ್ಲವನ್ನು ನೆನೆಸುತ್ತಾ ಹೇಳಿದನು :

''ಜನಕನಂದಿನಿ ! ಸಭಾಸದರ ಮಧ್ಯದಲ್ಲಿ ನಿನ್ನ ಸಂಬಂಧವಾದ ಸುದಾರುಣವಾದ ಅಪವಾದವನ್ನು ಕೇಳಿ ಶ್ರೀರಾಮನು ಸಂತಪ್ತಹೃದಯನಾಗಿ (ನಿನ್ನನ್ನು ಕಾಡಿಗೆ ಬಿಡಲು) ನನಗೆ ಆಜ್ಞಾಪಿಸಿ ಅರಮನೆಯೊಳಕ್ಕೆ ಹೊರಟು ಹೋದನು. ಶ್ರೀರಾಮನು ಯಾವ ಅಪವಾದದ ಮಾತುಗಳನ್ನು ಕೇಳಿ ಸಹಿಸಿ ಕೊಳ್ಳಲಾಗದೇ ಹೃದಯದಲ್ಲಿಯೇ ಅಡಗಿಸಿಟ್ಟುಕೊಂಡಿರುವನೋ – ಅಂತಹ ಸುದಾರುಣವಾದ ಮಾತುಗಳನ್ನು ನಾನು ನಿನ್ನ ಮುಂದೆ ಹೇಳಲಾರೆನು. ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದಲೇ ನಾನದನ್ನು ಹಿಂದಕ್ಕೆ ಹಾಕಿಬಿಟ್ಟಿದ್ದೇನೆ. ಅದರ ವಿಷಯವಾಗಿ ಪ್ರಸ್ತಾಪಿಸಲೂ ಇಷ್ಟಪಡು ತ್ತಿಲ್ಲ. ನನ್ನೆದುರಿನಲ್ಲಿಯೇ ನಿರ್ದೋಷಳೆಂದು ನಿಶ್ಚಿತಳಾದ ನಿನ್ನನ್ನು ಶ್ರೀರಾಮನು ಪೌರಾಪವಾದದಿಂದ ಭಯಗೊಂಡು ಪರಿತ್ಯಾಗಮಾಡಿರುವನು. ನೀನು ಬೇರೆ ಯಾವ ರೀತಿಯಲ್ಲೂ ಇದನ್ನು ಭಾವಿಸಬೇಡ. ನಾನು ರಾಮನ ಆಜ್ಞೆಯಂತೆ ಇಲ್ಲಿಗೆ ನಿನ್ನನ್ನು ಕರೆತಂದಿದ್ದೇನೆ. ಗರ್ಭಿಣಿಯಾಗಿರುವ ನಿನ್ನ ಬಯಕೆಯೂ ಇದೇ ಆಗಿದೆ. ಆದುದರಿಂದ ಆಶ್ರಮದ ಸಮೀಪದಲ್ಲಿ ನಿನ್ನನ್ನು ಪರಿತ್ಯಜಿಸಿ ನಾನು ಹೊರಟುಹೋಗುತ್ತೇನೆ.

ಶುಭಾಂಗಿಯೇ ! ಇದೋ ಇಲ್ಲಿ ಕಾಣುತ್ತಿರುವ ಗಂಗಾನದಿಯ ತೀರದಲ್ಲಿ ಪುಣ್ಯವೂ ರಮಣೀಯವೂ ಆಗಿರುವ ಬ್ರಹ್ಮರ್ಷಿಗಳ ತಪೋವನವಿದೆ. ನೀನಿನ್ನು ವಿಷಾದಿಸಬೇಡ. ಇಲ್ಲಿ ನನ್ನ ತಂದೆಯಾದ ದಶರಥನ ಪರಮಮಿತ್ರ ರಾದ, ಮುನಿಶ್ರೇಷ್ಠರಾದ, ಲೋಕವಿಖ್ಯಾತರಾದ ವಾಲ್ಮೀಕಿಮಹರ್ಷಿಗಳು ವಾಸ ಮಾಡುತ್ತಿದ್ದಾರೆ. ಇಲ್ಲಿ ನೀನು ಉಪವಾಸಪರಾಯಣಳಾಗಿದ್ದು ಆ ಮಹಾತ್ಮರ ಪಾದಾರವಿಂದಗಳ ನೆರಳಿನ ಆಶ್ರಯವನ್ನು ಪಡೆದು ಏಕಾಗ್ರವಾದ ಮನಸ್ಸಿನಿಂದ ಸುಖವಾಗಿ ವಾಸಿಸು.

ಪತಿವ್ರತಾತ್ವಮಾಸ್ಥಾಯ ರಾಮಂ ಕೃತ್ವಾ ಸದಾ ಹೃದಿ ।
ಶ್ರೇಯಸ್ತೇ ಪರಮಂ ದೇವಿ ತಥಾ ಕೃತ್ವಾ ಭವಿಷ್ಯತಿ ॥18॥

ದೇವಿ ! ನೀನು ಯಾವಾಗಲೂ ಶ್ರೀರಾಮನನ್ನೇ ಹೃದಯದಲ್ಲಿ ಧ್ಯಾನಮಾಡುತ್ತಾ ಪತಿವ್ರತಾಧರ್ಮವನ್ನು ಪಾಲಿಸುತ್ತಿರು. ಹೀಗೆ ಮಾಡುವುದ ರಿಂದ ನಿನಗೆ ಹೆಚ್ಚಿನ ಶ್ರೇಯಸ್ಸುಂಟಾಗುತ್ತದೆ.''

47ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 48ನೆಯ ಸರ್ಗ

ಸೀತೆಯ ವಿಲಾಪ :

ಶ್ರೀರಾಮನಿಗೆ ಸೀತೆಯ ಸಂದೇಶ : ಲಕ್ಷ್ಮಣನ ಪ್ರಯಾಣ

ಲಕ್ಷ್ಮಣಸ್ಯ ವಚಃ ಶ್ರುತ್ವಾ ದಾರುಣಂ ಜನಕಾತ್ಮಜಾ ।
ಪರಂ ವಿಷಾದಮಾಗಮ್ಯ ವೈದೇಹೀ ನಿಪಪಾತ ಹ ॥1॥

ಲಕ್ಷ್ಮಣನು ಹೇಳಿದ ದಾರುಣವಾದ ಮಾತನ್ನು ಕೇಳಿ ವೈದೇಹಿಯು ಅತ್ಯಂತವಿಷಣ್ಣಳಾಗಿ ಕೆಳಕ್ಕೆ ಬಿದ್ದುಬಿಟ್ಟಳು.

ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಸೀತಾದೇವಿಯು ಸ್ವಲ್ಪ ಹೊತ್ತಿನನಂತರ ಎಚ್ಚರಗೊಂಡು ಲಕ್ಷ್ಮಣನಿಗೆ ದೈನ್ಯದಿಂದ ಕೂಡಿದ ಈ ಮಾತನ್ನು ಹೇಳಿದಳು :

ಮಾಮಿಕೇಯಂ ತನುರ್ನೂನಂ ಸೃಷ್ಟಾ ದುಃಖಾಯ ಲಕ್ಷ್ಮಣ ।
ಧಾತ್ರಾ ಯಸ್ಯಾಸ್ತಥಾ ಮೇಽದ್ಯ ದುಃಖಮೂರ್ತಿಃ ಪ್ರದೃಶ್ಯತೇ ॥

''ಲಕ್ಷಣ ! ನಿಶ್ಚಯವಾಗಿಯೂ ಬ್ರಹ್ಮನು ಈ ನನ್ನ ಶರೀರವನ್ನು ದುಃಖವನ್ನನುಭವಿಸಲೆಂದೇ ಸೃಷ್ಟಿಸಿದ್ದಾನೆ. ಆದುದರಿಂದ ಈಗ ನಾನು ದುಃಖದ ಮೂರ್ತಿಯೇ ಆಗಿಬಿಟ್ಟಿದ್ದೇನೆ.

ಕಿಂ ನು ಪಾಪಂ ಕೃತಂ ಪೂರ್ವಂ ಕೋ ವಾ ದಾರೈರ್ವಿಯೋಜಿತಃ।
ಯಾಹಂ ಶುದ್ಧಸಮಾಚಾರಾ ತ್ಯಕ್ತಾ ನೃಪತಿನಾ ಸತೀ ॥4॥

ನಾನು ಹಿಂದಿನ ಜನ್ಮದಲ್ಲಿ ಯಾವ ಪಾಪವನ್ನು ಮಾಡಿದ್ದೆನು? ಅಥವಾ ಯಾರನ್ನು ಪತ್ನಿಯರಿಂದ ಬೇರ್ಪಡಿಸಿದ್ದೆನು ? ನಾನು ಶುದ್ಧವಾದ ಚಾರಿತ್ರ್ಯವುಳ್ಳವಳಾಗಿದ್ದರೂ ಮಹಾರಾಜನು ನನ್ನನ್ನು ತ್ಯಜಿಸಿಬಿಟ್ಟ ನಲ್ಲವೇ ?

ಹಿಂದೆ ನಾನು ವನವಾಸದ ಕಾಲದಲ್ಲಿ ದುಃಖವನ್ನು ಅನುಭವಿಸಬೇಕಾಗಿದ್ದರೂ ಶ್ರೀರಾಮನ ಸಹಚಾರಿಣಿಯಾಗಿದ್ದು ಪಾದಸೇವೆಯನ್ನು ಮಾಡುತ್ತಾ ಅರಣ್ಯದ ಆಶ್ರಮದಲ್ಲಿಯೂ ಸುಖವಾಗಿಯೇ ಇದ್ದೆನು.

ಆದರೆ ಸೌಮ್ಯನೇ ! ಪ್ರಿಯಜನರಿಂದ ರಹಿತಳಾಗಿರುವ ನಾನು ಈ ಆಶ್ರಮದಲ್ಲಿ ಹೇಗೆ ವಾಸಮಾಡಲಿ ? ದುಃಖಪರಾಯಣೆಯಾಗಿರುವ ನಾನು ನನ್ನ ದುಃಖವನ್ನು ಯಾರಲ್ಲಿ ಹೇಳಿಕೊಳ್ಳಲಿ ? ಪ್ರಭುವೇ ! ಲಕ್ಷ್ಮಣ ! ಶ್ರೀರಾಮನು ಯಾವ ಅಪರಾಧಕ್ಕಾಗಿ ನಿನ್ನನ್ನು ತ್ಯಜಿಸಿದನೆಂದು ಮುನಿಜನರು ನನ್ನನ್ನೇನಾದರೂ ಪ್ರಶ್ನಿಸಿದರೆ – ನನ್ನ ಯಾವ ಅಪರಾಧವನ್ನು ಅವರೊಡನೆ ಹೇಳಿಕೊಳ್ಳಲಿ ? ಸುಮಿತ್ರಾನಂದನನೇ ! ನಾನೀಗಲೇ ನನ್ನ ಶರೀರವನ್ನು ಗಂಗಾನದಿಯ ಶುಭಜಲದಲ್ಲಿ ವಿಸರ್ಜಿಸಿಬಿಡುತ್ತಿದ್ದೆನು. ನನ್ನ ಪತಿಯ ವಂಶವೇ ವಿನಾಶವಾಗಿಬಿಡುವುದರಿಂದ ಈಗ ಆ ಕಾರ್ಯವನ್ನು ಮಾಡುವುದಿಲ್ಲ. ಲಕ್ಷ್ಮಣ ! ನಿನಗೆ ರಾಜನ ಆಜ್ಞೆಯು ಹೇಗಾಗಿರುವುದೋ ಹಾಗೆಯೇ ಮಾಡು. ದುಃಖಭಾಗಿನಿಯಾಗಿರುವ ನನ್ನನ್ನು ಬಿಟ್ಟು ಹೋಗು. ಯಾವಾಗಲೂ ನೀನು ರಾಜನ ಆಜ್ಞಾಪಾಲನೆಯಲ್ಲಿಯೇ ನಿರತನಾಗಿರು. ನನ್ನ ಈ ಒಂದು ಮಾತನ್ನು ಕೇಳು.

ಶ್ವಶ್ರೂಣಾಮವಿಶೇಷೇಣ ಪ್ರಾಞ್ಜಲಿಪ್ರಗ್ರಹೇಣ ಚ।
ಶಿರಸಾ ವನ್ದ್ಯ ಚರಣೌ ಕುಶಲಂ ಬ್ರೂಹಿ ಪಾರ್ಥಿವಮ್ ॥10॥

ನೀನು ನನ್ನ ಸಲುವಾಗಿ ಮೂವರು ಅತ್ತೆಯವರಿಗೂ ಸಮಾನರೂಪದಲ್ಲಿ ಕೈಜೋಡಿಸಿ ಪ್ರಣಾಮಮಾಡು. ಅಂತೆಯೇ ಮಹಾರಾಜನ ಪಾದಗಳಲ್ಲಿಯೂ ನನ್ನ ಸಲುವಾಗಿ ನಮಸ್ಕರಿಸಿ ಅವನ ಕುಶಲವನ್ನು ಕೇಳು. ನೀನು ಅಂತಃಪುರದಲ್ಲಿರುವ ಸಮಸ್ತ ಸ್ತ್ರೀಯರಿಗೂ ನನ್ನ ಪರವಾಗಿ ತಲೆಬಾಗಿ ನಮಸ್ಕರಿಸಿ ನನ್ನ ಸಮಾಚಾರವನ್ನು ಅವರೆಲ್ಲರಿಗೂ ಹೇಳು. ಯಾವಾಗಲೂ ಧರ್ಮಪಾಲನೆಯಲ್ಲಿಯೇ ಏಕಾಗ್ರಚಿತ್ತನಾಗಿರುವ ಮಹಾರಾಜನಿಗೂ ಈ ನನ್ನ ಸಂದೇಶವನ್ನು ತಿಳಿಸಬೇಕು.

ಜಾನಾಸಿ ಚ ಯಥಾ ಶುದ್ಧಾ ಸೀತಾ ತತ್ತ್ವೇನ ರಾಘವ ।
ಭಕ್ತ್ಯಾ ಚ ಪರಯಾ ಯುಕ್ತಾ ಹಿತಾ ಚ ತವ ನಿತ್ಯಶಃ ॥12॥

''ರಾಘವ! ಪರಮಭಕ್ತಳಾಗಿರುವ, ಯಾವಾಗಲೂ ನಿನ್ನ ಹಿತ ದಲ್ಲಿಯೇ ಆಸಕ್ತಳಾಗಿರುವ ಸೀತೆಯು ಶುದ್ಧಾತ್ಮಳೆಂಬುದನ್ನು ನೀನು ಯಥಾ ವತ್ತಾಗಿ ತಿಳಿದಿರುವೆ.

ಅಹಂ ತ್ಯಕ್ತಾ ಚ ಮೇ ವೀರ ಅಯಶೋಭೀರುಣಾ ಜನೇ ।
ಯಚ್ಚ ತೇ ವಚನೀಯಂ ಸ್ಯಾದಪವಾದಃ ಸಮುತ್ಥಿತಃ ।
ಮಯಾ ಚ ಪರಿಹರ್ತವ್ಯಂ ತ್ವಂ ಹಿ ಮೇ ಪರಮಾ ಗತಿಃ ॥13॥

ಲೋಕಾಪವಾದಕ್ಕೆ ಹೆದರಿ ನೀನು ನನ್ನನ್ನು ಪರಿತ್ಯಜಿಸಿರುವೆ. ಲೋಕದ ಪ್ರಜೆಗಳು ನಿನ್ನನ್ನು ಯಾವ ಕಾರಣಕ್ಕಾಗಿ ನಿಂದಿಸುತ್ತಿರುವರೋ ಅಥವಾ ನನ್ನನ್ನು ಕಾರಣಳನ್ನಾಗಿ ಮಾಡಿಕೊಂಡು ನಿನ್ನ ಮೇಲೆ ಯಾವ ಅಪವಾದವನ್ನು ಹೊರಿಸುತ್ತಿರುವರೋ –ಅದನ್ನು ಪರಿಹರಿಸುವುದು ನನ್ನ ಕರ್ತವ್ಯವೂ ಆಗಿದೆ. ಏಕೆಂದರೆ: ನೀನೇ ನನಗೆ ಪರಮಾಶ್ರಯನಾಗಿರುವೆ.''

ಲಕ್ಷ್ಮಣ ! ನೀನು ಈ ಮಾತನ್ನೂ ರಾಜನಿಗೆ ಹೇಳಬೇಕು :

'' ಮಹಾರಾಜ ! ಏಕಾಗ್ರಚಿತ್ತನಾಗಿ ನಿನ್ನ ಅನುಜರೊಡನೆ ಯಾವ ರೀತಿಯಲ್ಲಿ ಧರ್ಮದಿಂದ ವ್ಯವಹರಿಸುತ್ತಿರುವೆಯೋ – ಹಾಗೆಯೇ ನಿನ್ನ ಪ್ರಜೆಗಳೊಡನೆಯೂ ವ್ಯವಹರಿಸಬೇಕು. ಇದು ನಿನ್ನ ಶ್ರೇಷ್ಠವಾದ ಧರ್ಮವಾಗಿದೆ. ಹೀಗೆ ವ್ಯವಹರಿಸುವುದರಿಂದ ನಿನಗೆ ಶಾಶ್ವತವಾದ ಮತ್ತು ಶ್ರೇಷ್ಠವಾದ ಕೀರ್ತಿಯೂ ಲಭಿಸುತ್ತದೆ.

ಯತ್ತು ಪೌರಜನೇ ರಾಜನ್ಧರ್ಮೇಣ ಸಮವಾಪ್ನುಯಾತ್ ।
ಅಹಂ ತು ನಾನುಶೋಚಾಮಿ ಸ್ವಶರೀರಂ ನರರ್ಷಭ ॥16॥

ಪುರಜನರೊಡನೆ ಧರ್ಮಾನುಕೂಲಕ್ಕಾಗಿ ವ್ಯವಹರಿಸುವುದರಿಂದ ನಿನಗೆ ಪುಣ್ಯವೂ ಕೀರ್ತಿಯೂ ಲಭಿಸುತ್ತದೆ. ಈ ದೇಹಕ್ಕಾಗಿ ನಾನು ದುಃಖಿಸುವುದಿಲ್ಲ. ಅದರ ಬಗೆಗೆ ನಾನು ಚಿಂತಿಸಹೋಗುವುದಿಲ್ಲ.

ಯಥಾಪವಾದಂ ಪೌರಾಣಾಂ ತಥೈವ ರಘುನನ್ದನ ।
ಪತಿರ್ಹಿ ದೇವತಾ ನಾರ್ಯಾಃ ಪತಿರ್ಬನ್ಧುಃ ಪತಿರ್ಗುರುಃ ।
ಪ್ರಾಣೈರಪಿ ಪ್ರಿಯಂ ತಸ್ಮಾದ್ಭರ್ತುಃ ಕಾರ್ಯಂ ವಿಶೇಷತಃ ॥17॥

ಪಟ್ಟಣಿಗರು ಮಾಡುತ್ತಿರುವ ಆಪಾದನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವಂತಹ ರೀತಿಯಲ್ಲಿ ನೀನು ವ್ಯವಹರಿಸು. ಹೆಂಗಸಿಗಾದರೋ ಪತಿಯೇ ದೈವವು. ಪತಿಯೇ ಗುರುವು. ಪತಿಯೇ ಬಂಧುವು. ಆದುದರಿಂದ ಪ್ರಾಣಗಳನ್ನಾದರೂ ಒತ್ತೆಯಿಟ್ಟು ವಿಶೇಷರೀತಿಯಲ್ಲಿ ಪತಿಗೆ ಪ್ರಿಯವಾಗುವಂತಹ ಕಾರ್ಯವನ್ನು ಮಾಡಲೇಬೇಕು. ''

ನನ್ನ ಆಜ್ಞೆಯಂತೆ ನೀನು ಈ ಎಲ್ಲ ಮಾತುಗಳನ್ನೂ ಶ್ರೀರಾಮ ನೊಡನೆ ಹೇಳಬೇಕು.

ನಿರೀಕ್ಷ್ಯ ಮಾದ್ಯ ಗಚ್ಛ ತ್ವಮೃತುಕಾಲಾತಿವರ್ತಿನೀಮ್ ॥18॥★

ಲಕ್ಷ್ಮಣ! ಋತುಕಾಲವನ್ನು ಅತಿಕ್ರಮಿಸಿರುವ (ಗರ್ಭಿಣಿ ಯಾಗಿರುವ) ನನ್ನನ್ನು ನಿರೀಕ್ಷಿಸಿ ಹೋಗು.''

ಸೀತೆಯು ಹೀಗೆ ಹೇಳಲು ಲಕ್ಷ್ಮಣನ ಮನಸ್ಸು ದುಃಖದಲ್ಲಿ ಮುಳುಗಿ ಹೋಯಿತು. ಸೀತೆಯ ಚರಣಕಮಲಗಳ ಮುಂದಿದ್ದ ಭೂಮಿಗೆ ತಲೆಬಾಗಿ ನಮಸ್ಕರಿಸಿದನು. ಲಕ್ಷ್ಮಣನಿಗೆ ಆ ಸಮಯದಲ್ಲಿ ಯಾವ ಮಾತನ್ನೂ ಆಡಲು ಸಾಧ್ಯವಾಗಲಿಲ್ಲ. ಸೀತೆಯನ್ನು ಪ್ರದಕ್ಷಿಣೆಮಾಡಿ ಬಿಕ್ಕಿ ಬಿಕ್ಕಿ ಅಳುತ್ತಾ ಸ್ವಲ್ಪಹೊತ್ತು ಚಿಂತಿಸುತ್ತಿದ್ದು ಹೇಳಿದನು :

★ ಈ ಒಂದು ಶ್ಲೋಕಾರ್ಧಕ್ಕೆ ಕೀಳುಮಟ್ಟದ ಮನಸ್ಸಿನ ಕೆಲವು ಜನರು ಕುತ್ಸಿತವಾದ ಅರ್ಥವನ್ನು ಕಲ್ಪಿಸಿದ್ದಾರೆ. ಅವರು ಮಾಡಿರುವ ಅಪಾರ್ಥಗಳನ್ನು ಸೀತೆಯ ವಿಷಯದಲ್ಲಿ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಇಲ್ಲಿ ಸೀತೆಯ ಇಂಗಿತಾರ್ಥವಿಷ್ಟೆ:

'' ಶೋಭನಳೇ ! ನನ್ನೊಡನೆ ನೀನು ಏನು ಹೇಳುತ್ತಿರುವೆ ?

ದೃಷ್ಟಪೂರ್ವಂ ನ ತೇ ರೂಪಂ ಪಾದೌ ದೃಷ್ಟೌ ತವಾನಘೇ ।
ಕಥಮತ್ರ ಹಿ ಪಶ್ಯಾಮಿ ರಾಮೇಣ ರಹಿತಾಂ ವನೇ ॥21॥

ಪಾಪರಹಿತಳೇ ! ದೇವಿ ! ನಿನ್ನ ರೂಪವು ಹೇಗಿರುವುದೆಂಬುದನ್ನು ನಾನು ಇದುವರೆಗೂ ಕಂಡವನೇ ಅಲ್ಲ. ಅನುದಿನವೂ ನಿನ್ನನ್ನು ನಮಸ್ಕರಿಸುವಾಗ ನಿನ್ನ ಪಾದಕಮಲಗಳನ್ನು ಮಾತ್ರ ನೋಡುತ್ತಿದ್ದೆನು. ರಾಮನು ಇಲ್ಲದಿರುವ ಈ ಅರಣ್ಯದಲ್ಲಿ ನಾನು ನಿನ್ನನ್ನು ಹೇಗೆ ತಾನೇ ಕಣ್ಣೆತ್ತಿ ನೋಡಬಲ್ಲೆನು?''



ಲಕ್ಷ್ಮಣನು ಹೀಗೆ ಹೇಳಿ ಪುನಃ ಅವಳಿಗೆ ನಮಸ್ಕರಿಸಿ ದೋಣಿಯನ್ನು ಹತ್ತಿ ಮುಂದಕ್ಕೆ ದೋಣಿಯನ್ನು ನಡೆಸುವಂತೆ ಅಂಬಿಗನಿಗೆ ಆಜ್ಞೆಮಾಡಿ

ತಾನು ಗರ್ಭಿಣಿಯಾಗಿರುವೆನೆಂಬುದನ್ನು ಲಕ್ಷ್ಮಣನಿಗೆ ಸ್ಪಷ್ಟಪಡಿಸುವುದು. ಏಕೆಂದರೆ : ಶ್ರೀರಾಮನ ಹೊರತಾಗಿ ಮತ್ತಾರಿಗೂ ಈ ವಿಷಯವು ತಿಳಿದಿಲ್ಲ. ಅರಣ್ಯಕ್ಕೆ ಹೋದ ನಂತರ ಸೀತೆಯು ಗರ್ಭವತಿಯಾದಳೆಂಬ ಲೋಕಾಪವಾದವು ಬಂದರೆ ಮಾಡುವು

ದನು. ಶೋಕದ ಭಾರದಿಂದ ಕುಗ್ಗಿ ಹೋಗಿದ್ದ ಲಕ್ಷ್ಮಣನು ಗಂಗಾನದಿಯ ಉತ್ತರತೀರಕ್ಕೆ ಹೋಗಿ ದುಃಖದಿಂದ ಬುದ್ಧಿಗೆಟ್ಟಿರುವನೋ ಎಂಬಂತೆ ಹಂಬಲಿಸುತ್ತಾ ಶೀಘ್ರವಾಗಿ ರಥವನ್ನೇರಿದನು. ಗಂಗಾನದಿಯ ದಕ್ಷಿಣತೀರದಲ್ಲಿ ಅನಾಥೆಯಂತೆ ದುಃಖಿಸುತ್ತಾ ಚಡಪಡಿಸುತ್ತಿದ್ದ ಸೀತಾದೇವಿಯನ್ನು ಬಾರಿ–ಬಾರಿಗೂ ಹಿಂದಿರುಗಿ ನೋಡುತ್ತಾ ರಥದಲ್ಲಿ ಹೋಗುತ್ತಿದ್ದನು. ಕ್ಷಣ–ಕ್ಷಣಕ್ಕೂ ರಥವು ದೂರವಾಗುತ್ತಿದ್ದಿತು. ಅಂತೆಯೇ ಲಕ್ಷ್ಮಣನೂ ದೂರ ಸರಿಯುತ್ತಿದ್ದನು. ರಥವು ತನ್ನಿಂದ ದೂರವಾಗುತ್ತಿರುವುದನ್ನೇ ಪುನಃ ಪುನಃ ನೋಡುತ್ತಿದ್ದ ಸೀತೆಯು ಕಂಗೆಟ್ಟಳು. ಶೋಕಸಾಗರದಲ್ಲಿ ಮುಳುಗಿಹೋದಳು. ಆ ಸಮಯದಲ್ಲಿ ಅವಳಿಗೆ ರಕ್ಷಕರೇ ಇರಲಿಲ್ಲ. ಸಾಧ್ವಿಯಾದ ಯಶೋವತಿಯಾದ ಸೀತಾದೇವಿಯು ದುಃಖದ ಭಾರದಿಂದ ಕುಗ್ಗಿಹೋಗಿದ್ದಳು. ನವಿಲುಗಳ ಕೇಕಾರವಗಳಿಂದ ಶಬ್ದಾಯಮಾನವಾಗಿದ್ದ ಆ ಅರಣ್ಯದಲ್ಲಿ ದುಃಖಪರಾಯಣೆಯಾಗಿದ್ದ ಸಾಧ್ವಿಯಾದ ಸೀತಾದೇವಿಯು ಗಟ್ಟಿಯಾಗಿ ಅಳತೊಡಗಿದಳು.

48ನೆಯ ಸರ್ಗವು ಮುಗಿಯಿತು.

ದೇನಿದೆ ? ಅದಕ್ಕೆ ಲಕ್ಷ್ಮಣನು ಸಾಕ್ಷಿಯಾಗಿರಲೆಂದು **ಋತುಕಾಲಾತಿವರ್ತಿನೀಂ** '– 'ಋತುಮತಿಯಾಗುವ ಕಾಲವನ್ನು ದಾಟಿರುವ ಅರ್ಥಾತ್ ಗರ್ಭಿಣಿಯಾಗಿರುವ ನನ್ನನ್ನು ನೋಡಿ ಹೋಗು. ನಾನು ಕಾಡಿಗೆ ಬರುವಾಗಲೇ ಗರ್ಭವತಿಯಾಗಿದ್ದೆನು. ರಾಜವಂಶದ ಶಿಶುವು ನನ್ನ ಗರ್ಭದಲ್ಲಿದೆ. ಆದುದರಿಂದಲೇ ನಾನು ನದಿಗೆ ಬಿದ್ದು ಸಾಯುವುದಿಲ್ಲ'– ಇದು ಸೀತೆಯ ಹೃದಯದ ಯಾತನೆಯ ಮಾತು. ಇದು ಧರ್ಮಕ್ಕೆ ಅನುಗುಣವಾದ ಮಾತಾಗಿದೆ. ವ್ಯಾವಹಾರಿಕವಾಗಿಯೂ ಕಾಲೋಚಿತವಾದ ಮಾತಾಗಿದೆ.

ಉತ್ತರಕಾಂಡ 49ನೆಯ ಸರ್ಗ

ಋಷಿಕುಮಾರರಿಂದ ಸೀತಾದೇವಿಯು ಅರಣ್ಯಕ್ಕೆ ಬಂದಿರುವ ವಾರ್ತೆಯನ್ನು ತಿಳಿದು ಸೀತಾದೇವಿಯ ಬಳಿಗೆ ವಾಲ್ಮೀಕಿಮಹರ್ಷಿಗಳ ಆಗಮನ : ಸೀತಾದೇವಿಯನ್ನು ಸಂತೈಸಿ ಆಶ್ರಮಕ್ಕೆ ಕರೆದೊಯ್ದುದು

ಸೀತಾಂ ತು ರುದತೀಂ ದೃಷ್ಟ್ವಾ ತೇ ತತ್ರ ಮುನಿದಾರಕಾಃ।
ಪ್ರಾದ್ರವನ್ಯತ್ರ ಭಗವಾನಾಸ್ತೇ ವಾಲ್ಮೀಕಿರುಗ್ರಧೀಃ ॥1॥

ಸಮೀಪದಲ್ಲಿಯೇ ಇದ್ದ ಋಷಿಕುಮಾರರು ಸೀತಾದೇವಿಯು ಅಳುತ್ತಿರುವುದನ್ನು ಕಂಡು ಉಗ್ರತಪಸ್ವಿಗಳಾದ ಪೂಜ್ಯರಾದ ವಾಲ್ಮೀಕಿಗಳ ಆಶ್ರಮಕ್ಕೆ ಓಡುತ್ತಾ ಹೋದರು.

ಮಹರ್ಷಿಗಳ ಪಾದಗಳಿಗೆ ನಮಸ್ಕರಿಸಿ – ಅನತಿದೂರದಲ್ಲಿಯೇ ಸಾಧ್ವಿಯೊಬ್ಬಳು ರೋದಿಸುತ್ತಿರುವ ವಾರ್ತೆಯನ್ನು – ವಾಲ್ಮೀಕಿಮಹರ್ಷಿಗಳಿಗೆ ಅರುಹಿದರು.

ಅದೃಷ್ಟಪೂರ್ವಾ ಭಗವನ್ಕಸ್ಯಾಪ್ಯೇಷಾ ಮಹಾತ್ಮನಃ।
ಪತ್ನೀ ಶ್ರೀರಿವ ಸಮ್ಮೋಹಾದ್ವಿರೌತಿ ವಿಕೃತಾನನಾ ॥3॥

'' ಪೂಜ್ಯರೇ! ನಾವು ಹಿಂದೆಂದೂ ಕಾಣದಿದ್ದ, ಪ್ರಾಯಶಃ ಮಹಾತ್ಮನಾದ ರಾಜನೊಬ್ಬನ ಪತ್ನಿಯಂತಿರುವ, ಸಾಕ್ಷಾತ್ ಲಕ್ಷ್ಮಿಯಂತೆಯೇ ಕಾಣುತ್ತಿರುವ ಸಾಧ್ವಿಯೊಬ್ಬಳು ಮೋಹವಶಳಾಗಿ ದುಃಖಾತಿರೇಕದಿಂದ ಜುಗುಪ್ಸಿತವಾದ ಮುಖಭಾವದಿಂದ ಕೂಡಿ ರೋದನಮಾಡುತ್ತಿದ್ದಾಳೆ.

ಅಂತರಿಕ್ಷದಿಂದ ಕೆಳಗೆ ಬಿದ್ದ ದೇವತೆಯಂತೆಯೇ ಕಾಣುತ್ತಿರುವ ಅವಳನ್ನು ತಾವೇ ಬಂದು ನೋಡುವುದು ಉಚಿತವಾಗಿ ಕಾಣುತ್ತದೆ. ಗಂಗಾ ನದಿಯ ತೀರದಲ್ಲಿ ಶ್ರೇಷ್ಠಳಾದ ಸ್ತ್ರೀಯೊಬ್ಬಳು ಬಹಳವಾಗಿ ದುಃಖಿಸು ತ್ತಿದ್ದಾಳೆ. ಅವಳು ಗಟ್ಟಿಯಾಗಿ ಬಿಕ್ಕಿ–ಬಿಕ್ಕಿ ಅಳುತ್ತಿದ್ದುದನ್ನು ನಾವೇ ನೋಡಿದೆವು. ನಿಶ್ಚಯವಾಗಿಯೂ ಅವಳು ಶೋಕಸಾಗರದಲ್ಲಿ ಮುಳುಗಿ ಹೋಗಿದ್ದಾಳೆ. ಲಕ್ಷಣಗಳನ್ನು ನೋಡಿದರೆ ಅವಳು ಶೋಕಪಡಲು ಅಥವಾ ದುಃಖಿಸಲು

ಅನರ್ಹಳೆಂದು ತೋರುತ್ತದೆ. ಆದರೂ ಏಕಾಕಿನಿಯಾಗಿ ಅನಾಥೆ ಯಂತೆ ದೀನೆಯಾಗಿ ದುಃಖಿಸುತ್ತಿದ್ದಾಳೆ. ಸಾಧಾರಣಳಾದ ಮನುಷ್ಯ ಸ್ತ್ರೀ ಯೆಂದು ನಮಗವಳು ತೋರುತ್ತಿಲ್ಲ. ತಾವು ಅವಳನ್ನು ಸತ್ಕರಿಸುವುದು ಉಚಿತವಾಗಿದೆ. ಅವಳು ನಮ್ಮ ಆಶ್ರಮಕ್ಕೆ ಸ್ವಲ್ಪದೂರದಲ್ಲಿಯೇ ಇರುವುದ ರಿಂದ ಇವಳು ಶರಣಾಗತಳಾಗಿಯೇ ಬಂದಿರಬೇಕು. ಅನಾಥೆಯಂತಿರುವ ಅವಳೀಗ ರಕ್ಷಕರನ್ನು ಅಪೇಕ್ಷಿಸಿದ್ದಾಳೆ. ಪೂಜ್ಯರೇ! ತಾವು ಈ ಸಮಯ ದಲ್ಲಿ ಅವಳನ್ನು ರಕ್ಷಿಸುವುದು ಉಚಿತವಾಗಿದೆ.''

ಋಷಿಕುಮಾರರ ಆ ಮಾತನ್ನು ಕೇಳಿ ಧರ್ಮವಿದರಾದ ವಾಲ್ಮೀಕಿಗಳು ತಪಸ್ಸಿನಿಂದ ಲಬ್ಧವಾದ ಅಂತರ್ದೃಷ್ಟಿಯಿಂದ ಅನಾಥೆಯಂತೆ ರೋದನಮಾಡು ತ್ತಿರುವವಳು ಯಾರೆಂಬುದನ್ನು ತಿಳಿದು ಒಡನೆಯೇ ಮೈಥಿಲಿಯಿದ್ದೆಡೆಗೆ ಧಾವಿಸಿದರು.

ಋಷಿಕುಮಾರರೂ ಮಹಾಮತಿಗಳಾದ ಮಹರ್ಷಿಗಳನ್ನು ಹಿಂಬಾಲಿಸಿ ದರು. ಸುಂದರವಾದ ಅರ್ಘ್ಯಪಾತ್ರೆಯನ್ನು ತೆಗೆದುಕೊಂಡು ಕಾಲ್ನಡಿಗೆಯಲ್ಲಿಯೇ ಮಹರ್ಷಿಗಳು ಗಂಗಾತೀರಕ್ಕೆ ಹೋದರು. ಅಲ್ಲವರು ಶ್ರೀರಾಮ ನಿಗೆ ಇಷ್ಟಳಾದ ಅವನ ಪತ್ನಿಯಾದ ಸೀತಾದೇವಿಯು ಅನಾಥೆಯಂತೆ ರೋದನ ಮಾಡುತ್ತಾ ಕುಳಿತಿರುವುದನ್ನು ಕಂಡರು.

ಶೋಕಭಾರದಿಂದ ಪೀಡಿತಳಾಗಿದ್ದ ಸೀತಾದೇವಿಯನ್ನು ತಮ್ಮ ತೇಜಸ್ಸಿನಿಂದಲೇ ಆಹ್ಲಾದಗೊಳಿಸುತ್ತಿರುವರೋ ಎಂಬಂತೆ ವಾಲ್ಮೀಕಿ ಮಹರ್ಷಿಗಳು ಸುಮಧುರವಾದ ಈ ಮಾತನ್ನು ಸೀತೆಗೆ ಹೇಳಿದರು :

ಸ್ನುಷಾ ದಶರಥಸ್ಯ ತ್ವಂ ರಾಮಸ್ಯ ಮಹಿಷೀ ಪ್ರಿಯಾ ।
ಜನಕಸ್ಯ ಸುತಾ ರಾಜ್ಞಃ ಸ್ವಾಗತಂ ತೇ ಪತಿವ್ರತೇ ॥11॥

''ಪತಿವ್ರತೆಯೇ ! ನೀನು ದಶರಥರಾಜನ ಸೊಸೆ. ಶ್ರೀರಾಮನಿಗೆ ಅತ್ಯಂತಪ್ರಿಯಳಾದ ಪಟ್ಟದರಾಣಿ. ಜನಕರಾಜನ ಮಗಳು. ಸಾಧ್ವಿಯಾದ ನಿನಗೆ ಸ್ವಾಗತವನ್ನು ಬಯಸುತ್ತೇನೆ.

ಆಯಾನ್ತೀ ಚಾಸಿ ವಿಜ್ಞಾತಾ ಮಯಾ ಧರ್ಮಸಮಾಧಿನಾ ।
ಕಾರಣಂ ಚೈವ ಸರ್ವಂ ಮೇ ಹೃದಯೇನೋಪಲಕ್ಷಿತಮ್ ॥12॥

ಯೋಗಧರ್ಮಸಮಾಧಿಯ ಮೂಲಕ ಈ ಹಿಂದೆಯೇ ನಾನು ನೀನಿಲ್ಲಿಗೆ ಬರುತ್ತಿರುವ ಸಮಾಚಾರವನ್ನು ತಿಳಿದಿದ್ದೆನು. ಅಂತರ್ದೃಷ್ಟಿಯ ಮೂಲಕ ನೀನಿಲ್ಲಿಗೆ ಬಂದಿರುವ ಕಾರಣವನ್ನೂ ತಿಳಿದೆನು.

ಭಾಗ್ಯಶಾಲಿನಿಯೇ! ನಿನ್ನ ಸಮಗ್ರವೃತ್ತಾಂತವೂ ನನಗೆ ಯಥಾ ವತ್ತಾಗಿ ತಿಳಿದಿದೆ. ಮೂರು ಲೋಕಗಳಲ್ಲಿ ನಡೆಯುವುದೆಲ್ಲವೂ ನನಗೆ ತಿಳಿಯುತ್ತಿರುತ್ತದೆ.

ಅಪಾಪಾಂ ವೇದ್ಮಿ ಸೀತೇ ತ್ವಾಂ ತಪೋಲಬ್ಧೇನ ಚಕ್ಷುಷಾ ।
ವಿಸ್ರಬ್ಧಾ ಭವ ವೈದೇಹಿ ಸಾಮ್ಪ್ರತಂ ಮಯಿ ವರ್ತಸೇ ॥14॥

ನಾನು ತಪಸ್ಸಿನ ಮೂಲಕ ಪಡೆದುಕೊಂಡಿರುವ ದಿವ್ಯದೃಷ್ಟಿಯಿಂದ ನೀನು ನಿಷ್ಪಾಪಳೆಂಬುದನ್ನು ತಿಳಿದಿದ್ದೇನೆ. ಆದುದರಿಂದ ನೀನು ಧೈರ್ಯ ದಿಂದಿರು. ಈಗ ನೀನು ನನ್ನ ಆಶ್ರಮದಲ್ಲಿಯೇ ವಾಸವಾಗಿರು.

ನನ್ನ ಆಶ್ರಮಕ್ಕೆ ಸ್ವಲ್ಪದೂರದಲ್ಲಿಯೇ ತಪಸ್ಸಿನಲ್ಲಿ ನಿರತರಾಗಿರುವ ಹಲವಾರು ತಾಪಸಸ್ತ್ರೀಯರಿದ್ದಾರೆ. ಅವರೆಲ್ಲರೂ ನಿನ್ನನ್ನು ತಮ್ಮ ಮಗಳಂತೆ ಕಂಡುಕೊಂಡು ಪರಿಪಾಲನೆಮಾಡುತ್ತಾರೆ.

ವೈದೇಹಿ! ನಾನು ಕೊಡಲಿರುವ ಈ ಅರ್ಘ್ಯವನ್ನು ಸ್ವೀಕರಿಸು. ನಿಶ್ಚಿಂತಳಾಗಿ - ನಿರ್ಭಯಳಾಗಿ ವಾಸಮಾಡಿಕೊಂಡಿರು. ಇದು ನಿನ್ನ ಮನೆಯೇ ಆಗಿದೆ. ನಿನ್ನ ಸ್ವಂತ ಮನೆಗೇ ನೀನು ಬಂದಿರುವೆಯೆಂದು ಭಾವಿಸಿ ಯಾವುದೇ ಕಾರಣದಿಂದಲೂ ವಿಷಾದಿಸಬೇಡ.''

ಮಹರ್ಷಿವಾಲ್ಮೀಕಿಗಳ ಪರಮಾದ್ಭುತವಾದ ಮಾತನ್ನು ಕೇಳಿ ವೈದೇಹಿಯು ತಲೆಬಾಗಿ ಮಹರ್ಷಿಗಳ ಚರಣಕಮಲಗಳಿಗೆ ನಮಸ್ಕರಿಸಿದಳು. ಹಾಗೆಯೇ ಆಗಲೆಂದು ಹೇಳುತ್ತಾ ಋಷಿಗಳ ಮಾತಿಗೆ ಸಮ್ಮತಿಸಿದಳು. ವಾಲ್ಮೀಕಿಗಳು ಆಶ್ರಮಾಭಿಮುಖವಾಗಿ ಹೋಗುತ್ತಿದ್ದಂತೆ ಸೀತಾದೇವಿಯು ಕೈಜೋಡಿಸಿಕೊಂಡು ಅವರ ಹಿಂದೆಯೇ ಹೋಗುತ್ತಿದ್ದಳು. ವೈದೇಹಿಯೊಡನೆ ವಾಲ್ಮೀಕಿಮಹರ್ಷಿಗಳು ಬರುತ್ತಿರುವುದನ್ನು ನೋಡಿ ಋಷಿಪತ್ನಿಯರು ಸಂತೋಷಭರಿತರಾಗಿ ಅವರ ಬಳಿಗೆ ಬಂದು ಹೇಳಿದರು :

ಸ್ವಾಗತಂ ತೇ ಮುನಿಶ್ರೇಷ್ಠ ಚಿರಸ್ಯಾಗಮನಂ ಚ ತೇ ।

ಅಭಿವಾದಯಾಮಸ್ತ್ವಾಂ ಸರ್ವಾ ಉಚ್ಯತಾಂ ಕಿಂ ಚ ಕುರ್ಮಹೇ ॥19॥

''ಮುನಿಶ್ರೇಷ್ಠರೇ ! ತಮಗೆ ಸುಖಾಗಮನವನ್ನು ಬಯಸುತ್ತೇವೆ. ಬಹಳ ದಿವಸಗಳ ನಂತರ ತಾವು ಇಲ್ಲಿಗೆ ದಯಮಾಡಿಸಿರುವಿರಿ. ನಾವೆಲ್ಲರೂ ತಮಗೆ ಅಭಿವಾದನಮಾಡುತ್ತೇವೆ. ನಾವು ತಮಗಾಗಿ ಯಾವ ಕಾರ್ಯವನ್ನು ಮಾಡಿಕೊಡಬೇಕಾಗಿದೆ ? ಆಜ್ಞಾಪಿಸಿರಿ.''

ಋಷಿಪತ್ನಿಯರ ಮಾತನ್ನು ಕೇಳಿ ಮಹರ್ಷಿಗಳು ಹೇಳಿದರು :

ಸೀತೇಯಂ ಸಮನುಪ್ರಾಪ್ತಾ ಪತ್ನೀ ರಾಮಸ್ಯ ಧೀಮತಃ ॥20॥

ಸ್ನುಷಾ ದಶರಥಸ್ಯೈಷಾ ಜನಕಸ್ಯ ಸುತಾ ಸತೀ ।

ಅಪಾಪಾ ಪತಿನಾ ತ್ಯಕ್ತಾ ಪರಿಪಾಲ್ಯಾ ಮಯಾ ಸದಾ ॥21॥

''ಧೀಮಂತನಾದ ಶ್ರೀರಾಮನ ಪತ್ನಿಯಾದ ಸೀತಾದೇವಿಯು ಇಲ್ಲಿಗೆ ಬಂದಿದ್ದಾಳೆ. ಇವಳು ದಶರಥನ ಸೊಸೆ ; ಜನಕನ ಮಗಳು. ಸಾಧ್ವಿಯು. ಪಾಪರಹಿತಳಾಗಿದ್ದರೂ ಕೂಡ ಪತಿಯಾದ ಶ್ರೀರಾಮನು ಇವಳನ್ನು ಪರಿತ್ಯಜಿಸಿದ್ದಾನೆ. ಈಗ ನಾವಿವಳನ್ನು ಪಾಲಿಸಿ ಪೋಷಿಸಬೇಕಾಗಿದೆ.

ನೀವೆಲ್ಲರೂ ಇವಳನ್ನು ಪರಮಸ್ನೇಹದಿಂದ ನೋಡಿಕೊಳ್ಳಿರಿ. ರಾಜಪತ್ನಿಯೆಂಬ ಗೌರವದಿಂದಲೂ ಮತ್ತು ನನ್ನ ಮಾತಿನಿಂದಲೂ ನೀವು ಇವಳನ್ನು ವಿಶೇಷವಾದ ರೀತಿಯಲ್ಲಿ ಸಮಾದರಿಸಬೇಕು. ನೀವೆಲ್ಲರೂ ಇವಳನ್ನು ಪೂಜ್ಯಳೆಂದು ಭಾವಿಸಿರಿ.''

ಹೀಗೆ ಬಾರಿ –ಬಾರಿಗೂ ಹೇಳುತ್ತಾ ಮಹಾಯಶೋವಂತರಾದ ವಾಲ್ಮೀಕಿಮಹರ್ಷಿಗಳು ಸೀತೆಯ ಪಾಲನೆ –ಪೋಷಣೆಗಳನ್ನು ಋಷಿಗಳ ಪತ್ನಿಯರಿಗೊಪ್ಪಿಸಿ ಶಿಷ್ಯರಿಂದ ಸಮಾವೃತರಾಗಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

49ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 50ನೆಯ ಸರ್ಗ

ಲಕ್ಷ್ಮಣ -ಸುಮಂತ್ರರ ಸಂಭಾಷಣೆ

ದೃಷ್ಟ್ವಾತು ಮೈಥಿಲೀಂ ಸೀತಾಮಾಶ್ರಮೇ ಸಂಪ್ರವೇಶಿತಾಮ್ ।
ಸಂತಾಪಮಗಮದ್ಘೋರಂ ಲಕ್ಷ್ಮಣೋ ದೀನಚೇತನಃ ॥1॥

ಮಿಥಿಲೇಶನ ಕುವರಿಯಾದ ಸೀತೆಯು ವಾಲ್ಮೀಕಿಮಹರ್ಷಿಗಳ ಆಶ್ರಮಕ್ಕೆ ಹೋದುದನ್ನು ಲಕ್ಷ್ಮಣನು ದೂರದಿಂದಲೇ ನೋಡಿದನು. ದೀನನಾಗಿದ್ದ ಲಕ್ಷ್ಮಣನಿಗೆ ಸೀತಾದೇವಿಯ ದುರವಸ್ಥೆಯನ್ನು ಕಂಡು ಅತಿ ಘೋರವಾದ ಸಂಕಟವಾಯಿತು.

ಮಹಾತೇಜಸ್ವಿಯಾದ ಲಕ್ಷ್ಮಣನು ಮಂತ್ರಿಯೂ ಸಾರಥಿಯೂ ಆಗಿದ್ದ ಸುಮಂತ್ರನಿಗೆ ಹೇಳಿದನು :

''ಸಾರಥಿಯೇ! ಸೀತೆಯ ವಿರಹತಾಪದಿಂದ ಉಂಟಾಗಿರುವ ರಾಘವನ ದುಃಖವನ್ನಾದರೂ ನೋಡು. ರಾಘವನಿಗೆ ಇದಕ್ಕಿಂತಲೂ ಹೆಚ್ಚಿನ ಯಾವ ದುಃಖವು ತಾನೇ ಸಂಭವಿಸುವುದು ? ಶುದ್ಧಚಾರಿತ್ರ್ಯಳಾದ, ಪತ್ನಿಯಾದ ಜನಕಸುತೆಯನ್ನೂ ಪರಿತ್ಯಾಗಮಾಡಬೇಕಾಯಿತು. ರಾಘವನಿಗೆ ಸೀತಾದೇವಿಯ ಈ ನಿತ್ಯವಿಯೋಗವು ದೈವದಿಂದಲೇ ಆಗಿರುವುದೆಂದು ನಾನು ಭಾವಿಸುತ್ತೇನೆ. ಏಕೆಂದರೆ : **ದೈವಂ ಹಿ ದುರತಿಕ್ರಮಮ್ ॥** ದೈವಚಿಂತನೆಯು ಅತಿಕ್ರಮಿಸಲು ಅಸಾಧ್ಯವಾದುದು. ಯಾವನು ಕ್ರುದ್ಧನಾದರೆ ದೇವ–ದಾನವ–ಗಂಧರ್ವಾಸುರ –ರಾಕ್ಷಸರನ್ನೂ ಸಂಹರಿಸಲು ಶಕ್ತನೋ – ಅವನೇ ದೈವಕ್ಕೆ ಅಧೀನನಾಗಿದ್ದಾನೆ.

ಈ ಹಿಂದೆ ಶ್ರೀರಾಮನು ತಂದೆಯ ಆಜ್ಞೆಯಂತೆ ನಿರ್ಜನವಾಗಿದ್ದ ದಂಡಕಾರಣ್ಯದಲ್ಲಿ ಹದಿನಾಲ್ಕು ವರ್ಷಗಳನ್ನು ಕಳೆದನು. ಈಗಂತೂ ಪುನಃ ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸಿದ್ದು ಹಿಂದಿನ ದುಃಖಕ್ಕಿಂತಲೂ ದುಃಖತರವಾಗಿದೆ. ಪಟ್ಟಣಿಗರ ಮಾತನ್ನು ಕೇಳಿ ಸೀತೆಯನ್ನು ಕಾಡಿಗಟ್ಟಿದ್ದು ಕ್ರೂರಕರ್ಮವೆಂದೇ ನಾನು ಭಾವಿಸುತ್ತೇನೆ.

ಕೋ ನು ಧರ್ಮಾಶ್ರಯಃ ಸೂತ ಕರ್ಮಣ್ಯಸ್ಮಿನ್ಯಶೋಹರೇ ।
ಮೈಥಿಲೀಂ ಸಮನುಪ್ರಾಪ್ತಃ ಪೌರೈರ್ಹೀನಾರ್ಥವಾದಿಭಿಃ ॥8॥

ಸೀತೆಯ ವಿಷಯದಲ್ಲಿ ಅನ್ಯಾಯದ ಮಾತುಗಳನ್ನಾಡುವ ಈ ಪುರ

ವಾಸಿಗಳ ಸಲುವಾಗಿ ಯಶಸ್ಸಿನ ನಾಶಕವಾದ ಇಂತಹ ಕ್ರೂರಕರ್ಮವನ್ನು ಮಾಡಿರುವ ಶ್ರೀರಾಮನು ಎಂತಹ ಧರ್ಮವನ್ನು ಸಾಧಿಸಿದಂತಾಯಿತು ?''

ಲಕ್ಷ್ಮಣನು ಹೇಳಿದ ಇಂತಹ ನಾನಾವಿಧವಾದ ಮಾತುಗಳನ್ನು ಕೇಳಿ ಸಾರಥಿಯಾದ ಸುಮಂತ್ರನು ಶ್ರದ್ಧಾಪೂರ್ವಕವಾಗಿ ಹೇಳಿದನು :

''ಲಕ್ಷ್ಮಣ! ಮೈಥಿಲಿಗಾಗಿ ಅತಿಯಾಗಿ ಸಂತಾಪಪಡಬೇಡ. ಇದು ಹೀಗಾಗುವುದೆಂದು ಬಹಳ ಹಿಂದೆಯೇ ತಿಳಿದಿದ್ದಿತು. ಬ್ರಾಹ್ಮಣರು ನಿಮ್ಮ ತಂದೆಯಾದ ದಶರಥನ ಎದುರಿನಲ್ಲಿಯೇ ಇದಕ್ಕೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳಿದ್ದರು.

ಭವಿಷ್ಯತಿ ದೃಢಂ ರಾಮೋ ದುಃಖಪ್ರಾಯೋಽವಿಸೌಖ್ಯಭಾಕ್ ।
ಪ್ರಾಪ್ಸ್ಯತೇ ಚ ಮಹಾಬಾಹುರ್ವಿಪ್ರಯೋಗಂ ಪ್ರಿಯೈರ್ದ್ರುತಮ್ ॥11॥

'ಶ್ರೀರಾಮನು ಹೆಚ್ಚು ದುಃಖಪಡಬೇಕಾಗುವುದೆಂದೂ, ಅವನು ಸೌಖ್ಯರಹಿತನಾಗುವನೆಂದೂ, ಬಹಳ ಶೀಘ್ರವಾಗಿಯೇ ಪ್ರಿಯಜನರಿಂದಲೂ ವಿಯೋಗವನ್ನು ಹೊಂದುವನೆಂದೂ –ಬಹಳ ಹಿಂದೆಯೇ ದುರ್ವಾಸರು ನಿನ್ನ ತಂದೆಗೆ ಹೇಳಿದ್ದರು.'

ಲಕ್ಷ್ಮಣ! ಇಷ್ಟು ಮಾತ್ರವಲ್ಲ.

ತ್ವಾಂ ಚೈವ ಮೈಥಿಲೀಂ ಚೈವ ಶತ್ರುಘ್ನಭರತೌ ತಥಾ ।
ಸನ್ತ್ಯಜಿಷ್ಯತಿ ಧರ್ಮಾತ್ಮಾ ಕಾಲೇನ ಮಹತಾ ಮಹಾನ್ ॥12॥

ಬಹಳಕಾಲ ಕಳೆದನಂತರ ಧರ್ಮಾತ್ಮನಾದ ಮಹಾಪುರುಷನಾದ ಶ್ರೀರಾಮನು ನಿನ್ನನ್ನೂ, ಮೈಥಿಲಿಯನ್ನೂ, ಭರತ –ಶತ್ರುಘ್ನರನ್ನೂ ಪರಿತ್ಯಜಿಸುತ್ತಾನೆ.

ದುರ್ವಾಸರು ಹೇಳಿದ್ದ ಈ ಮಾತನ್ನು ನಿನಗಾಗಲೀ, ಶತ್ರುಘ್ನನಿಗಾಗಲೀ, ಭರತನಿಗಾಗಲೀ ಹೇಳಬಾರದೆಂದು ದಶರಥರಾಜನು ನನಗೆ ಹೇಳಿದ್ದನು. ದುರ್ವಾಸರು ಈ ಮಾತನ್ನು ಜನಸಮುದಾಯದಲ್ಲಿ ನನ್ನ ಮತ್ತು ವಸಿಷ್ಠರ ಸನ್ನಿಧಿಯಲ್ಲಿ ನಿನ್ನ ತಂದೆಗೆ ಹೇಳಿದ್ದರು. ಋಷಿಗಳ ಆ ಮಾತನ್ನು ಕೇಳಿ ನಿಮ್ಮ ತಂದೆಯಾದ ದಶರಥನು ಇತರ ಜನರ ಮುಂದೆ

ಯಾವಾಗಲೂ ನೀನು ಈ ಮಾತನ್ನು ಹೇಳಬಾರದೆಂದು ನನಗೆ ಆಜ್ಞೆಮಾಡಿದ್ದನು. ಲೋಕ ಪಾಲಕನಾಗಿದ್ದ ದಶರಥನ ಆಜ್ಞೆಯನ್ನು ನಾನು ಉಲ್ಲಂಘಿಸಲು ಇಷ್ಟ ಪಡುವುದಿಲ್ಲ. ಆದುದರಿಂದ ಯಾವಾಗಲೂ ಸಮಾಧಾನದಿಂದಲೇ ಇರುವೆನು. ನಿನ್ನ ಮುಂದೆ ಈ ವಿಷಯವನ್ನು ಸರ್ವಥಾ ಹೇಳಬಾರದಾಗಿದ್ದಿತು. ನಿನಗೆ ಕೇಳುವುದರಲ್ಲಿ ಅಷ್ಟೊಂದು ಆಸಕ್ತಿಯಿದ್ದರೆ ನನ್ನ ಈ ಮಾತುಗಳನ್ನು ಕೇಳು. ಹಿಂದೆ ಮಹಾರಾಜನು ಈ ವಿಷಯವನ್ನು ಬೇರೆಯವರಿಗೆ ತಿಳಿಸ ಬಾರದೆಂಬ ಆದೇಶವನ್ನಿತ್ತಿದ್ದರೂ ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ. ಏಕೆಂದರೆ : ದೈವದ ಸಂಕಲ್ಪವನ್ನು ಉಲ್ಲಂಘಿಸಿ ನಡೆಯುವ ಸಾಧ್ಯತೆಯೇ ಇಲ್ಲ. ಈ ಕಾರಣದಿಂದಲೇ ಶೋಕಯುಕ್ತವಾದ ಇಂತಹ ಮಹಾದುಃಖವು ಪ್ರಾಪ್ತವಾಗಿದೆ. ನೀನಾದರೂ ಈ ವಿಷಯವನ್ನು ಭರತ-ಶತ್ರುಘ್ನರ ಎದುರಿನಲ್ಲಿ ಹೇಳಬಾರದು.''

ಗಂಭೀರವಾದ ಅರ್ಥವನ್ನು ಕೊಡುವ ಪದಗಳಿಂದ ಕೂಡಿದ್ದ ಮತ್ತು ಮಹತ್ತ್ವಪೂರ್ಣವಾಗಿದ್ದ ಸುಮಂತ್ರನ ಮಾತನ್ನು ಕೇಳಿ ಲಕ್ಷ್ಮಣನು ಸೂತನಿಗೆ '**ತಥ್ಯಂ ಬ್ರೂಹಿ** - ಆಗಲಿ, ನಿಜವಾದ ಸಮಾಚಾರವನ್ನು ತಿಳಿಸು' -ಎಂದು ಹೇಳಿದನು.

50ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **51ನೆಯ ಸರ್ಗ**

ಸುಮಂತ್ರನು ದುರ್ವಾಸರಿಂದ ಕೇಳಿದ ಭೃಗುಮಹರ್ಷಿಯ ಶಾಪದ ಕಥೆಯನ್ನು ಲಕ್ಷ್ಮಣನಿಗೆ ಹೇಳಿ ಸಮಾಧಾನಗೊಳಿಸಿದುದು

ತಥಾ ಸಂಚೋದಿತಃ ಸೂತೋ ಲಕ್ಷ್ಮಣೇನ ಮಹಾತ್ಮನಾ ।
ತದ್ವಾಕ್ಯಮೃಷಿಣಾ ಪ್ರೋಕ್ತಂ ವ್ಯಾಹರ್ತುಮುಪಚಕ್ರಮೇ ॥1॥

ಸುಮಂತ್ರನು ಮಹಾತ್ಮನಾದ ಲಕ್ಷ್ಮಣನ ಪ್ರೇರಣೆಯಂತೆ ದುರ್ವಾಸರು ದಶರಥನಿಗೆ ಹೇಳಿದ ಮಾತುಗಳನ್ನು ಹೇಳಲು ಉಪಕ್ರಮಿಸಿದನು:

''ಲಕ್ಷ್ಮಣ ! ಅತ್ರಿಮಹರ್ಷಿಗಳ ಮಕ್ಕಳಾದ ಮಹಾಮುನಿಗಳಾದ

ದುರ್ವಾಸರು ಹಿಂದೊಮ್ಮೆ ವಸಿಷ್ಠರ ಆಶ್ರಮದಲ್ಲಿ ವರ್ಷಾಕಾಲದ ನಾಲ್ಕು ಮಾಸಗಳ ನಿಯಮವನ್ನು ಪಾಲಿಸುತ್ತಿದ್ದರು. ಆ ಸಮಯದಲ್ಲಿ ಮಹಾ ಯಶೋವಂತನಾದ ನಿನ್ನ ತಂದೆಯು ಪುರೋಹಿತರಾದ ವಸಿಷ್ಠರನ್ನು ಕಾಣಲು ಅವರ ಆಶ್ರಮಕ್ಕೆ ತಾನಾಗಿಯೇ ಬಂದನು. ಆಶ್ರಮವನ್ನು ಪ್ರವೇಶಿಸು ತ್ತಿದ್ದಂತೆಯೇ ದಶರಥರಾಜನು ಸೂರ್ಯಸದೃಶರಾಗಿದ್ದ, ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವರೋ ಎಂಬಂತೆ ಕಾಣುತ್ತಿದ್ದ, ವಸಿಷ್ಠರ ಎಡಭಾಗದಲ್ಲಿ ಕುಳಿತಿದ್ದ ದುರ್ವಾಸಮಹಾಮುನಿಗಳನ್ನು ನೋಡಿದನು. ಒಡನೆಯೇ ಮಹಾರಾಜನು ತಾಪಸಶಿರೋಮಣಿಗಳಾಗಿದ್ದ ಇಬ್ಬರು ಮಹರ್ಷಿಗಳಿಗೂ ವಿನಯ ಪೂರ್ವಕವಾಗಿ ಅಭಿವಾದನಮಾಡಿದನು. ಇಬ್ಬರು ಮಹರ್ಷಿಗಳೂ ರಾಜನಿಗೆ ಸ್ವಾಗತವನ್ನು ಬಯಸಿ ಕುಳಿತುಕೊಳ್ಳಲು ಆಸನವನ್ನಿತ್ತು ಫಲ –ಮೂಲಾದಿ ಗಳಿಂದ ರಾಜನನ್ನು ಯಥಾಯೋಗ್ಯವಾಗಿ ಸತ್ಕರಿಸಿದರು. ರಾಜನು ಸ್ವಲ್ಪ ಹೊತ್ತು ಋಷಿಗಳೊಡನೆ ಕುಳಿತಿದ್ದನು. ಸೂರ್ಯನು ಹಗಲಿನ ಮಧ್ಯಭಾಗ ದಲ್ಲಿದ್ದಾಗ ಅಲ್ಲಿ ಕುಳಿತಿದ್ದ ಪರಮರ್ಷಿಗಳು ಸುಮಧುರವಾದ ನಾನಾವಿಧವಾದ ಕಥೆಗಳನ್ನು ಒಬ್ಬರಿಗೊಬ್ಬರು ಹೇಳುತ್ತಿದ್ದರು. ಒಂದು ಕಥಾಪ್ರಸಂಗವು ನಡೆಯುತ್ತಿದ್ದಾಗ ಮಹಾರಾಜನು ಕೈಜೋಡಿಸಿಕೊಂಡು ಅತ್ರಿಗಳ ಮಕ್ಕಳಾದ ಮಹಾತ್ಮರಾದ ದುರ್ವಾಸರಿಗೆ ಹೇಳಿದನು :

''ಪೂಜ್ಯರೇ! ನನ್ನ ವಂಶವು ಎಲ್ಲಿಯವರೆಗೆ ಮುಂದುವರಿಯುತ್ತದೆ? ನನ್ನ ಜ್ಯೇಷ್ಠಪುತ್ರನಾದ ಶ್ರೀರಾಮನ ಆಯುಷ್ಯವೆಷ್ಟು? ಅಂತೆಯೇ ಭರತನೇ ಮೊದಲಾದ ಇತರ ಮಕ್ಕಳ ಆಯುಃಪ್ರಮಾಣವೇನು? ರಾಮನಿಗೆ ಹುಟ್ಟುವ ಮಕ್ಕಳ ಆಯುಷ್ಯವೆಷ್ಟು? ಪೂಜ್ಯರೇ! ನನ್ನ ಅಪೇಕ್ಷೆಯಂತೆ ನನ್ನ ವಂಶದ ಸ್ಥಿತಿಯನ್ನು ಹೇಳಿರಿ.''

ದಶರಥಮಹಾರಾಜನ ಆ ಮಾತನ್ನು ಕೇಳಿ ಮಹಾತೇಜಸ್ವಿಗಳಾದ ದುರ್ವಾಸರು ಹೇಳತೊಡಗಿದರು :

''ದಶರಥಮಹಾರಾಜ! ಹಿಂದೊಮ್ಮೆ ದೇವತೆಗಳಿಗೂ ದೈತ್ಯರಿಗೂ ಯುದ್ಧವು ನಡೆದಾಗ ದೈತ್ಯರು ದೇವತೆಗಳಿಂದ ಪೀಡಿಸಲ್ಪಟ್ಟು ಭೃಗು ಮಹರ್ಷಿಗಳ ಪತ್ನಿಯನ್ನು ಶರಣುಹೊಂದಿದರು. ಭೃಗುಪತ್ನಿಯು ದೈತ್ಯರಿಗೆ ಅಭಯದಾನಮಾಡಿದಳು. ಆದರಿಂದ ದೈತ್ಯರು ನಿರ್ಭಯರಾಗಿ ಭೃಗು

ಮಹರ್ಷಿಗಳ ಆಶ್ರಮದಲ್ಲಿಯೇ ವಾಸಮಾಡುತ್ತಿದ್ದರು. ಭೃಗುಪತ್ನಿಯು ದೈತ್ಯರಿಗೆ ತನ್ನ ಆಶ್ರಮದಲ್ಲಿ ಆಶ್ರಯವನ್ನಿತ್ತಿರುವುದನ್ನು ಕಂಡು ಸುರೇಶ್ವರನಾದ ಮಹಾವಿಷ್ಣುವು ಕುಪಿತನಾಗಿ ನಿಶಿತವಾದ ಅಲಗುಗಳುಳ್ಳ ಚಕ್ರದಿಂದ ಭೃಗುಪತ್ನಿಯ ತಲೆಯನ್ನು ಹಾರಿಸಿಬಿಟ್ಟನು. ತನ್ನ ಪತ್ನಿಯನ್ನು ಮಹಾವಿಷ್ಣುವು ಸಂಹರಿಸಿದುದನ್ನು ಕಂಡು ಭೃಗುಕುಲಪ್ರವರ್ತಕನಾದ ಭೃಗುವು ಒಡನೆಯೇ ಪರಮಕ್ರುದ್ಧನಾಗಿ ಶತ್ರುಕುಲನಾಶಕನಾದ ಮಹಾವಿಷ್ಣುವಿಗೆ ಶಾಪವನ್ನಿತ್ತನು :

ಯಸ್ಮಾದವಧ್ಯಾಂ ಮೇ ಪತ್ನೀಮವಧೀಃ ಕ್ರೋಧಮೂರ್ಛಿತಃ।
ತಸ್ಮಾತ್ತ್ವಂ ಮಾನುಷೇ ಲೋಕೇ ಜನಿಷ್ಯಸಿ ಜನಾರ್ದನ।
ತತ್ರ ಪತ್ನೀವಿಯೋಗಂ ತ್ವಂ ಪ್ರಾಪ್ಸ್ಯಸೇ ಬಹುವಾರ್ಷಿಕಮ್ ॥15॥

''ಜನಾರ್ದನನೇ! ವಧೆಗೆ ಅನರ್ಹಳಾದ ನನ್ನ ಪತ್ನಿಯನ್ನು ಕ್ರೋಧಮೂರ್ಛಿತನಾಗಿ ಸಂಹರಿಸಿದೆಯಾದ ಕಾರಣ ನೀನು ಮನುಷ್ಯಲೋಕದಲ್ಲಿ ಜನ್ಮತಾಳುವೆ. ಇಷ್ಟುಮಾತ್ರವಲ್ಲ; ಅಲ್ಲಿ ಹಲವಾರು ವರ್ಷಗಳವರೆಗೆ ಪತ್ನೀವಿಯೋಗದ ದುಃಖವನ್ನು ಅನುಭವಿಸುವೆ.''

ಆದರೆ ಹೀಗೆ ಶಾಪವನ್ನಿತ್ತಮೇಲೆ ಭೃಗುಮಹರ್ಷಿಗಳಿಗೆ – ಮಹಾವಿಷ್ಣುವಿಗೆ ಇಂತಹ ಶಾಪಕೊಟ್ಟುದಕ್ಕಾಗಿ – ಬಹಳ ಪಶ್ಚಾತ್ತಾಪವಾಯಿತು. ವಿಷ್ಣುವು ಶಾಪವನ್ನು ಸ್ವೀಕರಿಸುವಂತೆ ಮಾಡಲು ವಿಷ್ಣುವಿನ ಆರಾಧನೆ ಮಾಡುವಂತೆ ಮಹರ್ಷಿಗಳನ್ನು ಅವರ ಅಂತರಾತ್ಮವು ಪ್ರೇರಿಸಿತು. ಹೀಗೆ ಶಾಪಕೊಟ್ಟು ಮನಸ್ಸಿನಲ್ಲಿ ನೋವನ್ನು ಅನುಭವಿಸುತ್ತಿದ್ದ ಭೃಗುಮಹರ್ಷಿಗಳು ದೇವದೇವನಾದ ಮಹಾವಿಷ್ಣುವನ್ನು ಆರಾಧಿಸಿದರು. ಏಕಾಗ್ರವಾದ ತಪಸ್ಸಿನಿಂದ ಆರಾಧಿಸಲ್ಪಟ್ಟ, ಭಕ್ತವತ್ಸಲನಾದ ಮಹಾವಿಷ್ಣುವು ಪ್ರಸನ್ನನಾಗಿ ಮಹರ್ಷಿಗಳಿಗೆ ಹೇಳಿದನು :

''ಮಹರ್ಷಿಗಳೇ! ಎಲ್ಲ ಲೋಕಗಳಿಗೂ ಪ್ರಿಯವನ್ನುಂಟುಮಾಡಲು ನಾನು ನಿಮ್ಮ ಶಾಪವನ್ನು ಪ್ರತಿಗ್ರಹಿಸುವೆನು.''

ಹಿಂದೆ ಮಹಾವಿಷ್ಣುವು ವಾಮನನಾಗಿ ಅವತರಿಸಿದ್ದ ಸಮಯದಲ್ಲಿ ಮಹಾವಿಷ್ಣುವಿಗೆ ಭೃಗುಮಹರ್ಷಿಗಳಿಂದ ಹೀಗೆ ಶಾಪವು ಬಂದಿದ್ದಿತು.

ಆ ಶಾಪದ ಪರಿಣಾಮವಾಗಿ ಆ ಮಹಾವಿಷ್ಣುವೇ ಭೂಮಿಯಲ್ಲಿ ನಿನ್ನ ಮಗನಾಗಿ ಹುಟ್ಟಿ ರಾಮನೆಂಬ ಹೆಸರಿನಿಂದ ತ್ರಿಭುವನಗಳಲ್ಲಿಯೂ ವಿಖ್ಯಾತನಾಗುತ್ತಾನೆ. ಭೃಗುಮಹರ್ಷಿಗಳ ಶಾಪದ ಪರಿಣಾಮವಾಗಿ ಅವನು ಪತ್ನೀವಿಯೋಗರೂಪವಾದ ಫಲವನ್ನು ಪಡೆದರೂ ಬಹಳ ದೀರ್ಘಕಾಲದವರೆಗೆ ಅಯೋಧ್ಯೆಯಲ್ಲಿ ರಾಜ್ಯಭಾರಮಾಡಿಕೊಂಡಿರುತ್ತಾನೆ. ಅವನ ಅನುಯಾಯಿಗಳೂ –ಪರಮಸುಖಿಗಳಾಗಿ ಧನ –ಧಾನ್ಯಗಳ ಸಮೃದ್ಧಿಯಿಂದ ಸಂಪನ್ನರಾಗಿಯೂ ಇರುತ್ತಾರೆ. ಶ್ರೀರಾಮನು ಹನ್ನೊಂದು ಸಾವಿರ ವರ್ಷಗಳವರೆಗೆ ರಾಜ್ಯವನ್ನಾಳಿ ಬ್ರಹ್ಮಲೋಕಕ್ಕೆ ಹೋಗುತ್ತಾನೆ. ಪರಮದುರ್ಜಯನಾದ ವೀರನಾದ ಶ್ರೀರಾಮನು ಸಮೃದ್ಧವಾದ ದಕ್ಷಿಣೆಗಳಿಂದ ಕೂಡಿದ ಅಶ್ವಮೇಧಯಾಗಗಳನ್ನು ಹಲವಾರು ಬಾರಿ ಮಾಡುತ್ತಾನೆ. ಅನೇಕ ರಾಜವಂಶಗಳನ್ನೂ ಸ್ಥಾಪಿಸುತ್ತಾನೆ. ಸೀತಾದೇವಿಯಲ್ಲಿ ಅವನಿಗೆ ಇಬ್ಬರು ಗಂಡುಮಕ್ಕಳು ಹುಟ್ಟುತ್ತಾರೆ.''

ಹೀಗೆ ಮಹಾತೇಜಸ್ವಿಗಳಾದ ಮಹಾಮುನಿಗಳಾದ ದುರ್ವಾಸರು ರಾಜವಂಶದ ವಿಷಯದಲ್ಲಿ ಹಿಂದಿನ ಮತ್ತು ಮುಂದಾಗುವ ಸಮಸ್ತ ವಿಷಯಗಳನ್ನೂ ಹೇಳಿ ಮೌನತಾಳಿದರು. ದುರ್ವಾಸರು ಮುಂದೆ ಮಾತನಾಡದಿರಲು ದಶರಥಮಹಾರಾಜನು ವಸಿಷ್ಠ – ದುರ್ವಾಸರಿಬ್ಬರಿಗೂ ನಮಸ್ಕರಿಸಿ ಅಯೋಧ್ಯೆಗೆ ಹಿಂದಿರುಗಿದನು.

ದುರ್ವಾಸರು ಹೇಳಿದ ಆ ಮಾತುಗಳನ್ನು ರಾಜನೊಡನಿದ್ದ ನಾನೂ ಕೇಳಿಸಿಕೊಂಡೆನು. ಅದನ್ನು ನಾನು ಮನಸ್ಸಿನಲ್ಲಿ ಧಾರಣೆಮಾಡಿಕೊಂಡಿದ್ದೆನು. ಬೇರೆ ಯಾರಿಗೂ ಹೇಳಿರಲಿಲ್ಲ. ದುರ್ವಾಸರು ಹೇಳಿದ ಆ ಮಾತುಗಳೆಂದಿಗೂ ಸುಳ್ಳಾಗುವುದಿಲ್ಲ. ಅವರ ಮಾತಿನಂತೆ, ಶ್ರೀರಾಮನು ಸೀತಾದೇವಿಯ ಗರ್ಭದಲ್ಲಿ ಜನಿಸುವ ಆ ಇಬ್ಬರು ಮಕ್ಕಳಿಗೂ ಅಯೋಧ್ಯೆಯಲ್ಲಿ ಪಟ್ಟಾಭಿಷೇಕಮಾಡುವುದಿಲ್ಲ. ಬೇರೆಯ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುತ್ತಾನೆ.

ವಿಧಿಯ ನಿಯಮವು ಹೀಗಿರುವಾಗ ಸೀತೆಯ ಸಲುವಾಗಿ ಅಥವಾ ಶ್ರೀರಾಮನ ಸಲುವಾಗಿ ಶೋಕಪಡುವ ಕಾರಣವಿಲ್ಲ. ನರಶ್ರೇಷ್ಠನೇ ! ಲಕ್ಷ್ಮಣ ! ಮನಸ್ಸನ್ನು ಗಟ್ಟಿಮಾಡಿಕೋ !''

ಸುಮಂತ್ರನು ಹೇಳಿದ ಪರಮಾದ್ಭುತವಾದ ಮಾತನ್ನು ಕೇಳಿ ಲಕ್ಷ್ಮಣನಿಗೆ ಪರಮಸಂತೋಷವಾಯಿತು. '' ಸಾಧು! ಸುಮಂತ್ರ! ಸಾಧು! ಹಾಗೆಯೇ ಆಗಲಿ. ನಿಜಸಮಾಚಾರ ತಿಳಿದಂತಾಯಿತು ''- ಎಂದು ಸುಮಂತ್ರನನ್ನು ಬಹಳವಾಗಿ ಶ್ಲಾಘಿಸಿದನು.

ಮಾರ್ಗದಲ್ಲಿ ಲಕ್ಷ್ಮಣ – ಸುಮಂತ್ರರು ಹೀಗೆ ಮಾತನಾಡಿಕೊಳ್ಳುತ್ತಾ ಪ್ರಯಾಣಮಾಡುತ್ತಿದ್ದಾಗ ಸೂರ್ಯನು ಅಸ್ತಾಚಲವನ್ನು ಸೇರಿದನು. ಅವರಿಬ್ಬರೂ ಕೇಶಿನೀ (ಗೋಮತೀ) ನದಿಯ ತೀರದಲ್ಲಿ ಆ ರಾತ್ರಿಯನ್ನು ಸುಖವಾಗಿ ಕಳೆದರು.

51ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **52ನೆಯ ಸರ್ಗ**

ಸೀತೆಯನ್ನು ಕಾಡಿನಲ್ಲಿ ಬಿಟ್ಟು ಅಯೋಧ್ಯೆಗೆ ಹಿಂದಿರುಗಿದ ಲಕ್ಷ್ಮಣನು ಶ್ರೀರಾಮನನ್ನು ಸಮಾಧಾನಗೊಳಿಸಿದುದು

ತತ್ರ ತಾಂ ರಜನೀಮುಷ್ಯ ಕೇಶಿನ್ಯಾಂ ರಘುನನ್ದನಃ ।
ಪ್ರಭಾತೇ ಪುನರುತ್ಥಾಯ ಲಕ್ಷ್ಮಣಃ ಪ್ರಯಯೌ ತದಾ ॥1॥

ಕೇಶಿನೀನದಿಯ ತೀರದಲ್ಲಿ ಲಕ್ಷ್ಮಣನು ಸುಮಂತ್ರನೊಡನೆ ರಾತ್ರಿ ತಂಗಿದ್ದು ಬೆಳಗಾಗುತ್ತಲೇ ಮುಂದೆ ಪ್ರಯಾಣಮಾಡಿದನು.

ಅರ್ಧದಿವಸವು ಕಳೆದನಂತರ ಮಧ್ಯಾಹ್ನದ ಸಮಯದಲ್ಲಿ ಮಹಾರಥವು ರತ್ನರಾಶಿಗಳಿಂದ ತುಂಬಿದ್ದ, ಹೃಷ್ಟರೂ –ಪುಷ್ಟರೂ ಆಗಿದ್ದ ಜನರಿಂದ ಸಮಾಕುಲವಾಗಿದ್ದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿತು. ಅಯೋಧ್ಯೆಯನ್ನು ಸೇರಿದನಂತರ ಸುಮಿತ್ರೆಯ ಮಗನಾದ ಲಕ್ಷ್ಮಣನಿಗೆ ಬಹಳ ದುಃಖವಾಯಿತು. 'ಶ್ರೀರಾಮನ ಚರಣಕಮಲಗಳ ಬಳಿಗೆ ಹೋಗಿ ಅವನೊಡನೆ ನಾನೇನೆಂದು ಹೇಳಲಿ ?' –ಎಂಬ ಚಿಂತೆಯೇ ಅವನ ದುಃಖಕ್ಕೆ ಕಾರಣವಾಗಿದ್ದಿತು.

ಲಕ್ಷ್ಮಣನು ಹೀಗೆ ಯೋಚಿಸಿ ಮುನ್ನಡೆಯುತ್ತಿದ್ದಂತೆ ಚಂದ್ರನಂತೆ ಉಜ್ಜ್ವಲವಾಗಿದ್ದ ಮತ್ತು ವಿಶಾಲವಾಗಿದ್ದ ಶ್ರೀರಾಮನ ಭವನವು ಎದುರಿಗೆ ಕಾಣಿಸಿತು.

ನರಶ್ರೇಷ್ಠನಾದ ಲಕ್ಷ್ಮಣನು ರಾಜಭವನದ ಬಾಗಿಲಿನ ಸಮೀಪ ದಲ್ಲಿ ರಥದಿಂದಿಳಿದು ಅಧೋಮುಖನಾಗಿ ದೀನವಾದ ಮನಸ್ಸಿನಿಂದ ಕೂಡಿ ಯಾರಿಂದಲೂ ತಡೆಯಲ್ಪಡದವನಾಗಿ ಶ್ರೀರಾಮನ ಅರಮನೆಯೊಳಕ್ಕೆ ಹೋದನು. ಆ ಸಮಯದಲ್ಲಿ ಶ್ರೀರಾಮನು ಬಹುದುಃಖಿತನಾಗಿ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತಿದ್ದನು. ಅವನ ಕಣ್ಣುಗಳು ಕಂಬನಿಯಿಂದ ತುಂಬಿದ್ದುವು. ಅಂತಹ ಸ್ಥಿತಿಯಲ್ಲಿದ್ದ ಶ್ರೀರಾಮನನ್ನು ನೋಡಿ ಲಕ್ಷ್ಮಣನು ದೀನವಾದ ಮನಸ್ಸಿನಿಂದ ಕೂಡಿದವನಾಗಿ ಶ್ರೀರಾಮನ ಎರಡು ಕಾಲುಗಳನ್ನೂ ಮುಟ್ಟಿನಮಸ್ಕರಿಸಿದನು. ಬಳಿಕ ಏಕಾಗ್ರಚಿತ್ತನಾಗಿ ಕೈಮುಗಿದುಕೊಂಡು ದೈನ್ಯದಿಂದ ಶ್ರೀರಾಮನಿಗೆ ಹೇಳಿದನು :

‘‘ವೀರನೇ! ಪೂಜ್ಯನೇ! ಆರ್ಯನಾದ ನಿನ್ನ ಆಜ್ಞೆಯನ್ನು ಪುರಸ್ಕರಿಸಿ ಜನಕನ ಮಗಳಾದ, ಶುದ್ಧಚಾರಿತ್ರ್ಯಳಾದ, ಯಶಸ್ವಿನಿಯಾದ ಸೀತಾದೇವಿ ಯನ್ನು ಮುಂದಾಗಿಯೇ ನಿರ್ಧರಿಸಲ್ಪಟ್ಟಿದ್ದ ಗಂಗಾತೀರದಲ್ಲಿದ್ದ ವಾಲ್ಮೀಕಿ ಮಹರ್ಷಿಗಳ ಆಶ್ರಮದ ಸಮೀಪದಲ್ಲಿ ಪರಿತ್ಯಜಿಸಿ ನಿನ್ನ ಪಾದಕಮಲಗಳ ಉಪಾಸನೆಮಾಡುವ ಸಲುವಾಗಿ ಹಿಂದಿರುಗಿ ಅಯೋಧ್ಯೆಗೆ ಬಂದಿರುವೆನು.

ಮಾ ಶುಚಃ ಪುರುಷವ್ಯಾಘ್ರ ಕಾಲಸ್ಯ ಗತಿರೀದೃಶೀ ।
ತ್ವದ್ವಿಧಾ ನ ಹಿ ಶೋಚನ್ತಿ ಬುದ್ಧಿಮನ್ತೋ ಮನಸ್ವಿನಃ ॥10॥

ಪುರುಷಶ್ರೇಷ್ಠನೇ! ದುಃಖಿಸಬೇಡ. ಕಾಲದ ಗತಿಯೇ ಇಂತಹುದು. ಬುದ್ಧಿವಂತರೂ ದೃಢಚಿತ್ತರೂ ಆದ ನಿನ್ನಂತಹವರು ಇಂತಹ ವಿಷಯಗಳಿ ಗಾಗಿ ದುಃಖಪಡುವುದಿಲ್ಲ.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥11॥

ಪ್ರಪಂಚದಲ್ಲಿ ಧನ –ಕನಕ– ವಸ್ತು –ವಾಹನಾದಿಗಳ ಸಂಗ್ರಹವೆಲ್ಲವೂ ಕಾಲಾನುಗುಣವಾಗಿ ವಿನಾಶದಲ್ಲಿ ಪರ್ಯವಸಾನಹೊಂದುತ್ತವೆ. ಹೆಚ್ಚು ಮೇಲೇರುವುದು ಪತನಕ್ಕೆ ಕಾರಣವಾಗುತ್ತದೆ. ಪರಸ್ಪರ ಸಂಯೋಗವು ವಿಯೋಗದಲ್ಲಿ ಪರ್ಯವಸಾನಹೊಂದುತ್ತದೆ. ಜೀವಿತವು ಮರಣದಲ್ಲಿ ಕೊನೆಗೊಳ್ಳುತ್ತದೆ.

ತಸ್ಮಾತ್ಪುತ್ರೇಷು ದಾರೇಷು ಮಿತ್ರೇಷು ಚ ಧನೇಷು ಚ ।
ನಾತಿಪ್ರಸಙ್ಗಃ ಕರ್ತವ್ಯೋ ವಿಪ್ರಯೋಗೋ ಹಿ ತೈರ್ಧ್ರುವಮ್ ॥

ಆದುದರಿಂದ ಪತ್ನೀ–ಪುತ್ರರಲ್ಲಾಗಲೀ, ಮಿತ್ರರಲ್ಲಾಗಲೀ, ಐಶ್ವರ್ಯದಲ್ಲಾಗಲೀ ಹೆಚ್ಚು ಆಸಕ್ತನಾಗಬಾರದು. ಏಕೆಂದರೆ; ಇವೆಲ್ಲವೂ ಕಾಲಾನುಗುಣವಾಗಿ ವಿಯೋಗದಲ್ಲಿಯೇ ಪರ್ಯವಸಾನವನ್ನು ಹೊಂದುತ್ತವೆ. ಇದು ನಿಶ್ಚಯ.

ಶಕ್ತಸ್ತ್ವಮಾತ್ಮನಾತ್ಮಾನಂ ವಿನೇತುಂ ಮನಸಾ ಮನಃ ।
ಲೋಕಾನ್ಸರ್ವಾಂಶ್ಚ ಕಾಕುತ್ಸ್ಥ ಕಿಂ ಪುನಃ ಶೋಕಮಾತ್ಮನಃ ॥13॥

ಕಕುತ್ಸ್ಥಕುಲಭೂಷಣನೇ ! ನೀನು ಆತ್ಮನಿಂದ ಆತ್ಮನನ್ನೂ, ಮನಸ್ಸಿನಿಂದ ಮನಸ್ಸನ್ನೂ ಮತ್ತು ಸಮಸ್ತಲೋಕಗಳನ್ನೂ ನಿಯಂತ್ರಿಸಲು ಸಮರ್ಥನಾಗಿರುವೆ. ಹೀಗಿರುವಾಗ ನಿನ್ನಲ್ಲಿಯೇ ಉಂಟಾಗಿರುವ ಶೋಕವನ್ನು ನಿಯಂತ್ರಿಸುವುದರಲ್ಲಿ ವಿಶೇಷವೇನಿದೆ ?

ನೇದೃಶೇಷು ವಿಮುಹ್ಯನ್ತಿ ತ್ವದ್ವಿಧಾಃ ಪುರುಷರ್ಷಭಾಃ ।
ಅಪವಾದಃ ಸ ಕಿಲ ತೇ ಪುನರೇಷ್ಯತಿ ರಾಘವ ॥14॥

ಇಂತಹ ವಿಷಯಗಳಲ್ಲಿ ಪುರುಷಶ್ರೇಷ್ಠರಾದ ನಿನ್ನಂತಹವರು ವಿಮೋಹಗೊಳ್ಳಬಾರದು. ನೀನು ಹೀಗೆಯೇ ಶೋಕಪಡುತ್ತಿದ್ದರೆ ಮತ್ತೊಂದು ಜನಾಪವಾದವೂ - ನಿನ್ನ ಮೇಲೆ ಬರುತ್ತದೆ. (ಹೆಂಡತಿಯನ್ನು ಕಾಡಿಗಟ್ಟಿ ಶೋಕಮಗ್ನನಾಗಿ ಅರಮನೆಯಲ್ಲಿ ಕುಳಿತಿದ್ದಾನೆಂದು ಜನರು ಪುನಃ ಆಡಿಕೊಳ್ಳುತ್ತಾರೆ.)

ಯಾವ ಜನಾಪವಾದದ ಭಯದಿಂದ ನೀನು ಸೀತೆಯನ್ನು ಪರಿತ್ಯಜಿಸಿದೆಯೋ - ಅಂತಹ ಜನಾಪವಾದವು ಪುನಃ ನಮ್ಮ ಪಟ್ಟಣದಲ್ಲಿ ಮತ್ತೊಂದು ರೀತಿಯಲ್ಲಿ ಹುಟ್ಟಿಕೊಳ್ಳುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ಸ ತ್ವಂ ಪುರುಷಶಾರ್ದೂಲ ಧೈರ್ಯೇಣ ಸುಸಮಾಹಿತಃ ।
ತ್ಯಜೇಮಾಂ ದುರ್ಬಲಾಂ ಬುದ್ಧಿಂ ಸಂತಾಪಂ ಮಾ ಕುರುಷ್ವಹ ॥

ಪುರುಷಶ್ರೇಷ್ಠನೇ ! ಧೈರ್ಯದಿಂದ ಮನಸ್ಸನ್ನು ಏಕಾಗ್ರಗೊಳಿಸು. ದುರ್ಬಲವಾದ ಇಂತಹ ಬುದ್ಧಿಯನ್ನು ಪರಿತ್ಯಜಿಸು. ಇನ್ನು ಮುಂದಾದರೂ ಸಂತಾಪಪಡಬೇಡ.''

ಮಹಾತ್ಮನಾದ ಲಕ್ಷ್ಮಣನು ಹೀಗೆ ಹೇಳಲು ಮಿತ್ರವತ್ಸಲನಾದ ಶ್ರೀರಾಮನು ಅತ್ಯಂತಪ್ರೀತಿಯಿಂದ ಲಕ್ಷ್ಮಣನಿಗೆ ಹೇಳಿದನು :

''ಲಕ್ಷ್ಮಣ ! ನೀನು ಹೇಳಿದ್ದು ಸಾಧುವಾಗಿದೆ. ಇದು ಹೀಗೆಯೇ ಸರಿ. ನಾನು ಹೇಳಿದ ಕಾರ್ಯವನ್ನು ನಡೆಸಿಕೊಟ್ಟಿರುವೆ. ಇದರಿಂದಲೂ ನನಗೆ ಸಂತೋಷವುಂಟಾಗಿದೆ. ನಾನೀಗ ದುಃಖದಿಂದ ವಿಮುಕ್ತನಾಗಿದ್ದೇನೆ. ಸಂತಾಪವನ್ನು ಮನಸ್ಸಿನಿಂದ ತೆಗೆದುಹಾಕಿಬಿಟ್ಟಿದ್ದೇನೆ. ಸುಂದರವಾದ ಮತ್ತು ಸಮೀಚೀನವಾದ ನಿನ್ನ ಮಾತುಗಳಿಂದ ನನ್ನ ಮನಸ್ಸಿಗೆ ಶಾಂತಿಯು ಲಭಿಸಿದೆ.''

52ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **53ನೆಯ ಸರ್ಗ**

ನೃಗಚಕ್ರವರ್ತಿಗೆ ಬಂದ ಶಾಪದ ವೃತ್ತಾಂತವನ್ನು ಶ್ರೀರಾಮನು ಲಕ್ಷ್ಮಣನಿಗೆ ತಿಳಿಸಿದುದು

ಲಕ್ಷ್ಮಣಸ್ಯ ತು ತದ್ವಾಕ್ಯಂ ನಿಶಮ್ಯ ಪರಮಾದ್ಭುತಮ್ ।
ಸುಪ್ರೀತಶ್ಚಾಭವದ್ರಾಮೋ ವಾಕ್ಯಮೇತದುವಾಚ ಹ ॥1॥

ಲಕ್ಷ್ಮಣನು ಹೇಳಿದ ಪರಮಾದ್ಭುತವಾದ ಮಾತನ್ನು ಕೇಳಿ ಶ್ರೀರಾಮನು ಅತ್ಯಂತ ಸುಪ್ರೀತನಾಗಿ ಹೇಳಿದನು :

ದುರ್ಲಭಸ್ತ್ವೀದೃಶೋ ಬನ್ಧುರಸ್ಮಿನ್ಕಾಲೇ ವಿಶೇಷತಃ ।
ಯಾದೃಶಸ್ತ್ವಂ ಮಹಾಬುದ್ಧಿರ್ಮಮ ಸೌಮ್ಯ ಮನೋಽನುಗಃ ॥2॥

''ಸೌಮ್ಯನೇ ! ನೀನು ಮಹಾಬುದ್ಧಿಶಾಲಿಯು. ನನ್ನ ಮನಸ್ಸಿನಲ್ಲಿರುವುದನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ಕೆಲಸಮಾಡುವವರು ಅತಿವಿರಳ. ನಿನ್ನಂತಹ ಸಹೋದರರು ಯಾವ ಕಾಲಕ್ಕೂ ಸಿಕ್ಕಲಾರರು. ಅದರಲ್ಲಿಯೂ ವಿಶೇಷವಾಗಿ ಇಂತಹ ವಿಷಮಪರಿಸ್ಥಿತಿಯಲ್ಲಿ ನಿನ್ನಂತೆ ಆಜ್ಞಾ ಪರಿಪಾಲಕರೂ ಮತ್ತು ಹಿತವಚನವನ್ನು ಹೇಳುವವರೂ ದುರ್ಲಭರೇ ಸರಿ. ಶುಭಲಕ್ಷಣನೇ ! ಲಕ್ಷ್ಮಣ ! ನನ್ನ ಮನಸ್ಸಿನಲ್ಲಿರುವುದನ್ನು ಕೇಳು. ಅನಂತರ ನಾನು ಹೇಳಿದಂತೆ ಮಾಡು. ಕಳೆದ ನಾಲ್ಕು ದಿವಸಗಳಿಂದಲೂ

ನಾನು ಪ್ರಜೆಗಳ ಕಾರ್ಯಗಳ ಕಡೆಗೆ ಗಮನವನ್ನೇ ಕೊಟ್ಟಿಲ್ಲ. ಈ ಚಿಂತೆಯು ನನ್ನ ಮರ್ಮಸ್ಥಾನಗಳನ್ನು ಭೇದಿಸುತ್ತಿದೆ. ನೀನೀಗಲೇ ಪ್ರಜೆಗಳನ್ನೂ-ಪುರೋಹಿತರನ್ನೂ, ಮಂತ್ರಿಗಳನ್ನೂ ಸಭಾಭವನಕ್ಕೆ ಆಹ್ವಾನಿಸು. ಅಂತೆಯೇ ಯಾರಿಗಾದರೂ ನಮ್ಮಿಂದ ಕಾರ್ಯವಾಗಬೇಕಾಗಿದ್ದರೆ ಅಂತಹವರು ಸ್ತ್ರೀಯರೇ ಆಗಿರಲಿ, ಪುರುಷರೇ ಆಗಿರಲಿ - ಅವರಿಗೂ ಕರೆಕಳುಹಿಸು.



ಪೌರಕಾರ್ಯಾಣಿ ಯೋ ರಾಜಾ ನ ಕರೋತಿ ದಿನೇ ದಿನೇ।
ಸಂವೃತೇ ನರಕೇ ಘೋರೇ ಪತಿತೋ ನಾತ್ರ ಸಂಶಯಃ ॥ 6॥

ಯಾವ ರಾಜನು ಅನುದಿನವೂ ಪ್ರಜೆಗಳಿಗೆ ಸಂಬಂಧಿಸಿದ

ಕಾರ್ಯಗಳನ್ನು ಮಾಡುವುದಿಲ್ಲವೋ - ಅಂತಹ ರಾಜನು ವಾಯುವಿನ ಸಂಚಾರವೇ ಇಲ್ಲದ(ಅಂಧಕಾರದಿಂದ ನಿಬಿಡವಾದ) ಘೋರವಾದ ನರಕದಲ್ಲಿ ಬೀಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಹಿಂದೆ ಭೂಮಂಡಲದಲ್ಲಿ ಮಹಾಯಶೋವಂತನಾದ ನೃಗನೆಂಬ ರಾಜನಿದ್ದನೆಂದು ಕೇಳಿದ್ದೇನೆ. ಅವನು ಬ್ರಾಹ್ಮಣಪ್ರಿಯನೂ, ಸತ್ಯಸಂಧನೂ ಮತ್ತು ಶುದ್ಧವಾದ ಆಚಾರ–ವಿಚಾರಗಳಿಂದ ಪರಿಶುದ್ಧನೂ ಆಗಿದ್ದನು. ಆ ರಾಜನೊಮ್ಮೆ ಸುವರ್ಣದ ಆಭರಣಗಳಿಂದ ಸಮಲಂಕೃತವಾಗಿಯೂ, ಕರುಗಳೊಡನೆಯೂ ಇರುವ ಒಂದು ಕೋಟಿ ಗೋವುಗಳನ್ನು ಪುಷ್ಕರತೀರ್ಥದಲ್ಲಿ ಬ್ರಾಹ್ಮಣರಿಗೆ ದಾನಮಾಡಿದನು. ಆ ಸಮಯದಲ್ಲಿ ಅಗ್ನಿಹೋತ್ರಿಯಾದ ಉಂಛವೃತ್ತಿಯ ಬ್ರಾಹ್ಮಣನಿಗೆ ಸೇರಿದ ಕರುವಿನಿಂದ ಕೂಡಿದ್ದ ಒಂದು ಹಸುವೂ ನೃಗನು ದಾನಮಾಡಿದ ಹಸುಗಳೊಡನೆ ಸೇರಿಕೊಂಡಿದ್ದಿತು. ಅದು ಬೇರೆಯವರದೆಂದು ತಿಳಿಯಲಾಗದೇ ನೃಗನು ಆ ಧೇನುವನ್ನು ಕರುವಿನೊಡನೆ ಒಬ್ಬ ಬ್ರಾಹ್ಮಣನಿಗೆ ದಾನವಾಗಿ ಕೊಟ್ಟುಬಿಟ್ಟನು. ಹಸುವನ್ನು ಕಳೆದುಕೊಂಡ ಆ ಬಡಬ್ರಾಹ್ಮಣನು ಹಸಿವಿನ ಬಾಧೆಯಿಂದ ಬಳಲುತ್ತಾ ತಪ್ಪಿಸಿಕೊಂಡು ಹೋಗಿರುವ ತನ್ನ ಹಸುವನ್ನು ಎಲ್ಲ ರಾಷ್ಟ್ರಗಳಲ್ಲಿಯೂ ಹಲವಾರು ವರ್ಷಗಳವರೆಗೆ ಹುಡುಕಾಡಿದನು. ಆದರೆ ಎಲ್ಲಿಯೂ ಅವನ ಹಸುವು ಸಿಗಲಿಲ್ಲ. ಹೀಗೆಯೇ ಹುಡುಕಾಡುತ್ತಿದ್ದಾಗ ಕನಖಲ ಎಂಬ ಗ್ರಾಮಕ್ಕೂ ಹೋದನು. ಅಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ತನ್ನ ಹಸುವಿದ್ದುದನ್ನು ಕಂಡನು. ಆ ಹಸುವು ನೀರೋಗದೃಢಕಾಯವಾಗಿದ್ದಿತು. ಅದರ ಕರುವಾಗಲೇ ದೊಡ್ಡದಾಗಿದ್ದಿತು. ಅಗ್ನಿಹೋತ್ರೀ ಬಡಬ್ರಾಹ್ಮಣನು ತಾನು ಹಸುವಿಗಿಟ್ಟಿದ್ದ ಹೆಸರು ಹಿಡಿದು **ಆಗಚ್ಛ ಶಬಲೇ !** 'ಶಬಲೇ ! ಬಾ' ಎಂದು ಕರೆದನು. ಆ ಧ್ವನಿಯನ್ನು ಹಸುವು ಕೇಳಿಸಿಕೊಂಡಿತು. ಹಸಿವಿನಿಂದ ಬಳಲಿದ್ದ ಆ ಬ್ರಾಹ್ಮಣನ ಧ್ವನಿಯನ್ನು ಕೇಳುತ್ತಲೇ ಹಸುವಿಗೆ ಆ ಧ್ವನಿಯು ಯಾರದೆಂಬುದರ ಅರಿವಾಯಿತು. ಒಡನೆಯೇ ಆ ಹಸುವು ತನ್ನ ಆಶ್ರಮದ ಕಡೆಗೆ ಹೋಗುತ್ತಿದ್ದ, ಯಜ್ಞೇಶ್ವರನಂತೆ ಅಮಿತವಾದ ತೇಜಸ್ಸಿನಿಂದ ಕೂಡಿದ್ದ ಬ್ರಾಹ್ಮಣನನ್ನು ಹಿಂಬಾಲಿಸಿ ಹೊರಟಿತು. ರಾಜನಿಂದ ದಾನವಾಗಿ ಪಡೆದು ಆ ಹಸುವನ್ನು ಅಲ್ಲಿಯವರೆಗೂ ರಕ್ಷಿಸುತ್ತಿದ್ದ ಆ

ಬ್ರಾಹ್ಮಣನೂ ಹಸುವಿನ ಹಿಂದೆಯೇ ಹೋದನು. ಬಳಿಕ ಅಗ್ನಿಹೋತ್ರೀ ಬ್ರಾಹ್ಮಣನಿಗೆ ತ್ವರೆಯಿಂದ ಹೇಳಿದನು :

''ಭೋ ಬ್ರಾಹ್ಮಣ ! ಇದು ನನ್ನ ಹಸು. ರಾಜಶ್ರೇಷ್ಠನಾದ ನೃಗನು ಈ ಹಸುವನ್ನು ನನಗೆ ದಾನವಾಗಿ ಕೊಟ್ಟಿದ್ದಾನೆ.''

ಅವರಿಬ್ಬರೂ ಮಹಾವಿದ್ವಾಂಸರಾಗಿದ್ದರು. ಇಬ್ಬರಿಗೂ ವಾದ–ವಿವಾದಗಳು ಬಹಳ ಹೊತ್ತಿನವರೆಗೂ ನಡೆದುವು. ಯಾವುದೇ ನಿರ್ಣಯಕ್ಕೂ ಬರಲು ಸಾಧ್ಯವಾಗಲಿಲ್ಲ. ಅನಂತರ ಇಬ್ಬರೂ ವಾದ–ವಿವಾದಗಳನ್ನು ಮಾಡುತ್ತಲೇ ದಾನವನ್ನು ಕೊಟ್ಟ ನೃಗರಾಜನ ಬಳಿಗೆ ಹೋದರು.

ಅವರಿಬ್ಬರೂ ರಾಜಭವನದ ಮಹಾದ್ವಾರದಲ್ಲಿ ಹಲವಾರು ಹಗಲು–ರಾತ್ರಿಗಳನ್ನು ಕಳೆದರೂ ಅವರಿಗೆ ರಾಜನ ದರ್ಶನವೇ ಆಗದಿದ್ದ ಕಾರಣ ನ್ಯಾಯವು ಸಿಗಲಿಲ್ಲ. ಇಬ್ಬರೂ ಕೋಪಗೊಂಡರು. ಮಹಾತ್ಮರಾಗಿದ್ದ ಬಹಳವಾಗಿ ಆಯಾಸಗೊಂಡಿದ್ದ, ಅದರಿಂದಲೇ ಪರಮಕ್ರುದ್ಧರಾಗಿದ್ದ ಬ್ರಾಹ್ಮಣಶ್ರೇಷ್ಠರಿಬ್ಬರೂ ರಾಜನಿಗೆ ಶಾಪವನ್ನು ಕೊಡುತ್ತಾ ಘೋರವಾದ ಈ ಮಾತುಗಳನ್ನು ಹೇಳಿದರು:

ಅರ್ಥಿನಾಂ ಕಾರ್ಯಸಿದ್ಧ್ಯರ್ಥಂ ಯಸ್ಮಾತ್ತ್ವಂ ನೈಷಿ ದರ್ಶನಮ್ ।
ಅದೃಶ್ಯಃ ಸರ್ವಭೂತಾನಾಂ ಕೃಕಲಾಸೋ ಭವಿಷ್ಯಸಿ ॥18॥
ಬಹುವರ್ಷಸಹಸ್ರಾಣಿ ಬಹುವರ್ಷಶತಾನಿ ಚ ।
ಶ್ವಭ್ರೇ ತ್ವಂ ಕೃಕಲೀಭೂತೋ ದೀರ್ಘಕಾಲಂ ನಿವತ್ಸ್ಯಸಿ ॥19॥

''ಮಹಾರಾಜ! ಕಾರ್ಯಸಿದ್ಧಿಗಾಗಿ ನ್ಯಾಯಾರ್ಥಿಗಳಾಗಿ ನಾವಿಬ್ಬರೂ ನಿನ್ನ ಬಳಿಗೆ ಬಂದೆವು. ಆದರೆ ಬಹಳ ದಿವಸಗಳು ಕಾದುಕುಳಿತರೂ ನೀನು ನಮಗೆ ದರ್ಶನವನ್ನೇ ಕೊಡಲಿಲ್ಲ. ಆದುದರಿಂದ ನೀನು ಸಕಲಪ್ರಾಣಿಗಳಿಗೂ ಕಾಣಿಸದಂತೆ ಅವಿತುಕೊಳ್ಳುವ ಸ್ವಭಾವವುಳ್ಳ ಗೋಸುಂಬೆಯಾಗುವೆ. ಆ ಪ್ರಾಣಿಯ ಜನ್ಮವನ್ನು ತಾಳಿ ಹಲವಾರು ಸಾವಿರ ವರ್ಷಗಳವರೆಗೂ ನೀನು ಬಿಲದಲ್ಲಿಯೇ ಜೀವಿಸಬೇಕಾಗುವುದು.

ಉತ್ಪತ್ಸ್ಯತೇ ಹಿ ಲೋಕೇಽಸ್ಮಿನ್ಯದೂನಾಂ ಕೀರ್ತಿವರ್ಧನಃ ॥20॥

ವಾಸುದೇವ ಇತಿ ಖ್ಯಾತೋ ವಿಷ್ಣುಃ ಪುರುಷವಿಗ್ರಹಃ ।
ಸ ತೇ ಮೋಕ್ಷಯಿತಾ ಶಾಪಾದ್ರಾಜಂಸ್ತಸ್ಮಾದ್ಭವಿಷ್ಯಸಿ ॥21॥
ಕೃತಾ ಚ ತೇನ ಕಾಲೇನ ನಿಷ್ಕೃತಿಸ್ತೇ ಭವಿಷ್ಯತಿ ।
ಭಾರಾವತರಣಾರ್ಥಂ ಹಿ ನರನಾರಾಯಣಾವುಭೌ ।
ಉತ್ಪತ್ಸ್ಯೇತೇ ಮಹಾವೀರ್ಯೌ ಕಲೌ ಯುಗ ಉಪಸ್ಥಿತೇ ॥22॥

ಮುಂದೆ ಯದುಕುಲದ ಕೀರ್ತಿಯನ್ನು ಹೆಚ್ಚಿಸುವ, ವಾಸುದೇವನೆಂಬ ಹೆಸರಿನಿಂದ ಪ್ರಸಿದ್ಧನಾಗುವ ವಿಷ್ಣುವು ಪುರುಷವಿಗ್ರಹವಾಗಿ ಅವತರಿಸುವನು. ಅವನು ನಿನ್ನನ್ನು ಈ ಶಾಪದಿಂದ ವಿಮೋಚನೆಗೊಳಿಸುತ್ತಾನೆ. ಅವನಿಂದ ನಮ್ಮ ಈ ಶಾಪವು ಪರಿಹಾರವಾಗುತ್ತದೆ. ಈ ಸಮಯದಲ್ಲಿ ನೀನು ನಮ್ಮ ಶಾಪದ ಪರಿಣಾಮವಾಗಿ ಗೋಸುಂಬೆಯ ರೂಪದಲ್ಲಿ ಹುಟ್ಟುವೆ. ಮುಂದೆ ಕೃಷ್ಣಾವತಾರದ ಸಮಯದಲ್ಲಿ ನಿನ್ನ ಉದ್ಧಾರವಾಗುತ್ತದೆ. ಕಲಿಯುಗವು ಸನ್ನಿಹಿತವಾದಾಗ ಭೂಭಾರಹರಣಾರ್ಥವಾಗಿ ನರ –ನಾರಾಯಣರಿಬ್ಬರೂ ಅರ್ಜುನ –ಕೃಷ್ಣರಾಗಿ ಭೂಮಿಯಲ್ಲಿ ಅವತರಿಸುತ್ತಾರೆ.''

ಹೀಗೆ ಆ ಬ್ರಾಹ್ಮಣರಿಬ್ಬರೂ ನೃಗರಾಜನಿಗೆ ಶಾಪವನ್ನಿತ್ತು ದುರ್ಬಲವೂ ಮುದಿಯೂ ಆಗಿದ್ದ ಆ ಹಸುವನ್ನು ಬೇರೊಬ್ಬ ಬ್ರಾಹ್ಮಣನಿಗೆ ಕೊಟ್ಟು ನಿಶ್ಚಿಂತರಾದರು.

ಲಕ್ಷ್ಮಣ ! ಹೀಗೆ ಆ ನೃಗರಾಜನು ಬ್ರಾಹ್ಮಣರು ಕೊಟ್ಟ ಸುದಾರುಣ ವಾದ ಶಾಪದ ಫಲವನ್ನು ಈಗಲೂ ಅನುಭವಿಸುತ್ತಲೇ ಇದ್ದಾನೆ.

ಕಾರ್ಯಾರ್ಥಿನಾಂ ವಿಮರ್ದೋ ಹಿ ರಾಜ್ಞಾಂ ದೋಷಾಯ ಕಲ್ಪತೇ

ಕಾರ್ಯಸಿದ್ಧಿಯನ್ನಪೇಕ್ಷಿಸಿ ಬರುವ ಪ್ರಜೆಗಳನ್ನು ಉಪೇಕ್ಷಿಸಿ ಘಾಸಿ ಪಡಿಸುವುದು ರಾಜನಿಗೆ ದೋಷವಾಗಿ ಪರಿಣಮಿಸುತ್ತದೆ.

ಆದುದರಿಂದ ಕಾರ್ಯಾರ್ಥಿಗಳಾದ ಜನರು ಶೀಘ್ರವಾಗಿ ನನ್ನ ಬಳಿಗೆ ಬರಲಿ. ಪ್ರಜಾಪಾಲನರೂಪವಾದ ಪುಣ್ಯಕರ್ಮದ ಫಲವನ್ನು ರಾಜನು ಪಡೆಯದಿರುವನೇ ? ಪಡೆದೇ ಪಡೆಯುತ್ತಾನೆ. ಆದುದರಿಂದ ನೀನೀಗಲೇ ರಾಜದ್ವಾರದ ಬಳಿಗೆ ಹೋಗಿ ಕಾರ್ಯಾರ್ಥಿಗಳಾಗಿ ಬರುವವರನ್ನು ಪ್ರತೀಕ್ಷಿಸುತ್ತಿರು .''

53ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 54ನೆಯ ಸರ್ಗ

ನೃಗನು (ಮಗನಿಗೆ ರಾಜ್ಯಾಭಿಷೇಕಮಾಡಿ) ಸುಂದರವಾದ ಹಳ್ಳವನ್ನು ನಿರ್ಮಿಸಿ ಅದರಲ್ಲಿ ಶಾಪವನ್ನು ಅನುಭವಿಸಿದುದು

ರಾಮಸ್ಯ ಭಾಷಿತಂ ಶ್ರುತ್ವಾ ಲಕ್ಷ್ಮಣಃ ಪರಮಾರ್ಥವಿತ್ ।
ಉವಾಚ ಪ್ರಾಞ್ಜಲಿರ್ವಾಕ್ಯಂ ರಾಘವಂ ದೀಪ್ತತೇಜಸಮ್ ॥1॥

ಪರಮಾರ್ಥವನ್ನು ತಿಳಿದಿದ್ದ ಲಕ್ಷ್ಮಣನು ಶ್ರೀರಾಮನ ಮಾತನ್ನು ಕೇಳಿ ಕೈಮುಗಿದುಕೊಂಡು ಮಹಾತೇಜಸ್ವಿಯಾದ ಶ್ರೀರಾಮನನ್ನು ಪ್ರಶ್ನಿಸಿದನು :

ಅಲ್ಪಾಪರಾಧೇ ಕಾಕುತ್ಸ್ಥ ದ್ವಿಜಾಭ್ಯಾಂ ಶಾಪ ಈದೃಶಃ ।
ಮಹಾನ್ನೃಗಸ್ಯ ರಾಜರ್ಷೇರ್ಯಮದಣ್ಡ ಇವಾಪರಃ ॥2॥

''ರಾಘವ ! ಆ ಇಬ್ಬರು ಬ್ರಾಹ್ಮಣರೂ ಸ್ವಲ್ಪವೇ ಅಪರಾಧಕ್ಕಾಗಿ ರಾಜರ್ಷಿಯಾದ ನೃಗನಿಗೆ ಎರಡನೆಯ ಯಮದಂಡದಂತೆಯೇ ಇರುವ ಇಂತಹ ಮಹಾಶಾಪವನ್ನು ಕೊಟ್ಟರಲ್ಲವೇ !

ತನ್ನ ಆತ್ಮವು ಶಾಪವೆಂಬ ಪಾಪದಿಂದ ಕೂಡಿರುವುದನ್ನು ಕೇಳಿ ಕ್ರುದ್ಧರಾಗಿದ್ದ ಆ ಬ್ರಾಹ್ಮಣರಿಗೆ ನೃಗನೇನು ಹೇಳಿದನು ?''

ಲಕ್ಷ್ಮಣನು ಹೀಗೆ ಪ್ರಶ್ನಿಸಲು ಶ್ರೀರಾಮನು ಕಥೆಯನ್ನು ಮುಂದು ವರಿಸುತ್ತಾ ಹೇಳಿದನು :''ಲಕ್ಷ್ಮಣ ! ಶಾಪಗ್ರಸ್ತನಾದ ಆ ನೃಗನ ಮುಂದಿನ ವಿಷಯವನ್ನು ಹೇಳುವೆನು ; ಕೇಳು :

ತನಗೆ ಶಾಪವನ್ನಿತ್ತು ಆ ಇಬ್ಬರು ಬ್ರಾಹ್ಮಣರೂ ಹೊರಟು ಹೋದರೆಂಬುದನ್ನು ಕೇಳಿ ರಾಜರ್ಷಿಯಾದ ನೃಗನು ಬಹುದುಃಖಿತನಾಗಿ ಮಂತ್ರಿಗಳನ್ನೂ, ಪಟ್ಟಣಿಗರನ್ನೂ, ಪುರೋಹಿತರನ್ನೂ, ಸಮಸ್ತಪ್ರಜೆಗಳನ್ನೂ ಕರೆಸಿ ಹೇಳಿದನು :

''ಸಭ್ಯರೇ ! ನೀವೆಲ್ಲರೂ ಸಾವಧಾನದಿಂದ ನನ್ನ ಮಾತನ್ನು ಕೇಳಿರಿ. ಮಂಗಳಸ್ವರೂಪರಾದ ಅನಿಂದ್ಯರಾದ ನಾರದ–ಪರ್ವತರು ನನ್ನ ಬಳಿಗೆ ಬಂದಿದ್ದರು. ಬ್ರಾಹ್ಮಣರು ಕೊಟ್ಟ ಭಯಂಕರವಾದ ಶಾಪದ ಸಮಾಚಾರ

ವನ್ನು ನನಗೆ ಹೇಳಿ ವಾಯುವಿನಂತೆ ಶೀಘ್ರಗತಿಯಿಂದ ಬ್ರಹ್ಮಲೋಕಕ್ಕೆ ಹೊರಟುಹೋದರು. ನಾನಾದರೋ ಆ ಬ್ರಾಹ್ಮಣರ ಶಾಪವನ್ನು ಉಪ ಭೋಗಿಸಲು ಸಿದ್ಧನಿದ್ದೇನೆ. ನನ್ನ ಕುಮಾರನಾದ ವಸುವಿಗೆ ರಾಜ್ಯಾಭಿಷೇಕ ವಾಗಲಿ. ಶಿಲ್ಪಿಗಳು ಮುಂದೆ ನನ್ನ ವಾಸಕ್ಕಾಗಿ ಸುಖಸ್ಪರ್ಶವಿರುವ ಒಂದು ಹಳ್ಳವನ್ನು ನಿರ್ಮಿಸಲಿ. ಅದರಲ್ಲಿಯೇ ನಾನಿದ್ದುಕೊಂಡು ಬ್ರಾಹ್ಮಣರಿತ್ತ ಶಾಪವನ್ನು ಕಳೆದುಕೊಳ್ಳುತ್ತೇನೆ. ಮಳೆಗಾಲದ ತೊಂದರೆಯನ್ನು ತಪ್ಪಿಸಲು ಒಂದು ಹಳ್ಳವನ್ನೂ, ಚಳಿಗಾಲದ ತೊಂದರೆಯನ್ನು ತಪ್ಪಿಸಲು ಮತ್ತೊಂದು ಬಿಲವನ್ನೂ,ಬೇಸಿಗೆಯ ಬಿಸಿಲನ್ನು ತಪ್ಪಿಸಲು ಮೂರನೆಯ ಹಳ್ಳವನ್ನೂ ಶಿಲ್ಪಿಗಳು ನನಗಾಗಿ ರಚಿಸಲಿ. ಫಲಭರಿತವಾದ ವೃಕ್ಷಗಳೂ, ಪುಷ್ಪಭರಿತವಾದ ಬಳ್ಳಿಗಳೂ ಆ ಹಳ್ಳಗಳ ಸುತ್ತಲೂ ಇರಲಿ. ನಾನು ವಾಸಮಾಡಲಿರುವ ಹಳ್ಳಗಳು ಸರ್ವ ಪ್ರಕಾರದಿಂದಲೂ ರಮಣೀಯವಾಗಿರಬೇಕು. ಶಾಪವು ಕಳೆದು ಹೋಗುವವರೆಗೂ ನಾನು ಆ ಹಳ್ಳಗಳಲ್ಲಿಸುಖದಿಂದ ವಾಸಮಾಡಿಕೊಂಡಿರು ವೆನು. ಆ ಹಳ್ಳಕ್ಕೆ ಒಂದೂವರೆ ಯೋಜನದಷ್ಟು ಸುತ್ತಳತೆಯ ಪ್ರದೇಶ ದಲ್ಲಿ ಸುಗಂಧಯುಕ್ತವಾದ ಪುಷ್ಪಗಳನ್ನು ಅನುದಿನವೂ ಹರಡಿರಲಿ.''

ಹೀಗೆ ನೃಗರಾಜನು ಮಂತ್ರಿಗಳಿಗೆ ಆಜ್ಞೆಮಾಡಿ ಮಗನಾದ ವಸು ಕುಮಾರನಿಗೆ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿಸಿದನಂತರ ಮಗನಿಗೆ ಹೇಳಿದನು :

ಧರ್ಮನಿತ್ಯಃ ಪ್ರಜಾಃ ಪುತ್ರ ಕ್ಷತ್ರಧರ್ಮೇಣ ಪಾಲಯ ॥13॥
ಪ್ರತ್ಯಕ್ಷಂ ತೇ ತಥಾ ಶಾಪೋ ದ್ವಿಜಾಭ್ಯಾಂ ಮಯಿ ಪಾತಿತಃ ।
ನರಶ್ರೇಷ್ಠ ಸರೋಷಾಭ್ಯಾಮಪರಾಧೇಽಪಿ ತಾದೃಶೇ ॥14॥

''ಮಗು ! ನೀನು ಅನುದಿನವೂ ಧರ್ಮಪರಾಯಣನಾಗಿರು. ಕ್ಷತ್ರಿಯಧರ್ಮಾನುಸಾರವಾಗಿ ಪ್ರಜೆಗಳನ್ನು ಪರಿಪಾಲಿಸು. ಆ ಇಬ್ಬರು ಬ್ರಾಹ್ಮಣರು ನನಗೆ ಹೇಗೆ ಶಾಪವಿತ್ತರೆಂಬುದು ನಿನಗೆ ಪ್ರತ್ಯಕ್ಷವಾಗಿದೆ. ನಾನು ಮಾಡಿದ ಅಲ್ಪವಾದ ಅಪರಾಧದಿಂದಲೇ ಅವರು ಕೋಪಗೊಂಡು ನನಗೆ ಶಾಪವನ್ನಿತ್ತರು.

ಮಾ ಕೃಥಾಸ್ತ್ವನುಸಂತಾಪಂ ಮತ್ಕೃತೇ ಹಿ ನರರ್ಷಭ ।
ಕೃತಾನ್ತಃ ಕುಶಲಃ ಪುತ್ರ ಯೇನಾಸ್ಮಿ ವ್ಯಸನೀಕೃತಃ ॥15॥

ಪುರುಷಶ್ರೇಷ್ಠನೇ! ನೀನು ನನ್ನಸಲುವಾಗಿ ಸಂತಾಪಪಡುವ ಕಾರಣವಿಲ್ಲ. ನಾನು ಯಾವುದರಿಂದ ಇಂತಹ ಸಂಕಟಕ್ಕೆ ಒಳಗಾದೆನೋ– ಆ ಪ್ರಾಚೀನಕರ್ಮವೇ ಸುಖ–ದುಃಖಗಳನ್ನು ತಂದೊಡ್ಡುವುದರಲ್ಲಿ ಬಹಳ ಸಮರ್ಥವಾದುದು.

ಪ್ರಾಪ್ತವ್ಯಾನ್ಯೇವ ಪ್ರಾಪ್ನೋತಿ ಗನ್ತವ್ಯಾನ್ಯೇವ ಗಚ್ಛತಿ ।
ಲಬ್ಧವ್ಯಾನ್ಯೇವ ಲಭತೇ ದುಃಖಾನಿ ಚ ಸುಖಾನಿ ಚ ।
ಪೂರ್ವೇ ಜಾತ್ಯನ್ತರೇ ವತ್ಸ ಮಾ ವಿಷಾದಂ ಕುರುಷ್ವ ಹ ॥ 17॥

ಹಿಂದಿನ ಜನ್ಮದಲ್ಲಿ ಮಾಡಿದ ದುಷ್ಕರ್ಮ – ಸತ್ಕರ್ಮಗಳಿಗೆ ಅನುಸಾರವಾಗಿ ಮನುಷ್ಯನು ಯಾವ ವಸ್ತುಗಳನ್ನು ಪಡೆಯಲು ಅರ್ಹನೋ – ಅವೇ ವಸ್ತುಗಳನ್ನು ಪಡೆದುಕೊಳ್ಳುತ್ತಾನೆ. ಎಲ್ಲಿಗೆ ಹೋಗಬೇಕಾಗಿರುವುದೋ ಅಲ್ಲಿಗೇ ಹೋಗುತ್ತಾನೆ. ಕರ್ಮಾನುಸಾರವಾಗಿ ಯಾವುದು ಲಭಿಸಬೇಕೋ ಅದೇ ಲಭಿಸುತ್ತದೆ. ದುಃಖ–ಸುಖಗಳೆರಡೂ ಅವನವನ ಕರ್ಮಾನುಸಾರವಾಗಿ ಮನುಷ್ಯನಿಗೆ ಲಭಿಸುತ್ತವೆ. ಆದುದರಿಂದ ನೀನು ನನ್ನ ವಿಷಯವಾಗಿ ವಿಷಾದಿಸಬೇಡ.''

ಲಕ್ಷ್ಮಣ! ನೃಗನು ಮಗನಿಗೆ ಹೀಗೆ ಉಪದೇಶಿಸಿ ಬ್ರಾಹ್ಮಣರ ಶಾಪದ ಪ್ರಭಾವದಿಂದ ಗೋಸುಂಬೆಯಾಗಿ ಪರಿವರ್ತನೆಯನ್ನು ಹೊಂದಿ ಶಿಲ್ಪಿಗಳು ನಿರ್ಮಿಸಿದ ಹಳ್ಳದಲ್ಲಿ ಸೇರಿಕೊಂಡನು.

ಹೀಗೆ ರಾಜರ್ಷಿಯಾದ ನೃಗನು ರತ್ನಭೂಷಿತವಾಗಿದ್ದ ಹಳ್ಳವನ್ನು ಪ್ರವೇಶಿಸುತ್ತಿದ್ದಂತೆಯೇ ಕುಪಿತರಾಗಿದ್ದ ಇಬ್ಬರು ಬ್ರಾಹ್ಮಣರು ಕೊಟ್ಟ ಶಾಪವನ್ನು ಅನುಭವಿಸಲು ಆರಂಭಿಸಿದನು.

54ನೆಯ ಸರ್ಗವು ಮುಗಿಯಿತು.

ಶ್ರೀರಾಮನು ನಿಮಿ ಮತ್ತು ವಸಿಷ್ಠರ ಶಾಪವೃತ್ತಾಂತವನ್ನು ಲಕ್ಷ್ಮಣನಿಗೆ ತಿಳಿಸಿದುದು

ಶ್ರೀರಾಮನಿಗೆ ಲಕ್ಷ್ಮಣನಿಗೆ ಹೇಳುತ್ತಾನೆ :

ಏಷ ತೇ ನೃಗಶಾಪಸ್ಯ ವಿಸ್ತರೋಽಭಿಹಿತೋ ಮಯಾ ।
ಯದ್ಯಸ್ತಿ ಶ್ರವಣೇ ಶ್ರದ್ಧಾ ಶೃಣುಷ್ವೇಹಾಪರಾಂ ಕಥಾಮ್ ॥1॥

''ಲಕ್ಷ್ಮಣ! ನಿನಗೆ ನೃಗರಾಜನ ಶಾಪ ಪ್ರಸಂಗವನ್ನು ವಿಸ್ತಾರವಾಗಿ ಹೇಳಿದೆನು. ಕೇಳುವುದರಲ್ಲಿ ನಿನಗೆ ಶ್ರದ್ಧೆಯಿರುವುದಾದರೆ ಇದರಂತೆಯೇ ಮತ್ತೊಂದು ಕಥೆಯನ್ನೂ ಕೇಳು.''

ಶ್ರೀರಾಮನು ಹೀಗೆ ಹೇಳಲು ಲಕ್ಷ್ಮಣನು ಹೇಳಿದನು :

ತೃಪ್ತಿರಾಶ್ಚರ್ಯಭೂತಾನಾಂ ಕಥಾನಾಂ ನಾಸ್ತಿ ಮೇ ನೃಪ ॥2॥

''ಆಶ್ಚರ್ಯಕರವಾದ ಕಥೆಗಳನ್ನು ಕೇಳುವುದರಲ್ಲಿ ನನಗೆ ತೃಪ್ತಿಯೇ ಇಲ್ಲ. ಇನ್ನೂ ಕೇಳುತ್ತಲೇ ಇರಬೇಕು – ಎನ್ನಿಸುತ್ತದೆ.''

ಲಕ್ಷ್ಮಣನು ಹೀಗೆ ಹೇಳಲು ಶ್ರೀರಾಮನು ಪರಮಧರ್ಮಯುಕ್ತವಾದ ಮತ್ತೊಂದು ಕಥೆಯನ್ನು ಹೇಳಲು ಉಪಕ್ರಮಿಸಿದನು :

''ಲಕ್ಷ್ಮಣ! ಮಹಾತ್ಮರಾದ ಇಕ್ಷ್ವಾಕುಗಳ ವಂಶದಲ್ಲಿ ನಿಮಿ ಎಂಬ ಹೆಸರಿನ ಒಬ್ಬ ರಾಜನಿದ್ದನು. ಅವನು ಇಕ್ಷ್ವಾಕುವಿಗೆ ಹನ್ನೆರಡನೆಯ ಮಗನಾಗಿದ್ದನು. ಪರಾಕ್ರಮದಲ್ಲಿಯೂ ಮತ್ತು ಧರ್ಮದಲ್ಲಿಯೂ ಅವನು ಸ್ಥಿರಚಿತ್ತನಾಗಿದ್ದನು. ವೀರ್ಯಸಂಪನ್ನನಾಗಿದ್ದ ಆ ರಾಜನು ಗೌತಮರ ಆಶ್ರಮದ ಸಮೀಪದಲ್ಲಿ ದೇವತೆಗಳ ಪಟ್ಟಣವಾದ ಅಮರಾವತಿಯಂತಹ ಪಟ್ಟಣವೊಂದನ್ನು ನಿರ್ಮಿಸಿದನು. ಮಹಾಯಶೋವಂತನಾದ ನಿಮಿಯು ತಾನು ವಾಸಮಾಡಲು ನಿರ್ಮಿಸಿದ್ದ ಸುಂದರವಾದ ಆ ಪಟ್ಟಣಕ್ಕೆ 'ವೈಜಯಂತ' ಎಂಬ ಹೆಸರನ್ನಿಟ್ಟು ಅಲ್ಲಿಯೇ ವಾಸಮಾಡತೊಡಗಿದನು. ಹೀಗೆ ಆ ಮಹಾನಗರದಲ್ಲಿ ವಾಸವಾಗಿರಲು –ನಿಮಿಗೆ ದೀರ್ಘಕಾಲದ ಯಜ್ಞವೊಂದನ್ನು

ಮಾಡಿ ತಂದೆಯ ಮನಸ್ಸನ್ನು ಆಹ್ಲಾದಗೊಳಿಸುವ ಅಪೇಕ್ಷೆಯಾಯಿತು. ಬಳಿಕ ಇಕ್ಷ್ವಾಕುನಂದನನಾದ, ರಾಜರ್ಷಿಯಾದ ನಿಮಿಯು ತನ್ನ ತಂದೆಯೂ, ಮನುವಿನ ಮಗನೂ ಆದ ಇಕ್ಷ್ವಾಕುವಿನ ಅನುಜ್ಞೆಯನ್ನು ಪಡೆದು ಮೊದಲು ಬ್ರಹ್ಮರ್ಷಿಗಳಲ್ಲಿ ಶ್ರೇಷ್ಠರಾದ ವಸಿಷ್ಠರಿಗೆ ಯಜ್ಞಕ್ಕಾಗಿ ವರಣವನ್ನಿತ್ತನು. ಅನಂತರ ಅತ್ರಿ, ಅಂಗಿರಸ, ತಪೋನಿಧಿಯಾದ ಭೃಗು - ಇವರನ್ನೂ ಯಜ್ಞಕ್ಕೆ ಆಮಂತ್ರಿಸಿದನು.

ವಸಿಷ್ಠರನ್ನು ಆಮಂತ್ರಿಸಲು ಹೋದಾಗ ಅವರು ರಾಜರ್ಷಿಶ್ರೇಷ್ಠನಾದ ನಿಮಿಗೆ ಹೇಳಿದರು :

ವೃತೋಽಹಂ ಪೂರ್ವಮಿನ್ದ್ರೇಣ ಅನ್ತರಂ ಪ್ರತಿಪಾಲಯ ॥10॥

'' ಈ ಮೊದಲೇ ಇಂದ್ರನು ನನ್ನನ್ನು ಯಜ್ಞದ ಸಲುವಾಗಿ ಆಹ್ವಾನಿಸಿದ್ದಾನೆ. ಅವನ ಯಜ್ಞವನ್ನು ಮುಗಿಸಿ ಬರುವವರೆಗೂ ನನಗಾಗಿ ನೀನು ಪ್ರತೀಕ್ಷಿಸುತ್ತಿರು.''

ಹೀಗೆ ಹೇಳಿ ವಸಿಷ್ಠರು ಹೊರಟುಹೋಗಲು -ಮಹಾಬ್ರಾಹ್ಮಣರಾದ ಗೌತಮರು ಬಂದು ನಿಮಿಯ ಯಜ್ಞವನ್ನು ಪೂರೈಸಿಕೊಡಲು ಒಪ್ಪಿದರು. ಅತ್ತ ವಸಿಷ್ಠರೂ ಇಂದ್ರನ ಯಜ್ಞವನ್ನು ಪೂರೈಸಿಕೊಡಲು ಪ್ರಾರಂಭಿಸಿದರು. ನಿಮಿರಾಜನು ಅತ್ರಿ, ಅಂಗಿರಸ ಮತ್ತು ಭೃಗುಗಳನ್ನು ಆಹ್ವಾನಿಸಿ ತನ್ನ ಪಟ್ಟಣದ ಸಮೀಪದಲ್ಲಿದ್ದ ಹಿಮಾಲಯದ ಪ್ರಸ್ಥಭೂಮಿಯಲ್ಲಿ ಯಜ್ಞವನ್ನು ಪ್ರಾರಂಭಿಸಿದನು. ನಿಮಿಯು ಐದು ಸಾವಿರ ವರ್ಷಗಳವರೆಗೆ ಯಜ್ಞದಲ್ಲಿ ದೀಕ್ಷಿತನಾಗಿದ್ದನು. ಅತ್ತಲಾಗಿ ಇಂದ್ರನ ಯಜ್ಞವನ್ನು ಪೂರೈಸಿದ ವಸಿಷ್ಠರು ಯಜ್ಞದಲ್ಲಿ ಹೋತೃವಿಗೆ ಸಂಬಂಧಿಸಿದ ಕರ್ಮಗಳನ್ನು ನಿರ್ವಹಿಸುವುದಕ್ಕಾಗಿ ನಿಮಿಚಕ್ರವರ್ತಿಯ ಬಳಿಗೆ ಬಂದರು. ತಾವು ಬರುವುದರೊಳಗಾಗಿ ಮಹರ್ಷಿಗಳಾದ ಗೌತಮರು ಆ ಕರ್ಮವನ್ನು ಮುಗಿಸಿರುವ ವಿಷಯವು ವಸಿಷ್ಠರಿಗೆ ತಿಳಿಯಿತು. ಅದರಿಂದ ಬ್ರಹ್ಮನ ಮಕ್ಕಳಾದ ವಸಿಷ್ಠರು ಪರಮಕ್ರುದ್ಧರಾದರು. ಆದರೂ ರಾಜನನ್ನು ನೋಡುವ ಇಚ್ಛೆಯಿಂದ ಮುಹೂರ್ತಕಾಲದವರೆಗೆ ಅಲ್ಲಿಯೇ ಕುಳಿತಿದ್ದರು. ಆದರೆ ಆ ಸಮಯದಲ್ಲಿ ರಾಜರ್ಷಿಯಾದ ನಿಮಿಯು ಗಾಢವಾದ ನಿದ್ರೆಯಲ್ಲಿದ್ದನು. ಎಷ್ಟು ಹೊತ್ತಾ

ದರೂ ರಾಜನು ವಸಿಷ್ಠರ ಬಳಿಗೆ ಬರಲೇ ಇಲ್ಲ. ವಸಿಷ್ಠರ ಕೋಪವು ಮತ್ತಷ್ಟು ಉಲ್ಬಣಿಸಿತು. ರಾಜನನ್ನು ಉದ್ದೇಶಿಸಿ ಹೇಳತೊಡಗಿದರು :

ಯಸ್ಮಾತ್ತ್ವಮನ್ಯಂ ವೃತವಾನ್ಮಾಮವಜ್ಞಾಯ ಪಾರ್ಥಿವ ।
ಚೇತನೇನ ವಿನಾಭೂತೋ ದೇಹಸ್ತೇ ಪಾರ್ಥಿವೈಷ್ಯತಿ ॥17॥

''ಎಲೈ ರಾಜನೇ ! ಮೊದಲು ನನಗೆ ವರಣವನ್ನಿತ್ತು ಬಳಿಕ ನೀನು ಮತ್ತೊಬ್ಬರನ್ನು ಆಹ್ವಾನಿಸಿ ನನ್ನನ್ನು ಅವಮಾನಿಸಿದೆಯಾದ ಕಾರಣ ನಿನ್ನ ದೇಹವು ಚೇತನದಿಂದ ರಹಿತವಾಗುತ್ತದೆ. (ನೀನು ಸತ್ತುಹೋಗುವೆ.)''

ಸ್ವಲ್ಪ ಹೊತ್ತಿನನಂತರ ಎಚ್ಚರಗೊಂಡ ರಾಜನು ವಸಿಷ್ಠರಿತ್ತ ಶಾಪದ ಸಮಾಚಾರವನ್ನು ಕೇಳಿ ಕ್ರೋಧಾಭಿಭೂತನಾಗಿ ಬ್ರಹ್ಮಯೋನಿಗಳಾದ ವಸಿಷ್ಠರಿಗೆ ಹೇಳಿದನು :

ಅಜಾನತಃ ಶಯಾನಸ್ಯ ಕ್ರೋಧೇನ ಕಲುಷೀಕೃತಃ ।
ಮುಕ್ತವಾನ್ಮಮ ಶಾಪಾಗ್ನಿಂ ಯಮದಣ್ಡಮಿವಾಪರಮ್ ॥19॥

''ನೀವು ಬಂದಿರುವ ಸಮಾಚಾರವನ್ನು ತಿಳಿಯದೇ ನಾನು ನಿದ್ರಾವಶನಾಗಿ ಮಲಗಿದ್ದೆನು. ಆದರೆ ನೀವು ಕೋಪದಿಂದ ಕಲುಷಿತಹೃದಯರಾಗಿ ನನ್ನ ಮೇಲೆ ಯಮದಂಡರೂಪವಾದ ಶಾಪಾಗ್ನಿಯನ್ನು ಸುರಿದಿರುವಿರಿ. ಆದುದರಿಂದ ಮಹರ್ಷಿಗಳೇ ! ನಿಮ್ಮ ತೇಜೋಮಯವಾದ ದೇಹವೂ ಚೇತನದಿಂದ ರಹಿತವಾಗಿ ಕೆಳಕ್ಕೆ ಬಿದ್ದುಹೋಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ.''

ಲಕ್ಷ್ಮಣ ! ಹೀಗೆ ಕ್ರೋಧಾಭಿಭೂತರಾಗಿ ನಿಮಿ–ವಸಿಷ್ಠರು ಪರಸ್ಪರವಾಗಿ ಶಾಪಗಳನ್ನು ಕೊಟ್ಟುಕೊಂಡರು. ಮಹಾಪ್ರಭಾವಶಾಲಿಗಳಾಗಿದ್ದ ಅವರಿಬ್ಬರೂ ಪರಸ್ಪರಶಾಪಪ್ರದಾನದ ಪ್ರಭಾವದಿಂದ ಮೃತರಾಗಿ ಕೆಳಕ್ಕೆ ಬಿದ್ದರು.

55ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 56ನೆಯ ಸರ್ಗ

ಮೈತ್ರಾವರುಣಿಯಾಗಿ ದೇಹವನ್ನು ಧರಿಸುವಂತೆ ವಸಿಷ್ಠರಿಗೆ ಬ್ರಹ್ಮನ ಆದೇಶ : ಮಿತ್ರನ ಶಾಪದಿಂದ ಉರ್ವಶಿಯು ಭೂಮಿಯಲ್ಲಿ ಹುಟ್ಟಿ ಪುರೂರವನ ಪತ್ನಿಯಾಗಿ ಮಕ್ಕಳನ್ನು ಪಡೆದುದು

ರಾಮಸ್ಯ ಭಾಷಿತಂ ಶ್ರುತ್ವಾ ಲಕ್ಷ್ಮಣಃ ಪರವೀರಹಾ ।
ಉವಾಚ ಪ್ರಾಞ್ಜಲಿರ್ಭೂತ್ವಾ ರಾಘವಂ ದೀಪ್ತತೇಜಸಮ್ ॥1॥

ಶ್ರೀರಾಮನ ಮಾತುಗಳನ್ನು ಕೇಳಿ ಶತ್ರುವೀರಹಂತಕನಾದ ಲಕ್ಷ್ಮಣನು ಕೈಮುಗಿದುಕೊಂಡು ಮಹಾತೇಜಸ್ವಿಯಾದ ಶ್ರೀರಾಮನನ್ನು ಪ್ರಶ್ನಿಸಿದನು:

ನಿಕ್ಷಿಪ್ಯ ದೇಹೌ ಕಾಕುತ್ಸ್ಥ ಕಥಂ ತೌ ದ್ವಿಜಪಾರ್ಥಿವೌ ।
ಪುನರ್ದೇಹೇನ ಸಂಯೋಗಂ ಜಗ್ಮತುರ್ದೇವಸಮ್ಮತೌ ॥2॥

''ಕಕುತ್ಸ್ಥಕುಲಭೂಷಣನೇ! ದೇವಸಮ್ಮಾನಿತರಾದ ನಿಮಿ–ವಸಿಷ್ಠರು ಪರಸ್ಪರ ಶಾಪಪ್ರದಾನದಿಂದ ಕಳೆದುಕೊಂಡ ದೇಹವನ್ನು ಪುನಃ ಹೇಗೆ ಪಡೆದುಕೊಂಡರು ?''

ಲಕ್ಷ್ಮಣನು ಹೀಗೆ ಪ್ರಶ್ನಿಸಲು ಮಹಾತೇಜಸ್ವಿಯಾದ ಇಕ್ಷ್ವಾಕು ಕುಲ ನಂದನನಾದ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು :

''ಲಕ್ಷ್ಮಣ ! ಪರಸ್ಪರ ಶಾಪಪ್ರದಾನದಿಂದ ದೇಹತ್ಯಾಗಮಾಡಿದ ಧಾರ್ಮಿಕರಾದ ತಪೋಧನರಾದ ನಿಮಿ–ವಸಿಷ್ಠರು ಸ್ವಲ್ಪಕಾಲದವರೆಗೆ ವಾಯು ರೂಪದಲ್ಲಿದ್ದರು.

ಸ್ವಲ್ಪ ದಿವಸಗಳು ಕಳೆದನಂತರ ಶರೀರದಿಂದ ರಹಿತರಾಗಿದ್ದ ಮಹಾ ತೇಜಸ್ವಿಗಳಾದ ವಸಿಷ್ಠರು ಮತ್ತೊಂದು ಶರೀರವನ್ನು ಪಡೆದುಕೊಳ್ಳುವ ಸಲುವಾಗಿ ತಂದೆಯಾದ ಬ್ರಹ್ಮನ ಬಳಿಗೆ ಹೋದರು. ವಾಯುರೂಪರಾಗಿದ್ದ ಧರ್ಮವಿದರಾಗಿದ್ದ ವಸಿಷ್ಠರು ದೇವದೇವನಾದ ಬ್ರಹ್ಮನ ಕಾಲುಗಳಿಗೆ ಅಭಿವಾದನ ಪೂರ್ವಕವಾಗಿ ನಮಸ್ಕರಿಸಿ ಹೇಳಿದರು :

''ಪೂಜ್ಯನೇ ! ಬ್ರಹ್ಮಾಂಡವೆಂಬ ಮೊಟ್ಟೆಯಿಂದ ಹೊರಬಂದಿರು

ವವನೇ ! ತಂದೆಯೇ ! ನಿಮಿಯ ಶಾಪದಿಂದಾಗಿ ನಾನು ದೇಹದಿಂದ ರಹಿತನಾಗಿದ್ದೇನೆ. ಈಗ ನಾನು ವಾಯುರೂಪದಲ್ಲಿದ್ದೇನೆ.

ಸರ್ವೇಷಾಂ ದೇಹಹೀನಾನಾಂ ಮಹದ್ದುಃಖಂ ಭವಿಷ್ಯತಿ ।
ಲುಪ್ಯನ್ತೇ ಸರ್ವಕಾರ್ಯಾಣಿ ಹೀನದೇಹಸ್ಯ ವೈ ಪ್ರಭೋ ।
ದೇಹಸ್ಯಾನ್ಯಸ್ಯ ಸದ್ಭಾವೇ ಪ್ರಸಾದಂ ಕರ್ತುಮರ್ಹಸಿ ॥8॥

ದೇಹವಿಲ್ಲದವರಿಗೆ ಮಹಾದುಃಖವೇ ಪ್ರಾಪ್ತವಾಗುತ್ತದೆ. ದೇಹ ಹೀನನಿಗೆ ಯಾವ ಕರ್ಮಗಳನ್ನೂ ಮಾಡುವುದಕ್ಕಾಗುವುದಿಲ್ಲ. ಕರ್ಮಲೋಪ ವಾಗುತ್ತದೆ. ಆದುದರಿಂದ ನನಗೆ ಮತ್ತೊಂದು ದೇಹವನ್ನು ಅನುಗ್ರಹಿಸುವ ಕೃಪೆಮಾಡು.''

ವಸಿಷ್ಠರು ಹೀಗೆ ಹೇಳಲು ಅಮಿತತೇಜಸ್ವಿಯಾದ ಸ್ವಯಂಭೂ ಬ್ರಹ್ಮನು ವಸಿಷ್ಠರಿಗೆ ಹೇಳಿದನು :

''ಮಹಾಯಶೋವಂತನೇ ! ನೀನು ಮಿತ್ರಾ – ವರುಣರಿಗೆ ಸಂಬಂಧಿ ಸಿದ ರೇತಸ್ಸನ್ನು ಪ್ರವೇಶಿಸು. ಅಲ್ಲಿಯೂ ನೀನು ಅಯೋನಿಜನೇ ಆಗುವೆ. ಆ ದೇಹದಲ್ಲಿಯೂ ಮಹಾಧರ್ಮಿಷ್ಠನಾಗುವ ನೀನು ಪುನಃ ನನ್ನಲ್ಲಿಗೇ ಬರುವೆ.''

ಬ್ರಹ್ಮನು ಹೀಗೆ ಹೇಳಿದೊಡನೆಯೇ ವಸಿಷ್ಠರು ಬ್ರಹ್ಮನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಬಹಳ ಶೀಘ್ರವಾಗಿ ವರುಣನ ಅರಮನೆಗೆ ಹೋದರು.

ಅದೇ ಸಮಯದಲ್ಲಿಯೇ ಮಿತ್ರದೇವತೆಯೂ ವರುಣನ ಅಧಿ ಕಾರವನ್ನು ಪಡೆದು ಕ್ಷೀರಸಮುದ್ರದಲ್ಲಿ ಸುರಶ್ರೇಷ್ಠರಿಂದ ಪೂಜಿಸಲ್ಪಡುತ್ತಿದ್ದನು. ಅದೇ ಕಾಲದಲ್ಲಿ ಅಪ್ಸರೆಯರಲ್ಲಿ ಶ್ರೇಷ್ಠಳಾದ ಊರ್ವಶಿಯು ತನ್ನ ಸಖಿಯರಿಂದ ಕೂಡಿಕೊಂಡು ಆಕಸ್ಮಿಕವಾಗಿ ಅಲ್ಲಿಗೆ ಬಂದಳು. ರೂಪಸಂಪನ್ನೆಯಾಗಿದ್ದ ಊರ್ವಶಿಯು ವರುಣಾಲಯದಲ್ಲಿ (ಸಮುದ್ರದಲ್ಲಿ) ಸ್ನಾನಮಾಡುತ್ತಿರುವು ದನ್ನೂ ಮತ್ತು ವಿಹರಿಸುತ್ತಿರುವುದನ್ನೂ ಕಂಡು ವರುಣನಿಗೆ ಊರ್ವಶಿಯ ವಿಷಯದಲ್ಲಿ ಅತಿಯಾದ ಸಂತೋಷವುಂಟಾಯಿತು. ಅರಳಿದ ತಾವರೆಗೆ ಸಮಾನವಾದ ಕಣ್ಣುಗಳನ್ನು ಹೊಂದಿದ್ದ, ಪೂರ್ಣಚಂದ್ರನ ಬಿಂಬಕ್ಕೆ ಸಮಾನ

ವಾದ ಮುಖದಿಂದ ಕಂಗೊಳಿಸುತ್ತಿದ್ದ ಅಪ್ಸರೆಯನ್ನು ವರುಣನು ಸಮಾಗಮಕ್ಕಾಗಿ ಆಹ್ವಾನಿಸಿದನು. ಅಪ್ಸರೆಯು ಕೈಮುಗಿದುಕೊಂಡು ವರುಣನಿಗೆ ಹೇಳಿದಳು :

''ಸುರೇಶ್ವರನೇ! ಮಿತ್ರನು ಈ ಮೊದಲೇ ನನ್ನನ್ನು ವರಿಸಿರುವನು.''

ಉರ್ವಶಿಯ ಮಾತನ್ನುಕೇಳಿ ಕಾಮನ ಬಾಣಗಳಿಂದ ಪೀಡಿಸಲ್ಪಡುತ್ತಿದ್ದ ವರುಣನು ಪುನಃ ಅಪ್ಸರೆಗೆ ಹೇಳಿದನು :

''ಅಪ್ಸರೆಯೇ ! ಒಂದು ವೇಳೆ ನಿನಗೆ ನನ್ನೊಡನೆ ಸಮಾಗಮ ಮಾಡುವ ಇಚ್ಛೆಯಿಲ್ಲದಿದ್ದರೆ ನಿನ್ನ ಸಮೀಪದಲ್ಲಿರುವ ದೇವನಿರ್ಮಿತವಾಗಿರುವ ಈ ಕುಂಭದಲ್ಲಿ ನನ್ನ ರೇತಸ್ಸನ್ನು ವಿಸರ್ಜಿಸಿ ಸಫಲಮನೋರಥನಾಗುತ್ತೇನೆ.''

ಲೋಕನಾಥನಾದ ವರುಣನು ಹೇಳಿದ ಮನೋಹರವಾದ ಆ ಮಾತನ್ನು ಕೇಳಿ ಉರ್ವಶಿಯು ಪರಮಪ್ರೀತಳಾಗಿ ಹೇಳಿದಳು :

''ವರುಣದೇವನೇ! ನಿನ್ನ ಇಚ್ಛೆಯಿದ್ದಂತೆಯೇ ಆಗಲಿ. ನನ್ನ ಮನಸ್ಸು ನಿನ್ನಲ್ಲಿಯೇ ನೆಟ್ಟುಹೋಗಿದೆ. ನಿನ್ನ ಮೇಲೆ ನನಗೆ ವಿಶೇಷವಾದ ಅನುರಾಗವಿದೆ. ಆದರೆ ದೇಹವು ಮಾತ್ರ ಮಿತ್ರನೊಡನೆ ಸೇರಿರುತ್ತದೆ.''

ಉರ್ವಶಿಯು ಹೀಗೆ ಹೇಳಲು – ವರುಣನು ಪರಮಾದ್ಭುತವಾಗಿದ್ದ, ಪ್ರಜ್ವಲಿಸುವ ಅಗ್ನಿಯಂತೆಯೇ ಕಾಣುತ್ತಿದ್ದ ತೇಜಸ್ಸನ್ನು ದೇವನಿರ್ಮಿತವಾದ ಉರ್ವಶಿಯ ಸಮೀಪದಲ್ಲಿದ್ದ ಕುಂಭದಲ್ಲಿ ವಿಸರ್ಜಿಸಿದನು. ಅನಂತರ ಉರ್ವಶಿಯು ಮಿತ್ರದೇವತೆಯ ಬಳಿಗೆ ಹೋದಳು. ಉರ್ವಶಿಯ ಆ ಚರ್ಯೆಯಿಂದ ಅತ್ಯಂತಕುಪಿತನಾಗಿದ್ದ ಮಿತ್ರನು ಅವಳಿಗೆ ಹೇಳಿದನು :

''ದುಷ್ಟಚಾರಿಣಿಯೇ! ನಾನು ಮೊದಲು ನಿನ್ನನ್ನು ಸಮಾಗಮಕ್ಕಾಗಿ ಆಹ್ವಾನಿಸಿದ್ದೆನು. ಹೀಗಿರುವಾಗ ನೀನು ನನ್ನನ್ನು ಪರಿತ್ಯಜಿಸಿ ಬೇರೆಯವನನ್ನೇಕೆ ವರಿಸಿದೆ ? ಈ ನಿನ್ನ ದುಷ್ಕಾರ್ಯದಿಂದ ನನ್ನ ಕ್ರೋಧಕ್ಕೆ ಗುರಿಯಾಗಿರುವೆ. ಆದುದರಿಂದ ನೀನು ಕೆಲವು ಕಾಲ ಮನುಷ್ಯಲೋಕದಲ್ಲಿರಬೇಕಾಗುತ್ತದೆ. ದುರ್ಬುದ್ಧಿಯವಳೇ! ಭೂಮಿಯಲ್ಲಿ ಬುಧನ ಮಗನಾದ

ರಾಜರ್ಷಿಯಾದ ಪುರೂರವಸನು ಕಾಶಿಯಲ್ಲಿ ರಾಜ್ಯವಾಳುತ್ತಿದ್ದಾನೆ. ಅವನ ಬಳಿಗೆ ನೀನು ಹೋಗು. ಅವನೇ ನಿನಗೆ ಪತಿಯಾಗುತ್ತಾನೆ.''

ಲಕ್ಷ್ಮಣ ! ಅನಂತರ ಉರ್ವಶಿಯು ಶಾಪದ ದೋಷದಿಂದಾಗಿ ಪ್ರತಿಷ್ಠಾನಪುರದಲ್ಲಿದ್ದ ಬುಧನ ಔರಸಪುತ್ರನಾದ ಪುರೂರವಸನ ಬಳಿಗೆ ಹೋದಳು. ಪುರೂರವಸನಿಗೆ ಉರ್ವಶಿಯಿಂದ ಶ್ರೀಮಂತನಾದ ಆಯು ಎಂಬ ಮಗನು ಹುಟ್ಟಿದನು. ಇಂದ್ರನಂತೆ ಪರಾಕ್ರಮಿಯಾದ ನಹುಷನು ಆಯುವಿನ ಮಗನು. ವೃತ್ರಾಸುರನ ಮೇಲೆ ವಜ್ರಾಯುಧವನ್ನು ಪ್ರಹರಿಸಿ ಅವನನ್ನು ಸಂಹರಿಸಿದನಂತರ ದೇವೇಂದ್ರನು ಬ್ರಹ್ಮಹತ್ಯಾಪಾಪದ ಭಯದಿಂದ ಪರಮದುಃಖಿಯಾಗಿ ಯಾರಿಗೂ ಕಾಣಿಸದ ರೀತಿಯಲ್ಲಿ ಹುದುಗಿಕೊಂಡಿದ್ದನು. ಆ ಸಮಯದಲ್ಲಿ ಒಂದು ಲಕ್ಷ ವರ್ಷಗಳವರೆಗೆ ನಹುಷನೇ ಇಂದ್ರನ ಪದವಿಯಲ್ಲಿದ್ದು ಮೂರು ಲೋಕಗಳ ರಾಜ್ಯಭಾರಮಾಡುತ್ತಿದ್ದನು.

ಲಕ್ಷ್ಮಣ ! ಹೀಗೆ ಶುಭ್ರವಾದ ಹಲ್ಲುಗಳನ್ನೂ ಸುಂದರವಾದ ಕಣ್ಣುಗಳನ್ನೂ ಹೊಂದಿದ್ದ ಉರ್ವಶಿಯು ಮಿತ್ರನ ಶಾಪದಂತೆ ಭೂಮಿಗಿಳಿದಳು. ಸುಂದರವಾದ ಹುಬ್ಬುಗಳಿಂದ ಕೂಡಿದ್ದ ಅಪ್ಸರೆಯು ಹಲವಾರು ವರ್ಷಗಳ ಕಾಲ ಭೂಮಿಯಲ್ಲಿ ವಾಸಮಾಡುತ್ತಿದ್ದು ಶಾಪವು ಮುಗಿದನಂತರ ಇಂದ್ರನ ಲೋಕಕ್ಕೆ ತೆರಳಿದಳು.

56ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **57ನೆಯ ಸರ್ಗ**

ವಸಿಷ್ಠರಿಂದ ಮೈತ್ರಾವರುಣಿಯಾಗಿ ನೂತನ ಶರೀರಧಾರಣೆ : ನಿಮಿಗೆ ಪ್ರಾಣಿಗಳ ರೆಪ್ಪೆಗಳಲ್ಲಿ ವಾಸ : ಜನಕರಾಜನ ಉತ್ಪತ್ತಿ

ತಾಂ ಶ್ರುತ್ವಾ ದಿವ್ಯಸಂಕಾಶಾಂ ಕಥಾಮದ್ಭುತದರ್ಶನಾಮ್ ।
ಲಕ್ಷ್ಮಣಃ ಪರಮಪ್ರೀತೋ ರಾಘವಂ ವಾಕ್ಯಮಬ್ರವೀತ್ ॥1॥

ದಿವ್ಯವಾಗಿಯೂ ಅದ್ಭುತವಾಗಿಯೂ ಇದ್ದ ವಸಿಷ್ಠ–ನಿಮಿಗಳ ಕಥೆಯನ್ನು ಕೇಳಿ ಲಕ್ಷ್ಮಣನು ಪರಮಪ್ರೀತನಾಗಿ ಶ್ರೀರಾಮನನ್ನು ಪ್ರಶ್ನಿಸಿದನು:

ನಿಕ್ಷಿಪ್ತದೇಹೌ ಕಾಕುತ್ಸ್ಥ ಕಥಂ ತೌ ದ್ವಿಜಪಾರ್ಥಿವೌ ।
ಪುನರ್ದೇಹೇನ ಸಂಯೋಗಂ ಜಗ್ಮತುರ್ದೇವಸಮ್ಮತೌ ॥2॥

''ರಾಘವ! ದೇವತೆಗಳಿಗೂ ಮಾನ್ಯರಾಗಿದ್ದ ಆ ಬ್ರಾಹ್ಮಣ-ಕ್ಷತ್ರಿಯರಿಬ್ಬರೂ ತಮ್ಮ ದೇಹಗಳನ್ನು ವಿಸರ್ಜಿಸಿ ಪುನಃ ಹೇಗೆ ದೇಹದೊಡನೆ ಸಂಬಂಧವನ್ನು ಪಡೆದರು ?''

ಲಕ್ಷ್ಮಣನ ಆ ಮಾತನ್ನು ಕೇಳಿ ಸತ್ಯಪರಾಕ್ರಮನಾದ ಶ್ರೀರಾಮನು ಮಹಾತ್ಮರಾದ ವಸಿಷ್ಠರ ಕಥೆಯನ್ನು ಮುಂದುವರಿಸುತ್ತಾ ಹೇಳಿದನು :

''ರಘುಶ್ರೇಷ್ಠನೇ! ಮಹಾತ್ಮರಾದ ಮಿತ್ರ ಮತ್ತು ವರುಣರ ತೇಜಸ್ಸಿನಿಂದ ಯಾವ ಕುಂಭವು ಪೂರ್ಣವಾಗಿದ್ದಿತೋ - ಆ ಕುಂಭದಿಂದ ತೇಜೋಮಯರಾದ ಋಷಿಶ್ರೇಷ್ಠರಾದ ಇಬ್ಬರು ಬ್ರಾಹ್ಮಣರು ಹುಟ್ಟಿದರು. ಆ ಘಟದಲ್ಲಿ ಮೊದಲು ಮಹರ್ಷಿಗಳಾದ ಅಗಸ್ತ್ಯರು ಜನ್ಮತಾಳಿದರು. ಹುಟ್ಟುತ್ತಲೇ ಅವರು ಮಿತ್ರನಿಗೆ - ' **ನಾಹಂ ಸುತಸ್ತವ** - ನಾನು ನಿನ್ನ ಮಗನಲ್ಲ' ಎಂದು ಹೇಳಿ ಅಲ್ಲಿಂದ ಬೇರೆಯೆಡೆಗೆ ಹೊರಟುಹೋದರು. ಊರ್ವಶಿಯ ನಿಮಿತ್ತದಿಂದ ಮಿತ್ರನ ತೇಜಸ್ಸು ಆ ಕುಂಭದಲ್ಲಿ ಮೊದಲೇ ಇಡಲ್ಪಟ್ಟಿದ್ದಿತು. ಅನಂತರ ಆ ಕುಂಭದಲ್ಲಿ ವರುಣನ ತೇಜಸ್ಸೂ ಕೂಡಿಕೊಂಡಿತು. ಸ್ವಲ್ಪಕಾಲ ಕಳೆದನಂತರ ಸಮ್ಮಿಶ್ರಿತವಾದ ಮಿತ್ರಾ -ವರುಣರಿಬ್ಬರ ವೀರ್ಯದಿಂದ ಮಹಾತೇಜಸ್ವಿಗಳಾದ ಇಕ್ಷ್ವಾಕುವಂಶೀಯರಿಗೆ ದೇವತಾಪ್ರಾಯರಾಗಿರುವ ವಸಿಷ್ಠರು ಹುಟ್ಟಿದರು. ಅವರು ಹುಟ್ಟಿದೊಡನೆಯೇ ಮಹಾತೇಜಸ್ವಿಯಾದ ಇಕ್ಷ್ವಾಕುವು ನಮ್ಮ ಕುಲದ ಹಿತಕ್ಕಾಗಿ ಅವರನ್ನು ಪುರೋಹಿತರನ್ನಾಗಿ ಮಾಡಿಕೊಂಡನು.

ಲಕ್ಷ್ಮಣ! ಹೀಗೆ ನಾನು ನಿನಗೆ ವಸಿಷ್ಠರು ನೂತನಶರೀರವನ್ನು ಹೇಗೆ ಪಡೆದರೆಂಬ ಕಥೆಯನ್ನು ವಿಸ್ತಾರವಾಗಿ ಹೇಳಿದೆನು. ಮುಂದೆ ನಾನು ನಿಮಿಯ ವೃತ್ತಾಂತವನ್ನು ಹೇಳುವೆನು ; ಕೇಳು :

ನಿಮಿರಾಜನು ದೇಹದಿಂದ ಬೇರೆಯಾಗಿರುವುದನ್ನು ಕಂಡು ವಿದ್ವಾಂಸರಾದ ಎಲ್ಲ ಋಷಿಗಳೂ ತಾವೇ ಯಜ್ಞದ ದೀಕ್ಷೆಯನ್ನು ಕೈಗೊಂಡು ಪ್ರಾರಂಭಿಸಿದ್ದ ಯಜ್ಞವನ್ನು ಪೂರ್ಣಗೊಳಿಸಿದರು. ಬ್ರಾಹ್ಮಣಶ್ರೇಷ್ಠರು ಪೌರರಿಂದಲೂ ಸೇವಕರಿಂದಲೂ ಕೂಡಿಕೊಂಡು ಗಾಳಿಯ ರೂಪದಲ್ಲಿದ್ದ ನರೇಂದ್ರನ ಆ ಶರೀರವನ್ನು ಗಂಧಮಾಲ್ಯಾದಿಗಳಿಂದ ಸಂಪೂಜಿಸಿ ವಸ್ತ್ರಗಳಿಂದ

ಆಚ್ಛಾದಿಸಿ ರಕ್ಷಿಸುತ್ತಿದ್ದರು. ಯಜ್ಞವು ಮುಗಿದನಂತರ ಭೃಗುಮಹರ್ಷಿಗಳು ರಾಜನಿಗೆ ಹೇಳಿದರು :

ಆನಯಿಷ್ಯಾಮಿ ತೇ ಚೇತಸ್ತುಷ್ಟೋಽಸ್ಮಿ ತವ ಪಾರ್ಥಿವ ॥12॥

''ಮಹಾರಾಜ ! ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ. ಈ ದೇಹದಿಂದ ಬಿಟ್ಟುಹೋಗಿರುವ ನಿನ್ನ ಚೇತನವನ್ನು ದೇಹದಲ್ಲಿ ತಂದಿರಿಸುವೆನು.''

ಸುಪ್ರೀತರಾದ ಸಮಸ್ತದೇವತೆಗಳೂ ವಾಯುವಿನ ರೂಪದಲ್ಲಿದ್ದ ನಿಮಿಗೆ ಹೇಳಿದರು :

ವರಂ ವರಯ ರಾಜರ್ಷೇ ಕ್ವ ತೇ ಚೇತೋ ನಿರೂಪ್ಯತಾಮ್ ॥13॥

''ಮಹಾರಾಜ ! ವರವನ್ನು ಕೇಳು. ನಾವೀಗ ನಿನ್ನ ಚೇತನವನ್ನು ಎಲ್ಲಿರಿಸೋಣ ?''

ಸಮಸ್ತದೇವತೆಗಳೂ ಹೀಗೆ ಪ್ರಶ್ನಿಸಲು ವಾಯುರೂಪದಲ್ಲಿದ್ದ ನಿಮಿಯ ಚೇತನವು ಹೇಳಿತು :

ನೇತ್ರೇಷು ಸರ್ವಭೂತಾನಾಂ ವಸೇಯಂ ಸುರಸತ್ತಮಾಃ ॥15॥

''ದೇವಶ್ರೇಷ್ಠರೇ ! ಸಮಸ್ತಪ್ರಾಣಿಗಳ ಕಣ್ಣುಗಳಲ್ಲಿಯೂ ವಾಸ ಮಾಡಿಕೊಂಡಿರಲು ನಾನು ಬಯಸುತ್ತೇನೆ.''

ದೇವತೆಗಳೆಲ್ಲರೂ ನಿಮಿಯ ಚೇತನಕ್ಕೆ ''**ಬಾಢಂ-** ಹಾಗೆಯೇ ಆಗಲಿ'' **ನೇತ್ರೇಷು ಸರ್ವಭೂತಾನಾಂ ವಾಯುಭೂತಶ್ಚರಿಷ್ಯಸಿ ॥** ಸಮಸ್ತಪ್ರಾಣಿಗಳ ಕಣ್ಣುಗಳಲ್ಲಿಯೂ ವಾಯುವಿನ ರೂಪದಲ್ಲಿ ನೀನು ಸಂಚರಿಸುವೆ.

ತ್ವತ್ಕೃತೇ ಚ ನಿಮಿಷ್ಯನ್ತಿ ಚಕ್ಷೂಂಷಿ ಪೃಥಿವೀಪತೇ ।
ವಾಯುಭೂತೇನ ಚರತಾ ವಿಶ್ರಾಮಾರ್ಥಂ ಮುಹುರ್ಮುಹುಃ ॥

ವಾಯುವಿನ ರೂಪದಲ್ಲಿರುತ್ತಾ ಸಂಚರಿಸುವ ನಿನಗೆ ವಿಶ್ರಾಂತಿಯ ಸಲುವಾಗಿ ಪ್ರಾಣಿಗಳು ಪದೇ –ಪದೇ ರೆಪ್ಪೆಗಳನ್ನು ಮುಚ್ಚಿಕೊಳ್ಳುತ್ತಿರುತ್ತಾರೆ.''

ದೇವತೆಗಳು ನಿಮಿಗೆ ಹೀಗೆ ಹೇಳಿ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಇತ್ತಲಾಗಿ ಮಹಾತೇಜಸ್ವಿಗಳಾದ ಮಹಾತ್ಮರಾದ ಋಷಿಗಳು ನಿಮಿಯ ದೇಹವನ್ನು ಯಜ್ಞಭೂಮಿಗೆ ತಂದು ಪವಿತ್ರವಾದ ಸ್ಥಳದಲ್ಲಿಟ್ಟು ಅದರ ಮೇಲೆ ಅರಣಿಯನ್ನು ಪ್ರತಿಷ್ಠಾಪಿಸಿ ವೇಗವಾಗಿ ಕಡೆಯತೊಡಗಿದರು. ಮಹಾತ್ಮರಾದ ಮಹರ್ಷಿಗಳು ಮಂತ್ರೋಚ್ಚಾರಣಪೂರ್ವಕವಾಗಿ ಹೋಮ ಮಾಡಿ ನಿಮಿಗೆ ಪುತ್ರನಾಗಬೇಕೆಂಬ ಆಶಯದಿಂದ ಅವನ ಶರೀರದ ಮೇಲೆ ಅರಣಿಯನ್ನಿಟ್ಟು ಕಡೆಯುತ್ತಿರುವಾಗ ಮಹಾತಪಸ್ವಿಯಾದ ಮಿಥಿ ಎಂಬುವನು ನಿಮಿಯ ಶರೀರದಿಂದ ಹುಟ್ಟಿದನು.

ಮಥನಾನ್ಮಿಥಿರಿತ್ಯಾಹುರ್ಜನನಾಜ್ಜನಕೋಽಭವತ್ ॥ 19॥

ಮಥನದಿಂದ ಹುಟ್ಟಿದ ಕಾರಣ ಮಿಥಿ ಎಂದೂ, ಅದ್ಭುತವಾದ ಹುಟ್ಟನ್ನು ಪಡೆದಿದ್ದರಿಂದ ಜನಕನೆಂದೂ ಆ ಮಗುವಿಗೆ ಹೆಸರಾಯಿತು.

ಯಸ್ಮಾದ್ವಿದೇಹಾತ್ಸಮ್ಭೂತೋ ವೈದೇಹಸ್ತು ತತಃ ಸ್ಮೃತಃ ॥20॥

ಜೀವರಹಿತವಾಗಿದ್ದ ದೇಹದಿಂದ ಹುಟ್ಟಿದ್ದ ಕಾರಣ ಅವನನ್ನು ಮುಂದೆ ವೈದೇಹನೆಂದೂ ಕರೆದರು.

ಹೀಗೆ ಚೇತನದಿಂದ ರಹಿತವಾಗಿದ್ದ ನಿಮಿಯ ದೇಹದಿಂದ ಹುಟ್ಟಿದ ರಾಜಕುಮಾರನು ವಿದೇಹ, ಜನಕ ಮತ್ತು ಮಿಥಿ ಎಂಬ ಮೂರು ಹೆಸರುಗಳಿಂದಲೂ ಪ್ರಸಿದ್ಧನಾದನು. ಮಿಥಿಯಿಂದಲೇ ಬೆಳೆದ ಆ ರಾಜವಂಶವು ಮೈಥಿಲ –ಎಂಬ ಹೆಸರಿನಿಂದಲೂ ಪ್ರಸಿದ್ಧವಾಯಿತು.

ಸೌಮ್ಯನೇ ! ಲಕ್ಷ್ಮಣ ! ಹೀಗೆ ನಾನು ನಿನಗೆ, ನೃಪಶ್ರೇಷ್ಠನಾದ ನಿಮಿಯ ಶಾಪದಿಂದ ವಸಿಷ್ಠರು ಪ್ರಾಣತೊರೆದು ಪುನರ್ಜನ್ಮವನ್ನು ಪಡೆದ ಕಥೆಯನ್ನೂ ಬ್ರಾಹ್ಮಣಶ್ರೇಷ್ಠರಾದ ವಸಿಷ್ಠರ ಶಾಪದಿಂದ ನಿಮಿಯು ದೇಹತ್ಯಾಗ ಮಾಡಿದ ನಂತರ ಅವನ ವಂಶವು ಹೇಗೆ ಬೆಳೆಯಿತೆಂಬ ಅದ್ಭುತವಾದ ವಿಷಯಗಳನ್ನೂ ಸಂಪೂರ್ಣವಾಗಿ ಹೇಳಿರುವೆನು.''

57ನೆಯ ಸರ್ಗವು ಮುಗಿಯಿತು.

ಯಯಾತಿಗೆ ಶುಕ್ರಾಚಾರ್ಯರ ಶಾಪ

ಏವಂ ಬ್ರುವತಿ ರಾಮೇ ತು ಲಕ್ಷ್ಮಣಃ ಪರವೀರಹಾ ।
ಪ್ರತ್ಯುವಾಚ ಮಹಾತ್ಮಾನಂ ಜ್ವಲನ್ತಮಿವ ತೇಜಸಾ ॥1॥

ಶ್ರೀರಾಮನು ಹೀಗೆ ಹೇಳುತ್ತಿರಲು ಶತ್ರುವೀರಹಂತಕನಾದ ಲಕ್ಷ್ಮಣನು ಮಹಾತ್ಮನಾದ, ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವಂತೆ ಕಾಣುತ್ತಿದ್ದ ಶ್ರೀರಾಮನಿಗೆ ಹೇಳಿದನು :

''ನೃಪಶ್ರೇಷ್ಠನೇ! ವಿದೇಹನ (ನಿಮಿಯ) ಮತ್ತು ವಸಿಷ್ಠಮಹರ್ಷಿಗಳ ಪುರಾತನ ವೃತ್ತಾಂತವು ಅದ್ಭುತವೂ ಆಶ್ಚರ್ಯಕರವೂ ಆಗಿದೆ. ನಿಮಿ ರಾಜನಾದರೋ ಕ್ಷತ್ರಿಯನು ; ಶೂರನು. ಮೇಲಾಗಿ ಆ ಸಮಯದಲ್ಲಿ ಯಜ್ಞದ ದೀಕ್ಷಿತನೂ ಆಗಿದ್ದನು. ಆದರೂ ಅವನು ಮಹಾತ್ಮರಾದ ವಸಿಷ್ಠರ ವಿಷಯದಲ್ಲಿ ಕ್ಷಮೆಯನ್ನು ತಾಳಲಿಲ್ಲ. ಅವರೊಡನೆ ಸರಿಯಾಗಿ ವ್ಯವಹರಿಸ ಲಿಲ್ಲ.''

ಲಕ್ಷ್ಮಣನು ಹೀಗೆ ಹೇಳಲು ಇತರರಿಗೆ ಸಂತೋಷವನ್ನುಂಟು ಮಾಡುವವರಲ್ಲಿ ಅಗ್ರಗಣ್ಯನಾದ ಕ್ಷತ್ರಿಯಪುಂಗವನಾದ ಶ್ರೀರಾಮನು ಸರ್ವಶಾಸ್ತ್ರ ವಿಶಾರದನಾದ ಮಹಾತೇಜಸ್ವಿಯಾದ ಲಕ್ಷ್ಮಣನಿಗೆ ಹೇಳಿದನು :

ನ ಸರ್ವತ್ರ ಕ್ಷಮಾ ವೀರ ಪುರುಷೇಷು ಪ್ರದೃಶ್ಯತೇ ।
ಸೌಮಿತ್ರೇ ದುಃಸಹೋ ರೋಷೋ ಯಥಾ ಕ್ಷಾನ್ತೋ ಯಯಾತಿನಾ॥5॥
ಸತ್ತ್ವಾನುಗಂ ಪುರಸ್ಕೃತ್ಯ ತನ್ನಿಬೋಧ ಸಮಾಹಿತಃ ॥6॥

''ಲಕ್ಷ್ಮಣ ! ಎಲ್ಲ ಪುರುಷರೂ ಯಯಾತಿರಾಜನಂತೆ ಅಂತಹ ಕ್ಷಮಾಗುಣವನ್ನು ತೋರುವುದಿಲ್ಲ. ಯಯಾತಿಯು ಸತ್ತ್ವಮಾರ್ಗವನ್ನು ಆಶ್ರಯಿಸಿ ದುಸ್ಸಹವಾದ ಕೋಪವನ್ನೂ ಶಾಂತಗೊಳಿಸುತ್ತಿದ್ದನು. ಅವನ ಕಥೆಯನ್ನು ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು :

ನಹುಷನಿಗೆ ಯಯಾತಿಯೆಂಬ ಮಗನಿದ್ದನು. ಅವನು ಪುರಜನರ

ಸೌಖ್ಯವನ್ನು ಹೆಚ್ಚಿಸುವುದರಲ್ಲಿಯೇ ಆಸಕ್ತನಾಗಿದ್ದನು. ಅವನಿಗೆ ಅಪ್ರತಿಮರೂಪಸಂಪನ್ನೆಯರಾದ ಇಬ್ಬರು ಪತ್ನಿಯರಿದ್ದರು. ಅವರಲ್ಲಿ ವೃಷಪರ್ವನೆಂಬ ದೈತ್ಯರಾಜನ ಮಗಳಾದ ಶರ್ಮಿಷ್ಠೆಯೆಂಬುವಳು ಯಯಾತಿಗೆ ಹೆಚ್ಚು ಪ್ರಿಯಳಾಗಿದ್ದಳು. ಮತ್ತೊಬ್ಬಳು ಶುಕ್ರಾಚಾರ್ಯರ ಮಗಳಾದ ಸುಂದರವಾದ ನಡುವಿನಿಂದ ಕೂಡಿದ್ದ ದೇವಯಾನೀ. ಅವಳು ರಾಜನಿಗೆ ಅಷ್ಟು ಪ್ರಿಯಳಾಗಿರಲಿಲ್ಲ. ಇಬ್ಬರಿಗೂ ರೂಪವಂತರಾದ ಇಬ್ಬರು ಮಕ್ಕಳು ಹುಟ್ಟಿದರು. ಶರ್ಮಿಷ್ಠೆಯು ಪೂರು ಎಂಬುವನಿಗೆ ಜನ್ಮವನ್ನಿತ್ತಳು. ದೇವಯಾನಿಯು ಯದು ಎಂಬುವನನ್ನು ಹಡೆದಳು. ತಾಯಿಯ ಶಿಕ್ಷಣದಿಂದಲೂ ತನ್ನ ಸದ್ಗುಣಗಳಿಂದಲೂ ಪೂರುವು ರಾಜನಿಗೆ ಬಹಳ ಪ್ರಿಯನಾಗಿದ್ದನು. ಅದರಿಂದ ದುಃಖಿತನಾದ ಯದುವು ತಾಯಿಯಾದ ದೇವಯಾನಿಗೆ ಹೇಳಿದನು :

ಭಾರ್ಗವಸ್ಯ ಕುಲೇ ಜಾತಾ ದೇವಸ್ಯಾಕ್ಲಿಷ್ಟಕರ್ಮಣಃ ।
ಸಹಸೇ ಹೃದ್ಗತಂ ದುಃಖಮವಮಾನಂ ಚ ದುಃಸಹಮ್ ॥12॥

''ತಾಯೇ ! ನೀನು ಭಾರ್ಗವನ ಕುಲದಲ್ಲಿ ಹುಟ್ಟಿದವಳು. ಎಂತಹ ಕಷ್ಟವಾದ ಕಾರ್ಯವನ್ನೂ ಸುಲಭವಾಗಿ ಸಾಧಿಸುವ ದೇವಸದೃಶನಾದ ಶುಕ್ರಾಚಾರ್ಯನ ಮಗಳಾಗಿರುವೆ. ಹೀಗಿದ್ದರೂ ಮನಸ್ಸಿನಲ್ಲಿರುವ ದುಃಖವನ್ನೂ, ಸಹಿಸಿಕೊಳ್ಳಲು ಅಸಾಧ್ಯವಾದ ಅವಮಾನವನ್ನೂ ಸಹಿಸಿಕೊಳ್ಳುತ್ತಿರುವೆ.''

ಆವಾಂ ಚ ಸಹಿತೌ ದೇವಿ ಪ್ರವಿಶಾವ ಹುತಾಶನಮ್ ।
ರಾಜಾ ತು ರಮತಾಂ ಸಾರ್ಧಂ ದೈತ್ಯಪುತ್ರ್ಯಾ ಬಹುಕ್ಷಪಾಃ ॥13॥

ಆದುದರಿಂದ ನಾವಿಬ್ಬರೂ ಬೆಂಕಿಯಲ್ಲಿ ಬಿದ್ದು ಸತ್ತು ಹೋಗೋಣ. ರಾಜನಾದರೋ ದೈತ್ಯನ ಮಗಳೊಡನೆ ಹಲವಾರು ರಾತ್ರಿಗಳನ್ನು ಸುಖದಿಂದ ಕಳೆಯಲಿ.

ಯದಿ ವಾ ಸಹನೀಯಂ ತೇ ಮಾಮನುಜ್ಞಾತುಮರ್ಹಸಿ ।
ಕ್ಷಮ ತ್ವಂ ನ ಕ್ಷಮಿಷ್ಯೇಽಹಂ ಮರಿಷ್ಯಾಮಿ ನ ಸಂಶಯಃ ॥14॥

ಈಗ ನಡೆಯುತ್ತಿರುವುದೆಲ್ಲವನ್ನೂ ನೀನು ಸಹಿಸಿಕೊಳ್ಳುವೆಯಾದರೆ ನನಗಾದರೂ ಸಾಯಲು ಅನುಮತಿಯನ್ನು ನೀಡು. ರಾಜನನ್ನು ನೀನು

ಬೇಕಾದರೆ ಕ್ಷಮಿಸಿಬಿಡು. ನಾನು ಮಾತ್ರ ಕ್ಷಮಿಸತಕ್ಕವನಲ್ಲ. ನಾನು ಖಂಡಿತವಾಗಿಯೂ ಸತ್ತುಹೋಗುವೆನು. ಇದರಲ್ಲಿ ಸಂಶಯವೇ ಇಲ್ಲ.''

ಯಯಾತಿಯ ಆಚರಣೆಯಿಂದ ಪೀಡಿತನೂ ದುಃಖಿತನೂ ಆಗಿದ್ದ ಮಗನ ಮಾತನ್ನು ಕೇಳಿ ದೇವಯಾನಿಯು ಪರಮಕ್ರುದ್ಧಳಾಗಿ ತಂದೆಯನ್ನು ಸ್ಮರಿಸಿದಳು. ಮಗಳ ಮನಸ್ಸಿನ ಅಭಿಪ್ರಾಯವನ್ನು ತಿಳಿದ ಭಾರ್ಗವನು ಬಹಳ ಬೇಗ ಮಗಳಿದ್ದ ಸ್ಥಳಕ್ಕೆ ಆಗಮಿಸಿದನು. ಮಗಳ ಅಸ್ವಸ್ಥತೆಯನ್ನೂ, ಅಪ್ರಸನ್ನತೆಯನ್ನೂ, ಬುದ್ಧಿಗೆಟ್ಟವಳಂತೆ ಇದ್ದ ಅವಳ ಸ್ಥಿತಿಯನ್ನೂ ಕಂಡು ಶುಕ್ರನು ಮಗಳನ್ನು –'ಇದೇನಿದು ? ಹೀಗಿರುವೆ ?' –ಎಂದು ಪ್ರಶ್ನಿಸಿದನು.

ಹಲವಾರು ಬಾರಿ ಪ್ರಶ್ನಿಸಿದ ನಂತರ ದೇವಯಾನಿಯು ಅತ್ಯಂತ ಕ್ರುದ್ಧಳಾಗಿ ಮಹಾತೇಜಸ್ವಿಯಾದ ಭಾರ್ಗವನಿಗೆ ಹೇಳಿದಳು :

ಅಹಮಗ್ನಿಂ ವಿಷಂ ತೀಕ್ಷ್ಣಮಪೋ ವಾ ಮುನಿಸತ್ತಮ ।
ಭಕ್ಷಯಿಷ್ಯೇ ಪ್ರವೇಕ್ಷ್ಯೇ ವಾ ನ ತು ಶಕ್ಷ್ಯಾಮಿ ಜೀವಿತುಮ್ ॥19॥

''ಮುನಿಶ್ರೇಷ್ಠನೇ ! ನಾನು ಬೆಂಕಿಯಲ್ಲಾದರೂ ಬೀಳುತ್ತೇನೆ. ನೀರಿಗಾದರೂ ಬಿದ್ದು ಸಾಯುತ್ತೇನೆ. ವಿಷವನ್ನಾದರೂ ಕುಡಿಯುತ್ತೇನೆ. ಆದರೆ ನಾನು ಮಾತ್ರ ಖಂಡಿತವಾಗಿಯೂ ಜೀವಿಸಿರಲಾರೆನು.

ನ ಮಾಂ ತ್ವಮವಜಾನೀಷೇ ದುಃಖಿತಾಮವಮಾನಿತಾಮ್ ।
ವೃಕ್ಷಸ್ಯಾವಜ್ಞಯಾ ಬ್ರಹ್ಮಂಶ್ಛಿದ್ಯನ್ತೇ ವೃಕ್ಷಜೀವಿನಃ ॥20॥

ತಂದೆಯೇ ! ನಾನಿಲ್ಲಿ ಎಷ್ಟು ದುಃಖವನ್ನು ಅನುಭವಿಸುತ್ತಿರುವೆನು. ನನಗಿಲ್ಲಿ ಎಷ್ಟು ಅವಮಾನವಾಗುತ್ತಿದೆ ಎಂಬ ವಿಷಯವು ನಿನಗೆ ತಿಳಿದಿಲ್ಲ. ಮರವನ್ನು ಉಪೇಕ್ಷಿಸಿ ಹಿಂಸೆಪಡಿಸಿದರೆ ಮರವನ್ನೇ ಆಶ್ರಯಿಸಿಕೊಂಡಿರುವ ಫಲ –ಪುಷ್ಪಗಳಿಗೂ, ಹಕ್ಕಿಗಳಿಗೂ ತೊಂದರೆಯಾಗುವುದಿಲ್ಲವೇ ?

ಅವಜ್ಞ ಯಾ ಚ ರಾಜರ್ಷಿಃ ಪರಿಭೂಯ ಚ ಭಾರ್ಗವ ।
ಮಯ್ಯವಜ್ಞಾಂ ಪ್ರಯುಂಕ್ತೇ ಹಿ ನ ಚ ಮಾಂ ಬಹು ಮನ್ಯತೇ ॥21॥

ರಾಜರ್ಷಿಯಾದ ಯಯಾತಿಯು ಅನಾದರಣೆಯಿಂದ ನನ್ನನ್ನು ತಿರಸ್ಕಾರಭಾವದಿಂದ ಕಾಣುತ್ತಿದ್ದಾನೆ. ನಿನ್ನ ಮಗಳಾದ ನನ್ನನ್ನು ಅವ

ಹೇಳನ ಮಾಡುತ್ತಿದ್ದಾನೆ. ನಾನು ಮಹಾಮಹಿಮನಾದ ಶುಕ್ರನ ಮಗಳೆಂಬ ಪರಿವೆಯೇ ಅವನಿಗಿಲ್ಲ. ಮಹರ್ಷಿಕನ್ಯೆಯಾಗಿರುವುದರಿಂದ ನಾನು ಹೆಚ್ಚಿನವಳೆಂಬ ಭಾವನೆಯೇ ಅವನಿಗಿಲ್ಲ. ಅವನು ಸರ್ವಪ್ರಕಾರದಿಂದಲೂ ನನ್ನನ್ನು ಅವಮಾನಿಸುತ್ತಿದ್ದಾನೆ.''

ಲಕ್ಷ್ಮಣ! ದೇವಯಾನಿಯ ಮಾತನ್ನು ಕೇಳಿ ಶುಕ್ರನು ಕೋಪಾವಿಷ್ಟನಾಗಿ ಯಯಾತಿಗೆ ಹೇಳಿದನು :

ಯಸ್ಮಾನ್ಮಾಮವಜಾನೀಷೇ ನಾಹುಷ ತ್ವಂ ದುರಾತ್ಮವಾನ್ ।
ವಯಸಾ ಜರಯಾ ಜೀರ್ಣಃ ಶೈಥಿಲ್ಯಮುಪಯಾಸ್ಯಸಿ ॥23॥

''ನಹುಷಕುಮಾರನೇ! ನೀನು ದುರಾತ್ಮನು ನನ್ನನ್ನು ಅವಹೇಳನ ಮಾಡುತ್ತಿರುವೆ. ಇದಕ್ಕೆ ತಕ್ಕ ಫಲವನ್ನು ನೀನು ಅನುಭವಿಸಲೇಬೇಕು. ಮುಪ್ಪಿನ ವಯಸ್ಸನ್ನು ಪಡೆದು ಜೀರ್ಣವಾದ ಶರೀರವನ್ನೂ ಶಿಥಿಲವಾದ ಅವಯವಗಳನ್ನೂ ಹೊಂದುವೆ.''

ಬ್ರಹ್ಮರ್ಷಿಯಾದ ಭಾರ್ಗವನು ರಾಜನಿಗೆ ಹೀಗೆ ಶಾಪವನ್ನು ಕೊಟ್ಟು ಮಗಳನ್ನು ಸಮಾಧಾನಗೊಳಿಸಿ ತನ್ನ ಮನೆಗೆ ಹೊರಟುಹೋದನು.

ಲಕ್ಷ್ಮಣ! ಹೀಗೆ ದ್ವಿಜಶ್ರೇಷ್ಠರಲ್ಲಿ ಅಗ್ರಗಣ್ಯನಾದ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಭಾರ್ಗವನು ನಹುಷನ ಮಗನಿಗೆ ಶಾಪವನ್ನು ಕೊಟ್ಟು ಮಗಳಾದ ದೇವಯಾನಿಗೆ ಸಮಾಧಾನವನ್ನು ಹೇಳಿ ಹಿಂದಿರುಗಿದನು.

58ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 59ನೆಯ ಸರ್ಗ

ಯಯಾತಿಗೆ ಪೂರುವಿನಿಂದ ಯೌವನದ ಪ್ರದಾನ : ಪೂರುವಿನ ಪಟ್ಟಾಭಿಷೇಕ : ಯದುವಿಗೆ ಶಾಪ

ಶ್ರುತ್ವಾತೂಶನಸಂ ಕ್ರುದ್ಧಂ ತದಾರ್ತೋ ನಹುಷಾತ್ಮಜಃ ।
ಜರಾಂ ಪರಮಿಕಾಂ ಪ್ರಾಪ್ಯ ಯದುಂ ವಚನಮಬ್ರವೀತ್ ॥1॥

ನಹುಷನ ಮಗನಾದ ಯಯಾತಿಯು ಶುಕ್ರಾಚಾರ್ಯನು ಕೋಪಗೊಂಡಿರುವುದನ್ನು ಕೇಳಿ ಬಹಳ ಸಂಕಟಪಟ್ಟನು. ಅವನ ಶಾಪ

ದಿಂದಾಗಿ ಯಯಾತಿಗೆ ಮಹತ್ತರವಾದ ಮುದಿತನವು ಪ್ರಾಪ್ತವಾಯಿತು. (ಆದರೆ ಆ ಮುದಿತನವನ್ನು ಯುವಕನೊಬ್ಬನ ಯೌವನಕ್ಕೆ ವಿನಿಮಯ ಮಾಡಿಕೊಳ್ಳುವ ಶಕ್ತಿಯು ಅವನಿಗೆ ಶುಕ್ರಾಚಾರ್ಯರಿಂದಲೇ ಕೊಡಲ್ಪಟ್ಟಿದ್ದಿತು.) ಈ ಕಾರಣದಿಂದಾಗಿ ಯಯಾತಿಯು ಯದುವಿಗೆ ಹೇಳಿದನು :

ಯದೋ ತ್ವಮಸಿ ಧರ್ಮಜ್ಞೋ ಮದರ್ಥಂ ಪ್ರತಿಗೃಹ್ಯತಾಮ್ ।
ಜರಾಂ ಪರಮಿಕಾಂ ಪುತ್ರ ಭೋಗೈ ರಂಸ್ಯೇ ಮಹಾಯಶಃ ॥2॥

''ಯಶೋವಂತನೇ! ಯದು! ನೀನು ಧರ್ಮವನ್ನು ತಿಳಿದಿರುವೆ. ನನಗೆ ಅಕಾಲಿಕವಾಗಿ ಪ್ರಾಪ್ತವಾಗಿರುವ ಈ ಮುದಿತನವನ್ನು ತೆಗೆದುಕೊಂಡು ನಿನ್ನ ಯೌವನವನ್ನು ಕೊಡು. ಇನ್ನೂ ಸ್ವಲ್ಪಕಾಲ ನಾನು ಸುಖೋಪ ಭೋಗಗಳನ್ನು ಅನುಭವಿಸುತ್ತಿರುತ್ತೇನೆ.

ನ ತಾವತ್ಕೃತಕೃತ್ಯೋಽಸ್ಮಿ ವಿಷಯೇಷು ನರರ್ಷಭ ।
ಅನುಭೂಯ ತದಾ ಕಾಮಂ ತತಃ ಪ್ರಾಪ್ಸ್ಯಾಮ್ಯಹಂ ಜರಾಮ್ ॥3॥

ನನಗಿನ್ನೂ ವಿಷಯೋಪಭೋಗಗಳ ಲಾಲಸೆಯು ಇಂಗಿಲ್ಲ. ಈಗ ನಿನ್ನ ತಾರುಣ್ಯದಿಂದ ನಾನು ಇಚ್ಛಾನುಸಾರವಾಗಿ ವಿಷಯಸುಖಗಳನ್ನು ಅನುಭವಿಸಿ ತೃಪ್ತನಾದ ಬಳಿಕ ಮುದಿತನವನ್ನು ಹಿಂದಕ್ಕೆ ಪಡೆದುಕೊಳ್ಳುತ್ತೇನೆ.''

ಯದುವು ಯಯಾತಿಯ ಮಾತನ್ನು ಕೇಳಿ ಪ್ರತ್ಯುತ್ತರಿಸಿದನು :

ಪುತ್ರಸ್ತೇ ದಯಿತಃ ಪೂರುಃ ಪ್ರತಿಗೃಹ್ಣಾತು ವೈ ಜರಾಮ್ ॥4॥

''ನಿನಗೆ ಅತ್ಯಂತಪ್ರಿಯಪುತ್ರನಾಗಿರುವ ಪೂರುವೇ ಈ ನಿನ್ನ ವೃದ್ಧಾಪ್ಯವನ್ನೂ ಪಡೆದುಕೊಳ್ಳಲಿ.

ಬಹಿಷ್ಕೃತೋಽಹಮರ್ಥೇಷು ಸಂನಿಕರ್ಷಾಚ್ಚ ಪಾರ್ಥಿವ ।
ಪ್ರತಿಗೃಹ್ಣಾತು ವೈ ರಾಜನ್ಯೈಃ ಸಹಾಶ್ನಾಸಿ ಭೋಜನಮ್ ॥5॥

ನಾನು ನಿನ್ನ ಐಶ್ವರ್ಯದಿಂದಲೂ ವಂಚಿತನಾಗಿದ್ದೇನೆ. ನೀನು ನನ್ನನ್ನು ಹತ್ತಿರಕ್ಕೆ ಕೂಡ ಸೇರಿಸುತ್ತಿಲ್ಲ. ನೀನು ಯಾವನ ಜೊತೆಯಲ್ಲಿ ತಿಂದುಂಡು ವಿನೋದವಾಗಿ ಕಾಲಕಳೆಯುತ್ತಿರುವೆಯೋ – ಅವನೇ ನಿನ್ನ ಈ ಮುದಿತನವನ್ನು ತೆಗೆದುಕೊಳ್ಳಲಿ.''

ಯದುವಿನ ಮಾತನ್ನು ಕೇಳಿ ಯಯಾತಿಯು ಪೂರುವನ್ನು ಕರೆಯಿಸಿ ಹೇಳಿದನು :

ಇಯಂ ಜರಾ ಮಹಾಬಾಹೋ ಮದರ್ಥಂ ಪ್ರತಿಗೃಹ್ಯತಾಮ್ ॥6॥

''ಮಹಾಬಾಹುವೇ ! ನನ್ನ ಸುಖ–ಸಂತೋಷಗಳಿಗಾಗಿ ನೀನು ಈ ಮುದಿತನವನ್ನು ಪ್ರತಿಗ್ರಹಿಸು.''

ಯಯಾತಿಯು ಹೀಗೆ ಹೇಳಲು ಪೂರುವು ಕೈಮುಗಿದು ಹೇಳಿದನು.

ಧನ್ಯೋऽಸ್ಮ್ಯನುಗೃಹೀತೋऽಸ್ಮಿ ಶಾಸನೇऽಸ್ಮಿ ತವ ಸ್ಥಿತಃ ॥7॥

''ತಂದೆಯೇ ! ನಿನ್ನ ಸೇವೆಮಾಡಲು ಅವಕಾಶ ಸಿಕ್ಕಿದ್ದಕ್ಕಾಗಿ ಧನ್ಯನಾಗಿದ್ದೇನೆ. ಇದು ನನ್ನ ಮೇಲೆ ನೀನು ತೋರಿಸಿರುವ ಅನುಗ್ರಹವೇ ಆಗಿದೆ. ನಿನ್ನ ಆಜ್ಞೆಯನ್ನು ಪರಿಪಾಲಿಸಲು ನಾನು ಸರ್ವದಾ ಸಿದ್ಧನಾಗಿಯೇ ಇದ್ದೇನೆ.''

ಪೂರುವಿನ ಮಾತನ್ನು ಕೇಳಿ ಯಯಾತಿಯು ಆನಂದತುಂದಿಲನಾದನು. ತನ್ನ ಮುದಿತನವನ್ನು ಪೂರುವಿನ ಯೌವನಕ್ಕೆ ಬದಲಾಯಿಸಿಕೊಂಡನು. ಅನಂತರ ಯಯಾತಿಯು ತರುಣನಾಗಿ ಸಾವಿರಾರು ಯಜ್ಞಗಳನ್ನು ಮಾಡುತ್ತಾ ಅನೇಕ ಸಾವಿರ ವರ್ಷಗಳವರೆಗೆ ರಾಜ್ಯಭಾರಮಾಡುತ್ತಿದ್ದನು. ದೀರ್ಘಕಾಲವು ಕಳೆದ ಮೇಲೆ ಯಯಾತಿಯು ಪೂರುವಿಗೆ ಹೇಳಿದನು :

ಆನಯಸ್ವ ಜರಾಂ ಪುತ್ರ ನ್ಯಾಸಂ ನಿರ್ಯಾತಯಸ್ವ ಮೇ ॥10॥

''ವತ್ಸ ! ನಾನು ನಿನ್ನಲ್ಲಿ ನ್ಯಾಸಭೂತವಾಗಿಟ್ಟಿರುವ ಮುದಿತನವನ್ನು ಹಿಂದಿರುಗಿಸು.

ನ್ಯಾಸಭೂತಾ ಮಯಾ ಪುತ್ರ ತ್ವಯಿ ಸಂಕ್ರಾಮಿತಾ ಜರಾ ।
ತಸ್ಮಾತ್ಪ್ರತಿಗ್ರಹೀಷ್ಯಾಮಿ ತಾಂ ಜರಾಂ ಮಾ ವ್ಯಥಾಂ ಕೃಥಾಃ ॥

ನನ್ನಲ್ಲಿದ್ದ ಮುದಿತನವನ್ನು ನ್ಯಾಸರೂಪವಾಗಿ ನಿನ್ನಲ್ಲಿಡುತ್ತಾ ಅದು ನಿನ್ನ ಶರೀರವನ್ನು ಸೇರುವಂತೆ ಮಾಡಿದ್ದೆನು. ಈಗ ನಾನು ನನ್ನ ಮುದಿತನವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ. ನನ್ನ ಮುಪ್ಪನ್ನು ಅನುಭವಿಸಿದ್ದಕ್ಕೆ ದುಃಖಪಡಬೇಡ.

ನೀನು ನನ್ನ ಆಜ್ಞೆಯನ್ನು ಪಾಲಿಸಿರುವೆ. ಇದರಿಂದ ನನಗೆ ಹೆಚ್ಚಿನ ಸಂತೋಷವಾಗಿದೆ. ಈಗ ನಾನು ಅತ್ಯಂತಪ್ರೀತಿಯಿಂದ ನಿನ್ನನ್ನು ರಾಜ ಪದವಿಯಲ್ಲಿ ಪಟ್ಟಾಭಿಷೇಕಮಾಡುತ್ತೇನೆ.''

ಯಯಾತಿಯು ಪೂರುವಿಗೆ ಹೀಗೆ ಹೇಳಿ ದೇವಯಾನಿಯ ಮಗನಾದ ಯದುವಿನ ವಿಷಯದಲ್ಲಿ ಪರಮಕ್ರುದ್ಧನಾಗಿ ಹೇಳಿದನು :

ರಾಕ್ಷಸಸ್ತ್ವಂ ಮಯಾ ಜಾತಃ ಕ್ಷತ್ರರೂಪೋ ದುರಾಸದಃ ।
ಪ್ರತಿಹಂಸಿ ಮಮಾಜ್ಞಾಂ ತ್ವಂ ಪ್ರಜಾರ್ಥೇ ವಿಫಲೋ ಭವ ॥14॥

''ದುರಾಸದನಾದ, ಕ್ಷತ್ರಿಯನ ರೂಪದಲ್ಲಿ ನನಗೆ ಹುಟ್ಟಿರುವ ನೀನು ನಿಶ್ಚಯವಾಗಿಯೂ ರಾಕ್ಷಸನೇ ಸರಿ. ನನ್ನ ಆಜ್ಞೆಯನ್ನು ನೀನು ಉಲ್ಲಂಘಿಸಿರುವೆಯಾದ್ದರಿಂದ ಪ್ರಜಾಪಾಲನೆಯ ಕಾರ್ಯವು ನಿನಗೆ ಲಭಿಸದಿರಲಿ. ನಿನ್ನ ವಂಶದವರಾರೂ ರಾಜರಾಗುವುದಿಲ್ಲ.

ಪಿತರಂ ಗುರುಭೂತಂ ಮಾಂ ಯಸ್ಮಾತ್ತ್ವಮವಮನ್ಯಸೇ ।
ರಾಕ್ಷಸಾನ್ಯಾತುಧಾನಾಂಸ್ತ್ವಂ ಜನಯಿಷ್ಯಸಿ ದಾರುಣಾನ್ ॥15॥

ತಂದೆಯೂ ಗುರುವೂ ಆಗಿರುವ ನನ್ನನ್ನು ನೀನು ಅಪಮಾನಗೊಳಿಸುತ್ತಿರುವೆಯಾದಕಾರಣ ಭಯಂಕರರಾದ ಯಾತುಧಾನರೂ ರಾಕ್ಷಸರೂ ನಿನಗೆ ಮಕ್ಕಳಾಗಿ ಜನಿಸಲಿ.

ನ ತು ಸೋಮಕುಲೋತ್ಪನ್ನೇ ವಂಶೇ ಸ್ಥಾಸ್ಯತಿ ದುರ್ಮತೇ ।
ವಂಶೋಽಪಿ ಭವತಸ್ತುಲ್ಯೋ ದುರ್ವಿನೀತೋ ಭವಿಷ್ಯತಿ ॥16॥

ಎಲೈ ದುರ್ಮತಿಯವನೇ! ಚಂದ್ರವಂಶದ ರಾಜರಾಗಿ ಅವರಲ್ಲಾರೂ ಉಳಿಯುವುದಿಲ್ಲ. ನಿನ್ನ ವಂಶದಲ್ಲಿ ಹುಟ್ಟಿದವರೆಲ್ಲರೂ ನಿನ್ನಂತೆಯೇ ಗುರು ಜನರಲ್ಲಿ ದುರ್ವಿನೀತರಾಗುವರು.''

ಲಕ್ಷ್ಮಣ! ಯದುವಿಗೆ ಹೀಗೆ ಶಾಪಕೊಟ್ಟನಂತರ ರಾಜರ್ಷಿಯಾದ ಯಯಾತಿಯು ಪೂರುವನ್ನು ಪಟ್ಟಾಭಿಷೇಕಮಾಡುವುದರ ಮೂಲಕ ಸಮ್ಮಾನಿಸಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು. ಹಲವಾರು ವರ್ಷಗಳು ಕಳೆದನಂತರ ಮರಣವನ್ನು ಹೊಂದಿ ಸ್ವರ್ಗವನ್ನು ಸೇರಿದನು.

ಬಳಿಕ ಮಹಾಯಶೋವಂತನಾದ ಪೂರುವು ಧರ್ಮದಿಂದ ಕೂಡಿದವನಾಗಿ ಕಾಶೀರಾಜ್ಯದ ರಾಜಧಾನಿಯಾದ ಪ್ರತಿಷ್ಠಾನಪುರದಲ್ಲಿ ರಾಜ್ಯಭಾರಮಾಡುತ್ತಿದ್ದನು.

ರಾಜವಂಶದಿಂದ ಬಹಿಷ್ಕೃತನಾದ ಯದುವು ಪಟ್ಟಣದಲ್ಲಿಯೂ, ದುರ್ಗಮವಾದ ಕ್ರೌಂಚವನದಲ್ಲಿಯೂ ಇರುತ್ತಾ ಸಾವಿರಾರು ಯಾತುಧಾನರಿಗೆ ಜನ್ಮವನ್ನಿತ್ತನು.

ಹೀಗೆ ಶುಕ್ರಾಚಾರ್ಯನು ಕೊಟ್ಟ ಶಾಪವನ್ನು ಯಯಾತಿಯು ಕ್ಷತ್ರಧರ್ಮಕ್ಕೆ ಅನುಸಾರವಾಗಿ ಸಹಿಸಿಕೊಂಡನು. ಆದರೆ ನಿಮಿಯು ವಸಿಷ್ಠರು ಕೊಟ್ಟ ಶಾಪವನ್ನು ಸಹಿಸದೇ ಕುಪಿತನಾಗಿ ಪ್ರತಿಶಾಪವನ್ನಿತ್ತನು.

ಸೌಮ್ಯನೇ! ಈ ಎಲ್ಲ ಪ್ರಸಂಗಗಳನ್ನೂ ನಾನು ನಿನಗೆ ಹೇಳಿದ್ದೇನೆ. ಧರ್ಮಗಳನ್ನು ಪರಿಪಾಲಿಸುವ ಸತ್ಪುರುಷರ ವಿಚಾರಧಾರೆಯನ್ನೇ ಅನುಸರಿಸಿ ನಾವೂ ನಡೆದುಕೊಳ್ಳೋಣ. ಇದರಿಂದಾಗಿ ನೃಗರಾಜನಿಗೆ ಒದಗಿದಂತಹ ದೋಷವು ನಮಗಾರಿಗೂ ಬರದಿರಲಿ.''

ಚಂದ್ರನಂತೆ ಮನೋಹರವಾದ ಮುಖದಿಂದ ಕಂಗೊಳಿಸುತ್ತಿದ್ದ ಶ್ರೀರಾಮನು ಲಕ್ಷ್ಮಣನೊಡನೆ ಹೀಗೆ ಹೇಳುತ್ತಿರಲು ಆಕಾಶದಲ್ಲಿ ನಕ್ಷತ್ರಗಳು ವಿರಳವಾಗಿ ಕಾಣಿಸಿಕೊಳ್ಳುತ್ತಿದ್ದುವು. ಸೂರ್ಯನ ಅರುಣಕಿರಣಗಳಿಂದ ರಂಜಿತವಾಗಿ ಕೆಂಪಾಗಿ ಕಾಣುತ್ತಿದ್ದ ಪೂರ್ವದಿಗಂಗನೆಯು ಕುಸುಮರಸದಲ್ಲಿ ನೆನೆಸಿದ ಸೀರೆಯನ್ನು ಧರಿಸಿರುವಂತೆಯೇ ಕಾಣುತ್ತಿದ್ದಳು.

59ನೆಯ ಸರ್ಗವು ಮುಗಿಯಿತು.

ಶ್ರೀರಾಮನ ಬಾಗಿಲ ಬಳಿಗೆ ನಾಯೊಂದು ಬಂದುದು : ಅದನ್ನು ಸಭಾಮಂದಿರಕ್ಕೆ ಕರೆತರಲು ಶ್ರೀರಾಮನ ಆದೇಶ

ತತಃ ಪ್ರಭಾತೇ ವಿಮಲೇ ಕೃತ್ವಾ ಪೌರ್ವಾಹ್ಣಿಕೀಂ ಕ್ರಿಯಾಮ್ ।
ಧರ್ಮಾಸನಗತೋ ರಾಜಾ ರಾಮೋ ರಾಜೀವಲೋಚನಃ ॥1॥
ರಾಜಧರ್ಮಾನವೇಕ್ಷನ್ವೈ ಬ್ರಾಹ್ಮಣೈರ್ನೈಗಮೈಃ ಸಹ ।
ಪುರೋಧಸಾ ವಸಿಷ್ಠೇನ ಋಷಿಣಾ ಕಶ್ಯಪೇನ ಚ ॥2॥

ಬಳಿಕ ನಿರ್ಮಲವಾದ ಪ್ರಾತಃಕಾಲದಲ್ಲಿ ಶ್ರೀರಾಮನು ಪ್ರಾತಃಕಾಲೋಚಿತವಾದ ಸಂಧ್ಯಾವಂದನಾದಿ ಕರ್ಮಗಳನ್ನು ಮುಗಿಸಿ ಪ್ರಜೆಗಳ ವಾದ–ವಿವಾದಗಳನ್ನು ಕೇಳಿ ಧರ್ಮಸಮ್ಮತವಾದ ರೀತಿಯಲ್ಲಿ ನಿರ್ಣಯಗಳನ್ನು ಕೊಡುವ ಸಲುವಾಗಿ ಧರ್ಮಸಿಂಹಾಸನದಲ್ಲಿ ಕುಳಿತನು. ರಾಜೀವಲೋಚನನಾದ ಶ್ರೀರಾಮನು ರಾಜಧರ್ಮಗಳನ್ನೇ ವಿಚಾರಮಾಡುತ್ತಾ ವೇದವಿದರಾದ ಬ್ರಾಹ್ಮಣರೊಡನೆಯೂ, ಪುರೋಹಿತರಾದ ವಸಿಷ್ಠರೊಡನೆಯೂ, ಮಹರ್ಷಿಗಳಾದ ಕಶ್ಯಪರೊಡನೆಯೂ ಸಭಾಭವನದಲ್ಲಿ ಕುಳಿತಿದ್ದನು.

ರಾಜ್ಯವ್ಯವಹಾರಗಳನ್ನು ತಿಳಿದಿದ್ದ ಮಂತ್ರಿಗಳಿಂದಲೂ, ಧರ್ಮಶಾಸ್ತ್ರಗಳನ್ನು ತಿಳಿದ ಅಧ್ಯಾಪಕರಿಂದಲೂ, ನೀತಿಶಾಸ್ತ್ರವನ್ನು ತಿಳಿದವರಿಂದಲೂ, ರಾಜರಿಂದಲೂ ಮತ್ತು ಇತರ ಸಭಿಕರಿಂದಲೂ ಸಭಾಭವನವು ತುಂಬಿ ಹೋಗಿದ್ದಿತು. ಅನಾಯಾಸವಾಗಿ ಕಷ್ಟಸಾಧ್ಯವಾದ ಕಾರ್ಯಗಳನ್ನು ಮಾಡುವ, ರಾಜಶ್ರೇಷ್ಠನಾದ ಶ್ರೀರಾಮನ ಆ ಮಹಾಸಭೆಯು ಇಂದ್ರ–ಯಮ–ವರುಣರ ಸಭಾಭವನಗಳಂತೆಯೇ ಕಂಗೊಳಿಸುತ್ತಿದ್ದಿತು.

★ ರಾಮಾಯಣದಲ್ಲಿ ಪ್ರಕ್ಷಿಪ್ತ ಸರ್ಗಗಳು ಅನೇಕವಿವೆ. ಅವುಗಳನ್ನು ಪ್ರಕ್ಷಿಪ್ತಗಳೆಂದೇ ಕರೆಯುವುದು ಒಂದು ವಿಶೇಷ. ಸಾಮಾನ್ಯವಾಗಿ ಪ್ರಕ್ಷಿಪ್ತಸರ್ಗಗಳಿಗೆ ವ್ಯಾಖ್ಯಾನಕಾರರು ವ್ಯಾಖ್ಯೆಮಾಡುವುದಿಲ್ಲ. ಆದರೆ ಪ್ರಕ್ಷಿಪ್ತಸರ್ಗಗಳಲ್ಲಿ ಬರುವ ಕೆಲವು ಪ್ರಕರಣಗಳು ಲೋಕವಿಖ್ಯಾತವಾಗಿವೆ. ಇಲ್ಲಿ ಬಂದಿರುವ ಕಥೆಯೂ ಲೋಕ ಪ್ರಸಿದ್ಧವಾಗಿದೆ. ಆದುದರಿಂದ ನಾವೂ ಈ ಪ್ರಕ್ಷಿಪ್ತ ಸರ್ಗಗಳನ್ನು ಸೇರಿಸಿದ್ದೇವೆ.

ಬಳಿಕ ಸಿಂಹಾಸನದಲ್ಲಿ ಕುಳಿತಿದ್ದ ಶ್ರೀರಾಮನು ಶುಭಲಕ್ಷಣಸಂಪನ್ನನಾಗಿದ್ದ ಲಕ್ಷ್ಮಣನಿಗೆ ಹೇಳಿದನು :

''ಸುಮಿತ್ರೆಗೆ ಆನಂದವನ್ನು ಹೆಚ್ಚಿಸುವವನೇ ! ಮಹಾಬಾಹುವೇ ! ಲಕ್ಷ್ಮಣ! ನೀನೀಗಲೇ ಹೊರಬಾಗಿಲಿಗೆ ಹೋಗಿ ಕಾರ್ಯಾರ್ಥಿಗಳಾಗಿ ಯಾರು ಬಂದಿರುವರೆಂಬುದನ್ನು ತಿಳಿದು ಒಬ್ಬೊಬ್ಬರನ್ನಾಗಿ ಒಳಕ್ಕೆ ಕರೆತರಲು ಪ್ರಾರಂಭಿಸು.''

ಶ್ರೀರಾಮನು ಹೇಳಿದುದನ್ನು ಕೇಳಿ ಶುಭಲಕ್ಷಣಸಂಪನ್ನನಾದ ಲಕ್ಷ್ಮಣನು ಹೊರಬಾಗಿಲಿಗೆ ಹೋಗಿ ಕಾರ್ಯಾರ್ಥಿಗಳನ್ನು ತಾನೇ ಕೂಗಲು ಪ್ರಾರಂಭಿಸಿದನು. ಆದರೆ ಯಾರೊಬ್ಬರೂ ತನಗೆ ಇಂತಹ ಕಾರ್ಯವಾಗ ಬೇಕಾಗಿದೆಯೆಂದು ಹೇಳಲು ಮುಂದೆ ಬರಲಿಲ್ಲ.

(ಇದಕ್ಕೆ ಕಾರಣವೇನೆಂದರೆ : ರಾಮರಾಜ್ಯದಲ್ಲಿ ಪ್ರಜೆಗಳಿಗೆ ಯಾವ ವಿಧವಾದ ಕಷ್ಟಗಳೂ ಇರಲಿಲ್ಲ.)

ನಾಧಯೋ ವ್ಯಾಧಯಶ್ಚೈವ ರಾಮೇ ರಾಜ್ಯಂ ಪ್ರಶಾಸತಿ ।
ಪಕ್ವಸಸ್ಯಾ ವಸುಮತೀ ಸರ್ವೌಷಧಿಸಮನ್ವಿತಾ ॥8॥

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ಪ್ರಜೆಗಳಿಗೆ ಶಾರೀರಿಕವಾದ ರೋಗಗಳಾಗಲೀ ಮಾನಸಿಕವಾದ ರೋಗಗಳಾಗಲೀ ಇರಲಿಲ್ಲ. ಭೂಮಿಯಲ್ಲಿ ಎಲ್ಲ ಪ್ರಕಾರವಾದ ಬೆಳೆಗಳೂ ಬೆಳೆಯುತ್ತಿದ್ದುವು. ಭೂಮಿಯು ಯಾವಾಗಲೂ ಸಸ್ಯಸಮೃದ್ಧಿಯಿಂದ ಶೋಭಿಸುತ್ತಿದ್ದಿತು.

ನ ಬಾಲೋ ಮ್ರಿಯತೇ ತತ್ರ ನ ಯುವಾ ನ ಚ ಮಧ್ಯಮಃ ।
ಧರ್ಮೇಣ ಶಾಸಿತಂ ಸರ್ವಂ ನ ಚ ಬಾಧಾ ವಿಧೀಯತೇ ॥9॥

ಶ್ರೀರಾಮನ ರಾಜ್ಯಾಡಳಿತದ ಕಾಲದಲ್ಲಿ ಬಾಲಕನಾಗಲೀ, ಯುವಕನಾಗಲೀ, ಮಧ್ಯಮವಯಸ್ಸಿನವನಾಗಲೀ – ಮರಣ ಹೊಂದುತ್ತಿರಲಿಲ್ಲ. ಶಾಸನವೆಲ್ಲವೂ ಧರ್ಮಮೂಲವಾಗಿಯೇ ಇರುತ್ತಿದ್ದುವು. ಯಾರಿಗೂ ಯಾವ ವಿಧವಾದ ಬಾಧೆಯೂ ಇರುತ್ತಿರಲಿಲ್ಲ.

ದೃಶ್ಯತೇ ನ ಚ ಕಾರ್ಯಾರ್ಥೀ ರಾಮೇ ರಾಜ್ಯಂ ಪ್ರಶಾಸತಿ ॥10॥

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ತನಗೆ ಇಂತಹ ಕಾರ್ಯವಾಗ ಬೇಕೆಂದು ಕೇಳುವವನೇ ಇರುತ್ತಿರಲಿಲ್ಲ.

ಲಕ್ಷ್ಮಣನು ಕಾರ್ಯಾರ್ಥಿಗಳಿಗಾಗಿ ಬಹಳ ಹೊತ್ತು ಕಾದಿದ್ದು ಯಾರೂ ಸಿಕ್ಕದಿರಲು ಶ್ರೀರಾಮನ ಬಳಿಗೆ ಬಂದು ಕೈಜೋಡಿಸಿಕೊಂಡು ವಿಷಯ ವನ್ನು ತಿಳಿಸಿದನು.

ಪ್ರಸನ್ನಚಿತ್ತನಾದ ಶ್ರೀರಾಮನು ಪುನಃ ಲಕ್ಷ್ಮಣನಿಗೆ ಹೇಳಿದನು :

ಭೂಯ ಏವ ತು ಗಚ್ಛ ತ್ವಂ ಕಾರ್ಯಿಣಃ ಪ್ರವಿಚಾರಯ ॥11॥

''ಲಕ್ಷ್ಮಣ ! ನೀನು ಪುನಃ ಹೊರಬಾಗಿಲಿಗೆ ಹೋಗಿ ಕಾರ್ಯಾರ್ಥಿ ಗಳು ಯಾರಾದರೂ ಇರುವರೇ ಎಂಬುದನ್ನು ವಿಚಾರಿಸು.

ಸಮ್ಯಕ್ಪ್ರಣೀತಯಾ ನೀತ್ಯಾ ನಾಧರ್ಮೋ ವಿದ್ಯತೇ ಕ್ವಚಿತ್ ।
ತಸ್ಮಾದ್ರಾಜಭಯಾತ್ಸರ್ವೇ ರಕ್ಷನ್ತೀಹ ಪರಸ್ಪರಮ್ ॥12॥

ಉತ್ತಮವಾದ ನೀತಿಯನ್ನು ಚೆನ್ನಾಗಿ ಪ್ರಯೋಗಮಾಡುವುದರಿಂದ ರಾಜ್ಯದಲ್ಲಿ ಅಧರ್ಮವೆಂಬುದೇ ಇರುವುದಿಲ್ಲ. ಸಮಸ್ತ ಪ್ರಜೆಗಳೂ ರಾಜನ ಭಯದಿಂದಾಗಿ ಒಬ್ಬರನ್ನೊಬ್ಬರು ರಕ್ಷಣೆಮಾಡಿಕೊಳ್ಳುತ್ತಿರುತ್ತಾರೆ.

ಬಾಣಾ ಇವ ಮಯಾ ಮುಕ್ತಾ ಇಹ ರಕ್ಷನ್ತಿ ಮೇ ಪ್ರಜಾಃ ।
ತಥಾಪಿ ತ್ವಂ ಮಹಾಬಾಹೋ ಪ್ರಜಾ ರಕ್ಷಸ್ವ ತತ್ಪರಃ ॥13॥

ರಾಜಸೇವಕರಾದರೋ ನಾನು ಬಿಡುವ ಬಾಣಗಳಂತೆಯೇ ಪ್ರಜೆಗಳನ್ನು ರಕ್ಷಿಸುವುದು ನಿಶ್ಚಯ. ಆದರೂ ನೀನು ಪ್ರಜಾಪಾಲನತತ್ಪರನಾಗಿದ್ದು ಅವರೆಲ್ಲರನ್ನೂ ಸಂರಕ್ಷಿಸು.''

ಶ್ರೀರಾಮನು ಹೀಗೆ ಹೇಳಲು ಪುನಃ ಲಕ್ಷ್ಮಣನು ಅರಮನೆಯಿಂದ ಹೊರಟು ಹೊರಬಾಗಿಲ ಬಳಿಗೆ ಹೋದನು. ಆ ಸಮಯದಲ್ಲಿ ನಾಯಿ ಯೊಂದು ಬಾಗಿಲಿನ ಸಮೀಪದಲ್ಲಿ ನಿಂತಿರುವುದನ್ನು ಲಕ್ಷ್ಮಣನು ನೋಡಿದನು. ಅದು ಲಕ್ಷ್ಮಣನನ್ನೇ ಮತ್ತೆ–ಮತ್ತೆ ನೋಡುತ್ತಾ ಬೊಗಳುತ್ತಿದ್ದಿತು. ಅದನ್ನು ನೋಡಿ ಲಕ್ಷ್ಮಣನು ಪ್ರಶ್ನಿಸಿದನು :

ಕಿಂ ತೇ ಕಾರ್ಯಂ ಮಹಾಭಾಗ ಬ್ರೂಹಿ ವಿಸ್ರಬ್ಧಮಾನಸಃ ॥16॥

''ಮಹಾಭಾಗನೇ! ನಿನಗೆ ಯಾವ ಕಾರ್ಯವಾಗಬೇಕಾಗಿದೆಯೆಂಬುದನ್ನು ಸ್ವಲ್ಪವೂ ಭಯಪಡದೇ ಹೇಳು.''

ಲಕ್ಷ್ಮಣನ ಮಾತನ್ನು ಕೇಳಿ ಸಾರಮೇಯವು (ಶ್ವಾನವು) ಹೇಳಿತು :

ಸರ್ವಭೂತಶರಣ್ಯಾಯ ರಾಮಾಯಾಕ್ಲಿಷ್ಟಕರ್ಮಣೇ ।
ಭಯೇಷ್ವಭಯದಾತ್ರೇ ಚ ತಸ್ಮೈ ವಕ್ತುಂ ಸಮುತ್ಸಹೇ ॥17॥

''ಸಮಸ್ತಪ್ರಾಣಿಗಳಿಗೂ ಶರಣ್ಯನಾದ , ಯಾವ ವಿಧವಾದ ಕ್ಲೇಶವೂ ಇಲ್ಲದೆ ಕಾರ್ಯಗಳನ್ನು ಮಾಡುವ, ಭಯದ ಸಮಯಗಳಲ್ಲಿ ಭಕ್ತರಿಗೆ ಅಭಯವನ್ನು ನೀಡುವ ಶ್ರೀರಾಮನ ಎದುರಿನಲ್ಲಿಯೇ ನಾನು ನನಗೆ ಆಗಬೇಕಾಗಿರುವ ಕಾರ್ಯವನ್ನು ನಿವೇದಿಸಿಕೊಳ್ಳುತ್ತೇನೆ.''

ನಾಯಿಯ ಈ ಮಾತನ್ನು ಕೇಳಿ ಲಕ್ಷ್ಮಣನು ಶ್ರೀರಾಮನಿಗೆ ವಿಷಯವನ್ನು ತಿಳಿಯಪಡಿಸಲು ಶುಭಾವಹವಾದ ರಾಜಸಭೆಯನ್ನು ಪ್ರವೇಶಿಸಿದನು.

ಶ್ರೀರಾಮನಿಗೆ ಆ ನಾಯಿ ಹೇಳಿದುದನ್ನು ನಿವೇದಿಸಿ ಅವನಿಂದ ಅನುಜ್ಞೆಯನ್ನು ಪಡೆದು ಪುನಃ ಹೊರಬಾಗಿಲಿನ ಬಳಿಗೆ ಬಂದು ಅಲ್ಲಿ ನಿಂತಿದ್ದ ನಾಯಿಗೆ ಹೇಳಿದನು :

''ಎಲೈ ಸಾರಮೇಯವೇ ! ನೀನು ಹೇಳುವುದೇನಾದರೂ ಇದ್ದರೆ ರಾಜನ ಬಳಿಗೇ ಬಂದು ಹೇಳಬಹುದು.''

ಲಕ್ಷ್ಮಣನ ಮಾತನ್ನು ಕೇಳಿ ಸಾರಮೇಯವು ಪುನಃ ಹೇಳಿತು :

ದೇವಾಗಾರೇ ನೃಪಾಗಾರೇ ದ್ವಿಜವೇಶ್ಮಸು ವೈ ತಥಾ ।
ವಹ್ನಿಃ ಶತಕ್ರತುಶ್ಚೈವ ಸೂರ್ಯೋ ವಾಯುಶ್ಚ ತಿಷ್ಠತಿ ।
ನಾತ್ರ ಯೋಗ್ಯಾಸ್ತು ಸೌಮಿತ್ರೇ ಯೋನೀನಾಮಧಮಾ ವಯಮ್ ॥

''ಲಕ್ಷ್ಮಣ ! ದೇವಸ್ಥಾನದಲ್ಲಿ, ರಾಜಭವನದಲ್ಲಿ, ಬ್ರಾಹ್ಮಣರ ಮನೆಗಳಲ್ಲಿ ಅಗ್ನೀಂದ್ರ–ಸೂರ್ಯ–ವಾಯುಗಳ ಸಾನ್ನಿಧ್ಯವು ಸರ್ವಕಾಲದಲ್ಲಿಯೂ ಇರುತ್ತದೆ. ಆದುದರಿಂದ ಅಧಮಯೋನಿಗಳಲ್ಲಿ ಹುಟ್ಟಿರುವ ನಾವು ಅಂತಹ ಸ್ಥಳಗಳಿಗೆ ಪ್ರವೇಶಿಸಲು ಯೋಗ್ಯರಲ್ಲ.

ಪ್ರವೇಷ್ಟುಂ ನಾತ್ರ ಶಕ್ಷ್ಯಾಮಿ ಧರ್ಮೋ ವಿಗ್ರಹವಾನ್ನೃಪಃ।
ಸತ್ಯವಾದೀ ರಣಪಟುಃ ಸರ್ವಸತ್ತ್ವಹಿತೇ ರತಃ ॥22॥

ಶ್ರೀರಾಮನು ಧರ್ಮದ ಸಾಕಾರಮೂರ್ತಿಯು. ಸತ್ಯವಾದಿಯು ಸಂಗ್ರಾಮಕುಶಲನು. ಸಮಸ್ತಪ್ರಾಣಿಗಳ ಹಿತದಲ್ಲಿಯೇ ಸರ್ವದಾ ಆಸಕ್ತನಾಗಿರುವವನು. ಅಂತಹವನ ಭವನವನ್ನು ನಾನು ಪ್ರವೇಶಿಸಲಾರೆನು.

ಷಾಡ್ಗುಣ್ಯಸ್ಯ ಪದಂ ವೇತ್ತಿ ನೀತಿಕರ್ತಾ ಸ ರಾಘವಃ।
ಸರ್ವಜ್ಞಃ ಸರ್ವದರ್ಶೀ ಚ ರಾಮೋ ರಮಯತಾಂ ವರಃ ॥23॥

ಶ್ರೀರಾಮನು ಸಂಧಿ-ವಿಗ್ರಹಾದಿ ಆರು ಗುಣಗಳ ಪ್ರಯೋಗಕಾಲ ಗಳನ್ನು ಚೆನ್ನಾಗಿ ತಿಳಿದಿರತಕ್ಕವನು. ನೀತಿಶಾಸ್ತ್ರವನ್ನೇ ರಚಿಸುವ ಸಾಮರ್ಥ್ಯ ವುಳ್ಳವನು. ಸರ್ವಜ್ಞನು. ಅರಮನೆಯಲ್ಲೇ ಇದ್ದರೂ ದೇಶದ ಆಗು- ಹೋಗುಗಳನ್ನು ಗೂಢಚಾರರ ಮೂಲಕ ಸರ್ವದಾ ನೋಡುತ್ತಿರುವವನು. ಇತರರ ಮನಸ್ಸನ್ನು ಸಂತೋಷಗೊಳಿಸುವವರಲ್ಲಿ ಶ್ರೇಷ್ಠನು.

ಸ ಸೋಮಃ ಸ ಚ ಮೃತ್ಯುಶ್ಚ ಸ ಯಮೋ ಧನದಸ್ತಥಾ।
ವಹ್ನಿಃ ಶತಕ್ರತುಶ್ಚೈವ ಸೂರ್ಯೋ ವೈ ವರುಣಸ್ತಥಾ ॥24॥

ಶ್ರೀರಾಮನೇ ಸೋಮನು ; ಸೋಮನಂತೆ ಪ್ರಿಯದರ್ಶನನು. ಶ್ರೀರಾಮನೇ ಮೃತ್ಯುವು ; ಶತ್ರುಗಳಿಗೆ ಮೃತ್ಯುಪ್ರಾಯನು. ಶ್ರೀರಾಮನೇ ಯಮಧರ್ಮನು ; ನ್ಯಾಯನಿರ್ಣಯದಲ್ಲಿ ಯಮಧರ್ಮನಂತೆ ನಿಷ್ಪಕ್ಷಪಾತಿಯು. ಅವನೇ ಧನದನು; ಕುಬೇರನಂತೆ ಸಕಲೈಶ್ವರ್ಯಸಂಪನ್ನನು. ಅವನೇ ಅಗ್ನಿಯು; ಅಗ್ನಿಯಂತೆ ಮಹಾತೇಜಸ್ವಿಯು. ಅವನೇ ಶತಕ್ರತುವು; ಇಂದ್ರನಂತೆ ನೂರಾರು ಅಶ್ವಮೇಧಯಾಗಗಳನ್ನು ಮಾಡಿದವನು. ಅವನೇ ಸೂರ್ಯನು; ಅಜ್ಞಾನಧ್ವಂಸಕನು. ಅವನೇ ವರುಣನು; ವರುಣನಂತೆ ಜಲಜಂತುಗಳಿಗೂ ಒಡೆಯನಾಗಿರತಕ್ಕವನು.

ಲಕ್ಷ್ಮಣ ! ರಾಘವನಿಗೆ ನೀನು ಹೇಳು ; ಅವನು ಸಮಸ್ತಪ್ರಜೆಗಳ ಪಾಲಕನಾಗಿದ್ದಾನೆ. ಅವನ ಆಜ್ಞೆಯಿಲ್ಲದೇ ನಾನು ರಾಜಭವನವನ್ನು ಪ್ರವೇಶಿಸಲು ಇಷ್ಟಪಡುವುದಿಲ್ಲ.''

ನಾಯಿಯ ಮಾತನ್ನು ಕೇಳಿ ಮಹಾದ್ಯುತಿಯಾದ, ಮಹಾಭಾಗ್ಯಶಾಲಿಯಾದ ಲಕ್ಷ್ಮಣನು ದಯಾಪರನಾಗಿ ಪುನಃ ರಾಜಭವನಕ್ಕೆ ಹೋಗಿ ಶ್ರೀರಾಮನಿಗೆ ಹೇಳಿದನು :

''ಕೌಸಲ್ಯೆಯ ಆನಂದವನ್ನು ಹೆಚ್ಚಿಸುವವನೇ! ರಾಘವ ! ನನ್ನ ಈ ವಿಜ್ಞಾಪನೆಯನ್ನು ಕೇಳು. ನಿನ್ನ ಆಜ್ಞೆಯಂತೆ ನಾನು ಹೊರಬಾಗಿಲಿಗೆ ಹೋಗಿ 'ಕಾರ್ಯಾರ್ಥಿಗಳು ಯಾರಾದರೂ ಇರುವಿರಾ ?' –ಎಂದು ಕೂಗಿದೆನು. ನಾಯಿಯೊಂದು ಕಾರ್ಯಾರ್ಥವಾಗಿ ಬಾಗಿಲಿನಲ್ಲಿ ನಿಂತಿದೆ.''

ಲಕ್ಷ್ಮಣನ ಮಾತನ್ನು ಕೇಳುತ್ತಲೇ ಶ್ರೀರಾಮನು ಹೇಳಿದನು:

ಸಂಪ್ರವೇಶಯ ವೈ ಕ್ಷಿಪ್ರಂ ಕಾರ್ಯಾರ್ಥೀ ಯೋಽತ್ರ ತಿಷ್ಠತಿ ॥

''ಲಕ್ಷ್ಮಣ ! ಕಾರ್ಯಾರ್ಥಿಯು ಯಾವನೇ ಆಗಿರಲಿ – ಒಡನೆಯೇ ಬಾಗಿಲಿನಲ್ಲಿ ನಿಂತಿರುವ ಅವನನ್ನು ಒಳಕ್ಕೆ ಕರೆದುಕೊಂಡು ಬಾ.''

1ನೆಯ ಪ್ರಕ್ಷಿಪ್ತ ಸರ್ಗವು ಮುಗಿಯಿತು.

ಉತ್ತರಕಾಂಡ ಪ್ರಕ್ಷಿಪ್ತ ಸರ್ಗ -2

ನಾಯಿಯ ಪರವಾಗಿ ಶ್ರೀರಾಮನ ನ್ಯಾಯನಿರ್ಣಯ : ಅದರ ಇಚ್ಛೆಯಂತೆ ಅದನ್ನು ಪ್ರಹರಿಸಿದವನಿಗೆ ಮಠಾಧಿಪತ್ಯವನ್ನಿತ್ತುದು : ಮಠಾಧಿಪತ್ಯದಲ್ಲಿರುವ ದೋಷವನ್ನು ವಿವರಿಸಿ ಹೇಳಿದುದು

ಶ್ರುತ್ವಾ ರಾಮಸ್ಯ ವಚನಂ ಲಕ್ಷ್ಮಣಸ್ತ್ವರಿತಸ್ತದಾ ।
ಶ್ವಾನಮಾಹೂಯ ಮತಿಮಾನ್ರಾಘವಾಯ ನ್ಯವೇದಯತ್ ॥ 1॥

ಲಕ್ಷ್ಮಣನು ಶ್ರೀರಾಮನ ಮಾತನ್ನು ಕೇಳಿ ಅವಸರದಿಂದ ಬಾಗಿಲಲ್ಲಿ ನಿಂತಿದ್ದ ನಾಯಿಯನ್ನು ಸಭಾಭವನಕ್ಕೆ ಕರೆದೊಯ್ದು ಸಾರಮೇಯವು ಬಂದಿರುವ ವಾರ್ತೆಯನ್ನು ಶ್ರೀರಾಮನಿಗೆ ನಿವೇದಿಸಿದನು. ಒಳಕ್ಕೆ ಬಂದ ನಾಯಿಗೆ ಶ್ರೀರಾಮನು ಹೇಳಿದನು:

''ಸಾರಮೇಯವೇ! ನೀನು ಯಾವ ವಿಷಯವನ್ನು ಹೇಳಬೇಕೆಂದಿರುವೆಯೋ ಅದನ್ನು ಯಾವ ಭಯವೂ ಇಲ್ಲದೇ ನನ್ನ ಮುಂದೆ ಹೇಳಬಹುದು.''

ಆ ಸಮಯದಲ್ಲಿ ನಾಯಿಯ ತಲೆಯು ಒಡೆದುಹೋಗಿದ್ದಿತು. ಸಿಂಹಾಸನದಲ್ಲಿ ಕುಳಿತಿದ್ದ ಶ್ರೀರಾಮನನ್ನು ನೋಡಿ ಹೇಳತೊಡಗಿತು:

ರಾಜೈವ ಕರ್ತಾ ಭೂತಾನಾಂ ರಾಜಾ ಚೈವ ವಿನಾಯಕಃ ।
ರಾಜಾ ಸುಪ್ತೇಷು ಜಾಗರ್ತಿ ರಾಜಾ ಪಾಲಯತಿ ಪ್ರಜಾಃ ॥4॥

''ಮಹಾರಾಜ! ರಾಜನೇ ಸಮಸ್ತಪ್ರಾಣಿಗಳ ಸೃಷ್ಟಿಕರ್ತನೂ ಮತ್ತು ನಾಯಕನೂ ಆಗಿದ್ದಾನೆ. ಸಮಸ್ತಪ್ರಾಣಿಗಳೂ ನಿದ್ದೆಮಾಡುತ್ತಿರುವಾಗ ಪ್ರಜೆಗಳ ರಕ್ಷಣೆಯಲ್ಲಿ ನಿರತನಾದ ರಾಜನು ಎಚ್ಚರಗೊಂಡಿದ್ದು ಸಮಸ್ತಪ್ರಜೆಗಳನ್ನೂ ಪಾಲನೆಮಾಡುತ್ತಾನೆ.

ನೀತ್ಯಾ ಸುನೀತಯಾ ರಾಜಾ ಧರ್ಮಂ ರಕ್ಷತಿ ರಕ್ಷಿತಾ ।
ಯದಾ ನ ಪಾಲಯೇದ್ರಾಜಾ ಕ್ಷಿಪ್ರಂ ನಶ್ಯನ್ತಿ ವೈ ಪ್ರಜಾಃ ॥ 5॥

ರಾಜನು ಸರ್ವರಕ್ಷಕನು. ಉತ್ತಮವಾದ ನೀತಿಯ ಮೂಲಕ ಸಮಸ್ತರನ್ನೂ ರಕ್ಷಿಸುತ್ತಾನೆ. ರಾಜನು ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸದಿದ್ದರೆ ಪ್ರಜೆಗಳೆಲ್ಲರೂ ನಾಶಹೊಂದುತ್ತಾರೆ.

ರಾಜಾ ಕರ್ತಾ ಚ ಗೋಪ್ತಾ ಚ ಸರ್ವಸ್ಯ ಜಗತಃ ಪಿತಾ ।
ರಾಜಾ ಕಾಲೋ ಯುಗಂ ಚೈವ ರಾಜಾ ಸರ್ವಮಿದಂ ಜಗತ್ ॥6॥

ರಾಜನೇ ಕರ್ತೃವು. ರಾಜನೇ ರಕ್ಷಕನು. ಸಮಸ್ತ ಜಗತ್ತುಗಳಿಗೂ ಅವನೇ ತಂದೆಯು. ರಾಜನು ಕಾಲವೂ ಯುಗವೂ ಆಗಿದ್ದಾನೆ. ಸಮಸ್ತ ಜಗತ್ತೂ ರಾಜಮಯವೇ ಆಗಿದೆ.

ಧಾರಣಾದ್ಧರ್ಮ ಇತ್ಯಾಹುರ್ಧರ್ಮೇಣ ವಿಧೃತಾಃ ಪ್ರಜಾಃ ।
ಯಸ್ಮಾದ್ಧಾರಯತೇ ಸರ್ವಂ ತ್ರೈಲೋಕ್ಯಂ ಸಚರಾಚರಮ್ ॥7॥

ಸಂಪೂರ್ಣಜಗತ್ತನ್ನೂ ಧರಿಸಿರುವುದರಿಂದಲೇ ಧರ್ಮವೆಂಬ ಹೆಸರು ಬಂದಿದೆ. ಧರ್ಮದಿಂದಲೇ ಸಮಸ್ತ ಪ್ರಜೆಗಳೂ ಧರಿಸಲ್ಪಟ್ಟಿದ್ದಾರೆ. ಚರಾಚರಗಳಿಂದ ಕೂಡಿರುವ ಮೂರು ಲೋಕಗಳನ್ನೂ ಧರ್ಮವು ಧರಿಸಿದೆ.

ಧಾರಣಾದ್ವಿದ್ವಿಷಾಂ ಚೈವ ಧರ್ಮೇಣಾರಞ್ಜಯನ್ಪ್ರಜಾಃ।
ತಸ್ಮಾದ್ಧಾರಣಮಿತ್ಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥8॥

ಶತ್ರುಗಳನ್ನು ಧಾರಣೆಮಾಡುವುದರಿಂದಲೂ (ದುಷ್ಟರನ್ನು ಧರ್ಮ ಮಾರ್ಗದಲ್ಲಿ ಪ್ರವೃತ್ತರನ್ನಾಗಿ ಮಾಡುವುದರಿಂದಲೂ), ಧರ್ಮದಿಂದ ಪ್ರಜೆಗಳನ್ನು ಅನುರಂಜಿಸುವುದರಿಂದಲೂ – ಶಾಸನರೂಪವಾದ ಕರ್ಮಕ್ಕೆ ಧಾರಣ ಎಂಬ ಹೆಸರು ಬಂದಿದೆ. ಆ ಧಾರಣವೇ ಧರ್ಮ. ಇದು ಶಾಸ್ತ್ರಗಳ ಸಿದ್ಧಾಂತವಾಗಿದೆ.

ಏಷ ರಾಜನ್ಪರೋ ಧರ್ಮಃ ಫಲವಾನ್ಪ್ರೇತ್ಯ ರಾಘವ।
ನ ಹಿ ಧರ್ಮಾದ್ಭವೇತ್ಕಿಂಚಿದ್ದುಷ್ಪ್ರಾಪಮಿತಿ ಮೇ ಮತಿಃ ॥9॥

ಪ್ರಜಾಪಾಲನರೂಪವಾದ ಈ ಶ್ರೇಷ್ಠವಾದ ಧರ್ಮವೇ ರಾಜನಿಗೆ ಪರಲೋಕದಲ್ಲಿ ಉತ್ತಮಫಲಗಳನ್ನು ನೀಡುತ್ತದೆ. ಧರ್ಮದಿಂದ ಸಾಧಿಸಲಾಗದ ಕಾರ್ಯವೇ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.

ದಾನಂ ದಯಾ ಸತಾಂ ಪೂಜಾ ವ್ಯವಹಾರೇಷು ಚಾರ್ಜವಮ್।
ಏಷ ರಾಮ ಪರೋ ಧರ್ಮೋ ರಕ್ಷಣಾತ್ಪ್ರೇತ್ಯ ಚೇಹ ಚ ॥10॥

ದಾನ, ದಯೆ, ಸತ್ಪುರುಷರ ಸತ್ಕಾರ, ವ್ಯವಹಾರಗಳಲ್ಲಿ ಸರಳತೆ ಅಥವಾ ಋಜುತ್ವ – ಇವೆಲ್ಲವೂ ಶ್ರೇಷ್ಠವಾದ ಧರ್ಮಗಳಾಗಿವೆ. ಪ್ರಜೆಗಳ ರಕ್ಷಣೆಯಿಂದ ಲಭಿಸುವ ಶ್ರೇಷ್ಠವಾದ ಧರ್ಮವು ಇಹ –ಪರಗಳೆರಡರಲ್ಲಿಯೂ ಸುಖದಾಯಕವಾಗುತ್ತದೆ.

ತ್ವಂ ಪ್ರಮಾಣಂ ಪ್ರಮಾಣಾನಾಮಸಿ ರಾಘವ ಸುವ್ರತ।
ವಿದಿತಶ್ಚೈವ ತೇ ಧರ್ಮಃ ಸದ್ಭಿರಾಚರಿತಸ್ತು ವೈ ॥11॥

ಉತ್ತಮವಾದ ವ್ರತಗಳನ್ನು ಪರಿಪಾಲಿಸುವವನೇ! ರಾಘವ! ನೀನು ಸಮಸ್ತ ಪ್ರಮಾಣಗಳಿಗೂ ಪ್ರಮಾಣಭೂತನಾಗಿರುವೆ. ಸತ್ಪುರುಷರು ಆಚರಿಸಿರುವ ಧರ್ಮವು ನಿನಗೆ ಚೆನ್ನಾಗಿ ತಿಳಿದಿದೆ.

ಧರ್ಮಾಣಾಂ ತ್ವಂ ಪರಂ ಧಾಮ ಗುಣಾನಾಂ ಸಾಗರೋಪಮಃ।
ಅಜ್ಞಾನಾಚ್ಚ ಮಯಾ ರಾಜನ್ನುಕ್ತಸ್ತ್ವಂ ರಾಜಸತ್ತಮ ॥ 12॥

ನೀನು ಎಲ್ಲ ವಿಧವಾದ ಧರ್ಮಗಳಿಗೂ ಪರಮಾಶ್ರಯ ನಾಗಿರುವೆ.

ಗುಣಗಳಿಗೆ ನೀನು ಸಮುದ್ರಪ್ರಾಯನಾಗಿರುವೆ. ಅಜ್ಞಾನವಶದಿಂದಲೇ ನಾನು ಧರ್ಮಮೂರ್ತಿಯಾದ ನಿನ್ನ ಮುಂದೆ ಧರ್ಮದ ವ್ಯಾಖ್ಯಾನವನ್ನು ಮಾಡುತ್ತಿದ್ದೇನೆ. ನಿನಗೆ ತಲೆಬಾಗಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ಹೀಗೆಲ್ಲಾ ಮಾತನಾಡಿದುದಕ್ಕೆ ನನ್ನ ಮೇಲೆ ಕೋಪಗೊಳ್ಳಬೇಡ.''

ನಾಯಿಯ ಮಾತುಗಳನ್ನು ಕೇಳಿ ರಾಘವನು ಹೇಳಿದನು :

''ಸಾರಮೇಯ ! ನಿನಗೆ ಯಾವ ಕಾರ್ಯವನ್ನು ನಾನು ಮಾಡಿ ಕೊಡಲಿ ? ಯಾವ ವಿಧವಾದ ಭಯವೂ ಇಲ್ಲದೇ ಬೇಗನೇ ಹೇಳು.''

ಶ್ರೀರಾಮನ ಮಾತನ್ನು ಕೇಳಿ ಸಾರಮೇಯವು ಹೇಳತೊಡಗಿತು:

ಧರ್ಮೇಣ ರಾಷ್ಟ್ರಂ ವಿನ್ದೇತ ಧರ್ಮೇಣೈವಾನುಪಾಲಯೇತ್ ।
ಧರ್ಮಾಚ್ಛರಣ್ಯತಾಂ ಯಾತಿ ರಾಜಾ ಸರ್ವಭಯಾಪಹಃ ।
ಇದಂ ವಿಜ್ಞಾಯ ಯತ್ಕೃತ್ಯಂ ಶ್ರೂಯತಾಂ ಮಮ ರಾಘವ ॥

''ರಾಘವ! ರಾಜನು ಧರ್ಮದಿಂದಲೇ ರಾಜ್ಯವನ್ನು ಪಡೆದುಕೊಳ್ಳಬೇಕು. ಧರ್ಮದಿಂದಲೇ ನಿರಂತರವಾಗಿ ರಾಜ್ಯವನ್ನು ಪರಿಪಾಲನೆಮಾಡಬೇಕು. ಧರ್ಮದಿಂದಿರುವುದರಿಂದಲೇ ರಾಜನು ಸಮಸ್ತರಿಗೂ ಶರಣ್ಯನಾಗುವನು. ರಾಜನಾದವನು ಸಮಸ್ತರ ಭಯವನ್ನೂ ಹೋಗಲಾಡಿಸುತ್ತಾನೆ. ಈ ಎಲ್ಲ ವಿಷಯಗಳನ್ನೂ ತಿಳಿದು ನನಗಾಗಿ ಯಾವ ಕಾರ್ಯವನ್ನು ಮಾಡಿಕೊಡಬೇಕಾಗಿರುವುದೆಂಬುದನ್ನು ಹೇಳುವೆನು ; ಕೇಳು.

ಪ್ರಭುವೇ ! ಬ್ರಾಹ್ಮಣನೊಬ್ಬನ ಮನೆಯಲ್ಲಿ ಸರ್ವಾರ್ಥಸಿದ್ಧನೆಂಬ ಭಿಕ್ಷುವೊಬ್ಬನು ವಾಸವಾಗಿದ್ದಾನೆ. ಅವನು ಯಾವ ಅಪರಾಧವನ್ನೂ ಮಾಡದ ನನ್ನನ್ನು ನಿಷ್ಕಾರಣವಾಗಿ ಪ್ರಹರಿಸಿದನು.''

ಅದನ್ನು ಕೇಳಿದೊಡನೆಯೇ ಶ್ರೀರಾಮನು ದ್ವಾರಪಾಲಕನನ್ನು ಕಳುಹಿಸಿ ಸರ್ವಾರ್ಥಸಿದ್ಧನೆಂಬ ವಿದ್ವಾಂಸನಾದ ಬ್ರಾಹ್ಮಣಭಿಕ್ಷುವನ್ನು ಕರೆಸಿ ದನು. ಶ್ರೀರಾಮನನ್ನು ನೋಡಿದೊಡನೆಯೇ ಮಹಾತೇಜಸ್ವಿಯಾದ ಬ್ರಾಹ್ಮಣನು ಹೇಳಿದನು :

''ನಿಷ್ಪಾಪನೇ ! ರಾಘವ ! ನನ್ನಿಂದ ನಿನಗೆ ಯಾವ ಕಾರ್ಯವಾಗ ಬೇಕಾಗಿದೆ?''

ಭಿಕ್ಷುವು ಹೀಗೆ ಪ್ರಶ್ನಿಸಲು ಶ್ರೀರಾಮನು ಭಿಕ್ಷುವಿಗೆ ಹೇಳಿದನು :

''ಬ್ರಾಹ್ಮಣ ! ನೀನು ಈ ನಾಯಿಯನ್ನು ಪ್ರಹರಿಸಿರುವೆ. ಇದು ಮಾಡಿದ ಅಪರಾಧವೇನು ? ದಂಡದಿಂದೇಕೆ ನೀನಿದನ್ನು ಪ್ರಹರಿಸಿದೆ ?

ಕ್ರೋಧಃ ಪ್ರಾಣಹರಃ ಶತ್ರುಃ ಕ್ರೋಧೋ ಮಿತ್ರಮುಖೋ ರಿಪುಃ ।
ಕ್ರೋಧೋ ಹ್ಯಸಿರ್ಮಹಾತೀಕ್ಷ್ಣಃ ಸರ್ವಂ ಕ್ರೋಧೋಽಪಕರ್ಷತಿ ॥

ಕೋಪವೆಂಬುದು ಪ್ರಾಣಗಳನ್ನಪಹರಿಸುವ ಶತ್ರುವಾಗಿದೆ. ಕೋಪವು ಗೆಳೆಯನ ಮುಖವಾಡವಿರುವ ಶತ್ರುವಾಗಿದೆ. ಕ್ರೋಧವು ತೀಕ್ಷ್ಣವಾದ ಅಲಗುಳ್ಳ ಕತ್ತಿಯಾಗಿದೆ. ಕ್ರೋಧವು ಸಮಸ್ತಸದ್ಗುಣಗಳನ್ನೂ ಎಳೆದುಕೊಂಡು ಬಿಡುತ್ತದೆ.

ತಪತೇ ಯಜತೇ ಚೈವ ಯಚ್ಚ ದಾನಂ ಪ್ರಯಚ್ಛತಿ ।
ಕ್ರೋಧೇನ ಸರ್ವಂ ಹರತಿ ತಸ್ಮಾತ್ಕ್ರೋಧಂ ವಿಸರ್ಜಯೇತ್ ॥22॥

ಮನುಷ್ಯನು ಮಾಡಿದ ತಪಸ್ಸು, ಯಜ್ಞ, ಕೊಡುವ ದಾನ -ಇವೆಲ್ಲದರ ಫಲವನ್ನೂ ಕ್ರೋಧವು ಅಪಹರಿಸಿಬಿಡುತ್ತದೆ. ಆದುದರಿಂದ ಕೋಪವನ್ನು ಸರ್ವಥಾ ಪರಿತ್ಯಜಿಸಬೇಕು.

ಇನ್ದ್ರಿಯಾಣಾಂ ಪ್ರದುಷ್ಟಾನಾಂ ಹಯಾನಾಮಿವ ಧಾವತಾಮ್ ।
ಕುರ್ವೀತ ಧೃತ್ಯಾ ಸಾರಥ್ಯಂ ಸಂಹೃತ್ಯೇನ್ದ್ರಿಯಗೋಚರಮ್ ॥23॥

ದುಷ್ಟವಾದ ಕುದುರೆಗಳಂತೆ ವಿಷಯಗಳ ಕಡೆಗೇ ಓಡಿಹೋಗುವ ದುಷ್ಟ ವಾದ ಇಂದ್ರಿಯಗಳನ್ನು ಧೈರ್ಯದಿಂದ ಸಾರಥ್ಯವನ್ನು ಮಾಡುತ್ತಾ ಅವುಗಳನ್ನು ವಿಷಯಗಳ ಕಡೆಯಿಂದ ಹಿಂದಿರುಗಿಸಿ ನಿಯಂತ್ರಣದಲ್ಲಿಟ್ಟು ಕೊಳ್ಳಬೇಕು.

ಮನಸಾ ಕರ್ಮಣಾ ವಾಚಾ ಚಕ್ಷುಷಾ ಚ ಸಮಾಚರೇತ್ ।
ಶ್ರೇಯೋ ಲೋಕಸ್ಯ ಚರತೋ ನ ದ್ವೇಷ್ಟಿ ನ ಚ ಲಿಪ್ಯತೇ ॥24॥

ಮನುಷ್ಯನು ತನ್ನ ಸಂಗಡಿಗರಿಗೆ ಮನಸ್ಸಿನಿಂದಲೂ, ಮಾತಿನಿಂದಲೂ, ಕ್ರಿಯೆಯಿಂದಲೂ ಮತ್ತು ನೋಟದಿಂದಲೂ ಒಳ್ಳೆಯದನ್ನೇ ಮಾಡಬೇಕು.

ಯಾರನ್ನೂ ದ್ವೇಷಿಸಬಾರದು. ಅಂತಹವನಿಗೆ ಪಾಪಗಳು ಅಂಟುವುದಿಲ್ಲ.

ನ ತತ್ಕುರ್ಯಾದಸಿಸ್ತೀಕ್ಷ್ಣಃ ಸರ್ಪೋ ವಾ ವ್ಯಾಹತಃ ಪದಾ ।
ಅರಿರ್ವಾ ನಿತ್ಯಸಂಕ್ರುದ್ಧೋ ಯಥಾತ್ಮಾ ದುರನುಷ್ಠಿತಃ ॥25॥

ತೀಕ್ಷ್ಣವಾದ ಅಲಗುಳ್ಳ ಕತ್ತಿಯಾಗಲೀ, ಕಾಲಿನಿಂದ ಮೆಟ್ಟಿದ ಸರ್ಪವಾಗಲೀ, ಸರ್ವದಾ ಕ್ರುದ್ಧನಾಗಿರುವ ಶತ್ರುವಾಗಲೀ –ದುಷ್ಟವಾದ ಮನಸ್ಸಿರುವವನು ಮಾಡುವಂತಹ ಅನರ್ಥವನ್ನು ಮನುಷ್ಯನಿಗೆ ಉಂಟು ಮಾಡಲಾರರು.

ವಿನೀತವಿನಯಸ್ಯಾಪಿ ಪ್ರಕೃತಿರ್ನ ವಿಧೀಯತೇ ।
ಪ್ರಕೃತಿಂ ಗೂಹಮಾನಸ್ಯ ನಿಶ್ಚಯೇನ ಕೃತಿರ್ಧ್ರುವಾ ॥26॥

ಶಿಕ್ಷಣದಿಂದ ವಿನೀತನಾಗಿದ್ದರೂ ಮಾನವನ ಸ್ವಭಾವವು ಬದಲಾಗದು. ಅವನು ತನ್ನ ಸ್ವಭಾವವನ್ನು ಮುಚ್ಚಿಡಲು ಎಷ್ಟೇ ಪ್ರಯತ್ನಿಸಿದರೂ ಅವನ ಕಾರ್ಯಗಳಲ್ಲಿ ಅವನ ದುಷ್ಟಸ್ವಭಾವವು ಹೊರಬಿದ್ದೇ ಬೀಳುತ್ತದೆ.''

ನಿರಾಯಾಸವಾಗಿ ಕಾರ್ಯಗಳನ್ನು ಮಾಡುವ ಶ್ರೀರಾಮನು ಸರ್ವಾರ್ಥಸಿದ್ಧನಿಗೆ ಹೀಗೆ ಹೇಳಲು ಆ ಬ್ರಾಹ್ಮಣನು ಶ್ರೀರಾಮನ ಸನ್ನಿಧಿಯಲ್ಲಿ ತನ್ನ ವಾದವನ್ನು ನಿವೇದಿಸಿಕೊಂಡನು :

''ರಾಘವ ! ನನ್ನ ಮನಸ್ಸು ಕ್ರೋಧಾವಿಷ್ಟವಾಗಿದ್ದುದರಿಂದ ನಾನು ಈ ನಾಯಿಯನ್ನು ದಂಡದಿಂದ ಪ್ರಹರಿಸಿದೆನು. ಆದರೆ ನನ್ನ ಕೋಪಕ್ಕೆ ಕಾರಣವಿಲ್ಲದೇ ಇಲ್ಲ. ಅದು ಭಿಕ್ಷೆಯ ಸಮಯವಾಗಿದ್ದಿತು. ನಾನು ಭಿಕ್ಷೆಬೇಡಲು ಮನೆ–ಮನೆಗೂ ಅಲೆದಾಡುತ್ತಿದ್ದೆನು. ಹಾದಿಯಲ್ಲಿ ಈ ಸಾರಮೇಯವು ನನಗೆ ಅಡ್ಡಲಾಗಿ ಬರುತ್ತಿದ್ದಿತು. ನನ್ನ ಹಾದಿಯನ್ನು ಬಿಟ್ಟು ಹೋಗೆಂದು ಈ ನಾಯಿಗೆ ಸಾರಿ–ಸಾರಿ ಹೇಳಿದೆನು. ನಾನೆಷ್ಟೇ ಹೇಳಿದರೂ ಸ್ವೇಚ್ಛೆಯಿಂದಲೇ ಹೋಗುತ್ತಿದ್ದ ಈ ನಾಯಿಯು ಹಾದಿಯ ಕಡೆಯಲ್ಲಿ ನನ್ನನ್ನು ಅಡ್ಡಗಟ್ಟಿ ನಿಂತಿತು.

ಕ್ರೋಧೇನ ಕ್ಷುಧಯಾವಿಷ್ಟಸ್ತತೋ ದತ್ತೋಽಸ್ಯ–ರಾಘವ ।
ಪ್ರಹಾರೋ ರಾಜರಾಜೇನ್ದ್ರ ಶಾಧಿ ಮಾಮಪರಾಧಿನಮ್ ।
ತ್ವಯಾ ಶಸ್ತಸ್ಯ ರಾಜೇನ್ದ್ರ ನಾಸ್ತಿ ಮೇ ನರಕಾದ್ಭಯಮ್ ॥30॥

ಆ ಸಮಯದಲ್ಲಿ ಹಸಿವಿನಿಂದ ಬಳಲಿದ್ದ ನನಗೆ ನಾಯಿಯ ಚರ್ಯೆ

ಯಿಂದ ಕೋಪವೂ ಬಂದಿತು. ಕೋಪವನ್ನು ತಡೆಯಲಾಗದೇ ಪ್ರಹರಿಸಿದೆನು. ಚಕ್ರವರ್ತಿಯೇ ! ಅಪರಾಧಿಯಾದ ನನ್ನನ್ನು ಶಿಕ್ಷಿಸು. ನೀನು ಶಿಕ್ಷಿಸುವುದರಿಂದ ಮುಂದೆ ನನಗೆ ನರಕದ ಭಯವಿರುವುದಿಲ್ಲ.''

ಬ್ರಾಹ್ಮಣನ ಮಾತನ್ನು ಕೇಳಿ ಶ್ರೀರಾಮನು ಸಭಾಸದರೆಲ್ಲರನ್ನೂ ಪ್ರಶ್ನಿಸಿದನು:

ಕಿಂ ಕಾರ್ಯಮಸ್ಯ ವೈ ಬ್ರೂತ ದಣ್ಡೋ ವೈ ಕೋಽಸ್ಯ ಪಾತ್ಯತಾಮ್ ।
ಸಮ್ಯಕ್ಪ್ರಣಿಹಿತೇ ದಣ್ಡೇ ಪ್ರಜಾ ಭವತಿ ರಕ್ಷಿತಾ ॥32॥

''ಸಭಾಸದರೇ ! ಹೇಳಿರಿ. ಬ್ರಾಹ್ಮಣನ ವಿಷಯದಲ್ಲಿ ನಾವೀಗ ಏನು ಮಾಡಬೇಕು ? ಇವನಿಗೆ ಯಾವ ವಿಧವಾದ ಶಿಕ್ಷೆಯನ್ನು ವಿಧಿಸಬೇಕು ? ಅಪರಾಧಕ್ಕೆ ತಕ್ಕುದಾದ ಶಿಕ್ಷೆಯನ್ನಿತ್ತರೆ ಪ್ರಜೆಗಳು ಸುರಕ್ಷಿತರಾಗಿರುತ್ತಾರೆ.''

ಶ್ರೀರಾಮನು ಹೀಗೆ ಪ್ರಶ್ನಿಸಲು ಸಭೆಯಲ್ಲಿ ಉಪಸ್ಥಿತರಾಗಿದ್ದ ಭೃಗು, ಅಂಗಿರಸ, ಕುತ್ಸ–ವಸಿಷ್ಠ, ಕಾಶ್ಯಪ - ಇವರೇ ಮುಂತಾದ ಮಹರ್ಷಿಗಳೂ, ಧರ್ಮಶಾಸ್ತ್ರಗಳನ್ನು ಅಧ್ಯಯನಮಾಡಿದ್ದ ಮಹಾವಿದ್ವಾಂಸರೂ, ಸಚಿವರೂ, ನ್ಯಾಯವಿಶಾರದರೂ, ಪಂಡಿತರೂ, ರಾಜಧರ್ಮಗಳಲ್ಲಿ ಪರಿನಿಷ್ಠಿತರಾದವರೂ ಏಕಕಂಠದಿಂದ ಈ ಮಾತನ್ನು ಹೇಳಿದರು :

ಅವಧ್ಯೋ ಬ್ರಾಹ್ಮಣೋ ದಣ್ಡ್ಯೈರಿತಿ ಶಾಸ್ತ್ರವಿದೋ ವಿದುಃ ॥

''ರಾಘವ ! ಬ್ರಾಹ್ಮಣನು ದಂಡದ ಮೂಲಕ ವಧಿಸಲ್ಪಡತಕ್ಕವನಲ್ಲ. ಬ್ರಾಹ್ಮಣನಿಗೆ ಮರಣದಂಡನೆಯಿಲ್ಲ- ಎಂಬುದಾಗಿ ಶಾಸ್ತ್ರಗಳನ್ನು ತಿಳಿದ ವಿದ್ವಾಂಸರು ತಿಳಿಯುತ್ತಾರೆ.

ರಾಘವ ! ರಾಜನೇ ಎಲ್ಲದಕ್ಕೂ ಶಾಸಕನು. ಅದರಲ್ಲಿಯೂ ವಿಶೇಷವಾಗಿ ನೀನು ಮೂರು ಲೋಕಗಳನ್ನೂ ಶಾಸನಮಾಡುವ ಸನಾತನನಾದ ಮಹಾವಿಷ್ಣುವೇ ಆಗಿರುವೆ.''

ಋಷಿ–ಮುನಿಗಳೆಲ್ಲರೂ ಹೀಗೆ ಹೇಳಲು ಸಾರಮೇಯವೇ ಶ್ರೀರಾಮನಿಗೆ ಹೇಳಿತು :

''ರಾಘವ ! ನೀನು ನನ್ನ ವಿಷಯದಲ್ಲಿ ಸುಪ್ರೀತನಾಗಿದ್ದರೆ – ನನಗೇನಾ

ದರೂ ನೀನು ವರಕೊಡುವುದಾಗಿದ್ದರೆ – ಈ ನನ್ನ ಮಾತನ್ನು ಕೇಳು. ಮೇಲಾಗಿ ನೀನು **'ಕಿಂ ಕರೋಮಿ ?**– ನಾನು ನಿನಗೇನು ಮಾಡಿ ಕೊಡಲಿ ?' ಎಂದು ನನ್ನನ್ನು ಪ್ರಶ್ನಿಸಿ ನಾನು ಪ್ರಾರ್ಥಿಸುವ ಕಾರ್ಯವನ್ನು ಮಾಡಿಕೊಡುವುದಾಗಿ ಪ್ರತಿಜ್ಞೆಯನ್ನೂ ಮಾಡಿರುವೆ. ಆದುದರಿಂದ ನನ್ನ ಪ್ರಾರ್ಥನೆಯಂತೆ ಈ ಬ್ರಾಹ್ಮಣನನ್ನು ಒಂದು ಮಠದ ಕುಲಪತಿಯನ್ನಾಗಿ ಮಾಡು. ಕಾಲಂಜರನಗರದಲ್ಲಿ ಇವನಿಗೆ ಒಂದು ಮಠದ ಆಧಿಪತ್ಯವನ್ನು ವಹಿಸಿಕೊಡು.''

ನಾಯಿಯ ಮಾತನ್ನು ಕೇಳಿದೊಡನೆಯೇ ಶ್ರೀರಾಮನು ಬ್ರಾಹ್ಮಣ ನನ್ನು ಒಂದು ಮಠದ ಕುಲಪತಿಯ ಸ್ಥಾನದಲ್ಲಿ ಅಭಿಷೇಕಮಾಡಿ ಕಳುಹಿಸಿ ಕೊಟ್ಟನು. ಕುಲಪತಿಯ ಪದವಿಯಿಂದ ಸತ್ಕೃತನಾದ ಬ್ರಾಹ್ಮಣನು ಪರಮ ಸಂತುಷ್ಟನಾಗಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಹೊರಟುಹೋದನು.

ಆ ಸಮಯದಲ್ಲಿ ಸಭಾಮಂದಿರದಲ್ಲಿದ್ದ ಸಚಿವರು ನಸುನಗುತ್ತಾ ಶ್ರೀರಾಮನಿಗೆ ಹೇಳಿದರು :

ವರೋಽಯಂ ದತ್ತ ಏತಸ್ಯ ನಾಯಂ ಶಾಪೋ ಮಹಾದ್ಯುತೇ ॥

''ಮಹಾದ್ಯುತಿಮಂತನೇ! ಬ್ರಾಹ್ಮಣನಿಗೆ ನೀನು ಕೊಟ್ಟುದು ವರವೇ ಹೊರತು ಶಾಪವಲ್ಲ(ಶಿಕ್ಷೆಯಲ್ಲ.)''

ಸಚಿವರು ಹೀಗೆ ಹೇಳಲು ಶ್ರೀರಾಮನು ಹೇಳಿದನು :

ನ ಯೂಯಂ ಗತಿತತ್ತ್ವಜ್ಞಾಃ ಶ್ವಾ ವೈ ಜಾನಾತಿ ಕಾರಣಮ್ ॥

''ಸಚಿವೋತ್ತಮರೇ ! ಕರ್ಮಗಳ ಗತಿಯು ಹೇಗೆ ಸಾಗುವುದೆಂಬ ರಹಸ್ಯವನ್ನು ನೀವು ತಿಳಿದಿಲ್ಲ. ಆದರೆ ಈ ನಾಯಿಯು ಅದನ್ನು ಅರಿತು ಕೊಂಡಿದೆ.''

ಹೀಗೆ ಸಚಿವರಿಗೆ ಹೇಳಿದ ಶ್ರೀರಾಮನು ಜೀವನಗತಿಯ ರಹಸ್ಯವನ್ನು ತಿಳಿಸುವಂತೆ ಸಾರಮೇಯಕ್ಕೆ ಹೇಳಿದನು. ನಾಯಿಯು ಹೇಳತೊಡಗಿತು:

''ರಾಘವ ! ಹಿಂದಿನ ಜನ್ಮದಲ್ಲಿ ನಾನು ಕಾಲಂಜರಮಠದ ಅಧಿ ಪತಿಯೇ ಆಗಿದ್ದೆನು. ಅಲ್ಲಿ ನಾನು ಯಜ್ಞಶಿಷ್ಟವಾದ ಅನ್ನವನ್ನೇ ಭೋಜನ ಮಾಡುತ್ತಿದ್ದೆನು. ದೇವ – ಬ್ರಾಹ್ಮಣರ ಪೂಜೆಯಲ್ಲಿ ನಿರತನಾಗಿದ್ದೆನು. ದಾಸ –ದಾಸಿಯರಿಗೆ ಅವರವರ ನ್ಯಾಯೋಚಿತವಾದ ಭಾಗಗಳನ್ನು ಹಂಚಿ

ಕೊಡುತ್ತಿದ್ದೆನು. ಶುಭಕರ್ಮಗಳಲ್ಲಿಯೇ ಅನುರಕ್ತನಾಗಿರುತ್ತಿದ್ದೆನು. ದೇವ ದ್ರವ್ಯವನ್ನು ಜಾಗರೂಕತೆಯಿಂದ ರಕ್ಷಿಸುತ್ತಿದ್ದೆನು. ವಿನಯಶೀಲನೂ, ಶೀಲಸಂಪನ್ನನೂ ಆಗಿದ್ದು ಸಮಸ್ತಪ್ರಾಣಿಗಳ ಹಿತದಲ್ಲಿಯೂ ಆಸಕ್ತನಾಗಿ ದ್ದೆನು. ನಾನು ಹಿಂದಿನ ಜನ್ಮದಲ್ಲಿ ಹಾಗಿದ್ದರೂ ನನಗೆ ಈ ಜನ್ಮದಲ್ಲಿ ಘೋರ ವಾದ ಅತ್ಯಂತ ಕೀಳಾದ ನಾಯಿಯ ಜನ್ಮವು ಪ್ರಾಪ್ತವಾಯಿತು. ಹೀಗಿರು ವಾಗ ಕ್ರುದ್ಧನಾದ, ಧರ್ಮಬಾಹಿರನಾದ, ಪ್ರಾಣಿಗಳ ಅಹಿತದಲ್ಲಿಯೇ ನಿರತ ನಾಗಿರುವ, ಕ್ರೂರಿಯಾದ, ಅವಿದ್ವಾಂಸನಾದ, ಅಧಾರ್ಮಿಕನಾದ ಇಂತಹ ವನಿಗೆ ಮಠಾಧಿ ಪತ್ಯವು ಸಿಕ್ಕಿದರೆ ಅವನು ಅಧೋಗತಿಗೆ ಹೋಗುವುದು ಮಾತ್ರವಲ್ಲದೇ ಅವನ ಹಿಂದಿನ ಏಳು ತಲೆಮಾರಿನವರನ್ನೂ ಮುಂದಿನ ಏಳು ತಲೆಮಾರಿನವರನ್ನೂ ನರಕದಲ್ಲಿ ಕೆಡವುತ್ತಾನೆ. ಇದು ನಿಶ್ಚಯ.

ತಸ್ಮಾತ್ಸರ್ವಾಸ್ವವಸ್ಥಾಸು ಕೌಲಪತ್ಯಂ ನ ಕಾರಯೇತ್ ।
ಯಮಿಚ್ಛೇನ್ನರಕಂ ನೇತುಂ ಸಪುತ್ರಪಶುಬಾನ್ಧವಮ್ ।
ದೇವೇಷ್ವಧಿಷ್ಠಿತಂ ಕುರ್ಯಾದ್ಗೋಷು ಚ ಬ್ರಾಹ್ಮಣೇಷು ಚ ॥47॥

ಆದುದರಿಂದ ಯಾವುದೇ ಪರಿಸ್ಥಿತಿಯಲ್ಲಿಯೂ ಮಠಾಧಿಪತಿಯಾಗ ಬಾರದು. ಯಾವನನ್ನಾದರೂ ಪುತ್ರ- ಪಶು-ಬಂಧುಗಳೊಡನೆ ನರಕಕ್ಕೆ ಕಳುಹಿಸಲು ಅಪೇಕ್ಷೆಯಿದ್ದರೆ - ಅಂತಹವನನ್ನು ಮಠದ ಅಧಿಪತಿಯನ್ನಾಗಿ, ದೇವಾಲಯದ ಅಧಿಕಾರಿಯನ್ನಾಗಿ, ಗೋ-ಬ್ರಾಹ್ಮಣರಿಗೆ ಅಧಿಪತಿಯನ್ನಾಗಿ ಮಾಡು.

ಬ್ರಹ್ಮಸ್ವಂ ದೇವತಾದ್ರವ್ಯಂ ಸ್ತ್ರೀಣಾಂ ಬಾಲಧನಂ ಚ ಯತ್ ।
ದತ್ತಂ ಹರತಿ ಯೋ ಭೂಯ ಇಷ್ಟೈಃ ಸಹ ವಿನಶ್ಯತಿ ॥48॥

ಬ್ರಾಹ್ಮಣರ ಸೊತ್ತು, ದೇವತಾದ್ರವ್ಯ, ಸ್ತ್ರೀಧನ ಮತ್ತು ಬಾಲಕರ ಧನ - ಇವುಗಳನ್ನು ಯಾವನು ಅಪಹರಿಸುವನೋ ಮತ್ತು ತಾನು ದಾನ ಮಾಡಿದುದನ್ನು ಪುನಃ ಹಿಂದಕ್ಕೆ ಪಡೆಯುವನೋ - ಅಂತಹವನು ತನ್ನ ಇಷ್ಟಜನರೊಡನೆ ವಿನಾಶಹೊಂದುತ್ತಾನೆ.

ಬ್ರಾಹ್ಮಣದ್ರವ್ಯಮಾದತ್ತೇ ದೇವಾನಾಂ ಚೈವ ರಾಘವ ।
ಸದ್ಯಃ ಪತತಿ ಘೋರೇ ವೈ ನರಕೇಽವೀಚಿಸಂಜ್ಞಕೇ ॥ 49॥

ದೇವತೆಗಳ ಮತ್ತು ಬ್ರಾಹ್ಮಣರ ದ್ರವ್ಯವನ್ನು ಅಪಹರಿಸುವವನು ಅತಿಶೀಘ್ರವಾಗಿ 'ಅವೀಚಿ' ಎಂಬ ನರಕದಲ್ಲಿ ಬೀಳುತ್ತಾನೆ.

ಮನಸಾಪಿ ಹಿ ದೇವಸ್ವಂ ಬ್ರಹ್ಮಸ್ವಂ ಚ ಹರೇತ್ತು ಯಃ ।
ನಿರಯಾನ್ನಿರಯಂ ಚೈವ ಪತತ್ಯೇವ ನರಾಧಮಃ ॥50॥

ದೇವರ ಸೊತ್ತನ್ನಾಗಲೀ, ಬ್ರಾಹ್ಮಣರ ಸೊತ್ತನ್ನಾಗಲೀ ಮನಸ್ಸಿನಿಂದ ಲಾದರೂ ಅಪಹರಿಸಬೇಕೆಂದು ಯೋಚಿಸುವ ನರಾಧಮನು ಒಂದು ನರಕದಿಂದ ಮತ್ತೊಂದು ನರಕದಲ್ಲಿ ಬೀಳುತ್ತಿರುತ್ತಾನೆ.''

ನಾಯಿಯ ಆ ಮಾತನ್ನು ಕೇಳಿ ಶ್ರೀರಾಮನ ಕಣ್ಣುಗಳು ಆಶ್ಚರ್ಯ ದಿಂದ ಅರಳಿದುವು. ಮಹಾತೇಜಸ್ವಿಯಾಗಿದ್ದ ಸಾರಮೇಯವು ಕೂಡ ತಾನು ಬಂದಿದ್ದಲ್ಲಿಗೇ ಹಿಂದಿರುಗಿತು.

ಹಿಂದಿನ ಜನ್ಮದಲ್ಲಿ ಆ ನಾಯಿಯು ಅದು ಹೇಳಿಕೊಂಡಂತೆಯೇ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಾಗಿದ್ದಿತು. ಮಾತಾಪತ್ಯದೋಷ ದಿಂದ ನಾಯಿಯಾಗಿ ಹುಟ್ಟಿ ಜಾತಿಮಾತ್ರದಿಂದ ದೂಷಿತವಾಗಿದ್ದಿತು. ಅದಕ್ಕೆ ಹಿಂದಿನ ಜನ್ಮದ ಅರಿವಿದ್ದಿತು. ಶ್ರೀರಾಮನ ಸಂದರ್ಶನವಾದ ನಂತರ ಮಹಾ ಭಾಗ್ಯಶಾಲಿಯಾದ ಆ ನಾಯಿಯು ವಾರಾಣಸಿಗೆ ಹೋಗಿ ಪ್ರಾಯೋಪವೇಶ ಮಾಡಿ ತನ್ನ ಹೀನಜನ್ಮವನ್ನು ನೀಗಿಕೊಂಡಿತು.

2ನೆಯ ಪ್ರಕ್ಷಿಪ್ತ ಸರ್ಗವು ಮುಗಿಯಿತು.

ಉತ್ತರಕಾಂಡ 60ನೆಯ ಸರ್ಗ

ಶ್ರೀರಾಮನ ಸಭಾಭವನಕ್ಕೆ ಚ್ಯವನರೇ ಮೊದಲಾದ ಮಹರ್ಷಿಗಳ ಆಗಮನ: ಶ್ರೀರಾಮನು ಅವರೆಲ್ಲರನ್ನೂ ಸತ್ಕರಿಸಿ ಅವರ ಆಶಯವನ್ನು ನೆರವೇರಿಸಿಕೊಡಲು ಪ್ರತಿಜ್ಞೆ ಮಾಡಿದುದು : ಮಹರ್ಷಿಗಳಿಂದ ಶ್ರೀರಾಮನ ಪ್ರಶಂಸೆ

ತಯೋಃ ಸಂವದತೋರೇವಂ ರಾಮಲಕ್ಷ್ಮಣಯೋಸ್ತದಾ ।
ವಾಸನ್ತಿಕೀ ನಿಶಾ ಪ್ರಾಪ್ತಾ ನ ಶೀತಾ ನ ಚ ಘರ್ಮದಾ ॥1॥★

★ ಈ ಶ್ಲೋಕವು 59ನೇ ಸರ್ಗದಿಂದ ಅನುವರ್ತಿತವಾಗಿದೆ.

ರಾಮ-ಲಕ್ಷ್ಮಣರು ಹೀಗೆಯೇ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಪ್ರಜೆಗಳ ರಕ್ಷಣೆಯಲ್ಲಿ ನಿರತರಾಗಿದ್ದರು. ಹಲವಾರು ದಿವಸ ಗಳು ಕಳೆದು ವಸಂತರ್ತುವು ಪ್ರಾರಂಭವಾಯಿತು. ಆ ಋತುವಿನ ರಾತ್ರಿ ಯಲ್ಲಿ ಹೆಚ್ಚು ಶೀತವಾಗಲೀ, ಹೆಚ್ಚು ಸೆಕೆಯಾಗಲೀ ಇರಲಿಲ್ಲ.

ರಾತ್ರಿಯು ಕಳೆದು ನಿರ್ಮಲವಾದ ಪ್ರಭಾತಕಾಲದಲ್ಲಿ ಪಟ್ಟಣಿಗರಿಗೆ ಆಗಬೇಕಾದ ಕಾರ್ಯಗಳನ್ನು ತಿಳಿದಿದ್ದ ಶ್ರೀರಾಮನು ಪ್ರಾತಃಕಾಲದ ಸಂಧ್ಯಾದಿ ಕರ್ಮಗಳನ್ನು ಮುಗಿಸಿ ಸಭಾಭವನಕ್ಕೆ ಆಗಮಿಸಿದನು. ಆ ಸಮಯಕ್ಕೆ ಸರಿಯಾಗಿ ಸುಮಂತ್ರನು ಬಂದು ಶ್ರೀರಾಮನಿಗೆ ಹೇಳಿದನು:

''ಮಹಾರಾಜ! ಭೃಗುಪುತ್ರರಾದ ಚ್ಯವನಮಹರ್ಷಿಗಳನ್ನು ಮುಂದೆ ಮಾಡಿಕೊಂಡು ಹಲವಾರು ತಪಸ್ವಿಗಳು ಮಹಾದ್ವಾರದ ಬಳಿಯಲ್ಲಿ ನಿಂತಿದ್ದಾರೆ. ದ್ವಾರಪಾಲಕರು ಅವರನ್ನು ಒಳಕ್ಕೆ ಬರದಂತೆ ತಡೆಯುತ್ತಿದ್ದಾರೆ. ಅವನು ನಿನ್ನನ್ನು ಸಂದರ್ಶಿಸಲು ಅವಸರಪಡುತ್ತಿದ್ದಾರೆ. ಅಲ್ಲದೇ ತಮ್ಮ ಆಗಮನವನ್ನು ನಿನಗೆ ಸೂಚಿಸುವಂತೆಯೂ ಪುನಃ ಪುನಃ ನಮ್ಮನ್ನು ಒತ್ತಾಯಿಸುತ್ತಿದ್ದಾರೆ. ಅವರೆಲ್ಲರೂ ಯಮುನಾತೀರವಾಸಿಗಳಾಗಿದ್ದು ನಿನ್ನಲ್ಲಿ ವಿಶೇಷವಾದ ಅನುರಾಗವುಳ್ಳವರಾಗಿದ್ದಾರೆ.''

ಸುಮಂತ್ರನ ಮಾತನ್ನು ಕೇಳಿ ಧರ್ಮಜ್ಞನಾದ ಶ್ರೀರಾಮನು ಹೇಳಿದನು:

''ಸುಮಂತ್ರ! ಮಹಾಭಾಗರಾದ ಚ್ಯವನಪ್ರಮುಖರಾದ ಮಹರ್ಷಿಗಳನ್ನು ಶೀಘ್ರವಾಗಿ ಒಳಕ್ಕೆ ಕರೆದುಕೊಂಡು ಬಾ.''

ಮಹಾರಾಜನ ಆಜ್ಞೆಯನ್ನು ಪುರಸ್ಕರಿಸಿ ದ್ವಾರಪಾಲಕನು ಎರಡು ಕೈಗಳನ್ನೂ ತಲೆಯ ಮೇಲೆ ಜೋಡಿಸಿಕೊಂಡು ಮಹಾತೇಜಸ್ವಿಗಳಾದ ಮಹರ್ಷಿಗಳನ್ನು ರಾಜಭವನದೊಳಕ್ಕೆ ಕರೆದೊಯ್ದನು.

ಮಹಾತ್ಮರಾದ ಮಹರ್ಷಿಗಳ ಸಂಖ್ಯೆಯು ನೂರಕ್ಕಿಂತಲೂ ಅಧಿಕವಾಗಿದ್ದಿತು. ಅವರೆಲ್ಲರೂ ತಮ್ಮ ತೇಜಸ್ಸಿನಿಂದ ತೊಳ -ತೊಳಗಿ ಬೆಳಗುತ್ತಿದ್ದರು. ರಾಜಭವನವನ್ನು ಪ್ರವೇಶಿಸಿದ ನಂತರ ಸಮಸ್ತ ತೀರ್ಥಗಳಿಂದ ತಂದಿದ್ದ ಪೂರ್ಣಕುಂಭಗಳನ್ನೂ, ಫಲ -ಮೂಲಗಳನ್ನೂ ಶ್ರೀರಾಮನಿಗೆ ಕಾಣಿಕೆಯಾಗಿ ಅರ್ಪಿಸಿದರು.

ಮಹಾಬಾಹುವಾದ ಶ್ರೀರಾಮನು ಮಹರ್ಷಿಗಳು ತಂದಿದ್ದ ಪೂರ್ಣ ಕುಂಭಗಳನ್ನೂ, ವಿಧ-ವಿಧವಾದ ಫಲಗಳನ್ನೂ, ಕಂದ-ಮೂಲಗಳನ್ನೂ ಪ್ರೀತಿಯಿಂದ ಸ್ವೀಕರಿಸಿ ಹೇಳಿದನು :

''ಮಹರ್ಷಿಗಳೇ! ಉತ್ತಮೋತ್ತಮವಾದ ಈ ಆಸನಗಳಲ್ಲಿ ಯಥಾನುಕೂಲವಾಗಿ ಕುಳಿತುಕೊಳ್ಳಿರಿ.''

ಶ್ರೀರಾಮನ ಮಾತನ್ನು ಕೇಳಿ ಮುನಿಗಳೆಲ್ಲರೂ ಸುವರ್ಣಮಯವಾದ, ಸುಂದರವಾದ, ಕೃಷ್ಣಾಜಿನಗಳನ್ನು ಹಾಸಿದ್ದ ಶುಭಾಸನಗಳಲ್ಲಿ ಕುಳಿತುಕೊಂಡರು.

ಮುನಿಗಳೆಲ್ಲರೂ ಯಥಾನುಕೂಲವಾಗಿ ಆಸನಗಳಲ್ಲಿ ಕುಳಿತ ನಂತರ ಪರಪುರಂಜಯನಾದ ಶ್ರೀರಾಮನು ವಿನೀತನಾಗಿ ಕೈಮುಗಿದುಕೊಂಡು ಹೇಳಿದನು:

ಕಿಮಾಗಮನಕಾರ್ಯಂ ವಃ ಕಿಂ ಕರೋಮಿ ಸಮಾಹಿತಃ ।
ಆಜ್ಞಾಪ್ಯೋಽಹಂ ಮಹರ್ಷೀಣಾಂ ಸರ್ವಕಾಮಕರಃ ಸುಖಮ್ ॥

''ಮಹಾಭಾಗರೇ ! ಯಾವ ಕಾರ್ಯದ ನಿಮಿತ್ತವಾಗಿ ತಾವೆಲ್ಲರೂ ಇಲ್ಲಿಗೆ ಆಗಮಿಸಿರುವಿರಿ ? ಏಕಾಗ್ರಚಿತ್ತನಾಗಿ ನಾನು ಯಾವ ಕಾರ್ಯವನ್ನು ತಮಗೆ ಮಾಡಿಕೊಡಲಿ ? ನಿಮ್ಮ ಅಪ್ಪಣೆಯನ್ನು ಪಾಲಿಸಲು ಸಿದ್ಧನಿರುವೆನು. ನಿಮ್ಮಿಂದ ಆದೇಶವು ಬಂದೊಡನೆಯೇ ನಿಮ್ಮ ಇಷ್ಟಾರ್ಥಗಳನ್ನು ನೆರವೇರಿಸುವೆನು.

ಇದಂ ರಾಜ್ಯಂ ಚ ಸಕಲಂ ಜೀವಿತಂ ಚ ಹೃದಿ ಸ್ಥಿತಮ್ ।
ಸರ್ವಮೇತದ್ದ್ವಿಜಾರ್ಥಂ ಮೇ ಸತ್ಯಮೇದ್ಬ್ರವೀಮಿ ವಃ ॥14॥

ಸಮಗ್ರವಾದ ಈ ಕೋಸಲರಾಜ್ಯ, ಹೃತ್ಕಮಲದಲ್ಲಿರುವ ಜೀವಾತ್ಮ ಮತ್ತು ಸಕಲವೈಭವಗಳು - ಈ ಎಲ್ಲವೂ ಬ್ರಾಹ್ಮಣರ ಸೇವೆಯ ಸಲುವಾಗಿಯೇ ಮುಡಿಪಾಗಿವೆ . ಸತ್ಯವಾದ ಈ ಮಾತನ್ನು ತಮಗೆ ಹೇಳುತ್ತಿದ್ದೇನೆ.''

ಶ್ರೀರಾಮನ ಆ ಮಾತನ್ನು ಕೇಳಿದೊಡನೆಯೇ ಉಗ್ರ ತಪಸ್ವಿಗಳಾದ ಯಮುನಾತೀರವಾಸಿಗಳಾದ ಮಹರ್ಷಿಗಳೆಲ್ಲರೂ 'ಸಾಧು ರಾಘವ ಸಾಧು ! ನೀನು ಹೇಳಿದ ಮಾತು ಸಮೀಚೀನವಾಗಿದೆ '- ಎಂದು ಒಕ್ಕೊರಳಿ

ನಿಂದ ಹೇಳಿದರು. ಶ್ರೀರಾಮನ ಅಂತಹ ಮಾತನ್ನು ಕೇಳಿ ಆನಂದತುಂದಿಲ ರಾದ ಮಹಾತ್ಮರಾದ ಮಹರ್ಷಿಗಳು ಮುಂದುವರಿಸಿ ಹೇಳಿದರು :

ಉಪಪನ್ನಂ ನರಶ್ರೇಷ್ಠ ತವೈವ ಭುವಿ ನಾನ್ಯತಃ ॥ 16॥

''ನರಶ್ರೇಷ್ಠನೇ! ಈ ಭೂಮಂಡಲದಲ್ಲಿ ಇಂತಹ ಮಾತು ನಿನಗೊಬ್ಬ ನಿಗೇ ಒಪ್ಪುತ್ತದೆ. ಬೇರೆ ಯಾರೂ ಇಂತಹ ಮಾತುಗಳನ್ನು ಹೇಳಲಾರರು.

ರಾಘವ ! ನಾವೂ ಹಲವಾರು ರಾಜರ ಬಳಿಗೆ ಹೋಗಿದ್ದೆವು. ಅವ ರೆಲ್ಲರೂ ಮಹಾಬಲಿಷ್ಠರೇ ಸರಿ. ಆದರೂ ಕಾರ್ಯದ ಮಹತ್ತ್ವವನ್ನು ತಿಳಿದ ನಂತರ -'ನಾವು ಈ ಕಾರ್ಯವನ್ನು ಮಾಡಿಕೊಡುತ್ತೇವೆ' -ಎಂಬ ಪ್ರತಿಜ್ಞಾ ವಚನವನ್ನು ಕೊಡಲು ಯಾರೂ ಇಷ್ಟಪಡಲಿಲ್ಲ.

ಆದರೆ ನೀನಾದರೋ ನಾವು ಬಂದಿರುವ ಕಾರಣವನ್ನೂ ತಿಳಿದು ಕೊಳ್ಳದೇ ಬ್ರಾಹ್ಮಣರ ಮೇಲಿನ ವಿಶೇಷವಾದ ಆದರ -ಗೌರವಗಳಿಂದಾಗಿ ನಮ್ಮ ಕಾರ್ಯವನ್ನು ಮಾಡಿಕೊಡಲು ಪ್ರತಿಜ್ಞೆಯನ್ನೇ ಮಾಡಿರುವೆ. ನೀನು ನಮ್ಮ ಕಾರ್ಯವನ್ನು ಸಾಧಿಸಿಕೊಡುವುದರಲ್ಲಿ ನಮಗೆ ಯಾವ ಸಂಶಯವೂ ಉಳಿದಿಲ್ಲ. ಋಷಿಗಳಿಗೆ ಒದಗಿರುವ ಮಹಾಭಯವನ್ನು ನಿವಾರಿಸುವುದು ನಿನಗೆ ಯೋಗ್ಯವಾಗಿದೆ.''

60ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 61ನೆಯ ಸರ್ಗ

ಚ್ಯವನರು ಮಧುವಿಗೆ ಈಶ್ವರನಿಂದ ಬಂದ ವರದಾನವನ್ನು ತಿಳಿಸಿ ಲವಣಾಸುರನ ಪೀಡೆಯಿಂದ ತಮ್ಮನ್ನು ರಕ್ಷಿಸಬೇಕೆಂದು ತಿಳಿಸಿದುದು

ಬ್ರುವದ್ಭಿರೇವಮೃಷಿಭಿಃ ಕಾಕುತ್ಸ್ಥೋ ವಾಕ್ಯಮಬ್ರವೀತ್ ।
ಕಿಂ ಕಾರ್ಯಂ ಬ್ರೂತ ಮುನಯೋ ಭಯಂ- ತಾವದಪೈತು ವಃ ॥1॥

ಋಷಿಗಳೆಲ್ಲರೂ ಹೀಗೆ ಹೇಳಲು ಶ್ರೀರಾಮನು ಹೇಳಿದನು :

'' ಮುನಿಗಳೇ ! ನಾನು ಯಾವ ಕಾರ್ಯಮಾಡಬೇಕೆಂಬುದನ್ನು ಹೇಳಿರಿ. ನಿಮ್ಮ ಮನಸ್ಸಿನಿಂದ ಭಯವು ದೂರವಾಗಲಿ. ಇನ್ನು ನೀವು ಭಯಪಡಬೇಕಾದ ಕಾರಣವಿಲ್ಲ.''

ಶ್ರೀರಾಮನು ಹೀಗೆ ಹೇಳಲು ಚ್ಯವನರು ಭಯದ ಕಾರಣವನ್ನು ವಿವರಿಸುತ್ತಾ ಹೇಳಿದರು :

''ರಾಘವ ! ನಾವು ವಾಸಿಸುತ್ತಿರುವ ದೇಶಕ್ಕೂ ಮತ್ತು ನಮಗೂ ಉಂಟಾಗಿರುವ ಭಯದ ಮೂಲಕಾರಣವನ್ನು ಕೇಳು.

ಸತ್ಯಯುಗದಲ್ಲಿ ಲೋಲಾ ಎಂಬುವಳ ಜ್ಯೇಷ್ಠಪುತ್ರನಾದ ಮಹಾಬುದ್ಧಿಶಾಲಿಯಾದ ಮಧುವೆಂಬ ಹೆಸರಿನ ಮಹಾಸುರನಿದ್ದನು. ಅವನು ಬ್ರಾಹ್ಮಣಪ್ರಿಯನಾಗಿದ್ದನು. ಶರಣಾಗತವತ್ಸಲನಾಗಿದ್ದನು. ಅವನಿಗೆ ಸ್ಥಿರವಾದ ಬುದ್ಧಿಯಿದ್ದಿತು. ಉದಾರಸ್ವಭಾವದವರಾದ ದೇವತೆಗಳ ವಿಷಯದಲ್ಲಿಯೂ ಅವನಿಗೆ ಅಪಾರವಾದ ಪ್ರೀತಿಯಿದ್ದಿತು. ಮಧುವು ಪರಾಕ್ರಮಸಂಪನ್ನನಾಗಿದ್ದನು. ಏಕಾಗ್ರಚಿತ್ತನಾಗಿ ಧರ್ಮವನ್ನು ಪರಿಪಾಲಿಸುತ್ತಿದ್ದನು. ರುದ್ರನ ಪ್ರೀತ್ಯರ್ಥವಾಗಿ ಮಧುವು ಅನೇಕ ಸಾವಿರ ವರ್ಷಗಳವರೆಗೆ, ರುದ್ರನನ್ನು ಕುರಿತು ತಪಸ್ಸುಮಾಡಿದನು. ಅದರ ಫಲವಾಗಿ ಶಿವನು ಅವನಿಗೆ ಅದ್ಭುತವಾದ ವರವನ್ನು ದಯಪಾಲಿಸಿದನು.

ಶೂಲಂ ಶೂಲಾದ್ವಿನಿಷ್ಕೃಷ್ಯ ಮಹಾವೀರ್ಯಂ ಮಹಾಪ್ರಭಮ್ ।
ದದೌ ಮಹಾತ್ಮಾ ಸುಪ್ರೀತೋ ವಾಕ್ಯಂ ಚೈತದುವಾಚ ಹ ॥7॥

ಮಹಾತ್ಮನಾದ ಪರಮಪೂಜ್ಯನಾದ ಶಿವನು ಮಧುವಿನ ಆರಾಧನೆ ಯಿಂದ ಸುಪ್ರೀತನಾಗಿ ತನ್ನ ತ್ರಿಶೂಲದಿಂದ ಮಹಾಪ್ರಭೆಯುಳ್ಳ ಮಹಾಶಕ್ತಿ ಯುತವಾದ ಮತ್ತೊಂದು ಶೂಲವನ್ನು ತೆಗೆದು ಅದನ್ನು ಮಧುವಿಗೆ ಕೊಡುತ್ತಾ ಹೇಳಿದನು:

ತ್ವಯಾಯಮತುಲೋ ಧರ್ಮೋ ಮತ್ಪ್ರಸಾದಕರಃ ಕೃತಃ ।
ಪ್ರೀತ್ಯಾ ಪರಮಯಾ ಯುಕ್ತೋ ದದಾಮ್ಯಾಯುಧಮುತ್ತಮಮ್ ॥8॥

''ಅಸುರನೇ ! ನನಗೆ ಪ್ರಿಯವಾಗುವಂತಹ ಶ್ರೇಷ್ಠವಾದ ಮತ್ತು ಅನುಪಮವಾದ ಧರ್ಮವನ್ನು ನೀನು ಆಚರಿಸಿರುವೆ. ಇದರಿಂದಾಗಿ ನಾನು ಅತ್ಯಂತ ಪ್ರಸನ್ನನಾಗಿ ಈ ಉತ್ತಮವಾದ ಶೂಲಾಯುಧವನ್ನು ನಿನಗೆ ಕೊಡುತ್ತಿದ್ದೇನೆ.

ಯಾವತ್ಸುರೈಶ್ಚ ವಿಪ್ರೈಶ್ಚ ನ ವಿರುಧ್ಯೇರ್ಮಹಾಸುರ ।
ತಾವಚ್ಛೂಲಂ ತವೇದಂ ಸ್ಯಾದನ್ಯಥಾ ನಾಶಮೇಷ್ಯತಿ ॥ 9॥

ಮಹಾಸುರನೇ ! ನೀನು ಎಂದಿನವರೆಗೆ ಬ್ರಾಹ್ಮಣರೊಡನೆಯೂ ದೇವತೆಗಳೊಡನೆಯೂ ವಿರೋಧವನ್ನು ಕಟ್ಟಿಕೊಳ್ಳುವುದಿಲ್ಲವೋ - ಅಂದಿನ ವರೆಗೂ ಈ ಮಹಾಶೂಲವು ನಿನ್ನಲ್ಲಿರುತ್ತದೆ. ಬ್ರಾಹ್ಮಣರನ್ನೂ ದೇವತೆ ಗಳನ್ನೂ ವಿರೋಧಿಸಿದೆಯಾದರೆ ಇದು ನಾಶಹೊಂದುತ್ತದೆ.

ಯಶ್ಚ ತ್ವಾಮಭಿಯುಞ್ಜೀತ ಯುದ್ಧಾಯ ವಿಗತಜ್ವರಃ ।
ತಂ ಶೂಲೋ ಭಸ್ಮಸಾತ್ಕೃತ್ವಾ ಪುನರೇಷ್ಯತಿ ತೇ ಕರಮ್ ॥10॥

ಯಾವನಾದರೂ ಮನುಷ್ಯನು ಯಾವ ವಿಧವಾದ ಭೀತಿಯೂ ಇಲ್ಲದೆ ತಾನಾಗಿಯೇ ನಿನ್ನೊಡನೆ ಯುದ್ಧಮಾಡಲು ಬಂದರೆ - ಈ ಶೂಲವು ಅಂತಹವನನ್ನು ಸುಟ್ಟು ಹಾಕಿ ಪುನಃ ನಿನ್ನನ್ನೇ ಬಂದು ಸೇರುತ್ತದೆ.''

ರಾಘವ ! ಮಹಾಸುರನಾದ ಮಧುವು ಹೀಗೆ ವರವನ್ನು ಪಡೆದು ಪುನಃ ಶಿವನಿಗೆ ನಮಸ್ಕರಿಸಿ ಹೇಳಿದನು :

ಭಗವನ್ಮಮ ವಂಶಸ್ಯ ಶೂಲಮೇತದನುತ್ತಮಮ್ ।
ಭವೇತ್ತು ಸತತಂ ದೇವ ಸುರಾಣಾಮೀಶ್ವರೋ ಹ್ಯಸಿ ॥12॥

''ದೇವದೇವನೇ ! ನೀನು ದೇವತೆಗಳೆಲ್ಲರಿಗೂ ಸ್ವಾಮಿಯಾಗಿರುವೆ. ಪರಮಶ್ರೇಷ್ಠವಾಗಿರುವ ಈ ಶೂಲವು ನನ್ನ ವಂಶದಲ್ಲಿ ಪರಂಪರೆಯಾಗಿ ಇರುವಂತೆ ಅನುಗ್ರಹಿಸು.''

ಹೀಗೆ ಪ್ರಾರ್ಥಿಸಿದ ಮಧುವಿಗೆ ಸರ್ವಭೂತಪತಿಯಾದ ಮಹಾದೇವ ನಾದ ಶಿವನು ಹೇಳಿದನು : ' **ನೈತದೇವಂ ಭವಿಷ್ಯತಿ** - ಹೀಗಾಗಲು ಸಾಧ್ಯ ವಿಲ್ಲ.

ಮಾ ಭೂತ್ತೇ ವಿಫಲಾ ವಾಣೀ ಮತ್ಪ್ರಸಾದಕೃತಾ ಶುಭಾ ।
ಭವತಃ ಪುತ್ರಮೇಕಂ ತು ಶೂಲಮೇತದ್ಭವಿಷ್ಯತಿ ॥14॥

ನನ್ನ ಅನುಗ್ರಹದಿಂದಾದ ಸಂತೋಷದಿಂದ ಹೊರಟಿರುವ ನಿನ್ನ-ಶುಭ

ವಾಣಿಯು ನಿಷ್ಫಲವಾಗದಿರಲಿ. ನಿನ್ನ ಒಬ್ಬ ಮಗನ ಬಳಿಯಲ್ಲಿ ಮಾತ್ರ ಈ ಶೂಲವಿರುತ್ತದೆ.

ಯಾವತ್ಕರಸ್ಥಃ ಶೂಲೋಽಯಂ ಭವಿಷ್ಯತಿ ಸುತಸ್ಯ ತೇ ।
ಅವಧ್ಯಃ ಸರ್ವಭೂತಾನಾಂ ಶೂಲಹಸ್ತೋ ಭವಿಷ್ಯತಿ ॥15॥

ಎಲ್ಲಿಯವರೆಗೆ ಈ ಶೂಲವು ನಿನ್ನ ಮಗನ ಕೈಲಿರುವುದೋ – ಅಲ್ಲಿಯ ವರೆಗೂ ನಿನ್ನ ಮಗನು ಅವಧ್ಯನು. ಅವನನ್ನು ವಧಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ.''

ರಾಘವ! ಹೀಗೆ ಅಸುರಶ್ರೇಷ್ಠನಾದ ಮಧುವು ಈಶ್ವರನಿಂದ ಪರಮಾದ್ಭುತವಾದ ವರವನ್ನು ಪಡೆದು ಕಾಂತಿಯುಕ್ತವಾದ ಸುಂದರಭವನವನ್ನು ನಿರ್ಮಿಸಿದನು. ಮಹಾಭಾಗ್ಯಶಾಲಿನಿಯಾದ ಕುಂಭೀನಸೀ ಎಂಬುವಳು ಮಧುವಿನ ಪತ್ನಿ. ಮಹಾಪ್ರಭೆಯಿಂದ ಯುಕ್ತಳಾಗಿದ್ದ ಅವಳು ವಿಶ್ವಾವಸು ಎಂಬುವವನಿಗೆ ಅನಲಾ ಎಂಬುವವಳಲ್ಲಿ ಹುಟ್ಟಿದ್ದಳು. ಲವಣನೆಂಬ ಹೆಸರಿನ ಮಹಾವೀರ್ಯನಾದ ಮತ್ತು ಭಯಂಕರನಾದ ದೈತ್ಯನು ಕುಂಭೀನಸಿಯ ಮಗನು. ಹುಟ್ಟಿದಾಗಿನಿಂದಲೂ ಅವನು ದುಷ್ಟನಾಗಿದ್ದು ಯಾವಾಗಲೂ ಪಾಪಕಾರ್ಯಗಳನ್ನೇ ಮಾಡುತ್ತಿದ್ದಾನೆ. ದುಷ್ಟನಾದ ತನ್ನ ಮಗನನ್ನು ನೋಡಿ ಮಧುವಿಗೆ ಬಹಳ ದುಃಖವಾಯಿತು. ಆದರೂ ಅವನು ಮಗನಿಗೆ ಯಾವ ವಿವೇಕವನ್ನೂ ಹೇಳಲಿಲ್ಲ. ಕಡೆಗೆ ಮಧುವು ಭೂಮಂಡಲವನ್ನೇ ಬಿಟ್ಟು ವರುಣಲೋಕಕ್ಕೆ ಹೋದನು. ಹೋಗುವಾಗ ಅವನು ಶೂಲವನ್ನು ಮಗನಿಗೆ ಕೊಟ್ಟು ಶಂಕರನು ಕೊಟ್ಟ ವರದ ವಿಷಯವಾಗಿಯೂ ಹೇಳಿದನು. ಈಗ ಆ ಲವಣನು ಶೂಲದ ಪ್ರಭಾವದಿಂದಲೂ ಮತ್ತು ಸ್ವಭಾವಸಿದ್ಧವಾಗಿ ಬಂದ ದುಷ್ಟತನದಿಂದಲೂ ಮೂರು ಲೋಕಗಳನ್ನೂ ಸಂತಾಪಪಡಿಸುತ್ತಿದ್ದಾನೆ. ಅದರಲ್ಲಿಯೂ ವಿಶೇಷವಾಗಿ ತಪಸ್ವಿಜನರನ್ನು ಬಹಳವಾಗಿ ಪೀಡಿಸುತ್ತಿದ್ದಾನೆ.

ರಾಘವ ! ಲವಣನು ಇಷ್ಟು ಪ್ರಭಾವಶಾಲಿಯಾಗಿರುವನು. ಅವನ ಬಳಿಯಲ್ಲಿ ಶಿವನ ಮಹಾಶಕ್ತಿಶಾಲಿಯಾದ ಶೂಲವೂ ಇದೆ. ಈ ಎಲ್ಲ ವಿಷಯಗಳನ್ನೂ ಕೇಳಿದನಂತರ ಯಥೋಚಿತವಾದ ಕಾರ್ಯವನ್ನು ಮಾಡು. ನೀನೇ ನಮಗೆ ಆಧಾರಭೂತನೂ ಪರಮಾಶ್ರಯನೂ ಆಗಿರುವೆ. ಈ ಹಿಂದೆ ಭಯ

ಪೀಡಿತರಾದ ಋಷಿ - ಮುನಿಗಳು ಅನೇಕ ರಾಜರ ಅಭಯವನ್ನು ಕೇಳಿದರು. ಆದರೆ ಇದುವರೆಗೂ ನಮಗೆ ರಕ್ಷಕನೇ ಸಿಕ್ಕಿರುವುದಿಲ್ಲ. ಇತ್ತೀಚೆಗೆ ಚತುರಂಗಬಲಸಮೇತನಾದ ರಾವಣನನ್ನು ನೀನು ಸಂಹರಿಸಿದೆಯೆಂಬ ವಾರ್ತೆಯನ್ನು ಕೇಳಿದೆವು. ನೀನೇ ನಮ್ಮನ್ನು ರಕ್ಷಿಸಲು ಸಮರ್ಥನೆಂದು ನಿಶ್ಚಯಿಸಿದೆವು. ನೀನಲ್ಲದೇ ಈ ಲೋಕದಲ್ಲಿ ಬೇರೆ ಯಾರೂ ನಮ್ಮನ್ನು ರಕ್ಷಿಸಲಾರರು. ಲವಣರಾಕ್ಷಸನಿಂದ ಭಯಗೊಂಡಿರುವ ನಮ್ಮನ್ನು ರಕ್ಷಿಸು. ಬಲ -ಪರಾಕ್ರಮಗಳಿಂದ ಸಂಪನ್ನನಾದ ರಾಘವನೇ! ಹೀಗೆ ನಮಗೆ ಲವಣ ನಿಂದ ಉಂಟಾಗಿರುವ ಭಯವನ್ನು ನಿನ್ನ ಮುಂದೆ ನಿವೇದಿಸಿಕೊಂಡಿದ್ದೇವೆ. ಈ ನಮ್ಮ ಭಯವನ್ನು ಹೋಗಲಾಡಿಸಲು ನೀನು ಸಮರ್ಥನಾಗಿರುವೆ. ನಮ್ಮ ಈ ಅಭಿಲಾಷೆಯನ್ನು ಪೂರ್ಣಗೊಳಿಸು.''

61ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **62ನೆಯ ಸರ್ಗ**

ಶ್ರೀರಾಮನು ಋಷಿಗಳಿಂದ ಲವಣಾಸುರನ ಆಹಾರ -ವಿಹಾರಗಳ ವಿಷಯವನ್ನು ತಿಳಿದುಕೊಂಡುದು : ಲವಣಾಸುರನ ಸಂಹಾರಕ್ಕಾಗಿ ಶತ್ರುಘ್ನನನ್ನು ನಿಯಮಿಸಿದುದು

ತಥೋಕ್ತೇ ತಾನೃಷೀನ್ರಾಮಃ ಪ್ರತ್ಯುವಾಚ ಕೃತಾಞ್ಜಲಿಃ ।
ಕಿಮಾಹಾರಃ ಕಿಮಾಚಾರೋ ಲವಣಃ ಕ್ವ ಚ ವರ್ತತೇ ॥ 1॥

ಋಷಿಗಳೆಲ್ಲರೂ ರಕ್ಷಣೆಗಾಗಿ ಶ್ರೀರಾಮನನ್ನು ಹೀಗೆ ಪ್ರಾರ್ಥಿಸಲು ಶ್ರೀರಾಮನು ಕೈಮುಗಿದುಕೊಂಡು ಋಷಿಗಳನ್ನು ಪ್ರಶ್ನಿಸಿದನು :

''ಮಹರ್ಷಿಗಳೇ ! ಲವಣಾಸುರನ ಆಹಾರವೇನು ? ಅವನ ಆಚಾರ-ವ್ಯವಹಾರಗಳು ಹೇಗಿವೆ ? ಅವನೆಲ್ಲಿ ವಾಸಿಸುತ್ತಿದ್ದಾನೆ ? ಈ ಎಲ್ಲ ವಿಷಯಗಳನ್ನೂ ನನಗೆ ಹೇಳಿರಿ.''

ರಾಘವನ ಆ ಮಾತನ್ನು ಕೇಳಿ ಎಲ್ಲ ಋಷಿಗಳೂ ಲವಣಾಸುರನು ಹುಟ್ಟಿ ಬೆಳೆದ ಎಲ್ಲ ವೃತ್ತಾಂತಗಳನ್ನೂ ಶ್ರೀರಾಮನಿಗೆ ನಿವೇದಿಸಿದರು.

ಆಹಾರಃ ಸರ್ವಸತ್ತ್ವಾನಿ ವಿಶೇಷೇಣ ಚ ತಾಪಸಾಃ ।
ಆಚಾರೋ ರೌದ್ರತಾ ನಿತ್ಯಂ ವಾಸೋ ಮಧುವನೇ ತಥಾ ॥ 3॥

ಸಮಸ್ತಪ್ರಾಣಿಗಳೂ ಅವನ ಆಹಾರವಾಗಿದೆ. ಮುನಿಜನರನ್ನೇ ಅವನು ವಿಶೇಷವಾಗಿ ಭಕ್ಷಿಸುತ್ತಿರುತ್ತಾನೆ. ಕ್ರೌರ್ಯ- ಭಯೋತ್ಪಾದನೆಗಳೇ ಅವನ ಆಚಾರ-ವಿಚಾರಗಳಾಗಿವೆ. ಮಧುವನದಲ್ಲಿ ಅವನ ವಾಸ.

ಅವನು ಪ್ರತಿನಿತ್ಯವೂ ಅನೇಕ ಸಹಸ್ರ ಸಿಂಹ-ವ್ಯಾಘ್ರ-ಮೃಗಗಳನ್ನೂ, ಪಕ್ಷಿಗಳನ್ನೂ, ಮನುಷ್ಯರನ್ನೂ ಕೊಂದು ತಿನ್ನುತ್ತಿರುತ್ತಾನೆ. ಪ್ರಳಯಕಾಲವು ಸನ್ನಿಹಿತವಾದೊಡನೆಯೇ ಅಂತಕನು ಬಾಯ್ದೆರೆದು ಪ್ರಾಣಿಗಳನ್ನು ಸಂಹಾರಮಾಡುವಂತೆ- ಮಹಾಬಲನಾದ ಲವಣಾಸುರನು ಇನ್ನೂ ಅನೇಕ ಪ್ರಾಣಿಗಳನ್ನು ಭಕ್ಷಿಸುತ್ತಿರುತ್ತಾನೆ.''

ಋಷಿಗಳ ಮಾತನ್ನು ಕೇಳಿ ರಾಘವನು ಹೇಳಿದನು:

ಘಾತಯಿಷ್ಯಾಮಿ ತದ್ರಕ್ಷೋ ವ್ಯಪಗಚ್ಛತು ವೋ ಭಯಮ್ ॥ 6॥

''ಮಹರ್ಷಿಗಳೇ! ಖಂಡಿತವಾಗಿಯೂ ಆ ರಾಕ್ಷಸನನ್ನು ನಾನು ಸಂಹರಿಸುವೆನು. ಹೃದಯದಿಂದ ನಿಮ್ಮ ಭಯವು ಇಂದೇ ದೂರವಾಗಲಿ.''

ಮಹಾತೇಜಸ್ವಿಗಳಾದ ಋಷಿ-ಮುನಿಗಳ ಮುಂದೆ ಶ್ರೀರಾಮನು ಹೀಗೆ ಪ್ರತಿಜ್ಞೆ ಮಾಡಿ ಅಲ್ಲಿಯೇ ಒಟ್ಟಾಗಿ ಕುಳಿತಿದ್ದ ತಮ್ಮಂದಿರಿಗೆ ಹೇಳಿದನು:

ಕೋ ಹನ್ತಾ ಲವಣಂ ವೀರಃ ಕಸ್ಯಾಂಶಃ ಸ ವಿಧೀಯತಾಮ್ ।
ಭರತಸ್ಯ ಮಹಾಬಾಹೋಃ ಶತ್ರುಘ್ನಸ್ಯ ಚ ಧೀಮತಃ ॥8॥

''ಸಹೋದರರೇ ! ಲವಣಾಸುರನನ್ನು ನಿಮ್ಮಲ್ಲಿ ಯಾವ ವೀರನು ಸಂಹರಿಸಲಿದ್ದಾನೆ ? ನಿಮ್ಮಲ್ಲಿ ಯಾರಾದರೂ ಇದನ್ನು ವಹಿಸಿಕೊಳ್ಳಿರಿ. ಮಹಾಬಾಹುವಾದ ಭರತನಾಗಲೀ ಧೀಮಂತನಾದ ಶತ್ರುಘ್ನನಾಗಲೀ ಈ ಕಾರ್ಯವನ್ನು ಮಾಡಬೇಕು.''

ರಾಘವನು ಹೀಗೆ ಹೇಳುತ್ತಲೇ ಭರತನು ಹೇಳಿದನು :

ಅಹಮೇನಂ ವಧಿಷ್ಯಾಮಿ ಮಮಾಂಶಃ ಸ ವಿಧೀಯತಾಮ್ ॥9॥

''ಅಣ್ಣ ! ಅವನನ್ನು ನಾನು ಸಂಹರಿಸುತ್ತೇನೆ. ನನ್ನ ಪಾಲಿಗೆ ಅವನನ್ನು ಬಿಟ್ಟುಬಿಡಿ.''

ಧೈರ್ಯ -ಶೌರ್ಯಯುಕ್ತವಾದ ಭರತನ ಮಾತನ್ನು ಕೇಳಿ ಲಕ್ಷ್ಮಣನ ತಮ್ಮನಾದ ಶತ್ರುಘ್ನನು ಸುವರ್ಣಮಯವಾದ ಆಸನದಿಂದ ಮೇಲೆದ್ದು ರಾಘವನಿಗೆ ನಮಸ್ಕರಿಸಿ ಹೇಳಿದನು :

'' ಅಣ್ಣ ! ಮಹಾಬಾಹುವಾದ ಮಧ್ಯಮನಾದ ಭರತನು ಈಗಾಗಲೇ ಅನೇಕಕಾರ್ಯಗಳನ್ನು ಮಾಡಿರುವನು. ಅಯೋಧ್ಯಾಪಟ್ಟಣವು ನಿನ್ನಿಂದ ಶೂನ್ಯವಾಗಿದ್ದಾಗ ನೀನು ಹಿಂದಿರುಗಿ ಬರುವವರೆಗೂ ಸಂತಾಪದಿಂದ ಕೂಡಿದ ಮನಸ್ಸಿನಿಂದಲೇ ಭರತನು ಅಯೋಧ್ಯೆಯನ್ನು ರಕ್ಷಿಸಿದ್ದಾನೆ.

ಅವನು ರಾಜ್ಯವಾಳುತ್ತಿದ್ದಾಗಲೂ ಅನೇಕವಿಧವಾದ ದುಃಖಗಳನ್ನು ಅನುಭವಿಸಿದ್ದಾನೆ. ಮಹಾಯಶೋವಂತನಾದ ಭರತನು ನಂದಿಗ್ರಾಮದಲ್ಲಿ ವಾಸಮಾಡುತ್ತಾ ದುಃಖಕರವಾದ ಒರಟಾದ ನೆಲದ ಮೇಲೆ ಮಲಗುತ್ತಿದ್ದನು. ಫಲ -ಮೂಲಗಳನ್ನೇ ತಿನ್ನುತ್ತಿದ್ದನು. ಜಟೆಯನ್ನು ಬಿಟ್ಟಿದ್ದನು. ನಾರುಮಡಿಯನ್ನುಡುತ್ತಿದ್ದನು. ಇಂತಹ ದುಃಖಪರಂಪರೆಯನ್ನೇ ಅನುಭವಿಸಿರುವ ಭರತನು ಸೇವಕನಾದ ನಾನಿರಲಾಗಿ - ಪುನಃ ಕ್ಲೇಶಗಳನ್ನು ಅನುಭವಿಸಬಾರದು.''

ಶತ್ರುಘ್ನನು ಹೀಗೆ ಹೇಳಲು ಅವನ ಮಾತಿಗೆ ಸಮ್ಮತಿಸುತ್ತಾ ರಾಘವನು ಹೇಳಿದನು :

''ಶತ್ರುಘ್ನ ! '**ಏವಂ ಭವತು** - ನೀನು ಹೇಳಿದಂತೆಯೇ ಆಗಲಿ.' ನನ್ನ ಆಜ್ಞೆಯಂತೆ ನಡೆದುಕೋ. ಮಧುವಿನ ಸುಂದರವಾದ ನಗರಕ್ಕೆ ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ. ಭರತನಿಗೆ ಪುನಃ ಕ್ಲೇಶವನ್ನುಂಟುಮಾಡುವುದು ಸರಿಯಲ್ಲವೆಂದು ನೀನು ಭಾವಿಸುವೆಯಾದರೆ ಅವನಿಲ್ಲಿಯೇ ಇರಲಿ. ನೀನು ಶೂರನೂ ವಿದ್ಯಾವಂತನೂ ಆಗಿರುವೆ. ನೂತನ ನಗರವನ್ನು ನಿರ್ಮಾಣ ಮಾಡುವುದರಲ್ಲಿಯೂ ಸಮರ್ಥನಾಗಿರುವೆ. ನೀನು ಯಮುನಾನದಿಯ ತೀರದಲ್ಲಿ ಸುಂದರವಾದ ನಗರವನ್ನು ನಿರ್ಮಿಸು. ಹಾಗೆಯೇ ಅಲ್ಲಿ ಒಂದು ಸಾಮ್ರಾಜ್ಯವನ್ನೂ ಸ್ಥಾಪಿಸು.

ಯೋ ಹಿ ವಂಶಂ ಸಮುತ್ಪಾಟ್ಯ ಪಾರ್ಥಿವಸ್ಯ ನಿವೇಶನೇ ।
ನ ವಿಧತ್ತೇ ನೃಪಂ ತತ್ರ ನರಕಂ ಸ ಹಿ ಗಚ್ಛತಿ ॥18॥

ಯಾವನು ಶತ್ರುರಾಜನೊಬ್ಬನ ವಂಶವನ್ನು ಮೂಲೋತ್ಪಾಟನ ಮಾಡಿ ಅವನ ರಾಜಧಾನಿಯಲ್ಲಿ ಬೇರೊಬ್ಬ ಸಮರ್ಥನಾದ ರಾಜನನ್ನು ನಿಯಮಿಸುವುದಿಲ್ಲವೋ – ಅವನು ನರಕಕ್ಕೆ ಹೋಗುತ್ತಾನೆ.

ನನ್ನ ಮಾತು ಧರ್ಮಸಮ್ಮತವಾಗಿರುವುದೆಂದೂ, ಗೌರವಿಸಲು ಯೋಗ್ಯವಾಗಿರುವುದೆಂದೂ ನೀನು ಭಾವಿಸುವೆಯಾದರೆ – ಪಾಪಿಷ್ಠನಾದ ಮಧುವಿನ ಮಗನಾದ ಲವಣಾಸುರನನ್ನು ಸಂಹರಿಸಿ ಧರ್ಮದಿಂದ ಆ ರಾಜ್ಯವನ್ನು ಶಾಸನಮಾಡು. ನಾನು ಹೇಳಿದ ಮೇಲೆ ಮಧ್ಯೆ ನೀನು ಯಾವ ಮಾತನ್ನೂ ಆಡಬಾರದು.

ಬಾಲೇನ ಪೂರ್ವಜಸ್ಯಾಜ್ಞಾ ಕರ್ತವ್ಯಾ ನಾತ್ರ ಸಂಶಯಃ ॥20॥

ಕಿರಿಯನು ಹಿರಿಯಣ್ಣನ ಆಜ್ಞೆಯನ್ನು ಪಾಲಿಸುವುದು ಕರ್ತವ್ಯವಾಗಿರುತ್ತದೆ.

ವಸಿಷ್ಠರೇ ಮೊದಲಾದ ಬ್ರಾಹ್ಮಣರು ನಿನಗೆ ವಿಧಿಪೂರ್ವಕವಾಗಿ ಮಂತ್ರಪುರಸ್ಕೃತವಾಗಿ ಪಟ್ಟಾಭಿಷೇಕವನ್ನು ಮಾಡುತ್ತಾರೆ. ನನ್ನ ಆಜ್ಞೆಯಂತೆ ಪ್ರಾಪ್ತವಾಗಿರುವ ಈ ಪಟ್ಟಾಭಿಷೇಕವನ್ನು ನೀನು ಸ್ವೀಕರಿಸು.''

62ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **63ನೆಯ ಸರ್ಗ**

ಶತ್ರುಘ್ನನಿಗೆ ಪಟ್ಟಾಭಿಷೇಕ : ಲವಣಾಸುರನ ಶೂಲದಿಂದ ಪಾರಾಗುವ ಉಪಾಯ

ಏವಮುಕ್ತಸ್ತು ರಾಮೇಣ ಪರಾಂ ವ್ರೀಡಾಮುಪಾಗಮತ್ ।
ಶತ್ರುಘ್ನೋ ವೀರ್ಯಸಂಪನ್ನೋ ಮನ್ದಂ ಮನ್ದಮುವಾಚ ಹ ॥1॥

ಶ್ರೀರಾಮನು ಹೀಗೆ ಹೇಳಲು ವೀರ್ಯಸಂಪನ್ನನಾದ ಶತ್ರುಘ್ನನು ಲಜ್ಜಿತನಾಗಿ ಮೆಲ್ಲ–ಮೆಲ್ಲನೆ ಈ ಮಾತುಗಳನ್ನು ಹೇಳಿದನು :

ಅಧರ್ಮಂ ವಿದ್ಮ ಕಾಕುತ್ಸ್ಥ ಅಸ್ಮಿನ್ನರ್ಥೇ ನರೇಶ್ವರ ।
ಕಥಂ ತಿಷ್ಠತ್ಸು ಜ್ಯೇಷ್ಠೇಷು ಕನೀಯಾನಭಿಷಿಚ್ಯತೇ ॥2॥

''ನರೇಶ್ವರನೇ! ನಾನು ಪಟ್ಟಾಭಿಷಿಕ್ತನಾಗುವುದು ಅಧರ್ಮವೆಂದು

ಭಾವಿಸುತ್ತೇನೆ. ಹಿರಿಯರಿರುವಾಗ ಕಿರಿಯನಿಗೆ ಪಟ್ಟಾಭಿಷೇಕವು ಹೇಗೆ ಸಾಧ್ಯವಾಗುತ್ತದೆ ?

ಆದರೂ ಪುರುಷಶ್ರೇಷ್ಠನೇ ! ಮಹಾಭಾಗನೇ ! ನಿನ್ನ ಆಜ್ಞಾಪಾಲನೆಯನ್ನು ನಾನು ಮಾಡಲೇಬೇಕು. ನಿನ್ನ ಶಾಸನವನ್ನು ಯಾರೂ ಉಲ್ಲಂಘಿಸಿ ನಡೆಯಲು ಸಾಧ್ಯವೇ ಇಲ್ಲ.

ಜ್ಯೇಷ್ಠರಿರುವಾಗ ಕನಿಷ್ಠರು ಪಟ್ಟಾಭಿಷೇಕಕ್ಕೆ ಯೋಗ್ಯರಾಗುವುದಿಲ್ಲವೆಂಬ ವಿಷಯವನ್ನು ನಾನು ನಿನ್ನಿಂದಲೂ ಕೇಳಿದ್ದೇನೆ. ಇದಕ್ಕೆ ಸಂಬಂಧಿಸಿದ ಶ್ರುತಿವಚನಗಳನ್ನೂ ಕೇಳಿದ್ದೇನೆ. ಆದರೆ ನನ್ನ ಮಧ್ಯದ ಅಣ್ಣನಾದ ಭರತನು ' **ಅಹಮೇನಂ ವಧಿಷ್ಯಾಮಿ ಮಮಾಂಶಃ ಸ ವಿಧೀಯತಾಮ್** -ನಾನು ಲವಣಾಸುರನನ್ನು ಸಂಹರಿಸುತ್ತೇನೆ. ಇದು ನನ್ನ ಪಾಲಿಗಿರಲಿ '- ಎಂದು ಪ್ರತಿಜ್ಞೆ ಮಾಡಿದಾಗ ನಾನು ಮಧ್ಯೆ ಮಾತನಾಡಬಾರದಾಗಿತ್ತು. '**ಹನ್ತಾಸ್ಮಿ ಲವಣಂ ಮೃಧೇ** - ಯುದ್ಧದಲ್ಲಿ ನಾನು ಲವಣನನ್ನು ಸಂಹರಿಸುವೆನು' - ಎಂಬ ಘೋರವಾದ ಮತ್ತು ಅಪ್ರಕೃತವಾದ ಕೆಟ್ಟ ಮಾತನ್ನು ನಾನು ಆಡಿಬಿಟ್ಟೆನು. ನಾನಾಡಿದ ಅಂತಹ ಕೆಟ್ಟ ಮಾತಿಗೆ ನನಗಿಂದು (ಪಟ್ಟಾಭಿಷೇಕಮಾಡಿಸಿಕೊಳ್ಳುವ ಮತ್ತು ನಿನ್ನನ್ನು ಅಗಲಿ ದೂರ ಹೋಗುವ) ದುರ್ಗತಿಯೇ ಪ್ರಾಪ್ತವಾಗಿದೆ.

ಉತ್ತರಂ ನ ಹಿ ವಕ್ತವ್ಯಂ ಜ್ಯೇಷ್ಠೇನಾಭಿಹಿತೇ ಪುನಃ ।
ಅಧರ್ಮಸಹಿತಂ ಚೈವ ಪರಲೋಕವಿವರ್ಜಿತಮ್ ॥6॥

ಜ್ಯೇಷ್ಠನಾದ ಭರತನು ಲವಣಾಸುರನನ್ನುಸಂಹರಿಸುವೆನೆಂದು ಹೇಳಿದಾಗ ನಾನು ಯಾವ ಮಾತನ್ನೂ ಆಡಬಾರದಾಗಿತ್ತು. ಅದರ ಪರಿಣಾಮವಾಗಿಯೇ ನಾನೀಗ ಅಧರ್ಮಯುಕ್ತವಾದ ಮತ್ತು ಪರಲೋಕದಿಂದ ವಂಚಿತವಾದ ಹೀನಕಾರ್ಯವನ್ನು ಮಾಡಬೇಕಾಗಿದೆ.

ಹಿರಿಯರನ್ನು ಅತಿಕ್ರಮಿಸಿ ಪಟ್ಟಾಭಿಷೇಕಮಾಡಿಕೊಳ್ಳಬೇಕಾಗಿದೆ. ಏಕೆಂದರೆ: ನಿನ್ನ ಆಜ್ಞೆಯನ್ನು ನಾನು ಉಲ್ಲಂಘಿಸಲು ಸಾಧ್ಯವೇ ಇಲ್ಲ.

ಸೋಽಹಂ ದ್ವಿತೀಯಂ ಕಾಕುತ್ಸ್ಥ ನ ವಕ್ಷ್ಯಾಮೀತಿ ಚೋತ್ತರಮ್ ।
ಮಾ ದ್ವಿತೀಯೇನ ದಣ್ಡೋ ವೈ ನಿಪತೇನ್ಮಯಿ ಮಾನದ ॥7॥

ಮಾನದನೇ! ನೀನು ಈಗ ಮಾಡಿರುವ ಆಜ್ಞೆಗೆ ಪ್ರತಿಯಾಗಿ ನಾನು ಏನನ್ನೂ ಹೇಳಹೋಗುವುದಿಲ್ಲ. ಹಾಗೇನಾದರೂ ಹೇಳಲು ಹೋಗಿ ನನಗೆ ಎರಡನೆಯ ಬಾರಿ ಕಠೋರಶಿಕ್ಷೆಯಾಗುವುದು ಬೇಡ.

ಕಾಮಕಾರೋ ಹ್ಯಹಂ ರಾಜಂಸ್ತವಾಸ್ಮಿ ಪುರುಷರ್ಷಭ।
ಅಧರ್ಮಂ ಜಹಿ ಕಾಕುತ್ಸ್ಥ ಮತ್ಕೃತೇ ರಘುನನ್ದನ ॥8॥

ಪುರುಷಶ್ರೇಷ್ಠನೇ ! ನಾನು ನಿನ್ನ ಇಚ್ಛೆಗೆ ಅನುಸಾರವಾಗಿಯೇ ನಡೆದುಕೊಳ್ಳುವೆನು. ಆದರೆ ಇದರಿಂದ ಉಂಟಾಗುವ ಅಧರ್ಮವನ್ನು ನೀನೇ ಹೋಗಲಾಡಿಸಬೇಕಾಗಿದೆ.''

ಮಹಾತ್ಮನಾದ ಶೂರನಾದ ಶತ್ರುಘ್ನನು ಹೀಗೆ ಹೇಳಲು ಸಂಹೃಷ್ಟ ನಾದ ಶ್ರೀರಾಮನು ಭರತ-ಲಕ್ಷ್ಮಣರಿಗೆ ಹೇಳಿದನು :

''ಭರತ-ಲಕ್ಷ್ಮಣರೇ ! ನೀವು ಏಕಾಗ್ರಚಿತ್ತರಾಗಿ ಪಟ್ಟಾಭಿಷೇಕಕ್ಕೆ ಬೇಕಾಗುವ ಸಂಭಾರಗಳನ್ನು ಈಗಲೇ ತನ್ನಿರಿ. ನಾನೀಗಲೇ ಪುರುಷಶ್ರೇಷ್ಠ ನಾದ ಶತ್ರುಘ್ನನಿಗೆ ಲವಣನ ರಾಜ್ಯಪದವಿಯಲ್ಲಿ ಪಟ್ಟಾಭಿಷೇಕಮಾಡು ತ್ತೇನೆ. ನನ್ನ ಆಜ್ಞಾನುಸಾರವಾಗಿ ಪುರೋಹಿತರನ್ನೂ, ವೈದಿಕವಿದ್ವಾಂಸ ರನ್ನೂ, ಋತ್ವಿಜರನ್ನೂ, ಸಮಸ್ತಮಂತ್ರಿಗಳನ್ನೂ ಕರೆತನ್ನಿರಿ. ''

ಭರತ -ಲಕ್ಷ್ಮಣರು ಶ್ರೀರಾಮನ ಆಜ್ಞೆಯಂತೆಯೇ ಅಭಿಷೇಕಕ್ಕಾಗಿ ಎಲ್ಲವನ್ನೂ ಸಿದ್ಧಪಡಿಸಿದರು. ಪುರೋಹಿತರಾದ ವಸಿಷ್ಠರನ್ನು ಮುಂದೆಮಾಡಿ ಕೊಂಡು ಬ್ರಾಹ್ಮಣರೊಡನೆಯೂ ಹಲವಾರು ಮಂತ್ರಿಗಳೊಡನೆಯೂ ಪಟ್ಟಾಭಿ ಷೇಕದ ಸಾಮಗ್ರಿಗಳನ್ನು ತೆಗೆದುಕೊಂಡು ರಾಜಭವನವನ್ನು ಪ್ರವೇಶಿಸಿದರು.

ಬಳಿಕ ಶ್ರೀರಾಮನಿಗೂ ಮತ್ತು ಪ್ರಜೆಗಳಿಗೂ ಆನಂದದಾಯಕವಾದ ಶತ್ರುಘ್ನನ ಪಟ್ಟಾಭಿಷೇಕವು ವೈಭವಪೂರ್ಣವಾಗಿ ನಡೆಯಿತು. ಹಿಂದೆ ಇಂದ್ರಸಹಿತರಾದ ದೇವತೆಗಳಿಂದ ದೇವಸೇನೆಗೆ ಅಧಿಪತಿಯಾಗಿ ಪಟ್ಟಾಭಿಷಿಕ್ತ ನಾದ ಸ್ಕಂದನಂತೆ - ಸೂರ್ಯಸದೃಶನಾದ ಶತ್ರುಘ್ನನು ಪಟ್ಟಾಭಿಷಿಕ್ತನಾಗಿ ಬಹಳವಾಗಿ ಪ್ರಕಾಶಿಸಿದನು. ಯಾವುದೇ ಕಾರ್ಯವನ್ನೂ ಆಯಾಸವಿಲ್ಲದೇ ಮಾಡುವ ಶ್ರೀರಾಮನು ಶತ್ರುಘ್ನನಿಗೆ ಪಟ್ಟಗಟ್ಟಲಾಗಿ ಪಟ್ಟಣಿಗರೂ ಮತ್ತು ವಿದ್ವಾಂಸರಾದ ಬ್ರಾಹ್ಮಣರು ಸಂತುಷ್ಟರಾದರು.

ಆ ಸಮಯದಲ್ಲಿ ಕೌಸಲ್ಯಾ –ಕೈಕೇಯೀ –ಸುಮಿತ್ರೆಯರೂ ಮತ್ತು ಅಂತಃಪುರದ ಇತರ ರಾಜಮಹಿಳೆಯರೂ ಮಂಗಳಕಾರ್ಯಗಳನ್ನು ನಿರ್ವಹಿಸಿದರು. ಶ್ರೀರಾಮನು ಶತ್ರುಘ್ನನಿಗೆ ಲವಣನ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿದ ಕಾರಣ ಯಮುನಾತೀರವಾಸಿಗಳಾದ ಮಹಾತ್ಮರಾದ ಮಹರ್ಷಿಗಳು ಲವಣಾಸುರನು ಹತನಾದನೆಂದೇ ಭಾವಿಸಿದರು. ಹೀಗೆ ಶತ್ರುಘ್ನನು ಅಭಿಷಿಕ್ತನಾದ ನಂತರ ಶ್ರೀರಾಮನು ಅವನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ತೇಜಸ್ಸನ್ನು ವೃದ್ಧಿಗೊಳಿಸುತ್ತಾ ಸುಮಧುರವಾದ ಮಾತುಗಳನ್ನು ಹೇಳಿದನು :

ಅಯಂ ಶರಸ್ತ್ವಮೋಘಸ್ತೇ ದಿವ್ಯಃ ಪರಪುರಂಜಯಃ ।
ಅನೇನ ಲವಣಂ ಸೌಮ್ಯ ಹನ್ತಾಸಿ ರಘುನನ್ದನ ॥19॥

''ರಘುನಂದನನೇ! ಸೌಮ್ಯನೇ! ಶತ್ರುಘ್ನ! ನಾನು ನಿನಗೆ ಈ ದಿವ್ಯವಾದ ಅಸ್ತ್ರವನ್ನು ಕೊಡುತ್ತಿದ್ದೇನೆ. ಇದರಿಂದಲೇ ನೀನು ಲವಣಾಸುರನನ್ನು ಸಂಹರಿಸುವೆ.

ಪ್ರಳಯಕಾಲದಲ್ಲಿ ಜಗತ್ತೆಲ್ಲವೂ ಜಲಮಯವಾಗಿದ್ದಿತು. ಅಪರಾಜಿತನಾದ, ಸ್ವಯಂಭುವನಾದ, ದಿವ್ಯರೂಪನಾದ ಮಹಾವಿಷ್ಣುವು ಏಕಾರ್ಣವರೂಪವಾಗಿದ್ದ ಮಹಾಸಮುದ್ರದಲ್ಲಿ ಮಲಗಿದ್ದನು. ಆ ಸಮಯದಲ್ಲಿ ದೇವತೆಗಳಾಗಲೀ ದಾನವರಾಗಲೀ ಅವನನ್ನು ಕಾಣಲಾಗಲಿಲ್ಲ. ಸರ್ವಪ್ರಾಣಿಗಳಿಗೂ ನಾರಾಯಣನು ಅದೃಶ್ಯನಾಗಿದ್ದನು. ಆ ಸಮಯದಲ್ಲಿ ಮಧು –ಕೈಟಭರೆಂಬ ರಾಕ್ಷಸರು ಲೋಕಸೃಷ್ಟಿಗೆ ತಡೆಯನ್ನುಂಟುಮಾಡುತ್ತಿದ್ದರು. ಕ್ರೋಧಾಭಿಭೂತನಾದ ನಾರಾಯಣನು ಆ ದುರಾತ್ಮರನ್ನೂ ಮತ್ತು ಅವರ ಅನುಯಾಯಿಗಳಾದ ರಾಕ್ಷಸರನ್ನೂ ಸಂಹರಿಸಲು ಈ ಬಾಣವನ್ನು ಸೃಷ್ಟಿಸಿದನು. ಈ ಬಾಣದಿಂದಲೇ ಲೋಕಕಂಟಕರಾಗಿದ್ದ ಮಧು –ಕೈಟಭರನ್ನು ಸಂಹರಿಸಿ ಪ್ರಾಣಿಗಳ ಕರ್ಮಫಲಭೋಗಕ್ಕಾಗಿ ಮೂರು ಲೋಕಗಳನ್ನೂ ಸೃಷ್ಟಿಸಿದನು. ನಾನು ರಾವಣನನ್ನು ಸಂಹರಿಸುವಾಗಲೂ ಈ ಅಮೋಘವಾದ ಬಾಣವನ್ನು ಪ್ರಯೋಗಿಸಲಿಲ್ಲ. ಏಕೆಂದರೆ : ಇದನ್ನು ಪ್ರಯೋಗಿಸುವುದರಿಂದ ಅನೇಕ ಪ್ರಾಣಿಗಳ ನಾಶವಾಗಬಹುದೆಂದು ನಾನು ಭಾವಿಸಿದ್ದೆನು.

ಲವಣಾಸುರನ ಬಳಿಯಲ್ಲಿ ಮಹಾದೇವನು ಶತ್ರುಗಳ ವಿನಾಶಕ್ಕಾಗಿ ಮಧುವಿಗೆ ಅನುಗ್ರಹಿಸಿಕೊಟ್ಟಿರುವ ಶ್ರೇಷ್ಠವಾದ ಶೂಲಾಯುಧವಿದೆ. ಲವಣನು ಆ ಶೂಲವನ್ನು ಅರಮನೆಯಲ್ಲಿಟ್ಟು ಅನುದಿನವೂ ಪೂಜಿಸುತ್ತಿರುತ್ತಾನೆ. ಆ ಶೂಲದ ಆಶ್ರಯದಿಂದ ಎಲ್ಲ ದಿಕ್ಕುಗಳಲ್ಲಿಯೂ ನಿರ್ಭಯವಾಗಿ ಸಂಚರಿಸುತ್ತಾ ತನಗೆ ಬೇಕಾದ ಆಹಾರವನ್ನು ಸಂಗ್ರಹಿಸುತ್ತಾನೆ.

ಲವಣನೊಡನೆ ಯುದ್ಧಮಾಡುವ ಆಕಾಂಕ್ಷೆಯಿಂದ ಯಾವ ವೀರನಾದರೂ ಅವನನ್ನು ಯುದ್ಧಕ್ಕೆ ಆಹ್ವಾನಿಸಿದರೆ – ಆಗ ಆ ಅಸುರನು ಶೂಲಾಯುಧಪಾಣಿಯಾಗಿ ಬಂದು ಶತ್ರುವನ್ನು ಧ್ವಂಸಮಾಡುತ್ತಾನೆ. ಆದುದರಿಂದ ವೀರಾಗ್ರಣಿಯಾದ ಲವಣನು ಶೂಲವನ್ನು ಹಿಡಿಯದೇ ಪಟ್ಟಣದಿಂದ ಹೊರಗೆ ಹೋಗಿದ್ದಾಗ ನೀನು ಅವನ ನಗರದ ಪೂರ್ವದಿಕ್ಕಿನ ಮಹಾದ್ವಾರದಲ್ಲಿ ಆಯುಧಗಳನ್ನು ಹಿಡಿದು ನಿಂತಿರು. ಮಹಾಬಾಹುವೇ! ಪುರುಷಶ್ರೇಷ್ಠನೇ ! ಲವಣಾಸುರನು ರಾಜಭವನವನ್ನು ಪ್ರವೇಶಿಸುವುದಕ್ಕೆ ಮೊದಲೇ ನೀನು ಅವನನ್ನು ಯುದ್ಧಕ್ಕೆ ಆಹ್ವಾನಿಸಬೇಕು. ಆಗ ನೀನು ರಾಕ್ಷಸನನ್ನು ಖಂಡಿತವಾಗಿಯೂ ಸಂಹರಿಸುವೆ. ಹೀಗೆ ಮಾಡದಿದ್ದರೆ ಅವನು ಅವಧ್ಯನಾಗುತ್ತಾನೆ. ಬೇರೆ ಯಾವುದೇ ಉಪಾಯದಿಂದಲೂ ಅವನನ್ನು ಸಂಹರಿಸುವ ಸಾಧ್ಯತೆಯಿಲ್ಲ. ನಾನು ಹೇಳಿರುವಂತೆಯೇ ಮಾಡಿದೆಯಾದರೆ ಲವಣನು ವಿನಾಶಹೊಂದುತ್ತಾನೆ. ಶತ್ರುಘ್ನ! ಹೀಗೆ ನಾನು ನಿನಗೆ ಎಲ್ಲ ವಿಷಯಗಳನ್ನೂ ಹೇಳಿದ್ದೇನೆ. ಶೂಲದಿಂದ ತಪ್ಪಿಸಿಕೊಳ್ಳುವ ಉಪಾಯವನ್ನೂ ಹೇಳಿದ್ದೇನೆ.

ಶ್ರೀಮತಃ ಶಿತಿಕಣ್ಠಸ್ಯ ಕೃತ್ಯಂ ಹಿ ದುರತಿಕ್ರಮಮ್ ॥31॥

ವಿಭೂತಿಪುರುಷನಾದ ಶಿತಿಕಂಠನ ವರಪ್ರದಾನವು ಅತಿಕ್ರಮಿಸಲು ಅಸಾಧ್ಯವಾದುದಲ್ಲವೇ !''

63ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 64ನೆಯ ಸರ್ಗ

ಲವಣಾಸುರನ ಸಂಹಾರಕ್ಕಾಗಿ ಶತ್ರುಘ್ನನ ಪ್ರಯಾಣ

ಏವಮುಕ್ತ್ವಾ ತು ಕಾಕುತ್ಸ್ಥಂ ಪ್ರಶಸ್ಯ ಚ ಪುನಃ ಪುನಃ ।
ಪುನರೇವಾಪರಂ ವಾಕ್ಯಮುವಾಚ ರಘುನನ್ದನಃ ॥1॥

ಶ್ರೀರಾಮನು ಶತ್ರುಘ್ನನಿಗೆ ಹೀಗೆ ಹೇಳಿ ಅವನನ್ನು ಪ್ರಶಂಸೆ ಮಾಡುತ್ತಾ ಪುನಃ ಹೇಳತೊಡಗಿದನು :

'' ಪುರುಷಶ್ರೇಷ್ಠನೇ! ನಾಲ್ಕು ಸಾವಿರ ಕುದುರೆಗಳೂ, ಎರಡು ಸಾವಿರ ರಥಗಳೂ, ಶ್ರೇಷ್ಠವಾದ ನೂರು ಆನೆಗಳೂ, ಮಾರ್ಗಮಧ್ಯದಲ್ಲಿ ಬೇಕಾದ ಪದಾರ್ಥಗಳನ್ನು ವಿಕ್ರಯಿಸುವ ವರ್ತಕರ ಅಂಗಡಿಗಳೂ ಮತ್ತು ನಟ -ನರ್ತಕಿಯರೂ ನಿನ್ನ ಸಂಗಡ ಹೋಗಲಿ.

ಶತ್ರುಘ್ನ ! ನೀನು ಹತ್ತು ಲಕ್ಷ ಸುವರ್ಣಮುದ್ರೆಗಳನ್ನು ತೆಗೆದು ಕೊಂಡು ಹೋಗು. ಹಾಗೆಯೇ ನಿನಗೆ ಸಾಕಾಗುವಷ್ಟು ಧನವನ್ನೂ ವಾಹನ ಗಳನ್ನೂ ತೆಗೆದುಕೊಂಡು ಹೋಗು.

ಬಲಂ ಚ ಸುಭೃತಂ ವೀರ ಹೃಷ್ಟತುಷ್ಟಮನುದ್ಧತಮ್ ।
ಸಮ್ಭಾಷಾಸಮ್ಪ್ರದಾನೇನ ರಞ್ಜಯಸ್ವ ನರೋತ್ತಮ ॥5॥

ಸೈನ್ಯದ ಭರಣ -ಪೋಷಣೆಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಸೈನ್ಯವು ಯಾವಾಗಲೂ ಹರ್ಷೋತ್ಸಾಹಗಳಿಂದ ಕೂಡಿರಬೇಕು. ಆದರೆ ಉದ್ಧಟತನವಿರಬಾರದು. ರಾಜನ ಆಜ್ಞೆಗೆ ಅಧೀನವಾಗಿರಬೇಕು. ಮಧುರ ವಾದ ಮಾತುಗಳಿಂದಲೂ ಮತ್ತು ಪಾರಿತೋಷಿಕಗಳಿಂದಲೂ ಅವರನ್ನು ಪ್ರಸನ್ನಗೊಳಿಸು.

ನ ಹ್ಯರ್ಥಾಸ್ತತ್ರ ತಿಷ್ಠನ್ತಿ ನ ದಾರಾ ನ ಚ ಬಾನ್ಧವಾಃ ।
ಸುಪ್ರೀತೋ ಭೃತ್ಯವರ್ಗಸ್ತು ಯತ್ರ ತಿಷ್ಠತಿ ರಾಘವ ॥6॥

ಸೇವಕವರ್ಗವು ತೃಪ್ತಿಗೊಂಡು ಸುಪ್ರಸನ್ನವಾಗಿರಬೇಕು. ಅಂತಹ ಸೇವಕರಿಂದಾಗುವ ಸಹಾಯ-ಒತ್ತಾಸೆಗಳು ಹಣದಿಂದಾಗಲೀ ಪತ್ನಿಯಿಂದಾ ಗಲೀ ಬಂಧುಗಳಿಂದಾಗಲೀ ಆಗುವುದಿಲ್ಲ.

ಆದುದರಿಂದ ಸಂತುಷ್ಟರಾದ ಜನರಿಂದ ಕೂಡಿರುವ ದೊಡ್ಡ ಸೈನ್ಯವನ್ನು ಮೊದಲು ಕಳುಹಿಸಿ, ಬಳಿಕ ನೀನೊಬ್ಬನೇ ಧನುಷ್ಪಾಣಿಯಾಗಿ ಮಧುವನಕ್ಕೆ ಹೋಗು. ಮಧುವಿನ ಮಗನಾದ ಲವಣನಿಗೆ ನೀನು ಯುದ್ಧಾಕಾಂಕ್ಷಿಯಾಗಿ ಅಲ್ಲಿಗೆ ಹೋಗುತ್ತಿರುವೆಯೆಂಬ ಸುಳಿವು ಸಿಕ್ಕದಂತೆ ನಿನ್ನ ವಿಷಯದಲ್ಲಿ ಅವನಿಗೆ ಸ್ವಲ್ಪವೂ ಸಂದೇಹವುಂಟಾಗದಂತೆ ನೀನು ಅಲ್ಲಿಗೆ ಪ್ರಯಾಣಮಾಡಬೇಕು. ನಾನು ಹೇಳಿದ ಉಪಾಯದ ಹೊರತಾಗಿ ಅವನಿಗೆ ಮರಣವೇ ಇಲ್ಲ. ಶೂಲಪಾಣಿಯಾದ ಲವಣಾಸುರನ ಕಣ್ಣಿಗೆ ಯಾವನು ಬೀಳುವನೋ ಅಂತಹವನು ಹತನಾದಂತೆಯೇ ಸರಿ. ಸೌಮ್ಯನೇ ! ಗ್ರೀಷ್ಮರ್ತುವು ಕಳೆದು ವರ್ಷರ್ತುವು ಪ್ರಾರಂಭವಾಗುವಾಗ ನೀನು ಲವಣಾಸುರನನ್ನು ಸಂಹರಿಸಬೇಕು. ದುರ್ಬುದ್ಧಿಯವನಾದ ಲವಣಾಸುರನ ವಧೆಗೆ ಅದೇ ಸರಿಯಾದ ಕಾಲವಾಗಿದೆ. ನಿನ್ನ ಸೈನಿಕರು ಮಹರ್ಷಿಗಳನ್ನು ಮುಂದೆಮಾಡಿಕೊಂಡು ಪ್ರಯಾಣಮಾಡಲಿ. ಗ್ರೀಷ್ಮರ್ತುವು ಮುಗಿಯುತ್ತಿದ್ದಂತೆಯೇ ಅವರು ಗಂಗಾನದಿಯನ್ನು ದಾಟಲಿ. ಶೀಘ್ರಪರಾಕ್ರಮಿಯೇ ! ನೀನು ಏಕಾಗ್ರಚಿತ್ತನಾಗಿ ನದಿಯ ತೀರದಲ್ಲಿ ಸೈನ್ಯವನ್ನು ನೆಲೆಗೊಳಿಸಿ ಧನುಸ್ಸನ್ನು ಹಿಡಿದು ಒಬ್ಬನೇ ಮುಂದೆ ಹೋಗು.''

ಶ್ರೀರಾಮನು ಹೀಗೆ ಹೇಳಲು ಶತ್ರುಘ್ನನು ತನ್ನ ಸೇನಾನಾಯಕರೆಲ್ಲರನ್ನೂ ಕರೆಯಿಸಿ ಹೇಳಿದನು :

''ಸೇನಾಪತಿಗಳೇ ! ನೀವು ಮಾರ್ಗದಲ್ಲಿ ಎಲ್ಲೆಲ್ಲಿ ಬೀಡುಬಿಡಬೇಕೆಂಬುದು ನಿಶ್ಚಿತವಾಗಿದೆ. ನೀವೆಲ್ಲರೂ ಯಾವ ವಿಧವಾದ ವಿರೋಧ ಭಾವನೆಯೂ ಇಲ್ಲದೇ ಸೂಚಿತವಾದ ಸ್ಥಳಗಳಲ್ಲಿ ಬೀಡುಬಿಟ್ಟುಕೊಂಡು ಮುಂದಕ್ಕೆ ಪ್ರಯಾಣಮಾಡಬೇಕು. ಯಾರಿಗೂ ಯಾವುದೇ ಕಾರಣಕ್ಕಾದರೂ ಯಾವ ವಿಧವಾದ ತೊಂದರೆಯೂ ಆಗಬಾರದು.''

ಹೀಗೆ ಶತ್ರುಘ್ನನು ಸೇನಾನಾಯಕರಿಗೆ ಆಜ್ಞೆಮಾಡಿ ಮಹಾಸೈನ್ಯವನ್ನು ಅವರೊಡನೆ ಕಳುಹಿಸಿ ಕೌಸಲ್ಯಾ- ಸುಮಿತ್ರೆ ಮತ್ತು ಕೈಕೇಯಿಯರಿಗೆ ನಮಸ್ಕರಿಸಿದನು. ಶ್ರೀರಾಮನಿಗೆ ಪ್ರದಕ್ಷಿಣೆಮಾಡಿ ಅವನ ಚರಣಾರವಿಂದಗಳಲ್ಲಿ ತಲೆಬಾಗಿ ನಮಸ್ಕರಿಸಿ, ಲಕ್ಷ್ಮಣ -ಭರತರನ್ನು ಕೈಜೋಡಿಸಿ ನಮ

ಸ್ಕರಿಸಿದನು. ಅನಂತರ ಜಿತೇಂದ್ರಿಯನಾದ ಶತ್ರುಘ್ನನು ಪುರೋಹಿತರಾದ ವಸಿಷ್ಠರಿಗೂ ಪ್ರದಕ್ಷಿಣೆಮಾಡಿ ನಮಸ್ಕರಿಸಿ ಶ್ರೀರಾಮನ ಅನುಮತಿಯನ್ನು ಪಡೆದು ಅಯೋಧ್ಯೆಯಿಂದ ಹೊರಟನು.

ಶತ್ರುಘ್ನನು ಶ್ರೇಷ್ಠವಾದ ಆನೆಗಳಿಂದಲೂ, ಕುದುರೆಗಳಿಂದಲೂ ಸಮಾಕುಲವಾಗಿದ್ದ ಮಹಾಸೈನ್ಯವನ್ನು ಮುಂದೆ ಕಳುಹಿಸಿ ಒಂದು ತಿಂಗಳ ವರೆಗೆ ಶ್ರೀರಾಮನ ಜೊತೆಯಲ್ಲಿಯೇ ಇದ್ದು ಅನಂತರ ಅಯೋಧ್ಯೆಯಿಂದ ಪ್ರಯಾಣಮಾಡಿದನು.

64ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ 65ನೆಯ ಸರ್ಗ

ವಾಲ್ಮೀಕಿಗಳು ಶತ್ರುಘ್ನನಿಗೆ ಕಲ್ಮಾಷಪಾದನ ಕಥೆಯನ್ನು ಹೇಳಿದುದು

ಪ್ರಸ್ಥಾಪ್ಯ ಚ ಬಲಂ ಸರ್ವಂ ಮಾಸಮಾತ್ರೋಷಿತಃ ಪಥಿ।
ಏಕ ಏವಾಶು ಶತ್ರುಘ್ನೋ ಜಗಾಮ ತ್ವರಿತಂ ತದಾ ॥1॥

ಹೀಗೆ ಶತ್ರುಘ್ನನು ಸೈನ್ಯವನ್ನು ಮುಂದೆ ಕಳುಹಿಸಿ ಒಂದು ತಿಂಗಳ ವರೆಗೆ ಅಯೋಧ್ಯೆಯಲ್ಲಿಯೇ ಇದ್ದು ಅನಂತರ ತಾನೊಬ್ಬನೇ ಮಧುವನದ ಮಾರ್ಗವನ್ನು ಹಿಡಿದು ತ್ವರೆಯಿಂದ ಹೊರಟನು.

ರಾಘವನಂದನನು ಮಾರ್ಗದಲ್ಲಿ ಎರಡು ರಾತ್ರಿಗಳನ್ನು ಕಳೆದು ಮೂರನೆಯ ದಿನ ಪುಣ್ಯತಮವಾದ ವಾಲ್ಮೀಕಿಗಳ ಪುಣ್ಯಾಶ್ರಮಕ್ಕೆ ತೆರಳಿದನು. ಆ ಬಳಿಕ ಶತ್ರುಘ್ನನು ಮುನಿಶ್ರೇಷ್ಠರಾದ ಮಹಾತ್ಮರಾದ ವಾಲ್ಮೀಕಿಗಳಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ಹೇಳಿದನು :

''ಪೂಜ್ಯರೇ ! ನಮ್ಮಣ್ಣನಾದ ಶ್ರೀರಾಮನ ಕಾರ್ಯದ ನಿಮಿತ್ತವಾಗಿ ಹೊರಟುಬಂದಿದ್ದೇನೆ. ಈ ರಾತ್ರಿಯಲ್ಲಿ ಇಲ್ಲಿಯೇ ತಂಗಿದ್ದು ಪ್ರಾತಃಕಾಲವಾಗುತ್ತಲೇ ವರುಣನು ಪಾಲಿಸುತ್ತಿರುವ ಪಶ್ಚಿಮದಿಕ್ಕಿಗೆ ಪ್ರಯಾಣ ಮಾಡುತ್ತೇನೆ.

ಶತ್ರುಘ್ನನ ಮಾತನ್ನು ಕೇಳಿ ಮುನಿ ಶ್ರೇಷ್ಠರಾದ ಮಹರ್ಷಿಗಳು ನಗುತ್ತಾ ಹೇಳಿದರು : ''**ಸ್ವಾಗತಂ ತೇ ಮಹಾಯಶಃ** – ಮಹಾ ಯಶಸ್ವಿಯೇ ! ನಿನಗೆ ಸ್ವಾಗತವು.

ಸೌಮ್ಯನೇ ! ಈ ಆಶ್ರಮವು ರಘುವಂಶೀಯರಿಗೆ ಸೇರಿದ ಆಶ್ರಮವೇ ಆಗಿದೆ. ಆದುದರಿಂದ ನೀನು ಯಾವ ಸಂಕೋಚವೂ ಇಲ್ಲದೆ ನಾನು ಕೊಡಲಿರುವ ಅರ್ಘ್ಯ –ಪಾದ್ಯ – ಆಸನಗಳನ್ನು ಪ್ರತಿಗ್ರಹಿಸು.''

ವಾಲ್ಮೀಕಿ ಮಹರ್ಷಿಗಳ ಆದೇಶದಂತೆ ಯಥೋಚಿತವಾಗಿ ಸತ್ಕೃತನಾದ ಶತ್ರುಘ್ನನು ಫಲ–ಮೂಲಗಳನ್ನೇ ಭುಂಜಿಸಿ ಪೂರ್ಣವಾದ ತೃಪ್ತಿಯನ್ನು ಹೊಂದಿದನು. ಅನಂತರ ಮಹರ್ಷಿಗಳನ್ನು ಪ್ರಶ್ನಿಸಿದನು :

''ಮಹರ್ಷಿಗಳೇ ! ಈ ಆಶ್ರಮದ ಪರಿಸರದಲ್ಲಿ ಪ್ರಾಚೀನಕಾಲದ ಯೂಪಾದಿ ಯಜ್ಞೋಪಕರಣಗಳ ವೈಭವವು ಕಂಗೊಳಿಸುತ್ತಿದೆ. ಯಾವ ರಾಜನಿಲ್ಲಿ ಯಜ್ಞಮಾಡಿದನು ?''

ಶತ್ರುಘ್ನನ ಮಾತನ್ನು ಕೇಳಿ ವಾಲ್ಮೀಕಿಗಳು ಹೇಳಿದರು :

''ಶತ್ರುಘ್ನ ! ಇದು ಯಾವ ಯಜ್ಞಾಯತನವಾಗಿದ್ದಿತೆಂಬುದನ್ನು ಹೇಳುವೆನು ; ಕೇಳು ; ನಿಮ್ಮ ವಂಶದಲ್ಲಿಯೇ ಹಿಂದೆ ಸುದಾಸನೆಂಬ ರಾಜನಿದ್ದನು. ಅವನಿಗೆ ವೀರಸಹ (ಮಿತ್ರಸಹ) ನೆಂಬ ಮಗನಿದ್ದನು. ವೀರಸಹನು ಮಹಾಪರಾಕ್ರಮಿಯೂ ಧಾರ್ಮಿಕನೂ ಆಗಿದ್ದನು. ಸುದಾಸನ ಆ ಮಗನು ಇನ್ನೂ ಬಾಲಕನಾಗಿದ್ದಾಗಲೇ ಒಮ್ಮೆ ಬೇಟೆಯಾಡುವ ಸಲುವಾಗಿ ಅರಣ್ಯಕ್ಕೆ ಹೋದನು. ಅಲ್ಲಿ ಅವನು ಅರಣ್ಯದ ಸುತ್ತಲೂ ಅಲೆದಾಡುತ್ತಿದ್ದ ಇಬ್ಬರು ರಾಕ್ಷಸರನ್ನು ಕಂಡನು. ಆ ಇಬ್ಬರು ರಾಕ್ಷಸರೂ ಭಯಂಕರವಾದ ಹುಲಿಗಳ ರೂಪಗಳನ್ನು ಧರಿಸಿ ಸಾವಿರಾರು ಮೃಗಗಳನ್ನು ಕೊಂದು ತಿನ್ನುತ್ತಿದ್ದರು. ಆದರೂ ಅವರಿಗೆ ತೃಪ್ತಿಯಾಗಿರಲಿಲ್ಲ. ಸೌದಾಸನು ಆ ಇಬ್ಬರು ರಾಕ್ಷಸರನ್ನೂ ಮತ್ತು ಅವರಿಂದಲೇ ಮೃಗಶೂನ್ಯವಾಗಿದ್ದ ಅರಣ್ಯವನ್ನೂ ನೋಡಿ ಅತಿಕ್ರುದ್ಧನಾಗಿ ದೊಡ್ಡದಾಗಿದ್ದ ಬಾಣವೊಂದನ್ನು ಬಿಲ್ಲಿನಲ್ಲಿ ಹೂಡಿ ಒಬ್ಬ ರಾಕ್ಷಸನಿಗೆ ಗುರಿಯಿಟ್ಟು ಹೊಡೆದನು. ಪುರುಷಶ್ರೇಷ್ಠನಾದ ಸೌದಾಸನು ಒಬ್ಬನನ್ನು ಬೀಳಿಸಿ ನಿಶ್ಚಿಂತನಾಗಿ ಕೋಪಶೂನ್ಯನಾಗಿ ಸಾಯು

ವುದರಲ್ಲಿದ್ದ ರಾಕ್ಷಸನನ್ನು ನೋಡುತ್ತಿದ್ದನು. ಹಾಗೆ ತನ್ನ ಸ್ನೇಹಿತನನ್ನು ನೋಡುತ್ತಿದ್ದ ಸೌದಾಸನನ್ನು ನೋಡಿ ಮತ್ತೊಬ್ಬ ರಾಕ್ಷಸನು ಬಹಳವಾಗಿ ಸಂತಾಪಗೊಂಡು ಸೌದಾಸನಿಗೆ ಹೇಳಿದನು :

''ಮಹಾಪಾಪಿಷ್ಠನೇ ! ನಿರಪರಾಧಿಯಾದ ನನ್ನ ಸಂಗಡಿಗನನ್ನು ನೀನು ಸಂಹರಿಸಿದೆಯಾದ ಕಾರಣ ಇದಕ್ಕೆ ತಕ್ಕ ಪ್ರತೀಕಾರವನ್ನು ನಾನೂ ಮಾಡುವೆನು.''

ಹೀಗೆ ಹೇಳಿ ಆ ರಾಕ್ಷಸನು ಅಲ್ಲಿಯೇ ಅಂತರ್ಧಾನಹೊಂದಿದನು. ಹಲವಾರು ವರ್ಷಗಳು ಕಳೆದನಂತರ ಕಾಲಕರ್ಮಸಂಯೋಗದಿಂದ ಸುದಾಸನ ಮಗನಾದ ಮಿತ್ರಸಹನು ಅಯೋಧ್ಯೆಗೆ ಅಧಿಪತಿಯಾದನು. ಆತನು ಈ ಆಶ್ರಮದ ಬಳಿಯಲ್ಲಿಯೇ ಅಶ್ವಮೇಧವೆಂಬ ಮಹಾಯಜ್ಞವನ್ನು ಪ್ರಾರಂಭಿಸಿದನು. ಮಹರ್ಷಿಗಳಾದ ವಸಿಷ್ಠರು ತಮ್ಮ ತಪೋಬಲದಿಂದ ಆ ಯಜ್ಞವನ್ನು ಸಂರಕ್ಷಿಸುತ್ತಿದ್ದರು. ಮಿತ್ರಸಹನ ಆ ಮಹಾಯಜ್ಞವು ಅನೇಕ ವರ್ಷಗಳವರೆಗೆ ನಡೆಯಿತು. ಅಪಾರವಾದ ಸಂಪತ್ತಿನಿಂದ ಸಮೃದ್ಧವಾಗಿದ್ದ ಆ ಮಹಾಯಜ್ಞವು ದೇವತೆಗಳ ಮಹಾಯಜ್ಞಕ್ಕೆ ಸಮಾನವಾಗಿದ್ದಿತು. ಯಜ್ಞವು ಮುಗಿದನಂತರ ಆ ರಾಕ್ಷಸನು ಹಿಂದಿನ ತನ್ನ ವೈರವನ್ನು ಸ್ಮರಿಸಿಕೊಂಡು ವಸಿಷ್ಠರ ರೂಪವನ್ನು ಧರಿಸಿ ರಾಜನ ಬಳಿಗೆ ಬಂದು ಹೇಳಿದನು :

''ಮಹಾರಾಜ ! ಈಗ ಯಜ್ಞವು ಪೂರ್ಣಗೊಂಡಿದೆ. ಈ ಸಮಯದಲ್ಲಿ ನೀನು ನನಗೆ ಶೀಘ್ರವಾಗಿ ಮಾಂಸಸಹಿತವಾದ ಭೋಜನವನ್ನು ನೀಡು. ಇದರಲ್ಲಿ ನೀನು ಆಲೋಚಿಸಬೇಕಾದ ಅಗತ್ಯವಿಲ್ಲ.''

ವಸಿಷ್ಠರೂಪಿಯಾಗಿದ್ದ ರಾಕ್ಷಸನ ಮಾತನ್ನು ಕೇಳಿ ಮಿತ್ರಸಹರಾಜನು ಭಕ್ಷ್ಯಾನ್ನಗಳನ್ನು ಮಾಡುವುದರಲ್ಲಿ ನಿಪುಣನಾದ ಅಡಿಗೆಯವನನ್ನು ಕರೆಯಿಸಿ ಹೇಳಿದನು :

''ನೀನೀಗಲೇ ನನ್ನ ಗುರುಗಳಾದ ವಸಿಷ್ಠರಿಗೆ ತೃಪ್ತಿಯಾಗುವ ರೀತಿಯಲ್ಲಿ ಮಾಂಸದಿಂದ ಕೂಡಿರುವ ರುಚಿಕರವಾದ ಅಡಿಗೆಯನ್ನು ಸಿದ್ಧಪಡಿಸು.''

ರಾಜನ ಆ ಆಜ್ಞೆಯನ್ನು ಕೇಳಿ ಅಡಿಗೆಯವನು ಗಾಬರಿಗೊಂಡನು.

ಆ ಸುಳಿವನ್ನು ತಿಳಿದ ರಾಕ್ಷಸನು ಮರುಕ್ಷಣದಲ್ಲಿಯೇ ಅಡಿಗೆಯವನ ವೇಷ ವನ್ನು ಧರಿಸಿ ಮನುಷ್ಯಮಾಂಸವಿರುವ ಅಡಿಗೆಯನ್ನು ಸಿದ್ಧಪಡಿಸಿ ರಾಜನ ಬಳಿಗೆ ಬಂದು ಹೇಳಿದನು :

''ಮಹಾರಾಜ! ನಿನ್ನ ಆಜ್ಞೆಯಂತೆ ವಸಿಷ್ಠರಿಗಾಗಿ ರುಚಿಕರವಾಗಿರುವ ಮಾಂಸಮಿಶ್ರವಾದ ಹವಿಷ್ಯಾನ್ನವನ್ನು ಸಿದ್ಧಗೊಳಿಸಿ ತಂದಿರುವೆನು.''

ಅಡಿಗೆಯವನ ವೇಷ ಧರಿಸಿ ರಾಕ್ಷಸನು ತಂದಿದ್ದ ಮಾಂಸಯುಕ್ತವಾದ ಅನ್ನವನ್ನು ಮಿತ್ರಸಹನು ಪತ್ನಿಯಾದ ಮದಯಂತಿಯೊಡನೆ ಭಕ್ತಿಭಾವ ದಿಂದ ವಸಿಷ್ಠರಿಗೆ ಬಡಿಸಿದನು.

ಮನುಷ್ಯರ ಮಾಂಸದಿಂದ ಕೂಡಿರುವ ಅನ್ನವು ಊಟದ ತಟ್ಟೆ ಯಲ್ಲಿರುವುದನ್ನು ತಿಳಿದು ವಸಿಷ್ಠರು ಪರಮಕ್ರುದ್ಧರಾಗಿ ಹೇಳಿದರು :

ಯಸ್ಮಾತ್ತ್ವಂ ಭೋಜನಂ ರಾಜನ್ಮಮೈತದ್ದಾತುಮಿಚ್ಛಸಿ ।
ತಸ್ಮಾದ್ಭೋಜನಮೇತತ್ತೇ ಭವಿಷ್ಯತಿ ನ ಸಂಶಯಃ ॥28॥

''ಮಹಾರಾಜ! ನೀನು ನನಗೆ ಇಂತಹ ಮಾಂಸಮಿಶ್ರವಾದ ಭೋಜನ ವನ್ನು ಕೊಡಲು ಇಚ್ಛಿಸಿರುವುದರಿಂದ ನಿನ್ನ ಭೋಜನವೂ ಇದೇ ಆಗುತ್ತದೆ. ನೀನು ಮನುಷ್ಯರನ್ನು ಭಕ್ಷಿಸುವ ರಾಕ್ಷಸನೇ ಆಗುವೆ. ಇದು ನಿಶ್ಚಯ.''

ವಸಿಷ್ಠರ ಆ ಮಾತಿನಿಂದ ಕುಪಿತನಾದ ಸೌದಾಸನು ಪರಮಕ್ರುದ್ಧ ನಾಗಿ ಕೈಗೆ ನೀರು ಸುರಿದುಕೊಂಡು ವಸಿಷ್ಠರನ್ನೇ ಶಪಿಸಲು ಅನುವಾದನು. ಆದರೆ ಅಷ್ಟರಲ್ಲಿಯೇ ಅವನ ಭಾರ್ಯೆಯಾದ ಮದಯಂತಿಯು ಶಾಪ ಕೊಡದಂತೆ ಗಂಡನನ್ನು ತಡೆಯುತ್ತಾ ಹೇಳಿದಳು :

ರಾಜನ್ಪ್ರಭುರ್ಯತೋಽಸ್ಮಾಕಂ ವಸಿಷ್ಠೋ ಭಗವಾನೃಷಿಃ ।
ಪ್ರತಿಶಪ್ತುಂ ನ ಶಕ್ತಸ್ತ್ವಂ ದೇವತುಲ್ಯಂ ಪುರೋಧಸಮ್ ॥30॥

''ಮಹಾರಾಜ ! ಪೂಜ್ಯರಾದ ವಸಿಷ್ಠಮುನಿಗಳು ನಮ್ಮೆಲ್ಲರಿಗೂ ಪ್ರಭುಗಳಾಗಿದ್ದಾರೆ. ನೀನು ದೇವಸದೃಶರಾದ ಪುರೋಹಿತರಿಗೆ ಪ್ರತಿಶಾಪ ವನ್ನೀಯಲು ಸಮರ್ಥನಲ್ಲ.''

ಭಾರ್ಯೆಯು ಹೀಗೆ ಹೇಳಲು –ಮಿತ್ರಸಹನು ತೇಜಸ್ಸಿನಿಂದಲೂ ಬಲ

ದಿಂದಲೂ ಕೂಡಿದ್ದ ಕ್ರೋಧಮಯವಾಗಿದ್ದ ಆ ನೀರನ್ನು ಕೆಳಗೆ ಚೆಲ್ಲುತ್ತಾ ಅದರಿಂದ ತನ್ನ ಕಾಲುಗಳನ್ನು ತೊಳೆದುಕೊಂಡನು. ಅದರಿಂದಾಗಿ ಅವನ ಕಾಲುಗಳು ಕೊಳಕಾದುವು. ಅಲ್ಲಿಂದ ಮುಂದೆ ಮಹಾಯಶೋವಂತನಾದ ಸೌದಾಸನು 'ಕಲ್ಮಾಷಪಾದ' ನಾದನು ಮತ್ತು ಆ ಹೆಸರಿನಿಂದಲೇ ವಿಖ್ಯಾತ ನಾದನು.

ಬಳಿಕ ರಾಜನು ಪತ್ನಿಯೊಡನೆ ಪುನಃ ಪುನಃ ವಸಿಷ್ಠರಿಗೆ ನಮಸ್ಕರಿಸಿ ರಾಕ್ಷಸನು ವಸಿಷ್ಠರ ರೂಪದಲ್ಲಿ ಬಂದು ಹೇಳಿದ ವಿಷಯವನ್ನು ಅರುಹಿದನು.

ರಾಜಾಧಿರಾಜನಾದ ಮಿತ್ರಸಹನ ಆ ಮಾತನ್ನು ಕೇಳಿ ವಸಿಷ್ಠರು ಅದು ರಾಕ್ಷಸನ ಕೃತ್ಯವೇ ಆಗಿರುವುದೆಂದು ನಿಶ್ಚಯಿಸಿ ಪುನಃ ರಾಜನಿಗೆ ಹೇಳಿದರು:

ಮಯಾ ರೋಷಪರೀತೇನ ಯದಿದಂ ವ್ಯಾಹೃತಂ ವಚಃ ।
ನೈತಚ್ಛಕ್ಯಂ ವೃಥಾ ಕರ್ತುಂ ಪ್ರದಾಸ್ಯಾಮಿ ಚ ತೇ ವರಮ್ ॥35॥

''ನಾನು ಕೋಪಾವಿಷ್ಟನಾಗಿ ಕೊಟ್ಟ ಶಾಪವನ್ನು ವ್ಯರ್ಥಗೊಳಿಸಲು ಸಾಧ್ಯವಾಗುವುದಿಲ್ಲ. ಆದರೆ ಈ ಶಾಪದ ಪರಿಹಾರಕ್ಕಾಗಿ ನಾನೊಂದು ವರ ವನ್ನು ಕೊಡುತ್ತೇನೆ.

ಕಾಲೋ ದ್ವಾದಶವರ್ಷಾಣಿ ಶಾಪಸ್ಯಾನ್ತೋ ಭವಿಷ್ಯತಿ ।
ಮತ್ಪ್ರಸಾದಾಚ್ಚ ರಾಜೇನ್ದ್ರ ಅತೀತಂ ನ ಸ್ಮರಿಷ್ಯಸಿ ॥36॥

ಈ ಶಾಪದ ಪ್ರಭಾವವು ಹನ್ನೆರಡು ವರ್ಷಗಳವರೆಗಿರುತ್ತದೆ. ಅನಂತರ ಅದು ಪರಿಹಾರವಾಗುತ್ತದೆ. ನನ್ನ ಅನುಗ್ರಹದಿಂದಾಗಿ ನಿನಗೆ ಕಳೆದುಹೋದ ವಿಷಯಗಳು ಸ್ಮರಣೆಗೆ ಬರುವುದಿಲ್ಲ.''

ಶತ್ರುಘ್ನ! ಹೀಗೆ ಶತ್ರುಸೂದನನಾದ ಕಲ್ಮಾಷಪಾದರಾಜನು ವಸಿಷ್ಠರ ಶಾಪವನ್ನು ಹನ್ನೆರಡು ವರ್ಷಗಳವರೆಗೆ ಅನುಭವಿಸುತ್ತಿದ್ದು ಅನಂತರ ಶಾಪದಿಂದ ವಿಮುಕ್ತನಾಗಿ ರಾಜ್ಯವನ್ನು ಪಡೆದುಕೊಂಡು ನಿರಂತರ ವಾಗಿ ಪ್ರಜೆಗಳನ್ನು ಕಾಪಾಡುತ್ತಿದ್ದನು.

ರಾಘವ! ನೀನು ಈ ಯಜ್ಞಾಯತನವು ಯಾವುದೆಂದು ಕೇಳಿದೆ ಯಲ್ಲವೇ ? ಆಶ್ರಮದ ಸಮೀಪದಲ್ಲಿರುವ ಇದು ಮಹಾನುಭಾವನಾದ ಆ ಕಲ್ಮಾಷಪಾದನ ಯಜ್ಞಭೂಮಿಯೇ ಆಗಿದೆ.''

ಶತ್ರುಘ್ನನು ಮಿತ್ರಸಹಮಹಾರಾಜನ ದಾರುಣವಾದ ಕಥೆಯನ್ನು ಕೇಳಿ ವಾಲ್ಮೀಕಿ ಮಹರ್ಷಿಗಳಿಗೆ ನಮಸ್ಕರಿಸಿ ಪರ್ಣಶಾಲೆಯನ್ನು ಪ್ರವೇಶಿಸಿದನು.

65ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **66ನೆಯ ಸರ್ಗ**

ಸೀತಾದೇವಿಯು ಅವಳಿ ಮಕ್ಕಳಿಗೆ ಜನ್ಮವನ್ನಿತ್ತುದು : ವಾಲ್ಮೀಕಿಗಳಿಂದ ಮಕ್ಕಳ ಮತ್ತು ಸೀತಾದೇವಿಯ ರಕ್ಷಣಾವ್ಯವಸ್ಥೆ : ಮಕ್ಕಳು ಹುಟ್ಟಿದ ಸಮಾಚಾರವನ್ನು ಕೇಳಿ ಶತ್ರುಘ್ನನ ಸಂತೋಷ : ಶತ್ರುಘ್ನನ ಪ್ರಯಾಣ

ಯಾಮೇವ ರಾತ್ರಿಂ ಶತ್ರುಘ್ನಃ ಪರ್ಣಶಾಲಾಮುಪಾವಿಶತ್ ।
ತಾಮೇವ ರಾತ್ರಿಂ ಸೀತಾಪಿ ಪ್ರಸೂತಾ ದಾರಕದ್ವಯಮ್ ॥1॥

ಯಾವ ರಾತ್ರಿಯಲ್ಲಿ ಶತ್ರುಘ್ನನು ವಾಲ್ಮೀಕಿಗಳ ಪರ್ಣಶಾಲೆಯಲ್ಲಿ ತಂಗಿದ್ದನೋ – ಅದೇ ರಾತ್ರಿಯಲ್ಲಿಯೇ ಸೀತಾದೇವಿಯು ಇಬ್ಬರು ಗಂಡು ಮಕ್ಕಳಿಗೆ ಜನ್ಮವನ್ನಿತ್ತಳು.

ಅರ್ಧರಾತ್ರಿಯ ಸಮಯದಲ್ಲಿ ಮುನಿಕುಮಾರರು ಬಂದು ಸೀತಾದೇವಿಯು ಗಂಡುಮಕ್ಕಳನ್ನು ಪ್ರಸವಿಸಿದಳೆಂಬ ಶುಭವಾದ ಮತ್ತು ಪ್ರಿಯವಾದ ವಾರ್ತೆಯನ್ನು ವಾಲ್ಮೀಕಿಗಳಿಗೆ ತಿಳಿಸಿದರು :

ಭಗವನ್ರಾಮಪತ್ನೀ ಸಾ ಪ್ರಸೂತಾ ದಾರಕದ್ವಯಮ್ ।
ತತೋ ರಕ್ಷಾಂ ಮಹಾತೇಜಃ ಕುರು ಭೂತವಿನಾಶಿನೀಮ್ ॥3॥

''ಪೂಜ್ಯರೇ ! ಶ್ರೀರಾಮನ ಪತ್ನಿಯಾದ ಸೀತಾದೇವಿಯು ಇಬ್ಬರು ಗಂಡುಮಕ್ಕಳನ್ನು ಹಡೆದಿರುವಳು. ಬಾಲಗ್ರಹದಿಂದ ಉಂಟಾಗುವ ಬಾಧೆಯ ಪರಿಹಾರಕ್ಕಾಗಿ ಆ ಮಕ್ಕಳಿಗೆ ರಕ್ಷೆಯನ್ನು ಮಾಡಿರಿ.''

ಮುನಿಕುಮಾರರ ಆ ಮಾತನ್ನು ಕೇಳಿ ವಾಲ್ಮೀಕಿಮಹರ್ಷಿಗಳು ಪರಮಸಂತೋಷದಿಂದ ಸೂತಿಕಾಗೃಹದ ಬಳಿಗೆ ಹೋಗಿ ಮಹಾತೇಜಸ್ವಿಗಳಾಗಿದ್ದ, ಬಾಲಚಂದ್ರಸದೃಶರಾಗಿದ್ದ, ದೇವಶಿಶುಗಳಂತೆಯೇ ಇದ್ದ ಆ

ಇಬ್ಬರು ಮಕ್ಕಳನ್ನು ನೋಡಿದರು. ಭೂತಗಳಿಂದಾಗಲೀ ರಾಕ್ಷಸರಿಂದಾಗಲೀ ಯಾವ ವಿಧವಾದ ಬಾಧೆಯೂ ಉಂಟಾಗದ ರೀತಿಯಲ್ಲಿ ಆ ಮಕ್ಕಳಿಗೆ ರಕ್ಷಾ ಬಂಧನವನ್ನು ಮಾಡಿದನು.

ಬ್ರಹ್ಮರ್ಷಿಗಳಾದ ವಾಲ್ಮೀಕಿಗಳು ಅಗ್ರಭಾಗವುಳ್ಳ ದರ್ಭೆಯ ಒಂದು ಹಿಡಿಯನ್ನೂ ಅಗ್ರಭಾಗವಿಲ್ಲದ– ದರ್ಭೆಯ ಒಂದು ಹಿಡಿಯನ್ನೂ ತೆಗೆದು ಕೊಂಡು ಎರಡು ಶಿಶುಗಳಿಗೂ ಭೂತಬಾಧೆಯನ್ನು ನಿವಾರಣೆಮಾಡುವ ಸಲು ವಾಗಿ ರಕ್ಷಾವಿಧಿಯನ್ನು ಉಪದೇಶಿಸುತ್ತಾ ವೃದ್ಧೆಯರಾದ ತಾಪಸಿಯರಿಗೆ ಹೇಳಿದರು:

'' ಈ ಇಬ್ಬರು ಬಾಲಕರಲ್ಲಿ ಮೊದಲು ಹುಟ್ಟಿದವನನ್ನು ಅಗ್ರಭಾಗ ಗಳಿಂದ ಕೂಡಿರುವ ಮಂತ್ರಪೂತವಾದ ಈ ದರ್ಭೆಗಳಿಂದ ಮಾರ್ಜನ ಮಾಡಿರಿ. ಕುಶಗಳಿಂದ ಮಾರ್ಜನ ಮಾಡಲ್ಪಟ್ಟವನು ಕುಶನೆಂಬ ಹೆಸರಿನಿಂದ ಪ್ರಸಿದ್ಧನಾಗುತ್ತಾನೆ. ಅನಂತರ ಎರಡನೆಯ ಬಾಲಕನನ್ನು ಅಗ್ರಭಾಗಗಳಿಲ್ಲದ ಮಂತ್ರಪೂತವಾದ ದರ್ಭೆಗಳಿಂದ ಮಾರ್ಜನಮಾಡಿರಿ. ಅವನು ಲವ ಎಂಬ ಹೆಸರಿನಿಂದಲೇ ಪ್ರಸಿದ್ಧನಾಗುತ್ತಾನೆ.''★

ಏವಂ ಕುಶಲವೌ ನಾಮ್ನಾ ತಾವುಭೌ ಯಮಜಾತಕೌ ।
ಮತ್ಕೃತಾಭ್ಯಾಂ ಚ ನಾಮಭ್ಯಾಂ ಖ್ಯಾತಿಯುಕ್ತೌ ಭವಿಷ್ಯತಃ ॥

ಹೀಗೆ ಅವಳಿಗಳಾಗಿ ಹುಟ್ಟಿರುವ ಈ ಬಾಲಕರು ಕ್ರಮವಾಗಿ ಕುಶ ಮತ್ತು ಲವ ಎಂಬ ಹೆಸರನ್ನು ಪಡೆದು ನಾನು ಮಾಡಿರುವ ಈ ಹೆಸರು ಗಳಿಂದಲೇ ವಿಖ್ಯಾತರಾಗುವರು.''

ಮಹರ್ಷಿಗಳ ಆ ಮಾತನ್ನು ಕೇಳಿ ಪಾಪರಹಿತೆಯರಾದ ವೃದ್ಧ ತಾಪಸಿ ಯರು ಏಕಾಗ್ರಚಿತ್ತರಾಗಿ ವಾಲ್ಮೀಕಿಗಳ ಕೈಯಿಂದ ಕುಶ– ಲವ ದರ್ಭೆಗಳನ್ನು ಪಡೆದು ಆ ಇಬ್ಬರು ಬಾಲಕರಿಗೂ ಮಹರ್ಷಿಗಳು ಹೇಳಿದ ರೀತಿಯಲ್ಲಿಯೇ

★ಕುಶಲವೌ : ಊನಕುಶಾನಾಮಗ್ರಭಾಗಃ ಕುಶ ಇತ್ಯುಚ್ಯತೇ – ಮಧ್ಯಕ್ಕೆ ಸರಿಯಾಗಿ ಕತ್ತರಿಸಲ್ಪಟ್ಟ ದರ್ಭೆಗಳಲ್ಲಿ ಅಗ್ರಭಾಗದಿಂದ ಕೂಡಿದ ದರ್ಭೆಗಳಿಗೆ ಕುಶ ಗಳೆಂದು ಹೆಸರು. ತೇಷಾಮಧೋಭಾಗೋ ಲವ ಇತಿ – ಅಗ್ರಗಳಿಲ್ಲದ ಕೆಳಭಾಗದ ದರ್ಭೆಗಳಿಗೆ ಲವ –ಎಂದು ಹೆಸರು.

ಮಾರ್ಜನ ಮಾಡಿದರು. ಅದು ಅರ್ಧರಾತ್ರಿಯ ಸಮಯವಾಗಿತ್ತು. ವೃದ್ಧೆಯರು ಮಾರ್ಜನಮಾಡುವಾಗ ಶಿಶುಗಳ ಗೋತ್ರ, ತಂದೆ-ತಾಯಿಗಳ ಹೆಸರು, ಶಿಶುಗಳ ಹೆಸರು - ಇವೆಲ್ಲವನ್ನೂ ಹೇಳಿಕೊಂಡು ಮಾರ್ಜನಮಾಡುತ್ತಿದ್ದರು. ಅಲ್ಲಿಯೇ ಇದ್ದ ಶತ್ರುಘ್ನನು ಅದನ್ನು ಕೇಳಿಸಿಕೊಂಡನು. ಒಡನೆಯೇ ಅವನು ಸೀತಾದೇವಿಯಿದ್ದ ಪರ್ಣಶಾಲೆಗೆ ಹೋಗಿ -'' ತಾಯೇ ! ಇದು ನಿಶ್ಚಯವಾಗಿಯೂ ನಮ್ಮ ಸೌಭಾಗ್ಯದ ವಿಷಯವೇ ಆಗಿದೆ ' -ಎಂದು ಹೇಳುತ್ತಾ ತನ್ನ ಅತುಲವಾದ ಸಂತೋಷವನ್ನು ವ್ಯಕ್ತಪಡಿಸಿದನು. ಅತ್ಯಂತ ಪ್ರಹೃಷ್ಟನಾಗಿದ್ದ ಮಹಾತ್ಮನಾದ ಶತ್ರುಘ್ನನಿಗೆ ಮಳೆಗಾಲದ ಆ ಶ್ರಾವಣಮಾಸದ ರಾತ್ರಿಯು ಮಾತನಾಡುತ್ತಿದ್ದಂತೆಯೇ ಕಳೆದುಹೋಯಿತು.

ಬೆಳಗಾಗುತ್ತಲೇ ಮಹಾವೀರ್ಯನಾದ ಶತ್ರುಘ್ನನು ಪ್ರಾತಃ ಕಾಲದಲ್ಲಿ ಮಾಡಬೇಕಾದ ಸ್ನಾನ -ಸಂಧ್ಯಾವಂದನಾದಿಗಳನ್ನು ಮುಗಿಸಿ ವಾಲ್ಮೀಕಿಮಹರ್ಷಿಗಳಿಗೆ ಕೈಮುಗಿದು ಅವರ ಅನುಮತಿಯನ್ನು ಪಡೆದು ಪಶ್ಚಿಮಾಭಿಮುಖವಾಗಿ ಪ್ರಯಾಣಮಾಡಿದನು. ಮಾರ್ಗದಲ್ಲಿ ಅವನು ಏಳು ರಾತ್ರಿಗಳನ್ನು ಕಳೆದು ಎಂಟನೆಯ ದಿವಸ ಯಮುನಾನದಿಯ ತೀರಕ್ಕೆ ಹೋಗಿ ಪುಣ್ಯಕೀರ್ತಿಗಳಾದ ಚ್ಯವನಮಹರ್ಷಿಗಳ ಆಶ್ರಮದಲ್ಲಿ ಉಳಿದುಕೊಂಡನು. ಮಹಾಯಶೋವಂತನಾದ ಶತ್ರುಘ್ನನು ಚ್ಯವನರೇ ಮೊದಲಾದ ಮಹರ್ಷಿಗಳಿಂದ ಸುಂದರವಾದ ಕಥೆಗಳನ್ನು ಕೇಳುತ್ತಾ ಕಾಲಕಳೆಯುತ್ತಿದ್ದನು.

ಹೀಗೆ ರಘುಕುಲಪ್ರವರನಾದ, ಮಹಾತ್ಮನಾದ, ರಾಜಕುಮಾರನಾದ ಶತ್ರುಘ್ನನು ಯಮುನಾನದಿಯ ತೀರದಲ್ಲಿ ಸೇರಿದ್ದ ಚ್ಯವನರೇ ಮೊದಲಾದ ಮಹರ್ಷಿಗಳಿಂದ ನಾನಾಪ್ರಕಾರವಾದ ಕಥೆಗಳನ್ನು ಕೇಳುತ್ತಾ ರಾತ್ರಿಗಳನ್ನು ಕಳೆಯುತ್ತಿದ್ದನು.★

66ನೆಯ ಸರ್ಗವು ಮುಗಿಯಿತು.

★ ಈ ಶ್ಲೋಕದ ಪ್ರಾರಂಭದಲ್ಲಿ ಸ ಕಾಞ್ಚನಾದ್ಯೈರ್ಮುನಿಭಿಃ ಎಂಬ ಪಾಠವಿದೆ. ಕಾಞ್ಚನಾದ್ಯೈಃ ಎಂಬುದಕ್ಕೆ ವ್ಯಾಖ್ಯಾನಕಾರರು ಚ್ಯವನರೇ ಮೊದಲಾದವರು ಎಂದು ಅರ್ಥಮಾಡಿದ್ದಾರೆ. ಕಾಂಚನ ಎಂಬುದು ಚ್ಯವನರ ಮತ್ತೊಂದು ಹೆಸರು

ಉತ್ತರಕಾಂಡ 67ನೆಯ ಸರ್ಗ

ಚ್ಯವನರು ಶತ್ರುಘ್ನನಿಗೆ ಲವಣಾಸುರನ ಶೂಲದ ಪ್ರಭಾವವನ್ನು ವಿವರಿಸಿದುದು : ಮಾಂಧಾತನ ಸಂಹಾರಪ್ರಸಂಗ

ಅಥ ರಾತ್ರ್ಯಾಂ ಪ್ರವೃತ್ತಾಯಾಂ ಶತ್ರುಘ್ನೋ ಭೃಗುನನ್ದನಮ್ ।
ಪಪ್ರಚ್ಛ ಚ್ಯವನಂ ವಿಪ್ರಂ ಲವಣಸ್ಯ ಯಥಾಬಲಮ್ ॥1॥
ಶೂಲಸ್ಯ ಚ ಬಲಂ ಬ್ರಹ್ಮನ್ಕೇ ಚ ಪೂರ್ವಂ ವಿನಾಶಿತಾಃ ।
ಅನೇನ ಶೂಲಮುಖ್ಯೇನ ದ್ವಂದ್ವಯುದ್ಧಮುಪಾಗತಾಃ ॥2॥

ಹೀಗಿರಲು ಒಂದು ರಾತ್ರಿ ಸಂಭಾಷಣೆಗಳಲ್ಲಿ ತೊಡಗಿದ್ದಾಗ ಶತ್ರುಘ್ನನು ಬ್ರಹ್ಮರ್ಷಿಗಳಾದ ಚ್ಯವನರನ್ನು ಪ್ರಶ್ನಿಸಿದನು :

''ಬ್ರಾಹ್ಮಣೋತ್ತಮರೇ! ಲವಣಾಸುರನಲ್ಲಿ ಬಲವೆಷ್ಟಿದೆ ? ಅವನಲ್ಲಿ ಇರುವ ಶೂಲಕ್ಕೆ ಎಷ್ಟು ಶಕ್ತಿಯಿದೆ ? ಲವಣಾಸುರನು ಆ ಶೂಲವನ್ನು ಹಿಡಿದು ಯಾರೊಡನೆ ದ್ವಂದ್ವಯುದ್ಧವನ್ನು ಮಾಡಿದ್ದಾನೆ ? ಇದುವರೆಗೆ ಯಾವ ಯಾವ ಯೋಧರನ್ನವನು ಆ ಶೂಲದಿಂದ ಸಂಹರಿಸಿದ್ದಾನೆ ? ಈ ಎಲ್ಲ ವಿಷಯಗಳನ್ನೂ ನನಗೆ ಹೇಳಿರಿ.''

ಮಹಾತ್ಮನಾದ ಶತ್ರುಘ್ನನ ಮಾತನ್ನು ಕೇಳಿ ಮಹಾತೇಜಸ್ವಿಗಳಾದ ಚ್ಯವನರು ಹೇಳಿದರು :

'' ಶತ್ರುಘ್ನ ! ಲವಣಾಸುರನು ಆ ಶೂಲವನ್ನಿಟ್ಟುಕೊಂಡು ಮಾಡಿರುವ ಹಿಂಸಾಕರ್ಮಗಳು ಅಸಂಖ್ಯಾತವಾಗಿವೆ. ಆದುದರಿಂದ ಅವೆಲ್ಲವನ್ನೂ ಹೇಳಹೋಗದೇ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಒಬ್ಬ ರಾಜನ ಸಂಗತಿಯನ್ನು ಈ ಸಂಬಂಧದಲ್ಲಿ ನಿನಗೆ ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು.

ಹಿಂದೆ ಅಯೋಧ್ಯೆಯಲ್ಲಿ ಯುವನಾಶ್ವನ ಮಗನಾದ ಮಾಂಧಾತನೆಂಬ ರಾಜನು ರಾಜ್ಯವಾಳುತ್ತಿದ್ದನು. ಅವನು ಮಹಾಬಲಿಷ್ಠನು ಹಾಗೂ ಪರಾಕ್ರಮಿಯು. ಮೂರು ಲೋಕಗಳಲ್ಲಿಯೂ ಮಹಾಪರಾಕ್ರಮಿಯೆಂಬ ಖ್ಯಾತಿ

ಎಂಬ ವಿವರಣೆಯನ್ನೂ ಕೊಟ್ಟಿರುತ್ತಾರೆ. ಸ ಕಾಞ್ಚನಾದ್ಯೈಃ ಎಂಬುದಕ್ಕೆ ಬದಲಾಗಿ ಸ ಭಾರ್ಗವಾದ್ಯೈಃ ಎಂಬ ಪಾಠಾಂತರವೂ ಇದೆ.

ಯನ್ನು ಪಡೆದಿದ್ದನು. ಆ ರಾಜನು ಅಖಂಡಭೂಮಂಡಲವನ್ನೂ ಗೆದ್ದು ತನ್ನ ಅಧಿಕಾರಕ್ಕೆ ಒಳಪಡಿಸಿಕೊಂಡನಂತರ ದೇವಲೋಕವನ್ನೂ ಜಯಿಸುವ ಪ್ರಯತ್ನದಲ್ಲಿ ತೊಡಗಿದನು. ಮಾಂಧಾತನು ದೇವಲೋಕವನ್ನು ಜಯಿಸಲು ಪ್ರಯತ್ನಿಸುತ್ತಿರಲು ಮಹಾತ್ಮರಾದ ದೇವತೆಗಳಿಗೂ ಮತ್ತು ಇಂದ್ರನಿಗೂ ತೀವ್ರವಾದ ಭಯವುಂಟಾಯಿತು.

'' ನಾನು ಇಂದ್ರನ ಅರ್ಧಸಿಂಹಾಸನವನ್ನೂ ಮತ್ತು ಅವನ ಅರ್ಧರಾಜ್ಯವನ್ನೂ ಪಡೆದುಕೊಂಡು ಭೂಮಂಡಲದ ರಾಜನಾಗಿದ್ದರೂ ದೇವತೆಗಳಿಂದಲೂ ವಂದಿಸಲ್ಪಟ್ಟವನಾಗಿ ಹಿಂದಿರುಗುತ್ತೇನೆ.''

ಹೀಗೆ ಮಾಂಧಾತನು ಪ್ರತಿಜ್ಞೆಯನ್ನು ಮಾಡಿ ಸ್ವರ್ಗಲೋಕಕ್ಕೆ ಹೊರಟನು. ಮಾಂಧಾತನ ಆ ದುರಭಿಪ್ರಾಯವನ್ನು ತಿಳಿದ ದೇವೇಂದ್ರನು ಯೌವನಾಶ್ವನಿಗೆ ಸಮಾಧಾನಪೂರ್ವಕವಾಗಿ ಈ ಮಾತನ್ನು ಹೇಳಿದನು:

''ಪುರುಷಶ್ರೇಷ್ಠನೇ ! ನೀನು ಸಮಗ್ರವಾದ ಭೂಲೋಕಕ್ಕೇ ಇನ್ನೂ ರಾಜನಾಗಿಲ್ಲ. ಭೂಮಂಡಲವನ್ನೇ ಪೂರ್ಣವಾಗಿ ಸ್ವಾಧೀನಮಾಡಿಕೊಳ್ಳಲಾಗದ ನೀನು ದೇವರಾಜ್ಯವನ್ನು ಗೆಲ್ಲುವ ಆಶೆಯಿಂದ ಬಂದಿರುವೆ. ನೀನು ನಿಖಿಲವಾದ ಭೂಮಂಡಲವನ್ನೂ ನಿನ್ನ ಸ್ವಾಧೀನಮಾಡಿಕೊಂಡೆಯಾದರೆ ಅನಂತರ ನೀನು ಭೃತ್ಯ–ಸೈನ್ಯ–ವಾಹನಗಳೊಡನೆ ದೇವರಾಜ್ಯವನ್ನು ಆಳಬಹುದಾಗಿದೆ.''

ಇಂದ್ರನು ಹೀಗೆ ಹೇಳಲು ಮಾಂಧಾತನು ಪ್ರಶ್ನಿಸಿದನು :

''ಮಹೇಂದ್ರ ! ಭೂಮಂಡಲದ ಯಾವ ಭಾಗದಲ್ಲಿ ನನ್ನ ಆಜ್ಞೆಯು ನಡೆಯುತ್ತಿಲ್ಲ? ಹೇಳು.''

''ಅನಘನೇ ! ಮಾಂಧಾತರಾಜ ! ಮಧುವನದಲ್ಲಿ ಮಧುವಿನ ಮಗನಾದ ಲವಣನೆಂಬ ರಾಕ್ಷಸನಿದ್ದಾನೆ. ಅವನು ನಿನ್ನ ಆಜ್ಞೆಯನ್ನು ಮಾನ್ಯಮಾಡುವುದಿಲ್ಲ.''

ಇಂದ್ರನು ಹೇಳಿದ ಘೋರವೂ ಅಪ್ರಿಯವೂ ಆದ ಆ ಮಾತನ್ನು ಕೇಳಿ ಮಾಂಧಾತನು ಲಜ್ಜಿತನಾಗಿ ತಲೆತಗ್ಗಿಸಿದನು. ಮುಂದೆ ಅವನಿಗೆ ಯಾವ

ಮಾತನ್ನಾಡಲೂ ಸಾಧ್ಯವಾಗಲಿಲ್ಲ. ಇಂದ್ರನ ಅನುಮತಿಯನ್ನು ಪಡೆದು ತಲೆತಗ್ಗಿಸಿಕೊಂಡೇ ಮನುಷ್ಯಲೋಕಕ್ಕೆ ಬಂದನು. ಅವನ ಹೃದಯವು ಕೋಪದಿಂದ ತುಂಬಿಹೋಗಿದ್ದಿತು. ಅವನಿಗೆ ಸಹನೆಯೆಂಬುದೇ ಇರಲಿಲ್ಲ. ಲವಣಾಸುರನನ್ನು ಜಯಿಸುವುದಕ್ಕಾಗಿ ಭೃತ್ಯ–ಬಲ –ವಾಹನಗಳಿಂದ ಕೂಡಿದ ಸೈನ್ಯದೊಡನೆ ಅವನ ರಾಜಧಾನಿಯಾದ ಮಧುವನಕ್ಕೆ ಹೋದನು. ಪುರುಷಶ್ರೇಷ್ಠನಾದ ಮಾಂಧಾತನು ಲವಣನೊಡನೆ ಯುದ್ಧಮಾಡುವ ಅಪೇಕ್ಷೆಯಿಂದ ಅವನ ಬಳಿಗೆ ದೂತನನ್ನು ಕಳುಹಿಸಿಕೊಟ್ಟನು. ಮಾಂಧಾತನ ದೂತನು ಲವಣಾಸುರನ ಬಳಿಗೆ ಹೋಗಿ ಅವನಿಗೆ ಅಪ್ರಿಯವಾದ ಮಾತುಗಳನ್ನಾಡಿದನು. ಹೀಗೆ ಅಪ್ರಿಯವಾದ ಮತ್ತು ಕಠೋರವಾದ ಮಾತುಗಳನ್ನಾಡುತ್ತಿದ್ದ ರಾಜದೂತನನ್ನು ಲವಣನು ತಿಂದುಹಾಕಿದನು.

ಬಹಳ ಹೊತ್ತಿನವರೆಗೂ ದೂತನು ಬಾರದಿರಲು ರಾಜನು ಪರಮ ಕ್ರುದ್ಧನಾಗಿ ಲವಣಾಸುರನ ಬಳಿಗೆ ತಾನೇ ಹೋಗಿ ಅವನನ್ನು ಯುದ್ಧಕ್ಕೆ ಆಹ್ವಾನಿಸಿ ಅವನ ಸುತ್ತಲೂ ಬಾಣಗಳನ್ನು ಸುರಿಸುತ್ತಾ ರಾಕ್ಷಸನನ್ನು ಬಹಳವಾಗಿ ಪೀಡಿಸಿದನು. ತನ್ನ ಮೇಲೆ ಬಾಣಗಳ ಮಳೆಯೇ ಸುರಿಯುತ್ತಿದ್ದರೂ ಲವಣಾಸುರನು ಲೆಕ್ಕಿಸದೇ ಗಹಗಹಿಸಿ ನಗುತ್ತಾ ಸೈನ್ಯಸಮೇತನಾದ ರಾಜನನ್ನು ಸಂಹರಿಸುವ ಸಲುವಾಗಿ ಶೂಲವನ್ನು ಕೈಗೆತ್ತಿಕೊಂಡು ಮಾಂಧಾತನ ಮೇಲೆ ರಭಸದಿಂದ ಪ್ರಹರಿಸಿದನು. ದೇದೀಪ್ಯಮಾನವಾಗಿ ಬೆಳಗುತ್ತಿದ್ದ ಆ ಶೂಲವು ಭೃತ್ಯ – ಬಲ– ವಾಹನಸಮೇತನಾದ ರಾಜನನ್ನು ಕ್ಷಣಮಾತ್ರದಲ್ಲಿ ಭಸ್ಮೀಭೂತನನ್ನಾಗಿ ಮಾಡಿ ಪುನಃ ಲವಣನ ಕೈಸೇರಿತು. ಹೀಗೆ ಸೈನ್ಯಸಮೇತನಾಗಿದ್ದ ಮಾಂಧಾತರಾಜನು ವಿನಾಶಹೊಂದಿದನು.

ಸೌಮ್ಯನೇ ! ಶೂಲದ ಶಕ್ತಿಯು ಅಪ್ರಮೇಯವಾದುದು ಮತ್ತು ಶ್ರೇಷ್ಠವಾದುದು. ನಾಳೆ ಬೆಳಗಾಗುತ್ತಲೇ ಆ ರಾಕ್ಷಸನು ಶೂಲಾಯುಧವನ್ನು ಹಿಡಿಯುವುದರೊಳಗಾಗಿ ನೀನು ಅವನನ್ನು ಸಂಹರಿಸುವೆ. ಇದರಲ್ಲಿ ಸಂಶಯವೇ ಇಲ್ಲ. ನೀನು ರಾಕ್ಷಸನೊಡನೆ ಮಾಡಲಿರುವ ಯುದ್ಧದಲ್ಲಿ ಜಯಗಳಿಸುವುದು ನಿಶ್ಚಯ. ನೀನು ಈ ಕಾರ್ಯವನ್ನು ಮಾಡಿಮುಗಿಸಿದೆಯಾದರೆ ಎಲ್ಲ ಲೋಕಗಳಿಗೂ ಕಲ್ಯಾಣವಾಗುತ್ತದೆ.

ಶತ್ರುಘ್ನ! ದುರಾತ್ಮನಾದ ಲವಣಾಸುರನಿಗೆ ಸಂಬಂಧಿಸಿದಂತೆ ಎಲ್ಲ

ವಿಷಯಗಳನ್ನೂ ನಿನಗೆ ಹೇಳಿದ್ದೇನೆ. ಶೂಲಾಯುಧದ ಅಪ್ರಮೇಯವಾದ ಮತ್ತು ಭಯಂಕರವಾದ ಬಲವನ್ನೂ ನಿದರ್ಶನಪೂರ್ವಕವಾಗಿ ವಿವರಿಸಿ ಹೇಳಿದ್ದೇನೆ. ಇಂದ್ರನ ಪ್ರಯತ್ನದಿಂದಾಗಿ ಮಾಂಧಾತನ ವಿನಾಶವು ಲವಣನಿಂದಾಯಿತು. ಈ ವಿಷಯವನ್ನೂ ನಿನಗೆ ಹೇಳಿದ್ದೇನೆ.

ಮಹಾತ್ಮನೇ ! ನೀನು ನಾಳೆ ಬೆಳಗ್ಗೆ ಆ ಲವಣಾಸುರನನ್ನು ಅವನು ಶೂಲಾಯುಧವನ್ನು ಧರಿಸಿಲ್ಲದೇ ಇರುವ ಸಮಯದಲ್ಲಿ ಶೀಘ್ರವಾಗಿಯೇ ಸಂಹರಿಸುವೆ. ನಿನಗೆ ಜಯ ದೊರೆಯುವುದು ಖಂಡಿತ.

67ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **68ನೆಯ ಸರ್ಗ**

ಲವಣಾಸುರನು ಆಹಾರಕ್ಕಾಗಿ ನಗರದಿಂದ ಹೊರಟುದು : ಹಿಂದಿರುಗಿ ಬಂದ ಲವಣಾಸುರನಿಗೂ ಶತ್ರುಘ್ನನಿಗೂ ಕಟುವಾದ ಸಂಭಾಷಣೆ

ಕಥಾಂ ಕಥಯತಾಂ ತೇಷಾಂ ಜಯಂ ಚಾಕಾಂಕ್ಷತಾಂ ಶುಭಮ್ ।
ವ್ಯತೀತಾ ರಜನೀ ಶೀಘ್ರಂ ಶತ್ರುಘ್ನಸ್ಯ ಮಹಾತ್ಮನಃ ॥1॥

ಹೀಗೆ ನಾನಾವಿಧವಾದ ಕಥೆಗಳನ್ನು ಹೇಳುತ್ತಿದ್ದ ಮತ್ತು ವಿಜಯ ಗಳಿಸಬೇಕೆಂದು ಹಾರೈಸುತ್ತಿದ್ದ ಮುನಿಗಳ ಮಾತನ್ನು ಕೇಳುತ್ತಿದ್ದಂತೆಯೇ ಮಹಾತ್ಮನಾದ ಶತ್ರುಘ್ನನಿಗೆ ಆ ರಾತ್ರಿಯು ಕಳೆದುಹೋಯಿತು.

ನಿರ್ಮಲವಾದ ಪ್ರಾತಃಕಾಲದಲ್ಲಿ ವೀರನಾದ ಲವಣರಾಕ್ಷಸನು ಆಹಾರವನ್ನು ಸಂಗ್ರಹಿಸಲು ನಗರದಿಂದ ಹೊರಕ್ಕೆ ಹೊರಟನು.

ಆ ಮಧ್ಯದಲ್ಲಿ ವೀರನಾದ ಶತ್ರುಘ್ನನು ಯಮುನಾನದಿಯನ್ನು ದಾಟಿ ಮಧುಪುರದ ಮಹಾದ್ವಾರದಲ್ಲಿ ಧನುಷ್ಪಾಣಿಯಾಗಿ ನಿಂತನು. ದಿವಸದ ಅರ್ಧಭಾಗವು ಕಳೆದು ಮಧ್ಯಾಹ್ನವು ಪ್ರಾಪ್ತವಾಗಲಾಗಿ ಕ್ರೂರಕರ್ಮನಾದ ರಾಕ್ಷಸನು ಹಲವಾರು ಸಾವಿರ ಪ್ರಾಣಿಗಳನ್ನು ಹೊತ್ತುಕೊಂಡು ಆಗಮಿಸಿ

ದನು. ಮಹಾದ್ವಾರದಲ್ಲಿ ಆಯುಧವನ್ನು ಹಿಡಿದುನಿಂತಿದ್ದ ಶತ್ರುಘ್ನನನ್ನು ನೋಡಿ ಪ್ರಶ್ನಿಸಿದನು :

''ನರಾಧಮನೇ! ನೀನು ಈ ಆಯುಧದಿಂದ ನನ್ನನ್ನೇನು ಮಾಡುವೆ? ನಿನ್ನಂತೆಯೇ ಆಯುಧಪಾಣಿಗಳಾದ ಸಾವಿರಾರು ವೀರರನ್ನು ಕ್ರುದ್ಧನಾಗಿ ನಾನು ನುಂಗಿಹಾಕಿದ್ದೇನೆ. ಮೃತ್ಯುವನ್ನು ನಿರೀಕ್ಷಿಸಿಯೇ ಬಂದಿರುವೆ ಯೇನು ? ಇಂದು ನನಗೆ ಆಹಾರವು ಕೂಡ ಸಾಕಷ್ಟು ಸಿಕ್ಕಿರುವುದಿಲ್ಲ. ದುರ್ಮತಿಯೇ! ನೀನಾಗಿಯೇ ಬಂದು ನನ್ನ ಬಾಯೊಳಗೆ ಏಕೆ ಬೀಳು ತ್ತಿರುವೆ ?''

ಲವಣನು ಇವೇ ಮುಂತಾಗಿ ಮಾತನಾಡುತ್ತಾ ಕ್ಷಣ-ಕ್ಷಣಕ್ಕೂ ಅಟ್ಟ ಹಾಸದಿಂದ ನಗುತ್ತಿದ್ದನು. ಅತಿಯಾದ ಕ್ರೋಧದ ಕಾರಣದಿಂದಾಗಿ ವೀರ್ಯ ಸಂಪನ್ನನಾದ ಶತ್ರುಘ್ನನ ಕಣ್ಣುಗಳಿಂದ ಬಿಸಿ-ಬಿಸಿಯಾದ ಕಂಬನಿಯು ಸುರಿಯತೊಡಗಿತು. ಕ್ರೋಧಾಭಿಭೂತನಾಗಿದ್ದ ಮಹಾತ್ಮನಾದ ಶತ್ರುಘ್ನನ ಶರೀರದ ಎಲ್ಲ ಅಂಗಗಳಿಂದಲೂ ತೇಜೋಮಯವಾದ ಕಿರಣಗಳು ಹೊರಸೂಸ ತೊಡಗಿದುವು. ಅತಿಕ್ರುದ್ಧನಾಗಿದ್ದ ಶತ್ರುಘ್ನನು ರಾಕ್ಷಸನಿಗೆ ಹೇಳಿದನು :

ಯೋದ್ಧುಮಿಚ್ಛಾಮಿ ದುರ್ಬುದ್ಧೇ ದ್ವನ್ದ್ವಯುದ್ಧಂ ತ್ವಯಾ ಸಹ ॥

''ದುರ್ಬುದ್ಧಿಯವನೇ! ನಿನ್ನೊಡನೆ ದ್ವಂದ್ವಯುದ್ಧಮಾಡಲು ಅಪೇ ಕ್ಷಿಸಿ ಬಂದಿರುವೆನು.

ನಾನು ದಶರಥನ ಮಗ. ಪ್ರಾಜ್ಞನಾದ ಶ್ರೀರಾಮನ ತಮ್ಮನು. ಶತ್ರುಗಳನ್ನು ಸಂಹರಿಸುವ ಶತ್ರುಘ್ನ ಎಂಬ ಹೆಸರಿನಿಂದ ಖ್ಯಾತನಾಗಿದ್ದೇನೆ. ನಿನ್ನನ್ನು ಸಂಹರಿಸುವ ಅಪೇಕ್ಷೆಯಿಂದಲೇ ನಾನಿಲ್ಲಿಗೆ ಬಂದಿದ್ದೇನೆ. ಯುದ್ಧಾಪೇಕ್ಷೆಯಿಂದ ಬಂದಿರುವ ನನಗೆ ದ್ವಂದ್ವಯುದ್ಧದ ಆತಿಥ್ಯವನ್ನು ನೀಡು. ಎಲ್ಲ ಜೀವರಾಶಿಗಳಿಗೂ ನೀನು ಶತ್ರುವಾಗಿರುವೆ. ಜೀವಸಹಿತವಾಗಿ ನನ್ನಿಂದ ತಪ್ಪಿಸಿಕೊಂಡು ಹೋಗಲಾರೆ.''

ಶತ್ರುಘ್ನನು ಹೀಗೆ ಹೇಳುತ್ತಿರಲು ಲವಣರಾಕ್ಷಸನು ಅಟ್ಟಹಾಸದಿಂದ ನಗುತ್ತಾ ನರಶ್ರೇಷ್ಠನಾದ ಸೌಮಿತ್ರಿಗೆ ಹೇಳಿದನು :

''**ದಿಷ್ಟ್ಯಾ ಪ್ರಾಪ್ತೋಽಸಿ ದುರ್ಮತೇ** – ದುರ್ಮತಿಯೇ! ಅದೃಷ್ಟದ ಕಾರಣದಿಂದಲೇ ನೀನಿಂದು ನನಗೆ ಸಿಕ್ಕಿರುವೆ.

ಪುರುಷಾಧಮನೇ! ರಾವಣನೆಂಬ ರಾಕ್ಷಸನು ನನ್ನ ಚಿಕ್ಕಮ್ಮನ ಅಣ್ಣ. ಅವನು ನನಗೆ ಸೋದರಮಾವನಾಗಬೇಕು. ನಿನ್ನ ಅಣ್ಣನಾದ ರಾಮನು ಒಬ್ಬ ಹೆಂಗಸಿನ ಸಲುವಾಗಿ ಅವನನ್ನು ಸಂಹರಿಸಿದ್ದಾನೆ. ನನ್ನ ಬಂಧುವಾದ ರಾವಣನ ಕುಲವೇ ನಾಶವಾಯಿತು. ಅದೆಲ್ಲವನ್ನೂ ನಾನು ಸಹಿಸಿಕೊಂಡೆನು. ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳದೆ ನಿಮ್ಮನ್ನು ವಿಶೇಷವಾಗಿ ಉಪೇಕ್ಷೆ ಮಾಡಿದೆನು. ಈ ಹಿಂದೆ ಯಾರು ನನ್ನನ್ನೆದುರಿಸಲು ಬಂದಿದ್ದರೋ ಅವರೆಲ್ಲರನ್ನೂ ನಾನು ಹುಲ್ಲುಕಡ್ಡಿಗಿಂತಲೂ ನಿಕೃಷ್ಟವಾಗಿ ಕಂಡು ಸಂಹಾರಮಾಡಿದ್ದೇನೆ. ಮುಂದೆ ಬರಲಿರುವ ನಿನ್ನಂತಹ ಪುರುಷಾಧಮರನ್ನು ಕೂಡ ವಿನಾಶಗೊಳಿಸುತ್ತೇನೆ. ದುರ್ಮತಿಯೇ ! ಯುದ್ಧವನ್ನಪೇಕ್ಷಿಸಿ ಬಂದಿರುವ ನಿನಗೆ ನಾನು ದ್ವಂದ್ವ ಯುದ್ಧವನ್ನು ಕೊಡುತ್ತೇನೆ. ನಾನು ಶೂಲಾಯುಧವನ್ನು ತರುವವರೆಗೂ ಮುಹೂರ್ತಕಾಲ ಸ್ವಲ್ಪಕಾದಿರು. ನಿನಗೆ ಯಾವ ರೀತಿಯಲ್ಲಿ ದ್ವಂದ್ವಯುದ್ಧವನ್ನು ಮಾಡಲು ಅಪೇಕ್ಷೆಯಿರುವುದೋ ಅದಕ್ಕೆ ತಕ್ಕುದಾದ ಆಯುಧವನ್ನು ಸಿದ್ಧಮಾಡಿಕೊಂಡು ಬರುತ್ತೇನೆ.''

ಹೀಗೆ ಹೇಳಿದ ರಾಕ್ಷಸನಿಗೆ ಉತ್ತರವಾಗಿ ಶತ್ರುಘ್ನನು ಹೇಳಿದನು:

''**ಕ್ವ ಮೇ ಜೀವನ್ ಗಮಿಷ್ಯಸಿ ?** ನಾನಿಲ್ಲಿ ಯುದ್ಧಸನ್ನದ್ಧನಾಗಿ ನಿಂತಿರುವಾಗ ನೀನು ಜೀವಸಹಿತವಾಗಿ ಹೇಗೆ ಹೋಗುವೆ? ಎಲ್ಲಿಗೆ ಹೋಗುವೆ?

ಸ್ವಯಮೇವಾಗತಃ ಶತ್ರುರ್ನ ಮೋಕ್ತವ್ಯಃ ಕೃತಾತ್ಮನಾ ।
ಯೋ ಹಿ ವಿಕ್ಲವಯಾ ಬುದ್ಧ್ಯಾ ಪ್ರಸರಂ ಶತ್ರವೇ ದಿಶೇತ್ ।
ಸ ಹತೋ ಮನ್ದಬುದ್ಧಿಃ ಸ್ಯಾದ್ಯಥಾ ಕಾಪುರುಷಸ್ತಥಾ ।।19।।

ಬುದ್ಧಿವಂತನಾದವನು ತಾನಾಗಿಯೇ ಬಂದ ಶತ್ರುವನ್ನು ಯಾವುದೇ ಕಾರಣದಿಂದಲೂ ಬಿಡಬಾರದು. ಯಾವನು ಅವಿವೇಕದಿಂದ ಶತ್ರುವಿಗೆ

ಕಾಲಾವಕಾಶವನ್ನು ನೀಡುವನೋ - ಅಂತಹ ಮೂರ್ಖಮನುಷ್ಯನು ಕಾಪುರುಷನಂತೆ ವಿನಾಶಹೊಂದುತ್ತಾನೆ.

ಆದುದರಿಂದ ರಾಕ್ಷಸಾಧಮನೇ! ಈಗಲೇ ಈ–ಜೀವಲೋಕವನ್ನೊಮ್ಮೆ ಚೆನ್ನಾಗಿ ನೋಡಿಬಿಡು. ಪುನಃ ಈ ಲೋಕವನ್ನು ನೋಡಲು ನಿನಗೆ ಅವಕಾಶ ಸಿಕ್ಕುವುದಿಲ್ಲ. ಮೂರು ಲೋಕಗಳಿಗೂ ಮತ್ತು ಶ್ರೀರಾಘವನಿಗೂ ಶತ್ರುವಾದ ಪಾಪಿಷ್ಠನಾದ ನಿನ್ನನ್ನು ಈ ಕ್ಷಣದಲ್ಲಿಯೇ ನಿಶಿತವಾದ ವಿಧ–ವಿಧವಾದ ಬಾಣಗಳಿಂದ ಯಮರಾಜನ ಅರಮನೆಗೆ ಕಳುಹಿಸಿಕೊಡುತ್ತೇನೆ.''

68ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ **69ನೆಯ ಸರ್ಗ**

ಶತ್ರುಘ್ನ- ಲವಣಾಸುರರ ಯುದ್ಧ: ಲವಣನ ಸಂಹಾರ

ತಚ್ಛ್ರುತ್ವಾ ಭಾಷಿತಂ ತಸ್ಯ ಶತ್ರುಘ್ನಸ್ಯ ಮಹಾತ್ಮನಃ ।
ಕ್ರೋಧಮಾಹಾರಯತ್ತೀವ್ರಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥1॥

ಮಹಾತ್ಮನಾದ ಶತ್ರುಘ್ನನ ಮಾತನ್ನು ಕೇಳಿ ಲವಣಾಸುರನು ತೀವ್ರವಾಗಿ ಕೋಪಗೊಂಡು 'ನಿಲ್ಲು ನಿಲ್ಲು' ಎಂದು ಗಟ್ಟಿಯಾಗಿ ಹೇಳಿದನು.

ಲವಣನು ಎರಡು ಕೈಗಳನ್ನೂ ಹಿಸುಕಿಕೊಳ್ಳುತ್ತಾ ಹಲ್ಲುಗಳನ್ನು ಕಟ–ಕಟನೆ ಕಡಿಯುತ್ತಾ ರಘುಶ್ರೇಷ್ಠನಾದ ಶತ್ರುಘ್ನನನ್ನು ಹಲವಾರು ಬಾರಿ ಯುದ್ಧಕ್ಕೆ ಆಹ್ವಾನಿಸಿದನು. ಭಯಂಕರನಾದ ಅಸುರನು ಹೀಗೆ ಹೇಳುತ್ತಿರಲು ದೇವಶತ್ರುಗಳ ಹಂತಕನಾದ ಶತ್ರುಘ್ನನು ಸಮಯೋಚಿತವಾದ ಈ ಮಾತನ್ನು ಹೇಳಿದನು :

ಶತ್ರುಘ್ನೋ ನ ತದಾ ಜಾತೋ ಯದಾನ್ಯೇ ನಿರ್ಜಿತಾಸ್ತ್ವಯಾ ।
ತದದ್ಯ ಬಾಣಾಭಿಹತೋ ವ್ರಜ ತ್ವಂ ಯಮಸಾದನಮ್ ॥ 4॥

''ರಾಕ್ಷಸಾಧಮನೇ ! ನೀನು ಈ ಹಿಂದೆ ಹಲವಾರು ವೀರರನ್ನು ಪರಾಜಯಗೊಳಿಸಿದಾಗ ಶತ್ರುಘ್ನನಿನ್ನೂ ಹುಟ್ಟಿಯೇ ಇರಲಿಲ್ಲ. ಈಗ ಅವನು ನಿನ್ನೆದುರಿನಲ್ಲಿ ನಿಂತಿದ್ದಾನೆ. ಈಗ ಅವನ ಬಾಣಗಳಿಂದ ಪ್ರಹರಿಸಲ್ಪಡುವ ನೀನು ಯಮನ ಮನೆಗೆ ಹೋಗುವೆಯಂತೆ. ಪಾಪಿಷ್ಠನೇ! ಹಿಂದೆ ಶ್ರೀರಾಮನಿಂದ ಹತನಾದ ರಾವಣನನ್ನು ದೇವತೆಗಳೆಲ್ಲರೂ ನೋಡಿದಂತೆ–ಈಗ ನನ್ನಿಂದ

ಹತನಾಗುವ ದುರಾಚಾರಿಯಾದ ನಿನ್ನನ್ನು ವಿದ್ವಾಂಸರಾದ ಬ್ರಾಹ್ಮಣರೂ, ಋಷಿಗಳೂ ನೋಡಲಿ. ಈಗಲೇ ನನ್ನ ಬಾಣಗಳಿಂದ ಸುಡಲ್ಪಡುವ ನೀನು ನೆಲಕ್ಕುರುಳಿದೆಯಾದರೆ ಪಟ್ಟಣಕ್ಕೂ ರಾಷ್ಟ್ರಕ್ಕೂ ಸೌಖ್ಯವೇ ಉಂಟಾಗುತ್ತದೆ. ಸೂರ್ಯನಿಂದ ಹೊರಬರುವ ಕಿರಣಗಳು ಕಮಲವನ್ನು ಪ್ರವೇಶಿಸುವಂತೆ- ನನ್ನ ತೋಳುಗಳಿಂದ ಹೊರಡುವ ವಜ್ರಸದೃಶವಾದ ಬಾಣವು ನಿನ್ನ ವಕ್ಷಃಸ್ಥಳವನ್ನು ಈಗಲೇ ಪ್ರವೇಶಿಸುತ್ತದೆ.''

ಶತ್ರುಘ್ನನು ಹೀಗೆ ಹೇಳಲು ಕ್ರೋಧಾಭಿಭೂತನಾದ ಲವಣನು ದೊಡ್ಡದಾಗಿದ್ದ ಮರವೊಂದನ್ನು ಕಿತ್ತು ಶತ್ರುಘ್ನನ ವಕ್ಷಃಸ್ಥಳದಲ್ಲಿ ರಭಸದಿಂದ ಪ್ರಯೋಗಿಸಿದನು. ಮರುಕ್ಷಣದಲ್ಲಿಯೇ ಶತ್ರುಘ್ನನು ಆ ಮಹಾವೃಕ್ಷವನ್ನು ನೂರು ಭಾಗಗಳಾಗಿ ಕತ್ತರಿಸಿದನು. ತನ್ನ ಕಾರ್ಯವು ನಿಷ್ಫಲವಾದುದನ್ನು ಕಂಡು ಲವಣನು ಪುನಃ ಹಲವಾರು ವೃಕ್ಷಗಳನ್ನು ಕಿತ್ತು ಕೈಗೆತ್ತಿಕೊಂಡು ಶತ್ರುಘ್ನನ ಮೇಲೆ ಪ್ರಯೋಗಿಸಿದನು. ಮಹಾತೇಜಸ್ವಿಯಾದ ಶತ್ರುಘ್ನನು ಕೂಡ ತನ್ನ ಮೇಲೆ ಬೀಳುತ್ತಿದ್ದ ವೃಕ್ಷಗಳನ್ನು ಡೊಂಕಾದ ಮೂರು ನಾಲ್ಕು ಬಾಣಗಳಿಂದ ಎಡೆಬಿಡದೆ ಕತ್ತರಿಸಿಹಾಕುತ್ತಿದ್ದನು. ಬಳಿಕ ಮಹಾಪರಾಕ್ರಮಿಯಾದ ಶತ್ರುಘ್ನನು ಲವಣಾಸುರನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ಆದರೆ ರಾಕ್ಷಸನು ಆ ಬಾಣಗಳ ಪ್ರಹಾರಗಳಿಂದ ಸ್ವಲ್ಪವಾದರೂ ವ್ಯಥೆಪಡಲಿಲ್ಲ. ಬಳಿಕ ವೀರ್ಯವಂತನಾದ ಲವಣನು ಗಹಗಹಿಸಿ ನಗುತ್ತಾ ದೊಡ್ಡದಾದೊಂದು ವೃಕ್ಷವನ್ನೆತ್ತಿಕೊಂಡು ಶೂರನಾದ ಶತ್ರುಘ್ನನ ತಲೆಯ ಮೇಲೆ ರಭಸದಿಂದ ಪ್ರಹರಿಸಿದನು. ಆ ಮಹಾಪ್ರಹಾರದಿಂದ ರಾಘವನ ಅಂಗಾಂಗಗಳೆಲ್ಲವೂ ಶಿಥಿಲಗೊಂಡು ಅವನು ಮೂರ್ಛಿತನಾಗಿ ಕೆಳಗೆ ಬಿದ್ದನು. ಶತ್ರುಘ್ನನು ಕೆಳಕ್ಕೆ ಬಿದ್ದೊಡನೆಯೇ ದೇವರ್ಷಿಗಳ ಮತ್ತು ಗಂಧರ್ವಾಪ್ಸರೆಯರ ಸಮೂಹದಲ್ಲಿ ಹಾಹಾಕಾರವೆದ್ದಿತು.

ನೆಲದಲ್ಲಿ ಬಿದ್ದ ಶತ್ರುಘ್ನನು ಹತನಾಗಿ ಹೋದನೆಂದೇ ಭಾವಿಸಿದ ಲವಣನು ಅವಕಾಶ ಸಿಕ್ಕಿದ್ದರೂ ಶೂಲವನ್ನು ತರಲು ಅರಮನೆಗೆ ಹೋಗಲಿಲ್ಲ. ಶತ್ರುವು ಹತನಾದನೆಂದೇ ಭಾವಿಸಿ ಹರಡಿಕೊಂಡು ಸುತ್ತಲೂ ಬಿದ್ದಿದ್ದ ತನ್ನ ಆಹಾರವಸ್ತುಗಳನ್ನು ಒಟ್ಟಾಗಿ ಸೇರಿಸತೊಡಗಿದನು.

ಮುಹೂರ್ತಮಾತ್ರದಲ್ಲಿ ಶತ್ರುಘ್ನನು ಎಚ್ಚರಗೊಂಡು ಆಯುಧವನ್ನು ಹಿಡಿದು ಪಟ್ಟಣದ ಮಹಾದ್ವಾರದಲ್ಲಿ ನಿಂತನು. ಆ ಸಮಯದಲ್ಲಿ ಋಷಿಗಳು ಅವನನ್ನು ಕೊಂಡಾಡಿದರು. ಬಳಿಕ ಶತ್ರುಘ್ನನು ದಿವ್ಯವಾದ, ಅಮೋಘವಾದ ಮತ್ತು ಶ್ರೇಷ್ಠವಾದ ಬಾಣವೊಂದನ್ನು ಬತ್ತಳಿಕೆಯಿಂದ ಹೊರತೆಗೆದನು. ಆ ಬಾಣವು ಭಯಂಕರವಾಗಿದ್ದು ತನ್ನತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಿದ್ದಿತು. ಅದರ ಅಗ್ರಭಾಗವು ಮತ್ತು ವೇಗವು ವಜ್ರಾಯುಧದ ಅಗ್ರಭಾಗಕ್ಕೂ ಮತ್ತು ವೇಗಕ್ಕೂ ಸಮಾನವಾಗಿದ್ದಿತು. ಎತ್ತರವು ಮೇರು–ಮಂದರಪರ್ವತಗಳಷ್ಟಿದ್ದಿತು. ಎಲ್ಲ ಗಿಣ್ಣುಗಳ ಪ್ರದೇಶಗಳಲ್ಲಿಯೂ ಅದು ಬಗ್ಗಿಕೊಂಡಿದ್ದಿತು. ಯುದ್ಧಗಳಲ್ಲಿ ಆ ದಿವ್ಯಶರಕ್ಕೆ ಪರಾಜಯ ವೆಂಬುದೇ ಇರಲಿಲ್ಲ. ಅದರ ಅಂಗಗಳು ರಕ್ತಚಂದನದಿಂದ ಚರ್ಚಿತ ವಾಗಿದ್ದುವು. ಅದಕ್ಕೆ ಸುಂದರವಾದ ರೆಕ್ಕೆಗಳಿದ್ದುವು. ಪರ್ವತೋಪಮರಾದ ದಾನವೇಂದ್ರರಿಗೂ ಮತ್ತು ಅಸುರರಿಗೂ ಆ ಬಾಣವು ಭಯಂಕರವಾಗಿದ್ದಿತು. ಪ್ರಳಯಕಾಲವು ಸನ್ನಿಹಿತವಾದಾಗ ಪ್ರಜ್ವಲಿಸುವ ಕಾಲಾಗ್ನಿಯಂತೆಯೇ ಪ್ರಖರವಾದ ತೇಜಸ್ಸಿನಿಂದ ತೊಳಗುತ್ತಿದ್ದ ಆ ಬಾಣವನ್ನು ನೋಡಿ ಸಮಸ್ತ ಪ್ರಾಣಿಗಳೂ ಭಯಗೊಂಡುವು. ದೇವಾಸುರ–ಗಂಧರ್ವರೂ, ಮುನಿಗಳೂ, ಅಪ್ಸರೆಯರಿಂದ ಕೂಡಿದ ಸಮಸ್ತ ಜಗತ್ತೂ ಅಸ್ವಸ್ಥವಾಗಿ ಬ್ರಹ್ಮನ ಬಳಿಗೆ ಹೋದುವು. ಸಮಸ್ತರೂ ಬ್ರಹ್ಮನ ಬಳಿಗೆ ಹೋಗಿ ವರದಾಯಕನಾದ, ದೇವ ದೇವನಾದ, ಪ್ರಪಿತಾಮಹನಾದ ಬ್ರಹ್ಮನಿಗೆ - ದೇವತೆಗಳಿಗೆ ಉಂಟಾಗಿರುವ ಭಯವನ್ನೂ ,ಲೋಕಗಳು ವಿನಾಶಹೊಂದಲಿರುವುದನ್ನೂ - ನಿವೇದಿಸಿಕೊಂಡರು.

ಕಚ್ಚಿಲ್ಲೋಕಕ್ಷಯೋ ದೇವ ಸಂಪ್ರಾಪ್ತೋ ವಾ ಯುಗಕ್ಷಯಃ ।
ನೇದೃಶಂ ದೃಷ್ಟಪೂರ್ವಂ ಚ ನ ಶ್ರುತಂ ಪ್ರಪಿತಾಮಹ ॥ 23॥

''ಪ್ರಪಿತಾಮಹನೇ! ಯಾವುದೋ ಲೋಕವು ವಿನಾಶವಾಗಿ ಬಿಡಬಹುದು ಅಥವಾ ಪ್ರಳಯಕಾಲವೇ ಸನ್ನಿಹಿತವಾಗಿರಬಹುದೆಂಬ ಭ್ರಾಂತಿಯು ನಮಗುಂಟಾಗಿದೆ. ಪ್ರಪಂಚದಲ್ಲಿ ಇಂದಾಗುತ್ತಿರುವ ದುರವಸ್ಥೆಯನ್ನು ನಾವು ಈ ಹಿಂದೆ ಕೇಳಿಯೂ ಇರಲಿಲ್ಲ; ನೋಡಿಯೂ ಇರಲಿಲ್ಲ.''

ದೇವತೆಗಳ ಮಾತನ್ನು ಕೇಳಿ ಲೋಕಗಳಿಗೆ ಅಭಯದಾಯಕನಾದ, ಲೋಕಪಿತಾಮಹನಾದ ಬ್ರಹ್ಮನು ಆಗಿನ ಭಯಕ್ಕೆ ಕಾರಣವನ್ನು ಮಧುರವಾದ ಮಾತಿನಿಂದ ಹೇಳಿದನು:

''ದೇವತೆಗಳೇ! ಕೇಳಿರಿ : ಯುದ್ಧದಲ್ಲಿ ಲವಣಾಸುರನನ್ನು ಸಂಹರಿಸುವ ಸಲುವಾಗಿ ದಿವ್ಯವಾದ ಒಂದು ಬಾಣವನ್ನು ಶತ್ರುಘ್ನನು ಹೆದೆಗೇರಿಸಿ ನಿಂತಿದ್ದಾನೆ. ಆ ಬಾಣದ ಪ್ರಭಾವದಿಂದಲೇ ನಾವೆಲ್ಲರೂ ಈಗ ಕಳವಳ ಗೊಂಡಿದ್ದೇವೆ. ತೇಜೋಮಯವಾದ ಆ ಬಾಣವು ಆದಿಪುರುಷನಾದ ಲೋಕ ಕರ್ತೃವಾದ ಮಹಾವಿಷ್ಣುವಿನ ಬಾಣವಾಗಿದೆ. ಆ ಬಾಣದಿಂದ ನಿಮ್ಮೆಲ್ಲರಿಗೂ ಈ ವಿಧವಾದ ಭಯವುಂಟಾಗಿದೆ. ಪರಮಾತ್ಮನಾದ ಶ್ರೀಹರಿಯು ಮಧು–ಕೈಟಭರ ಸಂಹಾರಕ್ಕಾಗಿ ಆ ಬಾಣವನ್ನು ಸೃಷ್ಟಿಸಿದ್ದನು. ಪೂಜ್ಯನಾದ ವಿಷ್ಣುವೊಬ್ಬನೇ ತೇಜೋಮಯವಾದ ಆ ಬಾಣದ ರಹಸ್ಯವನ್ನು ತಿಳಿದಿರುವನು. ಏಕೆಂದರೆ: ಆ ಬಾಣವೇ ಪರಮಾತ್ಮನಾದ ಮಹಾವಿಷ್ಣುವಿನ ಮೂರ್ತಸ್ವರೂಪ ವಾಗಿದೆ. ನೀವೆಲ್ಲರೂ ಈಗಲೇ ಇಲ್ಲಿಂದ ಹೊರಡಿರಿ. ವೀರನಾದ, ಮಹಾತ್ಮನಾದ, ರಾಮಾನುಜನಾದ ಶತ್ರುಘ್ನನಿಂದ ರಾಕ್ಷಸಶ್ರೇಷ್ಠನಾದ ಲವಣನು ಹತನಾಗುವುದನ್ನು ನೋಡಿರಿ.''

ದೇವತೆಗಳು ದೇವದೇವನಾದ ಪಿತಾಮಹಬ್ರಹ್ಮನ ಮಾತನ್ನು ಕೇಳಿ ಶತ್ರುಘ್ನ–ಲವಣರು ಯುದ್ಧ ಮಾಡುತ್ತಿದ್ದ ಸ್ಥಳಕ್ಕೆ ಆಗಮಿಸಿದರು. ಪ್ರಳಯ ಕಾಲದ ಅಗ್ನಿಯಂತೆಯೇ ಕಾಣುತ್ತಿದ್ದ ಶತ್ರುಘ್ನನು ಕೈಯಲ್ಲಿ ಹಿಡಿದಿದ್ದ ದಿವ್ಯಾಸ್ತ್ರವನ್ನು ಸಮಸ್ತಪ್ರಾಣಿಗಳೂ ನೋಡಿದುವು. ಆಕಾಶವೆಲ್ಲವೂ ದೇವತೆ ಗಳಿಂದ ತುಂಬಿಹೋಗಿರುವುದನ್ನು ನೋಡಿ ಶತ್ರುಘ್ನನು ಸಿಂಹನಾದಮಾಡುತ್ತಾ ಲವಣನ ಕಡೆಗೆ ನೋಡಿದನು. ಧನುರ್ಬಾಣಗಳನ್ನು ಹಿಡಿದು ಯುದ್ಧಕ್ಕೆ ಸಿದ್ಧನಾಗಿ ಮಹಾತ್ಮನಾದ ಶತ್ರುಘ್ನನು ಕಾಳಗಕ್ಕೆ ಆಹ್ವಾನಿಸುತ್ತಿರಲು – ಅತ್ಯಂತಕ್ರುದ್ಧನಾದ ಲವಣನು ಯುದ್ಧಸನ್ನದ್ಧನಾಗಿ ಶತ್ರುಘ್ನನ ಮುಂದೆ ನಿಂತನು. ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಶತ್ರುಘ್ನನು ಕಿವಿಯವರೆಗೂ ಅಂಬನ್ನು ಸೆಳೆದು ದಿವ್ಯವಾದ ಆ ಬಾಣವನ್ನು ಲವಣಾಸುರನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ದೇವಪೂಜಿತವಾದ ಆ ಬಾಣವು ಒಡನೆಯೇ ರಾಕ್ಷಸನ ಎದೆಯನ್ನು ಸೀಳಿಕೊಂಡು ಹೊರಬಂದು ರಸಾತಳವನ್ನು ಹೊಕ್ಕು ಅಲ್ಲಿಂದ ಪುನಃ ಅತಿಶೀಘ್ರಗತಿಯಲ್ಲಿ

ಬಂದು ಶತ್ರುಘ್ನನನ್ನೇ ಸೇರಿತು. ಶತ್ರುಘ್ನನ ಆ ಬಾಣಪ್ರಹಾರದಿಂದ ಭಿನ್ನ ಹೃದಯನಾದ ಲವಣರಾಕ್ಷಸನು ವಜ್ರಾಯುಧದಿಂದ ತುಂಡರಿಸಲ್ಪಟ್ಟ ಪರ್ವತದಂತೆಯೇ ಕೆಳಗುರುಳಿದನು. ಲವಣನು ಹತನಾಗುತ್ತಿದ್ದಂತೆಯೇ ಅವನ ಅಧೀನದಲ್ಲಿದ್ದ ಮಹತ್ತರವಾದ ಮತ್ತು ದಿವ್ಯವಾದ ಶೂಲವು ಸಮಸ್ತದೇವತೆಗಳೂ ನೋಡುತ್ತಿದ್ದಂತೆಯೇ ರುದ್ರನ ಬಳಿಗೆ ಹೊರಟು ಹೋಯಿತು. ಹೀಗೆ ಶ್ರೇಷ್ಠವಾದ ಧನುರ್ಬಾಣಗಳನ್ನು ಹಿಡಿದಿದ್ದ ರಘು ಪ್ರವೀರನಾದ ಶತ್ರುಘ್ನನು ಒಂದೇ ಬಾಣದಿಂದ ಮೂರು ಲೋಕಗಳಿಗೂ ಉಂಟಾಗಿದ್ದ ಭಯವನ್ನು ಹೋಗಲಾಡಿಸಿ ಮೂರುಲೋಕಗಳ ಕತ್ತಲೆಯನ್ನೂ ಹೋಗಲಾಡಿಸುವ ಸಹಸ್ರಕಿರಣನಾದ ಸೂರ್ಯದೇವನಂತೆಯೇ ಪ್ರಕಾಶಿಸಿದನು.

''ಸೌಭಾಗ್ಯದ ಕಾರಣದಿಂದ ದಶರಥನ ಮಗನಾದ ಶತ್ರುಘ್ನನು ನಿರ್ಭಯನಾಗಿ ಯುದ್ಧದಲ್ಲಿ ಜಯಗಳಿಸಿದನು. ವಿಷಸರ್ಪದಂತೆಯೇ ಸರ್ವ ರಿಗೂ ಭಯಂಕರನಾಗಿದ್ದ ಲವಣಾಸುರನು ಮರಣಹೊಂದಿದನು''- ಎಂದು ಹೇಳಿಕೊಂಡು ದೇವರ್ಷಿಗಳೂ, ನಾಗರೂ, ಎಲ್ಲ ಅಪ್ಸರೆಯರೂ ಶತ್ರುಘ್ನನನ್ನು ಬಹಳವಾಗಿ ಶ್ಲಾಘಿಸಿದರು.

69ನೆಯ ಸರ್ಗವು ಮುಗಿಯಿತು.

10ನೆಯ ಸಂಪುಟವು ಮುಗಿಯಿತು.

★★

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥


ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ ॥

ಹರಿಃ ಓಂ
ಶ್ರೀಕೃಷ್ಣಾರ್ಪಣಮಸ್ತು ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಹತೇ ತು ಲವಣೇ ದೇವಾಃ ಸೇನ್ದ್ರಾಃ ಸಾಗ್ನಿಪುರೋಗಮಾಃ ।
ಊಚುಃ ಸುಮಧುರಾಂ ವಾಣೀಂ ಶತ್ರುಘ್ನಂ ಶತ್ರುತಾಪನಮ್ ॥1॥

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.